ಕರ್ನಾಟಕ ಸರ್ಕಾರ

ಕುವೆಂಪು ವಿರಚಿತ

# ಕನ್ನಡ ಭಾಷಾ ಸಂವಿಧಾನ


ಪ್ರಧಾನ ಸಂಪಾದಕ

**ಡಾ. ಎಲ್. ಹನುಮಂತಯ್ಯ**

*

ಸಂಪಾದಕ

**ಡಾ. ವಿ. ಚಂದ್ರಶೇಖರ ನಂಗಲಿ**


ನಡೆ ಕನ್ನಡ
ನುಡಿ ಕನ್ನಡ
ಓದು ಕನ್ನಡ


**ಕನ್ನಡ ಅಭಿವೃದ್ಧಿ ಪ್ರಾಧಿಕಾರ**

ವಿಧಾನಸೌಧ, ಬೆಂಗಳೂರು ೫೬೦ ೦೦೧

**Kuvempu Virachita Kannada Bhasha Samvidhana:** A Collection of Poems and Articles by Dr. K.V. Puttappa (Kuvempu) in Kannada.

Edited by:
**Dr. L. Hanumanthiah**
**Dr. V. Chandrashekara Nangali**

Published by:
**Kannada Abhivruddhi Pradhikara**
Vidhana Soudha, Bengaluru

First Edition: 2015

Price: 150/-

Pages: 252

@: Kannada Abhivruddhi Pradhikara

**ಮುಖಪುಟ : ಅರುಣ್‌ಕುಮಾರ್**

**ಮುದ್ರಣ:**
**ಚಾರುಮತಿ ಪ್ರಕಾಶನ**
೨೧೪, ೪ನೇ ಮುಖ್ಯರಸ್ತೆ, ೩ನೇ ಅಡ್ಡರಸ್ತೆ
ಚಾಮರಾಜಪೇಟೆ, ಬೆಂಗಳೂರು ೫೬೦ ೦೦೧೮
**94482 35553**

## ಪ್ರಧಾನ ಸಂಪಾದಕರ ನುಡಿ

# ಫಾಸ್ಟ್‌ಫುಡ್ ಇಂಗ್ಲಿಷ್ ಮುಂದೆ ದೇಶೀ ತಿನಿಸಿನ ಸವಿ ಕನ್ನಡ

'ಕುವೆಂಪು ವಿರಚಿತ ಕನ್ನಡ ಭಾಷಾ ಸಂವಿಧಾನ' ಎಂಬ ಈ ಕೃತಿಯನ್ನು ಕನ್ನಡ ಅಭಿವೃದ್ಧಿ ಪ್ರಾಧಿಕಾರ ಪ್ರಕಟಿಸುತ್ತಿರುವುದಕ್ಕೆ ಹೆಮ್ಮೆ ಪಡುತ್ತದೆ. ನಮ್ಮ ಮುಖ್ಯ ಉದ್ದೇಶಕ್ಕೆ ಪೂರಕವಾದ ಎಲ್ಲ ವಿಷಯಗಳನ್ನು ಶ್ರೀಕುವೆಂಪು ಅವರು ಬಹಳ ಹಿಂದೆಯೇ ಹೇಳಿರುವುದನ್ನು ಪುನರ್ ಮನನ ಮಾಡಿಕೊಳ್ಳುವ ಕೆಲಸ ಇದು ಎಂದು ನಾನು ಭಾವಿಸುತ್ತೇನೆ. ಸ್ವಾತಂತ್ರ ಪೂರ್ವದಲ್ಲಿ ಮಹಾತ್ಮ ಗಾಂಧಿಯವರು ದೇಶೀ–ಭಾಷೆಗಳ ಉಳಿವಿಗೆ ಪಟ್ಟಿರುವ ಶ್ರಮವನ್ನು ಅವರ ಲೇಖನಗಳ ಮೂಲಕ ನೋಡಬಹುದು. ಇದೇ ಕೃತಿಯಲ್ಲಿ ಕುವೆಂಪು ಅವರು ಅನುವಾದಿಸಿರುವ (ಪುಟ ೧೦೦) ಗಾಂಧೀಜಿಯವರ ಮಾತಿನಂತೆ "ಪರಭಾಷೆಯ ಮೂಲಕದ ಶಿಕ್ಷಣ ನಮ್ಮ ಮಕ್ಕಳ ಬುದ್ಧಿಶಕ್ತಿಯನ್ನು ಬೆಂಡುಮಾಡಿದೆ, ಅವರ ನರಗಳನ್ನು ದುರ್ಬಲಗೊಳಿಸಿದೆ, ಅವರನ್ನು ಬಾಯಿಪಾಠ ಮಾಡುವ ಗಿಳಿಗಳನ್ನಾಗಿ ಮಾಡಿದೆ, ಪ್ರತಿಭಾನ್ವಿತವಾದ ಸೃಷ್ಟಿಕಾಯಕ್ಕೆ ಅನರ್ಹರನ್ನಾಗಿ ಮಾಡಿದೆ, ನಾನಿಂದು ಸರ್ವಾಧಿಕಾರಿಯಾಗಿದ್ದರೆ ಈ ಕೂಡಲೇ ಪರಭಾಷೆಯ ಮೂಲಕದ ಈ ಶಿಕ್ಷಣವನ್ನು ನಿಲ್ಲಿಸುತ್ತಿದ್ದೆ...

ಪ್ರತಿಯೊಂದು ಸ್ವತಂತ್ರ ದೇಶದಲ್ಲಿಯೂ ಈ ಪ್ರಶ್ನೆ ಆದಿಯಲ್ಲಿಯೆ ನಿರ್ಧಾರವಾಗುತ್ತದೆ. ಈ ದೇಶ ಸ್ವತಂತ್ರವಾದ ಕೂಡಲೇ ಶಿಕ್ಷಣ ಮಾಧ್ಯಮದ ಪ್ರಶ್ನೆ ಪ್ರಶ್ನೆಯಾಗುಳಿಯುವುದಿಲ್ಲ" ಎಂದಿದ್ದರು. ಸ್ವತಂತ್ರವಾಗಿ ಏಳು ದಶಕಗಳು ಕಳೆಯುತ್ತಿದ್ದರೂ ಈಗ ಆಗಿರುವುದೇನು? ಶಿಕ್ಷಣ ಮಾಧ್ಯಮದ ಪ್ರಶ್ನೆಯನ್ನು ಚರ್ಚಿಸುತ್ತಲೇ ಇದ್ದೇವೆ. ದಿನದಿಂದ ದಿನಕ್ಕೆ

ಕಗ್ಗಾಂಟಾಗುತ್ತಿರುವ ಈ ಪ್ರಶ್ನೆ ಮೂಲ ಸಮಸ್ಯೆಯ ಸ್ವರೂಪದಲ್ಲೇ ಉಳಿದಿದೆ. ದೇಶದ ತಜ್ಞರ ಅಭಿಪ್ರಾಯಗಳಿಗೆ ಎಳ್ಳುನೀರು ಬಿಡಲಾಗಿದೆ. ಅತ್ಯುಚ್ಚ ನ್ಯಾಯಾಲಯಗಳು ಪರಸ್ಪರ ವಿರುದ್ಧ ತೀರ್ಪುಗಳನ್ನು ನೀಡಿವೆ. ಇದರಿಂದ ಸಾಮಾನ್ಯ ಜನರು ಗೊಂದಲದಲ್ಲಿ ಬಿದ್ದಿದ್ದಾರೆ. "ಈ ಶಿಕ್ಷಣ ಮಾಧ್ಯಮದ ಪ್ರಶ್ನೆಯನ್ನು ವಿದ್ಯಾ ಪ್ರವೀಣರ ಎಂದರೆ Academicians ಎನ್ನಿಸಿಕೊಳ್ಳುವವರ ತೀರ್ಮಾನಕ್ಕೆ ಬಿಡುವುದು ಸರಿಯಲ್ಲವೆಂದೇ ನನ್ನ ಅಭಿಪ್ರಾಯ" ಎಂದು ಹೇಳಿದ ಗಾಂಧೀಜಿಯವರಿಗೆ ಪಟ್ಟಭದ್ರ ಹಿತಾಸಕ್ತಿಗಳು ಇಂಗ್ಲಿಷ್ ಪರವಕಾಲತ್ತು ವಹಿಸುವರೆಂಬ ಅನುಮಾನವಿತ್ತು. ಅವರ ಅನುಮಾನ ಇಂದು ನಿಜವಾಗಿದೆ. ಪ್ರಾಥಮಿಕ ಶಿಕ್ಷಣದಲ್ಲೇ ಪರಭಾಷಾ ಮಾಧ್ಯಮಕ್ಕೆ ನಮ್ಮ ಮಕ್ಕಳನ್ನು ದೂಡಿ ಅವರನ್ನು ಗಿಳಿಗಳನ್ನಾಗಿ ಮಾಡುತ್ತಿದ್ದೇವೆ. ಇಂದು ಶಿಕ್ಷಣ ಮಾಧ್ಯಮ ಕೂಡ ವರ್ಗ ತಾರತಮ್ಯದ ಸ್ಪಷ್ಟ ಗುರುತು ಪಡೆದುಕೊಂಡಿದೆ. ಉಳ್ಳವರಿಗೆ ಇಂಗಿಷ್ ಮತ್ತು ಖಾಸಗಿ ಶಾಲಾ ಶಿಕ್ಷಣ, ಬಡವರು ಮತ್ತು ಹಳ್ಳಿಗರಿಗೆ ಕನ್ನಡ ಮಾಧ್ಯಮ ಹಾಗೂ ಸರ್ಕಾರಿ ಶಾಲಾ ಶಿಕ್ಷಣ ಎನ್ನುವಂತಾಗಿದೆ. ಇದಕ್ಕೇನು ಪರಿಹಾರ? ಮುಂದುವರಿದ ರಾಷ್ಟ್ರಗಳಲ್ಲಿರುವಂತೆ ಸಮಾನ ಶಿಕ್ಷಣ, ಉಚಿತ ಶಿಕ್ಷಣ ನೀಡುವುದು ನಮ್ಮಿಂದ ಸಾಧ್ಯವಿಲ್ಲವೆ? ಕನಿಷ್ಟ ಪ್ರಾಥಮಿಕ ಶಿಕ್ಷಣವನ್ನಾದರೂ ರಾಷ್ಟ್ರೀಕರಣ ಮಾಡಿ, ಎಲ್ಲರಿಗೂ ಏಕರೂಪ ಸಮಾನ ಶಿಕ್ಷಣ ಸಿಗುವಂತೆ ನೋಡಿಕೊಳ್ಳುವ ಕರ್ತವ್ಯವನ್ನು ಭಾರತದ ಎಲ್ಲ ರಾಜ್ಯಗಳು ಮತ್ತು ಕೇಂದ್ರ ಸರ್ಕಾರ ನೋಡಿಕೊಳ್ಳಬೇಕು. ಬಾಲ್ಯದಲ್ಲಿಯೇ ವಿವಿಧ ಹಂತದ ಶಿಕ್ಷಣ ವ್ಯವಸ್ಥೆ ಇರುವುದು ಸರಿಯೇ? ಪಠ್ಯದಲ್ಲಾದರೂ ಎಲ್ಲ ಮಕ್ಕಳು ಕಲಿಯುವಂತೆ ರೂಪಿಸಬಾರದೆ? ಎಲ್ಲರೂ ತಮ್ಮ ಮಾತೃಭಾಷೆಯಲ್ಲಿ ಕಲಿಯುವಂತೆ ಮಾಡಿ, ಅಗತ್ಯವೆನಿಸಿದರೆ ಇಂಗ್ಲಿಷನ್ನು ಒಂದು ಭಾಷೆಯಾಗಿ ಕಲಿಸುವ ವ್ಯವಸ್ಥೆಯನ್ನು ಜಾರಿಗೊಳಿಸುವುದು ಏಕೆ ಸಾಧ್ಯವಿಲ್ಲ ಎಂಬ ಹಲವಾರು ಪ್ರಶ್ನೆಗಳು ನಮ್ಮೆದುರು ಸುಳಿಯುತ್ತದೆ.

ಕನ್ನಡದ ಮೇಲೆ ಸವಾರಿಯ ಮೂರು ನೆಲೆಗಳನ್ನು ಬಹಳ ಹಿಂದೆಯೇ ಕುವೆಂಪು ಸರಿಯಾಗಿಯೇ ಗುರ್ತಿಸಿದ್ದಾರೆ. ಸಂಸ್ಕೃತ, ಹಿಂದಿ ಹಾಗೂ ಇಂಗ್ಲಿಷ್ ಕನ್ನಡ ವೃಕ್ಷ ಬೆಳೆಯದಂತೆ ಅಡ್ಡವಾಗಿ ನಿಂತಿರುವುದನ್ನು ತಿಳಿಸಿದ್ದಾರೆ. ಶಾಲಾ ಶಿಕ್ಷಣದಲ್ಲಿ ಕನ್ನಡಕ್ಕೆ ಬದಲಾಗಿ ಸಂಸ್ಕೃತ ಓದುವ ಮಕ್ಕಳ ಸಂಖ್ಯೆ ದೊಡ್ಡದೇ ಇದೆ. ಅಂಕಗಳಿಸುವ ಓಟಕ್ಕೆ ಬಿದ್ದ ಮಕ್ಕಳು ತಾಯಿ ಭಾಷೆಯೆಂದೇ ಗುರುತಿಸಿಕೊಂಡ ಕನ್ನಡವನ್ನು ಪಕ್ಕಕ್ಕೆ ಸರಿಸಿ, ಜೀವನವಿಡೀ ಕನ್ನಡ ಸವಿಯನ್ನು ಚಪ್ಪರಿಸದೆ ಉಳಿಯುತ್ತಾರಲ್ಲ! ಜನಭಾಷೆಯಾದ ಹಾಗು ಸಾಹಿತ್ಯ ಸೃಷ್ಟಿಯ ಸಮುದ್ರದಂತಿರುವ ಕನ್ನಡ ಭಾಷೆಯ ಸೊಗಸು ಮಕ್ಕಳಿಗೆ ತಿಳಿಯಬಾರದೆ?

– ೨ –

ಪ್ರಜಾತಂತ್ರದಲ್ಲಿ ಶ್ರೀಸಾಮಾನ್ಯನ ಭಾಷೆಯಲ್ಲಿ ಬರೆಯಬೇಕು, ವ್ಯವಹರಿಸಬೇಕು ಎಂಬ ಶರಣರ ಅನುಭವಾಮೃತವನ್ನು ಮರೆತು ಸಂಸ್ಕೃತದ ಬರಡು ಬೆನ್ನು ಹತ್ತಿ ಸವಾರಿ ಮಾಡುತ್ತಿರುವ ನಮ್ಮ ಮಕ್ಕಳ ಪರಿಸ್ಥಿತಿಗೆ ಏನೆನ್ನಬೇಕು? ಅವರಿಗೆ ಅಂತಹ ಅವಕಾಶವನ್ನು

ಕಲ್ಪಿಸಿರುವ ನಮ್ಮ ಅಸಹಾಯಕ ಪರಿಸ್ಥಿತಿಗೆ ಸಿರಿಗನ್ನಡ ಬಲಿಯಾಗಿದೆ. ಈಗಲಾದರೂ ಎಚ್ಚೆತ್ತು ಕನ್ನಡದ ಶರಧಿಯೊಳಗಿನ ಮುತ್ತುರತ್ನಗಳನ್ನು ನಮ್ಮ ಮಕ್ಕಳು ನೋಡುವಂತೆ, ಮುಟ್ಟಿ ಆನಂದಿಸುವಂತೆ ಮಾಡಬೇಕಾದ ತುರ್ತು ನಮ್ಮ ಮುಂದಿದೆ. ಕನ್ನಡ ಸಂಸ್ಕೃತಿಯ ಹಿರಿಮೆಯನ್ನು ಮನದಟ್ಟು ಮಾಡಿಕೊಳ್ಳಬೇಕಾದ ನಮ್ಮ ತರುಣ ಪೀಳಿಗೆ ಅದರಿಂದ ವಿಮುಖವಾಗುವಂತೆ, ಮರೆಮಾಚುತ್ತಿರುವ ಈ ಅವಕಾಶ ಎಷ್ಟು ಸರಿ? ಈ ಎಲ್ಲ ಪ್ರಶ್ನೆಗಳನ್ನು ಸಾವಧಾನವಾಗಿ ಪರ್ಯಾಲೋಚಿಸಿ ಸರಿಪಡಿಸಿಕೊಳ್ಳಬೇಕಾದ ಸಂಕ್ರಮಣ ತುರ್ತಿನಲ್ಲಿ ನಾವಿದ್ದೇವೆ! ಕ್ಷಣಕ್ಷಣಕು ಹಿಂದಿ ಹೇರಿಕೆಯ ಭಯದ ನೆರಳು ಹಿಂದಿಯೇತರ ಭಾಷಿಕರ ಮೇಲೆ ಹರಿದಾಡುತ್ತಿದೆ. ಈ ನೆರಳು ಹರಿದಾಡಿದಾಗಲೆಲ್ಲ ಪ್ರತಿಭಟನೆಯ ಬಿರುಗಾಳಿ ಬಿಸಿಗಾಳಿಯಾಗಿ ಬೀಸುತ್ತದೆ. ಇದರಿಂದ ತಂಪನೆಯ ಅನುಭವವಾಗಬೇಕಿದ್ದ ನಾವು ಬೆಚ್ಚಿ ಬೀಳುವಂತಾಗಿದೆ. ಲಕ್ಷ ಲಕ್ಷ ಮಕ್ಕಳಿಗೆ ಇಂತಹ ದುಃಸ್ವಪ್ನ ಬೀಳಿಸುವುದು ಸರಿಯೆ ಎಂದು ನಮ್ಮಂತರಾತ್ಮಕ್ಕೆ ಕೇಳಿಕೊಳ್ಳಬೇಕಾಗಿದೆ.

ಇಂದು ಜಗತ್ಪ್ರಸಿದ್ಧ ಭಾಷೆಯೆನಿಸಿರುವ ಇಂಗ್ಲಿಷ್, ಭಾರತದ ಜನಭಾಷೆಗಳ ಮೇಲೆ ನಡೆಸುತ್ತಿರುವ ದಾಳಿಯನ್ನು ಕೈಕಟ್ಟಿ ಸುಮ್ಮನೆ ಕುಳಿತು ನೋಡಬೇಕಾದ ಸ್ಥಿತಿಯಿದೆ. ನಮ್ಮಲ್ಲೇ ಕೆಲವರು ಇಂಗ್ಲಿಷ್‌ನ ಮೇಲಾಟಕ್ಕೆ ಇಂಬು ನೀಡಿ ಇದು ಸರಿಯೆಂದು ವಕಾಲತ್ತು ವಹಿಸಿ ನಿಂತಿದ್ದಾರೆ. ಹಗಲುಕನಸನ್ನು ಪ್ರಾಮಾಣಿಕವಾಗಿಯೇ ನಂಬಿ ಮೋಕ್ಷವೆಂಬುದಿದ್ದರೆ ಇಂಗ್ಲಿಷ್‌ನಿಂದ ಮಾತ್ರವೆಂದೇ ತಿಳಿದಿದ್ದಾರೆ. ಮಾತೃಭಾಷೆಯಲ್ಲಿ ಶಿಕ್ಷಣ ಕಲಿಯುವ ಅಸಲೀ ಸವಿಯನ್ನು ನೋಡದವರು ರಾಸಾಯನಿಕಯುಕ್ತ ತಿಂಡಿಯನ್ನೇ ಹೊಸರುಚಿಯೆಂದು ಭಾವಿಸಿ ಮುಕ್ಕಲಾರಂಭಿಸಿದ್ದಾರೆ. ನಮ್ಮ ಹಸಿವನ್ನು ನೀಗುವ ಪರಮಶ್ರೇಷ್ಠ ಆಹಾರವೆಂದೇ ಭಾವಿಸಿದ್ದಾರೆ. ರೋಗಮುಕ್ತ ಸಾವಯವ ಬೆಳೆಯಾದ ಕನ್ನಡದಾನ್ಯಗಳನ್ನು ಬಳಸಿದ ದೇಸೀ ತಿನಿಸುಗಳ ಸವಿ ಅವರಿಗೆ ಗೊತ್ತೇ ಇಲ್ಲ. ಅದರ ಸೊಗಸನ್ನು ನಾಲಿಗೆಗೆ ಸೋಕಿಸಿಲ್ಲ. ಆದ್ದರಿಂದ ಇಂಗ್ಲಿಷ್‌ನ ನಕಲಿ ರುಚಿ ನಮ್ಮ ನಾಲಿಗೆಗೆ ಆಪ್ಯಾಯಮಾನವಾಗಿ ಕಾಣುತ್ತಿದೆ. ಕನ್ನಡದ ತಾಜಾತನ ನಮ್ಮ ಮಕ್ಕಳಿಗೆ ಸಿಗದಿರಲು ಇಂಗ್ಲಿಷ್ ಬಹುದೊಡ್ಡ ಕಂಟಕವಾಗಿದೆ. "ಅಂತರರಾಷ್ಟ್ರೀಯ ರಾಜಕೀಯ ಮತ್ತು ವಾಣಿಜ್ಯ ವ್ಯವಹಾರಗಳಿಗೆ ಆಂಗ್ಲಭಾಷೆ ಅತ್ಯಾವಶ್ಯಕ ಎಂದು ನನಗೆ ಗೊತ್ತು. ಆದ್ದರಿಂದ ಅದನ್ನು ಕೆಲವರು ಕಲಿತರೆ ಸಾಕು" ಎಂಬ ಗಾಂಧೀಜಿಯವರ ಮತ್ತು ಇದೇ ಅಭಿಪ್ರಾಯ ಹೊಂದಿರುವ ಕುವೆಂಪು ಅವರ ಮಾತುಗಳನ್ನು ಈ ಕಾಲಮಾನಕ್ಕೆ ಹೊಂದಿಕೊಳ್ಳುವಂತೆ ಬದಲಾಯಿಸಿಕೊಂಡು, ಒಂದು ಭಾಷೆಯಾಗಿ ಇಂಗ್ಲಿಷನ್ನು ಸಮರ್ಪಕವಾಗಿ ಕಲಿಸುವ ಕೆಲಸವಾಗಬೇಕೇ ಹೊರತು ಎಲ್ಲರಿಗೂ ಒಂದೇ ಮಂತ್ರವೆಂಬಂತೆ ಲಕ್ಷಾಂತರ ಮಕ್ಕಳ ಸೃಜನಶೀಲ ಬುದ್ಧಿಮತ್ತೆಯ ಮೇಲೆ ಬರೆ ಎಳೆಯುವ ಕೆಲಸವನ್ನು ನಾವು ಮಾಡಬಾರದು ಎಂಬ ತಿಳಿವಳಿಕೆ ಮೂಡಬೇಕಾಗಿದೆ. ಈ ವಿವೇಕದಿಂದ ಕನ್ನಡವನ್ನು ಸರ್ವಾಂತರಯಾಮಿ ಆಗಿಸಬೇಕು. ವಿಜ್ಞಾನ ತಂತ್ರಜ್ಞಾನಗಳನ್ನು ಕನ್ನಡದಲ್ಲಿ ಕಲಿಸುವುದಾದರೆ, ಅಸಲೀ ಸಂಶೋಧನೆಗೆ ಒತ್ತು ನೀಡಿದಂತಾಗುತ್ತದೆ.

ಇಂದು ಕರ್ನಾಟಕದಲ್ಲಿ ಕನ್ನಡಕ್ಕೆ ಅಗ್ರಸ್ಥಾನ ಸಿಗದಿದ್ದರೆ ಬೇರೆ ಯಾವ ರಾಜ್ಯದಲ್ಲೂ ಸಿಗಲಾರದು. ಇಲ್ಲಿ ಬಳಸದಿದ್ದರೆ, ಬೆಳೆಸದಿದ್ದರೆ ಬೇರೆಲ್ಲೂ ಬೆಳೆಯದು. ಆದ್ದರಿಂದ

ಆಡಳಿತದಲ್ಲಿ ಕನ್ನಡವನ್ನು ಬಳಸದೇ ಇರುವ ಅಧಿಕಾರಿಶಾಹಿಯನ್ನು ಕಪ್ಪುಪಟ್ಟಿಯಲ್ಲಿರಿಸಿ ಬಹಿಷ್ಕರಿಸಬೇಕು. ನಮ್ಮ ಮುಖ್ಯಮಂತ್ರಿಗಳಾದಿಯಾಗಿ ಮಂತ್ರಿಮಾನ್ಯರೆಲ್ಲರೂ ಕನ್ನಡ ಬಳಸದವರ ಮೇಲೆ ಕತ್ತಿ ಝಳಪಿಸಬೇಕು. ಆಗ ಆಡಳಿತ ಕನ್ನಡವಾಗುತ್ತದೆ. ಪ್ರಜಾಸೇವಕರು ಪ್ರಜೆಗಳ ಭಾಷೆ ಬಳಸುವುದರಿಂದ ಜನತಾ ಪ್ರಜಾಪ್ರಭುತ್ವ ಸ್ಥಾಪಿತವಾಗುತ್ತದೆ.

– ೩ –

ನಮ್ಮ ವ್ಯವಹಾರಿಕ ಭಾಷೆಯೂ ಕನ್ನಡವಾಗಬೇಕು. ಯಾವುದೇ ಕ್ಷೇತ್ರದಲ್ಲಿರಲಿ, ಐಟಿ–ಬಿಟಿಯಲ್ಲೇ ಇರಲಿ, ನಿಮ್ಮ ಕೆಲಸದ ಭಾಷೆ ಯಾವುದೇ ಇರಲಿ ಹಗಲಿರುಳು ನೀವು ಬಳಸುವ ಭಾಷೆ ಕನ್ನಡವಾಗಿರಲಿ. ಈ ಮೂಲಕ ಕನ್ನಡವನ್ನು ಅನ್ನದ ಭಾಷೆಯನ್ನಾಗಿಸಬೇಕು. ಕನ್ನಡ ಬಲ್ಲವರಿಗೆ ಕೆಲಸ ಕೊಡುತ್ತೇವೆಂಬ ನಿರ್ಧಾರಕ್ಕೆ ಕರ್ನಾಟಕ ಬಂದರೆ ಕನ್ನಡ ಅಗ್ರಮಾನ್ಯವಾಗುತ್ತದೆ. ಕನ್ನಡದ ಈ ತಿರುಳಿಗೆ, ಕೊರಳಿಗೆ ಯಾರಾದರೂ ತಲೆಬಾಗಲೇ ಬೇಕಾಗುತ್ತದೆ.

ಕುವೆಂಪು ಅವರು ಪರಿಭಾವಿಸಿರುವಂತೆ, ಕನ್ನಡ ಮಾತೆ ಜಯಭಾರತ ಜನನಿಯ ತನುಜಾತೆ, ಈ ಪರಿಕಲ್ಪನೆಯಿಂದಲೇ ಬಲಿಷ್ಠ ಭಾರತವನ್ನು ಕಟ್ಟಬಹುದು. ಬಲಿಷ್ಠ ಭಾರತದಲ್ಲೇ ಗಟ್ಟಿ ನೆಲೆಯ ಕನ್ನಡತಿ ಮುಂತಾದ ಎಲ್ಲ ಭಾಷಿಕರೂ ಬೆಳೆಯಬೇಕು, ಉಳಿಯಬೇಕು. ಆಗ ಕನ್ನಡಕ್ಕೂ ವಿಶ್ವಮನ್ನಣೆ ದೊರೆಯುತ್ತದೆ ಹಾಗೂ ದೊರೆಯಬೇಕು. ಕನ್ನಡ ಮಾತನಾಡುವ ಜನಸಂಖ್ಯೆಗಿಂತ ಕಡಿಮೆ ಜನರು ಮಾತನಾಡುವ ಭಾಷೆಗಳಲ್ಲಿ ವಿಜ್ಞಾನ ತಂತ್ರಜ್ಞಾನಗಳಾದಿಯಾಗಿ ಎಲ್ಲವನ್ನು ಬೋಧಿಸುವುದು ಸಾಧ್ಯವಾದರೆ ಅದು ಕನ್ನಡಕ್ಕೆ ಏಕೆ ಸಾಧ್ಯವಿಲ್ಲ. ಆದ್ದರಿಂದ ಕನ್ನಡ–ಕರ್ನಾಟಕ ಬೇರೆ ಬೇರೆಯಲ್ಲ. ಕನ್ನಡ ಕಲಿತವನು ವಿಶ್ವಮಾನ್ಯನಾಗುತ್ತಾನೆ. ಅಂತಹ ವಾತಾವರಣ ವಿಶ್ವದಲ್ಲೇ ಸೃಷ್ಟಿಯಾಗುತ್ತದೆ. ಕನ್ನಡಕ್ಕಿರುವ ಬಹುಸಾಧ್ಯತೆಗಳನ್ನು ಸಾಕಾರಗೊಳಿಸುವುದೇ ಕುವೆಂಪು ಅವರ ಚಿಂತನ ಸಾರವಾಗಿದೆ. ಇಂತಹ ಕೆಲಸವನ್ನು ಶ್ರದ್ಧೆಯಿಂದ, ಸ್ವಯಂ ಪ್ರೇರಣೆಯಿಂದ ಆಗುಮಾಡಿಕೊಟ್ಟ ಕನ್ನಡ ಪ್ರೇಮಿ ಪ್ರೊ. ಚಂದ್ರಶೇಖರ ನಂಗಲಿಯವರಿಗೆ ಹೃತ್ಪೂರ್ವಕ ಧನ್ಯವಾದಗಳು.

**– ಡಾ. ಎಲ್. ಹನುಮಂತಯ್ಯ**

ಪ್ರಧಾನ ಸಂಪಾದಕರು

## ಸಂಪಾದಕರ ಮಾತು

# ‘ಜನಭಾಷಾವಿಜ್ಞಾನ’ವನ್ನು ಕುರಿತು...

ಹೆತ್ತತಾಯಿಗೆ ಸಮಾನವಾಗಿ ಸಲ್ಲುವ ವಸ್ತುವಿಷಯ ಯಾವುದೆಂದರೆ, ದೇಶ ಮತ್ತು ಭಾಷೆಯೇ ಸರಿ! ಆದ್ದರಿಂದಲೇ ಮಾತೃಭೂಮಿ ಮತ್ತು ಮಾತೃಭಾಷೆ ಎಂಬ ನುಡಿಗಟ್ಟು ಬಳಕೆಯಲ್ಲಿದೆ. ಹೆತ್ತತಾಯಿಗೆ ಸಲ್ಲುವ ಆದ್ಯತೆ, ಗೌರವ, ಆದರಗಳು ದೇಶಕ್ಕೆ, ಭಾಷೆಗೆ ಸಲ್ಲಬೇಕು. ಹೆತ್ತತಾಯಿ ಮೂಲೆಗುಂಪಾದರೆ ಆಕೆಯ ಮಕ್ಕಳಿಗೆ ಅವಮಾನ ತಪ್ಪಿದ್ದಲ್ಲ. ಹಾಗೆಯೇ ಮಾತೃದೇಶ ಮತ್ತು ಮಾತೃಭಾಷೆಗಳು ಮೂಲೆಗುಂಪಾದರೆ, ಅನ್ಯರ ಆಕ್ರಮಣಕ್ಕೆ ಈಡಾದರೆ ಆ ದೇಶದ ಪ್ರಜೆಗಳಿಗೆ, ಆ ಭಾಷೆಯ ಮಕ್ಕಳಿಗೆ ಅವಮಾನ ತಪ್ಪಿದ್ದಲ್ಲ. ಪರತಂತ್ರ ಭಾರತವು ಸ್ವತಂತ್ರಭಾರತ ದೇಶವಾದಂತೆಯೇ, ಪರಭಾಷಾ ಭಾರತವು ಸ್ವಭಾಷಾಭಾರತವಾಗಿ ೧೫ ಆಗಸ್ಟ್ ೧೯೪೭ ರಲ್ಲೇ ಬದಲಾಗಬೇಕಾಗಿತ್ತು.

ನೆಹರೂ ನೇತೃತ್ವದ ಸ್ವತಂತ್ರಭಾರತಕ್ಕೆ ತನ್ನದೇ ಆದ ‘ಸ್ವಭಾಷಾನೀತಿ’ ಇಲ್ಲದ್ದರಿಂದ, ಬ್ರಿಟೀಷರು ನೆಲೆಗೊಳಿಸಿದ ಶಿಕ್ಷಣ ವ್ಯವಸ್ಥೆಯ ಮೂಲಕ, ಆಡಳಿತ ವ್ಯವಸ್ಥೆಯ ಮೂಲಕ ಪರಭಾಷಾಭಾರತವಾಗಿಯೇ ಮುಂದುವರೆಯಿತು. ೨೬ ಜನವರಿ ೧೯೫೬ರಲ್ಲಿ ಭಾಷಾವಾರು ಪ್ರಾಂತ್ಯಗಳ ರಚನೆಯಿಂದಾಗಿ ಪರಭಾಷಾಭಾರತವು ಸ್ವಭಾಷಾಭಾರತವಾಗಿ ಬದಲಾಗುವ ಸಣ್ಣ ಸೂಚನೆಯೊಂದು ಸಿಕ್ಕಿತು. ಆದರೆ, ಇಂಗ್ಲಿಷೆಂಬ ಮಾರಿಹಬ್ಬಕ್ಕೆ ತಂದ ಹರಕೆಯ ಕುರಿಗಳಂತಾಗಿದ್ದ ಪ್ರಜೆಗಳು ಭಾಷಾವಾರು ಪ್ರಾಂತ್ಯಗಳೆಂಬ ತಳಿರನ್ನು ಮೇಯುತ್ತಾ ಮುಂದೊದಗುವ ಅಪಾಯವನ್ನು ಮರೆಯುತ್ತಾ ಬಂದರು. ಪರಿಣಾಮವಾಗಿ ಶಿಕ್ಷಣ ಮತ್ತು ಆಡಳಿತ ಕ್ಷೇತ್ರಗಳಲ್ಲಿ ಹೊರನುಡಿ ಇಂಗ್ಲಿಷ್, ರಾಷ್ಟ್ರನುಡಿ

ಹಿಂದಿ, ದೇವನುಡಿ ಸಂಸ್ಕೃತ ಭಾಷೆಗಳ ಪಲ್ಲಕ್ಕಿ ಸೇವೆ ನಿರ್ವಿಘ್ನವಾಗಿ ನಡೆಯುತ್ತಾ, ಬಹುಜಿಹ್ವಾಭಾರತಿಯ ಒಳನುಡಿಗಳು ಮೂಲೆಗುಂಪಾಗುತ್ತಾ ಬಂದವು. ಇದನ್ನು ಮನಗಂಡಿದ್ದ ಕುವೆಂಪು ಅವರು 'ಸಾಯುತಿದೆ ನಿಮ್ಮ ನುಡಿ, ಓ ಕನ್ನಡದ ಕಂದರಿರಾ' –ಎಂದು ಮುಂಜಾಗ್ರತೆಯ ಕೂಗು ಹಾಕಿದ್ದಾರೆ;

**ಸಾಯುತಿದೆ ನಿಮ್ಮ ನುಡಿ, ಓ ಕನ್ನಡದ ಕಂದರಿರ,**
**ಹೊರನುಡಿಯ ಹೊರೆಯಿಂದ ಕುಸಿದು ಕುಗ್ಗಿ!**
**ರಾಜನುಡಿಯೆಂದೊಂದು, ರಾಷ್ಟ್ರನುಡಿಯೆಂದೊಂದು**
**ದೇವನುಡಿಯೆಂದೊಂದು ಹತ್ತಿ ಜಗ್ಗಿ**
**ನಿರಿ ನಿಟಿಲು ನಿಟಿಲೆಂದು ಮುದಿಮೂಳೆ ಮುರಿಯುತಿದೆ**
**ಕನ್ನಡಮ್ಮನ ಬೆನ್ನು ಬಳುಕಿ ಬಗ್ಗಿ!**

ರಾಜನುಡಿ(=ರಾಯಲ್ ಲಾಂಗ್ವೇಜ್) ಇಂಗ್ಲಿಷ್, ರಾಷ್ಟ್ರನುಡಿ ಹಿಂದಿ, ದೇವನುಡಿ ಸಂಸ್ಕೃತ – ಈ ಮೂರನ್ನೂ ಕುವೆಂಪು 'ಹೊರನುಡಿಯ ಹೊರೆ'– ಎಂದು ಕರೆದಿರುವುದು ಗಮನಾರ್ಹ. ದೇಶ ಮತ್ತು ಭಾಷೆಯನ್ನು ತಾಯಿಗೆ ಸಮಾನವಾಗಿ ಪರಿಭಾವಿಸುವ ಚಿಂತನಾ ಕ್ರಮವನ್ನು ತಾತ್ವಿಕವಾಗಿ 'ಮಾನವ ರೂಪಾಂತರ ತತ್ವ' (=ಅಂತ್ರೊಪೊಮಾರ್ಫಿಸಂ) ಎಂದು ಕರೆಯುತ್ತಾರೆ. ಕುವೆಂಪು ವಿರಚಿತ ನಾಡಗೀತೆಯಲ್ಲಿ 'ಭಾರತ ಜನನಿ' ಮತ್ತು 'ಕರ್ನಾಟಕ ಮಾತೆ'– ಎಂಬ ತಾಯಿ–ಮಗಳ ರೂಪಕವಿರುವುದು ಔಚಿತ್ಯಪೂರ್ಣವಾಗಿದೆ. ಒಬ್ಬ ತಾಯಿಗೆ ಅನೇಕ ಮಕ್ಕಳಿರುವಂತೆಯೇ ಬಹುಭಾಷೆಗಳಿಂದ ಕೂಡಿದ ಭಾರತವನ್ನು 'ಬಹುಜಿಹ್ವಾಭಾರತಿ' ಎಂದು ಕರೆದಿರುವ ಕುವೆಂಪು ಅವರು ಭಾಷಾವಾರು ಪ್ರಾಂತ್ಯಗಳ ರಚನೆಯನ್ನು ಸ್ವಾಗತಿಸುತ್ತಾ, 'ಬಹುಜಿಹ್ವಾಭಾರತಿಗೆ ಐಕ್ಯತೆಯ ಆರತಿ'– ಎಂದು ಗುರುತಿಸಿದ್ದಾರೆ.

ದೇಶ–ಭಾಷೆ –ಸಂಸ್ಕೃತಿಗಳ ನಡುವಣ ಮುಪ್ಪುರಿ ಸಂಬಂಧವನ್ನು ಖಚಿತವಾಗಿ ಮನಗಂಡಿದ್ದ ಕುವೆಂಪು ಅವರಿಗೆ ಭಾಷೆಗಿರುವ ಸ್ಥಾನ–ಮಾನಗಳು ಆ ಭಾಷೆಯನ್ನು ಮಾತನಾಡುವ ಪ್ರಜೆಗಳಿಗೂ ವರ್ಗಾವಣೆಯಾಗುವುದೆಂಬ ಮುಂಗಾಣ್ಕೆಯಿತ್ತು:

**ನಿಮ್ಮ ನುಡಿ ನಿಮ್ಮ ಗಂಡಸುತನಕೆ ಹಿರಿಸಾಕ್ಷಿ**
**ಗೆಲವಿದ್ದರದಕೆ ನಿಮಗಿಹುದು ಶಕ್ತಿ**
**ನುಡಿ ಮಡಿದರೆಲ್ಲರೂ ಮೂಕಜಂತುಗಳಂತೆ;**
**ಬಾಲವಲ್ಲಾಡಿಪುದೆ ಪರಮ ಭಕ್ತಿ........**

**..................................................**

**ಕಣ್ದೆರೆಯಿರೇಳಿ, ಓ ಕನ್ನಡದ ಮಕ್ಕಳಿರ**
**ಗರ್ಜಿಸುವುದನು ಕಲಿತು ಸಿಂಹವಾಗಿ!**
**ನಖ ದಂಷ್ಟ್ರ ಕೇಸರಂಗಳ ಬೆಳೆಸಿ ಹುರಿಗೊಂಡು**
**ಶಿರವೆತ್ತಿ ನಿಂತು ಕುರಿತನವ ನೀಗಿ.**

ಸ್ವಾತಂತ್ರ್ಯಪೂರ್ವದಲ್ಲಿ (೦೩.೧೦.೧೯೩೫) ಬರೆದಿರುವ ಈ ಕವಿತೆಯಲ್ಲಿರುವ ದಾರ್ಶನಿಕತೆಯ ಮುನ್ನೋಟಗಳು ಸಂಸ್ಕೃತಿ ನಿರ್ಮಾಣ, ಶಿಕ್ಷಣ ಕ್ರಮ, ಆಡಳಿತ ವ್ಯವಸ್ಥೆ, ಸಂಪರ್ಕ ಮತ್ತು ಸಂವಹನ ಕ್ಷೇತ್ರಗಳಲ್ಲಿ ಅನುಷ್ಠಾನ ಗೊಳಿಸಬೇಕಾದ 'ಕನ್ನಡತನ'ಕ್ಕೆ ದಿಕ್ಸೂಚಿಯಾಗಿದೆ.

**ಎಲ್ಲಾದರು ಇರು; ಎಂತಾದರು ಇರು;**
**ಎಂದೆಂದಿಗು ನೀ ಕನ್ನಡವಾಗಿರು**
**ಕನ್ನಡ ಗೋವಿನ ಓ ಮುದ್ದಿನ ಕರು**
**ಕನ್ನಡತನವೊಂದಿದ್ದರೆ ನೀನಮ್ಮಗೆ ಕಲ್ಪತರು**
**–ಮೆಟ್ಟುವ ನೆಲ ಕರ್ನಾಟಕ (೧೭.೮.೧೯೪೧)**

ದೇಶ ಮತ್ತು ಭಾಷೆಗಳಿಗಿರುವ ಸರಹದ್ದುಗಳು ಮನುಷ್ಯರನ್ನು ಕೂಪಮಂಡೂಕಮಾಡುವುದೆಂಬ ದೂರ ದೃಷ್ಟಿ ಕುವೆಂಪು ಅವರಿಗಿದ್ದುದ್ದರಿಂದ ಅಂತಿಮವಾಗಿ ಇವನ್ನು ಮೀರಬೇಕಾದ ವಿಶ್ವಾತ್ಮಕ ಚಿಂತನೆಯ ಪೂರ್ವ ಸಿದ್ಧತೆಯಂತೆ ಈ ಸಾಲುಗಳಿವೆ;

**ಎಲ್ಲಿದ್ದರೆ ಏನ್? ಎಂತಿದ್ದರೆ ಏನ್?**
**ಎಂದೆಂದಿಗು ತಾನ್–**
**ಕನ್ನಡವೇ ಸತ್ಯ!**
**ಕನ್ನಡವೇ ನಿತ್ಯ!**
**ಅನ್ಯವೆನಲದೆ ಮಿಥ್ಯಾ! (ಅದೇ ಕವಿತೆ)**

ಕನ್ನಡದ ಮೂಲಕ ಕಟ್ಟಿಕೊಳ್ಳಬೇಕಾದ ವಿಶ್ವಾತ್ಮಕ ಚಿಂತನೆಯ ಪ್ರತಿಪಾದನೆ ಕುವೆಂಪು ಅವರ ನಡೆ–ನುಡಿ–ಸಾಹಿತ್ಯದಲ್ಲಿ ದಟ್ಟವಾಗಿದೆ. ರಾಜಕೀಯ ಹಿತಾಸಕ್ತಿಗಳು ಧರ್ಮ ಮತ್ತು ಶಿಕ್ಷಣವನ್ನು ಭ್ರಷ್ಟಗೊಳಿಸುವಂತೆಯೇ ಭಾಷೆಯನ್ನು ಕೂಡ ಭ್ರಷ್ಟಗೊಳಿಸುತ್ತವೆ ಎಂಬುದನ್ನು ಕುವೆಂಪು ನಂಬಿದ್ದರು;

**ಅಖಂಡ ಕರ್ಣಾಟಕ;**
**ಅಲ್ತೊ ನಮ್ಮ ಬೂಟಾಟದ ರಾಜಕೀಯ ನಾಟಕ!**
**ಇಂದು ಬಂದು ನಾಳೆ ಸಂದು**
**ಹೋಹ ಸಚಿವ ಮಂಡಲ**
**ರಚಿಸುವೊಂದು ಕೃತಕವಲ್ತೊ**
**ಸಿರಿಗನ್ನಡ ಸರಸ್ವತಿಯ**
**ವಜ್ರಕರ್ಣ ಕುಂಡಲ!**
**ಅಖಂಡ ಕರ್ಣಾಟಕ;**
**ಅಲ್ತೊ ನಮ್ಮ ನಾಲ್ಕು ದಿನದ ರಾಜಕೀಯ ನಾಟಕ!**
**ನೃಪತುಂಗನೆ ಚಕ್ರವರ್ತಿ!**
**ಪಂಪನಲ್ಲಿ ಮುಖ್ಯಮಂತ್ರಿ!**

**ರನ್ನ ಜನ್ನ ನಾಗವರ್ಮ**
**ರಾಘವಾಂಕ ಹರಿಹರ**
**ಬಸವೇಶ್ವರ ನಾರಣಪ್ಪ**
**ಸರ್ವಜ್ಞ ಷಡಕ್ಷರ;**
**ಸರಸ್ವತಿಯೆ ರಚಿಸಿದೊಂದು**
**ನಿತ್ಯ ಸಚಿವಮಂಡಲ,**
**ತನಗೆ ರುಚಿರ ಕುಂಡಲ!** (೦೧. ೦೫. ೧೯೪೯)

..... ....... ........ ..........

ಮತಪೆಟ್ಟಿಗೆ ರಾಜಕೀಯ, ಜಾತಿವಾದದ ತಳಹದಿಯಲ್ಲಿ ರಚಿಸುವ ಸಚಿವಮಂಡಲದ ನಶ್ವರತೆಯನ್ನು ಹೇಳುತ್ತಲೆ ಸುಸ್ಥಿರವಾದ ಅಖಂಡ ಕರ್ಣಾಟಕದ ನಿತ್ಯ ಸಚಿವಮಂಡಲದ ಪರಿಕಲ್ಪನೆಯನ್ನು ಕುವೆಂಪು ನೀಡಿರುವುದು ಆರೋಗ್ಯದಾಯಕವಾಗಿದೆ. ಕನ್ನಡನಾಡು ರಾಜಕೀಯದ ಎಳೆದಾಟಗಳಿಗೆ ಸಿಲುಕಿ ಹರಿದು ಹಂಚಿಹೋಗಬಾರದೆಂಬ ಕಾಳಜಿಯನ್ನು ಹೊಂದಿದ್ದ ಕುವೆಂಪು 'ಏಕೈಕ ಕರ್ನಾಟಕ'ದ ಚಿತ್ರಣ ನೀಡಿದ್ದಾರೆ. ೧೬.೧೦.೧೯೪೧ ರಲ್ಲಿ ಬರೆದಿರುವ ಈ ಕವಿತೆಯಲ್ಲಿ ಕುವೆಂಪು ಅವರು ಕನ್ನಡನಾಡಿನ ನದಿ–ಬೆಟ್ಟ–ಸಮುದ್ರ–ಸಸ್ಯ–ಪ್ರಾಣಿ–ನಿಸರ್ಗ–ಮನುಷ್ಯ–ಸಂಸ್ಕೃತಿ ಸಮಾವಿಷ್ಟ ಜೈವಿಕ ಕರ್ನಾಟಕದ ಏಕೀಕರಣದ ಹಸಿರುಪಿರಾಮಿಡ್ ಅನ್ನು ನಿರೂಪಿಸಿದ್ದಾರೆ.

'ಕರ್ಣಾಟಕ ರಾಜ್ಯೋದಯ ಶ್ರೀ ಗೀತೆ'(೦೧.೧೧.೧೯೫೬) ಎಂಬ ಕವಿತೆಯಲ್ಲಿ ಕುವೆಂಪು ಅವರು ನವೆಂಬರ್ ಒಂದನೆ ತಾರೀಕಿನ ಉತ್ಸವ ನಿಷ್ಠ ಆಚರಣೆಗಳ ಅಪಾಯವನ್ನು ಮನಗಂಡಿದ್ದು, ನಾವು ಕಟ್ಟಿಕೊಳ್ಳಬೇಕಾದ 'ಕನ್ನಡ ದೀಪಾವಳಿ'ಯನ್ನು ಸುವಿಶಾಲವಾಗಿ ಗ್ರಹಿಸಿದ್ದಾರೆ:

**ಬರಿಯ ಚದರಮೈಲಿಗಳಲ್ತು ಕರ್ಣಾಟಕದ ದೇಶ ವಿಸ್ತೀರ್ಣಂ;**
**ನೆನೆ, ನೆನೆ, ಮನೋಮಯದ ಸಂಸ್ಕೃತಿಯ ಕೋಶ ವಿಸ್ತೀರ್ಣಮಂ,**
**ಮನೆಯದಿರು ಚದರಸಂವತ್ಸರದ ಶತಮಾನಗಳ ಕಾಲ ವಿಸ್ತೀರ್ಣಮಂ,**
**ಪ್ರಾಣಮಯ ಭಾವಪ್ರದೇಶ ವಿಸ್ತೀರ್ಣಮಂ ಚಿದಾಕಾಶ ವಿಜ್ಞಾನ ವಿಸ್ತೀರ್ಣಮಂ!**

ದೇಶ ಮತ್ತು ಭಾಷೆಗಳ ಸರಹದ್ದುಗಳನ್ನು ಮೀರುವ ಬಗೆ ಇಲ್ಲಿ ಸುಸ್ಪಷ್ಟವಾಗಿದೆ. ದೇಶ–ಕಾಲ ವಿಸ್ತೀರ್ಣಗಳನ್ನು ಮೀರಿದ (೧) ಮನೋಮಯ ಸಾಂಸ್ಕೃತಿಕ ವಿಸ್ತೀರ್ಣ (೨) ಪ್ರಾಣಮಯ ಭಾವಕೋಶ ವಿಸ್ತೀರ್ಣ (೩) ಚಿದಾಕಾಶ ವಿಜ್ಞಾನ ವಿಸ್ತೀರ್ಣಗಳನ್ನೆಲ್ಲ ಒಳಗೊಳ್ಳುತ್ತಿರುವ ಈ ರಾಜ್ಯೋದಯ ಶ್ರೀ ಗೀತೆಯಲ್ಲಿ ಕನ್ನಡ ರಾಜ್ಯೋತ್ಸವಗಳ ಆಚರಣೆ ಹೇಗಿರಬೇಕೆಂಬ ಚಿಂತನೆಯಿದೆ. ೧೫ ಆಗಸ್ಟ್ ೧೯೪೭ರಂದು ಕೆಂಪುಕೋಟೆಯಲ್ಲಿ ನಡೆದ ಸ್ವಾತಂತ್ರ್ಯ ಉತ್ಸವಕ್ಕೆ ಗೈರುಹಾಜರಾಗಿದ್ದ ಗಾಂಧಿಯವರು ತಮ್ಮ ಸಾಬರ್ಮತಿ ಆಶ್ರಮದಲ್ಲಿ ಭಾರತದೇಶದ ಏಳಿಗೆಯನ್ನು ಕುರಿತು

ಚಿಂತನೆ ಮಾಡುತ್ತಿದ್ದರಂತೆ. ಇಲ್ಲಿ ಕುವೆಂಪು ೦೧ನವೆಂಬರ್ ೧೯೫೬ರಂದು ಉದಯರವಿಯಲ್ಲಿ ಕುಳಿತು (=ಯಾವುದೇ ವಿಧವಾದ ಉತ್ಸವಗಳಲ್ಲಿ ಪಾಲ್ಗೊಳ್ಳದೆ.) ಕನ್ನಡನಾಡಿನ ಏಳಿಗೆಯನ್ನು ಕುರಿತು ಚಿಂತನೆಮಾಡಿದ್ದಾರೆ. ಕನ್ನಡ ಚಕ್ರವರ್ತಿಯಾದ ನೃಪತುಂಗ ದೇವನಿಗೆ ಕುವೆಂಪು ನೀಡಿರುವ ಆಹ್ವಾನವಿದು:

**ಓ ಏಳು ನೃಪತುಂಗದೇವ**
**ಕೃಪೆಯಿಟ್ಟು ಕವಿರಾಜಮಾರ್ಗದವರಮನೆಯ ಸಿಂಹಾಸನವನಿಳಿದು ಬಾ**
**.......... ......... ........ ....... ....... .....**
**ಸಂವತ್ಸರ ಸಹಸ್ರ ಸೋಪಾನ ಪಂಕ್ತಿಗಳನಿಳಿದು ಬಿಜಯಗೈ**
**ಪುಣ್ಯ ದೀಪಾವಳಿಯ ದಿನದ ಈ ರಾಜ್ಯೋದಯ ಮಹೋತ್ಸವಕ್ಕೆ.**

'ಕನ್ನಡ ದೀಪಾವಳಿ' ಆಗಬೇಕಾದರೆ ದೇವನುಡಿ ಸಂಸ್ಕೃತ ರಾಷ್ಟ್ರನುಡಿ ಹಿಂದಿ ಎಂಬ ನರಕಚತುರ್ದಶಿ ಹಾಗೂ ಬ್ರಿಟೀಷ್ ಸಾಮ್ರಾಜ್ಯಭಾಷೆ ಇಂಗ್ಲಿಷಿನ ಬಲಿಪಾಡ್ಯಮಿ ಜೊತೆಗೂಡಬೇಕು ಎಂಬ ಖಚಿತ ನಿಲುವು ಕುವೆಂಪುಗಿತ್ತು. ಆದ್ದರಿಂದಲೇ, ನವಭಾರತದ ಗೊಂದಲಬಡಕ ಭಾಷಾನೀತಿಯಾದ ತ್ರಿಭಾಷಾಸೂತ್ರವನ್ನು ಕುವೆಂಪು ಸ್ಪಷ್ಟವಾಗಿ ನಿರಾಕರಿಸಿದ್ದಾರೆ:

**ಭಾಷಾ ತ್ರಿಶೂಲವೇ ತ್ರಿಭಾಷಾಸೂತ್ರ**
**ಬಾಲಕರ ರಕ್ಷಿಸೈ, ಹೇ ತ್ರಿಣೇತ್ರ!**
**ಚೂರು ತಿಂಡಿಗೆ ಸಿಕ್ಕಿಸಿಹರೊ ಈ ಮೂರುಗಾಳ**
**ನುಂಗದಿದ್ದರೆ ಹಸಿವೆ, ನುಂಗಿದರೆ ಪ್ರಾಣಶೂಲ!**

ಎಲ್ಲ ಭಾಷೆಗಳ್ನು ಸರಿಸಮಾನವಾಗಿ ಕಾಣುವ ಕುವೆಂಪು ಕನ್ನಡಮ್ಮನಂತೆಯೇ ಸಂಸ್ಕೃತ, ಇಂಗ್ಲಿಷ್, ಹಿಂದಿ, ತಮಿಳು, ತೆಲುಗು ಮುಂತಾದುವನ್ನು ಅವರವರ 'ತಾಯಿನುಡಿ' ಗಳೆಂದು ಕರೆದು ಗೌರವಿಸಿದ್ದಾರೆ. 'ಸಂಸ್ಕೃತ ಮಾತೆ' ಎಂಬ ಪ್ರತ್ಯೇಕ ಕವಿತೆಯನ್ನೆ ರಚಿಸಿದ್ದಾರೆ. ಮಾನವನಿರ್ಮಿತವಾದ ದೇಶ–ಕಾಲ–ಧರ್ಮ–ಭಾಷೆಗಳಲ್ಲಿ ಏರ್ಪಡುವ ದೇಶಾಂಧತೆ, ಕಾಲಾಂಧತೆ, ಧರ್ಮಾಂಧತೆ, ಭಾಷಾಂಧತೆಗಳು ಕುವೆಂಪು ಅವರ ಚಿಂತನಾಕ್ರಮದಲ್ಲಿ ಎಲ್ಲಿಯೂ ನುಸುಳಿಲ್ಲ. ಒಬ್ಬ ಮನುಷ್ಯ ಮತ್ತೊಬ್ಬ ಮನುಷ್ಯನ ಮೇಲೆ ನಡೆಸುವ ದಬ್ಬಾಳಿಕೆ ಮತ್ತು ಸರ್ವಾಧಿಕಾರದ ದೃಷ್ಟಿ–ಧೋರಣೆಗಳನ್ನು ನಿರಾಕರಿಸುವಂತೆಯೇ, ಒಂದು ಭಾಷೆ ಮತ್ತೊಂದು ಭಾಷೆಯ ಮೇಲೆ ನಡೆಸುವ ದಬ್ಬಾಳಿಕೆ ಮತ್ತು ಸರ್ವಾಧಿಕಾರವನ್ನು ಕುವೆಂಪು ನಿರಾಕರಿಸುತ್ತಾರೆ. ನವಭಾರತದೇಶಕ್ಕೆ ಒಪ್ಪುವಂತೆ 'ಬಹುಭಾಷೆಗಳಲ್ಲಿ ದ್ವಿಭಾಷೆ' – ಎಂಬ ಭಾಷಾನೀತಿಯನ್ನು ಕುವೆಂಪು ಬಲವಾಗಿ ಪ್ರತಿಪಾದಿಸಿದ್ದಾರೆ. ಇಂಗ್ಲಿಷ್ v/s ಕನ್ನಡ, ಸಂಸ್ಕೃತ v/s ಕನ್ನಡ, ಹಿಂದಿ v/s ಕನ್ನಡ– ಎಂಬ ಮೂರೂ ನೆಲೆಗಳಲ್ಲಿ ಕುವೆಂಪು ಕನ್ನಡತನ ಮೆರೆದಿದ್ದಾರೆ:

## ೧. ಇಂಗ್ಲಿಷ್ v/s ಕನ್ನಡ

ನೀನು ಅಂತರರಾಷ್ಟ್ರ ಕೀರ್ತಿಯಂ ಪೊತ್ತು ಗರ್ಜಿಸುವ ಜಗತ್ ಪ್ರಸಿದ್ಧಹುಲಿಯೆ?
ಇದೆಕೊ ನಿನಗೆನ್ನ ಬೋ ಪರಾಕು!
ನಾನು ಅಜ್ಞಾತ ಅಖ್ಯಾತ ಅನಾಮಕ ಅಲ್ಪ ಇಲಿಯೆ? ಇರಲಿ:
ಕನ್ನಡದ ಬೆನಕದೇರನ್ನೆಳೆವ ಈ ಧನ್ಯತೆಯೆ ಸಾಕು!
–ಬಲಾತ್ಕಾರದ ಭಾಷಾತ್ರಿಶೂಲ (೨೦.೯.೧೯೬೩)

## ೨. ಹಿಂದಿ v/s ಕನ್ನಡ

ಉತ್ತರದ ಕಾಶಿಯಲಿ ಕತ್ತೆ ಮಿಂದೈತರಲು
ದಕ್ಷಿಣದ ದೇಶಕದು ಕುದುರೆಯಹುದೆ?
ತಾಯಿತ್ತ ಮೊಲೆಹಾಲೆ ನಿಮ್ಮ ಮೈಗಾಗದಿರೆ
ಹೊತ್ತ ಹೊರೆ ಬಲಕಾರಿ ನೆತ್ತರಹುದೆ?
–ಸಾಯುತಿದೆ ನಿಮ್ಮನುಡಿ, ಓ ಕನ್ನಡದ ಕಂದರಿರ (೦೩.೧೦.೧೯೩೫)

## ೩. ಸಂಸ್ಕೃತ v/s ಕನ್ನಡ

ಹೇ ದಿವ್ಯ ಸಂಸ್ಕೃತ ಹಿಮಾಚಲವೆ,
ಗಗನ ಚುಂಬಿತವಾಗಿ ಬೆಳೆದು ನೀ ನಿಂತಿರುವೆ
ಸ್ಥಿರತೆಯದು ಸಾವಲ್ಲ, ಜೀವಿತ ಚರಮಲಕ್ಷ್ಯ!
ಬೆಳೆಯುತಿಹ ನಿನ್ನೀ ಹಸುಳೆಗಳಿಗೆ ತಾವ ಕೊಡು,
ಹರಕೆಗೈ, ಸ್ತನ್ಯಪಾನವ ನೀಡು, ಹೇ ಜನನಿ!
ಹಸಿದ ಹಸುಳೆಯ ಕೈಯ ಅಶನವನು ಕಸಿಯುವುದು
ಹಿರಿಯ ಸಂಸ್ಕೃತಿ ಪಡೆದ ಸಂಸ್ಕೃತ ಮಹೀಯಸಿಗೆ
ಗೌರವದ ಕುರುಹಲ್ಲ! ತಾಯಿ ಮಗುವಿಗೆ ಕರುಬಿ
ವೈಯಾರಿಯಾಗುವುದು, ಅಯ್ಯೊ, ಲಕ್ಷಣವಲ್ಲ!
ಮಗು ಬೆಳೆಯಲೆಳಸುವುದು ಜನನಿಯ ಮರಣಕಲ್ಲ,
ಜನನಿಗದು ಅಭಿಮಾನ, ತೇಜಸ್ಸು, ಶ್ರೇಯಸ್ಸು!....
–ಸಂಸ್ಕೃತಮಾತೆ (ದಿನಾಂಕ ನಮೂದಿಸಿಲ್ಲ)

ಸಹಸ್ರಮಾನವನ್ನು ಮೀರಿದ ಕನ್ನಡಭಾಷಾಸಂಸ್ಕೃತಿಯ ಕೆಚ್ಚು(=ಚೇಗು) ಕುರಿತು ಕುವೆಂಪು ಅವರಿಗಿದ್ದ ಆತ್ಮವಿಶ್ವಾಸ ಹಿಮಾಚಲದಷ್ಟು ಅಚಲವಾದುದು: ಪಂಪ ರನ್ನರ ಹೆತ್ತನುಡಿಗೆ ಕುಂದೇನು?... ಕನ್ನಡದಲಿ ಹರಿ ಬರೆಯುವನು, ಕನ್ನಡದಲಿ ಹರ ತಿರಿಯುವನು.. ಬಾರಿಸು ಕನ್ನಡ ಡಿಂಡಿಮವ ಓ ಕರ್ನಾಟಕ ಹೃದಯಶಿವ... ಅಳುಕದೀ ಕನ್ನಡಂ.. ಕನ್ನಡಕೆ ಹೋರಾಡು ಕನ್ನಡದ ಕಂದಾ,

ಕನ್ನಡವ ಕಾಪಾಡು ನನ್ನ ಆನಂದಾ!.... ಕನ್ನಡಕೆ ಬಂದಳಿಕೆ ಹಿಡಿಯುತಿಹುದಿಂದು, ನೀ ನಿದ್ದೆಮಾಡಿದರೆ ಹಾಕುವುದು ಕೊಂದು.... ಕನ್ನಡದ ಕ್ರಿಸ್ತನದೊ ಇಂಗ್ಲಿಷಿನ ಶಿಲುಬೆಯಲಿ ಸಿಲುಕಿ ಬಾಯ್ಬಿಡುತಿಹನು ನೀರಡಸಿ ಪ್ರಾಣ... ಇಂಗ್ಲಿಷಿನ ಜಿಲೊಟಿನ್ನಿನಡಿ ನಿಮ್ಮ ಕೊರಳೊಡ್ಡಿ ವರುಷವರುಷವು ಕೋಟಿ ಕೊಲೆಯಪ್ಪಿರೇಕೆ?... ಈ ಸಾಲುಗಳು ಕುವೆಂಪು ಕವಿತೆಗಳಿಂದಾಯ್ದ ಪಂಕ್ತಿಗಳು ಮಾತ್ರವಲ್ಲ! ಕನ್ನಡ ಭಾಷಾ ಸಂಸ್ಕೃತಿ ನಿರ್ಮ್ಮಾಣದ ಪಾಲಿಗೆ ನುಡಿಮಂತ್ರಗಳೂ ಹೌದು.

ಕನ್ನಡ ಭಾಷಾ ಸಂಸ್ಕೃತಿಯ ಮಹಾವೃಕ್ಷಕ್ಕೆ ಎಂದಿಗೂ ಬಂದಳಿಕೆ(=ಪರೋಪಜೀವಿ ಸಸ್ಯ: ಪ್ಯಾರಸೈಟ್) ಹಿಡಿಯಬಾರದು. ಹೊರನುಡಿಯ ಹೊರೆಯನ್ನು ಬಂದಳಿಕೆಗೆ ರೂಪಕ ಮಾಡಿರುವುದು ಉಚಿತಾನುಚಿತ ವಿವೇಕವಾಗಿದೆ. ಮುಂದುವರೆದು ಕುವೆಂಪು ಬಳಸಿರುವ ಸಸ್ಯರೂಪಕವನ್ನೆ ನಾವು ಕೂಡ ಬಳಸಿಕೊಂಡು ಕನ್ನಡಭಾಷಾಸಂಸ್ಕೃತಿಯ ಮಹಾವೃಕ್ಷಕ್ಕೆ ಹೊರನುಡಿಗಳು ಸೀತಾಳೆಗಿಡ(=ಅಪ್ಪುಗಿಡ, ಆರ್ಕಿಡ್ಸ್)ಗಳಂತೆ ಸೊಬಗನ್ನು ಹೆಚ್ಚಿಸುವಂತಿರಬೇಕೆಂದು ಹೇಳಬಹುದು. ಪ್ಯಾರಸೈಟ್ ನೆಲಮೂಲದ ಗಿಡವನ್ನು ಕೊಂದು ಕೂಗಿದರೆ, ಆರ್ಕಿಡ್‌ಗಳು ಅದೇ ಗಿಡವನ್ನು ಅಪ್ಪಿಕೊಂಡು ಅಂದವನ್ನು ಹೆಚ್ಚಿಸುತ್ತವೆ. ಭಾಷೆಗಳ ನಡುವಣ ಬಾಂಧವ್ಯ ಅಪ್ಪುಗಿಡಗಳಂತಿದ್ದರೆ ಆ ಸಮಾಜವು ಸಕಲಸಸ್ಯಗಳ ಶಾಂತಿಯ ತೋಟದಂತಿರುತ್ತದೆ. ಬಹುಭಾಷಿಕ ಸಮಾಜದಲ್ಲಿ ಈ ಸಸ್ಯಮೂಲದ ವಿವೇಕವನ್ನು ಮನಸ್ಸಿನಲ್ಲಿಟ್ಟುಕೊಂಡು 'ಭಾಷಾನೀತಿ'ಯನ್ನು ರೂಪಿಸಬೇಕು. ಈ ದಿಸೆಯಲ್ಲಿ ಕುವೆಂಪು ವಿರಚಿತ 'ಕನ್ನಡ ಭಾಷಾಸಂವಿಧಾನ'ವು ಇನ್ನು ಮುಂದೆ ಸೂಕ್ತ ಮಾರ್ಗದರ್ಶಿ ಗ್ರಂಥವಾಗಬಹುದು.

ಕುವೆಂಪು ಕವಿತೆಗಳ ಮೂಲಕ ಮಾತ್ರವಲ್ಲದೆ, ವಿಚಾರಸಾಹಿತ್ಯದ ಮೂಲಕವೂ 'ಜನಭಾಷಾವಿಜ್ಞಾನ'ದ ಸ್ವರೂಪವನ್ನು ಎಳೆಎಳೆಯಾಗಿ ಬಿಡಿಸಿ ತೋರಿಸಿದ್ದಾರೆ. ನಮ್ಮ ವಿಶ್ವವಿದ್ಯಾನಿಲಯಗಳಲ್ಲಿ ಬೋಧಿಸುತ್ತಿರುವುದು 'ಪಂಡಿತಭಾಷಾವಿಜ್ಞಾನ'ವೆಂದು ಹೇಳಿದರೆ ತಪ್ಪಾಗಲಾರದು. ವಿವಿಧಬಗೆಯ ಯಜಮಾನ ಭಾಷೆಗಳ ಎದುರು ಜನಭಾಷೆಗಳು ಏಗುತ್ತಾ ತಮ್ಮ ಅಸ್ತಿತ್ವಕ್ಕಾಗಿ ಹೋರಾಟ ನಡೆಸುತ್ತಿರುವ ದಿನಗಳಿವು. "ಹೋದೆಯಾ ಪಿಶಾಚಿ ಎಂದರೆ, ಮರಳಿಬಂದೆ ಏಕಗವಾಕ್ಷಿಯಲ್ಲಿ"– ಎಂಬ ಗಾದೆಮಾತಿನಂತೆ ಜಾಗತೀಕರಣದ ಪರ್ವದಿನಗಳಲ್ಲಿ ಇಂಗ್ಲಿಷ್ ಎಂಬ ಪಿಶಾಚಿಯು ಕನ್ನಡದ ನೆಲಮನೆಯಲ್ಲಿ ಬಲವಾಗಿ ಸೇರಿಕೊಂಡು ಬಿಟ್ಟಿದೆ... ಈಗ ಕನ್ನಡಿಗರು ತಾವು ಕೂಡ ಜಾಗತೀಕರಣ ಮತ್ತು ಡಿಜಿಟಲೀಕರಣಗೊಳ್ಳುವುದರ ಮೂಲಕ ಇಂಗ್ಲಿಷಿನ ಭೂತೋಚ್ಚಾಟನೆ ಮಾಡಬೇಕಾಗಿದೆ. ಈ ದಿಸೆಯಲ್ಲಿ ಡಬ್ಬಿಂಗ್ ತಂತ್ರಜ್ಞಾನದ ಅಳವಡಿಕೆ ಅತ್ಯಗತ್ಯವಾಗಿದೆ. ಡಬ್ಬಿಂಗ್ ಅಥವಾ ಅನುವಾದ ಕಾರ್ಯವನ್ನು ಕೇವಲ ಸಿನಿಮಾಜಗತ್ತಿಗೆ ಸೀಮಿತಗೊಳಿಸದೆ, ಕನ್ನಡ ಭಾಷಾ ಸಂಸ್ಕೃತಿಯ ನಿರ್ಮ್ಮಾಣಕ್ಕೆ ಪೂರಕವಾಗಿ ಬಳಸಿಕೊಳ್ಳಬೇಕು.

'ನಮಗೆ ಬೇಕಾಗಿರುವ ಇಂಗ್ಲಿಷ್'–ಎಂಬ ಲೇಖನದಲ್ಲಿ ಕುವೆಂಪು

ಇಂಗ್ಲಿಷಿನ ವಿವಿಧ ಹಂತಗಳ ಪರಿಪೂರ್ಣ ಅನುಷ್ಠಾನದ ಬಗ್ಗೆ ಸುದೀರ್ಘವಾಗಿ ಚರ್ಚಿಸಿದ್ದಾರೆ. ಡಬ್ಬಿಂಗ್ ಅಥವಾ ಅನುವಾದಗಳ ಮೂಲಕ ಪರಿಪುಷ್ಟಗೊಳ್ಳಬೇಕಾದ ಕನ್ನಡ ಭಾಷಾಸಂಸ್ಕೃತಿಯ ನಿರ್ಮಾಣದ ಜವಾಬ್ದಾರಿಯನ್ನು ಎತ್ತಿ ಹಿಡಿದಿದ್ದಾರೆ. ದೂರದಲ್ಲಿರುವ ಪಾಶ್ಚಿಮಾತ್ಯ ದೇಶಭಾಷೆಗಳ ಸಾಹಿತ್ಯಸಂಸ್ಕೃತಿಯನ್ನು ಅನುವಾದ ಮಾಡಿ ಕೊಳ್ಳುವಂತೆಯೇ ನಮ್ಮ ನೆರೆಹೊರೆಯ ಸೋದರಭಾಷೆಗಳಲ್ಲಿರುವ ಸಾಹಿತ್ಯ ಸಂಸ್ಕೃತಿಯನ್ನು ಬರಮಾಡಿಕೊಳ್ಳಬೇಕೆಂಬ ಸುವಿಶಾಲದೃಷ್ಟಿ ಕುವೆಂಪು ಅವರಲ್ಲಿದೆ. ಜನಭಾಷೆಗಳ ಪಕ್ಷವಹಿಸಿಕೊಂಡು ಸಮರ್ಪಕ ಭಾಷಾನೀತಿ, ಭಾಷಾತಂತ್ರಜ್ಞಾನ, ಭಾಷಾವಿಜ್ಞಾನವನ್ನು ಪ್ರತಿಪಾದಿಸಿರುವ ಕುವೆಂಪು ಭಾಷಿಕವಿಚಾರಗಳು ಅನುಷ್ಠಾನ ಯೋಗ್ಯವಾದವು. ಇದು ಇಂದಲ್ಲ, ನಾಳೆ ಮನವರಿಕೆಯಾಗದೆ ಇರದು. ಪ್ರಸ್ತುತ, ಸಂಪಾದನಾ ಗ್ರಂಥದಲ್ಲಿ ಕುವೆಂಪುಅವರ ಭಾಷಿಕ ವಿಚಾರಗಳೆಲ್ಲವನ್ನು ಒಂದೆಡೆ ಲಭ್ಯವಾಗುವಂತೆ ಯೋಜಿಸಲಾಗಿದ್ದು, ಮೊದಲಬಾರಿಗೆ ಕುವೆಂಪು ಕಾವ್ಯ ಮತ್ತು ಕುವೆಂಪು ವಿಚಾರಸಾಹಿತ್ಯಗಳಲ್ಲಿ ಹಂಚಿಹೋಗಿರುವ ಕವಿತೆಗಳು ಮತ್ತು ಗದ್ಯಬರೆಹಗಳನ್ನು ಕ್ರೋಢೀಕರಿಸಿ, 'ಕುವೆಂಪು ವಿರಚಿತ ಕನ್ನಡಭಾಷಾಸಂವಿಧಾನ'– ಎಂಬ ಶೀರ್ಷಿಕೆ ಸಹಿತ ಪ್ರಕಟಿಸಲಾಗಿದೆ.

ಕುವೆಂಪು ಪ್ರಜಾಪ್ರಭುತ್ವದ ಪ್ರಬಲ ಪ್ರತಿಪಾದಕ. ಮತಪೆಟ್ಟಿಗೆಯ ಬಲಿಷ್ಠ ರಾಜಕಾರಣವನ್ನೆ 'ಪ್ರಜಾಪ್ರಭುತ್ವ' ಎಂದು ನಂಬಿಸುತ್ತಿರುವ, ಬಿಂಬಿಸುತ್ತಿರುವ ಕಾಲದಲ್ಲಿ ಪ್ರಜಾಪ್ರಭುತ್ವ ಎಂದರೇನು? ಅದರ ವಿರಾಟ್ ಸ್ವರೂಪವೇನು? ವೈವಿಧ್ಯಮಯ ನೆಲೆಗಳಲ್ಲಿ ಪ್ರಜಾಪ್ರಭುತ್ವವನ್ನು ಗ್ರಹಿಸುವುದು ಹೇಗೆ?'–ಎಂಬ ಚಿಂತನೆ ಅತ್ಯವಶ್ಯ.ಬಲಿಷ್ಠದೇಶ–ಬಲಿಷ್ಠಭಾಷೆ–ಬಲಿಷ್ಠಧರ್ಮ–ಬಲಿಷ್ಠಜನಾಂಗ ಮುಂತಾದ ಬಲಿಷ್ಠ ನೀತಿಯು ಪ್ರಜಾಪ್ರಭುತ್ವಕ್ಕೆ ವಿರೋಧಿಯಾದುದು: ..."ಬಲಿಷ್ಠರ ಔದಾರ್ಯದಲ್ಲಿ ಔದಾರ್ಯಕ್ಕಿಂತಲೂ ಹೆಚ್ಚಾಗಿ ಬಲವೇ ಪ್ರಕಾಶಿತವಾಗುತ್ತದೆ. ಔದಾರ್ಯವೇಷಿಯಾದ ಬಲವು ತಿಂಡಿಯಿಂದ ತನ್ನ ಕೊಂಡಿಯನ್ನು ಮರೆಮಾಡಿಕೊಂಡಿರುವ ಗಾಳದಂತೆ ಮೃತ್ಯುಕರವಾದುದು. ಅದರಿಂದ ಹೊಟ್ಟೆ ತುಂಬುವುದಕ್ಕೆ ಬದಲು ಗಂಟಲು ಹರಿದು ಹೋಗುತ್ತದೆ".......... ಕುವೆಂಪು ಅವರ ಈ ವ್ಯಾಖ್ಯಾನದಲ್ಲಿ ಬಲಿಷ್ಠನೀತಿಯ ಅಪಾಯಗಳೇನೆಂಬುದು ಸುಸ್ಪಷ್ಟವಾಗಿದೆ.

## ೧. ಪ್ರಾಂತೀಯ ಪ್ರಜಾಪ್ರಭುತ್ವ: ರೀಜನಲ್ ಡೆಮಾಕ್ರಸಿ

......"ಭರತಮಾತೆಯನ್ನು ಬಂಧನಮುಕ್ತಳನ್ನಾಗಿ ಮಾಡುವುದಕ್ಕೆ ನಾನಾ ಪ್ರಾಂತಗಳ ಆಕೆಯ ಪುತ್ರರೆಲ್ಲರೂ ಒಟ್ಟುಗೂಡಿ ದುಡಿಯಬೇಕು ಎನ್ನುವ ವಿಚಾರದಲ್ಲಿ ಯಾರಲ್ಲಿಯೂ ಎರಡು ಮನಸ್ಸಿಲ್ಲ. ಆದರೆ ಆಕೆಯ ತನುಜಾತೆಯರಂತಿರುವ ಪ್ರಾಂತಗಳೆಲ್ಲವೂ ಬಹುಕಾಲದಿಂದಲೂ ಬೆಳೆಯಿಸಿಕೊಂಡು ಬಂದ ತಮ್ಮ ತಮ್ಮ ಸಂಪದ್ಯುಕ್ತವಾದ ವ್ಯಕ್ತಿತ್ವಗಳನ್ನೆಲ್ಲ ಬಲಿಗೊಡಬೇಕು ಎಂಬ ರಾಜಕೀಯಾದ್ವೈತವಾದವು

ಅನೇಕ ಸದಭಿಪ್ರಾಯದ ಮತ್ತು ಸದ್ಬುದ್ಧಿಯ ಶ್ರದ್ಧಾಳುಗಳಿಗೆ ಅರ್ಥವಾಗುತ್ತಿಲ್ಲ, ಅಲ್ಲದೆ ವಿಲಕ್ಷಣವಾಗಿಯೂ ತೋರುತ್ತದೆ".........

.........."ಆದುದರಿಂದ ಪ್ರಾಂತ ಪ್ರಾಂತಗಳ ವ್ಯಕ್ತಿತ್ವರಕ್ಷಣೆಗೆ ಸ್ವಾತಂತ್ರ್ಯವೂ ಭರತಖಂಡದ ಪೂರ್ಣ ಸ್ವಾತಂತ್ರ್ಯದಷ್ಟೇ ಅವಶ್ಯವಾದುದು. ಆದರೆ ಪ್ರತಿಯೊಂದು ಪ್ರಾಂತ್ಯಕ್ಕೂ ಅದರ ಬೆಳೆ, ಅದರ ಕೈಗಾರಿಕೆ, ಅದರ ಹಣಕಾಸಿನ ವ್ಯವಸ್ಥೆ, ಅದರನಡೆನುಡಿ, ಸಾಹಿತ್ಯ, ಸಂಸ್ಕೃತಿ ಮೊದಲಾದವುಗಳನ್ನು ಕಾಪಾಡಿಕೊಳ್ಳುವ ಹಕ್ಕು ಅದಕ್ಕೆ ಬೇಕೇ ಬೇಕಾಗುತ್ತದೆ ಆ ಹಕ್ಕಿಗೆ ಭಂಗ ಬಂದರೆ, ಭರತಖಂಡವು ಸಂಪೂರ್ಣ ಸ್ವರಾಜ್ಯವನ್ನು ಸಂಪಾದಿಸಿದರೂ ಆ ಸ್ವಾತಂತ್ರ್ಯವು ಭಗ್ನದರ್ಪಣವಾಗುತ್ತದೆ, ಅಂತಃಕಲಹದ ವಿಕಾರವನ್ನು ಮಾತ್ರ ವಿಕಾರವಾಗಿ ಪ್ರತಿಬಿಂಬಿಸುವ ಒಡೆದ ಕನ್ನಡಿಯಾಗುತ್ತದೆ"........

–'ದೇಶದೇವಿಯ ಪೂಜೆಗೆ ಬನ್ನಿ' ಲೇಖನದಿಂದ.

## ೨. ಭಾಷಿಕ ಪ್ರಜಾಪ್ರಭುತ್ವ: ಲಿಂಗ್ವಿಸ್ಟಿಕ್ ಡೆಮಾಕ್ರಸಿ

.........."ಕನ್ನಡವನ್ನು ಬಲಾತ್ಕಾರದ ಭಾಷೆಯನ್ನಾಗಿ ಮಾಡಲು ಹೇಳುತ್ತಿಲ್ಲ. ಅದು ಪ್ರಥಮ ಭಾಷೆಯಾಗಿರಲಿ. ಮಾತೃಭಾಷೆಗೆ ಸಿಕ್ಕಬೇಕಾದ ಎಲ್ಲ ಗೌರವವೂ ಅದಕ್ಕೆ ದೊರೆಯಲಿ ಎಂಬುದಷ್ಟೇ ನನ್ನ ಅಭಿಪ್ರಾಯ.

ಇಂಗ್ಲಿಷ್ ಬಲಿಷ್ಠಭಾಷೆ. ಅದರ ಕಾಲು ಮುರಿದು ಆಳಾಗಿರಿಸಿಕೊಳ್ಳಿ. ಹೇಳಿದ ಕೆಲಸ ಮಾಡಿಕೊಂಡು ಬಿದ್ದಿರುತ್ತದೆ. ಹಿಂದಿಗೆ ಸ್ವಾತಂತ್ರ್ಯ ಕೊಡುವುದು ಬೇಡ. ಅದರ ಸೊಂಟ ಮುರಿಯಿರಿ. ಅದರಿಂದ ನಮಗೆ ಅಪಾಯವಿಲ್ಲ. ಒಬ್ಬ ಕುಂಟ, ಒಬ್ಬ ಹೆಳವ, ಅವು ನಮ್ಮ ಮೈಮೇಲೆ ಬೀಳುವುದಿಲ್ಲ.

ಇಂಗ್ಲಿಷ್ ಶಿಕ್ಷಣಮಾಧ್ಯಮ ತೊಲಗಿ ಪ್ರಾದೇಶಿಕಭಾಷೆಗೆ ಆ ಸ್ಥಾನ ಲಭಿಸದಿದ್ದರೆ, ನಮ್ಮ ದೇಶ ಹತ್ತೇ ವರ್ಷಗಳಲ್ಲಿ ಸಾಧಿಸಬೇಕಾದುದನ್ನು ಇನ್ನೊಂದು ನೂರುವರ್ಷಗಳಲ್ಲಿಯೂ ಸಾಧಿಸಲಾರದೆ ನಿತ್ಯರೋಗಿಯಂತಿರಬೇಕಾಗುತ್ತದೆ".........

–'ಕನ್ನಡ ಡಿಂಡಿಮ' ಮುನ್ನುಡಿಯಿಂದ

........." ಆಯಾ ದೇಶಭಾಷೆಗಳ ವಿಷಯದಲ್ಲಿ ಆಯಾಪ್ರದೇಶಗಳು ಎಷ್ಟು ಶ್ರಮಿಸಿದರೂ ಸಾಲದಾಗಿದೆ, ಎಷ್ಟು ಪ್ರೋತ್ಸಾಹಕೊಟ್ಟರೂ ಎಂದಿಗೂ ಅತಿರೇಕ ಎನ್ನಿಸಿಕೊಳ್ಳಲಾರದು. ಸರಕಾರಗಳಾಗಲಿ, ವಿದ್ಯಾಭ್ಯಾಸ ಇಲಾಖೆಗಳಾಗಲಿ, ವಿಶ್ವವಿದ್ಯಾಲಯಗಳಾಗಲಿ, ಇತರ ಸಾಂಸ್ಕೃತಿಕ ಸಂಸ್ಥೆಗಳಾಗಲಿ, ಕಡೆಗೆ ವ್ಯಾಪಾರ ವಾಣಿಜ್ಯಾದಿ ಸಂಸ್ಥೆಗಳಾಗಲಿ ದೇಶ ಭಾಷೆಗೇ ಮೊತ್ತಮೊದಲನೆಯ ಸ್ಥಾನ ಕೊಡಬೇಕು. ಹಾಗೆ ಮಾಡದಿದ್ದರೆ ಪ್ರಜಾಪ್ರಭುತ್ವದ ಬುಡದ ಬೇರಿಗೆ ಬೆನ್ನೀರೆರೆದಂತಾಗುತ್ತದೆ"..........

–'ಸಂಸ್ಕೃತಿ ಕರ್ಣಾಟಕ' ಲೇಖನದಿಂದ

## ೩. ಧಾರ್ಮಿಕ ಪ್ರಜಾಪ್ರಭುತ್ವ: ರಿಲಿಜಿಯಸ್ ಡೆಮಾಕ್ರಸಿ

....."ನಮ್ಮ ರಾಷ್ಟ್ರವನ್ನು ಸೆಕ್ಯೂಲರ್ ಸ್ಟೇಟ್ ಎಂದು ಸಾರಿದ್ದೇವೆ. ಎಂದರೆ ಧರ್ಮ ಬಾಹಿರ, ಮತ ವಿದ್ವೇಷಕರ, ನಾಸ್ತಿಕ ಅಥವಾ ಚಾರ್ವಾಕ ಎಂದರ್ಥವಲ್ಲ, ಸಮನ್ವಯ ರಾಷ್ಟ್ರ ಎಂದರ್ಥ. ಎಲ್ಲ ಮತಗಳೂ ಸತ್ಯದೆಡೆಗೆ ನಮ್ಮನ್ನು ಕೊಂಡೊಯ್ಯುವ ಬೇರೆ ಬೇರೆ ಪಥಗಳು. ಆದ್ದರಿಂದ ಯಾವ ಮತವಾಗಲಿ ಇನ್ನೊಂದು ಮತವನ್ನು ನಿಂದಿಸಲು ಕಾರಣವಿಲ್ಲ . ಎಲ್ಲ ಮತಗಳೂ ದೇವರೆಡೆಗೆ ದಾರಿಗಳೆ ಆಗಿರುವುದರಿಂದ ಮತಾಂತರಗೊಳಿಸುವಂತಹ ಅರ್ಧ ಬರ್ಬರಕ್ರಿಯೆಗಳಿಗೂ ಇಲ್ಲಿ ಅರ್ಥವಿಲ್ಲ, ಆದ್ದರಿಂದ ಸ್ಥಾನವಿಲ್ಲ, ಎಲ್ಲರೂ ತಮ್ಮ ತಮ್ಮ ದಾರಿಗಳನ್ನರಿತು ಭಕ್ತಿಯಿಂದ ಭಗವಂತನೆಡೆಗೆ ಸಾಗುವುದರ ಜೊತೆಗೆ, ಅನ್ಯಮತಗಳನ್ನು ಸಹಾನುಭೂತಿಯಿಂದ ಅರಿತು, ಇತರರ ಸಾಮಾಜಿಕ ಜೀವನದೊಂದಿಗೆ ಮೈತ್ರಿಯಿಂದ ಬೆರೆತು, ಭಾಗವಹಿಸಿ, ರಾಷ್ಟ್ರದ ಜನರಲ್ಲಿ ಸಹೋದರಭಾವವನ್ನೂ, ಐಕ್ಯಮತದ ಬುದ್ಧಿಯನ್ನೂ ನೆಲೆಗೊಳಿಸಬೇಕು"......

–'ಸಂಸ್ಕೃತಿ ಕರ್ಣಾಟಕ' ಲೇಖನದಿಂದ.

## ೪. ಶಿಕ್ಷಣ ಮಾಧ್ಯಮದಲ್ಲಿ ಪ್ರಜಾಪ್ರಭುತ್ವ

.........."ಇಂಗ್ಲಿಷ್ ಮಾಧ್ಯಮ ಭರತಖಂಡದಲ್ಲಿ ಎಂತಹ ದುರಂತ ಪರಿಣಾಮಗಳನ್ನುಂಟು ಮಾಡಿದೆ ಎಂಬುದನ್ನು, ದೇಶ ಭಾಷಾಮಾಧ್ಯಮ ಹೇಗೆ ತಾರಕವಾಗಬಲ್ಲದೆಂಬುದನ್ನು ಪೂಜ್ಯ ಮಹಾತ್ಮಾ ಗಾಂಧಿಯವರು ತಮ್ಮ ಅಸ್ಖಲಿತವಾದ ಜ್ಯೋತಿರ್ವಾಣಿಯಿಂದ ಘೋಷಿಸಿದ್ದಾರೆ. ಆ ನಿಲುವನ್ನು ಎಲ್ಲ ಶಿಕ್ಷಣತಜ್ಞರೂ ನಿಸ್ಸಂದಿಗ್ಧವಾಗಿ ಎತ್ತಿ ಹಿಡಿದಿದ್ದಾರೆ. ಇಷ್ಟಾದರೂ ಇಂಗ್ಲಿಷ್ ಮಾಧ್ಯಮವನ್ನು ಉಳಿಸಿಕೊಳ್ಳಬೇಕೆಂಬುದು ಪಟ್ಟಭದ್ರಹಿತಾಸಕ್ತಿಗಳ ಹತಾಶ ಪ್ರಯತ್ನವಾಗಿದೆ. ಇಂಗ್ಲಿಷ್ ಬೇಡವೆಂದಲ್ಲ, ಯಾರಿಗೆ ಬೇಕು, ಎಷ್ಟು ಬೇಕು ಎಂಬುದು ಮುಖ್ಯವಾದ ಪ್ರಶ್ನೆ. ಕೇವಲ ಹಿಡಿಮಂದಿಯ ಸುಖಸ್ವಾರ್ಥಗಳಿಗಾಗಿ ಇಂಗ್ಲಿಷಿನ ವಧ್ಯಪೀಠದ ಮೇಲೆ ಕೋಟ್ಯಂತರ ಜನತೆಯ ಕಲ್ಯಾಣದ ಮಾರಣಹೋಮವಾಗುತ್ತಿರುವುದು ಪ್ರಜಾಪ್ರಭುತ್ವ ತತ್ವದ ಬುಡಕ್ಕೇ ಕುಠಾರ ಪ್ರಾಯವಾಗಿದೆ"........

–'ಕರ್ಣಾಟಕ: ಇಟ್ಟ ಹೆಸರು ಕೊಟ್ಟಮಂತ್ರ' ಲೇಖನದಿಂದ.

............ "ಭಾರತದ ಒಂದು ಭಾಷೆ ಕನ್ನಡ. ಭಾರತಿಗೆ ಒಂದು ಬಾಹು ಕನ್ನಡ. ನಾನೇನಾದರೂ ಚಿತ್ರಕಾರನಾಗಿದ್ದರೆ ಭಾರತಿಗೆ ಹದಿನಾಲ್ಕು ಬಾಹುಗಳನ್ನು ಚಿತ್ರಿಸುತ್ತಿದ್ದೆ. ಆ ಹದಿನಾಲ್ಕು ಬಾಹುಗಳು ಭಾರತದ ಹದಿನಾಲ್ಕು ಮುಖ್ಯಭಾಷೆಗಳನ್ನು ಪ್ರತಿನಿಧಿಸುತ್ತವೆ.... ಈಗ ಪ್ರಾಂತಭಾಷೆಗಳ ವಿಷಯದಲ್ಲಿ, ಅವುಗಳ ಸಾಮರ್ಥ್ಯದಲ್ಲಿ ಎಳ್ಳಷ್ಟೂ ಅಧೈರ್ಯ ಪಡಬೇಕಾಗಿಲ್ಲ. ಇಂಗ್ಲಿಷಿಗೆ ಸರಿದೊರೆಯಾಗಿ ಹೆಗಲೆಣೆಯಾಗಿ ನಿಲ್ಲಬಲ್ಲ ಕನ್ನಡದಂತಹ ಭಾಷೆಗಳು ಭಾರತದಲ್ಲಿವೆ. ಎಂತಹ ಗಹನವಾದ

ವಿಷಯವನ್ನಾಗಲಿ, ಸೂಕ್ಷ್ಮವಾದ ಭಾವವನ್ನಾಗಲಿ ಕನ್ನಡದಲ್ಲಿ ಸರಳವಾಗಿಯೂ ಸುಲಭವಾಗಿಯೂ ಶಕ್ತಿಪೂರ್ಣವಾಗಿಯೂ ವಿವರಿಸುವುದು ಸಾಧ್ಯ"...

–'ಕನ್ನಡವೇ ಶಿಕ್ಷಣ ಮಾಧ್ಯಮವಾಗಬೇಕು'– ಲೇಖನದಿಂದ.

## ೫. ಕೇಂದ್ರ ಮತ್ತು ರಾಜ್ಯಗಳ ಸಂಬಂಧದಲ್ಲಿ ಪ್ರಜಾಪ್ರಭುತ್ವ

...."ಇಂಗ್ಲಿಷ್‌ಗಿಂತ ಹಿಂದಿ ಹೆಚ್ಚು ಅಪಾಯಕಾರಿ. ನಾವು ಎಂದು ತ್ರಿಭಾಷಾಸೂತ್ರವನ್ನು ಒಪ್ಪಿಕೊಂಡೆವೋ ಅಂದೇ ಹಿಂದಿಯ ಉರುಳಿಗೆ ಸಿಕ್ಕಿದೆವು. ತ್ರಿಭಾಷಾಸೂತ್ರವನ್ನು ತಮಿಳುನಾಡು ಒಪ್ಪಿಲ್ಲ. ಈ ವಿಷಯದಲ್ಲಿ ನಾವು ತಮಿಳರನ್ನು ಅನುಸರಿಸಬೇಕು. 'ಬಹುಭಾಷೆಗಳಲ್ಲಿ ದ್ವಿಭಾಷೆ'–ಎಂಬುದು ನಮ್ಮಸೂತ್ರವಾಗಬೇಕು. ಹಿಂದಿ ಇದುವರೆಗೆ ಪರೀಕ್ಷೆಯ ವಿಷಯವಾಗಿರಲಿಲ್ಲ, ಈಗ ಆಗಿದೆಯಂತೆ. ಇದು ತಪ್ಪು. ಹಳ್ಳಿಗಳಿಗೂ ಹಿಂದಿಯನ್ನು ವಿಸ್ತರಿಸುವುದು ಅವಿವೇಕ. ಇಂತಹುದು ಯಾವ ದೇಶದಲ್ಲೂ ಇಲ್ಲ"..........

..........."ನಾವು ನೆಹರು ಮುಂತಾದ ನಾಯಕರ ಮೇಲಿನ ಗೌರವದಿಂದ ಕೆಲವು ವಿಷಯಗಳನ್ನು ಸುಮ್ಮನೆ ಒಪ್ಪಿಕೊಂಡು ತಪ್ಪುಮಾಡಿದೆವೆನಿಸುತ್ತದೆ. ರಾಜ್ಯಗಳಿಗೆ ಸ್ವಾಯತ್ತತೆ ಅಗತ್ಯ, ಅಮೆರಿಕದ Stateಗಳಿಗಿರುವಂತೆ. ಅಲ್ಲಿ ಹೊಸ ಹೊಸ ಸಂಸ್ಥಾನಗಳು ಉದ್ಭವಿಸುತ್ತಲೆ ಇವೆ. ಅವುಗಳಿಗೂ ಸ್ವಾತಂತ್ರ್ಯವಿರುತ್ತದೆ, ರಾಷ್ಟ್ರಕ್ಕೂ ಭದ್ರತೆಯಿರುತ್ತದೆ. ನಮ್ಮದು United States of India ಆಗಬೇಕೆಂಬುದೇ ನಮ್ಮ ದೃಢವಾದ ಅಭಿಪ್ರಾಯ. ಇದು ಇಂದಲ್ಲ ನಾಳೆ ಆಗುತ್ತದೆ. ಇಲ್ಲವಾದರೆ ಪಂಜಾಬಿನಲ್ಲಿ ನಡೆಯುತ್ತಿರುವ ವಿದ್ಯಮಾನಗಳಂಥ ಘಟನೆಗಳು ನಿಲ್ಲುವುದಿಲ್ಲ. ರಾಜ್ಯಗಳು ಸ್ವಾಯತ್ತವಾಗಿರಲಿ, ಸೈನ್ಯ ಮುಂತಾದ ವ್ಯವಸ್ಥೆಗಳು ಕೇಂದ್ರದ ಕೈಯಲ್ಲಿರಲಿ".......

–'ಕನ್ನಡ ಚಳುವಳಿಗಳು ಜೀವಂತವಾಗಿರಲಿ'–ಲೇಖನದಿಂದ.

ಪ್ರಜಾಪ್ರಭುತ್ವದ ತತ್ವವನ್ನು ಕುವೆಂಪು ಎಷ್ಟೊಂದು ವೈವಿಧ್ಯಮಯ ನೆಲೆಗಳಿಂದ ವ್ಯಾಖ್ಯಾನಿಸಿದ್ದಾರೆಂಬುದಕ್ಕೆ ಮೇಲಿನ ಐದು ಉಪಶೀರ್ಷಿಕೆಗಳ ಚಿಂತನೆ ಮುಖ್ಯ ನಿದರ್ಶನ.

"ಕನ್ನಡನಾಡಿನ ರಾಜಧಾನಿಯಲ್ಲಿ ಕನ್ನಡವೆ ಸಾರ್ವಭೌಮ ಭಾಷೆಯಾಗಬೇಕು"– ಎಂಬ ಕುವೆಂಪು ಅವರ ನಿಲುವಿನಲ್ಲೂ ಭಾಷಿಕ ಪ್ರಜಾಪ್ರಭುತ್ವ ತತ್ವವಿದೆ. ಕನ್ನಡನಾಡಿನಲ್ಲಿ ಕನ್ನಡಭಾಷೆಯ ಪ್ರತಿಷ್ಠಾಪನೆಯೇ ಮೊದಲು ಎಂಬ ಸಹಜ ವಿವೇಕವನ್ನು ಹೊಂದಿರುವ ಕುವೆಂಪು ಇದನ್ನು ಸಮರ್ಥಿಸಲು ರಷ್ಯಾದೇಶದ ಲಿಪಿರಹಿತ ಭಾಷೆ 'ಉಜ್‌ಬೆಕ್' ಪ್ರತಿಷ್ಠಾಪನೆಯ ಉದಾಹರಣೆ ನೀಡಿದ್ದಾರೆ:

.........."ಈಗ ರಷ್ಯಾದಲ್ಲಿ ನೂರಾರು ಭಾಷೆಗಳಿವೆ. ಉಜ್‌ಬೆಕ್ ಸಂಸ್ಥಾನದಲ್ಲಿ

ಆಡುವ ಭಾಷೆ ಹೊರತು ಲಿಪಿ ಕೂಡ ಇರಲಿಲ್ಲ. ಅಂತಹ ಕಾಡುಜನರಿದ್ದ ದೇಶವದು. ಈಗ ಅದರ ಭಾಷೆಬೆಳೆದು ಒಂದು ವಿಶ್ವವಿದ್ಯಾನಿಲಯವು ನಿರ್ಮಿತವಾಗಿ ಲಕ್ಷಾಂತರ ಗ್ರಂಥಗಳು ಸೃಷ್ಟಿಯಾಗಿ ಸಂಶೋಧನೆಯ ಕಾರ್ಯವೂ ನಡೆಯುತ್ತಿದೆ. ಇದನ್ನು ನೋಡಿದಾಗ ಆಶ್ಚರ್ಯವೂ ಆನಂದವೂ ಆಗುತ್ತದೆ. ಎಲ್ಲೋ ಒಂದು ಮೂಲೆಯ ದೇಶ ಇಂತಹ ಅದ್ಭುತರೀತಿಯಲ್ಲಿ ಮುಂದುವರಿದಿರುವಾಗ, ಆ ದೇಶ ವೈಜ್ಞಾನಿಕ ಜ್ಞಾನವನ್ನು ಹೇಗೆ ಪಡೆಯುತ್ತಿದೆ, ಇಂಗ್ಲಿಷನ್ನು ಎಷ್ಟರಮಟ್ಟಿಗೆ ಬಳಸುತ್ತಿದೆ–ಎಂಬುದನ್ನು ತಿಳಿಯಬೇಕು. ನಾವು ರಾಗರಸರಂಜಿತರಾಗುವುದು ಬೇಡ. ವೈಜ್ಞಾನಿಕವಾಗಿ ವಿವೇಚನೆಯಿಂದ ವಿಚಾರಮಾಡೋಣ. ಚೀಣಾ ಮೊದಲಾದ ದೇಶಗಳಲ್ಲಿ ಇಂಗ್ಲಿಷಿನ ಸ್ಥಾನಮಾನವೇನೆಂಬುದನ್ನು ಅರಿತುಕೊಳ್ಳೋಣ. ಈ ವಿಶಾಲವಾದ ದೃಷ್ಟಿಯಿಂದಲೂ ವಿಚಾರದಿಂದಲೂ ವಿವೇಕಿಗಳಾಗಿ ಇನ್ನುಮುಂದೆ ನಮ್ಮ ಮಕ್ಕಳ ತಲೆಯ ಮೇಲೆ ಇಂಗ್ಲಿಷ್ ಚಪ್ಪಡಿಯ ಭಾರವನ್ನು ಹೊರಿಸಿ, ಅವರನ್ನು ಕುಂಠಿತರನ್ನಾಗಿ ಮಾಡುವ ಅನುಚಿತ ಕಾರ್ಯವನ್ನು ನಿಲ್ಲಿಸಬೇಕು"........

ಕನ್ನಡ ಭಾಷಾಭಿವೃದ್ಧಿ ಕಾರ್ಯದಲ್ಲಿ ನಿರತರಾದವರು ವಿವಿಧ ಜ್ಞಾನಶಿಸ್ತುಗಳಲ್ಲಿ, ಆಡಳಿತ, ನ್ಯಾಯಾಂಗ, ಮ್ಯಾನೇಜ್‌ಮೆಂಟ್ ಕೋರ್ಸುಗಳಲ್ಲಿ ಬಳಸಬೇಕಾದ ಪರಿಭಾಷಾಸಾಮಗ್ರಿಯನ್ನು ಹೇಗೆ ರೂಪಿಸಿಕೊಳ್ಳಬೇಕೆಂಬುದನ್ನು ಕುವೆಂಪು ಸೂಕ್ತವಾಗಿ ನಿರೂಪಿಸಿದ್ದಾರೆ:

೧) ............ "ಆಂಡಯ್ಯ 'ಕಬ್ಬಿಗರ ಕಾವ' ಬರೆದ ಹಾಗೆ ಎಲ್ಲವನ್ನೂ ಕನ್ನಡದಲ್ಲಿ ಬರೆಯುತ್ತೇವೆ, ಎಲ್ಲವನ್ನೂ ಕನ್ನಡದಲ್ಲಿ ಮಾಡುತ್ತೇವೆ ಎಂಬ ಛಲವಲ್ಲ... ಬೇರೆ ಮಾತನ್ನು ಉಪಯೋಗಿಸಲು ಸಾಧ್ಯವಿಲ್ಲದೆ ಇದ್ದರೆ ಆ ಶಬ್ದಗಳನ್ನು ಹಾಗೆಯೇ ಬಳಸಿ, ಹೇಗೆ ಸೂರ್ಯ, ಚಂದ್ರ ಅನ್ನೋಪದಗಳು ಕನ್ನಡ ಆಗಿಬಿಟ್ಟಿವೆಯೋ ಹಾಗೆ ಸ್ವಿಚ್ಚು,ಬಲ್ಬು, ಬೋರ್ಡು ಇವೆಲ್ಲ ಕನ್ನಡ ಪದಗಳೆ! ಅವನ್ನು ಯಾರೂ ಇಂಗ್ಲಿಷ್ ಅನ್ನುವುದಿಲ್ಲ. ಆದಷ್ಟುಮಟ್ಟಿಗೂ ಅಂತರರಾಷ್ಟ್ರೀಯ ಪರಿಭಾಷೆಯನ್ನೂ, ಸಂಕೇತಗಳನ್ನೂ ಪ್ಲಸ್–ಮೈನಸ್–ಸ್ಕ್ವೇರ್ ರೂಟ್ ಇವನ್ನೆಲ್ಲಾ ಹಾಗೆ ಹಾಗೆ ಉಪಯೋಗಿಸುವುದರಿಂದ ಏನೂ ತೊಂದರೆಯಿಲ್ಲ"..........

೨) ........... "ಕರ್ನಾಟಕ ವಿಶ್ವವಿದ್ಯಾಲಯದವರು 'ಪ್ರಾಣವಾಯು' ಅನ್ನುವುದು ಮೈಸೂರು ವಿಶ್ವವಿದ್ಯಾಲಯದವರು 'ಆಮ್ಲಜನಕ' ಅನ್ನುವುದು ಇದು ಆಗಬಾರದು. ಆಕ್ಸಿಜನ್, ಹೈಡ್ರೋಜನ್, ಕ್ಲೋರಿನ್ ಇಂಥ ಮಾತುಗಳನ್ನು ಹಾಗೆ ಹಾಗೆ ಉಪಯೋಗಿಸಿದರೆ ವಾಸಿ. ಅದು ಅಂತರರಾಷ್ಟ್ರೀಯವಾಯಿತು, ಅಖಿಲ ಭಾರತೀಯವಾಯಿತು... ನಮಗೂ ರಗಳೆ ತಪ್ಪಿತು. ಇನ್ನು ಸಂಕೇತಗಳು ಸಿಂಬಲ್ಸ್, ಎ.ಬಿ.ಸಿ. ಅಥವಾ ಪ್ಲಸ್, ಮೈನಸ್ ಇತ್ಯಾದಿ".... ಇವೆಲ್ಲ ಹಾಗೆ ಹಾಗೆ ಇರಬೇಕು.

ಪರಿಭಾಷಾ ಸಾಮಗ್ರಿಯ ವಿಷಯದಲ್ಲಿ ಕನ್ನಡದಲ್ಲಿ ಇಂದು ಹಿಂಬಾಗಿಲ ಮೂಲಕ ಬರುವ ಹಿಂದಿ ಶಬ್ದಗಳು (=ಆಯುಕ್ತರು, ಆರಕ್ಷಕ ಇತ್ಯಾದಿ) ಮತ್ತು

ಪಂಡಿತಭಾಷಾ ವಿಜ್ಞಾನದಲ್ಲಿ ಜನವಿದೂರ ಅಚ್ಚಕನ್ನಡ ಶಬ್ದಗಳು (=ಕೇಳ್ವಿ, ಅರಿಮೆ, ಉಲಿ ಇತ್ಯಾದಿ) ಬಳಕೆಯಲ್ಲಿವೆ. ನಾವೀಗ ಇವೆರಡು ಮಾದರಿಗಳನ್ನು ಕೈಬಿಟ್ಟು ಕುವೆಂಪು ಹೇಳಿದಂತೆ 'ಜನಭಾಷಾ ವಿಜ್ಞಾನ'ವನ್ನು ಕನ್ನಡಭಾಷಾಭಿವೃದ್ಧಿಯಲ್ಲಿ ಅಳವಡಿಸಿಕೊಳ್ಳಬೇಕು. ಈ ದಿಸೆಯಲ್ಲಿ ಕುವೆಂಪು ವಿರಚಿತ 'ಕನ್ನಡಭಾಷಾ ಸಂವಿಧಾನ'ವೆಂಬ ಈ ಗ್ರಂಥ ನವನವೀನ ಕನ್ನಡಿಯೂ ಕೈದೀವಿಗೆಯೂ ಆಗಲೆಂದು ಸಹೃದಯತೆಯಿಂದ ಹಾರೈಸುತ್ತೇನೆ.

ಈ ಗ್ರಂಥದ ಸಂಪಾದನಾ ಕಾರ್ಯಕ್ಕಾಗಿ 'ರಾಷ್ಟ್ರಕವಿ ಕುವೆಂಪು ಪ್ರತಿಷ್ಠಾನ (ರಿ) ಕುಪ್ಪಳಿ–ಇವರು ಪ್ರಕಟಿಸಿರುವ 'ಕುವೆಂಪು ಸಮಗ್ರ ಸಾಹಿತ್ಯಮಾಲೆ'ಯ ಸಮಗ್ರಕಾವ್ಯ ಮತ್ತು ಸಮಗ್ರ ಗದ್ಯ ಸಂಪುಟಗಳನ್ನು ಆಧರಿಸಿದ್ದೇನೆ. ಕನ್ನಡ ಭಾಷಾಸಂಸ್ಕೃತಿಯ ನವನಿರ್ಮಾಣದ ಈ ಸದುದ್ದೇಶವನ್ನು ಕುವೆಂಪು ಅಭಿಮಾನಿಗಳಾದ ಎಲ್ಲ ಸಹೃದಯರು ಅರ್ಥ ಮಾಡಿಕೊಳ್ಳುತ್ತಾರೆಂದು ನಂಬಿದ್ದೇನೆ.

ನನಗೆ ಈ ಗ್ರಂಥದ ಸಂಪಾದನಾಕಾರ್ಯವನ್ನು ವಹಿಸಿದ ಪ್ರಧಾನಸಂಪಾದಕರೂ ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರೂ ಆಗಿರುವ ನನ್ನ ಸಹಪಾಠಿ, ಗೆಳೆಯ ಡಾ. ಎಲ್. ಹನುಮಂತಯ್ಯ ಅವರಿಗೆ ನನ್ನ ಹೃತ್ಪೂರ್ವಕ ನಮನಗಳು.

**– ವಿ. ಚಂದ್ರಶೇಖರ ನಂಗಲಿ**

ದೂ: 98861 52726

೧೬, ಶ್ರೀಗೌರಿ, ೪ನೇ ಕ್ರಾಸ್
ಕನಕನಗರ, ಹೊಸಕೋಟೆ
ಬೆಂಗಳೂರು ಗ್ರಾಮಾಂತರ ಜಿಲ್ಲೆ – ೫೬೨ ೧೧೪

# ಅರ್ಪಣೆ

**ಕನ್ನಡ ಭಾಷಾ ಸರಸ್ವತಿಯ ರಚಿಸಿದೊಂದು**
**ನಿತ್ಯಸಚಿವ ಮಂಡಲಕ್ಕೆ**

# ಒಳಗೇನಿದೆ?


| | |
|---|---|
| ೧. ಭಾರತ ಜನನಿಗೆ | ೨೫ |
| ೨. ಜಯ ಹೇ ಕರ್ಣಾಟಕ ಮಾತೆ! | ೨೬ |
| ೩. ಸಂಸ್ಕೃತ ಮಾತೆ | ೨೮ |
| ೪. ಸಾಯುತಿದೆ ನಿಮ್ಮ ನುಡಿ, ಓ ಕನ್ನಡದ ಕಂದರಿರ! | ೩೦ |
| ೫. ಮೆಟ್ಟುವ ನೆಲ ಕರ್ನಾಟಕ | ೩೨ |
| ೬. ಕನ್ನಡಮ್ಮನ ಹರಕೆ | ೩೩ |
| ೭. ಅಳುಕದೀ ಕನ್ನಡಂ! | ೩೫ |
| ೮. ಅಖಂಡ ಕರ್ಣಾಟಕ | ೩೬ |
| ೯. ಕರ್ಣಾಟಕ ಮಂತ್ರದೀಕ್ಷೆ | ೩೯ |
| ೧೦. ಕಂದ ಕನ್ನಡನಿವನು ಕೈ ಬಿಡದಿರಮ್ಮಾ | ೪೧ |
| ೧೧. ಕರ್ಣಾಟಕ ರಾಜ್ಯೋದಯ ಶ್ರೀಗೀತೆ | ೪೨ |
| ೧೨. ಏಕೈಕ ಕರ್ನಾಟಕ | ೪೪ |
| ೧೩. ಕನ್ನಡ ಡಿಂಡಿಮ | ೪೫ |
| ೧೪. ಸಾಕು ಈ ಬಲಾತ್ಕಾರ | ೪೬ |
| ೧೫. ಬಲಾತ್ಕಾರದ ಭಾಷಾತ್ರಿಶೂಲ! | ೪೮ |
| ೧೬. ಓ ನನ್ನ ಕನ್ನಡವೆ! | ೪೯ |
| ೧೭. ಕನ್ನಡ | ೫೦ |
| ೧೮. ದೇಶ ದೇವಿಯ ಪೂಜೆಗೆ ಬನ್ನಿ | ೫೧ |
| ೧೯. ಕನ್ನಡ ಡಿಂಡಿಮ – ಮುನ್ನುಡಿ | ೫೭ |
| ೨೦. ನನ್ನದು ಈ ಕನ್ನಡ ನಾಡು | ೬೫ |
| ೨೧. 'ಪ್ರಸಾರಾಂಗ' ಹೊತ್ತಿಗೆಯ ಪೀಠಿಕೆ | ೬೭ |

ಎ) ಪ್ರಸಾರಾಂಗ ಎಂದರೇನು?
ಬಿ) ವಿದ್ಯಾಭ್ಯಾಸ: ಅಂದು, ಇಂದು
ಸಿ) ಕನ್ನಡ ಮಾಧ್ಯಮ
ಡಿ) ಪ್ರಕಟಣೆಗಳು
ಇ) ಪ್ರಸಾರಾಂಗದ ಮುನ್ನಡೆ

೨೨. ಸಂಸ್ಕೃತಿ ಕರ್ಣಾಟಕ ೮೮
೨೩. ನಮಗೆ ಬೇಕಾಗಿರುವ ಇಂಗ್ಲಿಷ್ ೧೨೨
೨೪. ಭಾರತದಲ್ಲಿ ಇಂಗ್ಲಿಷಿನ ಸ್ಥಾನ ೧೨೯
೨೫. ವಿಶ್ವವಿದ್ಯಾ ಮತ್ತು ಪ್ರಸಾರಾಂಗ ೧೪೩
೨೬. ಕನ್ನಡಕ್ಕಾಗಿ ಕೈಯೆತ್ತು ೧೫೧
೨೭. ಬಲಾತ್ಕಾರದ ಇಂಗ್ಲಿಷ್: ಪ್ರಚ್ಛನ್ನ ಭ್ರಷ್ಟಾಚಾರ ೧೫೨
೨೮. ಪ್ರಾದೇಶಿಕ ವೈಶಿಷ್ಟ್ಯದ ರಕ್ಷಣೆ ೧೬೧
೨೯. ಬಹುಜಿಹ್ವಾ ಭಾರತಿಗೆ ಐಕ್ಯತೆಯ ಆರತಿ ೧೭೧
೩೦. ಕನ್ನಡನಾಡಿನ ರಾಜಧಾನಿಯಲ್ಲಿ ಕನ್ನಡವೆ ಸಾರ್ವಭೌಮ ಭಾಷೆ ೧೮೧
೩೧. ಕದನಕ್ಕೆ ಸಜ್ಜು ೧೮೫
೩೨. ಕರ್ನಾಟಕ: ಇಟ್ಟ ಹೆಸರು ಕೊಟ್ಟ ಮಂತ್ರ ೧೯೬
೩೩. ಬಹುಭಾಷೆಗಳಲ್ಲಿ ದ್ವಿಭಾಷೆ ೨೦೭
೩೪. ಕನ್ನಡವೆ ಶಿಕ್ಷಣ ಮಾಧ್ಯಮವಾಗಬೇಕು ೨೧೦
೩೫. ನಮ್ಮ ಮುನ್ನಡೆಯ ಮಂತ್ರ ೨೧೬
೩೬. ಭಾಷಾ ಸಮಸ್ಯೆ ೨೨೨
೩೭. ಕನ್ನಡಮಾಧ್ಯಮ ಪ್ರಸಾರ ೨೨೭
೩೮. ಭಾಷಾ ವೈವಿಧ್ಯ ಲೋಕೈಕ್ಯಕ್ಕೆ ಅಡಚಣೆಯಲ್ಲ ೨೩೮
೩೯. ಭರತಖಂಡದ ಐಕ್ಯತೆ ನಮ್ಮೆಲ್ಲರ ಉಸಿರಾಗಬೇಕು ೨೪೧
೪೦. ಕರ್ಣಾಟಕದ ಕಲ್ಯಾಣ ೨೪೫
೪೧. ಕನ್ನಡ ಚಳುವಳಿಗಳು ಜೀವಂತವಾಗಿರಲಿ ೨೫೦

# ಭಾರತ ಜನನಿಗೆ

ಭಾರತಾಂಬೆಯೆ, ಜನಿಸಿ ನಿನ್ನೊಳು ಧನ್ಯನಾದೆನು, ದೇವಿಯೇ.
ನಿನ್ನ ಪ್ರೇಮದಿ ಬೆಳೆದು ಜೀವವು ಮಾನ್ಯವಾದುದು, ತಾಯಿಯೆ.

ರಾಣಿಯಂದದಿ ಮೆರೆಯೆ ಸಿರಿತನವಿಹುದೊ ಏನೋ ಅರಿಯೆನು;
ಕಾಮಧೇನುವಿನಂತೆ ಬಯಸಿದ ಫಲವ ಕೊಡುವೆಯೊ ಅರಿಯೆನು;
ಎನ್ನ ಅಂಗಗಳೆಲ್ಲವು ನಿನ್ನ ಸೊಂಪನು ಬಲ್ಲವು;
ನಿನ್ನ ಸಂಗವೆ ಪರಮಮಂಗಳವೆಂಬುದಿನಿತನು ಮರೆಯೆನು!

ಕುಂದುಕೊರತೆಗಳಿಹವು ನಿನ್ನೊಳು ಎಂಬುವಳಲನು ಬಲ್ಲೆನು,
ಹಿಂದಕುಳಿದವಳೆಂಬ ನಿಂದೆಯ ಸಹಿಸಿ ನೊಂದಿಹೆ ಬಲ್ಲೆನು;
ಆದರೊಲಿಯೆನು ಅನ್ಯರ, ಚಿನ್ನವೊಲಿದಿಹ ಧನ್ಯರ;
ಕುಂದುಕೊರತೆಗಳಿರಲಿ, ಮಹಿಮಳು ನೀನೆ, ಅನ್ಯರನೊಲ್ಲೆನು.

ನಿನ್ನ ಕಂಗಳ ಪುಣ್ಯಕಾಂತಿಯೊಳೆನ್ನ ಕಂಗಳ ತೆರೆದೆನು;
ನಿನ್ನ ಅಂಕದ ಮಂಗಳಾಂಗಣದಲ್ಲಿ ನಲಿಯುತ ಮೆರೆದೆನು;
ನಿನ್ನ ಮೈಮೆಯ ಬರೆವೆನು; ನಿನ್ನ ಹೆಸರನೆ ಕರೆವೆನು;
ನಿನ್ನ ಸೇವೆಯೊಳಳಿವ ಭಾಗ್ಯಕೆ ಸಕಲ ಭಾಗ್ಯವ ತೊರೆವೆನು!
೨೮-೪-೧೯೨೭

# ಜಯ ಹೇ ಕರ್ಣಾಟಕ ಮಾತೆ!

ಜಯ್ ಭಾರತ ಜನನಿಯ ತನುಜಾತೆ,
  ಜಯ ಹೇ ಕರ್ಣಾಟಕ ಮಾತೆ!
ಜಯ್ ಸುಂದರ ನದಿವನಗಳ ನಾಡೆ,
  ಜಯ ಹೇ ರಸಋಷಿಗಳ ಬೀಡೆ!
ಭೂದೇವಿಯ ಮಕುಟದ ನವಮಣಿಯೆ,
ಗಂಧದ ಚಂದದ ಹೊನ್ನಿನ ಗಣಿಯೆ;
ರಾಘವ ಮಧುಸೂದನರವತರಿಸಿದ
  ಭಾರತ ಜನನಿಯ ತನುಜಾತೆ,
  ಜಯ ಹೇ ಕರ್ಣಾಟಕ ಮಾತೆ!

ಜನನಿಯ ಜೋಗುಳ ವೇದದ ಘೋಷ,
ಜನನಿಗೆ ಜೀವವು ನಿನ್ನಾವೇಶ.
  ಹಸುರಿನ ಗಿರಿಗಳ ಸಾಲೆ
  ನಿನ್ನಯ ಕೊರಳಿನ ಮಾಲೆ.
ಕಪಿಲ ಪತಂಜಲ ಗೌತಮ ಜಿನನುತ
  ಭಾರತ ಜನನಿಯ ತನುಜಾತೆ,
  ಜಯ ಹೇ ಕರ್ಣಾಟಕ ಮಾತೆ!

ಶಂಕರ ರಾಮಾನುಜ ವಿದ್ಯಾರಣ್ಯ
ಬಸವೇಶ್ವರರಿಹ ದಿವ್ಯಾರಣ್ಯ.
  ರನ್ನ ಷಡಕ್ಷರಿ ಪೊನ್ನ
  ಪಂಪ ಲಕುಮಿಪತಿ ಜನ್ನ
ಕಬ್ಬಿಗರುದಿಸಿದ ಮಂಗಳಧಾಮ,
ಕವಿ ಕೋಗಿಲೆಗಳ ಪುಣ್ಯಾರಾಮ!
ನಾನಕ ರಾಮಾನಂದ ಕಬೀರರ
  ಭಾರತ ಜನನಿಯ ತನುಜಾತೆ,
  ಜಯ ಹೇ ಕರ್ಣಾಟಕ ಮಾತೆ!
ತೈಲಪ ಹೊಯ್ಸಳರಾಳಿದ ನಾಡೆ,
ಡಂಕಣ ಜಕಣರ ನಚ್ಚಿನ ಬೀಡೆ;
  ಕೃಷ್ಣ ಶರಾವತಿ ತುಂಗಾ

ಕಾವೇರಿಯ ವರ ರಂಗ.
ಚೈತನ್ಯ ಪರಮಹಂಸ ವಿವೇಕರ
  ಭಾರತ ಜನನಿಯ ತನುಜಾತೆ,
  ಜಯ ಹೇ ಕರ್ಣಾಟಕ ಮಾತೆ!

ಸರ್ವ ಜನಾಂಗದ ಶಾಂತಿಯ ತೋಟ,
ರಸಿಕರ ಕಂಗಳ ಸೆಳೆಯುವ ನೋಟ.
  ಹಿಂದೂ ಕ್ರೈಸ್ತ ಮುಸಲ್ಮಾನ
  ಪಾರಸಿಕ ಜೈನರುದ್ಯಾನ.
ಜನಕನ ಹೋಲುವ ದೊರೆಗಳ ಧಾಮ,
  ಗಾಯಕ ವೈಣಿಕರಾರಾಮ!
ಕನ್ನಡ ನುಡಿ ಕುಣಿದಾಡುವ ಗೇಹ!
ಕನ್ನಡ ತಾಯಿಯ ಮಕ್ಕಳ ದೇಹ!
ಜಯ್ ಭಾರತ ಜನನಿಯ ತನುಜಾತೆ,
  ಜಯ ಹೇ ಕರ್ಣಾಟಕ ಮಾತೆ!
ಜಯ್ ಸುಂದರ ನದಿವನಗಳ ನಾಡೆ,
  ಜಯ ಹೇ ರಸಋಷಿಗಳ ಬೀಡೆ!

೭-೧೨-೧೯೨೮

# ಸಂಸ್ಕೃತ ಮಾತೆ

ಪೃಥಿವಿಯಾ ಪ್ರಥಮ ಪ್ರಭಾತದಲಿ, ಇತಿಹಾಸ
ದೃಷ್ಟಿಗಸ್ಪಷ್ಟ ಅಜ್ಞಾತ ಪ್ರಾಚೀನದಲಿ,
ಚಿರಧವಲ ಹಿಮಶೈಲ ಪೃಥುಲೋರು ಪ್ರೇಂಖದಲಿ
ನವಜಾತ ಶಿಶುವಾಗಿ ನಲಿದ ಮಂಗಳಮಯೀ
ಆರ್ಯಮಾತೆಯ ಮೊದಲ ತೊದಲ ನಾಗರಿಕತೆಯ
ಸಾಮಗಾನದ ವಾಣಿಯಿಂದೆ ಮೂಡಿದ ಮೂರ್ತಿ
ನೀನೆಲೌ ಸಂಸ್ಕೃತದ ವಾಗ್ದೇವಿ! ಮಾನವನು
ವನ ಭವನದಲಿ ಮೊದಲು ಬಾನೆಡೆಗೆ ಮೊಗವೆತ್ತಿ
ಕೈಮುಗಿದು ದೇವನಾಶೀರ್ವಾದವನೆ ಬಯಸಿ
ವೇದದಲಿ ಪ್ರಾರ್ಥಿಸಿದ ದನಿ ನಿನ್ನದೆಲೆ ತಾಯೆ!
ಉಪನಿಷತ್ತಿನಲಿ ಋಷಿಗಳು ನಿನ್ನನಾಶ್ರಯಿಸಿ
ತಮ್ಮ ಮಹದಾಲೋಚನಾ ಮಂಜರಿಯ ನೆಯ್ದು
ಏಕಮೇವಾದ್ವಿತೀಯಂ ಬ್ರಹ್ಮವನು ಸಾರಿ,
'ತತ್ತ್ವಮಸಿ,' 'ಬ್ರಹ್ಮಾಸ್ಮಿ,' 'ಸೋಹಮೆ'ಂಬುವ ಮಂತ್ರ
ತೂರ್ಯದಲಿ ಶಿಶುನರಗೆ ಅಭಯಮತವನು ಹೇಳಿ
ಜ್ಯೋತಿದರ್ಶನವಿತ್ತರಲ್ತೆ, ಹೇ ಗಾಯತ್ರಿ!
ಮೈತ್ರೇಯಿ ಯಾಜ್ಞವಲ್ಕ್ಯಾದಿಗಳು ತವಸ್ತನ್ಯ
ಪೀಯೂಷ ಪಾನದಿಂ ಮೃತ್ಯುವನೆ ಉತ್ತರಿಸಿ
ಅಮೃತರಾಗಿಹರಲ್ತೆ? ವ್ಯಾಸ ವಾಲ್ಮೀಕಿಗಳು
ಮೃದು ಮಧುರ ಧೀರ ಗಂಭೀರ ತವ ವಾಣಿಯಿಂ
ಕಾವ್ಯಕಾಹಿನಿಯ ರಸವಾಹಿನಿಯ ಸ್ರೋತದಲಿ
ಜನಗಣದ ಹೃದಯ ದುಃಖದ ತಾಪ ಪಾಪಗಳ
ತವಿಸುತಾನಂದವರ್ಷವ ಕರೆದು ಲೋಕದಲಿ
ಸ್ವರ್ಣಸ್ವಪ್ನದ ನಂದನೋದ್ಯಾನವನು ಸೃಜಿಸಿ
ಕವಿಕುಲ ಶಿರೋಮಣಿಗಳಾಗಿ ರಂಜಿಪರಲ್ತೆ?
ಕಾಳಿದಾಸಾದಿಗಳು, ಭಾಸ ಭವಭೂತಿಗಳು,
ಜ್ಞಾನಿ, ವೈಯಾಕರಣ, ರಸಋಷಿ, ವಿಭೂತಿಗಳು

---

ಪೃಥುಲೋರು ಪ್ರೇಂಖದಲಿ = ಸುವಿಶಾಲವಾದ ತೊಡೆಗಳುಯ್ಯಾಲೆಯಲ್ಲಿ

ನಿನ್ನ ನಿರ್ಜರ ನಿರ್ಝರಿಣಿಯಲ್ಲಿ ಕ್ರೀಡಿಸುವ
ಕವಿ ಶಿಶುಗಳಾಗಿಹರು!
ಆರ್ಯರಾಗಿಹ ನಾವು
ನಿನ್ನ ಮೊಲೆವಾಲ ಸವಿಯಿಲ್ಲದೆಯೆ ಬದುಕುವೆವೆ?
ನೀನಿಲ್ಲದೆಲ್ಲಿಯದು ಭರತಖಂಡದ ಬದುಕು,
ಸಂಪತ್ತು, ಸಂಸ್ಕೃತಿ? ನಮ್ಮ ಜೀವನ ಗಂಗೆ
ನಿನ್ನೆದೆಯ ಅಕ್ಷಯ ಹಿಮಾಲಯವು ಸರ್ವದಾ
ದಾನಮಾಡುವ ಪುಣ್ಯಜಲ ತೀರ್ಥದಿಂದಲ್ತೆ
ಬತ್ತದೆಯೆ ತುಂಬಿ ನೂತನವಾಗಿ ಚಿರವಾಗಿ
ಹರಿಯುತಿದೆ?
ಹೇ ದಿವ್ಯ ಸಂಸ್ಕೃತ ಹಿಮಾಚಲವೆ,
ಗಗನಚುಂಬಿತವಾಗಿ ಬೆಳೆದು ನೀ ನಿಂತಿರುವೆ;
ಸ್ಥಿರತೆಯದು ಸಾವಲ್ಲ, ಜೀವಿತ ಚರಮ ಲಕ್ಷ್ಯ!
ಬೆಳೆಯುತಿಹ ನಿನ್ನೀ ಹಸುಳೆಗಳಿಗೆ ತಾವ ಕೊಡು;
ಹರಕೆಗೈ; ಸ್ತನ್ಯಪಾನವ ನೀಡು, ಹೇ ಜನನಿ!
ಹಸಿದ ಹಸುಳೆಯ ಕೈಯ ಅಶನವನು ಕಸಿಯುವುದು
ಹಿರಿಯ ಸಂಸ್ಕೃತಿ ಪಡೆದ ಸಂಸ್ಕೃತ ಮಹೀಯಸಿಗೆ
ಗೌರವದ ಕುರುಹಲ್ಲ! ತಾಯಿ ಮಗುವಿಗೆ ಕರುಬಿ
ವೈಯಾರಿಯಾಗುವುದು, ಅಯ್ಯೊ, ಲಕ್ಷಣವಲ್ಲ!
ಮಗು ಬೆಳೆಯಲೆಳಸುವುದು ಜನನಿಯ ಮರಣಕಲ್ಲ;
ಜನನಿಗದು ಅಭಿಮಾನ, ತೇಜಸ್ಸು, ಶ್ರೇಯಸ್ಸು!
ಸಂಪ್ರದಾಯದ ಆರ್ಯೆ, ನಿನಗೇಕೆ ತರಳೆಯರ
ಈ ನವ ನವೀನ ಪರಸಂಸ್ಕೃತಿಯ ಅನುಕರಣ
ಲೋಲುಪತೆ? ಅದು ನಮಗಿರಲಿ ಬಿಡು, ಜಗದ್ವಂದ್ಯೆ!

# ಸಾಯುತಿದೆ ನಿಮ್ಮ ನುಡಿ, ಓ ಕನ್ನಡದ ಕಂದರಿರ!

ಸಾಯುತಿದೆ ನಿಮ್ಮನುಡಿ, ಓ ಕನ್ನಡದ ಕಂದರಿರ,
  ಹೊರನುಡಿಯ ಹೊರೆಯಿಂದ ಕುಸಿದು ಕುಗ್ಗಿ!
ರಾಜನುಡಿಯೆಂದೊಂದು, ರಾಷ್ಟ್ರನುಡಿಯೆಂದೊಂದು,
  ದೇವನುಡಿಯೆಂದೊಂದು ಹತ್ತಿ ಜಗ್ಗಿ
ನಿರಿನಿಟಿಲು ನಿಟಿಲೆಂದು ಮುದಿಮೂಳೆ ಮುರಿಯುತಿದೆ,
  ಕನ್ನಡಮ್ಮನ ಬೆನ್ನು ಬಳುಕಿ ಬಗ್ಗಿ!
ಕೂಗಿಕೊಳ್ಳಲು ಕೂಡ ಬಲವಿಲ್ಲ;ಮಕ್ಕಳೇ
  ಬಾಯ್ಮುಚ್ಚಿ ಹಿಡಿದಿಹರು ಕೆಲರು ನುಗ್ಗಿ!

ಮೊಲೆವಾಲಿನೊಡಗೂಡಿ ಬಂದ ನುಡಿ ತಾಯಿನುಡಿ;
  ಕೊಲೆಗೈದರಮ್ಮನನೆ ಕೊಲಿಸಿದಂತೆ!
ತಾಯ್ ಮುತ್ತು ಕೊಡುವಂದು ನಿಮ್ಮ ಕೆನ್ನೆಯ ಮೇಲೆ
  ಮೆರೆಯಿತದು ಪೋಣಿಸಿದ ಮುತ್ತಿನಂತೆ:
ನಿಮ್ಮ ನಲ್ಲೆಯರೊಡನೆ ನಲ್ನುಡಿಯ ನುಡಿವಂದು
  ಕನ್ನಡವೆ ಕಲಿಸುವುದು ತುಟಿಗೆ ಬಂದು:
ನಡುವಂದು ನಿಮ್ಮ ಮುದ್ದಿನ ಹಸುಳೆಗಳನೆತ್ತಿ
  ಕನ್ನಡವೆ ನಿಮಗೀವುದೊಲವ ತಂದು.

ಇರುವಲ್ಪ ಶಕ್ತಿಯನು ಇರುವಲ್ಪ ದ್ರವ್ಯವನು
  ಪರಭಾಷೆ ಮೋಹಕ್ಕೆ ಚೆಲ್ಲಬೇಡಿ;
ಹೂಮಾಲೆ ಸೂಡುವೆವು ಕೊರಳಿಂಗೆ ಎಂದೆನುತೆ
  ನೇಣುರುಳನೆಳೆದಯ್ಯೊ ಕೊಲ್ಲಬೇಡಿ.
ಪರಕೀಯರೆಲ್ಲರಾಶೀರ್ವಾದ ಕರವೆತ್ತಿ
  ಹರಸುತ್ತ ಬರುವರೈ ಮೊದಲು ಮೊದಲು;
ಕಡೆಗದುವೆ ಕುತ್ತಿಗೆಗೆ ಕರವಾಳವಾಗುವುದು;
ನಮ್ಮ ನಾಲಗೆ ನಮಗೆ ಕೀಳುತೊದಲು!

ನಿಮ್ಮ ನುಡಿ ನಿಮ್ಮ ಗಂಡಸುತನಕೆ ಹಿರಿಸಾಕ್ಷಿ;
  ಗೆಲವಿದ್ದರದಕೆ ನಿಮಗಿಹುದು ಶಕ್ತಿ.
ನುಡಿ ಮಡಿದರೆಲ್ಲರೂ ಮೂಕ ಜಂತುಗಳಂತೆ;
  ಬಾಲವಲ್ಲಾಡಿಪುದೆ ಪರಮ ಭಕ್ತಿ!
ಉತ್ತರದ ಕಾಶಿಯಲಿ ಕತ್ತೆ ಮಿಂದೈತರಲು
  ದಕ್ಷಿಣದ ದೇಶಕದು ಕುದುರೆಯಹುದೆ?
ತಾಯಿತ್ತ ಮೊಲೆಹಾಲೆ ನಿಮ್ಮ ಮೈಗಾಗದಿರೆ
  ಹೊತ್ತ ಹೊರೆ ಬಲಕಾರಿ ನೆತ್ತರಹುದೆ?

ಕಣ್ದೆರೆಯಿರೇಳಿ, ಓ ಕನ್ನಡದ ಮಕ್ಕಳಿರ,
  ಗರ್ಜಿಸುವುದನು ಕಲಿತು ಸಿಂಹವಾಗಿ!
ನಖದಂಷ್ಟ್ರ ಕೇಸರಂಗಳ ಬೆಳೆಸಿ ಹುರಿಗೊಂಡು
  ಶಿರವೆತ್ತಿ ನಿಂತು ಕುರಿತನವ ನೀಗಿ.

೩-೧೦-೧೯೩೫

# ಮೆಟ್ಟುವ ನೆಲ ಕರ್ನಾಟಕ

ಎಲ್ಲಾದರು ಇರು; ಎಂತಾದರು ಇರು;
ಎಂದೆಂದಿಗು ನೀ ಕನ್ನಡವಾಗಿರು.
ಕನ್ನಡ ಗೋವಿನ ಓ ಮುದ್ದಿನ ಕರು,
ಕನ್ನಡತನವೊಂದಿದ್ದರೆ ನೀನಮ್ಮಗೆ ಕಲ್ಪತರು!

ನೀ ಮೆಟ್ಟುವ ನೆಲ–ಅದೆ ಕರ್ನಾಟಕ;
ನೀನೇರುವ ಮಲೆ–ಸಹ್ಯಾದ್ರಿ.
ನೀ ಮುಟ್ಟುವ ಮರ–ಶ್ರೀಗಂಧದ ಮರ;
ನೀ ಕುಡಿಯುವ ನೀರ್–ಕಾವೇರಿ.

ಪಂಪನನೋದುವ ನಿನ್ನಾ ನಾಲಿಗೆ
ಕನ್ನಡವೇ ಸತ್ಯ.
ಕುಮಾರವ್ಯಾಸನನಾಲಿಪ ಕಿವಿಯದು
ಕನ್ನಡವೇ ನಿತ್ಯ.

ಹರಿಹರ ರಾಘವರಿಗೆ ಎರಗುವ ಮನ,
ಹಾಳಾಗಿಹ ಹಂಪೆಗೆ ಕೊರಗುವ ಮನ,
ಪೆಂಪಿನ ಬನವಾಸಿಗೆ ಕರಗುವ ಮನ;

ಬೆಳ್ಗೊಳ ಬೇಲೂರ್ಗಳ ನೆನೆಯುವ ಮನ,
ಜೋಗದ ಜಲಪಾತದಿ ಧುಮುಕುವ ಮನ,
ಮಲೆನಾಡಿಗೆ ಹೊಂಪುಳಿವೋಗುವ ಮನ;

ಕಾಜಾಣಕೆ ಗಿಳಿ ಕೋಗಿಲೆಯಿಂಪಿಗೆ,
ಮಲ್ಲಿಗೆ ಸಂಪಿಗೆ ಕೇದಗೆ ಸೊಂಪಿಗೆ,
ಮಾವಿನ ಹೊಂಗೆಯ ತಳಿರಿನ ತಂಪಿಗೆ
ರಸರೋಮಾಂಚನಗೊಳುವಾತನ ಮನ

ಎಲ್ಲಿದ್ದರೆ ಏನ್? ಎಂತಿದ್ದರೆ ಏನ್?
ಎಂದೆಂದಿಗು ತಾನ್–
ಕನ್ನಡವೇ ಸತ್ಯ!
ಕನ್ನಡವೇ ನಿತ್ಯ!
ಅನ್ಯವೆನಲದೆ ಮಿಥ್ಯಾ!

೧೭–೮–೧೯೪೧

# ಕನ್ನಡಮ್ಮನ ಹರಕೆ

ಕನ್ನಡಕೆ ಹೋರಾಡು
  ಕನ್ನಡದ ಕಂದಾ;
ಕನ್ನಡವ ಕಾಪಾಡು
  ನನ್ನ ಆನಂದಾ!
ಜೋಗುಳದ ಹರಕೆಯಿದು
  ಮರೆಯದಿರು, ಚಿನ್ನಾ;
ಮರೆತೆಯಾದರೆ ಅಯ್ಯೊ
  ಮರೆತಂತೆ ನನ್ನ!

ಮೊಲೆಯ ಹಾಲೆಂತಂತೆ
  ಸವಿಜೇನು ಬಾಯ್ಗೆ;
ತಾಯಿಯಪ್ಪುಗೆಯಂತೆ
  ಬಲುಸೊಗಸು ಮೆಯ್ಗೆ;
ಗುರುವಿನೊಳ್ನುಡಿಯಂತೆ
  ಶ್ರೇಯಸ್ಸು ಬಾಳ್ಗೆ;
ತಾಯ್ನುಡಿಗೆ ದುಡಿದು ಮಡಿ,
  ಇಹಪರಗಳೇಳ್ಗೆ!

ರನ್ನ ಪಂಪರ ನಚ್ಚು
  ಕನ್ನಡದ ಸೊಲ್ಲು;
ಬಸವದೇವನ ಮೆಚ್ಚು,
  ಹರಿಹರನ ಗೆಲ್ಲು;
ನಾರಣಪ್ಪನ ಕೆಚ್ಚು
  ಬತ್ತಳಿಕೆ ಬಿಲ್ಲು;
ಕನ್ನಡವ ಕೊಲುವ ಮುನ್
  ಓ ನನ್ನ ಕೊಲ್ಲು!

ನೆವವು ಏನಾದರೇನ್,
  ಹೊರನುಡಿಯು ಹೊರೆಯೈ;
ನಿನ್ನ ನಾಡೊಡೆಯ ನೀನ್;

ವೈರಿಯನು ತೊರೆಯೈ.
ಕನ್ನಡದ ನಾಡಿನಲಿ
ಕನ್ನಡವ ಮೆರೆಯೈ;
ತಾಯ್ಗಾಗಿ ಹೋರಾಡಿ
ತಾಯ್ನುಡಿಯ ಪೊರೆಯೈ!

ಕನ್ನಡಕೆ ಬಂದಿಳಿಕೆ
ಹಿಡಿಯುತಿಹುದಿಂದು;
ನೀ ನಿದ್ದೆ ಮಾಡಿದರೆ
ಹಾಕುವುದು ಕೊಂದು!
ಎದ್ದೇಳೊ, ಕಂದಯ್ಯ,
ಕತ್ತಿಯನು ಕೊಳ್ಳೊ!
ತಳಿರು ವೇಷದ ರೋಗ
ಬಂದಿಳಿಕೆ, ತಳ್ಳೊ!

ದಮ್ಮಯ್ಯ, ಕಂದಯ್ಯ,
ಬೇಡುವೆನು ನಿನ್ನ;
ಕನ್ನಡಮ್ಮನ ಹರಕೆ,
ಮರೆಯದಿರು, ಚಿನ್ನಾ!
ಮರೆತೆಯಾದರೆ ಅಯ್ಯೊ,
ಮರೆತಂತೆ ನನ್ನ;
ಹೋರಾಡು ಕನ್ನಡಕೆ
ಕಲಿಯಾಗಿ, ರನ್ನಾ!

೫–೭–೧೯೩೬

# ಅಳುಕದೀ ಕನ್ನಡಂ!

ಪಂಪರನ್ನರ್ ಕುಮಾರವ್ಯಾಸ ಲಕ್ಷ್ಮೀಶ
ಹರಿಹರಾದಿಗಳುಸಿರ್ ನಮ್ಮೊಳಿರ್ಪನ್ನೆಗಂ
ಅಳುಕದೀ ಕನ್ನಡಂ, ಅಳಿಯದೀ ಕನ್ನಡಂ,
ಉಳಿವುದೀ ಕನ್ನಡಂ! ಮೊನ್ನೆ ಕಣ್ ಬಿಟ್ಟುದೀ
ಪಸುಳೆ ವಿದ್ಯಾನಿಲಯವಾ ಮುತ್ತ ನುಡಿತಾಯ್ಗೆ
ಮೊಲೆವಾಲನಿತ್ತೊಲಿದು ಸಲಹಿದಪುದೆಂಬಾಸೆ
ನಗೆಗೀಡು, ನಾಣ್ಗೇಡು, ಬೆಳ್ತನಂ! ತಾಯಿಂದೆ
ಪಸುಳೆಬಾಳ್; ತಾಯೆರ್ದೆಯೆ ಸಿಸುಗೆ ಕೂಳ್! ಪೆತ್ತಳಂ
ಪಳಿದುಳಿವುದೇನರ್ಭಕಂ ಪೇಳ್? ಪ್ರಭೇದವೇನ್
ಗೊತ್ತೆ, ಪಸುಳೆಗೆ ಮತ್ತೆ ಪೇನ್ಗೆ? ನೆತ್ತರುಣೆ ಪೇನ್;
ಪಾಲುಣಲ್ ಪಸುಳೆ. ಕೊಂದು ಸಾವುದು ಕೊನೆಗೆ ತಾನ್
ಪೇನ್; ಬಳ್ದು ಬರ್ದುಕಿಪುದು ತನ್ನಬ್ಬೆಯಂ ಪಸುಳೆ!
ನೆತ್ತರುಣಿ ಪೇನಾಗದೆಯೆ ಪಸುಳೆ ತಾನಾಗಲೀ
ಕನ್ನಡಮ್ಮನ ಎರ್ದೆಯ ಅಮೃತ ಜೀವನವೀಂಟಿ,
ಮರಳಿ ಜೀವಾಮೃತವನೀವ ವಿದ್ಯಾಲಯಂ!

೨೩-೧೨-೧೯೪೨

# ಅಖಂಡ ಕರ್ಣಾಟಕ!

ಅಖಂಡ ಕರ್ಣಾಟಕ:
ಅಲ್ತೊ ನಮ್ಮ ಕೂಗಾಟದ ರಾಜಕೀಯ ನಾಟಕ!
  ಹರಸುತಿಹನು ದೇವ ಗಾಂಧಿ;
  ಮಂತ್ರಿಸಿಹುದು ಋಷಿಯ ನಾಂದಿ;
  ತನಗೆ ತಾನೆ ಋತಸ್ಯಂದಿ
          ಅವಂಧ್ಯೆ ಕವಿಯ ಕಲ್ಪನೆ!
  ಒರ್ವನಾದೊಡೋರ್ವನಲ್ತು:
          ಶಕ್ತಿ ಸರ್ವನಲ್ಪನೆ?
  ಹಿಂದದೊಂದು ಹಿರಿಯ ಕನಸು:
  ಇಂದು ಕೋಟಿ ಕೋಟಿ ಮನಸು
  ಕೂಡಿ ಮೂಡಿ ನಿಂದ ನನಸು!
  ತಡೆವುದೇನೊ ನಿನ್ನ ಕಿನಿಸು
          ಒಣರುವಲ್ಪ ಜಲ್ಪನೆ?
  ಭುವನ ವಂದ್ಯೆ, ಕೇಳ್, ಅವಂಧ್ಯೆ
          ಕವಿಯ ವಿಂಧ್ಯಕಲ್ಪನೆ!
ಅಖಂಡ ಕರ್ಣಾಟಕ:
ಅಲ್ತೊ ನಮ್ಮ ಬೂಟಾಟದ ರಾಜಕೀಯ ನಾಟಕ!
  ಇಂದು ಬಂದು ನಾಳೆ ಸಂದು
          ಹೋಹ ಸಚಿವ ಮಂಡಲ
  ರಚಿಸುವೊಂದು ಕೃತಕವಲ್ತೊ
  ಸಿರಿಗನ್ನಡ ಸರಸ್ವತಿಯ
          ವಜ್ರಕರ್ಣಕುಂಡಲ!
ಅಖಂಡ ಕರ್ಣಾಟಕ:
ಅಲ್ತೊ ನಮ್ಮ ನಾಲ್ಕು ದಿನದ ರಾಜಕೀಯ ನಾಟಕ!
  ನೃಪತುಂಗನೆ ಚಕ್ರವರ್ತಿ!
  ಪಂಪನಲ್ಲಿ ಮುಖ್ಯಮಂತ್ರಿ!

---

೧. ವಂದ್ಯೆ = to be praised, adorable
೨. ವಂಧ್ಯೆ = a barren or childless women, ಬಂಜೆ (ಅವಂಧ್ಯೆ = ಕನ್ಯೆ)
೩. ಜಲ್ಪನೆ = talk, speech – ಕಿಟ್ಟೆಲ್

ರನ್ನ ಜನ್ನ ನಾಗವರ್ಮ
ರಾಘವಾಂಕ ಹರಿಹರ
ಬಸವೇಶ್ವರ ನಾರಣಪ್ಪ
ಸರ್ವಜ್ಞ ಷಡಕ್ಷರಃ
ಸರಸ್ವತಿಯೆ ರಚಿಸಿದೊಂದು
ನಿತ್ಯ ಸಚಿವ ಮಂಡಲ,
ತನಗೆ ರುಚಿರ ಕುಂಡಲ!
ಅಖಂಡ ಕರ್ಣಾಟಕ:
ಅಲ್ತೊ ನಮ್ಮ ಕೀರ್ತಿಶನಿಯ ರಾಜಕೀಯ ನಾಟಕ!
ಬರಿಯ ಹೊಟ್ಟೆ ಬಟ್ಟೆಗಲ್ತೊ;
ಪಕ್ಷ ಜಾತಿ ಕಲಹಕಲ್ತೊ;
ಹಮ್ಮು ಬಿಮ್ಮು ಸೊಮ್ಮಿಗಲ್ತೊ;
ಬಣ್ಣ ಚಿಟ್ಟೆ ಬಾಳಿಗಲ್ತೊ;
ಜೋಳವಾಳಿ ಕೂಳಿಗಲ್ತೊ;
ದರ್ಪ ಸರ್ಪ ಕಾರ್ಕೋಟಕ
ಸ್ವಾರ್ಥ ಫಣಾ ಕ್ರೀಡೆಗಲ್ತೊ
ರಾಜಕೀಯ ಪೇಟಕ,
ಅಖಂಡ ಕರ್ಣಾಟಕ!
ಅಖಂಡ ಕರ್ಣಾಟಕ:
ಸರಸ್ವತಿಯೆ ರಚಿಸಿದೊಂದರಾಜಕೀಯ ತ್ರೋಟಕ!
ಮೆರೆಯಲಾತ್ಮ ಸಂಸ್ಕೃತಿ;
ಬೆಳಗೆ ಜೀವ ದೀಧಿತಿ;
ಪರಮಾತ್ಮನ ಚರಣದೀಪ್ತಿ
ಶರಣ ಹೃದಯಗಳಲಿ ಹೊತ್ತಿ
ಉಸಿರುಸಿರಿನ ಹಣತೆ ಬತ್ತಿ
ಉರಿಯಲೆಂದು ತಣ್ಣಗೆ;
ಬಾಳ ಸೊಡರ್ ಗುಡಿಯ ನೆತ್ತಿ
ತನ್ನ ಮುಡಿಯ ಬಾನಿಗೆತ್ತಿ
ಸೊಗಸಲೆಂದು ರಸಸ್ಫೂರ್ತಿ
ಭಗವಂತನ ಕಣ್ಣಿಗೆ;

---

ಪೇಟಕ = a basket, a box
ತ್ರೋಟಕ = a cartridge, (ಮದ್ದುಗುಂಡು, ತೋಟಾ) – ಕಿಟ್ಟೆಲ್

ಹಾಡುತಿಹೆನು ಕಂಡ ನಾನು;
ದಿಟ್ಟಿಗೇಡೊ? ಹುಟ್ಟು ಕುರುಡೊ?
ಬುದ್ಧಿ ಬರಡೊ? ಬೇರೆ ಹುರುಡೊ?
ಮೆಳ್ಳಗಣ್ಣ, ಕಾಣೆ ನೀನು!
ಹೇಳು! ತಪ್ಪು ನನ್ನದೇನು?
ಕರ್ಣಾಟಕ ಎಂಬುದೇನು
ಹೆಸರೆ ಬರಿಯ ಮಣ್ಣಿಗೆ?
ಮಂತ್ರ ಕಣಾ! ಶಕ್ತಿ ಕಣಾ!
ತಾಯಿ ಕಣಾ! ದೇವಿ ಕಣಾ!
ಬೆಂಕಿ ಕಣಾ! ಸಿಡಿಲು ಕಣಾ!
ಕಾವ ಕೊಲುವ ಒಲವ ಕಣಾ!
ಪಡೆದ ಚಲದ ಚಂಡಿ ಕಣಾ
ಋಷಿಯ ಕಾಣ್ಬ ಕಣ್ಣಿಗೆ!
ವಿರೋಧಿಗಾಸ್ಫೋಟಕ,
ಕಂಡ ಕವಿಗಖಂಡ ದೇವಿ ಕಣಾ ಕರ್ಣಾಟಕ!
ಸರಸ್ವತಿಯೆ ರಚಿಸಿದೊಂದರಾಜಕೀಯ ತ್ರೋಟಕ!
ವಿರೋಧಿಗಾಸ್ಫೋಟಕ,
ಅಖಂಡ ಕರ್ಣಾಟಕ:
ಅಲ್ತೊ ನಾವು ನರ್ತಿಪೊಂದು ರಾಜಕೀಯ ನಾಟಕ!
ಅಖಂಡ ಕರ್ಣಾಟಕ!
ಅಖಂಡ ಕರ್ಣಾಟಕ!
ಜಯ್ ಜಯ್ ಜಯ್ ಅಖಂಡ ಕರ್ಣಾಟಕ!

೨-೫-೧೯೪೯

---

ಆಸ್ಫೋಟಕ = blowing, breaking – ಕಿಟ್ಟೆಲ್

# ಕರ್ನಾಟಕ ಮಂತ್ರದೀಕ್ಷೆ*

[ಕನ್ನಡನಾಡು ಒಂದಾಗಬೇಕೆಂದು ಹಂಬಲಿಸುವ ಕನ್ನಡ ಮಕ್ಕಳೆಲ್ಲ ಒಂದು ಮಹಾದಿನ ಶುಭಮುಹೂರ್ತದಲ್ಲಿ ತಮ್ಮ ಊರಿನ ಹೊಳೆಗೊ ಕೆರೆಗೊ ಗುಂಪಾಗಿ ನಡೆದು ಮಿಂದು ಮಡಿಯುಟ್ಟು ದೇವರಿಗೆ ಬಾಗಿ ಈ ದೀಕ್ಷೆ ಕೈಕೊಳ್ಳುತ್ತಾರೆ.]

**ದೀಕ್ಷೆಯ ತೊಡು ಇಂದೇ;**<br>
**ಕಂಕಣ ಕಟ್ಟಿಂದೇ!**<br>
**ಕನ್ನಡನಾಡೊಂದೇ;**<br>
**ಇನ್ನೆಂದೂ ತಾನೊಂದೇ!**

೧

**ನೃಪತುಂಗನ ದೊರೆಮುಡಿ ಸಾಕ್ಷಿ!**<br>
**ಪಂಪನ ಪದ ಧೂಳಿಯ ಸಾಕ್ಷಿ!**<br>
**ಕೂಡಲ ಸಂಗನ ಅಡಿ ಸಾಕ್ಷಿ!**<br>
**ಗದುಗಿನ ಕವಿದೇವನ ಸಾಕ್ಷಿ!**<br>
**ದೀಕ್ಷೆಯ ತೊಡು ಇಂದೇ....**

೨

**ಇಡು ಸಹ್ಯಾದ್ರಿಯ ಮೇಲಾಣೆ!**<br>
**ಇಡು ಕಾವೇರಿಯ ಮೇಲಾಣೆ!**<br>
**ಇಡು ಚಾಮುಂಡಿಯ ಮೇಲಾಣೆ!**<br>
**ಇಡು ಗೊಮ್ಮಟ ಗುರುದೇವಾಣೆ!**<br>
**ದೀಕ್ಷೆಯ ತೊಡು ಇಂದೇ....**

* ಪ್ರಜಾಪ್ರತಿನಿಧಿ ಸಭೆಯಲ್ಲಿ ಮೈಸೂರು ಕರ್ನಾಟಕದಲ್ಲಿ ಸೇರಲು ಸಕಾಲವಲ್ಲವೆಂದು ತೀರ್ಮಾನವಾಗಿದೆ. ಆ ಸಂದರ್ಭದಲ್ಲಿ ರಚಿಸಿದ್ದು.

೩

ಕಾಣಲಿ ಕನ್ನಡ ವ್ಯೋಮಾಕ್ಷಿ!
ನಿಲ್ಲಲಿ ರವಿ ಚಂದ್ರರ ಸಾಕ್ಷಿ!
ಕೇಳಲಿ ಕನ್ನಡ ಪಶು ಪಕ್ಷಿ!
ಸರ್ವ ದೇವರೂ ಶ್ರೀ ಸಾಕ್ಷಿ!
ದೀಕ್ಷೆಯ ತೊಡು ಇಂದೇ...

೪

ಇಡು ನಿನ್ನಯ ಸತಿಯಾಣೆ!
ಇಡು ನಿನ್ನಯ ಪತಿಯಾಣೆ!
  ಮಕ್ಕಳ ಮೇಲಾಣೆ!
  ಅಕ್ಕರೆ ಮೇಲಾಣೆ!
  ಗುರುದೇವರ ಆಣೆ!
          ನನ್ನಾಣೆ!
          ನಿನ್ನಾಣೆ!
ಕನ್ನಡ ಜನರೆಲ್ಲರ ಮೇಲಾಣೆ!
ಕನ್ನಡ ನಾಡೊಂದಾಗದೆ ಮಾಣೆ!
ತೊಡು ದೀಕ್ಷೆಯ! ಇಡು ರಕ್ಷೆಯ!
  ಕಂಕಣ ಕಟ್ಟಿಂದೇ
ಇನ್ನೆಂದೂ ತಾನೊಂದೇ!
  ಕನ್ನಡ ನಾಡೊಂದೇ!

೧-೧೧-೧೯೪೯

# ಕಂದ ಕನ್ನಡನಿವನು ಕೈಬಿಡದಿರಮ್ಮಾ

ಕಂದ ಕನ್ನಡನಿವನು ಕೈಬಿಡದಿರಮ್ಮಾ
ನೊಂದು ಬಂದಿಹನು ಹಾಲೂಡಿ ಪೊರೆಯಮ್ಮ!

ಕಂದಗಲ್ಲವೆ ಮೊದಲ ಪಾಳಿ ನಿನ್ನೆದೆಗಮ್ಮಾ?
ಕಂದನಲ್ಲವೆ ನಿನ್ನ ಜೀವದಾನಂದವಮ್ಮಾ?
ಕಂದನನು ತೊರೆದನ್ಯರಾ ಮಗುಗೆ ಮೋಹಮಾಡಿ
ಕಂದನೆಂದರೆ ಕರುಳು ಕಿಲಕಿಲ ನಗದೆ ಹೇಳಮ್ಮಾ?

ಹೆರರ ಮಕ್ಕಳ ಮೀರಿ ನಿನ್ನವನು ಚೆಲುವನಮ್ಮಾ.
ನೀನು ಒಲಿದರೆ ಮುಗಿಲ ಸರಿಸಕೆ ನಿಲುವನಮ್ಮಾ;
ವಿಶ್ವವನೆ ಗೆಲುವನಮ್ಮಾ!
ಲೋಕವನ್ನೊಲಿಸುವನು, ನಿನ್ನನೂ ನಲಿಸುವನು,
ತಾನೊಲಿದು ನಲಿವನಮ್ಮಾ!

ನಿನ್ನ ತೊಡೆಯೇರಿ ಕೊರಳಪ್ಪಿಕೊಳ್ಳುವೆನಮ್ಮಾ:
ನಿನ್ನ ಕಂದನ ಬೇಡಿಕೆಯ ನೀಡಿ ಸಲಹಮ್ಮಾ!
ಮೊದಲೆನ್ನ ಸಿಂಗರಿಸಿ ಕಣ್ದಣಿಯೆ ನೋಡಿ ನಲಿಯಮ್ಮಾ:
ಮೊದಲು ಮುದ್ದಿಸು ನನ್ನ: ನಾ ನಿನ್ನೊಡಲು ಬಾಳುಸಿರಮ್ಮಾ!

೩೦-೫-೧೯೩೮

# ಕರ್ಣಾಟಕ ರಾಜ್ಯೋದಯ ಶ್ರೀಗೀತೆ

ಓಂ ದ್ಯೌಃ ಶಾಂತಿರಂತರಿಕ್ಷಂ ಶಾಂತಿಃ।
ಪೃಥಿವೀಶಾಂತಿರಾಪಃ ಶಾಂತಿರೋಷಧಯಃ ಶಾಂತಿಃ।
ವನಸ್ಪತಯಃ ಶಾಂತಿರ್ವಿಶ್ವೇದೇವಾಃ ಶಾಂತಿರ್ಬ್ರಹ್ಮ ಶಾಂತಿಃ।
ಸರ್ವಂ ಶಾಂತಿಃ ಶಾಂತಿರೇವ ಶಾಂತಿಃ॥
ಬಾರಮ್ಮ ದೇವಿ,
ಓ ತಾಯಿ ಭಾರತಿಯೆ, ನಿನ್ನ ಮಗಳನು ಹರಸು.
ವರುಷ ಒಂಬತ್ತರಾಚೆಯಲಿ ಬಂಧನಮುಕ್ತಳಾದಂದು
ನೀ ಕಂಡ ಕನಸು,
ಎರಡು ಕೋಟಿಯ ಹೃದಯದಲಿ ಶತಮಾನದಿಂ ಕುದಿದ ಒಮ್ಮನಸು,
ದುರ್ಮುಖಿಯೆ ಸುಮುಖಿ ತಾನಾದ ದೀವಳಿಯ ಸುದಿನದಿಂದು
ತಾನಾಗಿಹುದು ನನಸು!
ಪುಲಕಿಸುತ್ತಿದೆ ಪಡುಗಡಲ್;
ರೋಮಾಂಚನದಿ ನಿಮಿರುತಿದೆ ಸಹ್ಯಾದ್ರಿ;
ಗಂಧ ಚವರಿಯ ಬೀಸುತಿದೆ ಮಲಯ ವನಸೀಮೆ;
ಪಕ್ಷಿ ಕೋಟಿಯ ಕಂಠ ಘೇಘೋಷಮುಕ್ಕುತಿದೆ
ದಿಕ್ಕು ಕಿವಿಗೆಡುವಂತೆ, ದೇವರ್ಕಳೊಲಿವಂತೆ,
ಕಾರ್ತಿಕದ ಬಾನ್ನೀಲಿ ತಾಂ ಶಾಂತಿಯಾಲಿಂಗನದಿ
ಕನ್ನಡದ ನೆಲಮಗಳನಪ್ಪಿ ಚುಂಬಿಸುವಂತೆ!
ನಮಿಸುತಿದೆ ತುಹಿನಗಿರಿ ಚಾಮುಂಡಿಯಂ;
ಗಂಗೆ ಓಲೈಸಿಹಳು ಕಾಣ್ ತಾಯಿ ತುಂಗೆಯಂ;
ನಿನ್ನ ಮಗಳಭ್ಯುದಯ ನಿನಗಭ್ಯುದಯಮಲ್ತೆ
ಬಾರಮ್ಮ ದೇವಿ,
ಓ ತಾಯೆ ಭಾರತಿಯೆ, ನಿನ್ನ ಮಗಳನು ಹರಸಿ
ಹಾಡು ಓಂ ಶಾಂತಿಯಂ!
ನಿನ್ನ ಋಷಿಜನ ಬರಲಿ,
ನಿನ್ನ ಕವಿಜನ ಬರಲಿ,
ನಿನ್ನ ಗುರುಜನ ಬರಲಿ,
ನಿನ್ನಖಿಲ ಶ್ರೀವಿಭೂತಿಗಳೆಲ್ಲರೈತರಲಿ,
ಕನ್ನಡಾಂಬೆಯ ಹರಸಿ ಹಾರೈಸಲಿ:

ಬರಿಯ ಚದರಮೈಲಿಗಳಲ್ತು ಕರ್ಣಾಟಕದ ದೇಶ ವಿಸ್ತೀರ್ಣಂ;
ನೆನೆ, ನೆನೆ, ಮನೋಮಯದ ಸಂಸ್ಕೃತಿಯ ಕೋಶ ವಿಸ್ತೀರ್ಣಮಂ.
ಮರೆಯದಿರು ಚದರಸಂವತ್ಸರದ ಶತಮಾನಗಳ ಕಾಲವಿಸ್ತೀರ್ಣಮಂ,
ಪ್ರಾಣಮಯ ಭಾವಪ್ರದೇಶ ವಿಸ್ತೀರ್ಣಮಂ,
ಚಿದಾಕಾಶ ವಿಜ್ಞಾನ ವಿಸ್ತೀರ್ಣಮಂ!

ಓ ಏಳು, ನೃಪತುಂಗದೇವ,
ಕೃಪೆಯಿಟ್ಟು ಕವಿರಾಜಮಾರ್ಗದರಮನೆಯ ಸಿಂಹಾಸನವನಿಳಿದು ಬಾ\
ಕರ್ಣಾಟಕದ ನಿನ್ನ ಈ ಹೆಸರ ತಾಯ್ನೆಲಕೆ.
ನೀನಂದು ಹಾಡಿದಾ ಕನ್ನಡದ ನಾಡು
ಒಂದುಗೂಡಿದೆ ಇಂದು ಇದೊ ಬಂದು ನೋಡು.
ಸಂವತ್ಸರ ಸಹಸ್ರ ಸೋಪಾನಪಂಕ್ತಿಗಳನಿಳಿದು ಬಿಜಯಗೈ
ಪುಣ್ಯ ದೀಪಾವಳಿಯ ದಿನದ ಈ ರಾಜ್ಯೋದಯ ಮಹೋತ್ಸವಕ್ಕೆ.
ಇಳಿದು ಬರುವಾ ದಾರಿಯೊಳೆ ನಿಂತಿಹರು ಸಾಲುಸಾಲಾಗಿ
ಕನ್ನಡದ ಕುಲದೀಪಧಾರಿಗಳು, ಅವರನೂ ಕರೆದು ತಾ.
ಅಲ್ಲಿ ದೊರೆ, ಇಲ್ಲಿ ಕವಿ, ಅಲ್ಲಿ ಸೇನಾನಿ;
ಇಲ್ಲಿ ಗಾಯಕ, ಅಲ್ಲಿ ಶಿಲ್ಪಿ;
ಇಲ್ಲಿ ಗುರು, ಅಲ್ಲಿ ರಸಋಷಿ ಮತ್ತೆ ಅನುಭಾವಿ;
ದಾರ್ಶನಿಕ, ದ್ರಷ್ಟಾರ, ಸರ್ವಶಾಸ್ತ್ರಜ್ಞಾನಿ;
ಒಬ್ಬರೆಯೆ? ಇಬ್ಬರೆಯೆ? ಕೋಟಿ ಕೋಟಿ!
ಕಡುಗ, ಕುಡುಗೋಲು, ಲೆಕ್ಕಣಿ, ಮೇಟಿ!
ಹೆಸರಾಂತವರಿಗಿಂತಲೂ ಹೆಸರು ದೌರ್ಬಲ್ಯವನು ದಾಟಿ
ನಿಂತಾ ಮಹಾತ್ಮರೆಯೆ ಕೋಟಿ ಕೋಟಿ!
ಎಲ್ಲರನು ಕರೆದು ತಾ ಇಂದಿನುತ್ಸವಕ್ಕೆ.
ನಿಮಗೆಲ್ಲ ಸೊಗಮಕ್ಕೆ, ನಿಮಗೆಲ್ಲ ಜಯಮಕ್ಕೆ,
ನಿಮ್ಮ ಆಶೀರ್ವಾದ ನಮಗೆ ಶುಭಮಕ್ಕೆ!

ಓಂ ದ್ಯೌಃ ಶಾಂತಿರಂತರಿಕ್ಷಂ ಶಾಂತಿಃ।
ಪೃಥಿವೀ ಶಾಂತಿರಾಪಃ ಶಾಂತಿರೋಷಧಯಃ ಶಾಂತಿಃ।
ವನಸ್ಪತಯಃ ಶಾಂತಿರ್ವಿಶ್ವೇದೇವಾಃ ಶಾಂತಿರ್ಬ್ರಹ್ಮ ಶಾಂತಿಃ।
ಸರ್ವಂ ಶಾಂತಿಃ ಶಾಂತಿರೇವ ಶಾಂತಿಃ॥

೧-೧೧-೧೯೫೬

# ಏಕೈಕ ಕರ್ನಾಟಕ

ಕನಸು ನನಸಾಯಿತಿದೊ ಏಕೈಕ ಕರ್ನಾಟಕ:
ಕಣ್ ನಟ್ಟು ಬಯಸಿ ಕಾಣ್ ದಿಕ್ ತಟಧ್ವಜಪಟ!

ಕಾವೇರಿ ಸಿರಿಯಡಿಯ, ಗೋದಾವರಿಯ ಮುಡಿಯ,
  ಮೂಡುಮಲೆಯೆಡದ ಗಡಿಯ,
  ಪಡುಗಡಲ ಬಲದ ತಡಿಯ;
ವರ್ಣಶಿಲ್ಪದ ಕಲೆಯ ಚೆಲ್ವಿನ ಶಿಲೆಯ ಗುಡಿಯ,
  ಕನ್ನಡದಿಂಪು ನುಡಿಯ;
ಕನಸು ನನಸಾಯಿತಿದೊ ಏಕೈಕ ಕರ್ನಾಟಕ:
ಕಣ್ ನಟ್ಟು ಬಯಸಿ ಕಾಣ್ ದಿಕ್ ತಟಧ್ವಜಪಟ!

ಶಿಶುರೂಪಿ, ಪಶುರೂಪಿ, ಜನರೂಪಿ, ಮನರೂಪಿ,
  ನವ್ಯಶಾದ್ವಲ ರೂಪಿ,
  ಕಲಕಲ ಪಕ್ಷಿರೂಪಿ;
ನವಸರೋವರದಂತೆ, ನವಶಾಲಿವನದಂತೆ,
ನವಯೌವನದ ಮೊದಲ ನವವಧೂವರರಂತೆ;
  ನವಕವಿಯ ನವರಸ ನವೀನ ಕೃತಿಯಂತೆ,
          ದಿವ್ಯವೀಣಾಗಾನ ಗತಿಯಂತೆ;
ಮೂಡುತಿದೆ ನೋಡು ಅದೊ ಏಕೈಕ ಕರ್ನಾಟಕ:
ಕಣ್ ನಟ್ಟು ಬಯಸಿ ಕಾಣ್ ದಿಕ್ ತಟಧ್ವಜಪಟ!

ಕನ್ನಡದ ಮಕ್ಕಳಿರ, ಬನ್ನಿರೈ ಓ ಬನ್ನಿ;
ತನ್ನತನದನಿತನೂ ನಿವೇದಿಸಲು ತನ್ನಿ;
ತಿರೆಕಿವುಡು ಸೀಳ್ವಂತೆ ನೀಳಿಂಚರದೊಳೆನ್ನಿ:

"ಭಾರತಾಂಬೆಯ ಕನ್ಯೆ ಕನ್ನಡಾಂಬೆಯೆ ಧನ್ಯೆ!
  ಜಯತು ಜಯ್!
          ಜಯತು ಜಯ್!
                    ಜಯತು ಜಯ್! ಜಯ್ ! ಜಯ್ !"

೧೬-೧೦-೧೯೪೧

# ಕನ್ನಡ ಡಿಂಡಿಮ*

ಬಾರಿಸು ಕನ್ನಡ ಡಿಂಡಿಮವ,
ಓ ಕರ್ನಾಟಕ ಹೃದಯಶಿವ!

ಸತ್ತಂತಿಹರನು ಬಡಿದೆಚ್ಚರಿಸು;
ಕಚ್ಚಾಡುವರನು ಕೂಡಿಸಿ ಒಲಿಸು.
ಹೊಟ್ಟೆಯಕಿಚ್ಚಿಗೆ ಕಣ್ಣೀರ್ ಸುರಿಸು;
ಒಟ್ಟಿಗೆ ಬಾಳುವ ತೆರದಲಿ ಹರಸು!
  ಬಾರಿಸು ಕನ್ನಡ ಡಿಂಡಿಮವ
  ಓ ಕರ್ನಾಟಕ ಹೃದಯಶಿವ!

ಕ್ಷಯಿಸೆ ಶಿವೇತರ ಕೃತಿಕೃತಿಯಲ್ಲಿ
ಮೂಡಲಿ ಮಂಗಳ ಮತಿಮತಿಯಲ್ಲಿ;
ಕವಿ ಋಷಿ ಸಂತರ ಆದರ್ಶದಲಿ
ಸರ್ವೋದಯವಾಗಲಿ ಸರ್ವರಲಿ!
  ಬಾರಿಸು ಕನ್ನಡ ಡಿಂಡಿಮವ,
  ಓ ಕರ್ನಾಟಕ ಹೃದಯಶಿವ!

೨೮. ೪. ೧೯೬೦

* 'ಮಾನಸ ಗಂಗೋತ್ರಿ'ಯ ಪ್ರಾರಂಭೋತ್ಸವ ಸಂದರ್ಭದಲ್ಲಿ.

# ಸಾಕು ಈ ಬಲಾತ್ಕಾರ

೧
ಇಂಗಿಹೋಗುತಿದೆ ಇಂಗ್ಲಿಷಿನ ಮರುಭೂಮಿಯಲಿ
ನಿಮ್ಮ ಮಕ್ಕಳ ಶಕ್ತಿ-ಬುದ್ಧಿ-ಪ್ರತಿಭಾ;
ರಾಷ್ಟ್ರನಾಯಕ ಮನದಿ ವಿವೇಕರೂಪದಿ ಮೂಡಿ,
ಓ ರಸಮಯೀ ಸರಸ್ವತಿಯೆ, ಪೊರೆ ಬಾ!

೨
ಕಲ್ಲ ಕುಂಡದಿ ನೆಟ್ಟ ಅಶ್ವತ್ಥಸಸಿಯಂತೆ
ಕಿಮುಳ್ಚಿ ಗುಜ್ಜಾಗುತಿದೆ ಮೊಳೆವ ಚೈತನ್ಯ;
ಭೂಮಿಯಲಿ ಬೇರೂರಿ, ಬಾನೆಡೆಗೆ ತಲೆಯೆತ್ತಿ
ನಿಲುವವರಿಗೇತಕೀ ದಾಸ್ಯದೈನ್ಯ?

೩
ಗಾಂಧಿಯಿಂದಿಂಗ್ಲಿಷರ ದಾಸ್ಯದಿಂದ ಪಾರಾದೆ;
ಅವನ ಕೊಂದಿಂಗ್ಲಿಷಿಗೆ ದಾಸಿಯಾದೆ.
ಓ ತಾಯಿ ಭಾರತಿಯೆ, ಚೀಣೀಯರನೆ ಮೀರಿ
ಹಿಂಡುತಿದೆ ಕಂದರರನು ಇಂಗ್ಲಿಷಿನ ಮಾರಿ!

೪
ಬಲಾತ್ಕಾರಕಾಗಿ ಮಾತ್ರವೆ ಹೊರತು ಈ ರೋಷ,
ಭಾಷೆಗಾಗಿಯೆ ನಮ್ಮ ದ್ವೇಷವೇನಿಲ್ಲ;
ತೆಗೆಯಿರಿ ಬಲಾತ್ಕಾರದದಂಶವನು; ಆರಿಸಲಿ
ಸರ್ವರೂ ಇಂಗ್ಲಿಷನೆ, ಚಿಂತೆ ಇನಿತಿಲ್ಲ.

೫
ಭಾವಜಲಮೂಲವನೆ ಹೀರುತಿದೆ ಮರುಭೂಮಿ,
ಹಿಂಡೆ ಜೀವವನು ಇಂಗ್ಲಿಷಿನ ಕಲ್ಗಾಣ;
ಕನ್ನಡದ ಕ್ರಿಸ್ತನದೊ ಇಂಗ್ಲಿಷಿನ ಶಿಲುಬೆಯಲಿ
ಸಿಲುಕಿ ಬಾಯ್ಬಿಡುತಿಹನು ನೀರಡಸಿ ಪ್ರಾಣ!

೬
ತಮ್ಮವರು ಎಂತಿದ್ದರೂ ನುಸುಳಿ ಬರುವರು ಎಂಬ
ಕೆಚ್ಚಿನಲಿ, ಇಂಗ್ಲಿಷಿನ ಉಕ್ಕಿನ ಬಲೆಯನಿಕ್ಕಿ
ಜಾತಿಯಲಿ ಹಣದಲ್ಲಿ ಅಂತೆ ಅಧಿಕಾರದಲಿ
ಮೇಲೆ ಕುಳಿತವರೆಲ್ಲ ಮೆರೆಯುತಿರುವರು ಸೊಕ್ಕಿ!

೭
ಹೆಣಭಾರ! ಹೆಣಭಾರ! ಸಾಕೀ ಬಲಾತ್ಕಾರ;
ಸಾಕು ನಿಲ್ಲಿಸಿ, ನಿಮಗೆ ಬೇಕಾದರುದ್ಧಾರ.
ಇಂಗ್ಲಿಷಿನ ಚಪ್ಪಡಿಯಡಿಯ ಹಸುಳೆಚೀತ್ಕಾರ
ಕೇಳಿಸದ ಕಿವುಡರಿರ,ನಿಮಗೇಕೆ ಅಧಿಕಾರ?
ಕೇಳಿಯೂ ಧಿಮ್ಮನಿರೆ, ಕೋಟಿ ಧಿಕ್ಕಾರ!

೮
ಬೇಕಾದರಿಗೆ ಕೊಡಿರೊ, ಬೇಡವೆಂದವರಾರೊ?
ಹೇರಿ ಎಲ್ಲರ ಮೇಲೆ ಕೊಲೆಗೈವಿರೇಕೊ?–
ಓ ಕಂದ, ಓ ತರುಣ, ಓ ಯುವಕ ಭಾರತೀಯ,
ಮೇಲೆ ಕುಳಿತವರಿಕ್ಕಿದುಕ್ಕುಬಲೆಯನು ಕಿತ್ತು,
ನಿನ್ನ ಸ್ವಾತಂತ್ರ್ಯವನು, ಓ, ನೀನೆ ರಕ್ಷಿಸಿಕೊ!

೯
ಇಂಗ್ಲಿಷಿನ ಜಿಲೊಟಿನ್ನಿನಡಿ ನಿಮ್ಮ ಕೊರಳೊಡ್ಡಿ
ವರುಷವರುಷವು ಕೋಟಿ ಕೊಲೆಯಪ್ಪಿರೇಕೆ?
ನಿಮ್ಮ ಶಕ್ತಿಯ ಕುಂದದಲ್ಲ ಕಾರಣ ಕೊಲೆಗೆ:
ಪರಭಾಷೆ ಚಪ್ಪಡಿ! ಪರೀಕ್ಷೆಯ ನೆವಂ ಬೇಕೆ?–
ಏಳು ಎಚ್ಚರಗೊಳ್ಳು ಓ ಭಾರತಿಯ ಕಂದ,
ನಿನ್ನ ಸ್ವಾತಂತ್ರ್ಯವನು ನೀನೆ ರಕ್ಷಿಸಿಕೊ!

೯. ೪. ೧೯೬೩

# ಬಲಾತ್ಕಾರದ ಭಾಷಾತ್ರಿಶೂಲ!

ಭಾಷಾ ತ್ರಿಶೂಲವೀ ತ್ರಿಭಾಷಾ ಸೂತ್ರ;
ಬಾಲಕರ ರಕ್ಷಿಸೈ, ಹೇ ತ್ರಿಣೇತ್ರ!

ಚೂರು ತಿಂಡಿಗೆ ಸಿಕ್ಕಿಸಿಹರೊ ಈ ಮೂರು ಗಾಳ:
ನುಂಗದಿದ್ದರೆ ಹಸಿವೆ; ನುಂಗಿದರೆ ಪ್ರಾಣಶೂಲ!

ಮುಂದೆ ದಿಳ್ಳಿಯ ಮಂತ್ರಿಯಾಗುವವ ನೀನೊ?
ಬೇಡವೆಂಬುವರಾರು? ಹಿಂದಿಯನು ಕಲಿಯೊ!
ಬದುಕಿ ಇಲ್ಲಿಯೆ ಬಾಳಿ ಸಾಯುವವ ನಾನೊ!
ನಿನ್ನ ಸೂತ್ರಕೆ ಏಕೆ ನನ್ನ ಬಲಿಯೊ?

ಮುಂದೆ ಇಂಗ್ಲೆಂಡಿನಲಿ ನೀ ರಾಯಭಾರಿ?
ಬೇಡವೆಂಬುವರಾರು?
ಹೊಡೆಬಿರಿಯೆ ಕುಡಿಯೊ ಇಂಗ್ಲಿಷಿನ ಹೆಂಡ ಹೀರಿ!
ನನ್ನ ಮೇಲೇತಕ್ಕೆ ಮಾಡುವೆ ಬಲಾತ್ಕಾರ ಸವಾರಿ?

ನೀನು ಅಂತರರಾಷ್ಟ್ರ ಕೀರ್ತಿಯಂ ಪೊತ್ತು ಗರ್ಜಿಸುವ
 ಜಗತ್ ಪ್ರಸಿದ್ಧ ಹುಲಿಯೆ?
ಇದೆಕೊ ನಿನಗೆನ್ನ ಭೋ ಪರಾಕು!
ನಾನು ಅಜ್ಞಾತ ಅಖ್ಯಾತ ಅನಾಮಕ ಅಲ್ಪ ಇಲಿಯೆ?
ಇರಲಿ:
ಕನ್ನಡದ ಬೆನಕದೇರನ್ನೆಳೆವ ಈ ಧನ್ಯತೆಯೆ ಸಾಕು!

೨೦. ೯. ೧೯೬೩

# ಓ ನನ್ನ ಕನ್ನಡವೆ!

"ಕನ್ನಡದ ಕಬ್ಬದಲಿ ರಸವುಕ್ಕುತಿಲ್ಲ;
  ಕನ್ನಡದ ಕಬ್ಬಿಗರು ಬರಿಯರೆಗಳಂತೆ
  ಹೆರರ ಕೊಳಲಿನ ದನಿಯ ಬೀರುತಿಹರಂತೆ;
ಕನ್ನಡಕೆ ಕೊರಳಿಲ್ಲ; ಹುರುಳು ತಿರುಳಿಲ್ಲ;
ಬೆಳಕಿಲ್ಲ; ಜೀವನದ ಹುರುಪೆಂಬುದಿಲ್ಲ."
  ಎಂಬುದನು ಕೇಳಲೆದೆಗಲುಗಿಕ್ಕಿದಂತೆ
  ಬಾಳು ಬಾಯಾರುವುದು; ಮೂಡುವುದು ಚಿಂತೆ:
ನನ್ನಿಯಿಹುದದರಲ್ಲಿ; ಎಲ್ಲ ಸುಳ್ಳಲ್ಲ!

ಕನ್ನಡಾಂಬೆಯ ಮಗನು, ಕನ್ನಡಿಗ ನಾನು!
  ತಾಯ ನಿಂದೆಯ ಕೇಳಿ ನಡುಗುವುದು ಹೆಮ್ಮೆ!
ಪಂಪ ರನ್ನರ ಹೆತ್ತ ನುಡಿಗೆ ಕುಂದೇನು?
  ಕವಿಚಕ್ರವರ್ತಿಗಳು ಬರುವರಿನ್ನೊಮ್ಮೆ!

ಸರಸತಿಯೆ, ಕನ್ನಡಿಗನಾಸೆಯಿದು ಸಲ್ಗೆ!
ನನ್ನಮ್ಮ, ತಾಯೆ, ಸಿರಿಗನ್ನಡಂ ಗೆಲ್ಗೆ!

೧೮. ೧೦. ೧೯೨೮

---

ಬರಿಯರೆ = ಬರಿಯ ಬಂಡೆ

# ಕನ್ನಡ

ಕನ್ನಡ ಎನೆ ಕುಣಿದಾಡುವುದೆನ್ನೆದೆ,
    ಕನ್ನಡ ಎನೆ ಕಿವಿ ನಿಮಿರುವುದು!
ಕಾಮನ ಬಿಲ್ಲನು ಕಾಣುವ ಕವಿಯೊಲು
    ತೆಕ್ಕನೆ ಮನ ಮೈಮರೆಯುವುದು.
ಕನ್ನಡ! ಕನ್ನಡ, ಹಾ, ಸವಿಗನ್ನಡ!
    ಕನ್ನಡದಲಿ ಹರಿ ಬರೆಯುವನು;
    ಕನ್ನಡದಲಿ ಹರ ತಿರಿಯುವನು!
ಕನ್ನಡದಲ್ಲಿಯೆ ಬಿನ್ನಹಗೈದೊಡೆ
    ಹರಿ ವರಗಳ ಮಳೆ ಕರೆಯುವನು!
    ಹರ ಮುರಿಯದೆ ತಾ ಪೊರೆಯುವನು!
ಬಾಳುವುದೇತಕೆ? ನುಡಿ, ಎಲೆ ಜೀವ:
ಸಿರಿಗನ್ನಡದಲಿ ಕವಿತೆಯ ಹಾಡೆ!
ಸಿರಿಗನ್ನಡದೇಳಿಗೆಯನು ನೋಡೆ!
ಕನ್ನಡ ತಾಯಿಯ ಸೇವೆಯ ಮಾಡೆ!

# ದೇಶದೇವಿಯ ಪೂಜೆಗೆ ಬನ್ನಿ[1]

ಕನ್ನಡಮ್ಮನ ಹಿರಿಯ ಮಕ್ಕಳಿರಾ, ಕಿರಿಯ ಮಕ್ಕಳಿರಾ, ಓ ನನ್ನ ಸೋದರ ಸೋದರಿಯರಿರಾ,

ದೇಶದೇವಿಯ ಪೂಜೆಗೆ ಇಂದು ನಾಡೆಲ್ಲ ನೆರೆಯುತ್ತಿದೆ; ಎಲ್ಲರನ್ನೂ ಕರೆಯುತ್ತಿದೆ. ಈ ಪುಣ್ಯಸಂಭ್ರಮ ಸಮಯದಲ್ಲಿ ತಮ್ಮೆಲ್ಲರೊಡಗೂಡಿ ಆ ದೇವಿಯ ಮಹಾರಾಧನೆಯಲ್ಲಿ ಭಾಗಿಯಾಗುವ ಕೃಪೆ ಆಕೆಯ ತೊದಲು ಮಕ್ಕಳಲ್ಲೊಬ್ಬನಾದ ನನಗೂ ದೊರೆಕೊಂಡಿರುವುದಕ್ಕಾಗಿ ತಮ್ಮೆಲ್ಲರನ್ನೂ ವಂದಿಸಿ, ನಾಡದೇವಿಗೆ ಮುಡಿ ಬಾಗುತ್ತೇನೆ.

ಇಂದು ಕನ್ನಡನಾಡಿನ ಮೂಲೆಮೂಲೆಗಳಲ್ಲಿ ಎಚ್ಚತ್ತು ಕಣ್ದೆರೆಯುತ್ತಿರುವವರೆಲ್ಲರೂ ಈ ನಾಡಹಬ್ಬದಲ್ಲಿ ಉತ್ಸಾಹದಿಂದಲೂ ಆವೇಶದಿಂದಲೂ ತನುಮನಧನವನ್ನು ಸಮರ್ಪಿಸಿ ಭಾಗಿಗಳಾಗಿದ್ದಾರೆ. ಈ ಉತ್ಸಾಹದ ಅರ್ಥವೇನು? ಈ ಆವೇಶದ ಉದ್ದೇಶವೇನು? ಯಾವ ದೇವತೆಗಾಗಿ ಈ ತೇರು ಶೃಂಗಾರವಾಗಿದೆ? ಯಾವ ಮಂಗಳಕ್ಕಾಗಿ ಆ ಗುಡಿಯಲ್ಲಿ ಆರತಿಯಾಗುತ್ತಿದೆ? ಯಾರ ಮಹಿಮೆಗಾಗಿ ಇಲ್ಲಿ ಮಕ್ಕಳು ಜಯಧ್ವನಿಗೈಯುತ್ತಿದ್ದಾರೆ? ಯಾರ ಶ್ರೇಯಸ್ಸಿಗೆ ಅಲ್ಲಿ ದೊಡ್ಡವರು ಪರಿಶ್ರಮಿಸುತ್ತಿದ್ದಾರೆ? ಯಾವ ನನಸದು ನಮ್ಮನ್ನು ಮುನ್ನೂಂಕುತ್ತಿದೆ? ಯಾವ ಕನಸಿದು ನಮ್ಮೆಲ್ಲರನ್ನೂ ಸೆಳೆಯುತ್ತಿದೆ? ದೇಶ ದೇವಿ ಇದಾರು? ಈ ಪೂಜೆಯ ಅರ್ಥ ಉದ್ದೇಶಗಳೇನು?

ಕನ್ನಡಿಗರ ಆತ್ಮಜಾಗ್ರತಿಯಿಂದ ಸಪ್ರಾಣವಾಗುತ್ತಿರುವ ಅವಿಚ್ಛಿನ್ನ ಕರ್ನಾಟಕವೆ ಈ ದೇಶದೇವಿ. ಕರ್ನಾಟಕಮಾತೆಯ ಪ್ರಾಣಪ್ರತಿಷ್ಠೆಗಾಗಿ ಕನ್ನಡಿಗರು ತಮ್ಮ ಸರ್ವಸ್ವವನ್ನೂ ಬಲಿದಾನಮಾಡಲು ಸೊಂಟಕಟ್ಟುತ್ತಿದ್ದಾರೆ ಎಂಬುದೆ ಈ ಆರಾಧನೆಯ ಅರ್ಥ. ಕನ್ನಡಿಗರ ಸರ್ವತೋಮುಖವಾದ ಏಳ್ಗೆಯೆ ಈ ಉತ್ಸಾಹದ ಉದ್ದೇಶ. ಕನ್ನಡ ನೆಲದೊಗ್ಗಟ್ಟಿಗಾಗಿ, ಕನ್ನಡ ನುಡಿಯ ನಡೆಯ ನಯದ ಸಿರಿಯೊಗ್ಗಟ್ಟಿಗಾಗಿ ಕಂಕಣಬದ್ಧರಾಗಿ, ಶಕ್ತಿ ಸಿಡಿಯೆ, ದುಡಿದು, ಭಕ್ತಿಯುಕ್ಕಿ ಬಯಸುತ್ತೇವೆ ಎಂಬ ದೃಢಮನಸ್ಸಿನ ರಥೋತ್ಸವಕ್ಕಾಗಿಯೆ ನಾವಿಂದು ಒಂದುಗೂಡಿದ್ದೇವೆ.

ತಪಃಪೂರ್ಣವಾಯಿತೆಂದರೆ ಒಬ್ಬನ ಇಚ್ಛೆಯೆ ಅಘಟನ ಘಟನಕಾರಿಯಾಗುತ್ತದೆ ಎಂದ ಮೇಲೆ ಅನೇಕರು ಒಮ್ಮನಸ್ಸಿನಿಂದ ಇಚ್ಛಿಸಿದರೆ

---

[1] ಶಿವಮೊಗ್ಗೆಯ ಕರ್ನಾಟಕ ಸಂಘದವರು ಆಚರಿಸಿದ ನಾಡಹಬ್ಬದಲ್ಲಿ ೩೦–೯–೩೮ರಲ್ಲಿ ಮಾಡಿದ ಅಧ್ಯಕ್ಷ ಭಾಷಣ

ಆಗಬಹುದಾದದು ಆಗದಿರುತ್ತದೆಯೆ? ಕೋಟಿ ಕೈಗಳು ಒಂದಕ್ಕೊಂದು ಸೇರಿದರೆ ಸ್ವರ್ಗದ ಕಲ್ಪವೃಕ್ಷದ ದೇವಫಲಗಳನ್ನೂ ನೆಲಕ್ಕುರುಳಿಸುವ ದೋಟಿಯಾಗಲಾರದೆ? ಒಬ್ಬನು ಕೂಗಿದರೆ ನೆರೆಮನೆಗೂ ಕೇಳಿಸದೆ ಇರಬಹುದು. ನಾಡೆಲ್ಲ ನೆರೆದು ಒಕ್ಕೊರಲಾಗಿ ಕರೆದರೆ ಆ ಧ್ವನಿ ಉದಾಸೀನ ಪೃಥ್ವಿಯ ಪರ್ವತಕಾನನಗಳಿಂದ ಪ್ರತಿಧ್ವನಿತವಾಗಿ, ಸಾಗರದ ಘೋಷವನ್ನೂ ಮಿಕ್ಕುಮೀರಿ, ಅಂತರಿಕ್ಷದ ದೇವತೆಗಳ ಕಿವುಡನ್ನೂ ಹೊಡೆದೆಬ್ಬಿಸುವುದಿಲ್ಲವೆ? ಹಾಗೆ ಮಾಡುತ್ತದೆಂದೇ ನಂಬಿ ನಾವಿಂದು ದೇಶದೇವಿಯ ತೇರೆಳೆಯಲೆಂದು ಇಲ್ಲಿ ಸೇರಿದ್ದೇವೆ. ಮತ್ತು ಆ ಹೆಮ್ಮೆಯ ಹಬ್ಬಕ್ಕೆ ಕನ್ನಡಮ್ಮನ ಕಂದರನ್ನೆಲ್ಲ ಕೂಗಿ ಕರೆಯುತ್ತಿದ್ದೇವೆ.

ಇತ್ತೀಚೆಗೆ ಜನಾಂಗಗಳ ಜೀವನದಲ್ಲಿ ಕಾರ್ಯಕಾರಿಯಲ್ಲದ ಉದಾರ ಅಸ್ಪಷ್ಟತೆಗೆ ಬದಲಾಗಿ ಫಲಕಾರಿಯಾದ ಸ್ಪಷ್ಟತೆ ಮೂಡುತ್ತಿದೆ. ಏಕೆಂದರೆ, ಬಲಿಷ್ಠರ ಔದಾರ್ಯದಲ್ಲಿ ಔದಾರ್ಯಕ್ಕಿಂತಲೂ ಹೆಚ್ಚಾಗಿ ಬಲವೇ ಪ್ರಕಾಶಿತವಾಗುತ್ತದೆ. ಔದಾರ್ಯವೇಷಿಯಾದ ಬಲವು ತಿಂಡಿಯಿಂದ ತನ್ನ ಕೊಂಡಿಯನ್ನು ಮರೆಮಾಡಿ ಕೊಂಡಿರುವ ಗಾಳದಂತೆ ಮೃತ್ಯುಕರವಾದುದು. ಅದರಿಂದ ಹೊಟ್ಟೆ ತುಂಬುವುದಕ್ಕೆ ಬದಲು ಗಂಟಲು ಹರಿದುಹೋಗುತ್ತದೆ. ಆದ್ದರಿಂದಲೆ ಆ ಆಕಾಶದೆತ್ತರದ ಆದರ್ಶದಿಂದ ಒಂದಿನಿತು ಚ್ಯುತಿಗೊಂಡರೂ ಚಿಂತೆಯಿಲ್ಲವೆಂದು ಭಾವಿಸಿ ಜನಾಂಗಗಳು ತಮ್ಮತಮ್ಮ ಸ್ವಾಸ್ಥ್ಯಗಳನ್ನು ಭದ್ರಪಡಿಸಿಕೊಳ್ಳಲು ಹವಣಿಸುತ್ತಿವೆ. ದೊಡ್ಡದೊಡ್ಡವರು ದೊಡ್ಡದೊಡ್ಡ ವಿಧಾನಗಳಿಂದ ಪ್ರಯತ್ನಿಸುತ್ತಿರುವಂತೆ ಸಣ್ಣವರು ಸಣ್ಣ ರೀತಿಯಿಂದ ಕಾರ್ಯಸಾಧನೆ ಯಲ್ಲಿ ಸಾಹಸಿಗಳಾಗಿದ್ದಾರೆ. ಇಂದು ಇಲ್ಲಿ ನೆರೆದಿರುವ ನಾವೆಲ್ಲರೂ, ತಿಳಿದೋ ಅಥವಾ ತಿಳಿಯದೆಯೋ, ಅಂತಹ ಸಾಹಸಿಗಳ ಗುಂಪಿಗೆ ಸೇರಿದವರಾಗಿದ್ದೇವೆ. ಅದನ್ನು ಭಾವಿಸುವ ನನ್ನ ಹೃದಯದಲ್ಲಿ ಹೇಗೆ ಹೆಮ್ಮೆಯ ಬುಗ್ಗೆ ಚಿಮ್ಮುತ್ತಿದೆಯೊ ಹಾಗೆಯೆ ನಿಮ್ಮೆಲ್ಲರ ಹೃದಯಗಳಲ್ಲಿಯೂ ಅದು ಚಿಮ್ಮುತ್ತಿದೆಯೆಂದು ನಾನು ಬಲ್ಲೆ.

ಸಮಸ್ತ ಭರತಖಂಡವೂ ಒಂದು ಕೊರಲಾಗಿ, ಒಂದು ಮೈಯಾಗಿ, ಕೋಟ್ಯನು ಕೋಟಿ ಕೈಗಳಿಂದ ಸಾಹಸಮಾಡುತ್ತಿದೆ. ತನ್ನ ಸ್ಪಷ್ಟತೆಯನ್ನು ಪ್ರಕಟಿಸುವುದಕ್ಕೆ. ಬಲಿಷ್ಠರ ಔದಾರ್ಯದ ಉದರದಲ್ಲಿ ನೆಮ್ಮದಿಯಾಗಿ ನಿದ್ರಿಸುವುದಕ್ಕೆ ಅದಕ್ಕೆ ಮನಸ್ಸಿಲ್ಲ. ಆ ಸ್ವಾತಂತ್ರ್ಯ ಸಂಪಾದನೆಯ ವಿಚಾರದಲ್ಲಿ ಯಾವನೊಬ್ಬ ದೇಶಭಕ್ತ ಭಾರತೀಯನಲ್ಲಿಯೂ ಭಿನ್ನಾಭಿಪ್ರಾಯವಿಲ್ಲ. ಸ್ವಾತಂತ್ರ್ಯದೇವಿಯ ಆರಾಧನೆಗೆ ಅವಶ್ಯಕವಾದ ನೈವೇದ್ಯ ಗಳೆಲ್ಲವನ್ನೂ ಅರ್ಪಿಸಲು ಬಲ್ಲವರೆಲ್ಲರೂ ಸಿದ್ಧರಾಗಿದ್ದಾರೆ. ಅದು ಅತ್ಯಂತ ಅಗ್ರಗಣ್ಯ ವಿಷಯವೆಂಬುದನ್ನು ಎಲ್ಲರೂ ಒಪ್ಪುತ್ತಾರೆ.

ಆದರೆ, ಸೆರೆಮನೆಯಿಂದ ಬಿಡುಗಡೆ ಬಯಸುವ ಸೆರೆಯಾಳು ತನ್ನ ಅಂಗಗಳ ಆರೋಗ್ಯದ ವಿಚಾರದಲ್ಲಿ ಅಲಕ್ಷ್ಯಮಾಡಿದರೆ ಅವಿವೇಕವಾಗುತ್ತದೆ. ಅವನ ಒಟ್ಟು ಮೈ ಸೆರೆಯಿಂದ ಹೊರಗೆ ಬರಬೇಕಾದುದು ಅವಶ್ಯ. ಆದರೆ ಸೆರೆಯಿಂದ ಹೊರಗೆ ಬಂದ ಮೇಲೆ, ಅವನು ಹೊಸದಾಗಿ ಪಡೆದ ಸ್ವಾತಂತ್ರ್ಯವು ಸಾರ್ಥಕವಾಗಬೇಕಾದರೆ

ಅವನ ಅಂಗೋಪಾಂಗಗಳೆಲ್ಲವುಗಳ ಯೋಗಕ್ಷೇಮವೂ ಅತ್ಯಗತ್ಯ. ಉಪಾಂಗಗಳು ರೋಗ ಪೀಡಿತವಾಗಿದ್ದರೂ ದುರ್ಬಲವಾಗಿದ್ದರೂ ಅವನು ಅಸೀಮ ಸಾಹಸದಿಂದ ಗೆದ್ದುಕೊಂಡ ಆ ಸ್ವಾತಂತ್ರ್ಯ ನಿರರ್ಥಕವಾಗುತ್ತದೆ.

ಅದರಂತೆಯೆ ವಿರಾಡ್ರೂಪಿಣಿಯಾದ ಭರತಮಾತೆಯನ್ನು ಬಂಧನಮುಕ್ತಳನ್ನಾಗಿ ಮಾಡುವುದಕ್ಕೆ ನಾನಾ ಪ್ರಾಂತಗಳ ಆಕೆಯ ಪುತ್ರರೆಲ್ಲರೂ ಒಟ್ಟುಗೂಡಿ ದುಡಿಯಬೇಕು ಎನ್ನುವ ವಿಚಾರದಲ್ಲಿ ಯಾರಲ್ಲಿಯೂ ಎರಡುಮನಸ್ಸಿಲ್ಲ. ಆದರೆ ಆಕೆಯ ತನುಜಾತೆಯರಂತಿರುವ ಪ್ರಾಂತಗಳೆಲ್ಲವು ಬಹುಕಾಲದಿಂದಲೂ ಬೆಳೆಯಿಸಿಕೊಂಡು ಬಂದ ತಮ್ಮ ತಮ್ಮ ಸಂಪದ್ಯುಕ್ತವಾದ ವ್ಯಕ್ತಿತ್ವಗಳನ್ನೆಲ್ಲ ಬಲಿಗೊಡಬೇಕು ಎಂಬ ರಾಜಕೀಯಾದ್ವೈತವಾದವು ಅನೇಕ ಸದಭಿಪ್ರಾಯದ ಮತ್ತು ಸದ್ಬುದ್ಧಿಯ ಶ್ರದ್ಧಾಳುಗಳಿಗೆ ಅರ್ಥವಾಗುತ್ತಿಲ್ಲ; ಅಲ್ಲದೆ ವಿಲಕ್ಷಣವಾಗಿಯೂ ತೋರುತ್ತಿದೆ.

ಭರತಖಂಡವು ಒಂದು ಜನಾಂಗವೂ ಅಲ್ಲ, ಅನೇಕ ಜನಾಂಗಗಳೂ ಅಲ್ಲ; ಅದು ಅನೇಕ ಜನಾಂಗಗಳ ಒಂದು ಜನಾಂಗ. ಆದ್ದರಿಂದಲೆ ಭರತಮಾತೆಯನ್ನು ಎಷ್ಟರಮಟ್ಟಿಗೆ ಆರಾಧಿಸುತ್ತಿದ್ದೇವೆಯೋ ಅಷ್ಟರಮಟ್ಟಿಗೇ ಕರ್ನಾಟಕ ಮಾತೆಯನ್ನೂ ಪೂಜಿಸಲು ನಮಗೆ ಸಾಧ್ಯವಾಗಿದೆ. ತನ್ನ ಸಂಸಾರವನ್ನು ಪ್ರೀತಿಸಿದ ಮಾತ್ರದಿಂದಲೆ ಯಾರೂ ಸಮಾಜಕ್ಕೆ ವೈರಿಯಾಗಲಾರನು. ಸಮಾಜವೆಂದರೇನು? ಅಂತಹ ಅಸಂಖ್ಯ ಸಂಸಾರಗಳ ಕೂಟವಲ್ಲವೆ? ಎಲ್ಲ ಸಂಸಾರಗಳ ಸುಖವೆ ತಾನೆ ಒಟ್ಟು ಸಮಾಜದ ಸುಖ! ಎಲ್ಲ ಪ್ರಾಂತಗಳ ಅಂಗಸೌಂದರ್ಯದಿಂದ ತಾನೆ ಭರತಮಾತೆ ಸರ್ವಾಂಗ ಸುಂದರಿಯಾಗುತ್ತಾಳೆ! ಇಡೀ ಮನುಷ್ಯನನ್ನು ಜೈಲಿನಿಂದ ಹೊರಗೆ ಬಿಟ್ಟು, ಅವನ ಅಂಗಾಂಗಗಳಿಗೆ ಬೇರೆಬೇರೆಯಾಗಿ ಸಂಕೋಲೆಗಳನ್ನು ಬಿಗಿದರೆ ಅವನು ಸ್ವತಂತ್ರನೆನಿಸಿಕೊಳ್ಳುವುದಿಲ್ಲ. ಆದುದರಿಂದ ಪ್ರಾಂತ ಪ್ರಾಂತಗಳ ವ್ಯಕ್ತಿತ್ವ ರಕ್ಷಣೆಗೆ ಸ್ವಾತಂತ್ರ್ಯವೂ ಭರತಖಂಡದ ಪೂರ್ಣ ಸ್ವಾತಂತ್ರ್ಯದಷ್ಟೇ ಅವಶ್ಯವಾದುದು. ಆದರೆ ಪ್ರತಿಯೊಂದು ಪ್ರಾಂತ್ಯಕ್ಕೂ ಅದರ ಬೆಳೆ, ಅದರ ಕೈಗಾರಿಕೆ, ಅದರ ಹಣಕಾಸಿನ ವ್ಯವಸ್ಥೆ, ಅದರ ನಡೆ, ನುಡಿ, ಸಾಹಿತ್ಯ, ಸಂಸ್ಕೃತಿ ಮೊದಲಾದುವುಗಳನ್ನು ಕಾಪಾಡಿಕೊಳ್ಳುವ ಹಕ್ಕು ಅದಕ್ಕೆ ಬೇಕೇಬೇಕಾಗುತ್ತದೆ. ಆ ಹಕ್ಕಿಗೆ ಭಂಗ ಬಂದರೆ, ಭರತಖಂಡವು ಸಂಪೂರ್ಣ ಸ್ವರಾಜ್ಯವನ್ನು ಸಂಪಾದಿಸಿದರೂ ಆ ಸ್ವಾತಂತ್ರ್ಯವು ಭಗ್ನದರ್ಪಣವಾಗುತ್ತದೆ; ಅಂತಃ ಕಲಹದ ವಿಕಾರವನ್ನು ಮಾತ್ರ ವಿಕಾರವಾಗಿ ಪ್ರತಿಬಿಂಬಿಸುವ ಒಡೆದ ಕನ್ನಡಿಯಾಗುತ್ತದೆ.

ಹಾಗಾಗಬೇಕೆಂದು ಯಾವ ದೇಶಭಕ್ತನೂ ಹಾರೈಸುವುದಿಲ್ಲ. ಹಾಗಾಗದಿರುವಂತೆ ನೋಡಿಕೊಳ್ಳುವುದು ನಮ್ಮ ಪರಮ ಪ್ರಾಣಕರ್ತವ್ಯ. ಕರ್ನಾಟಕದ ಏಕೀಕರಣಕ್ಕೂ ಕನ್ನಡಸಾಹಿತ್ಯದ ಪುನುರುಜ್ಜೀವನಕ್ಕೂ ಕನ್ನಡ ಸಂಸ್ಕೃತಿಯ ಪುನಃಪ್ರಕಾಶನಕ್ಕೂ ಎಡೆಬಿಡದೆ ಮನಮುಟ್ಟಿ ದುಡಿಯುವುದರಿಂದಲೇ ಅಂತಹ ಕರ್ತವ್ಯಪಾಲನೆ ಮಾಡಿದಂತಾಗುತ್ತದೆ.

ಮಕ್ಕಳೆಲ್ಲ ಮನಸ್ಸು ಮಾಡಿದರೆ ನಾಡತಾಯಿ ಮೂಡುತ್ತಾಳೆ. ಅದೃಶ್ಯವಾದವಳು

ಪ್ರತ್ಯಕ್ಷವಾಗುತ್ತಾಳೆ. ಅರೂಪವಾಗಿರುವ ಆಕೆಯ ಆತ್ಮಶಕ್ತಿ ಬೃಹದಾಕಾರದಿಂದ ಗೋಚರವಾಗುತ್ತದೆ. ಆಕೆ ಕವಿಕಲ್ಪನೆಯ ಮಿಥ್ಯಾಸೃಷ್ಟಿಯೆಂದು ಯಾರೂ ತಿಳಿಯದಿರಲಿ. ಏಕೆಂದರೆ, ಬರಿಯ ಮಿಥ್ಯೆಯಿಂದ ಶಕ್ತಿ ಗೋಚರವಾಗದು. ಸುಂಟರಗಾಳಿಯನ್ನು ನೀವೆಲ್ಲರೂ ನೋಡಿದ್ದೀರಿ. ಗಾಳಿಯನ್ನು ಕಂಡಿದ್ದೀರಿ ಎಂದರೆ ಆಶ್ಚರ್ಯವಾಗುತ್ತದೆ. ಆದರೂ ಸುಂಟರಗಾಳಿಯನ್ನು ನೋಡಿದ್ದೇವೆ. ಆ ಅನಿಲಶಕ್ತಿ ತಿರ್ರನೆ ತಿರುಗುವಾಗ ಧೂಳು ತರಗೆಲೆ ಕಸಕಡ್ಡಿಗಳನ್ನೆಲ್ಲ ಸುತ್ತಿಸುತ್ತ ಹೊತ್ತುಕೊಂಡು ಮೇಲೇಳುತ್ತದೆ. ಆಗ ನಮಗೆ ಸುಂಟರಗಾಳಿಯ ಇರವು ದೃಗ್ಗೋಚರವಾಗುತ್ತದೆ. ಹಾಗೆಯೆ ದೇಶದೇವಿಯ ಕೃಪಾಶಕ್ತಿ ತಿರ್ರನೆ ತಿರುಗುತ್ತಾ ಮೇಲೆದ್ದಿತೆಂದರೆ ಜಡವಾಗಿ ಹುಡಿಯಲ್ಲಿ ಹೊರಳುತ್ತಿರುವ ಬಣಗು ತೃಣಕಣ ಕಸಕಡ್ಡಿಗಳೆಲ್ಲ ಸಶಕ್ತವಾಗಿ, ಸಪ್ರಾಣವಾಗಿ, ಸಚೇತನವಾಗಿ ಊರ್ಧ್ವಗಾಮಿಗಳಾಗಿ ಮುಗಿಲಿಗೇರಿ ಲೋಕದೃಷ್ಟಿಯನ್ನೆ ಸೂರೆಗೊಳ್ಳುತ್ತವೆ. ಆ ಶಕ್ತಿವಲಯಕ್ಕೆ ಸಿಕ್ಕುವ ಪ್ರತಿಯೊಬ್ಬನೂ, ಬಡವನಾಗಲಿ ದೊಡ್ಡವನಾಗಲಿ, ಪ್ರಸಿದ್ಧನಾಗಲಿ ಅಪ್ರಸಿದ್ಧನಾಗಲಿ, ಜಾತಿ ಕುಲ ವಯಸ್ಸುಗಳ ತಾರತಮ್ಯವಿಲ್ಲದೆ ಗಗನಕ್ಕೇರುತ್ತಾನೆ;ಕೃತಾರ್ಥನಾಗುತ್ತಾನೆ; ಧನ್ಯನಾಗುತ್ತಾನೆ.

ಕನ್ನಡದ ನೆಲದೊಗ್ಗಟ್ಟಿಗಾಗಿ ಕರ್ನಾಟಕ ಏಕೀಕರಣದ ರಾಜಕೀಯ ಚಳವಳಿ ನಡೆಯುತ್ತಿದೆ. ಕನ್ನಡದ ನಡೆಯ ಮತ್ತು ನುಡಿಯ ಒಗ್ಗಟ್ಟಿಗಾಗಿ ಸಾಹಿತ್ಯದ ಸಾಂಸ್ಕೃತಿಕ ಚಳವಳಿ ಮುಂಬರಿಯುತ್ತಿದೆ. ಕನ್ನಡನಾಡಿನ ಸಿರಿಯ ಏಳ್ಗೆಗಾಗಿ ಆರ್ಥಿಕ ಚಳವಳಿ ಇನ್ನೂ ಸಾಕಷ್ಟು ನಡೆದಿಲ್ಲ; ಇನ್ನೂ ಸ್ಪಷ್ಟವಾಗಿ ರೂಪುಗೊಂಡಿಲ್ಲ. ಆದರೆ ಅದೂ ಇಂದೋ ನಾಳೆಯೋ ರೂಪುಗೊಳ್ಳಲೇಬೇಕಾಗಿದೆ. ಕನ್ನಡನಾಡಿನಲ್ಲಿ ಕನ್ನಡಿಗರ ಬ್ಯಾಂಕುಗಳೂ ಕನ್ನಡಿಗರ ಜೀವವಿಮಾ ಕಂಪೆನಿಗಳೂ ಕನ್ನಡಿಗರ ಕಾರ್ಖಾನೆಗಳೂ ಕನ್ನಡಿಗರ ಕೈಗಾರಿಕೆಗಳೂ ಮತ್ತು ಕನ್ನಡಿಗರ ವ್ಯಾಪಾರಸಂಸ್ಥೆಗಳೂ ಹುಟ್ಟಿ ಬೆಳೆದು ಕರ್ಣಾಟಕದ ಸಂಪದಭ್ಯುದಯದ ಮಟ್ಟವನ್ನು ಮೇಲ್ಗೊಳಿಸಬೇಕಾದರೆ, ನಮ್ಮವರು ಕಣ್ಣುಮುಚ್ಚಿಕೊಂಡು ಹೊರನಾಡಿಗರ ಕೈ ಬಾಯಿ ತುಂಬುವ ತಮ್ಮ ದಾನಶೌರ್ಯದ ವಿಚಾರದಲ್ಲಿ ಇನ್ನೂ ಸ್ವಲ್ಪ ಹೆಚ್ಚಿನ ವಿವೇಚನೆಯಿಂದ ವರ್ತಿಸಬೇಕಾಗಿರುವ ಕಾಲ ಈಗಲೀಗ ಬಂದಿದೆ.

ರಾಜಕೀಯ ಮತ್ತು ಆರ್ಥಿಕ ದೃಷ್ಟಿಯಿಂದ ಕರ್ನಾಟಕ ಏಕೀಕರಣವು ಅತ್ಯಾವಶ್ಯಕ ವಾದುದಾದರೂ, ಸಾಧ್ಯದೂರವಲ್ಲದಿದ್ದರೂ, ಸದ್ಯಕ್ಕೆ ದೂರಸಾಧ್ಯವಾಗಿದೆ. ಭಾಷೆ ಸಂಸ್ಕೃತಿ ಮತ್ತು ಸಾಹಿತ್ಯಗಳ ದೃಷ್ಟಿಯಿಂದ ಆ ಏಕೀಕರಣವು ಈಗ ಆಗಲೇ ಅರೆಪಾಲಿಗೆ ಮಿಗಿಲಾಗಿಯೇ ಕೈಗೂಡಿದಂತಿದೆ. ಆ ಪ್ರಯತ್ನಕ್ಕೆ ಪ್ರತಿನಿಧಿಯಾಗಿ ಕೇಂದ್ರಸಂಸ್ಥೆಯಾಗಿರುವ ಪರಿಷತ್ತೂ, ಆ ಉದ್ಯಮವನ್ನೇ ವಿಧ ವಿಧ ರೀತಿಗಳಿಂದ ಸಫಲಗೊಳಿಸುತ್ತಿರುವ ನೂರಾರು ಕರ್ನಾಟಕ ಸಂಘಗಳೂ, ಸಂಸ್ಥೆಗಳ ಮುಖಾಂತರವಾಗಿಯೊ ಅಥವಾ ಪ್ರತ್ಯೇಕವಾಗಿಯೊ ನಿರಂತರವೂ ಆ ವ್ರತಸಾಧನೆಯಲ್ಲಿಯೆ ದೀಕ್ಷೆಗೊಂಡಿರುವ ಇತರ ಮಹಾನುಭಾವ ವ್ಯಕ್ತಿಗಳೂ ಕೆಲಕಾಲದಲ್ಲಿಯೆ ಆ ಕನಸನ್ನು ನನಸುಗೊಳಿಸುತ್ತಾರೆ ಎಂಬುದರಲ್ಲಿ ಸಂದೇಹವಿಲ್ಲ.

ತಾವೆಲ್ಲರೂ ಅವರಿಗೆ ನೆರವಾದರೆ ಅವರ ತಪಸ್ಸಿದ್ಧಿ ಶೀಘ್ರ ಸಾಧ್ಯವಾಗುತ್ತದೆ.

ರಾಜಕೀಯ ದೃಷ್ಟಿಯಿಂದ ಭೌಗೋಲಿಕ ಕರ್ನಾಟಕವು ಹರಿಹಂಚಿಹೋಗಿದ್ದರೂ ಭಾಷೆ, ಸಾಹಿತ್ಯ, ಕಲೆ, ಸಂಸ್ಕೃತಿ ಇವುಗಳ ದೃಷ್ಟಿಯಿಂದ ಕನ್ನಡನಾಡಿನ ನಿಜ ಬೆಸುಗೆ ಇನ್ನು ಬಿಚ್ಚಿ ಬಿರಿದಿಲ್ಲ. ಕನ್ನಡ ನೆಲವು ನಾಲ್ಕಾರು ಸರಕಾರಗಳ ಬೇರೆಬೇರೆ ಅಧಿಪತ್ಯಕ್ಕೆ ಈಡಾಗಿ ಬಿರಿದಿದ್ದರೂ ಕನ್ನಡಿಗರೊಲವು ಏಕಚ್ಛತ್ರಾಶ್ರಯದಲ್ಲಿದೆ. ಕರ್ನಾಟಕಕ್ಕೆ ಅಖಂಡವಾದ ಭೂಸಾಮ್ರಾಜ್ಯವಿನ್ನೂ ಸಿದ್ಧವಾಗಿದ್ದರೂ ಸಾಹಿತ್ಯ ಸಾಮ್ರಾಜ್ಯವೇನೊ ಸಿದ್ಧವಾಗಿದೆ. ಎಲ್ಲಿಯವರೆಗೆ ಕನ್ನಡಿಗರೆಲ್ಲರೂ, ಅವರು ಎಲ್ಲಿಯೆ ಇರಲಿ, ಪಂಪ, ರನ್ನ, ನಾಗವರ್ಮ ರಾಘವಾಂಕ ನಾರಣಪ್ಪ ಲಕ್ಷ್ಮೀಶ ಮೊದಲಾದ ಕವಿವರ್ಯರ ಸಾಹಿತ್ಯ ಸಿಂಹಾಸನಕ್ಕೆ ತಲೆಬಾಗುತ್ತಾರೋ ಅಲ್ಲಿಯವರೆಗೆ ಕನ್ನಡ ಸಾಮ್ರಾಜ್ಯಕ್ಕೆ ಚ್ಯುತಿಯಿಲ್ಲ. ನುಡಿಯೊಲ್ಮೆ ಯೊಂದಿದ್ದರೆ ದೇಶದೇವಿಯ ಗುಡಿಯ ಕಟ್ಟಡದ ಕಲ್ಲುಗಳ ಬೆಸುಗೆಗೆ ವಜ್ರಗಾರೆಯಾಗುತ್ತದೆ. ಆ ಒಲ್ಮೆ ಮಡಿದಂದು ಕಟ್ಟಡದ ಕಲ್ಲುಗಳು ಸಡಿಲಗೊಂಡು ಗುಡಿ ಕೆಳಕ್ಕುರುಳಿ ನೆಲಸಮವಾಗುತ್ತದೆ. ಸುಡೆಟಾನ್ ಪ್ರಾಂತವು ಜರ್ಮನೇತರ ಸರ್ಕಾರಕ್ಕೆ ಇಪ್ಪತ್ತು ವರ್ಷಗಳಿಂದ ಸೇರಿಹೋಗಿದ್ದರೇನಂತೆ? ಎಲ್ಲಿಯವರೆಗೆ ಆ ಪ್ರಾಂತದ ಜರ್ಮನರು ತಮ್ಮ ಭಾಷೆ, ತಮ್ಮ ಸಾಹಿತ್ಯ, ತಮ್ಮ ಸಂಸ್ಕೃತಿ, ತಮ್ಮ ಗಯಟೆ, ತಮ್ಮ ಷಿಲರ್ ಎಂಬ ಅಭಿಮಾನವನ್ನು ಸಜೀವವಾಗಿಟ್ಟುಕೊಂಡಿದ್ದರೋ ಅಲ್ಲಿಯವರೆಗೆ ಅವರು ಸೂಕ್ಷ್ಮವೂ ಶಾಶ್ವತತರವೂ ಆದ ನೈಜ ಜರ್ಮನ್ ಸಾಮ್ರಾಜ್ಯಕ್ಕೆ ಸೇರಿದವರಾಗಿಯೆ ಇದ್ದರು. ಕೃತಕವಾದ ರಾಜಕೀಯ ವಿಭಜನೆ ನೈಜವಾದ ಸಂಸ್ಕೃತಿಯ ಏಕತೆಯನ್ನು ಎಂದಿಗೂ ಶಾಶ್ವತವಾಗಿ ನಾಶಮಾಡಲಾರರು. ಇಂದಲ್ಲ ನಾಳೆ ನೈಜಕ್ಕೆ ಜಯವಿದೆ, ಕೃತಕಕ್ಕೆ ಪತನವಿದೆ. ಆದ್ದರಿಂದ ವಿವಿಧ ರಾಜಕೀಯ ವಿಭಾಗಗಳಲ್ಲಿ ಹರಿಹಂಚಿಹೋದ ಕರ್ಣಾಟಕದ ಉದಾರಹೃದಯದ ಜನರಲ್ಲಿ ನುಡಿಯೊಲ್ಮೆಯ ಕಿಡಿ ಕೆಡದಂತೆ ನಿರಂತರವೂ ಸಾವೇಶಪ್ರೋತ್ಸಾಹವೀಯ ಬೇಕಾದುದು ಕರ್ನಾಟಕದ ಪುನರುತ್ಥಾನಕ್ಕಾಗಿ ದುಡಿಯಲು ದೀಕ್ಷೆಗೊಂಡ ತಪಸ್ವಿಗಳೆಲ್ಲರ ಕರ್ತವ್ಯ. ಏಕೆಂದರೆ, ನುಡಿ ಬಿಟ್ಟರೆ ನಾಡು ಬಿಟ್ಟಂತೆ. ಭಾಷೆಗೇಡಿ ದೇಶಗೇಡಿಯೂ ಆಗುತ್ತಾನೆ. ಅನಿವಾರ್ಯ.

ತಪಸ್ಸು ನಿರ್ವಿಘ್ನವಾಗಿ ಸಾಗುವುದು ಅಪೂರ್ವವಂತೆ; ಪುರಾಣಕಥೆಗಳನ್ನು ನೋಡಿದರೆ, ಅಸಂಭವವೆಂದರೂ ಎನ್ನಬಹುದು. ಬಹುಶಃ ತಪಸ್ಸಿನ ಬೆಂಕಿಗೆ ವಿಘ್ನದ ಕಟ್ಟಿಗೆ ಅವಶ್ಯಕವೊ ಏನೊ! ಪ್ರತಿಯೊಬ್ಬ ವಿಶ್ವಾಮಿತ್ರನಿಗೂ ತಪೋಭಂಗಕಾರಿಣಿಯಾದ ಮೇನಕೆ ಎಲ್ಲಿಂದಲೊ ಬರುತ್ತಾಳೆ! ಕನ್ನಡ ನುಡಿಯೊಗ್ಗಟ್ಟಿನ ವಿಶ್ವಾಮಿತ್ರನ ತಪಸ್ಸಿಗೂ ಅಪ್ಸರಿಯರಿಂದ ಅಪಾಯ ತಪ್ಪಿದ್ದಲ್ಲ. ಅಪಾಯ ಬರುವುದು ಅಪ್ಸರಿಯಿಂದಲ್ಲ; ಅಪ್ಸರಿಯ ಸಂಗದಿಂದ ತಪೋಭಂಗವಾಗುವುದಿಲ್ಲ ಎಂಬ ಬಿನ್ನಾಣದ ವಾದದಿಂದ. ಅಂತಹ ವಾದವು ಅದೂರ ದೃಷ್ಟಿಯ, ಅಲ್ಪಮತಿಯ, ಅನುಭವಹೀನತೆಯ ಆತ್ಮ ವಂಚನೆಯಲ್ಲದೆ ಮತ್ತೇನು? ಅಲಂಕಾರದ ತೆರೆಯನ್ನೆತ್ತಿ ಅದರ ಹಿಂದುಗಡೆಯ ಕಠೋರ ಸತ್ಯವನ್ನು ಪ್ರದರ್ಶಿಸುವುದಕ್ಕೆ ಈ ಲಲಿತ ಸನ್ನಿವೇಶದಲ್ಲಿ ನನಗೆ ಮನಸ್ಸು ಬರುವುದಿಲ್ಲ. ಆದರೂ ಇಷ್ಟು ಮಾತ್ರ ಹೇಳುತ್ತೇನೆ:

ತಮ್ಮ ಮನೆಯ ನೆಮ್ಮದಿಯ ವಿಷಯದಲ್ಲಿ ಹೆರರ ಮಾತು ಸಲಹೆಯಾಗಿರಬೇಕೇ ಹೊರತು ವೇದವಾಕ್ಯವಾಗಿರಬಾರದು. ಏಕೆಂದರೆ, ನಮ್ಮ ಕಷ್ಟ ಸಂಕಟಗಳೂ ಆಸೆ ಬಯಕೆಗಳೂ ಅನ್ಯರ ಮನಸ್ಸಿಗೆ ಸಂಪೂರ್ಣವಾಗಿ ಬರಲಾರವೆಂದೇ ತೋರುತ್ತದೆ.

ಕನ್ನಡ ಜನತೆ ಎಚ್ಚತ್ತಿದೆ; ಕನ್ನಡ ಸಾಹಿತ್ಯ ಆ ಎಚ್ಚರವನ್ನು ಮರುಬಿಂಬಿಸುತ್ತಿದೆ ಮತ್ತು ಹುರುಪುಗೊಳಿಸುತ್ತಿದೆ; ಲೇಖಕರು ಹೆಚ್ಚು ಹೆಚ್ಚು ಆಸಕ್ತಿಯಿಂದ ವಿಜ್ಞಾನ ವ್ಯಾಪಾರಾದಿ ಶಾಸ್ತ್ರವಿಷಯಗಳನ್ನು ಕುರಿತು ಗ್ರಂಥಗಳನ್ನು ಬರೆಯುತ್ತಿರುವಂತೆಯೆ ಜನರೂ ಅವುಗಳನ್ನು ಕೊಂಡು, ಓದಿ, ಮುಂದುವರಿಯುತ್ತಿದ್ದಾರೆ ಎಂಬ ನಂಬುಗೆ ಹಬ್ಬುತ್ತಿದೆ. ಜನರ ಸಾಹಿತ್ಯೋತ್ಸಾಹಕ್ಕೆ ಮಾಪನ ಯಂತ್ರಗಳಂತಿರುವ ಪುಸ್ತಕವ್ಯಾಪಾರಿಗಳನ್ನೂ ಪತ್ರಿಕಾ ಸಂಪಾದಕರುಗಳನ್ನೂ ಕೇಳಿ ತಿಳಿಯುವವರಿಗೆ ಮಾತ್ರ ಆ ನಂಬುಗೆ ಸ್ವಲ್ಪಮಟ್ಟಿಗಾದರೂ ಅತಿಶಯೋಕ್ತಿಯಾಗಿರುವಂತೆ ತೋರುತ್ತದೆ. ಈ ಅಪನಂಬಿಕೆ ಶಿವಮೊಗ್ಗೆಯಂತಹ ಸುಶಿಕ್ಷಿತ ನಾಗರಿಕ ನಗರಕ್ಕೆ ಅನ್ವಯಿಸದಿರಬಹುದು. ಆದರೆ ಶಿವಮೊಗ್ಗೆಯೊಂದರ ಜಾಗ್ರತಿ ಸಮಸ್ತ ಕರ್ನಾಟಕದ ಜಾಗ್ರತಿಯಲ್ಲ. ಶಿವಮೊಗ್ಗೆಯ ಜನರನ್ನು ತೃಪ್ತಿಗೊಳಿಸಿ ಮೆಚ್ಚಿಸುವುದಕ್ಕಲ್ಲ ಈ ಪ್ರಶಂಸೆ, ಅವರನ್ನು ಇನ್ನೂ ಕಾರ್ಯೋನ್ಮುಖರನ್ನಾಗಿ ಮಾಡುವುದಕ್ಕೆ.

ಸಾಹಿತ್ಯಪ್ರಚಾರವು ಆವೇಶದಾವಾಗ್ನಿಯ ಪ್ರಸಾರವೆಂದು ತಿಳಿಯಿರಿ. ವಾಙ್ಮಂತ್ರ ಶಕ್ತಿಗೆ ಶಿಲೆ ಸಜೀವವಾಗುತ್ತದೆ; ನುಡಿಕಲೆಯ ಹೊಳೆಯಲ್ಲಿ ಮಿಂದ ಹೊಲೆ ಹೊಸ ಮಡಿಯಾಗುತ್ತದೆ.

ಕರ್ಣಾಟಕ ಭಕ್ತರಲ್ಲಿ, ಕನ್ನಡ ಸಾಹಿತ್ಯ ಸೇವಕರಲ್ಲಿ ಕನ್ನಡಮ್ಮನ ಮಕ್ಕಳಲ್ಲಿ ಆ ನಾಡದೇವಿಯ ಉಪಾಸಕನಾದ ಕಬ್ಬಿಗನೊಬ್ಬನು ಇಂತೆಂದು ಪ್ರಜ್ಞಾಪಿಸುತ್ತಿದ್ದಾನೆ:

ನಾವು ತೋರಿಸುತ್ತಿರುವ ಆಸಕ್ತಿ ಶ್ಲಾಘನೀಯವಾಗಿದೆ; ಆದರೂ ಸಾಲದಾಗಿದೆ.

ನಮ್ಮ ಇಚ್ಛೆ ಎಚ್ಚತ್ತಿದೆ; ಆದರಿನ್ನೂ ಮುನ್ನುಗ್ಗಿ ಹೋರಾಡುವುದನ್ನು ಕಲಿಯಬೇಕಾಗಿದೆ.

ನಮ್ಮ ಆಸೆ ಕೆರಳಿದೆ; ಆದರಿನ್ನೂ ಕಾರ್ಯಕಾರಿಯಾಗಿ ಸೃಷ್ಟಿಸಲು ತೊಡಗಿಲ್ಲ.

ನಮ್ಮ ಆತ್ಮಗೌರವದ ಸರ್ಪಕ್ಕೆ ಅವಹೇಳನದ ಪದಾಘಾತವಾಗಿದೆ; ಆದರಿನ್ನು ಹೆಡೆಯೆತ್ತಿ ನಿಂತಿಲ್ಲ.

ನಮ್ಮ ಸ್ವಾರ್ಥತೆ ಬಲಿಪೀಠಕ್ಕೇರಿದೆ; ಆದರಿನ್ನೂ ದೃಢಚಿತ್ತದ ಖಡ್ಗವು ಕೆಳಗಿಳಿದಿಲ್ಲ. ಆದ್ದರಿಂದ ತ್ಯಾಗದೇವತೆ ಪ್ರತ್ಯಕ್ಷಳಾಗಿಲ್ಲ.

ತ್ಯಾಗದೇವತೆ ಪ್ರತ್ಯಕ್ಷಳಾಗುವವರೆಗೂ ಕರ್ನಾಟಕ ದೇಶದೇವಿ ನಮಗೆ ಸುಪ್ರಸನ್ನಳಾಗುವುದಿಲ್ಲ.

ದೇವಿ ಪ್ರಸನ್ನಳಾಗುವವರೆಗೂ ನಮಗೆ ನಿದ್ದೆಯಿಲ್ಲ, ಸುಖವಿಲ್ಲ, ಶಾಂತಿಯಿಲ್ಲ!

# ಕನ್ನಡ ಡಿಂಡಿಮ – ಮುನ್ನುಡಿ

## ಕನ್ನಡ ದೀಕ್ಷೆ

ಕನ್ನಡಕ್ಕಾಗಿ ಕೈಯೆತ್ತು; ನಿನ್ನ ಕೈ ಕಲ್ಪವೃಕ್ಷವಾಗುತ್ತದೆ! ಕನ್ನಡಕ್ಕಾಗಿ ಕೊರಳೆತ್ತು; ಅಲ್ಲಿ ಪಾಂಚಜನ್ಯ ಮೂಡುತ್ತದೆ! ಕನ್ನಡಕ್ಕಾಗಿ ಕಿರುಬೆರಳೆತ್ತಿದರೂ ಸಾಕು ಇಂದು ಅದೆ ಗೋವರ್ಧನ ಗಿರಿಧಾರಿಯಾಗುತ್ತದೆ...

## ಸಂಸ್ಕೃತಿ ಕರ್ಣಾಟಕ

ನಮ್ಮ ಕರ್ಣಾಟಕ ಬರಿಯ ದೇಶ ವಿಸ್ತೀರ್ಣಕ್ಕೆ ಮಾತ್ರ ಸಂಬಂಧಪಟ್ಟುದಲ್ಲ;ಕಾಲ ವಿಸ್ತೀರ್ಣವನ್ನು ನಾವು ಪ್ರಮುಖವಾಗಿ ಭಾವಿಸುತ್ತೇವೆ. ಅದನ್ನು ಚದರ ಮೈಲಿಗಳಿಂದ ಅಳೆದರೆ ಸಾಲದು; ಚದರ ವರ್ಷಗಳಿಂದಲೂ ಗುರುತಿಸಬೇಕು. ವ್ಯಷ್ಟಿರೂಪವಾದ ವ್ಯಕ್ತಿಗೆ ಕೋಶಗಳಿರುವಂತೆ ಸಮಷ್ಟಿ ರೂಪವಾದ ದೇಶಕ್ಕೂ ಕೋಶಗಳಿವೆ ಎಂದು ಭಾವಿಸುವುದಾದರೆ ಕರ್ಣಾಟಕಕ್ಕೆ ಅನ್ನಮಯ ರೂಪವಾದ ಭೂಪ್ರದೇಶವಿರುವಂತೆಯೇ ಪ್ರಾಣಮನೋಮಯ ರೂಪವಾದ ಚಿತ್ ಪ್ರದೇಶವೂ ಇದೆ. ಚಿನ್ಮಯವೂ ಆಧ್ಯಾತ್ಮಿಕವೂ ಆಗಿರುವ ಆ ಸಂಸ್ಕೃತಿ ಕೋಶವೆ ಕರ್ಣಾಟಕದೇವಿಯ ಸೂಕ್ಷ್ಮ ಶರೀರ. ನಶ್ವರವು ಚಂಚಲವೂ ಕಾಲ ಸನ್ನಿವೇಶ ವಶವೂ ಆಗಿರುವ ಭೂವಿಸ್ತೀರ್ಣ ರೂಪವಾದ ಲೀಲಾಸ್ಥೂಲ ಶರೀರವನ್ನು ಸರ್ವದಾ ಧಾರಣೆ ಮಾಡುತ್ತಿರುತ್ತದೆ ಆ ನಿತ್ಯ ಭಾವತನು. ಆ ಜ್ಯೋತಿಶ್ಶರೀರಿಯೆ ದೇವಿ. ಆ ದೇವಿಯ ಉಪಾಸನೆಯೆ ಕವಿ ಕಲಾವಿದ ತತ್ತ್ವಜ್ಞ ಸಾಧಕರಾದಿಯಾಗಿ ಸಕಲರ ಗಂತವ್ಯ ಮತ್ತು ಗಮ್ಯ. ಕರ್ಣಾಟಕದ ಕಾವ್ಯ ಸಂಸ್ಕೃತಿಗಳನ್ನು ಹೃದಯದಲ್ಲಿ ಪ್ರತಿಷ್ಠಾಪಿಸಿಕೊಂಡ ಕನ್ನಡಿಗನು ಭೌಗೋಲಿಕವಾದ ಎಲ್ಲೆಗಳಿಂದ ಹೆದರಬೇಕಾದ್ದಿಲ್ಲ... ಕನ್ನಡ ಕಾವ್ಯಗಳನ್ನೋದುವಾತನು ಅಮೆರಿಕೆಯಲ್ಲಿದ್ದರೂ ಅದು ಕರ್ಣಾಟಕವೆ, 'ಪಂಪನನೋದುವ ನಾಲಗೆ' ಮಿಸಿಸಿಪಿ ಹೊಳೆಯ ನೀರನ್ನು ಈಂಟಿದರೂ ಅದು ಕಾವೇರಿಯೆ. 'ಕುಮಾರವ್ಯಾಸನನಾಲಿಪ ಕಿವಿ' ಆಂಡೀಸ್ ಪರ್ವತವನ್ನೇರುತ್ತಿದ್ದರೂ ಅದು ಸಹ್ಯಾದ್ರಿಯೆ. 'ಕಾವೇರಿಯಿಂದಮಾ ಗೋದಾವರಿ ವರಮಿರ್ದನಾಡು' ಎಂದು ನೃಪತುಂಗನು ಬಣ್ಣಿಸಿದ ಕರ್ಣಾಟಕದ ನೆಲದ ಎಲ್ಲೆ ಇಂದು ಭೌಗೋಲಿಕವಾಗಿ ವ್ಯತ್ಯಸ್ತವಾಗಿರುವುದಕ್ಕಾಗಿ ನಾವು ಪರಿತಪಿಸುವುದು ಅನಾವಶ್ಯಕ. ಕಾವೇರಿ ಮತ್ತು ಗೋದಾವರಿಗಳು ನಿತ್ಯವೂ ನಿರ್ದಿಗಂತವಾಗಿ ವಿಸ್ತರಿಸುತ್ತಿರುವ ಕರ್ಣಾಟಕದ ಸಾಂಸ್ಕೃತಿಕ ಹಾಗೂ ಆಧ್ಯಾತ್ಮಿಕ ಭೂಮಿಕೆಯ ಗಡಿಗಳಿಗೆ ಸಂಕೇತ ಮಾತ್ರಗಳಾಗಿರಲಿ. ಅವು ಭಾವೋಪಯೋಗಿಗಳೆ ಹೊರತು

ಲೋಕೋಪಯೋಗಿಗಳಾಗುವುದಿಲ್ಲ. ಏಕೆಂದರೆ ಮೈಸೂರಿನ ಎಲ್ಲೆ ರಾಜಕೀಯದಿಂದ ಭೌಗೋಲಿಕವಾಗಿ ನಿರ್ಣಯವಾಗಿದ್ದರೂ ಕರ್ಣಾಟಕದ ಸಾಂಸ್ಕೃತಿಕ ಮೇರೆ ನಮ್ಮೆಲ್ಲರಿಂದ ಮಾನಸಿಕವಾಗಿ ನಿರಂತರವೂ ನಿರ್ಣಯವಾಗುತ್ತಿರುತ್ತದೆ. ಕನ್ನಡಿಗರ ಸಂಸ್ಕೃತಿಗೆ ಪ್ರತಿಮಾ ರೂಪವಾಗಿರುವ ಕರ್ಣಾಟಕದ ವಿಸ್ತಾರ ನಿರ್ದಿಗಂತವಾದದ್ದು; ಅದರ ಔನ್ನತ್ಯ ನಿಶ್ಶಿಖರವಾದದ್ದು. ಅಂತಹ ಸಾಂಸ್ಕೃತಿಕ ಕರ್ಣಾಟಕದ ಸ್ಥಾಪನೆ, ರಕ್ಷಣೆ, ಪೋಷಣೆ ಮತ್ತು ವಿಸ್ತರಣೆಗಳಿಗಾಗಿಯೆ ಸಹೃದಯ ಸಮಷ್ಟಿ ರೂಪವಾದ ಸಾಹಿತ್ಯ ಪರಿಷತ್ತು ನಿರಂತರವೂ ತಪಸ್ವಿಯಾಗಿ ದುಡಿಯಬೇಕಾಗಿದೆ. ಏಕೆಂದರೆ ಭೌಗೋಲಿಕವಾಗಿ ಕರ್ಣಾಟಕ ರಾಜ್ಯ ಸ್ಥಾಪನೆಯಾಯಿತು ಎಂದು ನಾವು ಸಡಿಲ ಬಾಳಿಗರಾಗಿ ಸುಮ್ಮನಾದರೆ ರಾಜ್ಯಸ್ಥಾಪನೆಯ ಮೂಲೋದ್ದೇಶವೆ ವಿಫಲವಾಗುತ್ತದೆ.

## ವಿವಿಧ ಭಾರತಿ

ಕೊಳಲಿಗೆ ಅನೇಕ ಕಣ್ಣುಗಳಿರುವಂತೆ ಭಾರತಿಗೆ ಬಹು ಜಿಹ್ವೆಗಳಿವೆ. ಪೀಪಿ ಊದುವ ಹುಡುಗನಿಗೆ ಕೊಳಲಿಗೆ ಅನೇಕ ರಂಧ್ರಗಳಿರುವುದು ತೊಂದರೆಯ ವಿಷಯವಾಗುತ್ತದೆ; ಆದರೆ ವೇಣುವಾದನ ನಿಪುಣನಿಗೆ ಆ ರಂಧ್ರಗಳ ಅನೇಕತೆಯೆ ಸಂಗೀತದ ಸ್ವರಮೇಲ ಮಾಧುರ್ಯಕ್ಕೆ ಅವಶ್ಯ ಸಾಧನವಾಗುತ್ತದೆ. ಸ್ವಾತಂತ್ರ್ಯಾನಂತರ ಭಾರತದಲ್ಲಿ ಭಾಷಾನುಗುಣ ರಾಜ್ಯಗಳ ರಚನೆಯಾಗಿರುವುದು ಕೆಲವು ಅರೋಚಿಭೀರುಗಳಿಗೆ ರುಚಿಸುತ್ತಿಲ್ಲ; ಹಿಡಿಸುತ್ತಿಲ್ಲ; ಕೆಲವರಂತೂ ದಿಗಿಲುಗೊಂಡಿದ್ದಾರೆ. ಹೋರಾಡಿ ಸಂಪಾದಿಸಿ ಸ್ವಾತಂತ್ರ್ಯಕ್ಕೆ ಸ್ವಭಾಷಾಪ್ರೇಮದ ಅತಿರೇಕದಿಂದ ಉಂಟಾಗಬಹುದಾದ ಅನೈಕ್ಯತೆ ಎಲ್ಲಿ ಧಕ್ಕೆ ತರುತ್ತದೆಯೊ ಎಂದು ಅವರು ಹೆದರಿದ್ದಾರೆ.. ರೋಗ ಗುಣವಾದ ಮೇಲೆಯೂ ಅದನ್ನು ಮತ್ತೆ ಮತ್ತೆ ನೆನೆಯುತ್ತಿರುವುದು ಆರೋಗ್ಯ ಲಕ್ಷಣವಾಗುವುದಿಲ್ಲ. ಭಾಷಾಪ್ರಾಂತ ಸಿದ್ಧವಾದ ಮೇಲೆಯೂ ಮುಂದೆ ನಡೆಯಬೇಕಾಗಿರುವ ರಚನಾತ್ಮಕ ಕಾರ್ಯಗಳಲ್ಲಿ ಆಸಕ್ತರಾಗಿ ತೊಡಗದೆ ಮತ್ತೆ ಆ ವಿಚಾರವಾಗಿ ತಲೆ ಕೆಡಿಸಿಕೊಳ್ಳುವುದು ಹಿತಕರವಲ್ಲ.

## ಕರ್ಣಾಟಕ ಭಾರತ

ಕರ್ಣಾಟಕ ಭೌಗೋಲಿಕವಾಗಿ ಭಾರತದ ಇತರ ಪ್ರದೇಶಗಳಿಂದ ಭಿನ್ನವಾಗಿ ಕಂಡರೂ ಸಾಂಸ್ಕೃತಿಕವಾಗಿ ಅಷ್ಟೇನೂ ಭಿನ್ನವಲ್ಲ; ಆಧ್ಯಾತ್ಮಿಕವಾಗಿ ನೋಡಿದರಂತೂ ಸಂಪೂರ್ಣ ಅಭಿನ್ನ. ಉಡುಗೆತೊಡುಗೆ ಉಣಿಸು ನಡೆನುಡಿಗಳಲ್ಲಿ ಪ್ರಾಂತದಿಂದ ಪ್ರಾಂತಕ್ಕೆ ಸ್ವಲ್ಪ ವ್ಯತ್ಯಾಸ ತೋರಿದರೂ ನಮ್ಮೆಲ್ಲರ ಕನಸೂ ಒಂದೇ, ನಮ್ಮೆಲ್ಲರ ಮನಸ್ಸೂ ಒಂದೇ, ನಮ್ಮೆಲ್ಲರ ಗುರಿಯೂ ಒಂದೇ; ನಾವೆಲ್ಲ ಭಾರತೀಯರು. ನಮ್ಮ ಭಾಷೆ ಸಾಹಿತ್ಯಗಳು ಆ ಏಕೈಕವಾದ ಭಾರತೀಯ ಸಂಸ್ಕೃತಿ ಸಮುದ್ರದ ಬೃಹತ್ ತರಂಗ ಮಾತ್ರಗಳಾಗಿವೆ... ಕೇರಳ ಕರ್ಣಾಟಕ ಆಂಧ್ರಾದಿ ಪ್ರದೇಶಗಳೆಲ್ಲ ಆ ಭಾರತೀಯ

ಅಂಗರೂಪಗಳು, ಅಂಶರೂಪಗಳು. ಭಾರತಿ ತಾಯಿ. ಇವರೆಲ್ಲ ಆ ತಾಯಿಯ ತನುಜಾತೆಯರು; ತನುವಿನಿಂದ ಜಾತರಾದವರು; ಮಕ್ಕಳು. ಅಂಗಾಂಗಗಳ ಕ್ಷೇಮ ಅಂಗಿಯ ಕ್ಷೇಮದಿಂದ ಅಭಿನ್ನ. ಅಂಗಿಯ ಕ್ಷೇಮದಿಂದಲೆ ಅಂಗಾಂಗಗಳ ಕ್ಷೇಮವೂ ಸಿದ್ಧವಾಗುತ್ತದೆ...ಕೇರಳಾಭಿಮಾನ ಕರ್ಣಾಟಕಾಭಿಮಾನ ಆಂಧ್ರಾಭಿಮಾನ ಇತ್ಯಾದಿ ದೇಶಭಾಷಾ ಕ್ಷೇತ್ರಾಭಿಮಾನಗಳು ದ್ವೇಷಕ್ಕಾಗಲಿ ಅಸಹನೆಗಾಗಲಿ ಅನ್ಯಾಯಕ್ಕಾಗಲಿ ಆಕ್ರಮಣ ಬುದ್ಧಿಗಾಗಲಿ ಎಡೆಗೊಡದೆ ಭಾರತಾಭಿಮಾನದ ಆಶ್ರಯದಲ್ಲಿ, ವೈಯಕ್ತಿಕವಾದ ಮತ್ತು ಅನುಚಿತವಾದ ಸ್ವಾರ್ಥತೆಗಳನ್ನು ತ್ಯಜಿಸಿ, ತಮ್ಮ ತಮ್ಮ ಏಳಿಗೆಯನ್ನು ಸಾಧಿಸಬೇಕು. ಏಕೆಂದರೆ ಸರ್ವಕ್ಷೇಮದ ಪ್ರಣಾಳದಲ್ಲಿಯೆ ಸ್ವಕ್ಷೇಮವೂ ಹರಿದು ಬರುತ್ತದೆ... ಕರ್ಣಾಟಕಮಾತೆಗೆ ಸಲ್ಲುವ ಜಯಕಾರ ಆಕೆ ಭಾರತ ಜನನಿಯ ತನುಜಾತೆಯಾಗಿರುವುದರಿಂದಲೆ. ಅಂಗೋದ್ಭವೆಯಾಗಿ ವಿನಾ ಕರ್ನಾಟಕಕ್ಕೆ ಬೇರೆಯ ಅಸ್ತಿತ್ವವೆಲ್ಲಿ?... ನಾನು ರಾಜ್ಯದೃಷ್ಟಿಯಿಂದ ಕರ್ಣಾಟಕದವನು; ಭಾಷಾದೃಷ್ಟಿಯಿಂದ ಕನ್ನಡಿಗನು; ಆದರೆ ಸಂಸ್ಕೃತಿಯ ದೃಷ್ಟಿಯಿಂದ ಮತ್ತು ರಾಷ್ಟ್ರದೃಷ್ಟಿಯಿಂದ ಭಾರತೀಯನು. ನನ್ನ ಕರ್ಣಾಟಕತ್ವ ಭಾರತೀಯತ್ವಕ್ಕೆ ಎಂದಿಗೂ ಎದುರು ನಿಲ್ಲುವುದಿಲ್ಲ.

## ಮೈಸೂರು–ಕರ್ಣಾಟಕ

ವಾಸ್ತವವಾಗಿ ಏಕೀಕರಣ ಮತ್ತು ಅಖಂಡತೆ ಹೊಚ್ಚಹೊಸದಾಗಿ ಸೃಷ್ಟಿಯಾದುದೇನೂ ಅಲ್ಲ. ಸಾಂಸ್ಕೃತಿಕವಾಗಿ ದೇಶದ ಮನೋಮಂಡಲದಲ್ಲಿ ಯಾವುದು ಅನೇಕ ಶತಮಾನಗಳಿಂದಲೂ ಅಚ್ಯುತವಾದ ಭಾವಸತ್ಯವಾಗಿದ್ದಿತೊ ಅದು ಈಗ ಭೌಗೋಲಿಕವಾಗಿಯೂ ಸಿದ್ಧವಾಯಿತೆಷ್ಟೊ, ಅಷ್ಟೆ. ಅದನ್ನು ಯಾವ ಹೆಸರಿನಿಂದ ಕರೆದರೂ ಅದು ನಮಗೆ ಕರ್ಣಾಟಕವೆ.... ಮೈಸೂರು ಎಂಬ ರಾಜಕೀಯ ನಾಮಧೇಯದಿಂದ ಸಿದ್ಧವಾಗಿರುವ ಈ ಸಾಂಸ್ಕೃತಿಕ ನಾಮಧೇಯದ ಕರ್ಣಾಟಕದ ಲೌಕಿಕ ಅಭ್ಯುದಯ ಸಾಧನೆ ಪ್ರಧಾನತಃ ರಾಜಕೀಯ ವೈಜ್ಞಾನಿಕ ಆರ್ಥಿಕಾದಿ ಕ್ಷೇತ್ರಗಳಿಗೆ ಸಂಬಂಧಪಟ್ಟಿದ್ದು.. ಭವಲೋಕದಲ್ಲಿ ಏನನ್ನು ಸಾಧಿಸಬೇಕಾಗಿದ್ದರೂ ಮೊದಲು ಅದನ್ನು ಭಾವಲೋಕದಲ್ಲಿ ಬಿತ್ತಬೇಕು... ಒಮ್ಮೊಮ್ಮೆ ನಾನು ಸಿಟ್ಟಿನಿಂದ ಹೇಳುವುದುಂಟು: ಈ ರಾಜ್ಯಕ್ಕೆ ಮೈಸೂರು ಎನ್ನುವ ಹೆಸರು ಇರುವವರೆಗೆ ಮುಕ್ತಿ ಇಲ್ಲ ಎಂದು. ಹೆಸರಿನಲ್ಲಿ ಏನಿದೆ ಎನ್ನಬಹುದು. ಹೆಸರಿನಲ್ಲಿ ಎಲ್ಲವೂ ಇದೆ ಎಂದು ನಾನು ಹೇಳುತ್ತೇನೆ. ಹೆಸರಿನಿಂದ ಬಹಳ ಕೆಲಸ ನಡೆಯುತ್ತದೆ. ಕೆಲವು ಆಸೆಗಳು ಪ್ರಕೃತಿನಿಯಮದ ಪ್ರಕಾರ ಸಿದ್ಧಿಪಡೆಯಲೇಬೇಕು. ಕರ್ಣಾಟಕ ಎನ್ನುವುದು ಜನಮನದ ಅಭೀಪ್ಸೆ. ಅದು ಈಡೇರಲೇಬೇಕು. ಸಾಹಿತಿಗಳ ಹಾರೈಕೆಯ ಜತೆಗೆ ರಾಜಕಾರಣಿಗಳ ಪ್ರಯತ್ನವೂ ಸೇರಿ ಕನ್ನಡನಾಡಿನ ಏಕೀಕರಣವಾಯಿತು. ಇದಕ್ಕೊಂದು ಹೆಸರಿಡುವ ಕೆಲಸ ಇನ್ನೂ ಉಳಿದಿದೆ.... ಕರ್ಣಾಟಕ ಎಂದು ಹೆಸರಿಡುವ ವಿಚಾರದಲ್ಲಿ ಏನೋ ಒಂದು ತರಹದ ಒಲಿದು ಒಂದಾದವರ ಮುನಿಸಿನ ಕಚ್ಚಾಟ ನಡೆಯುತ್ತಿರುವಂತೆ ತೋರುತ್ತಿದೆ. ಆರ್ಷೇಯ ಕಾಲದಿಂದಲೂ ಭೌಗೋಲಿಕವಾಗಿ ಬೇರೆ ಬೇರೆ ಹೆಸರಿದ್ದ

ಬಹು ರಾಜ್ಯಗಳಲ್ಲಿ ಹಂಚಿಹೋಗಿದ್ದಾಗಲೂ, ಯಾವ ಪ್ರದೇಶವನ್ನುಕವಿಗಳೂ ಸಾಹಿತಿಗಳೂ ಮತಪ್ರಚಾರಕರೂ ಜಗದ್ಗುರುಗಳೂ ಮಹಾಜನರೂ ಇತಿಹಾಸಕಾರರೂ ವಿದೇಶಿಯ ಪ್ರವಾಸಿಗಳೂ 'ಕರ್ಣಾಟಕ' ಎಂದು ಕರೆದೂ ಕರೆದೂ ಅದನ್ನೊಂದು 'ಮಂತ್ರ'ವನ್ನಾಗಿ ಮಾಡಿ ಅದಕ್ಕೆ 'ಶಕ್ತಿ' ನೀಡಿದ್ದಾರೆಯೋ ಆ ಪ್ರದೇಶಕ್ಕೆ ಕರ್ಣಾಟಕ ಎಂಬ ಹೆಸರು ಅತ್ಯಂತ ಸಮಂಜಸವೂ ಉಚಿತವೂ ಆಗಿರುವುದರಿಂದ ಇಂದೊ ನಾಳೆಯೊ ಅದು, ರಾಜಕೀಯ ಸ್ಪರ್ಧಾಭಾವದಿಂದಲ್ಲದೆ ಸಾಂಸ್ಕೃತಿಕವಾದ ಮೈತ್ರಿಯಿಂದಲೆಯೇ ಸರ್ವಸಂತೋಷದಿಂದ ಸರ್ವಸಮ್ಮತವಾಗಿ ಘೋಷಿತವಾಗುತ್ತದೆ ಎಂಬುದು ಕವಿಯ ಶ್ರದ್ಧೆ.

## ಕನ್ನಡದ ಹಿರಿಮೆ

ಹತ್ತನೆಯ ಶತಮಾನದಲ್ಲಿಯೆ, ಜಗತ್ತಿನ ಯಾವ ಮಹಾಕಾವ್ಯಗಳಿಗೂ ಹೆಗಲೆಣೆಯಾಗಿ ನಿಲ್ಲುವಂತಹ ಮಹಾಕಾವ್ಯ ಕೃತಿಗಳು ಕನ್ನಡದಲ್ಲಿ ಸೃಷ್ಟಿಯಾಗಿರುವ ವೈಭವದ ದೃಶ್ಯ ನಮ್ಮ ವಿಸ್ಮಿತ ನೇತ್ರಗಳಿಗೆ ಗೋಚರವಾಗುತ್ತದೆ. ಷೇಕ್‌ಸ್ಪಿಯರ್ ಮಹಾಕವಿ ಹುಟ್ಟುವುದಕ್ಕೆ ಆರುನೂರು ವರ್ಷಗಳ ಮುನ್ನವೇ ಮಹಾಕವಿ ಪಂಪ ಜನಿಸಿದ್ದನೆಂಬುದನ್ನು ನೆನೆದರೆ ನಿಮಗೆ ಕನ್ನಡ ಸಾಹಿತ್ಯದ ಹಿರಿಮೆಗರಿಮೆಗಳ ಸ್ವರೂಪ ಇನಿತಾದರೂ ಮನೋಗೋಚರವಾಗಬಹುದು. ಪಂಪನ ಮಹಾಕಾವ್ಯ ಕ್ರಿ.ಶ. ೯೪೧ರಲ್ಲಿ ಹುಟ್ಟಿದ್ದರೆ, ಷೇಕ್‌ಸ್ಪಿಯರ್‌ನ ಮೊದಲ ಕೃತಿ ಹುಟ್ಟಿದ್ದು ಕ್ರಿ.ಶ. ೧೫೯೩ರಲ್ಲಿ. 'ಗದಾಯುದ್ಧ' ಕಾವ್ಯದ ಅದ್ಭುತಕವಿ ರನ್ನನ ಕಾಲ ಹತ್ತನೆ ಶತಮಾನದ ಕೊನೆಯ ಭಾಗವಾದರೆ, 'ಪ್ಯಾರಡೈಸ್ ಲಾಸ್ಟ್' ಮಹಾಕಾವ್ಯದ ಕರ್ತೃ ಮಿಲ್ಟನ್ ಕವಿಯ ಕಾಲ ಹದಿನೇಳನೆ ಶತಮಾನದ ಆದಿಭಾಗವಾಗುತ್ತದೆ... ಈ ಮೂವತ್ತು ನಾಲ್ವತ್ತು ವರ್ಷಗಳಲ್ಲಿ ಕನ್ನಡ ಸಾಹಿತ್ಯ ಸಾಧಿಸಿರುವ ಸಂಪತ್ತು, ಸಕಾರಣವಾಗಿ ನಿಸ್ಸಂಕೋಚವಾಗಿ ಹೆಮ್ಮೆಪಟ್ಟುಕೊಳ್ಳುವಷ್ಟು ವೈಭವಪೂರ್ಣವಾಗಿದೆ. ವೈವಿಧ್ಯಪೂರ್ಣವಾಗಿದೆ, ಶ್ರೀಮಂತವಾಗಿದೆ.... ಸಾಹಿತ್ಯದ ಕೆಲವು ಪ್ರಕಾರಗಳಲ್ಲಂತೂ ಕನ್ನಡಿಗರು ಮಾತ್ರವಲ್ಲದೆ ಭಾರತೀಯರೂ ಹೆಮ್ಮೆಪಟ್ಟುಕೊಳ್ಳುವಂತಹ ಕೃತಿಗಳೂ ಮೈದೋರಿವೆ. ಅಷ್ಟೇ ಅಲ್ಲ; ಪೂರ್ಣಪರಿಣತ ಸ್ಥಿತಿಗೇರಿರುವ ಪ್ರಪಂಚದ ಯಾವ ಭಾಷೆಯ ಸಾಹಿತ್ಯಕ್ಕಾದರೂ ಕೋಡುಮೂಡಿಸುವ ಕೃತಿಗಳೂ, ಕವನ, ಕಾದಂಬರಿ, ಸಣ್ಣಕತೆ, ನಾಟಕ, ಕಾವ್ಯ, ಮಹಾಕಾವ್ಯಾದಿ ಪ್ರಕಾರಗಳಲ್ಲಿ ಹೊರಹೊಮ್ಮಿವೆ. ಕನ್ನಡಿಗರು ವಿನಯಕ್ಕಾಗಿ ಬಗ್ಗಿ ನಡೆಯಬಹುದು; ಆದರೆ ರಿಕ್ತರಂತೆ ಕುಗ್ಗಿ ನಡೆಯಬೇಕಾಗಿಲ್ಲ.

## ಕನ್ನಡ ಸ್ಥಾನ

ಆಯಾ ಪ್ರಾಂತಗಳಲ್ಲಿ ಆಯಾ ಪ್ರಾದೇಶಿಕ ಭಾಷೆಗಳಿಗೆ ಪ್ರಥಮಸ್ಥಾನ ಸಲ್ಲಬೇಕು. ಅಂತರ ಪ್ರಾಂತೀಯ ವ್ಯವಹಾರ ದೃಷ್ಟಿಯಿಂದ ಮತ್ತು ಕೇಂದ್ರದ

ಆಡಳಿತದೃಷ್ಟಿಯಿಂದ ಅಖಿಲಭಾರತೀಯವಾದ ಸಂಯುಕ್ತ ಭಾಷೆಗೆ ಎರಡನೆ ಸ್ಥಾನ ಕೊಡಬೇಕು. ಅಂತರರಾಷ್ಟ್ರೀಯವಾದ ಭಾಷೆಗೆ ಅಥವಾ ಭಾಷೆಗಳಿಗೆ ಐಚ್ಛಿಕಸ್ಥಾನ ಕೊಡಬೇಕು. ಆಯಾ ಪ್ರಾಂತಗಳಲ್ಲಿ ಆಯಾ ದೇಶಭಾಷೆಗಳೇ ಆಡಳಿತ ಭಾಷೆಗಳಾಗಿರಬೇಕು. ಅಲ್ಲಿಯ ಶಿಕ್ಷಣವೆಲ್ಲ ಎಲ್ಲ ಮಟ್ಟಗಳಲ್ಲಿಯೂ ದೇಶಭಾಷಾ ಮಾಧ್ಯಮದಲ್ಲಿಯೇ ಸಾಗಬೇಕು... ಕನ್ನಡಕ್ಕೆ ಪ್ರಪಂಚದಲ್ಲಿ ಎಲ್ಲಾದರೂ ಮಾನ್ಯಸ್ಥಾನ ದೊರೆಯಬೇಕಾದರೆ ಅದು ಇಲ್ಲೆ, ಕರ್ಣಾಟಕದಲ್ಲೆ, ಇನ್ನೆಲ್ಲಿಯೂ ಅಲ್ಲ. ಪ್ರಪಂಚದಲ್ಲಿ ಸಹಸ್ರಾರು ಇಂಗ್ಲಿಷ್ ಪ್ರಾಧ್ಯಾಪಕರಿದ್ದಾರೆ. ನೂರಾರು ಅರ್ಥಶಾಸ್ತ್ರ ಪ್ರಾಧ್ಯಾಪಕರು, ರಾಜ್ಯಶಾಸ್ತ್ರ ಪ್ರಾಧ್ಯಾಪಕರು ಇದ್ದಾರೆ. ನಾವಿಲ್ಲಿ ಅವರುಗಳಿಗೆ ಅಷ್ಟು ಎಡೆಕೊಡದಿದ್ದರೂ ಅದರಿಂದ ಅವರಿಗಾಗಲಿ ಶಾಸ್ತ್ರಗಳಿಗಾಗಲಿ ಏನೊಂದೂ ನಷ್ಟ ಆಗುವುದಿಲ್ಲ. ಅವರಿಗೆ ಉಳಿದ ಜಗತ್ತು ಇದ್ದೇ ಇದೆ.... ನೀವು ಇಲ್ಲಿ ಕನ್ನಡಕ್ಕೆ ಕನ್ನಡದವರಿಗೆ ಎಡೆಕೊಡದಿದ್ದರೆ ಸ್ಥಾನಮಾನ ಕೊಡದಿದ್ದರೆ ಜಗತ್ತಿನ ಮತ್ತಾವ ಭಾಗವೂ ಕನ್ನಡದ ಕೈ ಹಿಡಿಯುವುದಿಲ್ಲ. ನೀವು ಕೈ ಬಿಟ್ಟರೆ ಅದಕ್ಕೆ ಸಮುದ್ರವೇ ಗತಿ.. ಅಂದಮಾತ್ರಕ್ಕೆ ನಾನು ಕನ್ನಡವನ್ನು ಬಲಾತ್ಕಾರ ಭಾಷೆಯನ್ನಾಗಿ ಮಾಡಲು ಹೇಳುತ್ತಿಲ್ಲ. ಅದು ಪ್ರಥಮ ಭಾಷೆಯಾಗಿರಲಿ. ಮಾತೃಭಾಷೆಗೆ ಸಿಕ್ಕಬೇಕಾದ ಎಲ್ಲ ಗೌರವವು ಅದಕ್ಕೆ ದೊರೆಯಲಿ ಎಂಬುದಷ್ಟೇ ನನ್ನ ಅಭಿಪ್ರಾಯ. ಅಂಥ ಅವಕಾಶ ಬಂದಾಗ ಕನ್ನಡ ಜನ ಕನ್ನಡಕ್ಕೆ ಪುರಸ್ಕಾರ ಕೊಡದಿದ್ದರೆ ಅದು ಅವರ ಪಾಡು. ನಾನು ಅದಕ್ಕಾಗಿ ಚಿಂತಿಸುವುದಿಲ್ಲ.

## ಆಡಳಿತದಲ್ಲಿ ಕನ್ನಡ

ಈ ವಿಷಯದಲ್ಲಿ ನನಗೆ ಸರ್ಕಾರದ ಮೀನಮೇಷ ಧೋರಣೆ ಸ್ವಲ್ಪವೂ ಅರ್ಥವಾಗುವುದಿಲ್ಲ. ಪಂಜಾಬ್ ಸರ್ಕಾರಕ್ಕೆ ಸಾಧ್ಯವಾಗುವುದು ನಮಗೇಕೆ ಸಾಧ್ಯವಾಗದು? ಇದು ಎಷ್ಟು ಮುಖ್ಯವಾದ ಸಂಗತಿಯೆಂದರೆ ಕನ್ನಡ ಆಡಳಿತ ಭಾಷೆಯೆಂದು ಬಳಕೆಗೆ ಬಂದೊಡನೆಯೇ ಶಿಕ್ಷಣ ಮಾಧ್ಯಮದ ಸಮಸ್ಯೆಯೂ ಬಗೆಹರಿಯುತ್ತದೆ... ಅಖಿಲಭಾರತ ಸೇವಾ ಪರೀಕ್ಷೆಗಳನ್ನು ಹೇಗೆ ನಡೆಸುವುದೆಂದು ಪದೇ ಪದೇ ಕೇಳುತ್ತಾರೆ. ಅವೂ ಪ್ರಾದೇಶಿಕ ಭಾಷೆಯಲ್ಲಿಯೇ ನಡೆಯಬೇಕು. ಬುದ್ದಿವಂತಿಕೆ ಯಾವುದೇ ಒಂದು ಭಾಷೆಯವರ ಗುತ್ತಿಗೆಯಲ್ಲ. ಪ್ರತಿ ಭಾಷೆಯಲ್ಲಿಯೂ ಬುದ್ಧಿವಂತರಿರುತ್ತಾರೆ. ಅವರಲ್ಲಿ ಶ್ರೇಷ್ಠರಾದವರನ್ನು ಆಯ್ಕೆಮಾಡಬೇಕು. ಪ್ರತಿ ಭಾಷಾವಲಯಕ್ಕೂ ಈ ಅಧಿಕಾರಿಗಳ ಸಂಖ್ಯೆಯನ್ನು ನಿರ್ಧರಿಸಿಬಿಟ್ಟರೆ ಆ ಆಯ್ಕೆಯೂ ಸುಲಭವಾಗುತ್ತದೆ... ಅಲ್ಲದೆ ಪ್ರತಿಯೊಬ್ಬ ಅಭ್ಯರ್ಥಿಯೂ ಬೇರೆ ಒಂದು ಭಾಷೆಯನ್ನು ಅಭ್ಯಾಸಮಾಡಿಯೇ ಇರುತ್ತಾನೆ. ಇದರಿಂದ ಅಖಿಲಭಾರತೀಯತೆಗೇನೂ ಧಕ್ಕೆಯೊದಗುವುದಿಲ್ಲ.

## ಭಾಷಾಸೂತ್ರ

ಈಗ ಎಲ್ಲರೂ ತ್ರಿಭಾಷಾಸೂತ್ರದ ಮಾತಾಡುತ್ತಿದ್ದಾರೆ... ಇದು ಅನಾವಶ್ಯಕ. ಈ ಸೂತ್ರದಲ್ಲಿ ಮೂರು ಭಾಷೆಗಳೂ ಬಲಾತ್ಕಾರದ್ದಾಗುತ್ತದೆ. ಈ ಮೂರು ಭಾಷೆಗಳಲ್ಲಿ ಪ್ರಾಂತಭಾಷೆ ಸೇರದೆಹೋಗುವ ಅಪಾಯವುಂಟು. ಈಗ ಇಂಗ್ಲಿಷ್ ಒಂದೆ ಬಲಾತ್ಕಾರದ್ದಾಗಿ ನಮ್ಮ ಅರ್ಧಪ್ರಾಣ ಹೋಗಿದೆ: ತ್ರಿಭಾಷಾ ಸೂತ್ರದಂತೆ ಹಿಂದಿಯೂ ಕಡ್ಡಾಯವಾಗಿ ಪೂರ್ತಿ ಪ್ರಾಣ ಹೋಗುತ್ತದೆ. ಇದು ಅನ್ಯಾಯ. ಈ ಸೂತ್ರವನ್ನು ನಾವು ಖಂಡಿತ ಒಪ್ಪಬಾರದು. ಅದರಿಂದ ರಾಷ್ಟ್ರಘಾತವಾಗುತ್ತದೆ. ಈ ಬಲಾತ್ಕಾರದ ವಿರುದ್ಧವೆ ನಮ್ಮ ಹೋರಾಟ. ವಿದ್ಯಾರ್ಥಿಗಳಲ್ಲಿ ನೂರಕ್ಕೆ ತೊಂಬತ್ತು ಮಂದಿಗೆ ತಮ್ಮ ಸ್ವಂತ ಭಾಷೆ–ಮಾತೃಭಾಷೆ–ಸಾಕಾಗುತ್ತದೆ. ಇಂಗ್ಲಿಷನ್ನಾಗಲಿ, ಹಿಂದಿಯನ್ನಾಗಲಿ ಹೊರಗಟ್ಟಬೇಕೆಂದು ನಾನು ಹೇಳುತ್ತಿಲ್ಲ. ಇಂಗ್ಲಿಷ್ ಬಲಿಷ್ಠ ಭಾಷೆ–ಆದರೆ ಕಾಲು ಮುರಿದು ಆಳಾಗಿರಿಸಿಕೊಳ್ಳಿ. ಹೇಳಿದ ಕೆಲಸ ಮಾಡಿಕೊಂಡು ಬಿದ್ದಿರುತ್ತದೆ .ಹಿಂದಿಗೆ ಸ್ವಾತಂತ್ರ್ಯ ಕೊಡುವುದು ಬೇಡ. ಅದರ ಸೊಂಟ ಮುರಿಯಿರಿ. ಅದರಿಂದ ನಮಗೆ ಅಪಾಯವಿಲ್ಲ. ಒಬ್ಬ ಕುಂಟ, ಒಬ್ಬ ಹೆಳವ. ಅವು ನಮ್ಮ ಮೈಮೇಲೆ ಬೀಳುವುದಿಲ್ಲ.

## ಇಂಗ್ಲಿಷ್ ಭ್ರಷ್ಟಾಚಾರ

ನಮ್ಮ ದೇಶದ ಪ್ರಚ್ಛನ್ನ ಶತ್ರುಗಳಾದ ಸ್ವಾರ್ಥಸಾಧಕ ಪಟ್ಟಭದ್ರ ಹಿತಾಸಕ್ತ ಪ್ರತಿಗಾಮಿ ಶಕ್ತಿಗಳು, ಮಕ್ಕಳಿಗೆ ಹಾಲುಣಿಸುವ ನೆವದಿಂದ ಅವರನ್ನು ಕೊಲ್ಲುತ್ತಿದ್ದ ಭಾಗವತ ಪುರಾಣದ ಪೂತನಿಯಂತೆ, ಬಲಾತ್ಕಾರದ ಇಂಗ್ಲಿಷ್ ಭಾಷೆಯಿಂದಲೂ ಇಂಗ್ಲಿಷ್ ಮಾಧ್ಯಮದಿಂದಲೂ ವರ್ಷವರ್ಷವೂ ಪರೀಕ್ಷೆಯ ಜಿಲೋಟಿನ್ನಿಗೆ ಕೋಟ್ಯಂತರ ಬಾಲಕರ ಮತ್ತು ತರುಣರ ತಲೆಗಳನ್ನು ಬಲಿಕೊಡುತ್ತಿದ್ದಾರೆ. ಆ ನಷ್ಟದ ಪರಿಮಾಣವನ್ನು ಊಹಿಸಲೂ ಸಾಧ್ಯವಿಲ್ಲ. ಬಹುಶಃ ಸರಿಯಾಗಿ ಲೆಕ್ಕ ಹಾಕಿದರೆ ನಾಲ್ಕಾರು ಪಂಚವಾರ್ಷಿಕ ಯೋಜನೆಗಳ ಮೊತ್ತವೆ ಆದರೂ ಆಗಬಹುದೇನೊ! ಇಂಗ್ಲಿಷ್ ಭಾಷೆಯನ್ನು ಬಲಾತ್ಕಾರದ ಸ್ಥಾನದಿಂದ ಐಚ್ಛಿಕ ಸ್ಥಾನಕ್ಕೆ ನಿಯಂತ್ರಣಗೊಳಿಸದಿದ್ದರೆ, ಇಂಗ್ಲಿಷ್ ಶಿಕ್ಷಣಮಾಧ್ಯಮ ತೊಲಗಿ ಪ್ರಾದೇಶಿಕ ಭಾಷೆಗೆ ಆ ಸ್ಥಾನ ಲಭಿಸದಿದ್ದರೆ, ನಮ್ಮ ದೇಶ ಹತ್ತೇ ವರ್ಷಗಳಲ್ಲಿ ಸಾಧಿಸಬೇಕಾದುದನ್ನು ಇನ್ನೊಂದು ನೂರು ವರ್ಷಗಳಲ್ಲಿಯೂ ಸಾಧಿಸಲಾರದೆ ನಿತ್ಯರೋಗಿಯಂತಿರ ಬೇಕಾಗುತ್ತದೆ....

ನಮ್ಮ ಕಾರ್ಖಾನೆಗಳನ್ನೆಲ್ಲ ನಿಲ್ಲಿಸಿ, ಆಣೆಕಟ್ಟುಗಳನ್ನೆಲ್ಲ ತಡೆಹಿಡಿದು, ಪ್ರಯೋಗಶಾಲೆ ಸಂಶೋಧನಾಗಾರಗಳನ್ನೆಲ್ಲ ವಜಾಮಾಡಿ, ಹಲವು ಪಂಚವಾರ್ಷಿಕ ಯೋಜನೆಗಳ ಆ ಹಣವನ್ನೆಲ್ಲ ಇಂಗ್ಲಿಷ್ ಸ್ಟಾಂಡರ್ಡನ್ನು ಉತ್ತಮಗೊಳಿಸುವುದಕ್ಕಾಗಿಯೆ ವೆಚ್ಚ ಮಾಡಿದರೂ, ಇನ್ನು ನೂರು ವರ್ಷಗಳ ನಂತರವೂ ನಮ್ಮ ಮಕ್ಕಳ ಇಂಗ್ಲಿಷಿನ

ಮಟ್ಟ ಈಗಿರುವುದಕ್ಕಿಂತ ಮೇಲಕ್ಕೇರುವುದಿಲ್ಲ! ಅಲ್ಲದೆ ಸಂಖ್ಯೆಯೂ ಹೆಚ್ಚುತ್ತಿರುವುದನ್ನು ಗಮನಿಸಿದರೆ ಈಗಿರುವ ಮಟ್ಟವೂ ಇಳಿದು ದುರ್ಗತಿ ಹೊಂದುವುದರಲ್ಲಿ ಸಂದೇಹವಿಲ್ಲ. ಆಹಾರ ಸಮಸ್ಯೆಗಿಂತಲೂ ಚೀಣಿಯರ ಸಮಸ್ಯೆಗಿಂತಲೂ ಗುರುತರವಾದ ಸಮಸ್ಯೆಯಿದು. ಈ ಬಲಾತ್ಕಾರದ ಇಂಗ್ಲಿಷ್ ಶಿಕ್ಷಣದ ಪ್ರಚ್ಛನ್ನ ಭ್ರಷ್ಟಾಚಾರವನ್ನು, ನಷ್ಟದಲ್ಲಾಗಲಿ, ಹಾನಿಯಲ್ಲಾಗಲಿ, ಸರಿದೂಗುವ ಭ್ರಷ್ಟಾಚಾರ ಮತ್ತೊಂದಿಲ್ಲ. ಆದರೆ ಅದು ಪ್ರಚ್ಛನ್ನವಾದ್ದರಿಂದಲೂ ಅದರ ದುಷ್ಪರಿಣಾಮ ದೃಗ್ಗೋಚರವಾಗುವ ಮಟ್ಟಕ್ಕೇರಲು ಸ್ವಲ್ಪ ದೀರ್ಘಕಾಲ ಹಿಡಿಯುವುದರಿಂದಲೂ, ನಾವು ಹುಸಿನೆಮ್ಮದಿಯ ಭಾವದಲ್ಲಿ ಈಗಲೆ ಎಚ್ಚರಗೊಳ್ಳದೆ ತಟಸ್ಥರಾಗಿದ್ದರೆ, ಮುಂದೆ ಮಹಾ ಪಶ್ಚಾತ್ತಾಪಕ್ಕೆ ಒಳಗಾಗಬೇಕಾಗುತ್ತದೆ.

## ಎಂಥ ಇಂಗ್ಲಿಷ್? ಎಷ್ಟು? ಯಾರಿಗೆ?

ಇನ್ನು ಮುಂದೆ ಇಂಗ್ಲಿಷ್ ಹಲವರು ಕಲಿಯುವ ಭಾಷೆಯಲ್ಲ; ಕೆಲವರು ಕಲಿಯಬೇಕಾದ ಭಾಷೆ. ಅನೇಕರಿಗೆ ಬೇಕಾದ ಇಂಗ್ಲಿಷಿನ ಮಟ್ಟವೆಂದರೆ ಅದನ್ನೋದಿ ಅರ್ಥಮಾಡಿಕೊಳ್ಳುವಷ್ಟೆ ಹೊರತು ಅದರಲ್ಲಿ ಸಂಭಾಷಿಸುವುದಾಗಲಿ, ಭಾಷಣ ಮಾಡುವುದಾಗಲಿ, ಬರೆಯುವುದಾಗಲಿ, ಅಲ್ಲ....ಇನ್ನು ಮುಂದೆ ಇಂಗ್ಲಿಷಿನ ಈ ನೀರು ನೀರು ಸಮಾರಾಧನೆ ನಿಲ್ಲಬೇಕು. ಅದಕ್ಕೆ ಬದಲಾಗಿ ಆಯ್ದ ಕೆಲವರಿಗೆ ಮಾತ್ರ ಗಟ್ಟಿ ಇಂಗ್ಲಿಷಿನ ಪುಷ್ಟಿಯೊದಗುವಂತೆ ನಮ್ಮ ವಿದ್ಯಾಭ್ಯಾಸ ಕ್ರಮದಲ್ಲಿ ಭಾಷೆಗಳ ಸ್ಥಾನ ನಿರ್ಣಯವಾಗಬೇಕು. ಇನ್ನು ಮುಂದೆ ಇಂಗ್ಲಿಷ್ ಎಲ್ಲರಿಗೂ ಬೇಡ; ಹಲವರಿಗೆ ಕೊಂಚಮಟ್ಟಿಗೆ ಬೇಕು; ಕೆಲವರಿಗೆ ಮಾತ್ರ ಚೆನ್ನಾಗಿಯೆ ಬೇಕು. ಇಂಗ್ಲಿಷ್ ಕಲಿಯುವವರನ್ನು ಎರಡು ವಿಭಾಗವಾಗಿ ವಿಂಗಡಿಸಬಹುದು. ಭಾಷಾದೃಷ್ಟಿಯಿಂದ ಕಲಿಯುವವರು; ಸಾಹಿತ್ಯ ದೃಷ್ಟಿಯಿಂದ ಕಲಿಯುವವರು. ಭಾಷಾದೃಷ್ಟಿಯಿಂದ ಕಲಿಯುವವರಿಗೆ ಇಂಗ್ಲೀಷಿನ ಪರಿಚಯ ಚೆನ್ನಾಗಿ ಆಗಬೇಕು. ಅವರು ಆ ಭಾಷೆಯಲ್ಲಿ ಚೆನ್ನಾಗಿ ಓದಲೂ ಬರೆಯಲೂ ಮಾತನಾಡಲೂ ಭಾಷಣ ಮಾಡಲೂ ಬಲ್ಲವರಾಗಬೇಕು.

ಅವರು ನಮಗೂ ಅಂತರರಾಷ್ಟ್ರಿಯ ಪ್ರಪಂಚಕ್ಕೂ, ಸಾಹಿತ್ಯದಲ್ಲಿ, ಶಾಸ್ತ್ರದಲ್ಲಿ, ರಾಜಕೀಯದಲ್ಲಿ ಸಂಪರ್ಕ ಕಲ್ಪಿಸುವ ಸಾಧನಗಳಾಗಬೇಕು... ಆ ಭಾಷೆಯಲ್ಲಿರುವ ವಿಪುಲವಾದ ವಿವಿಧವಾದ ಶ್ರೀಮಂತವಾದ ಸಾಹಿತ್ಯಕ್ಕಾಗಿ ಅಭ್ಯಾಸ ಮಾಡುವವರ ವಿಷಯವೆ ಬೇರೆ. ಅವರಿಗೆ ಬೇಕಾದುದು ಭಾಷೆಯಲ್ಲ. ಕಾವ್ಯ, ಸಾಹಿತ್ಯ... ಈ ವಿಚಾರಗಳನ್ನು ಪರಿಶೀಲಿಸಿ ಇಂಗ್ಲಿಷ್ ಎಲ್ಲರಿಗೂ ಅವಶ್ಯಕವೆ ಎಂಬುದನ್ನು ನಿರ್ಣಯ ಮಾಡಬೇಕು. ನಮ್ಮ ಕರ್ಣಾಟಕದಲ್ಲಿ ಎಷ್ಟು ಮಂದಿ ವಿದ್ಯಾರ್ಥಿಗಳು ಅಖಿಲಭಾರತ ರಂಗಕ್ಕೆ ಹೋಗುತ್ತಾರೆ? ಎಷ್ಟು ಮಂದಿ ವಿದ್ಯಾರ್ಥಿಗಳು ಅಂತರರಾಷ್ಟ್ರೀಯ ರಂಗಕ್ಕೆ ಪ್ರವೇಶಿಸುತ್ತಾರೆ? ಈ ವಿಚಾರಗಳನ್ನು ಮನನ ಮಾಡಬೇಕು.

## ಪಟ್ಟಭದ್ರರ ಹಿತಾಸಕ್ತಿ

ದೇಶಭಾಷೆಗೆ ಪ್ರಥಮಸ್ಥಾನ ಸಲ್ಲಬೇಕು. ದೇಶಭಾಷೆ ಶಿಕ್ಷಣ ಮಾಧ್ಯಮವಾಗಬೇಕು ಎಂದೊಡನೆ ಕೆಲವರು ಇಂಗ್ಲಿಷ್ ಭಾಷಾಸಾಹಿತ್ಯಗಳಿಗೆ ಸಂಪೂರ್ಣ ಅರ್ಧಚಂದ್ರ ಪ್ರಯೋಗವಾಗಿಬಿಡುತ್ತದೆ ಎಂದು ವ್ಯಾಖ್ಯಾನ ಮಾಡಿ ದೇಶಭಾಷಾವಾದಿಗಳನ್ನು ಸ್ವಭಾಷಾಭ್ರಾಂತರೆಂದೂ ವಿದ್ಯಾಸಂಸ್ಕೃತಿ ವಿದ್ವೇಷಿಗಳೆಂದೂ, ಸಂಕುಚಿತ ಮನೋಭಾವದವರೆಂದೂ ಟೀಕಿಸಿ ಖಂಡಿಸುತ್ತಾರೆ. ಇಂಗ್ಲಿಷ್ ಮೋಹಿಗಳ ಈ ಪ್ರಥಮ ಭ್ರಾಂತಿ ಮೊದಲು ನಿರಸನಗೊಳ್ಳಬೇಕು.. ವಿದೇಶೀ ಬಂಡವಾಳದ ಸಹಾಯದಿಂದ ಇಂಗ್ಲಿಷಿನ ಸಲುವಾಗಿ ಚಳುವಳಿ ನಡೆಸುವವರು ಮಾತೃಭಾಷೆಯ ವಿರುದ್ಧವಾಗಿ ಬರೆಯುತ್ತಿದ್ದಾರೆ; ಮಾತನಾಡುತ್ತಿದ್ದಾರೆ... ಇಂಗ್ಲಿಷ್ ಭಾಷೆಯ ಮೂಲಕವೆ ತಮ್ಮ ಲೌಕಿಕ ಅಭ್ಯುದಯವನ್ನು ಸಾಧಿಸಿಕೊಂಡವರಿಗಂತೂ ಆ ಭಾಷೆಯೊಂದಲ್ಲದೆ ಬೇರೆ ಯಾವ ಭಾಷೆಯಿಂದಲೂ ಅಭ್ಯುದಯ ಸಾಧ್ಯವೇ ಇಲ್ಲ ಎಂಬಂತೆ ಬಾಸವಾಗುತ್ತದೆ.. ನಾನೇನೂ ಇಂಗ್ಲಿಷ್ ಭಾಷೆಯ ದ್ವೇಷಿಯಲ್ಲ... ಪರಮಾರಾಧಕ. ಕನ್ನಡದ ಹತ್ತು ಪಟ್ಟು ಇಂಗ್ಲಿಷ್ ಗ್ರಂಥಗಳನ್ನು ಓದುತ್ತಿದ್ದೇನೆ. ಸ್ವಂತವಾಗಿ ಆರಿಸಿಕೊಂಡು ಇಂಗ್ಲಿಷ್ ಕಲಿತವನಾದರೆ ಅವನಿಂದ ದೇಶಕ್ಕೆ ಉಪಕಾರ.

## ಮೊರೆ

ನಾನು ಅವಧೂತನಾಗಿ ಹೋಗುವುದಿಲ್ಲ. ಕನ್ನಡವು ತನ್ನ ಸ್ಥಾನವನ್ನು ಅಧಿಕೃತವಾಗಿ ಪಡೆಯುವ ತನಕ, ನನ್ನ ಪ್ರಾಣವಿರುವ ತನಕ ಕನ್ನಡಕ್ಕಾಗಿ ದುಡಿಯುವುದು, ಕನ್ನಡಕ್ಕಾಗಿ ದುಡಿಯಲು ವ್ಯಕ್ತಿಗಳನ್ನು ಪ್ರಚೋದಿಸುವುದು. ಅದಕ್ಕಾಗಿ ಭಗವಂತನಲ್ಲಿ ಮೊರೆಯಿಡುವುದು ಮಾಡುತ್ತೇನೆ. ನನ್ನೆಲ್ಲ ತಪಶ್ಯಕ್ತಿಯನ್ನು ಅಥವಾ ಪ್ರಾರ್ಥನಾಶಕ್ತಿಯನ್ನು ಕನ್ನಡದ ಸೇವೆಗಾಗಿ ಮೀಸಲಿಡುತ್ತೇನೆ... ಹೇ ರಾಜಕಾರಣಿ. ಹೇ ಮಂತ್ರಿವರೇಣ್ಯ, ಹೇ ಅಧಿಕಾರಿ ಸರ್ವೋತ್ತಮ, ಹೇ ವಣಿಗ್ವರ, ಹೇ ಶ್ರಮಜೀವಿ, ಹೇ ಅಧ್ಯಾಪಕ ಮಹಾಶಯ, ಓ ನೇಗಿಲಯೋಗಿ,ನೀನು ಯಾರೆ ಆಗಿರು, ಎಲ್ಲಿಯೆ ಇರು, ಕನ್ನಡವನ್ನು ಕೈಬಿಡದಿರು.. ಇದು ನಿನ್ನ ಭಾಷೆ; ಇದು ದೇಶಭಾಷೆ; ಇದು ಸಾವಿರಾರು ವರ್ಷಗಳ ಸುಪುಷ್ಟ ಸಾಹಿತ್ಯ ಭಾಷೆ; ಇದು ಮಹಾಕವಿಗಳನ್ನೂ, ಶಿಲ್ಪಿಗಳನ್ನೂ, ರಾಜಾಧಿರಾಜರನ್ನೂ, ವೀರಾಧಿವೀರರನ್ನೂ, ರಸಋಷಿ ದಾರ್ಶನಿಕರನ್ನೂ ಹಡೆದಿರುವ ಭಾಷೆ... ನಿನ್ನ ತಾಯಿ ರಾಣಿಯಾಗಿದ್ದಾಳೆಂಬುದನ್ನು ಮರೆತುಬಿಡುವೆಯ? ಸ್ವತಂತ್ರನಾದ ಮೇಲೆಯೂ ಆಕೆಯನ್ನು ತೊತ್ತಾಗಿರಿಸುವೆಯಾ?

೧೯೬೮

# ನನ್ನದು ಈ ಕನ್ನಡ ನಾಡು[೧]

ಈಚೆಗೆ ಧಾರವಾಡ ಪ್ರಾಂತದ ಗೆಳೆಯರ ಗುಂಪಿನವರು ಹೊಸ ಕನ್ನಡ ಭಾಷಾಸಾಹಿತ್ಯಗಳಲ್ಲಿ ಒಂದು ಹೊಸ ಸಂಪ್ರದಾಯವನ್ನು ಸ್ಥಾಪಿಸುತ್ತಿದ್ದಾರೆಂದು ಹೇಳಬಹುದು. ಅವರ ಮೇಲ್ಪಂಕ್ತಿಯನ್ನನುಸರಿಸಿ ಇತರ ಹಲವು ಗುಂಪು ಕೂಟ ಮಠಗಳು ಹುಟ್ಟಿಕೊಂಡು ಕೆಲಸ ಮಾಡುತ್ತಿವೆ. ಪ್ರಕೃತ ಗ್ರಂಥಗಳೆರಡೂ ಅವುಗಳ ಪ್ರಯತ್ನದ ಫಲವಾಗಿದೆ.

ಮೊದಲನೆಯದರಲ್ಲಿ "ನನ್ನದು ಈ ಕನ್ನಡ ನಾಡು" ಎಂಬ ಅಭಿಮಾನವು ಹುಟ್ಟಬಹುದಾದ ಹದಿನೈದು ಕವನಗಳೂ ಕಾವ್ಯ ಭಾಗಗಳೂ ಇವೆ. ಇವುಗಳಲ್ಲಿ ಕೆಲವು ಹಿಂದಿನವು, ಕೆಲವು ಈಚಿನವು. ಹಿಂದಿನವೆಲ್ಲಾ ಪ್ರಸಿದ್ಧವಾದವುಗಳೇ; ಈಚಿನವುಗಳಲ್ಲಿಯೂ ಅಪರಿಚಿತವಾದವು ಹೆಚ್ಚಾಗಿಲ್ಲ; ಒಟ್ಟಿನಲ್ಲಿ ಎಲ್ಲಾ ಕಾಲದ ಮತ್ತೂ ಎಲ್ಲಾ ಪ್ರಾಂತಗಳ ಕವನಗಳೂ ಬಂದಿವೆ.

"ನೂತನಯುಗದ ಆಧುನಿಕ ಕವಿಗಳಿಗೆ ಕಲ್ಪನಾಶಕ್ತಿಯೇನೋ ಅತಿಶಯವಾಗಿರಬಹುದು; ಆದರೆ ಕಿವಿಯಿಲ್ಲ." ಎಂದು ಮಿತ್ರರೊಬ್ಬರು ಹೇಳಿದ್ದರು. ಆ ಮಾತಿನಲ್ಲಿ ಒಂದಿನಿತಾದರೂ ಸತ್ಯವಿದೆ. ಈ ಪುಸ್ತಕದ ಕೆಲವು ಕವಿತೆಗಳಲ್ಲಿಯೂ ಅದರಂತೆ ಕರ್ಕಶ ಧ್ವನಿಯು ಕಂಡುಬರುವುದು. ಕವಿತೆಗಳಲ್ಲಿ ಶೈಲಿಯ ನುಣ್ಪು ಇಲ್ಲದಿದ್ದರೆ ಎಂತಹ ಉದ್ದಾಮವಾದ ಭಾವಗಳಾದರೂ ವಿಕಾರವಾಗಿ ತೋರಬಹುದು. ಶ್ರೀಯುತರಾದ ಆನಂದಕಂದ, ಕಾಮತ್, ಅಂಬಿಕಾತನಯ ದತ್ತ, ರಂಗನಾಥ ಇವರುಗಳಿಂದ ತಯಾರಾಗಿರುವ ಕಬ್ಬಮಾಲೆಯಲ್ಲಿ ನೃಪತುಂಗ, ಪಂಪ, ಆಂಡಯ್ಯ, ಸರ್ವಜ್ಞಮೂರ್ತಿ, 'ಶ್ರಿ' ಮೊದಲಾದವರ ಪದ್ಯಗಳೂ ಸೇರಿಕೊಂಡಿರುವುದು 'ಕರ್ಮಣಿ

---

[೧] ನನ್ನದು ಈ ಕನ್ನಡ ನಾಡು:–ಆಯ್ದುವರು: ಮ. ಬೇಂದ್ರೆ ದತ್ತರಾಯರು, ಗೆಳೆಯರ ಗುಂಪು. ಪ್ರಕಾಶಕರು: ಜೋಶಿ ಶಂಕರರಾಯರು ಸಾಧನಕೇರಿ, ಧಾರವಾಡ. ಕ್ರೌನ್ ಅಷ್ಟಪತ್ರ ಪುಟಗಳು ೩೦; ಬೆಲೆ ೪ ಆಣೆ.) ಮತ್ತು ನಾಡದೇವಿ (ನಾಡದೇವಿ:–ಸಂಪಾದಕರು: ಮ. ಮೇವುಂಡಿ ಮಲ್ಲಾರಿ, ಕನ್ನಡಿಗರ ಕೂಟ, ಧಾರವಾಡ. ಪ್ರಕಾಶಕರು:– ಮ. ಹೇಜೀಬ ರಾಂಚಂದ್ರ. ಕ್ರೌನ್ ಅಷ್ಟಪತ್ರ ಪುಟಗಳು ೨೪; ಬೆಲೆ ೪ ಆಣೆ.)

ಸರದೊಳ್ ಚೆಂಬವಳಮಂ ಕೋದಂತೆ' ಇದೆ.

ದೇಶಭಕ್ತಿಯು ಉನ್ನತವಾದ ಭಾವವೇ ಹೌದು. ಆದರೆ ಅದನ್ನು ಉಪಯೋಗಿಸುವವರು ಉದ್ದಾಮಕವಿಗಳಾಗಿರದಿದ್ದರೆ, ಆ ಭಾವವನ್ನು ಒಳಗೊಂಡ ಕವಿತೆಗಳು ಮೂರುದಿನ ಬಾಳಿ ತೀರಿ ಹೋಗಿಬಿಡಬಹುದು. ತುಮುಲ ಯುದ್ಧದಲ್ಲಿ "ಹೊಡಿ, ಬಡಿ, ಇರಿ, ತರಿ" ಎಂಬ ಭೀಷಣ ಶಬ್ದಗಳು ವೀರಾವೇಶವನ್ನೇನೋ ಹುಟ್ಟಿಸಬಹುದು. ಆದರೆ ಆ ಪದಗಳನ್ನು 'ಸಾಹಿತ್ಯ' ಎನ್ನಬಹುದೇ ಎಂದು ಸಂದೇಹ.

'ನಾಡ ನೆಲೆಗಾರ್ತಿ' ಎಂಬ ಪದ್ಯದಲ್ಲಿಯೂ, 'ನಾಡಿಗರ ನೆರವಿ' ಎಂಬುದರಲ್ಲಿಯೂ, 'ಶ್ರೀ'ಯವರ 'ರಜತ ಮಹೋತ್ಸವ ಪ್ರಗಾಥ'ದ ಪ್ರಭಾವವೂ, 'ಕಾಳಗದ ಪದ' ಎಂಬ ಕವಿತೆಯ 'ವರ್ಚಸ್ಸೂ' ತೋರಿಬರುವುದು. ಹಿರಿಯ ಕವಿಗಳನ್ನು ವಿವೇಚನೆಯಿಂದ ಅನುಕರಿಸುವುದು ಸುಲಭವೇನಲ್ಲ.

**'ನಾಡಿಗರ ನೆರವಿ' ಎಂಬುದರ ಐದನೆಯ ಪದ್ಯದಲ್ಲಿ**
**ಢಂ! ಢಾಂ ಢಾಂ ಢಾಂ ಡೊಳ್ಳಿನ ರವವು!**
**ಹುಯ್! ಹುಯ್ ಹುಯ್ ಹುಯ್ ಕೇಕೆಯ ರವವು!**

ಮೊದಲಾದ ಪ್ರಯೋಗಗಳು ನಗಿಸಿ ಡೊಳ್ಳನ್ನು ಕರಗಿಸುವಂತಿವೆ. 'ಬನದಮ್ಮ' ಎಂಬ ಕವಿತೆಯಲ್ಲಿ ನುಣ್ಪಿನ ಶೈಲಿಯ ಪಂಕ್ತಿಗಳು ಕೆಲವಿವೆ.–

**ನಳನಳಿಪ ಬಾಳೆಗಳ ನಿಡುಸುಳಿಯ ನಡುವಿನೊಳಗಡಗಿರುವೆ ಸೊಬಗುಗಾರ್ತಿ!**

ಇತ್ಯಾದಿ

'ಬನದಮ್ಮ'ನನ್ನು 'ನಲ್ಲೆ' ಎಂದು ಸಂಬೋಧಿಸುವುದು ಎಷ್ಟರ ಮಟ್ಟಿಗೆ ಮರ್ಯಾದೆಯೋ ತಿಳಿಯದು.

ಅಂತೂ "ದೇವಿ ಪಾಲಿಸು ಚಿಕ್ಕಮಕ್ಕಳಂ" ಎಂಬ ಪದ್ಯದಲ್ಲಿ ಗ್ರಂಥಕರ್ತರು ಕೇಳಿಕೊಂಡಿರುವಂತೆ

**ಜನನಿಯೆ ನಮ್ಮ ಸೊಲ್ಲು ತೊದಲಾದೊಡೆಯುಂ ಕಿರಿದಾದೊಡಂ ಮಹಾ!**
**ಮುನಿಗಳ ತತ್ತ್ವಗರ್ಭಿತವಿದಲ್ಲದೊಡಂ ಪರಿದರ್ಥಪೂರ್ಣಮೆಂ!**
**ದೆನಿಸದೊಡಂ ಸುಸಾಹಿತಿಯನೊಪ್ಪಿಸದಿರ್ದೊಡಮಾಲಿಸೌ ಇದಂ!**
**ಗಣಿಪರೆ ನಲ್ಮೆಯಾಟದೊಳಿವೆಲ್ಲವ? ಪಾಲಿಸು ಚಿಕ್ಕಮಕ್ಕಳಂ॥**

೧೯೩೦

# ‘ಪ್ರಸಾರಂಗ’ ಹೊತ್ತಿಗೆಯ ಪೀಠಿಕೆ

ಮೈಸೂರು ವಿಶ್ವವಿದ್ಯಾನಿಲಯದ ವೈಸ್ ಛಾನ್ಸಲರ್ ಆಗಿ ನಾನು ಅಲ್ಲಲ್ಲಿ ಮಾಡಿದ ಭಾಷಣಗಳಿಂದ ಕೆಲಕೆಲವು ಭಾಗಗಳನ್ನು ಆಯ್ದು, ಕೋದು ಈ ‘ಪ್ರಸಾರಾಂಗ’ ಹೊತ್ತಿಗೆಯನ್ನು ಹೊರತರಲಾಗಿದೆ. ಆದ್ದರಿಂದ ಅನಿವಾರ್ಯವಾಗಿ ಒಮ್ಮೊಮ್ಮೆ ಭಾವ ಭಾಷೆಗಳ ಪುನರಾವರ್ತನೆ, ಬರವಣಿಗೆಯಲ್ಲಿ ಸ್ವಲ್ಪ ಶೈಥಿಲ್ಯ, ಪ್ರಬಂಧದ ಬೆಳವಣಿಗೆಯಲ್ಲಿ ಹೊಂದಿಕೆಯ ಅಭಾವ ಕಂಡುಬರಬಹುದು. ಆದರೆ, ಇದರ ಒಟ್ಟಿನಲ್ಲಿ ಕಾಣಬರಬಹುದಾದ ಒಂದು ವಿಚಾರ ವಿಧಾನ, ವಿಷಯ ವಿವೇಚನೆಯ ದೃಷ್ಟಿಕೋನ, ಇಲ್ಲಿನ ಭಾವನೆಗಳ ಹಿಂದಿನ ಮನೋಭಾವಗಳು ವಿಚಾರಪರರೆಲ್ಲರಿಗೂ ಒಪ್ಪಿಗೆಯಾಗುವುವೆಂದು ನಾನು ಭಾವಿಸಿದ್ದೇನೆ.

ಮೈಸೂರು ವಿಶ್ವವಿದ್ಯಾನಿಲಯದ ಸ್ಥಾಪನೆಯಾದುದು ೧೯೧೬ರಲ್ಲಿ. ರಾಜಋಷಿಯೆಂದು ಖ್ಯಾತನಾಮರಾದ ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರು ಮೈಸೂರು ವಿಶ್ವವಿದ್ಯಾನಿಲಯದ ಮೊದಲನೆಯ ಸೆನೆಟ್ ಸಭೆಯನ್ನು ಉದ್ಘಾಟಿಸಿ ಮಾತನಾಡುತ್ತ "ಕಾರಣಾಂತರಗಳಿಂದ ವಿಶ್ವವಿದ್ಯಾನಿಲಯವನ್ನು ಪ್ರವೇಶಿಸಲು ಅಶಕ್ತರಾದ ಜನಸಾಮಾನ್ಯರಿಗೆ ವಿಶ್ವವಿದ್ಯೆಯ ಪರಿಚಯ ಮಾಡಿಕೊಡಲು ನಮ್ಮ ವಿಶ್ವವಿದ್ಯಾನಿಲಯ ಶ್ರಮಿಸಬೇಕು. ಈ ಕಾರ್ಯವು ಪ್ರಚಾರೋಪನ್ಯಾಸ ಮತ್ತು ಪ್ರಕಟಣೆಗಳ ಮೂಲಕ ನಡೆಯಬೇಕಾಗಿದೆ. ಅತ್ಯಂತ ಪ್ರಯೋಜನಕಾರಿಯಾದ ಈ ಮಹತ್ಕಾರ್ಯವನ್ನು ವಿಶ್ವವಿದ್ಯಾನಿಲಯವು ಬೇಗನೆ ಕಾರ್ಯರೂಪಕ್ಕೆ ತರುವುದೆಂದು ನಂಬಿದ್ದೇನೆ" ಎಂದು ಹೇಳಿದ ಮಾತು ಇಂದು ನನಸಾಗುತ್ತಿದೆ. ಆ ಕಾರ್ಯ ದಿನದಿನಕ್ಕೂ ಪ್ರಗತಿಗಾಮಿಯಾಗಿ ಮುಂದುವರಿಯುತ್ತಿದೆ.

೧೯೩೩ರಲ್ಲಿ ಸ್ಥಾಪನೆಯಾದ ಅಧ್ಯಾಪಕರ ಸಂಘವು ಪ್ರಚಾರೋಪನ್ಯಾಸಗಳನ್ನು ವಿಶ್ವವಿದ್ಯಾನಿಲಯದ ಆಶ್ರಯದಲ್ಲಿ ಪ್ರಾರಂಭಿಸಿತು. ಈ ಉಪನ್ಯಾಸಗಳು ಪುಟ್ಟ ಪುಸ್ತಕಗಳ ರೂಪದಲ್ಲಿ ಪ್ರಕಟವಾಗಿ ಜನಪ್ರಿಯವಾದುವು. ಈ ಪ್ರಯೋಗದ ಖ್ಯಾತಿ ಇಂಗ್ಲೆಂಡಿನವರೆಗೂ ಹಬ್ಬಿತು. ೧೯೩೪ರಲ್ಲಿ ಅಂತರರಾಷ್ಟ್ರೀಯ ವಿಶ್ವವಿದ್ಯಾನಿಲಯಗಳ ಸಮ್ಮೇಳನವು ಆಕ್ಸ್ ಫರ್ಡಿನಲ್ಲಿ ನಡೆದಾಗ ನಮ್ಮ ಮೈಸೂರು ಮಹಾರಾಜಾ ಕಾಲೇಜಿನ ಪ್ರಿನ್ಸಿಪಾಲ್ ಆಗಿದ್ದ ಪ್ರೊ॥ ಜೆ.ಸಿ. ರಾಲೋ ಅವರು ಮೈಸೂರು ವಿಶ್ವವಿದ್ಯಾನಿಲಯದ ಪ್ರತಿನಿಧಿಯಾಗಿ ಹೋಗಿದ್ದರು. ಅಲ್ಲಿ ಪ್ರಚಾರೋಪನ್ಯಾಸಗಳ ಹೊಸ ಪ್ರಯೋಗವನ್ನು ಕುರಿತು ಸಭೆಯಲ್ಲಿ ವಿವರಿಸಿದಾಗ ಸಮ್ಮೇಳನಕ್ಕೆ ಬಂದಿದ್ದ ದೇಶ ವಿದೇಶಗಳ ಪ್ರತಿನಿಧಿಗಳು ತುಂಬ ಮೆಚ್ಚಿದರಂತೆ! ಈ ಪ್ರಯೋಗವು ‘ಮೈಸೂರಿನ ಪ್ರಯೋಗ’ ಎಂಬ ಹೆಸರಿನಿಂದ ಪ್ರಖ್ಯಾತವಾಯಿತು.

ಕೆಲವು ವರ್ಷಗಳಲ್ಲಿ ಮೈಸೂರು ವಿಶ್ವವಿದ್ಯಾಲಯವು ಪ್ರಕಟಣೆ ಮತ್ತು ಪ್ರಚಾರೋಪನ್ಯಾಸಗಳಿಗಾಗಿ ತಾತ್ಕಾಲಿಕ ಕಛೇರಿಯನ್ನು ಪ್ರಾರಂಭಿಸಿ ವರ್ಷ ವರ್ಷವೂ ಈ ಕಛೇರಿಗೆ ಜೀವದಾನ ಮಾಡುತ್ತಿತ್ತು. ಈಚೆಗೆ ಈ ಪ್ರಕಟಣಾ ಶಾಖೆಯ ಕಛೇರಿ ಸ್ಥಿರವಾಯಿತು. ದಿನದಿನವೂ ಇದರ ಕಾರ್ಯಕ್ಷೇತ್ರ ವಿಸ್ತೃತವಾಗುತ್ತಿದೆ. "ನಹಿ ಜ್ಞಾನೇನ ಸದೃಶಂ" ಎಂಬ ಮೈಸೂರು ವಿಶ್ವವಿದ್ಯಾನಿಲಯದ ಆದರ್ಶವನ್ನು ಕಾರ್ಯರೂಪಕ್ಕೆ ತಂದು ಜನಸಾಮಾನ್ಯರಲ್ಲಿಯೂ ಜ್ಞಾನಪ್ರಸಾರ ಮಾಡಲು ಪ್ರಸಾರಾಂಗವು ಶ್ರಮಿಸುತ್ತಿದೆ. ಪ್ರಸಾರಾಂಗದ ಈ ಕಾರ್ಯವು ಸಮರ್ಪಕವಾಗಿ ನಡೆಯಲು ಜನತೆಯ ಸಹಕಾರ ಅತ್ಯಂತ ಆವಶ್ಯಕ.

ಇಂಗ್ಲೀಷ್ ಮಾಧ್ಯಮದಲ್ಲಿಯೇ ಅಭ್ಯಾಸ ಮಾಡುವ ಸಾವಿರಾರು ವಿದ್ಯಾರ್ಥಿಗಳ ಶಕ್ತಿ ವ್ಯಯವಾಗುವುದು ನಿಂತು ವಿಶ್ವವಿದ್ಯಾನಿಲಯದಲ್ಲಿ ಕನ್ನಡ ಮಾಧ್ಯಮದಲ್ಲಿಯೂ ಶಿಕ್ಷಣದ ಸಕಲ ಸೌಲಭ್ಯಗೂ ದೊರಕಿ ಜ್ಞಾನದ ಪುಷ್ಟಿಶಕ್ತಿಗಳನ್ನು ಪಡೆಯುವುದು ಇಂದು ಸಾಧ್ಯವಾಗಬೇಕು; ಸಾಧ್ಯವಾಗುತ್ತಿದೆ. ವಿಶ್ವವಿದ್ಯಾನಿಲಯದ ಎಲ್ಲ ತರಗತಿಗಳಿಗೂ ಬೇಕಾಗುವ ಪಠ್ಯ ಪುಸ್ತಕಗಳ ಕೊರತೆ ಇಲ್ಲದೆ ವಿಶ್ವವಿದ್ಯಾನಿಲಯದ ಎಲ್ಲ ತರಗತಿಗಳಲ್ಲಿಯೂ ಕನ್ನಡ ಮಾಧ್ಯಮದಲ್ಲಿಯೇ ಶಿಕ್ಷಣ ದೊರಕುವುದು ಸಾಧ್ಯವಾಗುತ್ತದೆ.

ಪ್ರಸಾರಾಂಗವು ಜ್ಞಾನಸಾಧನೆಗೆ, ಜ್ಞಾನಪ್ರಸಾರಕ್ಕೆ ಬೇಕಾಗುವ ಸಕಲ ಸಾಧನಗಳನ್ನು ಪ್ರಚಾರೋಪನ್ಯಾಸಗಳ ಮೂಲಕ, ಪ್ರಚಾರ ಪುಸ್ತಕಮಾಲೆಯ ಪ್ರಕಟಣೆಗಳ ಮೂಲಕ, ಇತರ ಉದ್ಗ್ರಂಥಗಳ ಪ್ರಕಟಣೆ ಇತ್ಯಾದಿಗಳ ಮೂಲಕ ನಿರ್ವಹಿಸುತ್ತ ನಾಡಿನ ಅತ್ಯುತ್ತಮ ಜ್ಞಾನ ಪ್ರಸಾರ ಕೇಂದ್ರವಾಗಲೆಂದು ಹಾರೈಸುತ್ತೇನೆ.

೧೨-೨-೧೯೫೫

## ಎ. ಪ್ರಸಾರಾಂಗ ಎಂದರೇನು?

ನಮ್ಮ ವಿಶ್ವವಿದ್ಯಾನಿಲಯದ ಕಾರ್ಯ ಕಲಾಪಗಳನ್ನು ಮೂರು ಅಂಗಗಳಾಗಿ ವಿಭಾಗಿಸಬಹುದು-ಸಂಶೋಧನಾಂಗ, ಬೋಧನಾಂಗ ಮತ್ತು ಪ್ರಸಾರಾಂಗ ಎಂದು.ಇವುಗಳಲ್ಲಿ ಮೊದಲನೆಯದಾದ ಸಂಶೋಧನಾಂಗ ವಿಶ್ವವಿದ್ಯಾನಿಲಯದ ತಲೆಯಿದ್ದಂತೆ. ಇದು ಮುಖ್ಯವಾಗಿ ಎಂ.ಎ., ಎಂ.ಎಸ್.ಸಿ., ಮತ್ತು ಅವಕ್ಕೂ ಮುಂದಿನ ವ್ಯಾಸಂಗಕ್ಕೆ ಸಂಬಂಧಪಟ್ಟ ಮೇಲ್ಮಟ್ಟದಕೆಲಸ. ಎರಡನೆಯದಾದ ಬೋಧನಾಂಗ ವಿಶ್ವವಿದ್ಯಾನಿಲಯದ ಕೈ ಇದ್ದಂತೆ. ಇಂದಿನ ಪೀಳಿಗೆಯವರು ಸುಸಂಸ್ಕೃತರಾಗಿ, ನಾಗರಿಕರಾಗಿ, ವಿದ್ಯಾವಂತರಾಗಿ ಪ್ರಪಂಚದ ಇತರ ಜನಗಳೊಡನೆ ಸಮಸ್ಪರ್ಧಿಗಳಾಗಿ ಹೇಗೆ ಬಾಳಬೇಕೆಂದು ಕಲಿಸುವುದು ಇದರ ಕೆಲಸ. ಇದರಲ್ಲಿ

ಸ್ನಾತಕೋತ್ತರದ ಬೋಧನೆ, ಅಭ್ಯಾಸಗಳು ಒಂದು ಭಾಗವಾದರೆ ಸ್ನಾತಕಪೂರ್ವ ಶಿಕ್ಷಣ ಜ್ಞಾನಾರ್ಜನೆಗಳು ಇನ್ನೊಂದು ಭಾಗ. ಈ ಎರಡು ಅಂಗಗಳಿಗಿಂತಲೂ ಮುಖ್ಯವೆಂದು, ಮೂಲಭೂತವೆಂದು, ಅತ್ಯಂತ ಅವಶ್ಯಕವೆಂದು ನನಗೆ ತೋರುತ್ತಿರುವ ಅಂಗವೆಂದರೆ ಪ್ರಕಟಣೆ ಮತ್ತು ಪ್ರಚಾರೋಪನ್ಯಾಸಗಳ ಅಂಗ. ಇದನ್ನು 'ಪ್ರಸಾರಾಂಗ' ಎಂದು ಕರೆಯಬಹುದು. ಇದೇ ವಿಶ್ವವಿದ್ಯಾನಿಲಯದ ಜೀವನಾಡಿ ಮಿಡಿಯುತ್ತಿರುವ ಹೃದಯ.

ಈ ಪ್ರಸಾರಾಂಗ ಪ್ರಾರಂಭವಾಗಿ ಸುಮಾರು ಕಾಲು ಶತಮಾನವಾಗಿದೆ. ನಮ್ಮ ವಿಶ್ವವಿದ್ಯಾನಿಲಯ ಕೈಕೊಂಡಿರುವ ಈ ಬಗೆಯ ಕಾರ್ಯ, ಈ ರೂಪದಲ್ಲಿ ಭರತಖಂಡದ ಮತ್ತಾವ ವಿಶ್ವವಿದ್ಯಾನಿಲಯದಲ್ಲೂ ಕಂಡುಬಂದಿಲ್ಲ. ನಮ್ಮ ಮಹಿಮೆ, ಮಹತ್ತು ನಮಗೇ ಗೊತ್ತಿರಲಿಲ್ಲ. ಹೊರಗಿನಿಂದ ಇಲ್ಲಿಗೆ ಬಂದವರು– ಬೇರೆ ಬೇರೆ ಪ್ರಾಂತ್ಯಗಳ ಗವರ್ನರುಗಳು, ಮಂತ್ರಿಗಳು ವಿಶ್ವವಿದ್ಯಾನಿಲಯಗಳ ಗ್ರಾಂಟ್ಸ್ ಕಮೀಷನ್ನಿನವರು, ಪರದೇಶಗಳ  ವಿದ್ಯಾಪರಿಣತರು–ನಮ್ಮ ವಿಶ್ವವಿದ್ಯಾನಿಲಯಕ್ಕೆ ಬಂದು, ಇಲ್ಲಿನ ಪ್ರಕಟಣ ಶಾಖೆಯನ್ನೂ, ಅಲ್ಲಿನ ಪುಸ್ತಕಗಳನ್ನೂ ನೋಡಿ, ಉಪನ್ಯಾಸಗಳ ವಿಚಾರವನ್ನು ಕೇಳಿ ಮೂಗಿನ ಮೇಲೆ ಬೆರಳಿಟ್ಟು "ಇದೇನು ಅದ್ಭುತ ಕೆಲಸ ಮಾಡುತ್ತಿದ್ದೀರಿ! ನಿಮ್ಮ ಜನತೆಗೆ ಈ ವಿಶ್ವವಿದ್ಯಾನಿಲಯ ಇಷ್ಟೊಂದು ಉಪಕಾರ ಮಾಡುತ್ತಿದೆ! ಭರತಖಂಡದ ಮತ್ತಾವ ವಿಶ್ವವಿದ್ಯಾನಿಲಯದಲ್ಲೂ ಈ ಪ್ರಚಾರೋಪನ್ಯಾಸದ ರೀತಿ, ಈ ಪ್ರಕಟಣೆಯ ವಿಧಾನ–ಇವೆರಡೂ ಇಲ್ಲ" ಎಂದು ಪ್ರಶಂಸಿಸಿ ನಮಗೆ ಹೇಳಿ, ಬರೆದು ತಿಳಿಸಿದ್ದಾರೆ. ಹೀಗೆ ಅವರು ಹೇಳಿದ ಮೇಲೆ ನಮಗೆ ಗೊತ್ತಾಯಿತು–ಓಹೋ, ನಾವೂ ಬಹಳ ಕೆಲಸ ಮಾಡಿದ್ದೇವೆ ಎಂದು.

**ಪ್ರಚಾರೋಪನ್ಯಾಸಗಳು:** 'ಪ್ರಸಾರಾಂಗ'ದ ಕಾರ್ಯ ದ್ವಿಮುಖವಾದುದು. ಅವುಗಳಲ್ಲಿ ಒಂದು ಪ್ರಚಾರೋಪನ್ಯಾಸ, ಮತ್ತೊಂದು ಪ್ರಕಟಣೆ. ಏನು ಈ ಪ್ರಚಾರೋಪನ್ಯಾಸ? ದೇಶದಲ್ಲಿರುವ ಎಲ್ಲರೂ ವಿಶ್ವವಿದ್ಯಾನಿಲಯಕ್ಕೆ ಹೋಗಲಾರರಷ್ಟೆ! ಆದರೆ ವಿಶ್ವವಿದ್ಯಾನಿಲಯ ಎಲ್ಲರ ಮನೆಯ ಬಾಗಿಲಿಗೂ ಹೋಗಬಲ್ಲುದು. ದೇಶದಲ್ಲಿ ಎಲ್ಲೆಲ್ಲಿ ಈ ಅಪೇಕ್ಷೆ  ಮೂಡುತ್ತದೆಯೋ ಅಲ್ಲಿಗೆ, ಯಾರು ಆಹ್ವಾನಿಸುತ್ತಾರೆಯೋ ಅವರಲ್ಲಿಗೆ, ವಿಶ್ವವಿದ್ಯಾನಿಲಯದ ಅಧ್ಯಾಪಕವರ್ಗದವರು ಮೂರು ನಾಲ್ಕು ಜನ ಬಂದು, ಒಂದೆರಡು ದಿನ ಅಲ್ಲಿಯೇ ತಂಗಿ, ಉಪನ್ಯಾಸಗಳನ್ನು ಕೊಡುತ್ತಾರೆ. ಮಧ್ಯೆ ಮಧ್ಯೆ ಮನರಂಜನೆಯ ಕಾರ್ಯಕ್ರಮಗಳು–ಕಾವ್ಯವಾಚನ, ನಾಟಕವಾಚನ–ಇತ್ಯಾದಿಗಳಿಂದ ಜನತೆಯನ್ನು ಆಕರ್ಷಿಸಿ, ಉತ್ತಮವಾದ ಉಪನ್ಯಾಸಗಳನ್ನು ಕೊಡುತ್ತಾರೆ. ಮೊದಮೊದಲು ಜನರು ಅಪೇಕ್ಷಿಸಿ ಕರೆದಲ್ಲಿಗೆ ಹೋಗುವ ಪದ್ಧತಿ ಇತ್ತು. ಬರಬರುತ್ತಾ ಈ ಕರೆ ಬರುವುದು ಹೆಚ್ಚಾಯಿತು. ಆದ್ದರಿಂದ ವಿಶ್ವವಿದ್ಯಾನಿಲಯ ಈ ಪ್ರಚಾರೋಪನ್ಯಾಸಗಳನ್ನು ಮುಂದುವರಿಸಲು ಸಾಕಷ್ಟು ಹಣವನ್ನು ಮೀಸಲಾಗಿರಿಸಬೇಕಾಯಿತು. ಈ ಉಪನ್ಯಾಸಗಳು ಹಿಂದಿನಿಂದ ಕನ್ನಡದಲ್ಲಿ ಬಂದಿರುವ ಕಾವ್ಯಗಳನ್ನು ಕುರಿತು ಮಾತ್ರವೇ ಅಲ್ಲದೆ, ಬೇರೆ ಬೇರೆ ಭಾಷೆಗಳಲ್ಲಿ –ಅದು

ಪರ್ಷಿಯನ್ ಭಾಷೆಯಾಗಿರಬಹುದು, ಇಂಗ್ಲಿಷ್ ಭಾಷೆಯಾಗಿರಬಹುದು, ಗ್ರೀಕ್ ಭಾಷೆಯಾಗಿರಬಹುದು–ಆಯಾ ಭಾಷೆಗಳಲ್ಲಿ ತಜ್ಞರಾದವರು ಆಯಾ ವಿಷಯಗಳನ್ನು ಕುರಿತು ಉಪನ್ಯಾಸ ಮಾಡುತ್ತಾರೆ. ಇದರಿಂದ ನಮ್ಮ ಜನ ನಮ್ಮ ಸಾಹಿತ್ಯವನ್ನು ಮಾತ್ರವೇ ಅಲ್ಲದೆ, ಇತರ ಸಾಹಿತ್ಯಗಳ ಪರಿಚಯವನ್ನೂ ಪಡೆದುಕೊಂಡಂತೆ ಆಗುತ್ತದೆ. ಇವುಗಳ ಜೊತೆಗೆ ರೇಡಾರ್ ಮೊದಲಾದ ಆಧುನಿಕ ವಿಜ್ಞಾನ ವಿಷಯಗಳು, ಹೆರಿಗೆ ಮತ್ತು ಶಿಶುಸಂರಕ್ಷಣೆ ಅಥವಾ ಕಣ್ಣು ಮತ್ತು ಅದರ ರಕ್ಷಣೆ ಇತ್ಯಾದಿ ವೈದ್ಯಕೀಯ ವಿಷಯಗಳು–ಇಂತಹ ಗಹನವಾದ ವಿಷಯಗಳನ್ನು ಕೂಡ ಎಲ್ಲರಿಗೂ ತಿಳಿಯುವಂತೆ ಸುಲಭವಾದ ಭಾಷೆಯಲ್ಲಿ ಉಪನ್ಯಾಸ ಮಾಡುತ್ತಾರೆ.

ನಮ್ಮ ಜನರು ಬೆವರು ಸುರಿಸಿ ದುಡಿದು ಕೊಟ್ಟ ಹಣದಿಂದ ನಮ್ಮ ಸರ್ಕಾರ ವಿಶ್ವವಿದ್ಯಾನಿಲಯವನ್ನು ನಡೆಸುತ್ತಿದೆ. ಈ ವಿಶ್ವವಿದ್ಯಾನಿಲಯ ಮೇಲ್ಮಟ್ಟದ ಜನಕ್ಕೆ ಬೋಧಿಸುತ್ತಿದೆ. ಅದು ಬೋಧಿಸುವುದು ಜನತೆಗೆ ಗೊತ್ತಾಗದ ಅನ್ಯಭಾಷೆಯಲ್ಲಿ. ಅದರಲ್ಲಿಯೂ ವಿಶೇಷ ಅಧ್ಯಯನ ಮಾಡಿದವರಿಗೆ ಮಾತ್ರ ಅದು ಅರ್ಥವಾಗುತ್ತದೆ. ಜನಸಾಮಾನ್ಯನಿಗೆ ಏನು ಬಂತು? ವಿಶ್ವವಿದ್ಯಾನಿಲಯದ ಪ್ರಚಾರೋಪನ್ಯಾಸ ಶಾಖೆ ಜನತೆಯ ಅಂಗ. ವಿಶ್ವವಿದ್ಯಾನಿಲಯದ ಅಧ್ಯಾಪಕರು ಬಂದು, ಜನರೆಲ್ಲರಿಗೂ ತಿಳಿಯುವ ಕನ್ನಡ ಭಾಷೆಯಲ್ಲಿ ಉಪನ್ಯಾಸ ಕೊಟ್ಟು ಜನಸಾಮಾನ್ಯರೊಡನೆ ಅವರಂತೆಯೇ ಇದ್ದುಕೊಂಡು, ಅವರು ಕೇಳಿದ ಪ್ರಶ್ನೆಗಳಿಗೆಲ್ಲಾ ನೇರವಾಗಿ ಉತ್ತರ ಕೊಟ್ಟು ಸರಸ್ವತಿಯ ಸೇವೆ ಮಾಡಲು ಅವರು ಸಿದ್ಧರಾಗಿದ್ದಾರೆ, ಉತ್ಸುಕರಾಗಿದ್ದಾರೆ. ಆದರೆ ಈ ಕೆಲಸ ಬರಿಯ ವಿಶ್ವವಿದ್ಯಾನಿಲಯದ ಅಧ್ಯಾಪಕ ವರ್ಗದವರಿಂದ ಮಾತ್ರ ಆಗತಕ್ಕದ್ದಲ್ಲ. ಜನತೆಯ ಸಹಕಾರದಿಂದ ಮಾತ್ರವೇ ಇದು ಸಾರ್ಥಕವಾಗಬೇಕಾದರೆ, ವಿಶ್ವವಿದ್ಯಾನಿಲಯ ಮೊದಲಿನಿಂದಲೂ ಈ ಕಾರ್ಯಕ್ಕೆ ಮಾನ್ಯತೆಯನ್ನು ಕೊಡುತ್ತಾ ಬಂದಿದೆ. ಅದಕ್ಕೂ ಸಮಧಿಕವಾಗಿ ಜನರಲ್ಲಿ ಜ್ಞಾನಪ್ರಸಾರ ಮಾಡುವ ಕಾರ್ಯವನ್ನು ಕೈಗೊಳ್ಳುತ್ತದೆ, ಕೈಗೊಂಡಿದೆ. ಆ ಪೂಜೆಯಲ್ಲಿ ಜನಸಾಮಾನ್ಯರು ಭಾಗಿಗಳಾಗಬೇಕು. ಉಪನ್ಯಾಸಗಳಿಗೆ ಜನರು ಬಂದು ನೆರೆಯಬೇಕು, ತಮಗೆ ಬೇಕಾದ ವಿಷಯಗಳೇನೆಂಬುದನ್ನು ತಿಳಿಸಬೇಕು, ಪ್ರಚಾರೋಪನ್ಯಾಸ ಶಾಖೆಯ ಕಾರ್ಯದರ್ಶಿಗಳಿಗೆ ಕಾಗದ ಬರೆಯಬೇಕು. ಅವರಿಗೆ ಬರೆದರೆ ಅವರು ಜನರು ಕೇಳಿದ ಕಡೆ ಸಂತೋಷದಿಂದ ಉಪನ್ಯಾಸಗಳನ್ನು ಏರ್ಪಡಿಸುತ್ತಾರೆ. ತಾವು ತಿಳಿದುಕೊಳ್ಳಬೇಕೆಂದಿರುವ ವಿಷಯಗಳನ್ನು ಸೂಚಿಸಿದರೆ ಆಯಾ ವಿಷಯಗಳಲ್ಲಿ ತಜ್ಞರಾದವರನ್ನು ಕರೆದುಕೊಂಡು ಬಂದು, ಜನರಿಗೆ ಬೇಕಾದ ಮನರಂಜನೆಯ ವಿಷಯಗಳನ್ನೂ ವಿಜ್ಞಾನ ವಿಷಯಗಳನ್ನೂ ತಿಳಿಸಿಕೊಡುತ್ತಾರೆ.

ನಮ್ಮ ನಾಡಿನ ಬೆನ್ನು ಮೂಳೆಯಂತಿರುವ ರೈತಜನ ಸರ್ಕಾರಕ್ಕೆ ಕಂದಾಯವನ್ನು ಕೊಡುತ್ತಾರೆ. ಅದಕ್ಕೆ ಪ್ರತಿಫಲವಾಗಿ ಸರ್ಕಾರ ರಸ್ತೆ, ಬಾವಿ ಮೊದಲಾದ ಅನುಕೂಲ್ಯಗಳ್ನು ಕಲ್ಪಿಸಿಕೊಡುತ್ತದೆ. ಇದಕ್ಕೂ ಹೆಚ್ಚಾಗಿ ವಿದ್ಯಾಭ್ಯಾಸದ ವ್ಯವಸ್ಥೆಯನ್ನು ಮಾಡಿಕೊಡುತ್ತದೆ. ಜನರು ಈ ಅನುಕೂಲ್ಯಗಳನ್ನು ಉಪಯೋಗಿಸಿಕೊಂಡು ವಿದ್ಯಾವಂತರಾಗಬೇಕು. "ವಿದ್ಯೆ" ಎನ್ನುವುದು ಸಾಮಾನ್ಯ ಮನುಷ್ಯನನ್ನು ಮೃಗತ್ವದಿಂದ ದೇವತ್ವಕ್ಕೆ ಎತ್ತುವ

ಒಂದು ವಿಧಾನ. ನಮಗೆ ಅಂತಹ ವಿದ್ಯೆ ಬೇಕು– ಎಂದು ಹೇಳುವ ಕಾಲ ಈಗ ಬಂದಿದೆ. ಎಷ್ಟೇ ಹೈಸ್ಕೂಲುಗಳಿರಲಿ, ಏನೇ ಮಾಡಲಿ, ಸದ್ಯಕ್ಕೆ ನಮ್ಮ ದೇಶದಲ್ಲಿ ಎಲ್ಲರಿಗೂ ವಿಶ್ವವಿದ್ಯಾನಿಲಯಕ್ಕೆ ಪ್ರವೇಶ ದೊರೆಯುವುದೆಂದು ನಾನು ಹೇಳಲಾರೆ. ಪ್ರವೇಶ ಸಿಕ್ಕುವುದು ಇರಲಿ, ನಮ್ಮಲ್ಲಿ ಶೇ. ೮೦ರಷ್ಟು ಪ್ರಾಥಮಿಕ ವಿದ್ಯಾಭ್ಯಾಸದ ಕೊನೆಯಲ್ಲಿಯೇ ತಮ್ಮ ವಿದ್ಯಾಭ್ಯಾಸವನ್ನು ನಿಲ್ಲಿಸಿಬಿಡುತ್ತಾರೆ. ಉಳಿದಿಪ್ಪತ್ತರಲ್ಲಿ ಅಷ್ಟು ಜನ ಮಾಧ್ಯಮಿಕ ಶಾಲೆಯ ಮಧ್ಯದಲ್ಲಿಯೋ ಕೊನೆಯಲ್ಲಿಯೋ ಕೈಬಿಡುತ್ತಾರೆ; ಹೈಸ್ಕೂಲು ವಿದ್ಯಾಭ್ಯಾಸವನ್ನು ಮುಗಿಸಿದೊಡನೆಯೇ ಮತ್ತಷ್ಟು ಜನ ಓದು ನಿಲ್ಲಿಸುತ್ತಾರೆ. ಹೀಗಾಗಿ ಕಾಲೇಜು ಮಟ್ಟಕ್ಕೆ ಬರಲು ಅರ್ಹತೆ ಪಡೆಯುವವರೇ ವಿರಳ. ಇವರಲ್ಲಿಯೂ ಎಷ್ಟೋ ಜನ ದೂರದ ಕಾರಣದಿಂದಲೋ, ಬಡತನದ ಕಾರಣದಿಂದಲೋ, ಮನೆಯ ಕ್ಲೇಶ ಸಂಕಟಗಳ ಕಾರಣದಿಂದಲೋ ವಿಶ್ವವಿದ್ಯಾನಿಲಯಕ್ಕೆ ಸೇರಲಾಗುವುದಿಲ್ಲ. ಹೀಗೆ ದೇಶದ ಬಹು ಜನ ವಿಶ್ವವಿದ್ಯಾನಿಲಯವನ್ನು ಪ್ರವೇಶ ಮಾಡಿ, ಸಂಸ್ಕೃತಿ ವಿಜ್ಞಾನಗಳಲ್ಲಿ ಪರಿಣತರಾಗಲು ಸಾಧ್ಯವಿಲ್ಲ. ಅಂತಹವರಿಗೆ ವಿಶ್ವವಿದ್ಯಾನಿಲಯದ ಪ್ರಚಾರೋಪನ್ಯಾಸಗಳು ಜ್ಞಾನದೀವಿಗೆಗಳಾಗಬಲ್ಲವು.

ಅಜ್ಞರ ಮತ್ತು ಅನಕ್ಷರರ ಹೃದಯದಲ್ಲಿ ಜ್ಞಾನಜ್ಯೋತಿ ಹೊತ್ತುವಂತೆ ಮಾಡುವ ಕಾರ್ಯವೊಂದರಲ್ಲಿಯೇ ಇದು ಪರ್ಯವಸಾನವಾಗುವುದಿಲ್ಲ. ವಿಶ್ವವಿದ್ಯಾನಿಲಯದ ವಿದ್ಯೆ ಸಂಸ್ಕೃತಿಗಳನ್ನು ಪಡೆದು, ಹಿಂತಿರುಗಿ, ವಿವಿಧ ಕಾರ್ಯರಂಗಗಳಲ್ಲಿ ಪ್ರವೃತ್ತರಾಗಿರುವ ವಿದ್ಯಾವಂತರಿಗೂ ಇದರಿಂದ ಪ್ರಯೋಜನವಾಗುತ್ತದೆ. ಮಾಸಿ ಹೋಗುವ ಅಥವಾ ಮರೆತುಹೋಗುವ ಸಂಸ್ಕಾರಗಳನ್ನು ಉದ್ದೀಪನಗೊಳಿಸಲು ಇದು ಸಹಾಯಕವಾಗುತ್ತದೆ.

**ಪ್ರಚಾರ ಪುಸ್ತಕಮಾಲೆ:** ಎಲ್ಲ ಪ್ರಚಾರೋಪನ್ಯಾಸಗಳನ್ನು ಎಲ್ಲರೂ ಕೇಳುವುದು ಸಾಧ್ಯವಿಲ್ಲ. ವಿಶ್ವವಿದ್ಯಾನಿಲಯಕ್ಕೆ ಎಷ್ಟೇ ಉತ್ಸಾಹವಿದ್ದರೂ ನಾಡಿನ ಪ್ರತಿಯೊಂದು ಹಳ್ಳಿಯಲ್ಲಿಯೂ ಉಪನ್ಯಾಸಗಳನ್ನು ಏರ್ಪಡಿಸುವುದು ಅಸಾಧ್ಯ. ಆದ್ದರಿಂದ, ಈ ಉಪನ್ಯಾಸಗಳನ್ನು ಕೇಳಲು ಸಾಧ್ಯವಿಲ್ಲದವರಿಗೂ ಇವುಗಳ ಪ್ರಯೋಜನವನ್ನು ಪಡೆಯಲು ಸಾಧ್ಯವಾಗುವಂತೆ ಸಣ್ಣ ಸಣ್ಣ ಕೈ ಹೊತ್ತಿಗೆಗಳ ರೂಪದಲ್ಲಿ ಅವುಗಳನ್ನು ಪ್ರಕಟಿಸಲಾಗುತ್ತಿದೆ. ಜ್ಞಾನದ ಬೇರೆ ಬೇರೆ ಶಾಖೆಯಲ್ಲಿ ತಜ್ಞರಾದವರು ಆಯಾ ಶಾಖೆಯಲ್ಲಿನ ಗಹನವಾದ ವಿಷಯಗಳನ್ನು ಎಲ್ಲರಿಗೂ ತಿಳಿಯುವಂತಹ ಸುಲಭವಾದ ಭಾಷೆಯಲ್ಲಿ ಉಪನ್ಯಾಸ ಮಾಡಿ, ಬರೆದುಕೊಡುತ್ತಾರೆ. ಇವುಗಳನ್ನು ಪುಸ್ತಕ ರೂಪದಲ್ಲಿ ಪ್ರಕಟಿಸಿ, ಅತ್ಯಂತ ಕಡಮೆಯ ಬೆಲೆಗೆ ಮಾರಲು ಏರ್ಪಡಿಸಲಾಗಿದೆ. ಮೊದಲು ಇವುಗಳ ಬೆಲೆ ಕೇವಲ ಎರಡಾಣೆ ಇತ್ತು; ಈಗ ಮೂರು ಅಥವಾ ನಾಲ್ಕಾಣೆ ಆಗಿರಬಹುದು. ಇವುಗಳ ಅಚ್ಚಿನ ವೆಚ್ಚ ಕೂಡ ಇವುಗಳ ವಿಕ್ರಯದಿಂದ ಹುಟ್ಟುವುದಿಲ್ಲ. ಇವುಗಳ ಉದ್ದೇಶ ದುಡ್ಡು ಮಾಡುವುದಲ್ಲ. ಜನತೆಯಲ್ಲಿ ಜ್ಞಾನ ಪ್ರಸಾರ ಮಾಡುವುದು. ಇಂತಹ ಸುಮಾರು ಎಂಬತ್ತು ಕೈಹೊತ್ತಿಗೆಗಳು "ಪ್ರಚಾರ ಪುಸ್ತಕ ಮಾಲೆ" ಯಲ್ಲಿ ಈಗ ಪ್ರಕಟವಾಗಿವೆ. ಇನ್ನೂ, ಸುಮಾರು ಇಪ್ಪತ್ತು ಪ್ರಕಟಣೆಗೆ ಸಿದ್ಧವಾಗಿವೆ. ಸಾಹಿತ್ಯ, ಸಮಾಜವಿಜ್ಞಾನ, ಭೌತವಿಜ್ಞಾನ, ರಸಾಯನವಿಜ್ಞಾನ,

ವೈದ್ಯ, ಶಿಲ್ಪ, ನರ್ತನ–ಇತ್ಯಾದಿ ವಿವಿಧ ವಿಷಯಗಳನ್ನು ಕುರಿತ ಪುಸ್ತಕಗಳು ಈ ಮಾಲೆಯಲ್ಲಿ ಬಂದಿವೆ. ಈ ಕೈ ಹೊತ್ತಿಗೆಗಳು ಅತ್ಯಂತ ಜನಪ್ರಿಯವಾಗಿದ್ದು ಲಕ್ಷಾಂತರ ಪುಸ್ತಕಗಳು ಈಗಾಗಲೇ ಮಾರಾಟವಾಗಿವೆ; ಪ್ರತಿ ತಿಂಗಳಿನಲ್ಲಿಯೂ ಸಹಸ್ರಾರು ಪುಸ್ತಕಗಳು ಮಾರಾಟವಾಗುತ್ತಿವೆ. ಪ್ರಸಾರಾಂಗದ ಬಹುಮುಖವಾದ ಕಾರ್ಯದಲ್ಲಿ ಇದು ಬಹುಮುಖ್ಯವಾದುದೆಂದು ಹೇಳಬಹುದು.

## ಬಿ. ವಿದ್ಯಾಭ್ಯಾಸ – ಅಂದು, ಇಂದು

ವಿದ್ಯೆಯ ಉದ್ದೇಶವೇನು? ಮಕ್ಕಳೇಕೆ ಓದಬೇಕು? ಎರಡು ಕಾರಣಗಳಿಗಾಗಿ. ಅವುಗಳಲ್ಲಿ ಒಂದು ಲೌಕಿಕೋದ್ದೇಶ. ಮತ್ತೊಂದು ಆಧ್ಯಾತ್ಮಿಕ ಉದ್ದೇಶ. ನಮ್ಮ ಹೊಟ್ಟೆ ಬಟ್ಟೆಗಳಿಗೆ ಸಂಪಾದನೆ ಮಾಡಿಕೊಂಡು ಜೀವನವನ್ನು ಸುಖಮಯವಾಗಿ ಮಾಡಿಕೊಳ್ಳಬೇಕೆಂಬ ಲೌಕಿಕೋದ್ದೇಶವೇ ಬಹುಜನರ ಆಶಯ. ಇದು ನ್ಯಾಯವೇ. ಹೊಟ್ಟೆಗೇ ಇಲ್ಲದವನು ಆತ್ಮವನ್ನೇನು ಸಾಧಿಸಿಯಾನು? ಆದ್ದರಿಂದ ಹೊಟ್ಟೆಗೆ ಬಟ್ಟೆಗೆ ಬೇಕು. ಆದರೆ ಅಷ್ಟೇ ಸಾಲದು. ಅನ್ನ ಬಟ್ಟೆಗಳನ್ನು ಸಂಪಾದಿಸುವುದು ಮಾತ್ರವೇ ವಿದ್ಯೆಯ ಗುರಿಯಲ್ಲ. ಅನ್ನ ಬಟ್ಟೆಗಳಿಂದ ಮನುಷ್ಯ ಬದುಕುತ್ತಾನೆ. ಆದರೆ ಅದು ಮನುಷ್ಯನ ಬದುಕಲ್ಲ. ಮೃಗದ ಬದುಕು. ಭಗವಂತ ಮಾನವನಲ್ಲಿ ಒಂದು ಚೇತನವನ್ನಿಟ್ಟಿದ್ದಾನೆ, ಆತ್ಮವನ್ನಿಟ್ಟಿದ್ದಾನೆ. ಅದು ಭಗವಂತನ ಇಡೆ ಮುಂದುವರಿದಂತೆಲ್ಲಾ ಬುದ್ಧಿಶಕ್ತಿ, ಹೃದಯಶಕ್ತಿ ಅಥವಾ ಭಾವಶಕ್ತಿ ವಿಕಾಸವಾಗುತ್ತಾ ಹೋಗುತ್ತದೆ. ಬುದ್ಧಿಶಕ್ತಿಯ ವಿಕಾಸದಿಂದ ತತ್ತ್ವ ಬೆಳೆಯುತ್ತದೆ; ಭಾವಶಕ್ತಿಯ ವಿಕಾಸದಿಂದ ಕಾವ್ಯ ಮುಂದುವರಿಯುತ್ತದೆ. ಇದು ಅತ್ಯಗತ್ಯವಾಗಿ ನಡೆಯಬೇಕು. ಇಲ್ಲದಿದ್ದರೆ ಮನುಷ್ಯನು ಅಂದವಾಗಿ ಬಟ್ಟೆ ಹಾಕಿಕೊಂಡ ಪಶುವಾಗುತ್ತಾನೆ.

ನಮ್ಮ ನಾಗರಿಕತೆ ಬೆಳೆದಂತೆ ನಮ್ಮ ಆಧ್ಯಾತ್ಮಿಕತೆ ಅಥವಾ ಆತ್ಮಶ್ರೀಯೂ ಬೆಳೆಯಬೇಕು. ನಮ್ಮವರು ವಿದ್ಯೆಯನ್ನು ಕುರಿತ "ಸಾ ವಿದ್ಯಾ ಯಾ ವಿಮುಕ್ತಯೇ" ಎಂದು ಹೇಳಿದರು. ನಮ್ಮನ್ನು ಮುಕ್ತರನ್ನಾಗಿ ಮಾಡತಕ್ಕಂತಹುದು ಯಾವುದೋ ಅದೇ ವಿದ್ಯೆ. ಲೌಕಿಕವಿದ್ಯೆ ನಮ್ಮನ್ನು ಲೌಕಿಕದಾಹದಿಂದ ಮುಕ್ತರನ್ನಾಗಿ ಮಾಡುತ್ತದೆ; ಆಧ್ಯಾತ್ಮಿಕ ವಿದ್ಯೆ ನಮ್ಮ ಆತ್ಮ ತೃಷೆಯನ್ನು ಹಿಂಗಿಸುತ್ತದೆ. ಹೀಗೆ ವಿಜ್ಞಾನ, ಕಲೆ– ಎರಡೂ ನಮಗೆ ಬೇಕು. ಇಂದಿನವರೆಗೆ ವಿದ್ಯಾಭ್ಯಾಸ ಕ್ರಮದಲ್ಲಿ ಬರಿಯ ಕಲೆ ಅಥವಾ ವಿಜ್ಞಾನದ ಅಭ್ಯಾಸವನ್ನು ಮಾತ್ರ ಆಯ್ದುಕೊಳ್ಳಬೇಕಾಗಿತ್ತು. ಇದನ್ನು ಸರಿಪಡಿಸುವುದಕ್ಕಾಗಿ ಸಾಮಾನ್ಯವಿಜ್ಞಾನ ಮತ್ತು ಸಮಾಜವಿಜ್ಞಾನಗಳ ಬೋಧನೆಯನ್ನು ಬಳಕೆಗೆ ತರಲಾಗಿದೆ. ಇದರಿಂದ ವಿಜ್ಞಾನ ವಿಭಾಗದ ವಿದ್ಯಾರ್ಥಿಗಳು ಸಮಾಜವಿಜ್ಞಾನವನ್ನೂ, ಕಲಾವಿದ್ಯಾರ್ಥಿಗಳು ಸಾಮಾನ್ಯವಿಜ್ಞಾನವನ್ನೂ ಅಭ್ಯಸಿಸಿ ಅರಕೆಯಾದುದನ್ನು ಪರಿಪೂರ್ಣಗೊಳಿಸಿಕೊಳ್ಳಲು ಸಹಾಯಕವಾಗಿದೆ.

ಪರಿಪೂರ್ಣತೆಯನ್ನು ಪಡೆಯದ ಮನುಷ್ಯನು ಅಸುಖಿಯಾಗುತ್ತಾನೆ. ಪ್ರಾಚೀನಕಾಲದ ಉಪನಿಷತ್ತಿನ ಋಷಿಯೊಬ್ಬನು 'ಅಂಧಂ ತಮಃ ಪ್ರವಿಶಂತಿ ಯೇ ಅವಿದ್ಯಾಂ ಉಪಾಸತೇ। ತತೋ ಭೂಯ ಇವ ತೇ ತಮೋ ಯ ಉ ವಿದ್ಯಾಯಾಂರತಾಃ' ಎಂದು ಹೇಳಿದ್ದಾನೆ. ಬರಿಯ ಅವಿದ್ಯೆಯನ್ನು ಉಪಾಸಿಸುವವನು ತಮಸ್ಸಿಗೆ ಇಳಿಯುತ್ತಾನೆ. ಯಾವನು ಬರಿಯ ವಿದ್ಯೆಯನ್ನು ಬೆಳೆಸಿಕೊಂಡು ಹೋಗುತ್ತಾನೆಯೋ ಅವನೂ ಕತ್ತಲೆಗೆ ಇಳಿಯುತ್ತಾನೆ. ವಿದ್ಯೆ ನಮ್ಮನ್ನು ಭಗವಂತನ ಕಡೆಗೆ ಕೊಂಡೊಯ್ಯುವುದು; ಅವಿದ್ಯೆ ಲೌಕಿಕ ಸುಖವನ್ನು ನೀಡುವುದು. ಅವಿದ್ಯೆಯನ್ನು ಸಂಪೂರ್ಣವಾಗಿ ಬಿಟ್ಟೇಬಿಡುತ್ತೇನೆಂದು ಬರಿಯ ವಿದ್ಯೆಯನ್ನೇ ಬೆನ್ನಟ್ಟುವವನು ಅವಿದ್ಯೆಯಿಂದ ಇಳಿಯುವುದಕ್ಕಿಂತಲೂ ಭಯಂಕರವಾದ ಕತ್ತಲೆಗೆ ಇಳಿಯುತ್ತಾನೆ. ಈ ಭೂಮಿ ನಮ್ಮ ಆತ್ಮದ ಸಾಧನರಂಗ. ಇಲ್ಲಿ ವಿದ್ಯೆ ಅವಿದ್ಯೆಗಳೆರಡನ್ನೂ ಅಭ್ಯಸಿಸಬೇಕು. ಪರಸ್ಪರ ವಿರುದ್ಧವಾಗದಂತೆ ಅವೆರಡನ್ನೂ ಸಮನ್ವಯಗೊಳಿಸಿಕೊಂಡವರು ಸುಖಿಯಾಗುತ್ತಾರೆ. ಆದ್ದರಿಂದ ನಮ್ಮ ವಿದ್ಯಾಸಂಸ್ಥೆಗಳು ಮಕ್ಕಳಲ್ಲಿ ಇವೆರಡೂ ಬೆಳೆಯುವಂತೆ ನೋಡಿಕೊಳ್ಳಬೇಕು. ಬೇರೆ ಸಂಸ್ಥೆಗಳಲ್ಲಿ ಆಧ್ಯಾತ್ಮಿಕಕ್ಕೆ ಅಷ್ಟು ಬೆಲೆ ಇಲ್ಲದಿರಬಹುದು. ವಿದ್ಯಾಸಂಸ್ಥೆಗಳಲ್ಲಿ ಮಾತ್ರ ಅದಕ್ಕೆ ಅಗತ್ಯವಾಗಿಯೂ ಬೆಲೆ ನೀಡಬೇಕು. ಆದರೆ, ಹಾಗೆ ಮಾಡುವಾಗ ಯಾವ ಸಂಕುಚಿತ ಭಾವನೆಯೂ ಸುಳಿಯಬಾರದು. ಇಲ್ಲಿ ಯಾವ ಒಂದು ಮತದ ತತ್ತ್ವಗಳನ್ನು ಬೋಧಿಸುವುದಿಲ್ಲ; ಎಲ್ಲ ಮತಗಳ ಉತ್ತಮಾಂಶಗಳನ್ನೂ ತೆಗೆದುಕೊಳ್ಳಬೇಕು. ಎಲ್ಲ ಗುರುಗಳು ಎಲ್ಲ ಪ್ರವಾದಿಗಳು ಎಲ್ಲ ಬೋಧಕರು ಹೇಗೆ ಸತ್ಯ, ಧರ್ಮ, ಸೌಂದರ್ಯದ ಕಡೆ ಮುಂದುವರಿದಿದ್ದಾರೆಂಬುದನ್ನು ತೋರಿಸಿಕೊಡಬೇಕು. ಹಾಗಾದಾಗ ಅನ್ಯಮತದ್ವೇಷ ಮತ್ತು ಸಂಕುಚಿತ ಭಾವನೆಗಳು ವಿನಷ್ಟವಾಗುತ್ತವೆ; ನಿಜವಾದ ಭಾರತೀಯ ದೃಷ್ಟಿ ಬೆಳೆದಂತಾಗುತ್ತದೆ. ಅಷ್ಟೇ ಅಲ್ಲ, ಪ್ರಪಂಚದ ದೃಷ್ಟಿಯೆಲ್ಲವೂ ಇತ್ತ ಬಾಗುತ್ತದೆ.

ಗ್ರಾಮಾಂತರದ ವಿದ್ಯಾಭ್ಯಾಸವನ್ನು ಕುರಿತು ಎರಡು ಮಾತುಗಳನ್ನು ಆಡುವುದು ಇಲ್ಲಿ ಅಪ್ರಕೃತವಾಗಲಾರದು. ಈಗ ಕೆಲವು ಕಾಲದ ಹಿಂದೆ ಜಿಲ್ಲಾ ಕೇಂದ್ರಗಳಲ್ಲಿ ಮಾತ್ರ ಹೈಸ್ಕೂಲುಗಳಿದ್ದರೆ ಹೆಚ್ಚು ಎನ್ನುವ ಸ್ಥಿತಿ ಇತ್ತು. ಕಾಲೇಜುಗಳಂತೂ ಬೆಂಗಳೂರು ಮೈಸೂರಿಗೇ ಮೀಸಲು. ಇವುಗಳಲ್ಲಿ ಓದುತ್ತಿದ್ದವರೆಂದರೆ ಪಟ್ಟಣಿಗರು. ಅದರಲ್ಲಿಯೂ ವಿರಾಮವಿದ್ದ ಶ್ರೀಮಂತರ ಅಥವಾ ಉತ್ತಮ ವರ್ಗದವರ ಮಕ್ಕಳು ಮಾತ್ರ . ಒಂದು ತರಗತಿಯಲ್ಲಿ ಹತ್ತು ಹದಿನೈದು ಜನರಿದ್ದರೆ ಹೆಚ್ಚು. ಉಪಾಧ್ಯಾಯರು ವಿದ್ಯಾರ್ಥಿಯ ಕಿವಿಹಿಂಡಿ, ಕಪಾಳಕ್ಕೆ ಹೊಡೆದು, ಬೆಂಚಿನ ಮೇಲೆ ನಿಲ್ಲಿಸಿ, ಸ್ಪೆಲ್ಲಿಂಗ್ ಉರು ಹೊಡೆಸಿ, ಡಿಕ್ಟೇಷನ್ನಿನ ತಪ್ಪುಗಳನ್ನೆಲ್ಲಾ ಇಂಪೊಸಿಷನ್ ಬರೆಸಿ, ಮನೆಯಲ್ಲಿ ಬಾಯಿಪಾಠ ಮಾಡುವಂತೆ ನಿರ್ಬಂಧಿಸಿ, ಕವಾಯಿತ ಕೊಟ್ಟು, ಸಾಮು ಮಾಡಿಸುತ್ತಿದ್ದರು. ಇಷ್ಟೆಲ್ಲಾ ಸಾಧನೆಯ ಫಲವಾಗಿ ವಿದ್ಯಾರ್ಥಿಗೆ ತಕ್ಕಮಟ್ಟಿನ ಇಂಗ್ಲಿಷ್ ಬರುತ್ತಿತ್ತು. ಲೋಯರ್ ಸೆಕೆಂಡರಿ ಪಾಸು ಮಾಡಿ ಹೈಸ್ಕೂಲಿನಲ್ಲಿ ಕಾಲಿಡುತ್ತಲೇ ದಪ್ಪದಪ್ಪನೆಯ ಇಂಗ್ಲಿಷ್ ಚರಿತ್ರೆ ಅಥವಾ ಇಂಗ್ಲಿಷ್‌ನ ಇತರ ಪಠ್ಯಪುಸ್ತಕಗಳು ವಿದ್ಯಾರ್ಥಿಯ ಕೈಗೆ

ಬರುತ್ತಿದ್ದವು. ದಪ್ಪಪುಷ್ಟವಾದ ಆ ಪುಸ್ತಕಗಳನ್ನು ಕಂಡು ಅವನಿಗೆ ಖುಷಿಯೋ ಖುಷಿ. ಕನ್ನಡ ಪುಸ್ತಕಗಳು ಅಷ್ಟೇನೂ ಅಂದವಾಗಿಲ್ಲದೆ ಸಣಕಲಾಗಿರುತ್ತಿದ್ದವು. ಇದಕ್ಕೆ ತಕ್ಕಂತೆ ಕನ್ನಡ ಪಂಡಿತರು. ಇಂಗ್ಲಿಷ್ ಮೇಷ್ಟ್ರು, ಸೂಟು, ಬೂಟು, ಟೈ, ಕಾಲರ್ ಹಾಕಿಕೊಂಡು ಲಕ್ಷಣವಾಗಿರುತ್ತಿದ್ದರು. ಆದ್ದರಿಂದ ಇಂಗ್ಲಿಷ್ ಪುಸ್ತಕ, ಇಂಗ್ಲಿಷ್ ಮೇಷ್ಟರು ವಿದ್ಯಾರ್ಥಿಗಳ ಹೆಮ್ಮೆಯಾಗಿದ್ದರು.

ಇಂದು ಕಾಲ ಬದಲಾಯಿಸಿದೆ. ಹಳ್ಳಿಹಳ್ಳಿಗೂ ಹೈಸ್ಕೂಲುಗಳಾಗಿವೆ. ಕಾಲೇಜುಗಳ ಸಂಖ್ಯೆಯೂ ಬೆಳೆಯುತ್ತಿದೆ. ಪ್ರತಿಯೊಂದೂ ಜಿಲ್ಲೆಗೂ ಒಂದೆರಡು ಕಾಲೇಜುಗಳಾದಂತಾಗಿದೆ. ಇತ್ತೀಚೆಗೆ ಮೈಸೂರು ವಿಶ್ವವಿದ್ಯಾನಿಲಯದ ಏಳು ಇಂಟರ್ ಮೀಡಿಯಟ್ ಕಾಲೇಜುಗಳನ್ನು ಅಪ್ ಗ್ರೇಡ್ ಮಾಡುವ ವಿಚಾರ ಪತ್ರಿಕೆಗಳಲ್ಲಿ ಪ್ರಸ್ತಾಪಿತವಾಗಿರುವುದನ್ನು ನೀವು ಓದಿರಬಹುದು. ಸರ್ಕಾರದ ಮೇಲೆ ಒಂದು ಬಗೆಯ ಜುಲುಂ ಪ್ರಯೋಗಿಸುವಷ್ಟು ಆಕಾಂಕ್ಷೆ ಜನರಲ್ಲಿ ಕಂಡುಬರುತ್ತಿದೆ.ಕಾಲೇಜುಗಳಿಗೆ ಅಗತ್ಯವಾದ ಅನುಕೂಲ್ಯಗಳನ್ನೆಲ್ಲಾ ಸರ್ಕಾರದಿಂದ ನಿರೀಕ್ಷಿಸದೇ ತಾವೇ ಕಲ್ಪಿಸಿಕೊಳ್ಳಲು ಜನ ಸಿದ್ಧರಾಗಿದ್ದಾರೆ. ಹೀಗೆ ಜನ ಧೈರ್ಯವಾಗಿ ಮುಂದಡಿಯಿಟ್ಟರೆ ಕಾರ್ಯ ಸಿದ್ಧಿಯಾಗಿಯೇ ಆಗುತ್ತದೆ. ಇದರಲ್ಲಿ ಅಧೈರ್ಯ ಸಲ್ಲದು. ತನಗೆ ತಾನು ಸಹಾಯ ಮಾಡಿಕೊಳ್ಳುವವನಿಗೆ ದೇವರು ಸಹಾಯ ಮಾಡುತ್ತಾನೆ. ತನ್ನ ಕಾಲಮೇಲೆ ತಾನು ನಡೆಯುವವನು ಬೀಳುವಂತಾದರೆ ಯಾರಾದರೂ ನೆರವು ನೀಡುತ್ತಾರೆ.

ಹೀಗೆ ಒಂದು ಕಡೆ ವಿದ್ಯಾಸಂಸ್ಥೆಗಳು ಹೆಚ್ಚುತ್ತಿವೆ. ಮತ್ತೊಂದು ಕಡೆ, ಇಂಗ್ಲಿಷಿನ ಮಟ್ಟ ಇಳಿದುಹೋಗಿದೆ. ಪಾಠ ಹೇಳುವ ಉಪಾಧ್ಯಾಯರೂ ಗ್ರೇಸ್ ಮಾರ್ಕ್ಸ ತೆಗೆದುಕೊಂಡು ಪಾಸು ಮಾಡಿದವರು. ಅವರಿಗೆ ಇಂಗ್ಲಿಷಿನಲ್ಲಿ ಸರಿಯಾಗಿ ಮಾತನಾಡುವುದಕ್ಕೂ ಬರದು, ಬರೆಯುವುದಕ್ಕೂ ಬರದು. ಪದ ಸಂಪತ್ತಿಗೇ ಅವರಲ್ಲಿ ಅಭಾವ. ಇಂತಹವರು ಎಕನಾಮಿಕ್ಸ್, ಪೊಲಿಟಿಕಲ್ ಸೈನ್ಸ್, ಫಿಲಾಸಫಿ, ಸೈಕಾಲಜಿ ಮೊದಲಾದ ಗಹನ ವಿಚಾರಗಳನ್ನು ಬೋಧಿಸುವುದೇನು? ಇವರಿಂದ ಕಲಿತ ಮಕ್ಕಳನ್ನು ಪರೀಕ್ಷೆಯಲ್ಲಿ ಉತ್ತೀರ್ಣರಾಗುವಂತೆ ನಿರೀಕ್ಷಿಸಿದಾಗ ಏನಾಗಬಹುದು? ಭಾಷೆಯಲ್ಲಿ ಪ್ರಭುತ್ವವಿಲ್ಲದ ಮಕ್ಕಳು ಸ್ವತಂತ್ರವಾಗಿ ಬರೆಯಲು ಸಾಧ್ಯವೇ? ಇಂಗ್ಲಿಷಿನಲ್ಲಿ ಒಂದು ಪತ್ರವನ್ನು ಸರಿಯಾಗಿ ಬರೆಯಲು ತಿಳಿಯದ, ಕ್ರಿಯಾಪದವನ್ನು ಎಲ್ಲಿ ಹಾಕಬೇಕೆಂದು ತಿಳಿಯದ, ವಿದ್ಯಾರ್ಥಿಗಳು ಗಹನವಾದ ವಿಚಾರಗಳನ್ನು ಬರೆಯತೊಡಗಿದರೆ ಉತ್ತರ ಯಾವ ಮಟ್ಟದಲ್ಲಿದ್ದೀತು? ಅವರು ಇತರರಿಂದ ಪ್ರಬಂಧಗಳನ್ನು ಬರೆಸಿಕೊಂಡು ಉರುಹೊಡೆಯುತ್ತಾರೆ; ಅದನ್ನು ಬತ್ತಳಿಕೆಯಲ್ಲಿ ಇಟ್ಟುಕೊಂಡು ಪರೀಕ್ಷೆಯ ರಣಾಂಗಣಕ್ಕೆ ನುಗ್ಗುತ್ತಾರೆ. ನಿರೀಕ್ಷಿಸಿದ ಪ್ರಶ್ನೆಗಳೇ ಬಂದರೆ ಸರಿಯಾಗಿ ಬರೆಯುತ್ತಾರೆ; ಇಲ್ಲದಿದ್ದರೆ ಇಲ್ಲ. ಅಥವಾ ಪ್ರಶ್ನೆ ಏನೇ ಇರಲಿ, ತಮಗೆ ಗೊತ್ತಿರುವ ಉತ್ತರವನ್ನೇ ಬರೆಯುತ್ತಾರೆ!

ಈ ದುಃಸ್ಥಿತಿಯನ್ನು ಗಮನಿಸಿ ಈಗ ಕೆಲವು ವರ್ಷಗಳ ಹಿಂದೆ ನಮ್ಮ ಸಂಸ್ಥಾನದ

ಹೈಸ್ಕೂಲುಗಳಲ್ಲಿ ಕನ್ನಡ ಮಾಧ್ಯಮವನ್ನು ಬಳಕೆಗೆ ತಂದರು. ಆಗ "ಎಲ್ಲವನ್ನೂ ಕನ್ನಡದಲ್ಲಿ ಬೋಧಿಸುವುದು ಸಾಧ್ಯವೇ? ಕನ್ನಡದಲ್ಲಿ ಪಠ್ಯಪುಸ್ತಕಗಳೆಲ್ಲಿವೆ?" ಎಂಬ ದೊಡ್ಡ ಕೂಗೆದ್ದಿತು. ಈಗ ಪಠ್ಯಪುಸ್ತಕಗಳು ರಾಶಿರಾಶಿಯಾಗಿ ಬರುತ್ತಿವೆ; ಪಾಠಗಳನ್ನು ಕನ್ನಡದಲ್ಲಿ ಹೇಳಿಕೊಡುತ್ತಿದ್ದಾರೆ; ಅದು ಸಮರ್ಪಕವಾಗಿ ನಡೆದುಕೊಂಡು ಬರುತ್ತಿದೆ. ಈ ಪದ್ಧತಿ ಶಿಕ್ಷಣತತ್ತ್ವಕ್ಕೆ ಅನುಸಾರವಾಗಿಯೂ ಇದೆ. ನಾವು ಯಾವ ಭಾಷೆಯಲ್ಲಿ ಹುಟ್ಟಿ ಬೆಳೆದಿದ್ದೇವೆಯೋ ಅದರಲ್ಲಿ ನಮಗೆ ಪ್ರಭುತ್ವ ಬರುವಂತೆ, ವಿಷಯಗಳು ಸ್ಪಷ್ಟವಾಗಿ ಗೋಚರಿಸುವಂತೆ, ಅನ್ಯಭಾಷೆಯಲ್ಲಿ ಗೋಚರಿಸುವುದಿಲ್ಲ. ಸ್ವತಂತ್ರವಾದ ಆಲೋಚನೆ ಪರಭಾಷೆಯಲ್ಲಿ ಸಾಧ್ಯವಿಲ್ಲ. ಈಗ ವಿಜ್ಞಾನ ವಿಷಯವನ್ನು ತೆಗೆದುಕೊಳ್ಳೋಣ. ನಮ್ಮ ದೇಶದಲ್ಲಿ ಇಷ್ಟೊಂದು ಕೋಟಿ ಕೋಟಿ ಜನ ಇನ್ನೂರು ವರ್ಷಗಳಿಂದ ಇಂಗ್ಲಿಷ್ ವಿದ್ಯಾಭ್ಯಾಸ ಮಾಡುತ್ತಿದ್ದರೂ, ಎಲ್ಲೋ ಒಬ್ಬ ಸಿ.ವಿ. ರಾಮನ್, ಒಬ್ಬ ಪಿ.ಸಿ. ರಾಯ್ ಎಂದು ಒಂದೆರಡು ಹೆಸರುಗಳನ್ನು ಮಾತ್ರ ಹೇಳಬಹುದಾಗಿದೆ. ಇದು ಶುದ್ಧ ಅಪಮಾನಕರ. ಎಲ್ಲಿಯವರೆಗೆ ನಾವು ಅನ್ಯಭಾಷೆಯಲ್ಲಿ ಜ್ಞಾನಬೋಧೆಯನ್ನು ನಡೆಸುತ್ತಾ ಹೋಗುತ್ತೇವೆಯೋ ಅಲ್ಲಿಯವರೆಗೆ ನಾವು ಅನ್ಯರು ಹೇಳಿದುದನ್ನು ತೆಗೆದುಕೊಂಡು ಬಳಸಬಲ್ಲೆವೇ ಹೊರತು ಹೊಸದನ್ನು ಸೃಷ್ಟಿ ಮಾಡುವುದು ಕಷ್ಟಸಾಧ್ಯವಾಗುತ್ತದೆ.

## ಸಿ. ಕನ್ನಡ ಮಾಧ್ಯಮ

ಸ್ವಾತಂತ್ರ್ಯಪೂರ್ವದಲ್ಲಿ ಇಂಗ್ಲಿಷಿಗಿದ್ದ ಸ್ಥಾನ ಈಗ ಸಂಪೂರ್ಣವಾಗಿ ಬದಲಾವಣೆ ಹೊಂದಿದೆ. ಹಿಂದೆ ದೇಶ ಭಾಷೆಗಳು ಅವನತ ಮತ್ತು ಅವಮಾನಿತ ಸ್ಥಿತಿಯಲ್ಲಿದ್ದುವು. ಆದರೆ ಈಗ ಮೂವತ್ತು ವರ್ಷಗಳಲ್ಲಿ ಕಾಲ ಬದಲಾಯಿಸಿದೆ. ಪ್ರಥಮ ವರ್ಗಕ್ಕೆ ಸೇರಿದ ಕೃತಿಗಳು ಕನ್ನಡದಲ್ಲಿ ಮೂಡಿವೆ. ಇತರ ಭಾಷೆಗಳಲ್ಲಿ ಏನಾಗಿದೆ ಎನ್ನುವುದನ್ನು ಅಧಿಕಾರವಾಣಿಯಿಂದ ಮಾತನಾಡುವುದು ಕಷ್ಟ. ಸಾಹಿತ್ಯ ಅಕ್ಯಾಡೆಮಿಯವರು ಪ್ರಕಟಿಸಿರುವ Contemporary Literature ಎಂಬ ಪುಸ್ತಕ ಭಾರತದ ಇತರ ದೇಶಭಾಷೆಗಳು ಸಾಧಿಸಿರುವ ಪ್ರಗತಿ ಅಲ್ಪವಾದುದಲ್ಲ– ಎಂದು ತಿಳಿಸುತ್ತದೆ. ಕನ್ನಡದ ವಿಚಾರವನ್ನು ಮಾತ್ರವೇ ಕುರಿತು ಹೇಳುವುದಾದರೆ, ಎಂತಹ ಕ್ಲಿಷ್ಟ ವಿಷಯವೇ ಆಗಿರಲಿ, ಎಷ್ಟು ಸೂಕ್ಷ್ಮವಾದುದೇ ಆಗಿರಲಿ ಅದನ್ನು ಸ್ಪಷ್ಟವಾಗಿ ವಿವರಿಸುವಷ್ಟು ನಮ್ಮ ಭಾಷೆ ಇಂದು ಪರಿಪುಷ್ಟವಾಗಿದೆ. ಆದ್ದರಿಂದ ಕನ್ನಡದ ಮೂಲಕ ಪಾಠ ಹೇಳುವುದೂ ಸಾಧ್ಯ, ಕಲಿಯುವುದೂ ಸಾಧ್ಯ.

ಇದನ್ನು ಇನ್ನೊಂದು ದೃಷ್ಟಿಯಿಂದಲೂ ಗಮನಿಸಬೇಕು. ಹಿಂದೆ ಹತ್ತು ಜನ ಓದುತ್ತಿದ್ದ ಕಡೆ ಇಂದು ನೂರು ಜನ ಓದುತ್ತಿದ್ದಾರೆ. ಶತಮಾನಗಳಿಂದ ವಿದ್ಯೆ, ಅಕ್ಷರ, ಸಂಸ್ಕೃತಿ ಎಂಬುದನ್ನು ಮೂಸಿ ಕೂಡ ನೋಡದೆ ಇರುವ ಮನೆತನಗಳಿಂದ

ಬಂದ ಮಕ್ಕಳು ಇಂದು ಶಾಲೆಯಲ್ಲಿ ವಿದ್ಯಾಭ್ಯಾಸ ಮಾಡುತ್ತಿದ್ದಾರೆ. ಈ ಮಕ್ಕಳಿಗೆ ಶ್ರೀಮಂತರ ಅಥವಾ ವಿದ್ಯಾವಂತರ ಮಕ್ಕಳಿಗಿರುವ Private tution ಅಥವಾ ಮನೆಯ ಪಾಠದ ಸೌಲಭ್ಯವಿಲ್ಲ, ಉತ್ತಮ ಆರ್ಥಿಕ ಸಾಮರ್ಥ್ಯವನ್ನು ಪಡೆಯುವ ಅನುಕೂಲಗಳಿಲ್ಲ, ಮನೆಯಲ್ಲಿ ಸಂಸ್ಕೃತಿಯ ವಾತಾವರಣವೂ ಇಲ್ಲ. ಇಂತಹ ಲಕ್ಷಾಂತರ ಮಕ್ಕಳು ವಿದ್ಯಾಭ್ಯಾಸ ಮಾಡಬೇಕಾಗಿದೆ. ಅವರಿಗೆ ಇಂಗ್ಲಿಷ್ ಗಂಧವೇ ಗೊತ್ತಿಲ್ಲ. ಉಪಾಧ್ಯಾಯರಾದವರು ಕನ್ನಡದಲ್ಲಿಯಾದರೂ ವಿವರಿಸಿ ಪಾಠ ಹೇಳುತ್ತಾರೆಯೇ? ಇಲ್ಲ . ಕನ್ನಡದಲ್ಲಿ ಪಾಠ ಹೇಳಿದರೆ ಕೆಲವರು ತಮ್ಮ ಘನತೆಗೆ ಧಕ್ಕೆಯಾಗುವುದೆಂದು ಭಾವಿಸುವವರಿದ್ದಾರೆ. ಈ ಸ್ಥಿತಿಯಲ್ಲಿ ಮಕ್ಕಳಿಗೆ ಆಗುತ್ತಿರುವ ನಷ್ಟವನ್ನು ಯಾರೂ ಗಮನಿಸುತ್ತಿಲ್ಲ.

ವಿಶ್ವವಿದ್ಯಾನಿಲಯದ ಪರೀಕ್ಷೆಗಳ ಪರಿಚಯವಿರುವವರು ಇಂಗ್ಲಿಷ್ ಮಾಧ್ಯಮದಿಂದ ಆಗುತ್ತಿರುವ ಅನ್ಯಾಯವನ್ನು ಸ್ಪಷ್ಟವಾಗಿ ಮನಗಂಡಿರುತ್ತಾರೆ. ವಿದ್ಯಾರ್ಥಿಗಳ ಉತ್ತರಪತ್ರಿಕೆಗಳನ್ನು ತೆಗೆದು ನೋಡಿ, ಅಧ್ಯಾಪಕರಾದವರು ಮರುಭೂಮಿಯಲ್ಲಿ ನೀರನ್ನು ಹುಡುಕುವಂತೆ ಸ್ವಲ್ಪ ಆಧಾರ ಸಿಕ್ಕಿದರೂ ಸಾಕು, ನಂಬರು ಕೊಡೋಣವೆಂದು ಹೊರಟರೂ ಅವರಿಗೆ ಹತಾಶೆ. ಅಧ್ಯಾಪಕರು ಎಷ್ಟು ಉದಾರಿಗಳಾದರೂ ಶೇಕಡಾ ಇಪ್ಪತ್ತು ಮಂದಿ ವಿದ್ಯಾರ್ಥಿಗಳು ತೇರ್ಗಡೆಯಾಗುವುದೂ ಸಾಧ್ಯವಿಲ್ಲ. ಗ್ರೇಸ್ ಅಂಕಗಳ ಕೃಪೆಯಿಂದ ಶೇಕಡಾ ಇಪ್ಪತ್ತು ಮಂದಿ ಕಷ್ಟದಿಂದ ತೇರ್ಗಡೆಯಾಗಿ ವಿಶ್ವವಿದ್ಯಾನಿಲಯಕ್ಕೆ ಬರುತ್ತಾರೆ. ಅನೇಕ ವಿದ್ಯಾರ್ಥಿಗಳು ಕನ್ನಡ, ಚರಿತ್ರೆ, ಗಣಿತ ಇತ್ಯಾದಿ ಬೇರೆ ವಿಷಯಗಳಲ್ಲಿ ೫೦%, ೬೦% ಅಂಕಗಳನ್ನು ತೆಗೆಯುವವರು ಇಂಗ್ಲಿಷಿನಲ್ಲಿ ೧೫%ಅಂಕಗಳನ್ನು ಪಡೆಯುವುದೂ ಕಷ್ಟವಾಗಿರುತ್ತದೆ. ಈ ಸ್ಥಿತಿಯಲ್ಲಿಯೇ ಬಿಟ್ಟರೆ ತೇರ್ಗಡೆಯಾಗುವವರ ಸಂಖ್ಯೆ ಅತಿ ಕಡಿಮೆಯಾಗುತ್ತದೆ; ಮಾನವ ಶಕ್ತಿ ಅಪಾರವಾಗಿ ದುರ್ವ್ಯಯವಾದಂತಾಗುತ್ತದೆ.

ಈ ವಿಚಾರಗಳನ್ನು ಪರಿಶೀಲಿಸಿ, ಇಂಗ್ಲಿಷ್ ಎಲ್ಲರಿಗೂ ಆವಶ್ಯಕವೆ? ಎಂಬುದನ್ನು ನಿರ್ಣಯ ಮಾಡಬೇಕು. ನಮ್ಮ ಕರ್ಣಾಟಕದಲ್ಲಿ ಎಷ್ಟು ಮಂದಿ ವಿದ್ಯಾರ್ಥಿಗಳು ಅಖಿಲ ಭಾರತ ರಂಗಕ್ಕೆ ಹೋಗುತ್ತಾರೆ? ಎಷ್ಟು ಮಂದಿ ವಿದ್ಯಾರ್ಥಿಗಳು ಅಂತರರಾಷ್ಟ್ರೀಯ ರಂಗಕ್ಕೆ ಪ್ರವೇಶಿಸುತ್ತಾರೆ? ಎಂಬ ವಿಚಾರವನ್ನು ಮನನ ಮಾಡಬೇಕು. ಅಖಿಲ ಭಾರತೀಯ ರಂಗಕ್ಕೆ ಪ್ರವೇಶಿಸುವವರಿಗೆ ಇಂಗ್ಲಿಷ್ ಬೇಕು. ಅಂತಹ ವಿದ್ಯಾರ್ಥಿಗಳ ಪ್ರಮಾಣ ಎಷ್ಟು? ಅಂತರರಾಷ್ಟ್ರೀಯ ಸ್ಥಾನಮಾನಗಳಲ್ಲಿ ರಾಜಕೀಯ, ವೈಜ್ಞಾನಿಕ ಇತ್ಯಾದಿ ಶಾಖೆಗಳಿಗೆ ಪ್ರವೇಶಿಸುವವರಿಗೆ ಇಂಗ್ಲಿಷ್ ಭಾಷೆಯ ಜ್ಞಾನ ಅವಶ್ಯಕ. ಇನ್ನು ಕರ್ಣಾಟಕದಲ್ಲಿಯೇ ಇದ್ದು ತಮ್ಮ ಜೀವನವನ್ನು ರೂಪಿಸಿಕೊಳ್ಳುವವರೂ ಇದ್ದಾರೆ. ಈ ಮೂರು ಭಾಗದ ವಿದ್ಯಾರ್ಥಿಗಳನ್ನು ವಿಭಾಗ ಮಾಡಿಕೊಂಡು ಯಾರು ಯಾರಿಗೆ ಎಷ್ಟು ಇಂಗ್ಲಿಷ್ ಬೇಕು ಎಂಬುದನ್ನು ನಿಷ್ಕರ್ಷಿಸಬೇಕು.

ನಮ್ಮಲ್ಲಿ ಬಹು ಜನರಿಗೆ ಓದಿ ವಿಷಯವನ್ನು ತಿಳಿದುಕೊಳ್ಳುವಷ್ಟು ಇಂಗ್ಲಿಷ್

ಬಂದರೆ ಸಾಕು. ಅದಕ್ಕಿಂತ ಕಡಿಮೆ ಸಂಖ್ಯೆಯ ಜನರಿಗೆ ಇಂಗ್ಲಿಷ್ ಮಾತನಾಡುವ, ಓದುವ ಜ್ಞಾನ ಬೇಕು. ಅದಕ್ಕಿಂತಲೂ ಕಡಿಮೆ ಸಂಖ್ಯೆಯ ಜನರಿಗೆ ಇಂಗ್ಲಿಷ್ ಮಾತನಾಡುವ, ಓದುವ, ಬರೆಯುವ ಜ್ಞಾನ ಬೇಕು. ನಮ್ಮ ದೇಶದಲ್ಲಿ ಅನೇಕರಿಗೆ ವಿಷಯ ಪರಿಜ್ಞಾನಕ್ಕಾಗಿ ಇಂಗ್ಲಿಷ್ ಭಾಷೆಯನ್ನು ಓದಿ ಅರ್ಥಮಾಡಿಕೊಳ್ಳುವಷ್ಟು ಜ್ಞಾನವಿದ್ದರೆ ಸಾಕು.

ಒಬ್ಬ 'ಎಂಜಿನಿಯರ್', ಒಬ್ಬ 'ಮೆಡಿಕಲ್ ಮ್ಯಾನ್' ಇವರಿಗೆ ಭಾಷಾಜ್ಞಾನ ಬೇಕು. ಹಾಗೆಯೇ ಒಬ್ಬ ಮಂತ್ರಿಯಾಗುವವನಿಗೂ ಭಾಷಾಜ್ಞಾನ ಬೇಕು. ಎಂಜಿನಿಯರ್ ಅಥವಾ ಮೆಡಿಕಲ್ ಮ್ಯಾನ್ ಆಗುವವನು ಶೇಕ್ಸ್ ಪಿಯರ್, ಕೀಟ್ಸ್, ಮಿಲ್ಟನ್, ವರ್ಡ್ಸ್‌ವರ್ತ್, ಮಿಸ್ಟಿಸಿಸಂ ಆಫ್ ಕೋಲ್ ರಿಡ್ಜ್ (Mysticism of Coleridge)–ಈ ವಿಚಾರಗಳಲ್ಲಿ ಇಂಗ್ಲಿಷಿನಲ್ಲಿ ಪ್ರಬಂಧ ಬರೆಯಲಿಲ್ಲವೆಂದು ಐದು ವರ್ಷ ಫೇಲ್ ಮಾಡಿಸಿದರೆ ದೇಶಕ್ಕೆ ದೊಡ್ಡ ನಷ್ಟ. "ನಿಮ್ಮ ಇಂಗ್ಲಿಷ್ ತಂಟೆಗೆ ಬರೋದಿಲ್ಲ, ನಾನು ಪಾಲಿಟೆಕ್ನಿಕ್ಕಿಗೊ (Polytechnic) ಪಾಲಿಟಿಕ್ಸಿಗೊ (Politics) ಹೋಗುತ್ತೇನೆ ಬಿಟ್ಟುಬಿಡಿ" ಎಂದರೆ ನಾವು ಬಿಡುವುದಿಲ್ಲ. "ಇಲ್ಲ, ಮಿಸ್ಟಿಸಿಸಂ ಆಫ್ ಕೋಲ್ ರಿಡ್ಜ್ ಬರೆದ ಹೊರತು ಬಿಡುವುದಿಲ್ಲ" ಎಂದರೆ ಅವನು ಎಷ್ಟು ಪ್ರಯತ್ನ ಮಾಡಿದರೂ ಏನೂ ಪ್ರಯೋಜನವಿಲ್ಲ. "ನಾನು ಏತಕ್ಕೂ ಪ್ರಯೋಜನವಿಲ್ಲದವನು" ಎಂದು ನಿರಾಶೆಗೊಳ್ಳುತ್ತಾನೆ. ಈ ರೀತಿಯಾದ ಕಷ್ಟಕ್ಕೆ ಅವಕಾಶ ಕೊಡದಂತೆ ನೋಡಿಕೊಳ್ಳಬೇಕಾದುದು ಅತ್ಯಂತ ಅವಶ್ಯಕ. ನಾಳೆಯ ದಿನ ಎಂಜನಿಯರ್ ಆಗಲು ಹೋಗುವವನಿಗೆ Mysticism of Coleridge ಅಥವಾ The Character of Hamlet ತಿಳಿಯದಿದ್ದರೂ ಕ್ಷಮಿಸಬೇಕಾಗುತ್ತದೆ. ಯಂತ್ರ, ಶಿಲ್ಪ, ವೈದ್ಯ ಶಾಖೆಗಳಲ್ಲಿ ಪರಿಣತರಾಗುವ ವಿದ್ಯಾರ್ಥಿಗಳಿಗೆ ಇಂಗ್ಲಿಷನ್ನು ಭಾಷೆಗೋಸ್ಕರವಾಗಿಯೇ ಕಲಿಸಬೇಕು. ಸಾಹಿತ್ಯದಲ್ಲಿ ಅಭಿರುಚಿ ಇಲ್ಲದವನನ್ನು ಸಾಹಿತ್ಯದ ಕಡೆಗೆ ಬರಬೇಡವೆಂದು ಹೇಳಿ ಕಳುಹಿಸಬೇಕು.

ಇಂತಾದರೆ ವಿದ್ಯಾರ್ಥಿಗೆ ಸಾಹಿತ್ಯದ ಗಂಧವೇ ಬೇಡವೆ? ಎಂದು ಪ್ರಶ್ನಿಸಬಹುದು. ಈ ಕಾರ್ಯವನ್ನು ಇನ್ನುಮುಂದೆ ಕನ್ನಡಕ್ಕೆ ಬಿಟ್ಟುಬಿಡಿ. ಅತ್ಯುನ್ನತ ಸಾಹಿತ್ಯ ಕೃತಿಗಳು, ಅತ್ಯಂತ ಗಹನವಾದ ಆಲೋಚನಾ ವಿಚಾರಗಳು, ಇವುಗಳೆಲ್ಲ ಈಗಾಗಲೇ ಕನ್ನಡದಲ್ಲಿ ಮೈದೋರಿವೆ. ಇಂಗ್ಲಿಷ್ ಸಾಹಿತ್ಯಕ್ಕೆ ಸರಿಸಾಟಿಯಾಗಿ ಗಮನಾರ್ಹ ಪ್ರಮಾಣದಲ್ಲಿ ಒದಗಿಸಿದೆ, ಮುಂದೆ ಒದಗಿಸುತ್ತದೆ. ಕನ್ನಡವು ಒದಗಿಸುವಷ್ಟು ಪಡೆಯಲು ಕನ್ನಡವಿದೆ, ಸಂಸ್ಕೃತವಿದೆ. ಈಗ ಇಂಗ್ಲಿಷಿನ ಉತ್ತಮ ಕೃತಿಗಳು ಕನ್ನಡಕ್ಕೆ ಬಂದಿವೆ, ಮುಂದೆ ಇನ್ನೂ ಬರುತ್ತವೆ. ಇಂಗ್ಲಿಷ್ ಭಾಷೆಯನ್ನು ಕಲಿತ ಮೇಲೆ ಇಂಗ್ಲಿಷ್ ಸಾಹಿತ್ಯದ ಪುಷ್ಟಿ ಶಕ್ತಿಗಳನ್ನು ಕನ್ನಡದ ಭಾಷಾಂತರಗಳ ಮೂಲಕ ಪಡೆಯುವುದು ಸಾಧ್ಯ. ಈಗ ಫ್ರಾನ್ಸ್ ದೇಶದಲ್ಲಿ ಶೇಕ್ಸ್ ಪಿಯರ್ ಕೃತಿಗಳನ್ನು ಇಂಗ್ಲಿಷಿನಲ್ಲಿ ಓದಿ ಫ್ರೆಂಚ್ ಭಾಷೆಯಲ್ಲಿ ವಿವರಿಸುತ್ತಾರೆ. ಇನ್ನು ಮುಂದೆ ಇಂಗ್ಲಿಷ್ ಪುಸ್ತಕಗಳನ್ನು ಕನ್ನಡದಲ್ಲಿಯೇ ಪಾಠ ಹೇಳಬೇಕು. ನಮ್ಮಲ್ಲಿ ಸಾಹಿತ್ಯಕ್ಕೋಸ್ಕರ

ಕನ್ನಡ ಆನರ್ಸ್ ಮತ್ತು ಸಂಸ್ಕೃತ ಆನರ್ಸ್ ತರಗತಿಗಳಲ್ಲಿ ವ್ಯಾಸಂಗ ಮಾಡುವ ವಿದ್ಯಾರ್ಥಿಗಳು ಇಂಗ್ಲಿಷ್ ಸಾಹಿತ್ಯವನ್ನು ಚೆನ್ನಾಗಿ ಅಭ್ಯಾಸ ಮಾಡಬೇಕು. ಅವರ ಶೇಕ್ಸ್ ಪಿಯರ್, ಮಿಲ್ಟನ್, ವರ್ಡ್ಸ್‌ವರ್ತ್ ಮೊದಲಾದ ಕವಿಗಳನ್ನು ಚೆನ್ನಾಗಿ ಅಭ್ಯಾಸ ಮಾಡಿ, ನಿಷ್ಕೃಷ್ಟವಾದ ಜ್ಞಾನವನ್ನು ಪಡೆಯಲಿ. ಆದರೆ ಇಂಗ್ಲಿಷನ್ನು ಕನ್ನಡದಲ್ಲಿ ಬೋಧಿಸಬೇಕು. ಪರೀಕ್ಷೆಯಲ್ಲಿ ಉತ್ತರಗಳನ್ನು ಕನ್ನಡದಲ್ಲಿ ಬರೆಯಬೇಕು. ಇದರಿಂದ ದೇಶಕ್ಕೆ ಕ್ಷೇಮ. ಸಹಸ್ರಾರು ವಿದ್ಯಾರ್ಥಿಗಳ ಶ್ರೇಯಸ್ಸೂ ಆಗುತ್ತದೆ.

ನಮ್ಮ ದೇಶದಲ್ಲಿ ಇಂಗ್ಲಿಷ್ ಬೇಡವೇ ಬೇಡ– ಎಂದು ಹೇಳುವವರು ಕೆಲವರಿದ್ದಾರೆ; ದೇಶಭಾಷೆಗಳೇ ಬೇಡ, ಇಂಗ್ಲಿಷಿರಲಿ– ಎಂದ ಹೇಳುವವರೂ ಇದ್ದಾರೆ. ಈ ಎರಡು ತೀವ್ರ ಭಾವನೆಗಳನ್ನು ದೂರಮಾಡಿ, ಯಾವ ಮಾರ್ಗವನ್ನು ಕೈಕೊಂಡರೆ ನಮ್ಮ ದೇಶಕ್ಕೆ ಕ್ಷೇಮವೋ, ಸಹಾಯವೋ ಆ ಮಾರ್ಗವನ್ನು ನಿಶ್ಚಯಿಸಬೇಕು– ನಮಗೆ ಬೇಕಾದುದು ಇಂಗ್ಲಿಷ್ ಸಾಹಿತ್ಯದ ಪುಷ್ಟಿ, ಶಕ್ತಿ. ಅದನ್ನು ಪಡೆಯಲು ಇಂಗ್ಲಿಷ್ ಪಾಠಗಳನ್ನು ಕನ್ನಡದಲ್ಲಿ ಬೋಧಿಸಬೇಕು. ಪರೀಕ್ಷೆಯಲ್ಲಿ ಉತ್ತರವನ್ನು ಕನ್ನಡದಲ್ಲಿ ಬರೆಯಬೇಕು. ಇದರಿಂದ ದೇಶದ ಕಲ್ಯಾಣವಾಗುತ್ತದೆ. ಇಂಗ್ಲಿಷ್ ಕವಿಗಳೂ ಸಾಹಿತಿಗಳೂ ಹೆಚ್ಚು ಆತ್ಮೀಯರಾಗಿ ನಮ್ಮ ಬಳಿಗೆ ಬರುತ್ತಾರೆ. ಯಾವ ಪೂರ್ವಾಭಿಪ್ರಾಯಗಳನ್ನೂ ಇಟ್ಟುಕೊಳ್ಳದೆ ಶಿಕ್ಷಣತಜ್ಞರು ನಿರ್ಮಲ ಹೃದಯದಿಂದ ಈ ವಿಚಾರಗಳನ್ನು ಮನನ ಮಾಡಬೇಕು. ಇಂಗ್ಲಿಷನ್ನು ದೊಡ್ಡ ಚಿನ್ನದ ಕಡಾಯಿಯೆಂದೇ ಭಾವಿಸೋಣ. ಅದರ ತುಂಬ ಹಾಲಿರುವುದನ್ನು ಒಪ್ಪಿಕೊಳ್ಳೋಣ. ಆದರೆ, ನಮ್ಮ ಮಕ್ಕಳಿಗೆ ಪುಷ್ಟಿಯಾಗಿ ಹಾಲು ಕೊಡುವಾಗ ಚಿಕ್ಕ ಒಳಲೆಯಲ್ಲಿ ಕೊಟ್ಟರೆ ಸಾಕು. ಅದಕ್ಕೆ ಬದಲಾಗಿ ಚಿನ್ನದ ಕಡಾಯಿ ಬಹಳ ಬೆಲೆಯುಳ್ಳದ್ದು ಎಂದು ಮಕ್ಕಳು ಅದರಲ್ಲಿ ಹಾಲು ಕುಡಿಯಲೆಂದು ಬಿಟ್ಟರೆ ಆ ಕಡಾಯಿಯನ್ನು ಎತ್ತುವಾಗ ಹಾಲನ್ನು ಚೆಲ್ಲಿಕೊಂಡು, ಆ ಭಾರವಾದ ಕಡಾಯಿಯನ್ನು ಮೈಮೇಲೆ ಹಾಕಿಕೊಂಡು ಮಕ್ಕಳು ಅಪಘಾತಕ್ಕೆ ಒಳಗಾಗುತ್ತಾರೆ. ಒಂದು ವೇಳೆ ಎತ್ತಲು ಸಮರ್ಥರಾದ ಮಕ್ಕಳೂ ಅದನ್ನು ಚೆಲ್ಲಿಕೊಂಡು ಬಾಯಿಗೆ ಸುರಿದುಕೊಂಡರೂ ಹಾಲು ಹೊಟ್ಟೆಗೆ ಹೋಗದಿರಬಹುದು. ಚಿನ್ನದ ಕಡಾಯಿ ಎಷ್ಟೇ ಬೆಲೆ ಬಾಳುವುದಾದರೂ ಅದರ ಭಾರ ನಮಗೆ ಬೇಡ.

ಪಠ್ಯಪುಸ್ತಕಗಳನ್ನು ಸಿದ್ಧಮಾಡುವಾಗ ಮನಶ್ಶಾಸ್ತ್ರದ ದೃಷ್ಟಿಯಿಂದ, ಅದರಲ್ಲೂ ಮಕ್ಕಳ ಮನಸ್ಸಿನ ಪರಿಜ್ಞಾನದಿಂದ ಬೇರೆ ಬೇರೆ ಭಾಷೆಯವರು ಏನು ಮಾಡಿದ್ದಾರೆ, ಏನು ಹೇಳುತ್ತಾರೆ– ಎಂಬುದನ್ನು ಮನ್ನಿಸಬೇಕು. ಈಗ ರಾಷ್ಟ್ರದಲ್ಲಿ ನೂರಾರು ಭಾಷೆಗಳಿವೆ. ಉಜ್‌ಬೆಕ್ ಸಂಸ್ಥಾನದಲ್ಲಿ ಆಡುವ ಭಾಷೆ ಹೊರತು ಲಿಪಿ ಕೂಡ ಇರಲಿಲ್ಲ. ಅಂತಹ ಕಾಡು ಜನರಿದ್ದ ದೇಶವದು. ಈಗ ಅದರ ಭಾಷೆ ಬೆಳೆದು ಒಂದು ವಿಶ್ವವಿದ್ಯಾನಿಲಯವು ನಿರ್ಮಿತವಾಗಿ ಲಕ್ಷಾಂತರ ಗ್ರಂಥಗಳು ಸೃಷ್ಟಿಯಾಗಿ ಸಂಶೋಧನೆಯ ಕಾರ್ಯವೂ ನಡೆಯುತ್ತಿದೆ. ಇದನ್ನು ನೋಡಿದಾಗ ಆಶ್ಚರ್ಯವೂ ಆನಂದವೂ ಆಗುತ್ತದೆ. ಎಲ್ಲೋ ಒಂದು ಮೂಲೆಯ ದೇಶ ಇಂತಹ ಅದ್ಭುತ ರೀತಿಯಲ್ಲಿ ಮುಂದುವರಿದಿರುವಾಗ, ಆ ದೇಶ ವೈಜ್ಞಾನಿಕ ಜ್ಞಾನವನ್ನು ಹೇಗೆ ಪಡೆಯುತ್ತಿದೆ, ಇಂಗ್ಲಿಷನ್ನು ಎಷ್ಟರಮಟ್ಟಿಗೆ

ಬಳಸುತ್ತಿದೆ– ಎಂಬುದನ್ನು ತಿಳಿಯಬೇಕು. ನಾವು ರಾಗ ರಸರಂಜಿತರಾಗುವುದು ಬೇಡ. ವೈಜ್ಞಾನಿಕವಾಗಿ ವಿವೇಚನೆಯಿಂದ ವಿಚಾರ ಮಾಡೋಣ. ಚೀಣಾ ಮೊದಲಾದ ದೇಶಗಳಲ್ಲಿ ಇಂಗ್ಲಿಷಿನ ಸ್ಥಾನಮಾನವೇನೆಂಬುದನ್ನು ಅರಿತುಕೊಳ್ಳೋಣ. ಈ ವಿಶಾಲವಾದ ದೃಷ್ಟಿಯಿಂದಲೂ ವಿಚಾರದಿಂದಲೂ ವಿವೇಕಿಗಳಾಗಿ ಇನ್ನುಮುಂದೆ ನಮ್ಮ ಮಕ್ಕಳ ತಲೆಯ ಮೇಲೆ ಇಂಗ್ಲಿಷ್ ಚಪ್ಪಡಿಯ ಭಾರವನ್ನು ಹೊರಿಸಿ, ಅವರನ್ನು ಕುಂಠಿತರನ್ನಾಗಿ ಮಾಡುವ ಅನುಚಿತ ಕಾರ್ಯವನ್ನು ನಿಲ್ಲಿಸಬೇಕು. ಈ ವಿಚಾರವಾಗಿ ಎಲ್ಲರೂ ಚೆನ್ನಾಗಿ ಆಲೋಚಿಸಿ, ರಾಷ್ಟ್ರದ ಅಭ್ಯುದಯಕ್ಕೆ ಸಾಧಕವಾದುದನ್ನು ಕಾರ್ಯರೂಪಕ್ಕೆ ತರಲು ಯತ್ನಿಸಬೇಕು. ಇಂಗ್ಲಿಷಿನಲ್ಲಿ ಸಾಧಿಸಿರುವಷ್ಟನ್ನು ನಾವು ಸಾಧಿಸಿಲ್ಲವೆಂದು ದುಃಖಿಸಬೇಕಾಗಿಲ್ಲ. ವೈಜ್ಞಾನಿಕ ಕ್ಷೇತ್ರವನ್ನು ಬಿಟ್ಟರೆ, ಸಾಹಿತ್ಯ ಅಲಂಕಾರ ಇತ್ಯಾದಿ ಪ್ರಕಾರಗಳಲ್ಲಿ ನಾವು ನಾಚಿಕೊಳ್ಳಬೇಕಾಗಿಲ್ಲ, ಗ್ರೀಕ್, ಫ್ರೆಂಚ್, ಜರ್ಮನ್, ಲ್ಯಾಟಿನ್– ಈ ಯಾವ ಭಾಷೆಗಳೂ ಮಾಡದ ಅದ್ಭುತ ಪ್ರಗತಿಯನ್ನು ಭಾರತೀಯ ಕಾವ್ಯಮೀಮಾಂಸೆ ಸಾಧಿಸಿದೆ. ಐ.ಎ. ರಿಚರ್ಡ್ಸ್ ಮೊದಲಾದವರು ಈ ದೃಷ್ಟಿಯಲ್ಲಿ ಸ್ವಲ್ಪಮಟ್ಟಿಗೆ ವಿಚಾರ ಮಾಡಿದ್ದಾರೆ, ಇತ್ತೀಚಿಗಷ್ಟೆ.

ಪಠ್ಯ ವಿಷಯಗಳನ್ನು ಪ್ರಾದೇಶಿಕ ಭಾಷೆಗಳಲ್ಲಿ ಬೋಧಿಸುವುದರ ಪ್ರಯೋಜನವನ್ನು ಕುರಿತು ಎರಡು ಮಾತು. ಕಾಲೇಜಿಗೆ ಬರುವ ಮುನ್ನ ವಿದ್ಯಾರ್ಥಿ ಕ್ಯಾಟ್, ರ್‍ಯಾಟ್, ಮ್ಯಾಟ್ ಎಂಬ ಮಟ್ಟದಿಂದ ಬಹು ಮೇಲಕ್ಕೇನು ಹೋಗಿರುವುದಿಲ್ಲ. ಅವನು ಇಂಗ್ಲಿಷ್ ನಲ್ಲಿರುವ ಪಾರಿಭಾಷಿಕ ಶಬ್ದಗಳನ್ನು ಉಚ್ಚರಿಸುವುದು ಕೂಡ ಕಷ್ಟ. ಲಾಜಿಕ್ ಬಹಳ ಕಷ್ಟವಾದ ಪಾಠವೆಂದು ವಿದ್ಯಾರ್ಥಿಗಳು ತಿಳಿದಿದ್ದರು. ಈಗ ಆ ಪಾಠವನ್ನು ಕನ್ನಡದಲ್ಲಿ ಬೇಗನೆ ಗ್ರಹಿಸುವಂತಾಗಿದೆ. ಇಂಗ್ಲಿಷಿನಲ್ಲಿ ಲಾಜಿಕ್ಕನ್ನು ಓದುವುದಕ್ಕಿಂತಲೂ ಕನ್ನಡದಲ್ಲಿ ತರ್ಕಶಾಸ್ತ್ರ ಸಂಗ್ರಹವನ್ನು ಓದುವುದು ಅವನಿಗೆ ಹೆಚ್ಚು ಸುಲಭ. ಓದುವ ವಿಷಯ ತನಗೆ ಅರ್ಥವಾಗುವುದೆಂಬ ಆತ್ಮವಿಶ್ವಾಸ ವಿದ್ಯಾರ್ಥಿಗಳಿಗೆ ತಿಳಿಯುತ್ತದೆ. ಇನ್ನೂ ಕನ್ನಡದಲ್ಲಿ ಹೆಚ್ಚಾಗಿ ಗಹನವಾದ ಶಾಸ್ತ್ರ ಗ್ರಂಥಗಳು ಸಿದ್ಧವಾಗಿ ವಿದ್ಯಾರ್ಥಿಗಳು ಸುಲಭವಾಗಿ ಗ್ರಹಿಸುವಂತಾಗುತ್ತದೆ. ಈ ದೃಷ್ಟಿಯಲ್ಲಿ ಮುಂದುವರಿದರೆ ತಂದೆ–ತಾಯಿಗಳಿಗೆ ಆಗುತ್ತಿರುವ ಕಷ್ಟವೂ, ಉಪಾಧ್ಯಾಯರ ವ್ಯರ್ಥ ಶ್ರಮವೂ ವಿದ್ಯಾರ್ಥಿಗಳ ನಿರಾಶೆ ಹತಾಶೆಗಳೂ ಪರಿಹಾರವಾಗಿ ರಾಷ್ಟ್ರದ ಸರ್ವೋದಯಕ್ಕೆ ಹೊಸ ಚೈತನ್ಯ ಮೂಡಿದಂತಾಗುತ್ತದೆ. ಈ ನಿಟ್ಟಿನಲ್ಲಿ ನಾವು ಮಾತ್ರವೇ ಅಲ್ಲ; ಇತರ ಅನೇಕ ವಿಶ್ವವಿದ್ಯಾನಿಲಯಗಳು ಪ್ರಯೋಗಗಳನ್ನು ನಡೆಸುತ್ತಾ ಇವೆ. ಅವುಗಳ ಫಲಿತಾಂಶವನ್ನು ಕಾದು ನೋಡೋಣ.

ದೇಶಭಾಷಾ ಮಾಧ್ಯಮ ಕಲಾವಿಭಾಗಕ್ಕೆ ಅಷ್ಟೇನು ಅಹಿತವಾಗಿರದಿದ್ದರೂ ವಿಜ್ಞಾನ ಬೋಧನೆಗೆ ಮಾತ್ರ ಬಹು ನಷ್ಟಕಾರಿಯೆಂಬ ಭಾವನೆ ಕೆಲವರ ತಲೆಯಲ್ಲಿ ತುಂಬಿದೆ. ಅದರಿಂದ ದೇಶದ ಪ್ರಗತಿಗೆ ಕೊಡಲಿಯಿಟ್ಟಂತಾಗುವುದೆಂದು ಅವರ ಎಣಿಕೆ. ವೈದ್ಯ ಅಥವಾ ಎಂಜನಿಯರಿಂಗ್ ವೃತ್ತಿ ಶಿಕ್ಷಣದಲ್ಲಿ ಬರುವ ಪಾರಿಭಾಷಿಕ ಪದಗಳನ್ನು ಭಾಷಾಂತರ ಮಾಡಲು ಸಾಧ್ಯವೆ–ಎಂಬುದು ಅವರ ಶಂಕೆ. ಇದಕ್ಕೆ

ಉತ್ತರವಿಷ್ಟೆ. ಪಾರಿಭಾಷಿಕ ಶಬ್ದಗಳನ್ನು ಭಾಷಾಂತರ ಮಾಡುವ ಅವಿವೇಕಕ್ಕೆ ನಾವು ಹೋಗಬೇಕಾದುದಿಲ್ಲ. ಕಾರು ನಡೆಸುವ ಡ್ರೈವರ್ ಅಥವಾ ಕಂಡಕ್ಟರು ಇಂಗ್ಲಿಷಿನಲ್ಲಿ ಪ್ರಾವೀಣ್ಯ ಪಡೆದವರಲ್ಲವಾದರೂ ಅವರು ಕಾರಿನ ನೂರಾರು ಭಾಗಗಳ ಹೆಸರುಗಳನ್ನು ಹಾಗೆಯೇ ಬಳಸುತ್ತಾರೆ. ಕನ್ನಡದಲ್ಲಿಯೇ ಮಾತನಾಡುತ್ತಾರೆ. ಸೊಗಸಾಗಿ ಕಾರನ್ನು ನಡೆಸುತ್ತಾರೆ. ಸಸ್ಯಶಾಸ್ತ್ರ, ಪ್ರಾಣಿಶಾಸ್ತ್ರ ಮೊದಲಾದ ವಿಜ್ಞಾನ ವಿಭಾಗಗಳಲ್ಲಿ ಸಹಸ್ರಾರು ಪಾರಿಭಾಷಿಕ ಪದಗಳಿವೆ. ಅವೆಲ್ಲಾ ಗ್ರೀಕ್ ಅಥವಾ ಲ್ಯಾಟಿನ್ ಮೂಲದಿಂದ ಬಂದುವು. ಅವನ್ನು ಮೂಲದಲ್ಲಿರುವಂತೆಯೇ ಕನ್ನಡದಲ್ಲಿ ಬಳಸಿಕೊಳ್ಳುತ್ತೇವೆ. ಮ್ಯಾಗ್ನೋಲಿಯಾ ಗ್ರಾಂಡಿಫ್ಲೋರಾ ಎಂಬುದು ಒಂದು ಹೂವಿನ ಹೆಸರು. ಕನ್ನಡದಲ್ಲಿಯೂ ಅದಕ್ಕೆ ಅದೇ ಹೆಸರು. ಅಂತರರಾಷ್ಟ್ರೀಯವಾದ ಪಾರಿಭಾಷಿಕ ಶಬ್ದಗಳನ್ನು ಹೀಗೆ ಬಳಸಿಕೊಳ್ಳುವುದರಿಂದ ಶಿಕ್ಷಣ ಮಾಧ್ಯಮವನ್ನು ಇಂಗ್ಲಿಷಿನಿಂದ ದೇಶಭಾಷೆಗೆ ಬಳಸಿಕೊಳ್ಳುವುದು ಸುಲಭವಾಗುತ್ತದೆ. ಹೀಗೆ ಹೇಳುವಾಗ ನಾವು ಇಂಗ್ಲಿಷನ್ನು ಸಂಪೂರ್ಣವಾಗಿ ಕೈಬಿಡುತ್ತೇವೆಂದು ಅರ್ಥವಲ್ಲ. ಇದರಿಂದ ನಾವು ಯಾವ ದೇಶಕ್ಕೇ ಹೋದರೂ ಯಾವ ಭಾಷೆಯನ್ನೇ ಆಡಿದರೂ ಟೆಕ್ನಿಕಲ್‌ಟರ್ಮ್ಸ್ ಒಂದೇ ಆಗಿರುವುದರಿಂದ ಸುಲಭವಾಗಿ ಪಾಠ ಹೇಳಬಹುದು, ಪಾಠ ಕೇಳಬಹುದು.

ಸುಮಾರು ಎರಡು ಶತಮಾನಗಳಿಂದಲೂ ಆಳುವವರ ಭಾಷೆಯಾಗಿದ್ದು ಆಳುವ ಭಾಷೆಯೂ ಆಗಿದ್ದ ಇಂಗ್ಲಿಷ್ ಒಂದು ರೀತಿಯ ದಂಡ ವಿಧಾನದಿಂದಲೇ ನಮ್ಮನ್ನು ಆಕರ್ಷಿಸುತ್ತಿದ್ದಿತು; ಅದರ ಆರ್ಥಿಕಪ್ರಯೋಜನವೂ ಅದರ ಅಭ್ಯಾಸಕ್ಕೆ ಒಂದು ಮಹತ್ ಪ್ರೇರಣೆಯಾಗಿದ್ದಿತು. ಅಲ್ಲದೆ ಭರತಖಂಡದ ಸ್ವಂತ ಆಸ್ತಿಯಾದ ವೇದ, ಉಪನಿಷತ್ತು, ದರ್ಶನಗಳನ್ನು ಇಂಗ್ಲಿಷ್ ಮುಖಾಂತರವಾಗಿಯೇ ಅಧ್ಯಯನ ಮಾಡುವ ಪರಿಪಾಟಿಯಿತ್ತು. ದೇವ ಭಾಷೆಯಲ್ಲಿಯ ಪವಿತ್ರ ವಿಷಯಗಳನ್ನು ಓದಬಾರದು, ಕೇಳಬಾರದು ಎಂಬ ಭಯಭೀತಿಗಳಿದ್ದ ಕಾಲದಲ್ಲಿ ಇಂಗ್ಲಿಷ್ ತನ್ನ ಭಾಷಾಂತರಗಳ ಮೂಲಕ ಇವುಗಳಿಗೆಲ್ಲಾ ಪ್ರವೇಶವನ್ನು ನೀಡಿದುದರಿಂದ ಅದಕ್ಕೆ ಸಂಸ್ಕೃತಕ್ಕಿಂತಲೂ ಹೆಚ್ಚು ಗೌರವ ಸಲ್ಲುವುದು ಸ್ವಾಭಾವಿಕವಾಗಿತ್ತು. ಆದರೆ, ನಮ್ಮ ಸಾಹಿತ್ಯ ದರ್ಶನಗಳ ಪರಿಚಯವಾದ ಮೇಲೆ ಈ ದೃಷ್ಟಿ ಬದಲಾಯಿಸುವುದು ಸ್ವಾಭಾವಿಕ. ನಾವು ಎಷ್ಟಾದರೂ ಹಿಮಾಲಯದ ಮಕ್ಕಳು; ಪಾಶ್ಚಾತ್ಯರು ಆಲ್ಪ್ಸ್ ಪರ್ವತದ ಮಕ್ಕಳು. ಅವರು ವಿಜ್ಞಾನದಲ್ಲಿ ಬಹು ಮುಂದುವರಿದಿದ್ದಾರೆ. ಆದರೆ ದರ್ಶನದಲ್ಲಿ ಅವರನ್ನು ನಮ್ಮವರೊಡನೆ ಹೋಲಿಸಿದಾಗ ಅವರನ್ನು ಕುಬ್ಜರೆಂದು ಕರೆಯಬೇಕಾಗುತ್ತದೆ. ಇನ್ನು ಮುಂದೆ ನಾವು ಏರಲಿರುವ ಎತ್ತರ ಭಗವತಿ ವಾಗ್ದೇವಿ ನಮ್ಮಲ್ಲಿ ಸೃಷ್ಟಿಸುವ ಮಹಾಕವಿಗಳನ್ನೂ ಮಹಾ ದಾರ್ಶನಿಕರನ್ನೂ ಅವಲಂಬಿಸುತ್ತದೆ. ನಮ್ಮ ಭಾಷೆಗೆ ಜಗತ್ತಿನ ಯಾವ ಭಾಷೆಯ ಶ್ರೀಮಂತತೆಗಾದರೂ ಹೆಗಲೆಣೆಯಾಗಿ ನಿಲ್ಲುವ ಶಕ್ತಿಯಿದೆ.

ಈ ತತ್ವವನ್ನು ಗ್ರಹಿಸಿದ ಮೈಸೂರು ವಿಶ್ವವಿದ್ಯಾನಿಲಯ ಪ್ರೀ–ಯೂನಿವರ್ಸಿಟಿ ತರಗತಿಯಲ್ಲಿ ಈ ವರ್ಷ ಕನ್ನಡ ಮಾಧ್ಯಮವನ್ನು ಬಳಕೆಗೆ ತಂದಿದೆ. ಇಂಗ್ಲಿಷಿನಲ್ಲಿ

ಪ್ರಭುತ್ವವನ್ನು ಸಂಪಾದಿಸಿ ಅಖಿಲ ಭಾರತರಂಗದಲ್ಲಿ ಅಥವಾ ಅಂತರರಾಷ್ಟ್ರದಲ್ಲಿ ಕೆಲಸ ಮಾಡಬೇಕೆನ್ನುವವರು ಇಂಗ್ಲಿಷ್ ಮಾಧ್ಯಮವನ್ನು ತೆಗೆದುಕೊಳ್ಳುವುದಕ್ಕೂ ಅವಕಾಶವಿದೆ. ಒಂದಕ್ಕಿಂತ ಹೆಚ್ಚು ಸೆಕ್ಷನ್ನುಗಳಿರುವ ಪ್ರತಿಯೊಂದು ಕಾಲೇಜಿನಲ್ಲಿಯೂ ಒಂದು ಸೆಕ್ಷನ್ನನ್ನು ಮಾತ್ರ ಕನ್ನಡ ಮಾಧ್ಯಮಕ್ಕೆಂದು ಮೀಸಲಾಗಿರಿಸಿದೆ. ಹತ್ತು ಇಪ್ಪತ್ತು ವರ್ಷಗಳಿಂದ ಪಾಠ ಹೇಳುತ್ತಿರುವ ಪ್ರಾಧ್ಯಾಪಕರು ಇದಕ್ಕಾಗಿ ಕನ್ನಡದಲ್ಲಿ ಪಠ್ಯಪುಸ್ತಕಗಳನ್ನು ಬರೆದಿದ್ದಾರೆ. ಈ ಕನ್ನಡ ಮಾಧ್ಯಮದ ಫಲಿತಾಂಶವನ್ನು ಅಂಕಿ–ಅಂಶಗಳೊಡನೆ ಸಂಗ್ರಹಿಸಲು ಏರ್ಪಾಟು ಮಾಡಲಾಗಿದೆ. ಆ ಫಲಿತಾಂಶಗಳನ್ನು ಸಾರ್ವಜನಿಕರ ಪರಿಶೀಲನೆಗಾಗಿ ಪತ್ರಿಕೆಗಳಲ್ಲಿ ಪ್ರಕಟಿಸಬೇಕೆಂದು ನಿಶ್ಚಯಿಸಲಾಗಿದೆ.

## ಡಿ. ಪ್ರಕಟಣೆಗಳು

ವಿಶ್ವವಿದ್ಯಾನಿಲಯದ ಪ್ರಸಾರಾಂಗವು 'ಪ್ರಚಾರ ಪುಸ್ತಕ ಮಾಲೆ'ಯ ಹೊತ್ತಿಗೆಗಳನ್ನು ಪ್ರಕಟಿಸುವುದಲ್ಲದೆ 'ಕನ್ನಡ ಗ್ರಂಥ ಮಾಲೆ', 'ಪಠ್ಯ ಪುಸ್ತಕಮಾಲೆ', 'ಸರ್ ಕೆ.ಪಿ. ಪುಟ್ಟಣ್ಣ ಚೆಟ್ಟರ ಪುದುವಟ್ಟಿನ ಪ್ರಕಟಣ ಮಾಲೆ', 'ವಿಶೇಷೋಪನ್ಯಾಸ ಪುಸ್ತಕ ಮಾಲೆ' ಎಂಬ ಬೇರೆ ಬೇರೆ ಮಾಲೆಗಳಲ್ಲಿಯೂ, 'ಇತರ ಪ್ರಕಟಣೆ' ಎಂಬ ಶಿರೋನಾಮೆಯಲ್ಲಿಯೂ ಗ್ರಂಥ ಪ್ರಕಟಣೆಯ ಕಾರ್ಯವನ್ನು ಕೈಗೊಂಡಿದೆ. ಇದರ ಜೊತೆಗೆ 'ಪ್ರಬುದ್ಧ ಕರ್ಣಾಟಕ'ವೆಂಬ ತ್ರೈಮಾಸಿಕ ಪತ್ರಿಕೆಯನ್ನೂ ಪ್ರಕಟಿಸುತ್ತಿದೆ.

**ಕನ್ನಡ ಗ್ರಂಥಮಾಲೆ–** ಹಿಂದೆ ಕನ್ನಡ ಸಾಹಿತ್ಯವನ್ನು ಅಭಿವೃದ್ಧಿಪಡಿಸುವ ಉದ್ದೇಶದಿಂದ "ಕನ್ನಡ ಪ್ರಕಟಣಾ ಸಮಿತಿ" ಉದಯವಾಯಿತು. ನವೀನ ಕಾಲಕ್ಕೆ ಬೇಕಾದ ಸಾಹಿತ್ಯ. ಕಲೆ, ವಿಜ್ಞಾನ, ತತ್ವ, ಚರಿತ್ರೆ, ಧರ್ಮ, ಸಂಸ್ಕೃತಿ ಮೊದಲಾದ ವಿಷಯಗಳನ್ನು ಸುಲಭವಾದ ಶೈಲಿಯಲ್ಲಿ ಆಯಾ ವಿಚಾರಗಳಲ್ಲಿ ತಜ್ಞರಾದವರು ಬರೆಯಬೇಕೆಂದು ನಿಷ್ಕರ್ಷೆಯಾಯಿತು. ಈ ವಿಚಾರಗಳಲ್ಲದೆ ಕನ್ನಡದ ಪೂರ್ವ ಸಾಹಿತ್ಯವನ್ನು ಜನರಲ್ಲಿಯೂ ವಿದ್ಯಾರ್ಥಿವರ್ಗದಲ್ಲಿಯೂ ಪ್ರಚಾರಕ್ಕೆ ತರಲು ಉತ್ತಮ ಕಾವ್ಯ ಸಂಗ್ರಹಗಳನ್ನು ತರಬೇಕೆಂದು ಆಶಿಸಿದರು. ಅದರಂತೆಯೇ ಮೂಲಪ್ರತಿಗಳನ್ನು ಪರಿಶೋಧಿಸಿದ ಶುದ್ಧ ಪಾಠಗಳನ್ನೊಳಗೊಂಡು ಪೀಠಿಕೆ, ಶಬ್ದಕೋಶ, ಟಿಪ್ಪಣಿಗಳೊಡನೆ ಕೂಡಿದ ಕಾವ್ಯ ಸಂಗ್ರಹಗಳು ಪ್ರಕಟವಾಗಿವೆ. ಹರಿಶ್ಚಂದ್ರ ಕಾವ್ಯ ಸಂಗ್ರಹ, ಪ್ರಭುಲಿಂಗಲೀಲೆಯ ಸಂಗ್ರಹ, ಪಂಪರಾಮಾಯಣ ಸಂಗ್ರಹ, ಆದಿಪುರಾಣ ಸಂಗ್ರಹ, ಭರತೇಶ ವೈಭವ ಸಂಗ್ರಹ– ಈ ಸಾಹಿತ್ಯ ಸಂಗ್ರಹಗಳು ಈವರೆಗೆ ಅಚ್ಚಾಗಿವೆ. ಕನ್ನಡ ಕಾವ್ಯಮಾಲೆಯಲ್ಲಿ ರಾಜ್ಯಶಾಸ್ತ್ರ, ತತ್ವಶಾಸ್ತ್ರ, ಅರ್ಥಶಾಸ್ತ್ರ, ಕಾವ್ಯಮೀಮಾಂಸೆ ಇತ್ಯಾದಿ ಹಲವಾರು ವಿಷಯಗಳನ್ನೊಳಗೊಂಡ ಪುಸ್ತಕಗಳೂ ಪ್ರಕಟವಾಗಿವೆ.

ಜ್ಞಾನದ ಬೇರೆ ಬೇರೆ ಶಾಖೆಗಳಲ್ಲಿ ತಜ್ಞರಾದವರು ಈ ಪುಸ್ತಕಗಳನ್ನು

ಸುಲಭಶೈಲಿಯಲ್ಲಿ ಬರೆದಿದ್ದರೂ ಪ್ರೌಢವಾದ ವಿಚಾರಗಳನ್ನೊಳಗೊಂಡಿರುವುದರಿಂದ ಇವು ಜನಸಾಮಾನ್ಯರಿಗೆ ಮಾತ್ರವೇ ಅಲ್ಲದೆ ವಿದ್ಯಾವಂತರಿಗೂ ಸಾಕಷ್ಟು ಉಪಯುಕ್ತವಾಗಿವೆ.

**ಪಠ್ಯಪುಸ್ತಕಮಾಲೆ–** ಕನ್ನಡ ಮಾಧ್ಯಮದ ಸೌಲಭ್ಯವನ್ನು ಸದುಪಯೋಗಪಡಿಸಿಕೊಂಡು ವಿಶ್ವವಿದ್ಯಾನಿಲಯದ ಅಭ್ಯಾಸವನ್ನು ಕೈಕೊಳ್ಳುವ ವಿದ್ಯಾರ್ಥಿಗಳ ಸೌಕರ್ಯಕ್ಕಾಗಿ ಈ ಮಾಲೆಯ ಪುಸ್ತಕಗಳು ಪ್ರಕಟಗೊಂಡಿವೆ. ಇದುವರೆಗೆ, ಸುಮಾರು ಇಪ್ಪತ್ತುನಾಲ್ಕು ಪುಸ್ತಕಗಳು ಈ ಮಾಲೆಯಲ್ಲಿ ಪ್ರಕಟವಾಗಿವೆ. ವಿಶ್ವವಿದ್ಯಾನಿಲಯದಲ್ಲಿ ಬಹುಕಾಲದಿಂದಲೂ ಪಾಠ ಹೇಳಿ ನುರಿತ ಅರಿತ ಅಧ್ಯಾಪಕರು ಈ ಗ್ರಂಥಗಳನ್ನು ಬರೆದಿರುವುದರಿಂದ ಇವು ಬಹುಮಟ್ಟಿಗೆ ನಿರ್ದುಷ್ಟವಾಗಿವೆ. ಕನ್ನಡದಲ್ಲಿ ಪಠ್ಯಪುಸ್ತಕಗಳಿಲ್ಲವೆಂಬ ಗೋಣಗಾಟ ಇವುಗಳ ಪ್ರಕಟಣೆಯಿಂದ ನಿಲ್ಲುವಂತಾಗಿದೆ. ಕನ್ನಡ ಮಾಧ್ಯಮದ ವಿದ್ಯಾರ್ಥಿಗಳು ಮಾತ್ರವೆ ಅಲ್ಲದೆ ಇಂಗ್ಲಿಷ್ ಮಾಧ್ಯಮದ ವಿದ್ಯಾರ್ಥಿಗಳಿಗೂ ಇವು ಉಪಯುಕ್ತವಾಗಿವೆಯೆಂದು ತಿಳಿದುಬರುತ್ತದೆ; ಅವರೂ ಇವುಗಳನ್ನು ಕೊಂಡು ಓದುವರೆಂದ ತಿಳಿದುಬಂದಿದೆ. ಈ ಪ್ರಕಟಣಾ ಕಾರ್ಯವನ್ನು ಮುಂದುವರಿಸಿ ಮೂರುವರ್ಷದ ಬಿ.ಎ., ಬಿ.ಎಸ್.ಸಿ., ಮೊದಲಾದ ಡಿಗ್ರಿ ತರಗತಿಯ ವಿವಿಧ ವಿಷಯಗಳ ಮೇಲೆ ಗ್ರಂಥಗಳನ್ನು ಬರೆಸುವ ಕಾರ್ಯವನ್ನು ಈಗಾಗಲೇ ಕೈಕೊಳ್ಳಲಾಗಿದೆ. ಒಂದೆರಡು ಗ್ರಂಥಗಳು ಈಗಾಗಲೆ ಹೊರಗೆ ಬಂದಿವೆ. ಇನ್ನೂ ಹತ್ತಾರು, ನೂರಾರು ಗ್ರಂಥಗಳು ಪ್ರಕಟಣೆಗೆ ಸಿದ್ಧವಾಗಿವೆ, ಸಿದ್ಧವಾಗುತ್ತಿವೆ. ಇನ್ನೊಂದು ವರ್ಷದೊಳಗಾಗಿ ಬಹುಶಃ ಅಗತ್ಯವಾದ ಎಲ್ಲಾ ಗ್ರಂಥಗಳೂ ವಿದ್ಯಾರ್ಥಿಗಳಿಗೆ ದೊರೆಯುವಂತಾಗುವುದೆಂದು ನನ್ನ ಭರವಸೆ.

ಸರ್ ಕೆ.ಪಿ. ಪುಟ್ಟಣ್ಣಚೆಟ್ಟರ ಪುದುವಟ್ಟಿನ ಪ್ರಕಟನ ಮಾಲೆ– ಪ್ರಚಾರ ಪುಸ್ತಕಮಾಲೆಯಂತೆಯೇ ಅತ್ಯಂತ ಜನಪ್ರಿಯವಾಗಿರುವ ಮೊತ್ತೊಂದು ಮಾಲೆ.ಈ ಮಾಲೆಯಲ್ಲಿ ಈಗ ಸುಮಾರು ಇಪ್ಪತ್ತೊಂದು ಪುಸ್ತಕಗಳು ಪ್ರಕಟವಾಗಿವೆ. ವೈಜ್ಞಾನಿಕ ಮತ್ತು ವ್ಯಾವಹಾರಿಕ ವಿಷಯಗಳ ತಿಳಿವು ಸಾಮಾನ್ಯ ಜನರಲ್ಲಿ ಹರಡಲನುಕೂಲವಾಗುವಂತೆ ಸರಳವೂ ಸುಲಭ ಗ್ರಾಹ್ಯವೂ ಆದ ಭಾಷೆಯಲ್ಲಿ ಪುಸ್ತಿಕೆಗಳನ್ನು ಬರೆಯಿಸುವುದು ಈ ಮಾಲೆಯ ಉದ್ದೇಶ. ಈ ಮಾಲೆಯಲ್ಲಿ ಪ್ರಕಟವಾಗಿರುವ ಪುಸ್ತಿಕೆಗಳೆಲ್ಲ ಅಂಥವೇ. ಇಂತಹ ಪುಸ್ತಿಕೆಗಳ ಆವಶ್ಯಕತೆ ಹಿಂದೆ ಇದ್ದುದಕ್ಕಿಂತ ಇಂದು ಹೆಚ್ಚಾಗಿದೆ. ಪ್ರತಿಯೊಬ್ಬ ಸಾಮಾನ್ಯನೂ ವಿದ್ಯುಚ್ಛಕ್ತಿ, ವಿಮಾನ, ಬಾಂಬು, ರೇಡಿಯೋ ಮೊದಲಾದ ಶಕ್ತಿವಿಶೇಷಗಳನ್ನೂ ವಸ್ತುವಿಶೇಷಗಳನ್ನೂ ಪ್ರತಿನಿತ್ಯವೂ ನೋಡುತ್ತಿರುತ್ತಾನೆ; ಅವನ ಸುತ್ತಮುತ್ತ ಅನೇಕ ವಿಚಿತ್ರ ಪ್ರಾಕೃತಿಕ ಘಟನೆಗಳು ನಡೆಯುತ್ತಿರುತ್ತವೆ. ವೈಜ್ಞಾನಿಕ ಪ್ರಯೋಗ ಮತ್ತು ಸಂಶೋಧನೆಗಳ ಪರಿಣಾಮವಾಗಿ ಅವನ ಜೀವನ ದಿನೇ ದಿನೇ ಹೊಸತಾಗುತ್ತಿದೆ, 'ನಾಗರಿಕ'ವಾಗುತ್ತಿದೆ. ಈ ಶಕ್ತಿವಿಶೇಷ, ವಸ್ತು ವಿಶೇಷಗಳ, ವಿಚಿತ್ರ ಘಟನೆಗಳ, ವೈಜ್ಞಾನಿಕ ಪ್ರಯೋಗಗಳ, ನಾಗರಿಕ ಜೀವನದ ಕಡೆಗೆ ಅವನ ಕುತೂಹಲ ದೃಷ್ಟಿ ಸಹಜವಾಗಿ ಹರಡುತ್ತದೆ.

ಅವು ಅವನಿಗೆ ಕೇವಲ ರಹಸ್ಯದ ಗಂಟಾಗುಳಿಯದೆ ಅವನ ತಿಳಿವಿಗೆ ನಿಲುಕುವಂತೆ ಬೋಧಿಸುವುದು ತಿಳಿದವರ ಕರ್ತವ್ಯ.

ಇಂಥ ತಿಳಿವು ಹರಡಲನುಕೂಲವಾಗಲು ಶ್ರೀಮಂತರ ಧನಸಹಾಯವೂ ಒದಗಬೇಕಾಗುತ್ತದೆ. ಗ್ರಂಥಗಳನ್ನು ಬರೆಯಿಸಿ, ಪ್ರಕಟಿಸಿ ಅವುಗಳ ಪ್ರತಿಗಳನ್ನು ಜನರಲ್ಲಿ ಹಂಚುವುದು ಪುಣ್ಯ ಕಾರ್ಯವೆಂದು ಹಿಂದಿನವರು ಭಾವಿಸಿದ್ದರು. ಅಂತಹ ಭಾವನೆಗೆ ಅನುಗುಣವಾಗಿ ದಿವಂಗತ ಸರ್. ಕೆ.ಪಿ. ಪುಟ್ಟಣ್ಣಚೆಟ್ಟರು ವಿಶ್ವವಿದ್ಯಾನಿಲಯಕ್ಕೆ ಒಂದು ದತ್ತಿಯನ್ನು ಒದಗಿಸಿಕೊಟ್ಟು ಈ ಮಾಲೆಯ ಬೆಳವಣಿಗೆಗೆ ಮಹದುಪಕಾರ ಮಾಡಿದ್ದಾರೆ. ಇವುಗಳ ಅಗ್ಗದ ಬೆಲೆ, ಅಗ್ಗಳವಾದ ವಿಷಯ– ಇವುಗಳಿಂದಾಗಿ ಈ ಪುಸ್ತಿಕೆಗಳು ಅತ್ಯಂತ ಜನಪ್ರಿಯವಾಗಿದೆ (ಪರಮಾಣು ಶಕ್ತಿ ಮುನ್ನುಡಿಯಿಂದ).

**ವಿಶೇಷೋಪನ್ಯಾಸ ಪುಸ್ತಕಮಾಲೆ–** ವಿಶ್ವವಿದ್ಯಾನಿಲಯದ ಸೋಪಾನವನ್ನು ಏರಲು ಅವಕಾಶವಿಲ್ಲದವರ ಮತ್ತು ಗ್ರಾಮಾಂತರದ ಸಾಮಾನ್ಯ ಜನರ ಅನುಕೂಲಕ್ಕಾಗಿ ಪ್ರಚಾರೋಪನ್ಯಾಸಗಳಿರುವಂತೆ ವಿಶ್ವವಿದ್ಯಾನಿಲಯದ ವಿವಿಧ ಕಾಲೇಜುಗಳಲ್ಲಿನ ವಿದ್ಯಾರ್ಥಿಗಳ ಮತ್ತು ಅಧ್ಯಾಪಕರ ಪ್ರಯೋಜನಕ್ಕಾಗಿ ವಿಶೇಷೋಪನ್ಯಾಸಗಳನ್ನು ಏರ್ಪಡಿಸಲಾಗುವುದು. ದೇಶವಿದೇಶಗಳ ತಜ್ಞರನ್ನು ಪ್ರಾಧ್ಯಾಪಕರನ್ನು ಆಗಾಗ್ಗೆ ಆಹ್ವಾನಿಸಿ, ಅವರ ಭಾಷಣಗಳನ್ನು ಏರ್ಪಡಿಸಿ, ಆ ಮೂಲಕ ಪರಸ್ಪರ ಸಂಪರ್ಕಕ್ಕೂ ವಿಚಾರ ವಿನಿಮಯಕ್ಕೂ ಅವಕಾಶ ಕಲ್ಪಿಸುವುದು ಈ ಉಪನ್ಯಾಸದ ಉದ್ದೇಶ. ಈ ವ್ಯವಸ್ಥೆಯಿಂದ ಬೇರೆ ಬೇರೆ ವಿಶ್ವವಿದ್ಯಾನಿಲಯಗಳು ಯಾವ ನಿಟ್ಟಿನಲ್ಲಿ ಕೆಲಸ ಮಾಡುತ್ತಿವೆ? ಮುಂದೆ ಆಗಬೇಕಾಗಿರುವ ಕೆಲಸವೇನು? ಅದನ್ನು ಹೇಗೆ ಕಾರ್ಯಗತ ಮಾಡಬಹುದು? ಇಂತೆಲ್ಲ ವಿಷಯಗಳ ತುಲನೆ ಮತ್ತು ಪರ್ಯಾಲೋಚನೆ ಸುಲಭ ಸಾಧ್ಯವಾಗುತ್ತದೆ. ಈ ಮಾಲೆಯ ಭಾಷಣಗಳು ಕನ್ನಡ ಮತ್ತ ಇಂಗ್ಲಿಷ್ ಎರಡು ಭಾಷೆಗಳಲ್ಲಿಯೂ ನಡೆಯುತ್ತವೆ. ಲಿಖಿತ ಭಾಷಣಗಳನ್ನು ಅಚ್ಚುಹಾಕಿಸಿ ಈ ಮಾಲೆಯಲ್ಲಿ ಪ್ರಕಟಿಸಲಾಗುತ್ತದೆ. ಇತ್ತೀಚೆಗೆ ಭರತಖಂಡದ ಪ್ರಮುಖ ಭಾಷಾ ಸಾಹಿತ್ಯಗಳ ವಿಸ್ತೃತ ಪರಿಚಯವನ್ನು ಉಪನ್ಯಾಸಗಳ ಮೂಲಕ ಏರ್ಪಡಿಸಿ ಅವುಗಳನ್ನು ಪ್ರಕಟಿಸುವ ಕಾರ್ಯವನ್ನೂ ಕೈಕೊಳ್ಳಲಾಗಿದೆ. ಭರತಖಂಡದ ರಾಷ್ಟ್ರಭಾಷೆಗಳೆಂದು ಗೌರವಕ್ಕೆ ಪಾತ್ರವಾಗಿರುವ ಹದಿನಾಲ್ಕು ಮುಖ್ಯ ಭಾಷೆಗಳ ಮೇಲೂ ಉಪನ್ಯಾಸಮಾಲೆಗಳನ್ನು ಏರ್ಪಡಿಸುವ ಪ್ರಯತ್ನ ನಡೆದಿದೆ; ಈಗಾಗಲೇ ತೆಲುಗು, ಮರಾಠಿ, ಬಂಗಾಳಿ, ಉರ್ದು ಮತ್ತು ಪರ್ಷಿಯನ್ ಭಾಷೆಗಳ ಮೇಲೆ ಉಪನ್ಯಾಸಗಳನ್ನು ಏರ್ಪಡಿಸಿದುದಾಗಿದೆ. ಆಯಾ ಭಾಷಾ ಸಾಹಿತ್ಯದ ಮೇಲಿನ ಗ್ರಂಥಗಳು ಅಚ್ಚಿನಲ್ಲಿವೆ.

ನಮ್ಮ ಸೋದರ ಭಾಷೆಗಳಲ್ಲಿ ಯಾವ ಯಾವ ಪ್ರಯೋಗಗಳು ನಡೆಯುತ್ತಿವೆ, ಹೇಗೆ ನಡೆಯುತ್ತಿವೆ ಎಂಬುದನ್ನು ಅರಿತುಕೊಳ್ಳುವುದು ಕೇವಲ ಕುತೂಹಲ ಶಮನಕ್ಕೆ ಮಾತ್ರವೇ ಅಲ್ಲದೆ ನಮ್ಮ ಸಾಹಿತ್ಯದ ತುಷ್ಟಿ–ಪುಷ್ಟಿಗಳನ್ನು ಸಾಧಿಸಲು ಇವು ಸಹಾಯವಾಗಬಹುದು. ಈ ಮಾಲೆಯಲ್ಲಿ ಈಗಾಗಲೇ ಎಂಟು ಪುಸ್ತಕಗಳು

ಹೊರಬಂದಿವೆ. ಇನ್ನೂ ಹಲವು ಬೇಗನೆ ಹೊರ ಬರುವ ನಿರೀಕ್ಷೆಯಿದೆ.

**ಇತರ ಪ್ರಕಟಣೆಗಳು–** ಮೇಲಿನ ಪ್ರಕಟಣೆಗಳಲ್ಲದೆ ಆಳವಾದ ಅಭ್ಯಾಸಕ್ಕೂ ಸಂಶೋಧನೆಗೂ ಅಗತ್ಯವಾದ ಪ್ರಬಂಧ ಗ್ರಂಥಗಳು ಹಲವು ಈ ಪ್ರಸಾರಾಂಗದಿಂದ ಪ್ರಕಟಗೊಂಡಿವೆ.

**ಪ್ರಬುದ್ಧ ಕರ್ಣಾಟಕ–** ನಮ್ಮ ವಿಶ್ವವಿದ್ಯಾನಿಲಯ ಪ್ರಚಾರೋಪನ್ಯಾಸ ಮಾಲೆಯನ್ನೂ ಇತರ ಗ್ರಂಥಮಾಲೆಗಳನ್ನೂ ಹೊರಡಿಸುತ್ತಿರುವಂತೆಯೇ ತ್ರೈಮಾಸಿಕ ಪತ್ರಿಕೆಯನ್ನೂ ಹೊರಡಿಸುತ್ತಿದೆ. ಅದು ಹಿಂದೆ ವಿಶ್ವವಿದ್ಯಾನಿಲಯದ ಪತ್ರಿಕೆ ಆಗುವುದಕ್ಕೆ ಮುನ್ನ ಜನತೆಯ ಮಾಸಪತ್ರಿಕೆಯೇ ಆಗಿತ್ತು. ಅದೇ ಪ್ರಬುದ್ಧ ಕರ್ಣಾಟಕ. ಅದು ಚೈತ್ರ, ಆಷಾಢ, ಆಶ್ವಯುಜ ಪುಷ್ಯಮಾಸಗಳ ಪೂರ್ಣಿಮಾ ದಿನದಂದು ಹೊರಬೀಳುತ್ತದೆ. ಈ ನಾಲ್ಕು ಸಂಚಿಕೆಗಳಲ್ಲಿ ಒಂದೊಂದೂ ಇನ್ನೂರು ಅಥವಾ ಇನ್ನೂರೈವತ್ತು ಪುಟಗಳನ್ನು ಒಳಗೊಂಡಿರುತ್ತದೆ. ಸಾಮಾಜಿಕ, ಪೌರಾಣಿಕ, ಐತಿಹಾಸಿಕ ನಾಟಕಗಳೂ, ಕಥೆ, ಕವನಗಳೂ, ಸಾಹಿತ್ಯ ಮತ್ತು ವಿಜ್ಞಾನಗಳನ್ನು ಕುರಿತ ಪ್ರತಿಭಾಪೂರ್ಣ ಲೇಖನಗಳೂ ಈ ತ್ರೈಮಾಸಿಕದಲ್ಲಿ ಪ್ರಕಟವಾಗುತ್ತವೆ. ಒಂದೊಂದು ಸಲವೂ ತ್ರಿವರ್ಣ ಚಿತ್ರಗಳು, ರೇಖಾಚಿತ್ರಗಳು, ಛಾಯಾಚಿತ್ರಗಳು ಇವುಗಳಲ್ಲಿ ಪ್ರಕಟವಾಗುತ್ತವೆ. ಇವುಗಳ ಜೊತೆಗೆ ಕಳೆದ ಎರಡು ವರ್ಷಗಳಿಂದ ಸಂಪುಟಕ್ಕೆ ಒಂದರಂತೆ ವಿಜ್ಞಾನ ವಿಶೇಷಾಂಕವನ್ನು ಒದಗಿಸುತ್ತಿದೆ. ಈ ವರ್ಷದಿಂದ ಇದರ ಸಂಖ್ಯೆ ಎರಡಾಗಿದೆ. ವಿಜ್ಞಾನವನ್ನು ಕುರಿತು ಸುಲಭವಾದ ಶೈಲಿಯಲ್ಲಿ ಅಮೋಘವಾದ ಲೇಖನಗಳನ್ನು ಬರೆಯಲಾಗುತ್ತಿದೆ. ಒಂದೊಂದು ಲೇಖನವೂ ಅದಕ್ಕೆಅಗತ್ಯವಾದ ಲೇಖನ ವಿವರಣೆಯ ಚಿತ್ರಗಳನ್ನು ಒಳಗೊಂಡಿರುತ್ತದೆ. ಒಟ್ಟಿನಲ್ಲಿ ಸುಮಾರು ಸಾವಿರ ಪುಟಕ್ಕೂ ಮಿಕ್ಕ ಸಾಹಿತ್ಯ ಇದರಿಂದ ಒದಗಿದಂತಾಗುತ್ತದೆ. ಆಧುನಿಕ ಸಾಹಿತ್ಯ ವಿಜ್ಞಾನಗಳ ಜ್ಞಾನಭಂಡಾರವನ್ನು ತುಂಬಿಕೊಂಡಿರುವ ಅದರ ವಾರ್ಷಿಕ ಚಂದಾ ಕೇವಲ ಮೂರೂವರೆ ರೂಪಾಯಿ. ಇದು ಸ್ವಲ್ಪ ಹೆಚ್ಚು ಕಡಿಮೆ ಅದರ ಕಾಗದದ ಬೆಲೆಯಾಯಿತು. ಒಮ್ಮೆ ಓದಿ ಬಿಸಾಡುವ ಇತರ ಪತ್ರಿಕೆಗಳಂತೆ ಅಲ್ಲ, ಅದು. ಶಾಶ್ವತವಾಗಿ ಗ್ರಂಥಭಂಡಾರದಲ್ಲಿ ಇಟ್ಟುಕೊಳ್ಳಬೇಕಾದ ಅಮೂಲ್ಯವಾದ ಪತ್ರಿಕೆ ಅದು.

## ಇ. ಪ್ರಸಾರಾಂಗದ ಮುನ್ನಡೆ

ಜ್ಞಾನಸಾಧನೆ ಮತ್ತು ವೈಜ್ಞಾನಿಕ ಸೌಲಭ್ಯಗಳು ಪಟ್ಟಣಗಳಲ್ಲಿ ಕೇಂದ್ರೀಕೃತ ವಾಗಿರುವುದರಿಂದ ಹಳ್ಳಿಯ ಜನರಿಗೆ ಈ ಅನುಕೂಲಗಳು ದೊರಕುವುದು ಇಂದಿನ ಪರಿಸ್ಥಿತಿಯಲ್ಲಿ ಕಷ್ಟವಾಗಿದೆ. ವಿದ್ಯಾವಂತರು ಹಳ್ಳಿಯಲ್ಲಿ ನೆಲಸುವುದು

ಕಡಿಮೆಯಾದುದರಿಂದ ನಮ್ಮ ಹಳ್ಳಿಗಳು ಅಜ್ಞಾನದಲ್ಲಿಯೇ ಮುಳುಗಿ ಹೋಗುವಂತಾಗಿವೆ. ಲೌಕಿಕ ಹಾಗೂ ಧಾರ್ಮಿಕ ವಿಚಾರಗಳು ಹಳ್ಳಿಯಲ್ಲಿ ಪ್ರಚಾರವಾಗಬೇಕು. ಗೃಹನಿರ್ಮಾಣ, ಗೊಬ್ಬರ, ವ್ಯವಸಾಯ, ರೋಗನಿವಾರಣೆ, ಗೃಹಕೈಗಾರಿಕೆ, ವ್ಯಾಪಾರ,ಕೃಷಿ ಉತ್ಪನ್ನ–ಇತ್ಯಾದಿ ಜೀವನಕ್ಕೆ ಅತ್ಯಂತ ಉಪಯುಕ್ತವಾದ ವಿಚಾರಗಳಿಂದ ಹಿಡಿದು ಅಣುಬಾಂಬ್ , ಸ್ಪೂಟ್ನಿಕ್ ಅಂತರ್ ಗ್ರಹಯಾನ –ಇಂತಹ ಅತ್ಯಂತ ಆಧುನಿಕವಾದ ವೈಜ್ಞಾನಿಕ ವಿಚಾರವನ್ನು ಹಳ್ಳಿಯವರಿಗೆ ಅರ್ಥವಾಗುವಂತೆ ತಿಳಿಸಬೇಕು. ಭಾರತದ ಧಾರ್ಮಿಕ ಹಾಗೂ ಸಾಂಸ್ಕೃತಿಕ ಸಾರವಾದ ವೇದ, ಉಪನಿಷತ್ತು ಗೀತೆಗಳ ವಿಚಾರವಾಗಿ ಪ್ರತಿಯೊಬ್ಬ ಭಾರತೀಯನೂ ಸ್ಪಷ್ಟವಾದ ತಿಳಿವಳಿಕೆಯನ್ನು ಪಡೆಯಬೇಕು. ವಿಶ್ವವಿದ್ಯಾನಿಲಯವನ್ನು ಪ್ರವೇಶಿಸಿದ ಕಾರಣವಾಗಿ ಜನತೆ ಜ್ಞಾನವನ್ನು ಪಡೆಯಲು ಅವಕಾಶವನ್ನು ಪಡೆಯಲಿಲ್ಲವೆಂಬ ಕೊರತೆ ಇರಬಾರದು. ಜ್ಞಾನದ ಬಹುಮುಖಗಳ ಪರಿಚಯ ಸರಳ ಶೈಲಿಯಲ್ಲಿ ಸಿದ್ಧವಾದ ಕನ್ನಡ ಪುಸ್ತಕಗಳ ಮೂಲಕ ಎಲ್ಲರಿಗೂ ದೊರಕಬೇಕು. ವಿಶ್ವವಿದ್ಯಾನಿಲಯದ ಪ್ರಯೋಜನವನ್ನು ನಾಡಿನ ಮೂಲಕ ಮೂಲೆ ಮೂಲೆಯಲ್ಲಿರುವ ಜನತೆಯೂ ಪಡೆದರೆ ಮಾತ್ರ ವಿಶ್ವವಿದ್ಯಾನಿಲಯದ ಉದ್ದೇಶ ಸಫಲವಾಗುತ್ತದೆ. ಇಲ್ಲದಿದ್ದರೆ ವಿದ್ಯಾವಂತರು ಅವಿದ್ಯಾವಂತರು ಎಂಬ ಎರಡು ವರ್ಗಗಳು ಶಾಶ್ವತವಾಗಿ ಉಳಿಯುವುದಕ್ಕೆ ಅವಕಾಶವಾಗುತ್ತದೆ. ಜ್ಞಾನಪ್ರಸಾರದ ಈ ಕಾರ್ಯ ಬೃಹತ್ ಪ್ರಮಾಣದಲ್ಲಿ ನಡೆಯಲು ಪ್ರಸಾರಾಂಗದ ಕಾರ್ಯಕ್ಷೇತ್ರ ವಿಸ್ತೃತವಾಗಬೇಕು.

ಆಧುನಿಕ ಶ್ರವಣಸಾಧನ ಮತ್ತು ಯಂತ್ರ ಸಾಮಗ್ರಿಗಳನ್ನೊಳಗೊಂಡು ಸುಸಜ್ಜಿತವಾದ ವಾಹನವು ನಮ್ಮ ಪ್ರಸಾರಾಂಗದಿಂದ ಪ್ರಕಟವಾಗುವ ಪುಸ್ತಕಗಳನ್ನು ಹೊತ್ತು ಹಳ್ಳಿಯ ಮೂಲೆ ಮೂಲೆಯನ್ನೂ ಸೇರಬೇಕು. ಉಪನ್ಯಾಸಗಳೊಡನೆ ಬೋಧಪ್ರದವಾದ ವಿಷಯಗಳನ್ನು ತಿಳಿಸಲು ಚಲನಚಿತ್ರಗಳನ್ನೂ ಬಳಸಬಹುದು. ಈ ರೀತಿಯಾದ ಜ್ಞಾನಪ್ರಸಾರವು ಸಮರ್ಪಕವಾಗಿ, ಸಮರ್ಥವಾಗಿ ಸೇವಾಮನೋಭಾವದಿಂದ ನಡೆಯುವುದಾದರೆ ಸಾಮಾಜಿಕ ಮೌಢ್ಯತೆ, ಮತೀಯ ಮೌಢ್ಯತೆ, ದೇಶಕಾಲದ ಮೌಢ್ಯತೆ, ಅಜ್ಞಾನದಿಂದಾಗುವ ಶೋಷಣೆ ಇತ್ಯಾದಿ ಸಮಾಜದ ಬಹುಕಾಲದ ರೋಗರುಜಿನಗಳು ನಾಶವಾಗಿ ಮಹಾತ್ಮಾಗಾಂಧೀಜಿಯವರು ಕಂಡ ರಾಮರಾಜ್ಯದ ಕನಸು ನನಸಾಗುವುದು. ವಿಶ್ವವಿದ್ಯಾನಿಲಯದ ವಿಶೇಷ ಜ್ಞಾನದ ಸಾದಾರಣೀಕರಣವಾಗುವುದು. ಆಗ ಈ ಸಾಧಾರಣೀಕರಣ ದೇಶಭಾಷೆಗಳ ಮೂಲಕವೇ ಸಾಧ್ಯ. ಇಂಗ್ಲಿಷಿನಿಂದಲೇ ನಮ್ಮ ಜನತೆ ಉದ್ಧಾರವಾಗುತ್ತಾರೆ ಎಂಬ ಮೌಢ್ಯತೆ ಈಗ ತೊಲಗಿಹೋಗಿದೆ. ನಮ್ಮ ಮುಂದಿನ ಪ್ರಗತಿ ದೇಶಭಾಷೆಗಳ ಮೂಲಕ ಎಂಬುದು ಈಗ ಖಚಿತವಾಗಿದೆ.

ನಮ್ಮ ನಾಡಿನ ಲಕ್ಷಾಂತರ ಮಕ್ಕಳ ಉದ್ಧಾರವಾಗಬೇಕಾದರೆ ವಿಶ್ವವಿದ್ಯಾನಿಲಯದಲ್ಲಿ ಎಲ್ಲ ತರಗತಿಗಳಲ್ಲಿಯೂ ಕನ್ನಡ ಮಾಧ್ಯಮವು ಆವಶ್ಯಕ. ಈಗಾಗಲೇ 'ಪ್ರೀ–ಯೂನಿವರ್ಸಿಟಿ' ತರಗತಿಯಲ್ಲಿ ಕನ್ನಡ ಮಾಧ್ಯಮವು

ಪ್ರಾರಂಭವಾಗಿದೆ. ಈ ತರಗತಿಗೆ ಬೇಕಾಗುವ ಪಠ್ಯಪುಸ್ತಕಗಳು ಕನ್ನಡದಲ್ಲಿ ಸಿದ್ಧವಾಗಿವೆ. ಬೇರೆ ಬೇರೆ ತರಗತಿಗಳಿಗೆ ಬೇಕಾಗುವ ನೂರಾರು ಪುಸ್ತಕಗಳು ಸಿದ್ಧವಾಗುತ್ತಿವೆ. ಈ ಪುಸ್ತಕಗಳಲ್ಲದೆ ವಿಶ್ವವಿದ್ಯಾನಿಲಯದ ಅಧ್ಯಾಪಕರಿಗೂ ವಿದ್ಯಾರ್ಥಿಗಳಿಗೂ ಅನಿವಾರ್ಯವಾಗಿ ಬೇಕಾಗುವ ಪ್ರೌಢಗ್ರಂಥಗಳು ಸಿದ್ಧವಾಗುವ ದಿನಗಳು ದೂರವಾಗಿಲ್ಲ. ಇನ್ನು ಹಲವು ವರ್ಷಗಳಲ್ಲಿ ಅತ್ಯಂತ ಗಹನವಾದ ವಿಚಾರಗಳನ್ನು ಬೋಧಿಸಲು ಬೇಕಾದ ಎಲ್ಲ ಪುಸ್ತಕಗಳು ಸಿದ್ದವಾಗಿ ಸಂಶೋಧನೆ ನಡೆಸುವ ವಿದ್ಯಾರ್ಥಿಗಳಿಗೆ ಕೂಡ ಸಕಲ ಸೌಲಭ್ಯಗಳೂ ಕನ್ನಡ ಗ್ರಂಥಗಳಿಂದಲೇ ದೊರಕುತ್ತವೆ. ಈ ವಿಶೇಷ ಕಾರ್ಯವನ್ನು ಮೈಸೂರು ವಿಶ್ವವಿದ್ಯಾನಿಲಯದ ಪ್ರಸಾರಾಂಗವು ಕೈಗೊಂಡಿದೆ. ಮುಂದೆ ಪ್ರಾಧ್ಯಾಪಕರ, ಅಧ್ಯಾಪಕರ ಹಾಗೂ ವಿದ್ವಾಂಸರ ನೆರವಿನಿಂದ ಸಮರ್ಪಕವಾಗಿ ಸಾಧಿಸುವುದರಲ್ಲಿ ಸಂದೇಹವಿಲ್ಲ.

ಉತ್ತಮ ಪುಸ್ತಕಗಳ ಪ್ರಕಟಣೆ ಹಾಗೂ ಪ್ರಚಾರೋಪನ್ಯಾಸಗಳನ್ನು ಕೈಗೊಳ್ಳುವುದರೊಡನೆ ಪ್ರಸಾರಾಂಗವು ಪುಸ್ತಕಗಳ ಮಾರಾಟದ ವ್ಯವಸ್ಥೆಯನ್ನು ಮಾಡಬೇಕು. ಪ್ರಸಾರಾಂಗದ ಪುಸ್ತಕಗಳು ದೊರಕುವುದು ಕಷ್ಟವಾಗಬಾರದು. ಪುಸ್ತಕಗಳು ತಪ್ಪಿಲ್ಲದೆ ಸುಂದರವಾಗಿ ಪ್ರಕಟವಾಗಿ ಕಡಿಮೆ ಬೆಲೆಗೆ ದೊರಕುವಂತಾದರೆ ನಮ್ಮನಾಡಿನ ಜನರು ಅವುಗಳ ಪೂರ್ಣ ಪ್ರಯೋಜನ ಪಡೆಯುತ್ತಾರೆ. 'ವಯಸ್ಕರ ಶಿಕ್ಷಣ ಸಮಿತಿ' ಪ್ರಾರಂಭಿಸಿದ ಕಾರ್ಯವನ್ನು ವಿಶ್ವವಿದ್ಯಾನಿಲಯದ ಪ್ರಸಾರಾಂಗವು ಪೂರ್ಣಗೊಳಿಸಿದಾಗ ನಾಡಿನಲ್ಲಿ ಜ್ಞಾನಾರ್ಜನೆಯ ಪೂರ್ಣಾವಕಾಶವು ಎಲ್ಲರಿಗೂ ಲಭಿಸಿ ಜನತೆಯ ಆಶೋತ್ತರಗಳನ್ನು ಈಡೇರಿಸಿದಂತಾಗುತ್ತದೆ. ವಿಶ್ವವಿದ್ಯಾನಿಲಯದ ವಿಶೇಷ ಜ್ಞಾನದ ಸಾಧಾರಣೀಕರಣವಾಗಿ ಸರ್ವೋದಯದ ಕನಸು ನನಸಾಗುತ್ತದೆ. ನಾಡಿನ ಮೂಲೆ ಮೂಲೆಯಲ್ಲಿರುವ ಹಳ್ಳಿಯ ಪ್ರಾಥಮಿಕ ಶಾಲೆಯ ಅಧ್ಯಾಪಕರೂ ವಿಶ್ವವಿದ್ಯಾನಿಲಯದ ಪ್ರಸಾರಾಂಗದ ಪ್ರತಿನಿಧಿಯಾಗಿ ಹಳ್ಳಿಯ ಜನತೆಗೆ ಬೇಕಾದ ವಿಚಾರಗಳನ್ನು ಪ್ರಸಾರಾಂಗಕ್ಕೆ ತಿಳಿಸಿ ಪ್ರಸಾರಾಂಗದ ಎಲ್ಲ ಸೌಲಭ್ಯಗಳನ್ನು ಪಡೆಯುವುದು ಸಾಧ್ಯವಾಗುವ ಕಾಲವು ಬಹುದೂರದಲ್ಲಿಲ್ಲ.

ನಮ್ಮ ಪ್ರಧಾನಿ ಶ್ರೀ ಜವಹರ್ ಲಾಲ್ ನೆಹ್ರು ಅವರು ಬೆಂಗಳೂರಿನಲ್ಲಿ ನಡೆದ ವೈಜ್ಞಾನಿಕ ಸಮ್ಮೇಳನವನ್ನು ಉದ್ದೇಶಿಸಿ ಮಾತನಾಡುತ್ತ, ವೈಜ್ಞಾನಿಕ, ಯಾಂತ್ರಿಕ ಹಾಗೂ ಕೈಗಾರಿಕೆಗಳ ಮುನ್ನಡೆಯ ಪ್ರಯೋಜನವು ಜನಸಾಮಾನ್ಯರಿಗೆ ದೊರಕದಿದ್ದರೆ ದೇಶಕ್ಕೆ ಅಪಾರ ನಷ್ಟವಾಗುವುದೆಂಬುದನ್ನು ಖಚಿತಪಡಿಸಿದ್ದಾರೆ. ಇದು ಸರ್ವೋದಯದ ಕಾಲ. ಸರ್ವರ ಏಳಿಗೆಯೇ ಈ ಯುಗದ ದೀಕ್ಷಾ ಮಂತ್ರ. ಅದಕ್ಕಾಗಿ ಆರ್ಥಿಕ ಪ್ರಗತಿಯೊಡನೆ ವಿಚಾರಪರವಾದ ಜ್ಞಾನದ ಪ್ರಸಾರವೂ ನಡೆದು ಜನಸಾಮಾನ್ಯರಲ್ಲಿ ವಿಶ್ವವಿದ್ಯೆಯ ತಿಳಿವಳಿಕೆ ಮೂಡಿ ಸರ್ವರ ಶ್ರೇಯಸ್ಸಿನಿಂದ ಭವ್ಯ ಭಾರತದ ನಿರ್ಮಾಣವಾಗಬೇಕು.

ಈಗಿರುವ ಸ್ಥಿತಿಯಲ್ಲಿ ಹಳ್ಳಿಯಲ್ಲಿ ಹುಡುಗ ಜಾಣನಾದರೆ ಅವನು ಹಳ್ಳಿಗೆ

ಎರವಾದಂತೆಯೇ. ಹಳ್ಳಿಯಲ್ಲಿ ಪರೀಕ್ಷೆ ಪಾಸು ಮಾಡಿ ಕಾಲೇಜಿಗೆ ಸೇರೋಣವೆಂದು ಬೆಂಗಳೂರಿಗೊ ಮೈಸೂರಿಗೊ ಹೋದ ಹುಡುಗ ಬೇಸಗೆ ರಜಕ್ಕೆ ಕೂಡ ಮನೆಗೆ ಹಿಂದಿರುಗುವುದಿಲ್ಲ. ಅವನಿಗೆ ಪಟ್ಟಣದ ರುಚಿ ಹತ್ತುತ್ತದೆ. ಅಲ್ಲಿಯೇ ಒಂದು ಸರ್ಕಾರಿ ಕೆಲಸವೋ ಕೂಲಿಯೋ ಮಾಡಿಕೊಂಡು ಇದ್ದುಬಿಡುತ್ತಾನೆ. ನಮ್ಮ ವಿದ್ಯಾಭ್ಯಾಸಕ್ರಮ ಜಾಣ್ಮೆಯನ್ನು ಹಳ್ಳಿಯಿಂದ ಹೊತ್ತಿಕೊಂಡು ಹೋಗಿ ಪಟ್ಟಣಕ್ಕೆ ಹಾಕುವ ಒಂದು ಯಂತ್ರವಾಗಿ ಪರಿಣಮಿಸಿದೆ. ಹಾಗಾಗಕೂಡದು. ವಿದ್ಯಾಭ್ಯಾಸ ಮಾಡಲು ಹೋದ ಹಳ್ಳಿಯವರು ಮತ್ತೆ ಹಳ್ಳಿಗೇ ಬಂದು ನೆಲೆಸುವಂತಾಗಬೇಕು. ಕಾಲೇಜಿನಲ್ಲಿ ನಾವು ಈ ದೃಷ್ಟಿಯನ್ನು ಮೂಡಿಸಿ ಬೆಳೆಸಬೇಕಾಗಿದೆ. ಹಳ್ಳಿಯಲ್ಲಿ ಪಟ್ಟಣದ ಸೌಕರ್ಯಗಳು ಲಭಿಸುವಂತಾದರೆ ಇದು ಸುಲಭವಾದಂತಾಗುತ್ತದೆ. ನಮ್ಮ ಮನೆಯ ಬಾಗಿಲಿಗೆ ವಿದ್ಯುಚ್ಛಕ್ತಿ ಬಂದಿತೆಂದರೆ ಮೈಸೂರಿನಲ್ಲಿ ರೇಡಿಯೋ ಮುಂದೆ ಕುಳಿತು ಯಾವ ಯಾವ ದೇಶಗಳ ಸಂಪರ್ಕಗಳನ್ನು ಇಟ್ಟುಕೊಳ್ಳಬಹುದೋ ಅದೇ ಸಂಪರ್ಕವನ್ನು ಹಳ್ಳಿಯಲ್ಲಿಯೂ ಪಡೆಯಬಹುದು. ಹಳ್ಳಿಯ ಜೀವನ ಸುಸಂಸ್ಕೃತವಾಗಿ, ಸುಸಜ್ಜಿತವಾಗಿ, ವೈಜ್ಞಾನಿಕವಾಗಿ ಆಗಬೇಕು.

ಕಡೆಯದಾಗಿ, ಪ್ರತಿಯೊಬ್ಬನೂ ತಾನು ಎಲ್ಲಿದ್ದರೆ ಅಲ್ಲಿ ಇದ್ದುಕೊಂಡು ತನ್ನ ಪರಿಪೂರ್ಣತೆಯನ್ನು ಸಮಾಜದ ಕಲ್ಯಾಣವನ್ನೂ ಸಾಧಿಸಲು ಯತ್ನಿಸಬೇಕು. 'Sermon on Mount' ಎಂಬ ಪ್ರಾರ್ಥನೆಯಲ್ಲಿ 'ನಿನ್ನ ರಾಜ್ಯವು ಬರಲಿ' ಎಂಬ ಅರ್ಥದ ಮಾತಿದೆ. ಅವನ ರಾಜ್ಯ ಅವನಿರುವಲ್ಲಿಂದ ಇಲ್ಲಿಗೆ ಬರುವುದು ಹೇಗೆ? ಆ ರಾಜ್ಯ ನಮ್ಮ ಹೃದಯಗಳಲ್ಲಿ ಸ್ವಲ್ಪಸ್ವಲ್ಪವಾಗಿ ಅಂಕುರಾರ್ಪಣಗೊಂಡು ಇತರ ಹೃದಯಗಳಿಗೂ ಅದು ಹಬ್ಬಬೇಕು. ಆ ಆಶಯವನ್ನು 'ಅಗ್ನಿಹಂಸ' ಕವನ ಸಂಗ್ರಹದಲ್ಲಿರುವ ಈ ಕವನ ನಿರೂಪಿಸುತ್ತದೆ.

**ನಿನ್ನ ಪದಕಮಲದಲಿ ಮನೆ ಮಾಡಿರುವ ನನಗೆ**
**ಆ ಸ್ಥಾನ ಈ ಸ್ಥಾನ ಎಲ್ಲವಾಸ್ಥಾನ!**
**ಅಲ್ಲಲ್ಲಿ ಎನಲೇನು? ನೀನೆ ಅಡಿಯಿಡುವಲ್ಲಿ**
**ದಿವ್ಯ ಪದವಿಗಳಲ್ತೆ ಮಾನಾವಮಾನ?**
**ಬೆಟ್ಟಗಳನೇರುವೆಯೋ, ಕಣಿವೆಗಳನಿಳಿಯುವೆಯೊ,**
**ಕೆಸರುಸುಬುಗಳೊಳಾಡಿ ವಿಹರಿಪೆಯೊ ನೀನು?**

**ಇಲ್ಲಿ ಸಂಚರಿಸಲ್ಲಿ ಚರಿಸದಿರೆನಲು ನನಗೆ**
**ನಿನ್ನ ಲೀಲೆಗೆ ಗೆರೆಯನೆಳೆವ ಹಕ್ಕೇನು?**
**ಎಲ್ಲಿ ನೀ ಪದವಿಡುವೆ ಅಲ್ಲೆ ಉತ್ತಮ ಪದವಿ;**
**ನಿನ್ನ ಪದವಲ್ಲದಾ ಪದವಿಯೂ ಹೀನ.**
**ನಿನ್ನಡಿಯ ಪುಡಿಯ ಬಡತನವೆ ಕಡವರ ಕಣಾ**
**ನಿನ್ನಡಿಗೆ ದೂರವಿರೆ ಧನಿಕನೂ ದೀನ.**

# ಸಂಸ್ಕೃತಿ ಕರ್ಣಾಟಕ[೧]

ಧಾರವಾಡದ ಮಹಾಜನರಲ್ಲಿ, ಕನ್ನಡ ನಾಡಿನ ಸಾಹಿತ್ಯ ಪ್ರೇಮಿಗಳಲ್ಲಿ, ಭಾರತೀಯ ಸಹೃದಯರಲ್ಲಿ ವಿಜ್ಞಾಪನೆ:–

ಜನಕೋಟಿಯ ಹೃದಯ ಹೃದಯದಲ್ಲಿ ಮೊಳೆತು ಬೇರೂರಿ ಬೆಳೆದ ಬಹುಕಾಲದ ಹೊಂಗನಸು ಹಲವಾರು ಚೇತನಗಳ ಅಭೀಪ್ಸೆ, ಸಾಧನೆ ಮತ್ತು ತ್ಯಾಗಗಳ ಫಲವಾಗಿ ಇಂದು ನನಸಾಗಿದೆ. ನಮ್ಮೆಲ್ಲರ ಹಿಗ್ಗು ಹೀಲಿಗೆದರುತ್ತಿರುವ ಈ ಸಂಭ್ರಮದ ಸಮಯದಲ್ಲಿ ಕರ್ಣಾಟಕದ ಸಂಸ್ಕೃತಿಯ ಪ್ರಧಾನ ಕೇಂದ್ರಗಳಲ್ಲಿ ಒಂದಾಗಿರುವ ಈ ಮಲೆ ಬಯಲು ಸೇರುವೆಡೆಯ ಚೆಲ್ವಿನ ಪ್ರಶಾಂತ ನಗರದಲ್ಲಿ ನೆರೆಯುತ್ತಿರುವ ಕನ್ನಡ ಸಾಹಿತ್ಯ ಪರಿಷತ್ತಿನ ಮೂವತ್ತೊಂಬತ್ತನೆಯ ವಾರ್ಷಿಕ ಸಮ್ಮೇಲನದ ಅಧ್ಯಕ್ಷರೂಪದ ಈ ಸಾರಸ್ವತ ಸೇವಾಸ್ಥಾನಕ್ಕೆ ನನ್ನನ್ನು ಆಯ್ದು ಆಶೀರ್ವದಿಸಿರುವುದಕ್ಕಾಗಿ ವಾಗ್ದೇವಿಯ ಮಕ್ಕಳಾಗಿರುವ ನನ್ನ ಸಹೋದರ ಸಹೋದರಿಯರೆಲ್ಲರಿಗೂ ಕೃತಜ್ಞತೆ ಸಲ್ಲಿಸಿ, ಕೈಮುಗಿದು ವಂದಿಸುತ್ತೇನೆ.

ನಾವು ಭಾಗ್ಯಶಾಲಿಗಳು; ನಾವು ಧನ್ಯರು; ನಾವು ಬದುಕುತ್ತಿರುವ ಈ ನಮ್ಮ ಶತಮಾನ ನಮ್ಮೆಲ್ಲರ ಭಾಗಕ್ಕೆ ಅತ್ಯಂತ ಶ್ರೀಮಂತವಾಗಿದೆ. ಎಂತೆಂತಹ ಅದ್ಭುತ ಘಟನಾವಳಿ ನಮ್ಮ ಕಣ್ಮುಂದೆ ನಡೆದಿದೆ! ಎನಿತೆನಿತು ಮಹದ್ ವ್ಯಕ್ತಿಗಳು ಜಗನ್ನಯನವನ್ನೆ ಆಕರ್ಷಿಸಿ, ಸಮಗ್ರ ಪ್ರಪಂಚದ ಪ್ರೀತಿ ಭಕ್ತಿ ಗೌರವಗಳಿಗೆ ಭಾಜನರಾಗಿ ನಮ್ಮೀ ಭಾರತಭೂಮಿಯ ಮಹಾ ವೇದಿಕೆಯ ಮೇಲೆ ಸುಳಿದುಹೋಗಿದ್ದಾರೆ! ಎಂತಹ ಭವ್ಯಶಕ್ತಿ ಸಂಪನ್ನವಾದ ದಿವ್ಯ ಚೇತನಗಳು ತಮ್ಮ ತಪಃಪ್ರಭಾವದಿಂದ ದೇಶದಾದ್ಯಂತ ಕೋಟ್ಯಂತರ ಸಾಮಾನ್ಯ ಜನಹೃದಯಗಳಲ್ಲಿಯೂ ಹಿಂದೆಂದೂ ಕಂಡರಿಯದ ಪ್ರಮಾಣದಲ್ಲಿ ಅದ್ಭುತ ಶಕ್ತಿಸಂಚಾರಮಾಡಿಹೋಗಿದ್ದಾರೆ! ರಾಷ್ಟ್ರಕುಂಡಲಿಯನ್ನೆ ಎಚ್ಚರಿಸಿ ಜನ ಚೇತನಸಮಸ್ತವನ್ನೂ ಊರ್ಧ್ವಗಾಮಿಯಾದ ಪ್ರಜ್ಞಾಪಥದಲ್ಲಿ ಉದ್ಧಾರೋನ್ಮುಖವಾಗುವಂತೆ ನಿಯೋಜಿಸಿದ್ದಾರೆ! ಕೆಲವೇ ಸಂವತ್ಸರಗಳ ಹಿಂದೆ ತಮ್ಮ ಹೆಬ್ಬಯಕೆ ಈಡೇರುವುದೊ ಇಲ್ಲವೊ ಎಂಬ ಭಯಾಶಂಕೆಗಳಿಂದ ಅಳುಕುತ್ತಿದ್ದ ನಮ್ಮ ಹೇರಾಸೆಗಳೆಲ್ಲ ಇಂದು ಕೈಗೂಡಿ ಸಿದ್ಧಘಟನೆಗಳಾಗಿ ಪವಾಡಗಳಂತೆ ಕಂಗೊಳಿಸುತ್ತಿವೆ! ಅಂದಿನ ಪ್ರಪಂಚದಲ್ಲಿ ಅತ್ಯಂತ ಬಲಿಷ್ಠವಾಗಿದ್ದ ಮಹಾ ನಿಷ್ಠುರ ಸಾಮ್ರಾಜ್ಯವೊಂದರ ವಜ್ರೋಪಮಕಠೋರ ಹಸ್ತದ ಕಪಿಮುಷ್ಟಿಯಲ್ಲಿ ಸಿಲುಕಿ, ಸ್ವಾತಂತ್ರ್ಯಕ್ಕಾಗಿ

[೧] ಧಾರವಾಡದಲ್ಲಿ ೭–೫–೧೯೫೭ರಂದು ನಡೆದ ೩೯ನೆಯ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷ ಭಾಷಣ.

ಅರ್ಧಶತಮಾನದಿಂದ ಹೋರಾಡುತ್ತಿದ್ದರೂ, ಜಗತ್ತಿನ ಅತ್ಯಂತ ಗಣ್ಯತಮ ವ್ಯಕ್ತಿಯೊಬ್ಬನ ನಿರ್ದೇಶನದಲ್ಲಿ ಸಂಗ್ರಾಮ ಸಾಗಿದ್ದರೂ, 'ಎಂದಿಗೈ ತರುವುದೋ ಆ ಸ್ವಾತಂತ್ರ್ಯ ಸ್ವರ್ಗ' ಎಂದು ಪರಿತಪಿಸುತ್ತಿದ್ದ ನಮಗೆ, ನಾವೆ ಬೆಕ್ಕಸಗೊಳ್ಳುವ ತೆರದಲ್ಲಿ ಅದು ಕೈಸಾರಿ ಈಗಾಗಲೆ ಹತ್ತು ವರ್ಷವಾಗಿದೆ! ಆ ಸ್ವಾತಂತ್ರ್ಯವನ್ನೇನೋ ನಮ್ಮ ಭಾರತಜನತೆ ದಿಕ್ಕು ದಿಕ್ಕುಗಳೆ ಅನುರಣಿತವಾಗುವಂತೆ ಜಯಧ್ವನಿಗೈದು ಸ್ವಾಗತಿಸಿತು; ಮನದಣಿಯೆ ಕೊಂಡಾಡಿತು; ಎದೆತುಂಬಿ ಆಸ್ವಾದಿಸಿತು; ಕೊರಳೆತ್ತಿ ಹಾಡಿ ಹೂವೆರಚಿ ಪೂಜಿಸಿತು. ಆದರೂ, ಸರ್ವರ ಸರ್ವಕ್ಷೇಮಕ್ಕೂ ಭಿತ್ತಿಸ್ವರೂಪವಾದ ಆ ಅಖಿಲ ಭಾರತೀಯ ಸಂಪೂರ್ಣ ಸ್ವಾತಂತ್ರ್ಯದಿಂದ ಜನತೆಯ ಪ್ರಧಾನಾಕಾಂಕ್ಷೆ ತೃಪ್ತವಾದರೂ, ಆ ಸ್ವಾತಂತ್ರ್ಯದಿಂದಲೆ ಸಂಭವನೀಯವೆಂದು ಎಲ್ಲರೂ ನಂಬಿದ್ದ ಮತ್ತೊಂದು ಸಾಂಸ್ಕೃತಿಕವಾದ ಮೂಲತರ ಆಕಾಂಕ್ಷೆಗೆ ತೃಪ್ತಿ ದೊರೆಯದೆ ಜನತೆಯ ಅಪೇಕ್ಷೆ ನೀರಡಸಿತ್ತು, ಕಾತರಿಸಿತ್ತು. ಅಷ್ಟೇ ಅಲ್ಲದೆ; ಆ ಅಪೇಕ್ಷೆಯ ಸಾಧುತ್ವದ ವಿಚಾರದಲ್ಲಿಯೆ ಅಲ್ಲಲ್ಲಿ ಒಡಕುದನಿ ಮೂಡಿ, ಜಿಜ್ಞಾಸೆಯ ಜಂಝೆಯೆದ್ದು ಸ್ವಲ್ಪ ಕಾಲ ಕ್ಷೋಭೆಗೂ ಕಾರಣವಾಗಿತ್ತು. ಆದರೆ ನಮ್ಮ ನಾಯಕವರೇಣ್ಯರ ದೂರದೃಷ್ಟಿಯಿಂದಲೂ ನಮ್ಮ ಜನ ಸಾಮಾನ್ಯರ ವಿವೇಕಪೂರ್ಣವಾದ ಸೌಜನ್ಯದಿಂದಲೂ ಆ ಕುದಿಹವೆಲ್ಲ ಬಹುಮಟ್ಟಿಗೆ ತಣ್ಣಗಾಗಿ ಈಗತಾನೆ ಭಾಷಾನುಗುಣವಾದ ಪ್ರದೇಶಗಳೂ ಭೂನ್ಯೈಜವಾಗಿವೆ. ಅದರ ಪರಿಣಾಮವಾಗಿ ಮತ್ತು ಫಲರೂಪವಾಗಿ ನಾವಿಂದು ಇಲ್ಲಿ ಏಕೀಕೃತ ಅಖಂಡ ಕರ್ಣಾಟಕದ ಸಾಹಿತ್ಯಪರಿಷತ್ತಿನ ಪ್ರಪ್ರಥಮ ವಾರ್ಷಿಕ ಸಮ್ಮೇಲನೋತ್ಸವದಲ್ಲಿ ಭಾಗಿಗಳಾಗಲು ನೆರೆದಿದ್ದೇವೆ. ನಾವು ನಿಜವಾಗಿಯೂ ಭಾಗ್ಯಶಾಲಿಗಳಲ್ಲವೆ? ಧನ್ಯರಲ್ಲವೆ?

ಹೌದು. ಆದರೆ ಏಕೆ ಧನ್ಯರು? ಏನು ಧನ್ಯತೆ? ಶಾಶ್ವತ ಪ್ರಯೋಜನ ರೂಪವಾದ ಯಾವ ಪುರುಷಾರ್ಥ ದೊರೆಕೊಂಡಿದೆ? ಅಥವಾ ಅಂತಹ ಪುರುಷಾರ್ಥ ಸಾಧನೆಗೆ ಹಾದಿಯಾದರೂ ಸಿದ್ಧವಾಗಿದೆಯೆ?

ಸಂಸ್ಕೃತಿ, ಸಾಹಿತ್ಯ ಮತ್ತು ಕಲೆಯ ಭೂಮಿಕೆಯಲ್ಲಿ ವ್ಯವಹರಿಸುವ ಸಾಹಿತ್ಯಪರಿಷತ್ತಿಗೂ ಈ ಪ್ರಾಂತರಚನೆಯ ರಾಜಕೀಯಕ್ಕೂ ಏನು ಸಂಬಂಧ? ಕನ್ನಡ ಜನತೆಯ ಹೃದಯದಲ್ಲಿ ಅಂತರ್ಗತವಾಗಿದ್ದ ಯಾವ ಮೂಕ ಆಶಯವನ್ನು ವಾಙ್ಮಯವನ್ನಾಗಿ ಮಾಡಲು ಪ್ರಯತ್ನಿಸಿ ಸಾಹಿತ್ಯ ಪರಿಷತ್ತು ಕಳೆದ ಮೂವತ್ತೆಂಟು ವರ್ಷಗಳಿಂದ ವರುಷವರುಷವೂ ನಾಡಿನ ಕೇಂದ್ರದಲ್ಲಿ ನೇಮಿಯಲ್ಲಿ ಗಡಿಮೂಲೆಗಳಲ್ಲಿ ವಾರ್ಷಿಕ ಸಮ್ಮೇಲನೋತ್ಸವವನ್ನು ನೆರಪಿ, ಜನ ಚೇತನಕ್ಕೆ ನವೀನೋತ್ಸಾಹವನ್ನು ತುಂಬಿ, ನಾಡಿನ ಮಕ್ಕಳನ್ನು ಮತ್ತೆ ಮತ್ತೆ ಎಚ್ಚರಿಸಿ ದೀಕ್ಷಾಬದ್ಧರನ್ನಾಗಿ ಮಾಡುತ್ತಿತ್ತೋ ಆ ಮೂಕ ಆಶಯವೆ ಕಳೆದ ಮೂವತ್ತು ನಾಲ್ವತ್ತು ವರ್ಷಗಳಿಂದಲೂ ನಮ್ಮ ನಾಡಿನ ಕವಿಗಳಲ್ಲಿ, ಲೇಖಕರಲ್ಲಿ, ವಿದ್ವಾಂಸರಲ್ಲಿ, ಸಾರ್ವಜನಿಕ ಮುಂದಾಳುಗಳಲ್ಲಿ, ರಾಜಕೀಯ

---

ಜಂಝೆ = < ಝಂಝಾ: a violent storm with rain, a squall – ಕಿಟ್ಟೆಲ್

ಆಂದೋಲನಕಾರರದಲ್ಲಿ, ವಿದ್ಯಾರ್ಥಿಗಳಲ್ಲಿ, ಅಧ್ಯಾಪಕರಲ್ಲಿ, ಕರ್ಣಾಟಕ ಸಂಘಗಳಂತಹ ಸಂಸ್ಥೆಗಳಲ್ಲಿ, ದೇಶಭಾಷೆಯ ಪತ್ರಿಕೆಗಳಲ್ಲಿ ನಾನಾರೂಪಗಳಿಂದ ಅನೇಕಮುಖವಾಗಿ ಅಭಿವ್ಯಕ್ತವಾಗಿ ಸ್ವಯಂ ಕ್ರಿಯಾಸಮರ್ಥವಾದ ಕ್ರತುಶಕ್ತಿಯಾಗಿ ಏಕೀಕೃತ ಅಖಂಡ ಕರ್ಣಾಟಕವಾಗಿ ಪರಿಣಮಿಸಿತು. ವಾಸ್ತವವಾಗಿ ಈ ಏಕೀಕರಣ ಮತ್ತು ಅಖಂಡತೆ ಹೊಚ್ಚ ಹೊಸದಾಗಿ ಸೃಷ್ಟಿಯಾದುದೇನೂ ಅಲ್ಲ. ಸಾಂಸ್ಕೃತಿಕವಾಗಿ ದೇಶದ ಮನೋಮಂಡಲದಲ್ಲಿ ಯಾವುದು ಅನೇಕ ಶತಮಾನಗಳಿಂದಲೂ ಅಚ್ಯುತವಾದ ಭಾವಸತ್ಯವಾಗಿದ್ದಿತೊ ಅದು ಈಗ ಭೌಗೋಳಿಕವಾಗಿಯೂ ಸಿದ್ದವಾಯಿತೆಷ್ಟೊ ಅಷ್ಟೆ. ಅದನ್ನು ಯಾವ ಹೆಸರಿನಿಂದ ಕರೆದರೂ ಅದು ನಮಗೆ ಕರ್ಣಾಟಕವೆ. ಈ ಭಾವವನ್ನೆ ಒಮ್ಮೆ ಕವಿವಾಣಿ ಹೀಗೆಂದು ಘೋಷಿಸಿದೆ:

**ಇಂದು ಬಂದು ನಾಳೆ ಸಂದು**
**ಹೋಹ ಸಚಿವ ಮಂಡಲ**
**ರಚಿಸುವೊಂದು ಕೃತಕವಲ್ತೊ**
**ಸಿರಿಗನ್ನಡ ಸರಸ್ವತಿಯ**
**ವಜ್ರ ಕರ್ಣಕುಂಡಲ,**
**ಅಖಂಡ ಕರ್ಣಾಟಕ:**
**ಅಲ್ತೊ ನಮ್ಮ ನಾಲ್ಕು ದಿನದ ರಾಜಕೀಯ ನಾಟಕ!**

**ನೃಪತುಂಗನೆ ಚಕ್ರವರ್ತಿ,**
**ಪಂಪನಲ್ಲಿ ಮುಖ್ಯ ಮಂತ್ರಿ.**
**ರನ್ನ ಜನ್ನ ನಾಗವರ್ಮ**
**ರಾಘವಾಂಕ ಹರಿಹರ**
**ಬಸವೇಶ್ವರ ನಾರಣಪ್ಪ**
**ಸರ್ವಜ್ಞ ಷಡಕ್ಷರ:**
**ಸರಸ್ವತಿಯೆ ರಚಿಸಿದೊಂದು**
**ನಿತ್ಯ ಸಚಿವ ಮಂಡಲ**
**ತನಗೆ ರುಚಿರ ಕುಂಡಲ!**

ನಮ್ಮ ಕರ್ಣಾಟಕ ಬರಿಯ ದೇಶವಿಸ್ತೀರ್ಣಕ್ಕೆ ಮಾತ್ರ ಸಂಬಂಧಪಟ್ಟುದಲ್ಲ; ಕಾಲವಿಸ್ತೀರ್ಣವನ್ನೂ ನಾವು ಪ್ರಮುಖವಾಗಿ ಭಾವಿಸುತ್ತೇವೆ. ಅದನ್ನು ಚದರಮೈಲಿಗಳಿಂದ ಅಳೆದರೆ ಸಾಲದು; ಚದರವರ್ಷಗಳಿಂದಲೂ ಗುರುತಿಸಬೇಕು. ವ್ಯಷ್ಟಿರೂಪವಾದ ವ್ಯಕ್ತಿಗೆ ಕೋಶಗಳಿರುವಂತೆ ಸಮಷ್ಟಿರೂಪವಾದ ದೇಶಕ್ಕೂ ಕೋಶಗಳಿವೆ ಎಂದು ಭಾವಿಸುವುದಾದರೆ ಕರ್ನಾಟಕಕ್ಕೆ ಅನ್ನಮಯ ರೂಪವಾದ ಭೂಪ್ರದೇಶವಿರುವಂತೆಯೆ ಪ್ರಾಣಮನೋಮಯ ರೂಪವಾದ ಚಿತ್ ಪ್ರದೇಶವೂ ಇದೆ. ಚಿನ್ಮಯವೂ ಆಧ್ಯಾತ್ಮಿಕವೂ ಆಗಿರುವ ಆ ಸಂಸ್ಕೃತಿ ಕೋಶವೆ ಕರ್ಣಾಟಕದೇವಿಯ ಸೂಕ್ಷ್ಮಶರೀರ.

ನಶ್ವರವೂ ಚಂಚಲವೂ ಕಾಲ ಸನ್ನಿವೇಶವಶವೂ ಆಗಿರುವ ಭೂವಿಸ್ತೀರ್ಣರೂಪವಾದ ಲೀಲಾಸ್ಥೂಲ ಶರೀರವನ್ನು ಸರ್ವದಾ ಧಾರಣೆ ಮಾಡುತ್ತಿರುತ್ತದೆ ಆ ನಿತ್ಯಭಾವತನು. ಆ ಜ್ಯೋತಿಶ್ಯರೀರಿಯೆ ದೇವಿ. ಆ ದೇವಿಯ ಉಪಾಸನೆಯೆ ಕವಿ ಕಲಾವಿದೆ ತತ್ತ್ವಜ್ಞ ಸಾಧಕರಾದಿಯಾಗಿ ಸಕಲರ ಗಂತವ್ಯ ಮತ್ತು ಗಮ್ಯ. ಕರ್ಣಾಟಕದ ಕಾವ್ಯ ಕಲೆ ಸಂಸ್ಕೃತಿಗಳನ್ನು ಹೃದಯದಲ್ಲಿ ಪ್ರತಿಷ್ಠಾಪಿಸಿಕೊಂಡ ಕನ್ನಡಿಗನು ಭೌಗೋಲಿಕವಾದ ಎಲ್ಲೆಗಳಿಂದ ಹೆದರಬೇಕಾದ್ದಿಲ್ಲ.

**ಎಲ್ಲಾದರು ಇರು, ಎಂತಾದರು ಇರು;**
**ಎಂದೆಂದಿಗು ನೀ ಕನ್ನಡವಾಗಿರು;**
**ಕನ್ನಡ ಗೋವಿನ ಓ ಮುದ್ದಿನ ಕರು,**
**ಕನ್ನಡತನವೊಂದಿದ್ದರೆ ನೀನಮ್ಮಗೆ ಕಲ್ಪತರು:**
**ನೀ ಮೆಟ್ಟುವ ನೆಲ–ಅದೆ ಕರ್ನಾಟಕ;**
  **ನೀನೇರುವ ಮಲೆ–ಸಹ್ಯಾದ್ರಿ**
**ನೀ ಮುಟ್ಟುವ ಮರ–ಶ್ರೀಗಂಧದ ಮರ;**
  **ನೀ ಕುಡಿಯುವ ನೀರ್–ಕಾವೇರಿ.**

ಕನ್ನಡ ಕಾವ್ಯಗಳನ್ನೋದುವಾತನು ಅಮೇರಿಕೆಯಲ್ಲಿದ್ದರೂ ಅದು ಕರ್ಣಾಟಕವೆ. 'ಪಂಪನನೋದುವ ನಾಲಗೆ' ಮಿಸಿಸಿಪಿ ಹೊಳೆಯ ನೀರನ್ನು ಈಂಟಿದರೂ ಅದು ಕಾವೇರಿಯೆ. 'ಕುಮಾರವ್ಯಾಸನನಾಲಿಪ ಕಿವಿ' ಆಂಡೀಸ್ ಪರ್ವತವನ್ನೇರುತ್ತಿದ್ದರು ಅದು ಸಹ್ಯಾದ್ರಿಯೆ. 'ಕಾವೇರಿಯಿಂದಮಾ ಗೋದಾವರಿ ವರಮಿರ್ದ ನಾಡು' ಎಂದು ನೃಪತುಂಗನು ಬಣ್ಣಿಸಿದ ಕರ್ಣಾಟಕದ ನೆಲದ ಎಲ್ಲೆ ಇಂದು ಭೌಗೋಲಿಕವಾಗಿ ವ್ಯತ್ಯಸ್ತವಾಗಿರುವುದಕ್ಕಾಗಿ ನಾವು ಪರಿತಪಿಸುವುದು ಅನಾವಶ್ಯಕ. ಕಾವೇರಿ ಮತ್ತು ಗೋದಾವರಿಗಳು ನಿತ್ಯವೂ ನಿರ್ದಿಗಂತವಾಗಿ ವಿಸ್ತರಿಸುತ್ತಿರುವ ಕರ್ಣಾಟಕದ ಸಾಂಸ್ಕೃತಿಕ ಹಾಗೂ ಆಧ್ಯಾತ್ಮಿಕ ಭೂಮಿಕೆಗೆ ಗಡಿಗಳಿಗೆ ಸಂಕೇತ ಮಾತ್ರಗಳಾಗಿರಲಿ. ಅವು ಭಾವೋಪಯೋಗಿಗಳೆ ಹೊರತು ಲೋಕೋಪಯೋಗಿಗಳಾಗುವುದಿಲ್ಲ. ಏಕೆಂದರೆ ಮೈಸೂರಿನ ಎಲ್ಲೆ ರಾಜಕೀಯದಿಂದ ಭೌಗೋಲಿಕವಾಗಿ ನಿರ್ಣಯವಾಗಿದ್ದರೂ ಕರ್ಣಾಟಕದ ಸಾಂಸ್ಕೃತಿಕ ಮೇರೆ ನಮ್ಮೆಲ್ಲರಿಂದ ಮಾನಸಿಕವಾಗಿ ನಿರಂತರವೂ ನಿರ್ಣಯವಾಗುತ್ತಿರುತ್ತದೆ. ಕನ್ನಡಿಗರ ಸಂಸ್ಕೃತಿಗೆ ಪ್ರತಿಮಾರೂಪವಾಗಿರುವ ಕರ್ಣಾಟಕದ ವಿಸ್ತಾರ ನಿರ್ದಿಗಂತವಾದದ್ದು; ಅದರ ಔನ್ನತ್ಯ ನಿಃಶಿಖರವಾದದ್ದು. ಅಂತಹ 'ಸಂಸ್ಕೃತಿ ಕರ್ಣಾಟಕ'ದ ಸ್ಥಾಪನೆ, ರಕ್ಷಣೆ, ಪೋಷಣೆ ಮತ್ತು ವಿಸ್ತರಣೆಗಳಿಗಾಗಿಯೆ ಸಹೃದಯ ಸಮಷ್ಟಿರೂಪವಾದ ಸಾಹಿತ್ಯ ಪರಿಷತ್ತು ನಿರಂತರವೂ ತಪಸ್ವಿಯಾಗಿ ದುಡಿಯಬೇಕಾಗಿದೆ. ಏಕೆಂದರೆ ಭೌಗೋಲಿಕವಾಗಿ ಕರ್ಣಾಟಕ ರಾಜ್ಯಸ್ಥಾಪನೆಯಾಯಿತು ಎಂದು ನಾವು ಸಡಿಲಬಾಳಿಗರಾಗಿ ಸುಮ್ಮನಾದರೆ ರಾಜ್ಯಸ್ಥಾಪನೆಯ ಮೂಲೋದ್ದೇಶವೆ ವಿಫಲವಾಗುತ್ತದೆ.

ಶರೀರವೆ ಮೊತ್ತಮೊದಲನೆಯ ಧರ್ಮಸಾಧನ. ಈ ಪೃಥ್ವೀತತ್ತ್ವದಲ್ಲಿ

ಅನ್ನಮಯಕ್ಷೇಮವೆ ಉಳಿದೆಲ್ಲ ಅಭ್ಯುದಯಗಳಿಗೂ ಆಧಾರಭೂತವಾಗಿರುತ್ತದೆ. ಆ ಮೂಲಭೂತವಾದ ಕ್ಷೇಮಸಾಧನೆಗಾಗಿಯೆ ಕನ್ನಡ ಜನತೆ ಕರ್ಣಾಟಕ ರಾಜ್ಯರಚನೆಗಾಗಿ ಹಾತೊರೆದದ್ದು. ಅದರ ರಚನೆಗೆ ಭಂಗತರುವಂತಹ ವಿನಾಶಕ ಶಕ್ತಿಗಳು ಹೆಡೆಯೆತ್ತಿದಾಗ ಕೆರಳಿದ ಜನತೆ:

**ದೀಕ್ಷೆಯ ತೊಡು ಇಂದೇ;**
**ಕಂಕಣ ಕಟ್ಟಿಂದೇ!**
**ಕನ್ನಡ ನಾಡೊಂದೇ,**
**ಇನ್ನೆಂದೂ ತಾನೊಂದೇ!**
**ನೃಪತುಂಗನ ದೊರೆಮುಡಿ ಸಾಕ್ಷಿ**
**ಪಂಪನ ಪದಧೂಳಿಯ ಸಾಕ್ಷಿ**
**ಕೂಡಲ ಸಂಗನ ಅಡಿ ಸಾಕ್ಷಿ**
**ಗದುಗಿನ ಕವಿದೇವನ ಸಾಕ್ಷಿ**
**ದೀಕ್ಷೆಯ ತೊಡು ಇಂದೇ....**

**ಇಡು ಸಹ್ಯಾದ್ರಿಯ ಮೇಲಾಣೆ,**
**ಇಡು ಕಾವೇರಿಯ ಮೇಲಾಣೆ,**
**ಇಡು ಚಾಮುಂಡಿಯ ಮೇಲಾಣೆ,**
**ಇಡು ಗೊಮ್ಮಟ ಗುರುದೇವಾಣೆ,**
**ದೀಕ್ಷೆಯ ತೊಡು ಇಂದೇ....**

ಎಂದು ಮೊದಲಾಗಿ ದೀಕ್ಷೆ ತೊಟ್ಟಿತು, ಕಂಕಣ ಕಟ್ಟಿತು; ದೃಢ ಮನಸ್ಸಿನಿಂದ ವರ್ತಿಸಿತು, ತನ್ನ ಇಚ್ಛೆ ಕ್ರಿಯೆಯಾಗುವಂತೆ!

**ಕಾವೇರಿ ಸಿರಿಯಡಿಯ ಗೋದಾವರಿಯ ಮುಡಿಯ**
**ಮೂಡುಮಲೆಯೆಡದ ಗಡಿಯ**
**ಪಡುಗಡಲ ಬಲದ ತಡಿಯ;**
**ವರ್ಣಶಿಲ್ಪದ ಕಲೆಯ ಚೆಲ್ವಿನ ಶಿಲೆಯಗುಡಿಯ,**
**ಕನ್ನಡದಿಂಪು ನುಡಿಯ**
**ಕನಸು ನನಸಾಯಿತಿದೊ ಏಕೈಕ ಕರ್ಣಾಟಕ!**

ಕನಸೇನೊ ನನಸಾಗಿದೆ, ಒಂದು ಅಂಶದಲ್ಲಿ ಮಾತ್ರ. ಆಗಿರುವುದಕ್ಕಿಂತಲೂ ನೂರ್ಮಡಿ ಇದೆ ಮುಂದೆ ಆಗಬೇಕಾದ್ದು. ಅನೇಕ ರೂಪದಲ್ಲಿ ಈ ಕರ್ಣಾಟಕ ಆಗಬೇಕಾಗಿದೆ, ಅರಳಬೇಕಾಗಿದೆ, ಬೆಳೆಯಬೇಕಾಗಿದೆ. ಕೌಟುಂಬಿಕ ಕ್ಷೇಮ, ಮಕ್ಕಳ ಕ್ಷೇಮ, ಪಶುಪಕ್ಷಿಗಳ ಕ್ಷೇಮ, ಜನದ ನಾನಾವಿಧ ಕ್ಷೇಮ, ತತ್ತ್ವ ಕಾವ್ಯ ಕಲೆ ಆಧ್ಯಾತ್ಮ ಮೊದಲಾದ ಊರ್ಧ್ವಮುಖಸಾಹಸಗಳ ಮನೋವಿಕಾಸ ರೂಪದ ಕ್ಷೇಮ–ಇವುಗಳಲ್ಲಿ ಕರ್ಣಾಟಕದ ಸೃಷ್ಟಿ ಮುಂದುವರಿಯುತ್ತಿದೆ.

**ಶಿಶುರೂಪಿ, ಪಶುರೂಪಿ, ಜನರೂಪಿ, ಮನರೂಪಿ,**
**ನವ್ಯ ಶಾದ್ವಲರೂಪಿ**
**ಕಲಕಲ ಪಕ್ಷಿರೂಪಿ;**
**ನವಸರೋವರದಂತೆ, ನವಶಾಲಿವನದಂತೆ,**
**ನವಯೌವನದ ಮೊದಲ ನವವಧೂವರರಂತೆ;**
**ನವ ಕವಿಯ ನವರಸ ನವೀನ ಕೃತಿಯಂತೆ,**
**ದಿವ್ಯ ವೀಣಾಗಾನ ಗತಿಯಂತೆ**
**ಮೂಡುತಿದೆ ನೋಡು ಅದೊ ಏಕೈಕ ಕರ್ಣಾಟಕ!**

ಮೂಡುತ್ತಿರುವ ಆ ಏಕೈಕ ಕರ್ಣಾಟಕ ಬಹುರೂಪಿ ಮತ್ತು ವಿಶ್ವತೋಮುಖಿ, ವಿಜ್ಞಾನಸಹಸ್ರಬಾಹುವಾದ ಮಾನವ ಕಾರ್ತವೀರ್ಯಾರ್ಜುನನ ಶಿಲ್ಪಸಾಹಸದಿಂದ ನಡೆತಡೆದು ನಿಂತು ಮಡುಗೊಂಡ ನದಿಗಳಿಂದ ಉದ್ಭವವಾದ ಮಹಾ ಜಲಾಶಯಗಳ ರೂಪದಲ್ಲಿ, ದಿಗಂತವಿಶ್ರಾಂತವಾಗಿ ಹಬ್ಬಿ ಹಸುರಾಗಿ ಹೊನ್ನಾಗಿ ಕಂಗೊಳಿಸುತ್ತಿರುವ ಶಾಲಿವನ ಕ್ಷೇತ್ರಗಳ ರೂಪದಲ್ಲಿ, ನಾನಾ ರೀತಿಯ ನಾಗರಿಕ ಭೋಗ ಸೌಕರ್ಯಗಳನ್ನು ಒದಗಿಸುವ ಭೀಮಾಕಾರದ ಯಂತ್ರೋಪಕರಣಗಳಿಂದ ಭಯಂಕರ ಭವ್ಯವಾಗಿರುವ ಬೃಹತ್ ಕಾರ್ಖಾನೆಗಳ ರೂಪದಲ್ಲಿ ಈ ಕರ್ಣಾಟಕ ಸೃಷ್ಟಿ ನಿರಂತರವೂ ಮುಂದುವರಿಯುತ್ತದೆ. ಹೊಳೆಗಳು ನಿಲ್ಲುತ್ತವೆ; ನೀರು ಜ್ಯೋತಿರ್ದಾನ ಮಾಡುತ್ತದೆ; ಬೆಟ್ಟನೆತ್ತಿಯ ಲೋಹಸ್ವಪ್ನ ಎಚ್ಚರಗೊಳ್ಳುತ್ತದೆ; ಅರಣ್ಯದೇವಿಯ ಮಡಿಲ ಸಂಪತ್ತು ಮಕ್ಕಳ ಕೈಸೇರುತ್ತದೆ; ಸಮುದ್ರವೂ ತನ್ನ ಶ್ರೀಮಂತಿಕೆಯನ್ನು ಹಂಚಿ ಸಮತಾವಾದಿಯಾಗುತ್ತದೆ; ಆಕಾಶವೂ ದಾರಿಬಿಡುತ್ತದೆ: ನಮ್ಮ ವಿಜ್ಞಾನಿ ಯಂತ್ರವಿಜ್ಞಾನಿಗಳ ಮಂತ್ರಮಹಿಮೆಯಿಂದಲೂ ತಂತ್ರಕೌಶಲದಿಂದಲೂ ನಿಲ್ಲದೆ ನಿದ್ದೆ ಮಾಡದೆ ಮುಂದು ವರಿಯುತ್ತದೆ ಈ ಕರ್ಣಾಟಕದ ಭವ್ಯಸೃಷ್ಟಿ. ಕವಿ ಕಲಾರ್ಥಿ ವಿಜ್ಞಾನಿ ರಾಜಕಾರಣಿ ಎಲ್ಲರೂ ಆ ದೇವಕರ್ಮದಲ್ಲಿ ಸಮಭಾಗಿಗಳಾಗುತ್ತಾರೆ.

ಈ ಕರ್ಣಾಟಕ ಭೌಗೋಲಿಕವಾಗಿ ಭಾರತದ ಇತರ ಪ್ರದೇಶಗಳಿಂದ ಭಿನ್ನವಾಗಿ ಕಂಡರೂ ಸಾಂಸ್ಕೃತಿಕವಾಗಿ ಅಷ್ಟೇನೂ ಭಿನ್ನವಲ್ಲ; ಆಧ್ಯಾತ್ಮಿಕವಾಗಿ ನೋಡಿದರಂತೂ ಸಂಪೂರ್ಣವಾಗಿ ಅಭಿನ್ನ . ಉಡುಗೆ ತೊಡುಗೆ ಊಣಿಸು ನಡೆ ನುಡಿಗಳಲ್ಲಿ ಪ್ರಾಂತದಿಂದ ಪ್ರಾಂತಕ್ಕೆ ಸ್ವಲ್ಪ ವ್ಯತ್ಯಾಸ ತೋರಿದರೂ ನಮ್ಮೆಲ್ಲರ ಕನಸೂ ಒಂದೇ, ನಮ್ಮೆಲ್ಲರ ಮನಸ್ಸೂ ಒಂದೇ, ನಮ್ಮೆಲ್ಲರ ಗುರಿಯೂ ಒಂದೇ; ನಾವೆಲ್ಲ ಭಾರತೀಯರು. ನಮ್ಮ ಭಾಷೆ ಸಾಹಿತ್ಯಗಳು ಆ ಏಕೈಕವಾದ ಭಾರತೀಯ ಸಂಸ್ಕೃತಿಸಮುದ್ರದ ಬೃಹತ್ ತರಂಗಮಾತ್ರಗಳಾಗಿವೆ. ಪೂರ್ವ ಪಶ್ಚಿಮ ದಕ್ಷಿಣ ಸಮುದ್ರಗಳೂ ಹಿಮವತ್ ಪರ್ವತವೂ ನಮ್ಮನ್ನು ಭೌಗೋಲಿಕವಾಗಿ ಒಂದುಗೂಡಿಸಿರಬಹುದು. ಆದರೆ ರಾಜಕೀಯವಾಗಿ ಭಾರತೀಯ ಜನತೆ ಪರಸ್ಪರ ವೈರಿಗಳೆಂದು ಪರಿಗಣಿತವಾಗಿದ್ದ ಭಿನ್ನ ಭಿನ್ನ ರಾಜ್ಯಗಳಲ್ಲಿ ಖಂಡ ಖಂಡವಾಗಿ ಹರಿದು ಹಂಚಿ ಹೋಗಿದ್ದಾಗಲೂ ಅವರನ್ನೆಲ್ಲ ಶತ ಶತಮಾನಗಳಿಂದ ಅಖಂಡವಾಗಿಯೆ ಇಟ್ಟಿದ್ದ ಶಕ್ತಿ ಯಾವುದು?

ಆ ಶಕ್ತಿ ವೇದೋಪನಿಷತ್ತು ಷಡ್ದರ್ಶನಾದಿಗಳಲ್ಲಿ ಹರಿಯುತ್ತಿರುವ ಅಧ್ಯಾತ್ಮ ಶಕ್ತಿ; ರಾಮಾಯಣ ಮಹಾಭಾರತ ಭಾಗವತಾದಿಗಳಲ್ಲಿಯೂ ದೇಶ ದೇಶದ ಕಾಲ ಕಾಲದ ಮಹಾ ಕವೀಂದ್ರರ ಮಹಾಕೃತಿಗಳಲ್ಲಿಯೂ ಹರಿಯುತ್ತಿರುವ ಸಾಹಿತ್ಯಶಕ್ತಿ; ಋಷಿ ಯೋಗಿ ಸಾಧಕ ಸಿದ್ಧ ಸಂತರ ದಿವ್ಯ ಜೀವನದಿಂದ ಆಕರ್ಷಿತವಾಗಿ, ಅವತರಿಸಿ ಅಭಿವ್ಯಕ್ತಗೊಂಡಿರುವ, ಹಾಗೂ ಒಂದಲ್ಲ ಇನ್ನೊಂದು ರೀತಿಯಿಂದ, ಒಬ್ಬರಲ್ಲ ಮತ್ತೊಬ್ಬರಿಂದ ಇಂದಿಗೂ ಆವಿರ್ಭಾವಗೊಳ್ಳುತ್ತಿರುವ ಧಾರ್ಮಿಕ ಶಕ್ತಿ. ಆ ಶಕ್ತಿಯೆ ಭಾರತಿ! ನೆಲದಲ್ಲಿ ಅದು ನೆಲೆಗೊಂಡಿರುವ ವಿಭಾಗವೆ ಭಾರತ! ಅಲ್ಲಿ ಹುಟ್ಟಿ ಬೆಳೆದು, ಅದರ ಧ್ಯೇಯೋದ್ದೇಶಗಳನ್ನು ಸಾಧಿಸುತ್ತ ಪೂರ್ಣತ್ವದ ಕಡೆಗೆ ಸಾಗುತ್ತಿರುವ ಜನವೇ ಭಾರತೀಯರು. ನಾವೆಲ್ಲ ಭಾರತೀಯರೇ. ಕೇರಳ ಕರ್ಣಾಟಕ ಆಂಧ್ರಾದಿ ಪ್ರದೇಶಗಳೆಲ್ಲ ಆ ಭಾರತಿಯ ಅಂಗರೂಪಗಳು, ಅಂಶರೂಪಗಳು. ಭಾರತಿ ತಾಯಿ. ಇವರೆಲ್ಲ ಆ ತಾಯಿಯ ತನುಜಾತೆಯರು; ತನುವಿನಿಂದ ಜಾತರಾದವರು; ಮಕ್ಕಳು. ಅಂಗಾಂಗಗಳ ಕ್ಷೇಮ ಅಂಗಿಯ ಕ್ಷೇಮದಿಂದ ಅಭಿನ್ನ. ಅಂಗಿಯ ಕ್ಷೇಮದಿಂದಲೆ ಅಂಗಾಂಗಗಳ ಕ್ಷೇಮವೂ ಸಿದ್ಧವಾಗುತ್ತದೆ. ಯಾವ ಅಂಗವಾಗಲಿ ಮತ್ತೊಂದು ಅಂಗದೊಡನೆ ಕದನವಾಡಿದರೆ ಅಥವಾ ಸಹಕರಿಸದಿದ್ದರೆ ಇತರ ಅಂಗಗಳಿಗೆ ಹಾನಿಯನ್ನುಂಟುಮಾಡುವುದರ ಜೊತೆಗೆ ಅಂಗಿಗೂ ಹಾನಿಯನ್ನುಂಟುಮಾಡಿ ತನ್ನ ಸರ್ವನಾಶಕ್ಕೂ ಕಾರಣವಾಗುತ್ತದೆ. ಕೇರಳಾಭಿಮಾನ ಕರ್ಣಾಟಕಾಭಿಮಾನ ಆಂಧ್ರಾಭಿಮಾನ ಇತ್ಯಾದಿ ದೇಶಭಾಷಾಕ್ಷೇತ್ರಾಭಿಮಾನಗಳು ದ್ವೇಷಕ್ಕಾಗಲಿ ಅಸಹನೆಗಾಗಲಿ ಅನ್ಯಾಯಕ್ಕಾಗಲಿ ಆಕ್ರಮಣ ಬುದ್ಧಿಗಾಗಲಿ ಎಡೆಗೊಡದೆ ಭಾರತಾಭಿಮಾನದ ಆಶ್ರಯದಲ್ಲಿ, ವೈಯಕ್ತಿಕವಾದ ಮತ್ತು ಅನುಚಿತವಾದ ಸ್ವಾರ್ಥತೆಗಳನ್ನು ತ್ಯಜಿಸಿ, ತಮ್ಮ ತಮ್ಮ ಏಳಿಗೆಯನ್ನು ಸಾಧಿಸಬೇಕು. ಏಕೆಂದರೆ ಸರ್ವಕ್ಷೇಮದ ಪ್ರಣಾಳದಲ್ಲಿಯೆ ಸ್ವಕ್ಷೇಮವೂ ಹರಿದುಬರುತ್ತದೆ.

ಭಾಷಾನುಗುಣ ಪ್ರಾಂತರಚನೆ ಆಗುವುದಕ್ಕೆ ಅಚಿರಪೂರ್ವದಲ್ಲಿ –ಈ ಪುನರ್ವಿಂಗಡಣೆಯಿಂದ ಭಾರತದ ಐಕ್ಯತೆಗೆ ಭಂಗಬರುತ್ತದೆ; ದುರಭಿಮಾನದಿಂದ ಜನರಲ್ಲಿ ದ್ವೇಷಾಸೂಯೆಗಳು ಹೆಚ್ಚಿ, ದೇಶ ಛಿದ್ರಛಿದ್ರವಾಗಿ, ಅಂತಃಕಲಹದ ಕಿಚ್ಚು ಹೊತ್ತಿ, ದೇಶಭಕ್ತರ ಮಹಾತ್ಯಾಗದಿಂದಲೂ ಬಹುಕಾಲದ ಶ್ರಮದಿಂದಲೂ ಸಂಪಾದಿಸಿದ್ದ ಸ್ವಾತಂತ್ರ್ಯಕ್ಕೂ ಭಂಗ ಬರುತ್ತದೆ–ಎಂದು ವಿರೋಧಿಗಳಾದ ಕೆಲವರು ಆಡಿಕೊಳ್ಳುತ್ತಿದ್ದರು. ಆದರೆ ಅದೆಲ್ಲ ಬರಿಯ ಬಿಸಿತಲೆಯ ಹುಸಿ ಊಹೆಯಾಗಿತ್ತು ಎಂಬುದನ್ನು ತರುವಾಯ ನಡೆದ ಘಟನೆಗಳು ಮೂದಲಿಸುವಂತೆ ತೋರಿಸಿಕೊಟ್ಟಿವೆ. ರೋಗ ಗುಣವಾದ ಮೇಲೆಯೂ ಅದನ್ನು ಮತ್ತೆ ಮತ್ತೆ ನೆನೆಯುತ್ತಿರುವುದು ಆರೋಗ್ಯಲಕ್ಷಣವಾಗುವುದಿಲ್ಲ. ಭಾಷಾಪ್ರಾಂತ ಸಿದ್ಧವಾದ ಮೇಲೆಯೂ ಮುಂದೆ ನಡೆಯಬೇಕಾಗಿರುವ ರಚನಾತ್ಮಕ ಕಾರ್ಯಗಳಲ್ಲಿ ಆಸಕ್ತರಾಗಿ ತೊಡಗದೆ ಮತ್ತೆ ಆ ವಿಚಾರವಾಗಿ ತಲೆಕೆಡಿಸಿಕೊಳ್ಳುವುದು ಹಿತಕರವಲ್ಲ. ಏನಾದರೂ ಅಲ್ಪ ಸ್ವಲ್ಪ ಹೊಂದಾಣಿಕೆಗಳಾಗಬೇಕಾಗಿದ್ದರೆ ಅವನ್ನು ಆಯಾ ರಾಜ್ಯಸರ್ಕಾರಗಳೆ ಪರಸ್ಪರವಾಗಿ

ಆಡಳಿತದ ಮಟ್ಟದಲ್ಲಿ ಕಾಲಕ್ರಮೇಣ ಸರಿಪಡಿಸಿಕೊಳ್ಳಲು ಅವಕಾಶವಿದೆ.

ಸುಮಾರು ಇಪ್ಪತ್ತೆಂಟು ಮೂವತ್ತು ವರ್ಷಗಳ ಹಿಂದೆ ನಾನು ವಾಗ್ದೇವಿಯ ತೊಡೆಯ ಮೇಲೆ ತೊದಲುವ ಹಸುಳೆಯಾಗಿದ್ದಾಗ, ಬಹುಶಃ ಹಿರಿಯ ಕವಿ ರವೀಂದ್ರರ ಪ್ರಸಿದ್ಧ ಭಾರತ ರಾಷ್ಟ್ರಗೀತೆಯ ಪ್ರಭಾವದಿಂದ ಪ್ರೇರಿತನಾಗಿ, ಹಾಡಿದ ಒಂದು ಕರ್ಣಾಟಕ ರಾಷ್ಟ್ರಗೀತೆಯ ಕೆಲವು ಪಂಕ್ತಿಗಳನ್ನು ತಮ್ಮ ಅವಗಾಹನಕ್ಕೆ ತರಬಯಸುತ್ತೇನೆ. ಕರ್ಣಾಟಕ ಮತ್ತೆ ಭಾರತದ ಪೂರ್ವೋಕ್ತ ಸಂಬಂಧ ಅಲ್ಲಿ ಹೀಗೆ ಕಲ್ಪಿತವಾಗಿದೆ:

**ಜಯ್ ಭಾರತ ಜನನಿಯ ತನುಜಾತೆ,**
**ಜಯ ಹೇ ಕರ್ಣಾಟಕ ಮಾತೆ!**

**ಜಯ್ ಸುಂದರ ನದಿವನಗಳ ನಾಡೆ,**
**ಜಯ ಹೇ ರಸಋಷಿಗಳ ಬೀಡೆ!**
**ಭೂದೇವಿಯ ಮಕುಟದ ನವಮಣಿಯೆ,**
**ಗಂಧದ ಚಂದದ ಹೊನ್ನಿನ ಗಣಿಯೆ;**
**ರಾಘವ ಮಧುಸೂದನರವತರಿಸಿದ**
**ಭಾರತ ಜನನಿಯ ತನುಜಾತೆ,**
**ಜಯ ಹೇ ಕರ್ಣಾಟಕ ಮಾತೆ!**
**ಜನನಿಯ ಜೋಗುಳ ವೇದದ ಘೋಷ,**
**ಜನನಿಗೆ ಜೀವವು ನಿನ್ನಾವೇಶ.**
**ಹಸುರಿನ ಗಿರಿಗಳ ಸಾಲೆ**
**ನಿನ್ನಯ ಕೊರಳಿನ ಮಾಲೆ.**
**ಕಪಿಲ ಪತಂಜಲ ಗೌತಮ ಜಿನನುತ**
**ಭಾರತ ಜನನಿಯ ತನುಜಾತೆ,**
**ಜಯ ಹೇ ಕರ್ಣಾಟಕ ಮಾತೆ!**

**ಶಂಕರ ರಾಮಾನುಜ ವಿದ್ಯಾರಣ್ಯ**
**ಬಸವೇಶ್ವರರಿಹ ದಿವ್ಯಾರಣ್ಯ.**
**ರನ್ನ ಷಡಕ್ಷರಿ ಪೊನ್ನ**
**ಪಂಪ ಲಕುಮಿಪತಿ ಜನ್ನ**
**ಕಬ್ಬಿಗರುದಿಸಿದ ಮಂಗಳಧಾಮ,**
**ಕವಿಕೋಗಿಲೆಗಳ ಪುಣ್ಯಾರಾಮ!**
**ನಾನಕ ರಾಮಾನಂದ ಕಬೀರರ**
**ಭಾರತ ಜನನಿಯ ತನುಜಾತೆ,**

  ಜಯ ಹೇ ಕರ್ಣಾಟಕ ಮಾತೆ!
ತೈಲಪ ಹೊಯ್ಸಳರಾಳಿದ ನಾಡೆ,
ಡಂಕಣ ಜಕಣರ ನಚ್ಚಿನ ಬೀಡೆ,
  ಕೃಷ್ಣ ಶರಾವತಿ ತುಂಗಾ
  ಕಾವೇರಿಯ ವರರಂಗ!
ಚೈತನ್ಯ ಪರಮಹಂಸ ವಿವೇಕರ
  ಭಾರತ ಜನನಿಯ ತನುಜಾತೆ,
  ಜಯ ಹೇ ಕರ್ಣಾಟಕ ಮಾತೆ!

ಸರ್ವ ಜನಾಂಗದ ಶಾಂತಿಯ ತೋಟ,
ರಸಿಕರ ಕಂಗಳ ಸೆಳೆಯುವ ನೋಟ.
  ಹಿಂದೂ ಕ್ರೈಸ್ತ ಮುಸಲ್ಮಾನ
  ಪಾರಸಿಕ ಜೈನರುದ್ಯಾನ.
ಜನಕನ ಹೋಲುವ ದೊರೆಗಳ ಧಾಮ,
  ಗಾಯಕ ವೈಣಿಕರಾರಾಮ!
ಕನ್ನಡ ನುಡಿ ಕುಣಿದಾಡುವ ಗೇಹ,
ಕನ್ನಡ ತಾಯಿಯ ಮಕ್ಕಳ ದೇಹ!
ಜಯ್ ಭಾರತ ಜನನಿಯ ತನುಜಾತೆ,
  ಜಯ ಹೇ ಕರ್ಣಾಟಕ ಮಾತೆ!
ಜಯ್ ಸುಂದರ ನದಿವನಗಳ ನಾಡೆ,
  ಜಯ ಹೇ ರಸಋಷಿಗಳ ಬೀಡೆ.

ಇಲ್ಲಿ ಕರ್ಣಾಟಕಮಾತೆಗೆ ಸಲ್ಲುವ ಜಯಕಾರ ಆಕೆ ಭಾರತ ಜನನಿಯತನುಜಾತೆ ಯಾಗಿರುವುದರಿಂದಲೆ. ಭಾರತಾಂಬೆಯ ಅಂಗೋದ್ಭವೆಯಾಗಿ ವಿನಾ ಕರ್ಣಾಟಕಕ್ಕೆ ಬೇರೆಯ ಅಸ್ತಿತ್ವವೆಲ್ಲಿ? ಈ ತನುಜಾತೆ ಆ ಮಾತೆಯ ತನುವಿನ–ಎಂದರೆ ಐಹಿಕ ಆಧ್ಯಾತ್ಮಿಕ ಎರಡೂ ಸೇರಿದ ತನುವಿನ–ಸಕಲ ಲಕ್ಷಣಗಳನ್ನೂ ಪಡೆದು, ಸಮರೂಪ ಮಾತ್ರವಲ್ಲ, ಸರ್ವಸಮರೂಪೆಯಾಗಿದ್ದಾಳೆ. ಈಕೆ ಶ್ರೀರಾಮ ಶ್ರೀಕೃಷ್ಣರು ಅವತಾರಮಾಡಿದ ಭಾರತಾಂಬೆಯ ಕನ್ಯೆ; ನಾನಕ, ರಾಮಾನಂದ, ಕಬೀರ, ಶ್ರೀಕೃಷ್ಣಚೈತನ್ಯ, ಶ್ರೀರಾಮಕೃಷ್ಣಪರಮಹಂಸರೆ ಮೊದಲಾದ ಮಹಾಪುರುಷರನ್ನು ಹಡೆದೂ ಅವರೆಲ್ಲರ ದಿವ್ಯತಪಸ್ಸಿನಿಂದಲೆ ಸಂಭೂತೆಯಾಗಿರುವ ಭಾರತಮಾತೆಯ ತನುಜಾತೆ. ಮಗಳ ಮೆಯ್ಯಲ್ಲಿ ಹರಿವ ನೆತ್ತರು ತಾಯಿಯದು. ಇವಳ ಉಸಿರ ಉಸಿರು ಅವಳು. ಇಬ್ಬರಿಗೂ ಇರುವ ಸಂಬಂಧ ಹೊಕ್ಕುಳ ಬಳ್ಳಿಯ ಸಂಬಂಧ. ಆದ್ದರಿಂದಲೆ ಅವಳು ತಿಂದರೆ ಇವಳಿಗೆ ಪುಷ್ಟಿ. ಮಗಳ ಪುಷ್ಟಿತಾಯಿಗೆ ತುಷ್ಟಿ. ಈ ದೃಷ್ಟಿ ರಾಜಕೀಯ ಆರ್ಥಿಕರಂಗಗಳಲ್ಲಿ ಒಂದು ರೀತಿಯಲ್ಲಿ ಪ್ರಸಾರಿತವಾದರೆ, ಕಲೆ

ಸಾಹಿತ್ಯಾದಿ ರಂಗಗಳಲ್ಲಿ ಮತ್ತೊಂದು ರೀತಿಯಲ್ಲಿ ಪ್ರಸಾರಿತವಾಗಿ, ಬಹಿರಂಗದ ಭದ್ರತೆಗೆ ಅತ್ಯಾವಶ್ಯಕವಾದ ಅಂತರಂಗಿಕ ಪ್ರಜ್ಞಾಭಿತ್ತಿ ಜನಮನದಲ್ಲಿ ಸಿದ್ಧವಾಗುವಂತೆ ಮಾಡುವುದೆ ನಮ್ಮೆಲ್ಲರ ಆದ್ಯ ಮತ್ತು ರಾಜಕರ್ತವ್ಯ.

ಮೈಸೂರು ಎಂಬ ರಾಜಕೀಯ ನಾಮಧೇಯದಿಂದ ಸಿದ್ಧವಾಗಿರುವ ಈ ಸಾಂಸ್ಕೃತಿಕ ನಾಮಧೇಯದ ಕರ್ಣಾಟಕದ ಲೌಕಿಕ ಅಭ್ಯುದಯ ಸಾಧನೆ ಪ್ರಧಾನತಃ ರಾಜಕೀಯ ವೈಜ್ಞಾನಿಕ ಆರ್ಥಿಕಾದಿ ಕ್ಷೇತ್ರಗಳಿಗೆ ಸಂಬಂಧಪಟ್ಟದ್ದು. ಅಂತಹ ಲೌಕಿಕಾಭ್ಯುದಯದ ತಳಹದಿಯ ಮೇಲೆಯೆ ನಮ್ಮ ನಿಃಶ್ರೇಯಸದ ಭಗವನ್ಮಂದಿರ ನಿರ್ಮಾಣವಾಗುತ್ತದೆ. ಈ ಮಂದಿರ ನಿರ್ಮಾಣ ಕಾರ್ಯದಲ್ಲಿ ಲೇಖನಿಯೆ ಆಚಾರ್ಯಶಿಲ್ಪಿ.

ಭವಲೋಕದಲ್ಲಿ ಏನನ್ನು ಸಾಧಿಸಬೇಕಾಗಿದ್ದರೂ ಮೊದಲು ಅದನ್ನು ಭಾವಲೋಕದಲ್ಲಿ ಬಿತ್ತಬೇಕು. ಮೈಯಲ್ಲಿ ಯಾವ ಪರಿವರ್ತನೆಯಾಗಬೇಕಾಗಿದ್ದರೂ ಅದು ಮನದಲ್ಲಿ ಮೊಳೆತು ಬೇರೂರಬೇಕು. ಹಾಗಲ್ಲದೆ ಹೊರಗಡೆಯಿಂದ ಬಲಾತ್ಕಾರವಾಗಿ ಹೇರುವ ಕೃತಕ ಪರಿವರ್ತನೆ ತಾತ್ಕಾಲಿಕವಾಗಿ ಶೀಘ್ರಫಲಕಾರಿಯಾಗಿ ತೋರಿದರೂ ಬಹುಬೇಗನೆ ವಿಫಲವಾಗುತ್ತದೆ, ಇಲ್ಲವೆ ವಿರುದ್ಧ ಪರಿಣಾಮಕಾರಿಯಾಗುತ್ತದೆ. ಆದ್ದರಿಂದ ನೂತನ ಸಾಹಸಕ್ಕೆ ಜನರ ಮನಸ್ಸನ್ನು ಹದಗೊಳಿಸುವುದು ಅತ್ಯಂತ ಆವಶ್ಯಕ. ಅದರಲ್ಲಿಯೂ ರಾಜಕೀಯ ಆರ್ಥಿಕ ಸಾಮಾಜಿಕ ಪ್ರಪಂಚಗಳಲ್ಲಿ ಕ್ರಾಂತಿಕಾರಕವಾದ ಸಿದ್ಧಾಂತಗಳೂ ಪ್ರಯೋಗಗಳೂ ಮಿಂಚಿನ ವೇಗದಿಂದ ಸಾಗುತ್ತಿರುವ ಈ ಸಮಯದಲ್ಲಿ ಹೊಸ ಸನ್ನಿವೇಶಕ್ಕೆ ಹೊಂದಿಕೊಳ್ಳುವಂತೆ, ಹೊಸ ತತ್ತ್ವಗಳನ್ನು ಒಪ್ಪಿಕೊಳ್ಳುವಂತೆ, ಹೊಸರೀತಿಯ ತ್ಯಾಗಗಳಿಗೆ ಸಿದ್ಧವಾಗುವಂತೆ, ಹಳೆಯ ಡಂಭ ದರ್ಪಾಚಾರಗಳನ್ನು ತ್ಯಜಿಸಿ ಹೊಸ ನಿಯಮಗಳನ್ನು ಮರ್ಯಾದೆಯಿಂದ ಅಂಗೀಕರಿಸುವಂತೆ ಬುದ್ಧಿಯನ್ನೂ ಹೃದಯವನ್ನೂ ತಿದ್ದಬೇಕಾದುದು ಅಗತ್ಯ. ಈ ಕೆಲಸವನ್ನು ಸಾಧಿಸುವುದರಲ್ಲಿ ಕೆಲವು ರಾಷ್ಟ್ರಗಳು ಮೊದಮೊದಲು ಲೇಖನಿಗಿಂತಲೂ ಹೆಚ್ಚಾಗಿ ಕತ್ತಿಯನ್ನೇ ನೆಚ್ಚಿ, ಕಾರ್ಯಸಾಧನೆಯಲ್ಲಿ ಸ್ವಲ್ಪಮಟ್ಟಿಗೆ ಶೀಘ್ರವಿಜಯಿಗಳಾದಂತೆ ತೋರಿದರೂ, ಅಪಖ್ಯಾತಿಗೂ ಲೋಕನಿಂದೆಗೂ ಸಾಮೂಹಿಕ ಸಂಶಯಕ್ಕೂ ಪಕ್ಕಾಗಿ, ಕೊನೆಗೆ ಲೇಖನಿಯ ನೆರವನ್ನೆ ನೆಮ್ಮಬೇಕಾಯಿತು. ಬುದ್ಧಿಯನ್ನು ಎಚ್ಚರಿಸಿ ಸೂಕ್ಷ್ಮಗೊಳಿಸಿ, ನಾನಾರೂಪದ ಪ್ರಾಚೀನ ಮತ್ತು ನವೀನ ಮೌಢ್ಯಗಳಿಂದ ಅದನ್ನು ಪಾರುಮಾಡಿ, ವಿಚಾರಪರತೆಯನ್ನೂ ವೈಜ್ಞಾನಿಕದೃಷ್ಟಿಯನ್ನೂ ನೆಲೆಗೊಳಿಸಿ, ಜನತೆಯನ್ನು ಸಮನ್ವಯ, ಸರ್ವೋದಯ ಮತ್ತು ಪೂರ್ಣದೃಷ್ಟಿಗಳ ಕಡೆಗೆ ತಿರುಗಿಸುವ ಹೊರೆ ಹೊಣೆ ಎರಡೂ ಕತ್ತಿಕುಡುಗೋಲುಗಳಿಗಿಂತಲೂ ಹೆಚ್ಚಾಗಿ ಲೇಖನಿಯ ಮೇಲೆಯೆ ಬೀಳುತ್ತದೆ. ಬುದ್ಧಿಯಷ್ಟೆ, ಅಥವಾ ಅದಕ್ಕಿಂತಲೂ ಮಿಗಿಲಾಗಿಯೆ, ಹೃದಯಪರಿವರ್ತನೆ ಅತ್ಯಗತ್ಯ. ಆ ಕೆಲಸ, ವಿವಿಧ ಮತಧರ್ಮಗಳು ನೆಲಸಿರುವ ನಮ್ಮ ದೇಶದಲ್ಲಿ, ಸಾಹಿತ್ಯದಿಂದಲೆ ಸಾಧ್ಯವಾಗಬೇಕಾಗಿದೆ. ಏಕೆಂದರೆ ಭಾವವೆ ಸಾಹಿತ್ಯದ ಮುಖ್ಯಸಾಮಗ್ರಿ; ಅದರ ಗುರಿ ರಸಾನುಭವ. ರಸಾನುಭವದಿಂದ ಹೃದಯ ಪರಿವರ್ತನೆಯಾಯಿತೆಂದರೆ ಬುದ್ಧಿಯ ಮೀನಮೇಷವೆಲ್ಲ ಮಾಯವಾಗಿ ನಮ್ಮ ನೇರನಡೆ ತಡೆಯಿಲ್ಲದೆ ಸಾಗುತ್ತದೆ.

ಭಾರತರಾಷ್ಟ್ರವನ್ನು ನಮ್ಮ ರಾಜ್ಯಾಂಗ ಸಮನ್ವಯ-ರಾಷ್ಟ್ರವೆಂದು ಘೋಷಿಸಿದೆ. 'ಸೆಕ್ಯುಲರ್' ಎಂದರೆ ಧರ್ಮರಹಿತ, ಮತರಹಿತ, ಚಾರ್ವಾಕ ಅಥವಾ ನಾಸ್ತಿಕ ಎಂದೇನೂ ಅರ್ಥವಲ್ಲ. ಇಲ್ಲಿ ಎಲ್ಲ ಧರ್ಮಗಳೂ ಎಲ್ಲ ದೃಷ್ಟಿಗಳೂ ಎಲ್ಲ ಆಚಾರ ಆರಾಧನೆಗಳೂ ಪರಸ್ಪರ ಗೌರವದಿಂದ, ಪರಸ್ಪರ ವಿಶ್ವಾಸದಿಂದ, ದಾರಿಗಳು ಬೇರೆಬೇರೆಯಾದರೂ ಸರ್ವರಿಗೂ ಏಕೈಕವಾದ ಗುರಿಯಾಗಿರುವ ಭಗವತ್ ತತ್ತ್ವದ ಕಡೆಗೆ ಸಾಗಬಹುದು. ಶ್ರೀರಾಮಕೃಷ್ಣ ಪರಮಹಂಸರಿಂದ ಪುನಃಪ್ರಣೀತವಾಗಿ, ಮಹಾತ್ಮಾ ಗಾಂಧಿ ಶ್ರೀ ಅರವಿಂದರೆ ಮೊದಲಾದವರಿಂದ ಭಾವಪುಷ್ಟವೂ ಬುದ್ಧಿಪೋಷಿತವೂ ಆಗಿ, ಆಧುನಿಕ ವೈಜ್ಞಾನಿಕ ದೃಷ್ಟಿಗೂ ಅವಿರುದ್ಧವಾಗಿ, ಅನ್ಯದೇಶ ಅನ್ಯಮತಗಳ ಮೇಧಾವಿಗಳಿಂದಲೂ ಸ್ವೀಕೃತವಾಗಿ, ಲೋಕಾದರಕ್ಕೆ ಪಾತ್ರವಾಗಿರುವ ಈ ಸಮನ್ವಯದೃಷ್ಟಿ ನಮ್ಮ ಜನತೆಯ ನಿತ್ಯಜೀವನದ ಸಾಧಾರಣ ತತ್ತ್ವವಾಗುವಂತೆ ಲೇಖಕರೆಲ್ಲ ಶ್ರಮಿಸಬೇಕಾಗಿದೆ. ಸಾಹಿತ್ಯದ ಚರಿತ್ರೆಯನ್ನು ಕೂಡ ಜಾತೀಯತೆಯ ಆಧಾರದ ಮೇಲೆ ವಿಭಾಗಿಸುವ ನಾವು ನಮ್ಮ ನಾಡಿಗೆ ಬಂದಿರುವ, ಮತಧರ್ಮದ ಸೋಂಕು ಇನಿತೂ ಇಲ್ಲದ, ಪರದೇಶಿಯಾದ ಕಮ್ಯೂನಿಸಮ್‌ಗೆ ಕೂಡ ಜನಿವಾರವನ್ನೊ ಶಿವದಾರವನ್ನೊ ನಾಮವನ್ನೊ ವಿಭೂತಿಯನ್ನೊ ಲಿಂಗವನ್ನೊ ಶಿಲುಬೆಯನ್ನೊ ತೊಡಿಸದೆ ಬಿಡುವುದಿಲ್ಲ ಎಂಬ ಆಶ್ಚರ್ಯಕರವಾದ ಚಿಹ್ನೆಗಳು ಕಂಡುಬರುತ್ತಿರುವ ಈ ಸಮಯದಲ್ಲಿ ಈ ವಿಚಾರವಾಗಿ ಎಷ್ಟು ಎಚ್ಚರಿಕೆಯಿಂದ ಮುಂದುವರಿದರೂ ಸಾಲದಾಗಿದೆ. ನಮ್ಮ ರಾಜ್ಯಾಂಗ ಎಂತಹ ವಿಶಾಲಹೃದಯದಿಂದ ಏನೇ ಕಾನೂನುಗಳನ್ನು ಮಾಡಿದ್ದರೂ ಜನತೆಯ ಹೃದಯ ಪರಿವರ್ತಿತವಾಗಿ ಆ ಭಾಗಗಳನ್ನು ಒಲಿದು ಅಪ್ಪಿಕೊಳ್ಳದಿದ್ದರೆ ನಾವು ಹೀಗೆಯೆ ಮುಂದುವರಿಯಬೇಕಾಗುತ್ತದೆ. ನಮ್ಮ ರಾಜಕೀಯ ಜೀವನ, ನಮ್ಮ ಪ್ರಜಾಪ್ರಭುತ್ವ, ನಮ್ಮ ಮಹಾಚುನಾವಣೆಗಳು ನಮ್ಮನ್ನು ಹೇಗಾದರೂ ಸುಧಾರಿಸುತ್ತವೆ ಎಂಬ ನಂಬುಗೆಯೂ ನಡುಗುವಂತಾಗುತ್ತಿದೆ. ಐದು ವರ್ಷಕ್ಕೊಮ್ಮೆ ನಡೆಯುವ ಹಾಗೂ ಜನಹೃದಯಸಾಗರವನ್ನು ಕಡೆಯುವ ಮಹಾಚುನಾವಣೆ ನಮ್ಮಲ್ಲಿ ಪ್ರಜಾಪ್ರಭುತ್ವದ ತತ್ತ್ವವನ್ನು ಬಿತ್ತಿ, ನಮ್ಮ ಸಮನ್ವಯ ದೃಷ್ಟಿಯನ್ನು ವಿಸ್ತರಿಸುವುದಕ್ಕೆ ಬದಲಾಗಿ, ನಾಲ್ಕು ವರ್ಷದ ಅವಧಿಯಲ್ಲಿ ಕೊಂಚ ಸಮಾಧಾನ ಹೊಂದಿ ತಣ್ಣಗಾಗಿ ಕಡಲ ತಳಕ್ಕೆ ಇಳಿದು ಕುಳಿತು ಕ್ರೋಧ ಅಸೂಯೆ ಸ್ಪರ್ಧೆ ವೈರ ಜಾತಿಮಾತ್ಸರ್ಯ ದ್ವೇಷ ದುರ್ಬುದ್ಧಿ ಸ್ವಾರ್ಥತೆ ಇತ್ಯಾದಿ ಭಾವೋನ್ಮಾದ ಬುದ್ಧಿ ಭ್ರಾಂತಿಗಳನ್ನೆಲ್ಲ ಕಡೆದೆಬ್ಬಿಸಿ ಹೊಡೆದುಬ್ಬಿಸಿ ಎಂತಹ ಅನಾಹುತವಾಗುತ್ತಿದೆ ಎನ್ನುವುದನ್ನು ತಿಳಿದವರೆಲ್ಲ ಬಲ್ಲರು. ಸಾಹಿತ್ಯ ಈ ವಿಷವನ್ನೆಲ್ಲ ಈಂಟುವ ನೀಲಕಂಠನಾಗಬೇಕು; ಅಮೃತವನ್ನು ಹಂಚುವ ದಿವ್ಯಮೋಹಿನಿಯಾಗಬೇಕು.

ಸಂಸ್ಕೃತಿಯ ಏಳಿಗೆಗೆ ತಳಹದಿಯಾಗುವ ಲೌಕಿಕದ ಚೌಕಟ್ಟಿನ ಸಾಧನೆಗಾಗಿಯೆ ಜನತೆ ಭಾಷಾನುಗುಣ ಪ್ರಾಂತಗಳನ್ನು ಬಯಸಿದ್ದು. ಆಯಾ ಚೌಕಟ್ಟಿನ ಪರಿಮಿತಿಯಲ್ಲಿ ಆಯಾ ದೇಶಭಾಷೆ ತನ್ನ ಎಲ್ಲ ವ್ಯವಹಾರಗಳನ್ನೂ ನಡೆಸಬೇಕಾಗಿದೆ. ಆ ವಿಚಾರವಾಗಿ ನಮ್ಮ ಬುದ್ಧಿಯಲ್ಲಿ ಯಾವ ಅನಿಶ್ಚಯತೆಯನ್ನೂ

ಇಟ್ಟುಕೊಳ್ಳಬಾರದು.ಪ್ರದೇಶ ಪ್ರದೇಶಗಳ ಮತ್ತು ಪ್ರದೇಶ ಕೇಂದ್ರಗಳ ವ್ಯವಹಾರದ ಸಲುವಾಗಿ ನಮ್ಮ ರಾಜ್ಯಾಂಗ ಒಂದು ಭಾಷೆಯನ್ನೊಪ್ಪಿಕೊಂಡಿದೆ. ಆದರೆ ಆ ಭಾಷೆ ನಮಗೆ ಬರಿಯ ಭಾಷಾದೃಷ್ಟಿಯಿಂದ ಮಾತ್ರವೆ ಬೇಕಾಗಬಹುದಾದ್ದು, ವ್ಯಾವಹಾರಿಕ ಮಟ್ಟದಲ್ಲಿ. ಅದೂ ಎಲ್ಲರಿಗಲ್ಲ. ಅಂತಹ ವ್ಯವಹಾರಗಳಲ್ಲಿ ಭಾಗವಹಿಸುವವರಿಗೆ ಮಾತ್ರ. ಆಯಾ ಪ್ರದೇಶದ ಸಾಮಾನ್ಯ ಜನತೆಯ ದೈನಂದಿನ ವ್ಯವಹಾರಕ್ಕೂ ಭಾವ ಹಾಗೂ ಬುದ್ಧಿ ಪುಷ್ಟಿಯ ಸಾಧನೆಗೂ ವಿಶೇಷವಾದ ಸಾಂಸ್ಕೃತಿಕ ಮತ್ತು ಆಧ್ಯಾತ್ಮಿಕ ವಿಕಾಸಕ್ಕೂ ಬೇಕಾದುದು ಆಯಾ ದೇಶಭಾಷೆಯೆ. ಆದ್ದರಿಂದ ಆಯಾ ದೇಶ ಭಾಷೆಗಳ ವಿಷಯದಲ್ಲಿ ಆಯಾ ಪ್ರದೇಶಗಳು ಎಷ್ಟು ಶ್ರಮಿಸಿದರೂ ಸಾಲದಾಗಿದೆ; ಎಷ್ಟು ಪ್ರೋತ್ಸಾಹ ಕೊಟ್ಟರೂ ಎಂದಿಗೂ ಅತಿರೇಕ ಎನ್ನಿಸಿಕೊಳ್ಳಲಾರದು. ಸರಕಾರಗಳಾಗಲಿ, ವಿದ್ಯಾಭ್ಯಾಸ ಇಲಾಖೆಗಳಾಗಲಿ, ವಿಶ್ವವಿದ್ಯಾನಿಲಯಗಳಾಗಲಿ, ಇತರ ಸಾಂಸ್ಕೃತಿಕ ಸಂಸ್ಥೆಗಳಾಗಲಿ, ಕಡೆಗೆ ವ್ಯಾಪಾರ ವಾಣಿಜ್ಯಾದಿ ಸಂಸ್ಥೆಗಳಾಗಲಿ ದೇಶಭಾಷೆಗೇ ಮೊತ್ತಮೊದಲನೆಯ ಸ್ಥಾನ ಕೊಡಬೇಕು. ಹಾಗೆ ಮಾಡದಿದ್ದರೆ ಪ್ರಜಾಪ್ರಭುತ್ವದ ಬುಡದ ಬೇರಿಗೆ ಬೆನ್ನೀರೆರೆದಂತಾಗುತ್ತದೆ; ದೇಶದ ಮಕ್ಕಳು ತಾವರಿಯದ ಇತರ ಭಾಷೆಗಳ ಹೊರೆಯನ್ನು ಹೊತ್ತು, ಯಾವುದನ್ನೂ ಸರಯಾಗಿ ಅರಿಯಲಾರದೆ, ಏನನ್ನೂ ಚೆನ್ನಾಗಿ ಅರಗಿಸಿಕೊಳ್ಳಲಾರದೆ, ಈಗಿರುವಂತೆಯೆ ಕುಂಟುತ್ತಾ, ನಿಂತವರು ನಿಲ್ಲಲಿ, ಬಿದ್ದವರು ಬೀಳಲಿ, ಸೋತವರು ಸೋಲಲಿ, ಪಯಣ ಹೊರಟ ನೂರರಲ್ಲಿ ತೊಂಬತ್ತೊಂಬತ್ತು ಹಿಂದುಳಿದು, ಆ ಕೊನೆಯ ಅದೃಷ್ಟಶಾಲಿಯೂ ಅರ್ಧಮಾತ್ರನಾಗಿ, ಏದುತ್ತಾ, ಗುರಿಯ ಬಳಿಸಾರುತ್ತಿರುವ ಇಂದಿನ ದುರ್ಗತಿಯನ್ನೇ ನಾವು ಪ್ರಗತಿ ಎಂದು ಕರೆದುಕೊಳ್ಳುತ್ತಾ ಆತ್ಮವಂಚಕರಾಗಿ ಸಾಗಬೇಕಾಗುತ್ತದೆ.

ನಮ್ಮ ಭರತವರ್ಷದ ಜನಜೀವನದಲ್ಲಿ ಬೇರೆಬೇರೆ ಭಾಷೆಗಳ ಸ್ಥಾನ ಹೇಗೆ ಇರಬೇಕು ಎಂಬುದನ್ನು ಅನೇಕ ವರ್ಷಗಳ ಹಿಂದೆಯೇ ನಮ್ಮ ಸ್ವಾತಂತ್ರ್ಯಶಿಲ್ಪಿ ಪೂಜ್ಯ ಮಹಾತ್ಮ ಗಾಂಧೀಜಿಯೆ ಉಳಿದವರಿಗೆ ಸಾಧ್ಯವಾಗದಿರಬಹುದಾದ ನಿಷ್ಪಕ್ಷಪಾತ ದೃಷ್ಟಿಯಿಂದಲೂ ವಿವಿಧ ಭಾಷಾಪ್ರದೇಶಗಳ ಮತ್ತು ಪೂರ್ಣರಾಷ್ಟ್ರದ ಸರ್ವಹಿತದೃಷ್ಟಿಯಿಂದಲೂ ಸ್ಪಷ್ಟವಾಗಿ ಸಾರಿದ್ದಾರೆ. ಅವರು ಇಡಿಯ ರಾಷ್ಟ್ರದ ವ್ಯವಹಾರಕ್ಕೆ ಹಿಂದಿಯನ್ನೂ ಪ್ರದೇಶಗಳ ವ್ಯಾವಹಾರಿಕ ಸಾಹಿತ್ಯಿಕ ವೈಜ್ಞಾನಿಕ ಆಧ್ಯಾತ್ಮಿಕಾದಿ ಸಕಲಕ್ಕೂ ಆಯಾ ದೇಶಭಾಷೆಗಳನ್ನು, ಆವಶ್ಯಕವಾಗಿ ಕೆಲವರಿಗೆ ಮಾತ್ರ ಬೇಕಾಗಿರುವ ರಾಯಭಾರ ಮೊದಲಾದ ಅಂತರರಾಷ್ಟ್ರೀಯ ವ್ಯವಹಾರ ಮತ್ತು ವೈಜ್ಞಾನಿಕ ವ್ಯಾಸಂಗಾದಿ ವಿಷಯಗಳಿಗಾಗಿ ಇಂಗ್ಲಿಷನ್ನೂ ನಿರ್ದೇಶಿಸಿದ್ದಾರೆ. ಅದು ಸರ್ವಸಮರ್ಪಕವೂ ಬಹುಜನಸಮ್ಮತವೂ ಆಗಿದೆ. ನಾವು ಆ ಮಾರ್ಗದರ್ಶನದಲ್ಲಿಯೆ ಮುಂದುವರಿಯುವುದು ಲೇಸು.

ನಮ್ಮ ವಿದ್ಯಾಭ್ಯಾಸಕ್ರಮದಲ್ಲಿ ಇಂಗ್ಲಿಷಿಗಿರುವ ಕೃತಕಪ್ರಾಮುಖ್ಯವನ್ನಂತೂ ಸ್ವದೇಶೀಯ ವಿದೇಶೀಯಾದಿಯಾಗಿ ವಿದ್ಯಾಶಾಸ್ತ್ರಜ್ಞರೂ ಮನಃಶಾಸ್ತ್ರಜ್ಞರೂ ದೇಶಭಕ್ತರೂ ರಾಷ್ಟ್ರನಿರ್ಮಾಣಕರೂ ಪ್ರವೀಣರೂ ಪ್ರಾಧ್ಯಾಪಕರೂ ಎಲ್ಲರೂ

ಖಂಡಿಸಿದ್ದಾರೆ, ಖಂಡಿಸುತ್ತಲೂ ಇದ್ದಾರೆ. ಆದರೆ ಆ ಸಂಕೋಲೆಯಿಂದ ನಾವಿನ್ನೂ ಬಿಡುಗಡೆ ಹೊಂದಲು ಸಾಧ್ಯವಾಗಿಲ್ಲ. ಸಂಕೋಲೆಯ ಭಾರವೆ ಅಭ್ಯಾಸವಾಗಿ ನಡೆ ಕಲಿತ ಕೆಲವರಿಗೆ ಅದರಿಂದ ಬಿಡುಗಡೆಹೊಂದುವ ಇಷ್ಟವೂ ಇಲ್ಲ. ಅಷ್ಟೆ ಅಲ್ಲ; ಹಾಗೆ ಸಂಕೋಲೆ ಹಾಕಿಕೊಳ್ಳದೆ ಕಲಿತ ನಡೆ ಶಿಷ್ಟಾಚಾರ ಸಮ್ಮತವಾಗುವುದಿಲ್ಲ ಎಂಬ ಹಾಸ್ಯಾಸ್ಪದವಾದ ಅಭಿಪ್ರಾಯವನ್ನುಳ್ಳವರಾಗಿದ್ದಾರೆ. ಹೊರಗಣ ಸಂಕೋಲೆಯಿಂದ ಬಿಡುಗಡೆಹೊಂದುವಷ್ಟು ಸುಲಭವಾದುದಲ್ಲ ಅಂತರ್ದಾಸ್ಯವಿಮೋಚನೆ.

ಆದರೂ ಈ ಇಂಗ್ಲಿಷ್ ಚಪ್ಪಡಿಯ ಭಾರಾಪಘಾತದಿಂದ ಜನಸಾಮಾನ್ಯರ ಬಹುಸಂಖ್ಯಾತ ಮಕ್ಕಳನ್ನು ಪಾರುಮಾಡಿ ರಕ್ಷಿಸದಿದ್ದರೆ ನಾವು ವಿದ್ಯಾಭ್ಯಾಸಕ್ಕಾಗಿ ವ್ಯಯಮಾಡುತ್ತಿರುವ ಕೋಟ್ಯಂತರ ರೂಪಾಯಿ ನೀರಿನಲ್ಲಿ ಮಾಡಿದ ಹೋಮವಾಗುತ್ತದೆ. ಸ್ವಾತಂತ್ರ್ಯ ಪೂರ್ವಕಾಲದಲ್ಲಿಯೆ ಗಾಂಧೀಜಿ ಹೀಗೆ ಹೇಳಿದ್ದರು: "ಪರಭಾಷೆಯ ಮೂಲಕದ ಶಿಕ್ಷಣ ನಮ್ಮ ಮಕ್ಕಳ ಬುದ್ಧಿಶಕ್ತಿಯನ್ನು ಬೆಂಡುಮಡಿದೆ; ಅವರ ನರಗಳನ್ನು ದುರ್ಬಲಗೊಳಿಸಿದೆ. ಅವರನ್ನು ಬಾಯಿಪಾಠ ಮಾಡುವ ಗಿಳಿಗಳನ್ನಾಗಿ ಮಾಡಿದೆ; ಪ್ರತಿಭಾನ್ವಿತವಾದ ಸೃಷ್ಟಿಕಾರ್ಯಕ್ಕೆ ಅನರ್ಹರನ್ನಾಗಿ ಮಾಡಿದೆ.... ನಾನಿಂದು ಸರ್ವಾಧಿಕಾರಿಯಾಗಿದ್ದರೆ ಈ ಕೂಡಲೆ ಪರಭಾಷೆಯ ಮೂಲಕದ ವಿದ್ಯಾಭ್ಯಾಸವನ್ನು ನಿಲ್ಲಿಸುತ್ತಿದ್ದೆ. ಹೊಸ ಸುಧಾರಣೆಗಳನ್ನು ಜಾರಿಗೆ ತರುವಂತೆ ಆಜ್ಞೆಮಾಡುತ್ತಿದ್ದೆ. ಇಷ್ಟವಿಲ್ಲದವರು ಕೆಲಸ ಕಳೆದುಕೊಳ್ಳುತ್ತಿದ್ದರು. ಪಠ್ಯ ಪುಸ್ತಕಗಳಿಗಾಗಿ ಕಾಯಬೇಕಾಗಿಲ್ಲ. ಅವು ಅನಂತರ ತಾವಾಗಿಯೆ ಬೆಳಕಿಗೆ ಬರುತ್ತವೆ... ಅಂತರರಾಷ್ಟ್ರೀಯ ರಾಜಕೀಯ ಮತ್ತು ವಾಣಿಜ್ಯ ವ್ಯವಹಾರಗಳಿಗೆ ಆಂಗ್ಲಭಾಷೆ ಅತ್ಯಾವಶ್ಯಕ ಎಂದು ನನಗೆ ಗೊತ್ತು. ಆದ್ದರಿಂದ ಅದನ್ನು ಕೆಲವರು ಕಲಿತರೆ ಸಾಕು. ಅದು ಉತ್ತಮ ಆಲೋಚನೆಗಳ ಮತ್ತು ಉತ್ತಮ ಸಾಹಿತ್ಯದ ಅಕ್ಷಯನಿಧಿಯೂ ನಿಜ. ಹೆಚ್ಚು ಭಾಷೆಗಳನ್ನು ಕಲಿಯಲು ಸಾಮರ್ಥ್ಯ ಮತ್ತು ಅವಕಾಶ ಇರುವವರು, ಅದನ್ನು ಕಲಿತು, ಅದರಲ್ಲಿರುವ ಸಾರಸರ್ವಸ್ವವನ್ನು ದೇಶ ಭಾಷೆಗಳಿಗೆ ಇಳಿಸಲಿ.... ಪರಭಾಷೆಯ ಮೂಲಕದ ಶಿಕ್ಷಣದಿಂದ ರಾಷ್ಟ್ರಕ್ಕೆ ಆಗುತ್ತಿರುವ ಜ್ಞಾನಹಾನಿ ಮತ್ತು ನೈತಿಕನಷ್ಟ ಅಷ್ಟಿಷ್ಟಲ್ಲ. ಆ ನಷ್ಟವೆಷ್ಟು ಎಂಬುದನ್ನು ಬಹುಶಃ ನಮಗಿಂತ ಮುಂದಿನ ಪೀಳಿಗೆಯವರು ಅರಿಯಬಲ್ಲರು... ನಾವು ಆಂಗ್ಲಭಾಷೆಯ ಗದ್ಯದ ಮತ್ತು ಪದ್ಯದ ಅನೇಕ ಪುಸ್ತಕಗಳನ್ನು ಓದಬೇಕಾಗಿತ್ತು... ಆ ಏಳು ವರ್ಷಗಳ ಕಾಲ ಗುಜರಾತಿಯನ್ನೂ, ಗುಜರಾತಿಯ ಮೂಲಕ ಇತರ ವಿಷಯಗಳನ್ನೂ ಕಲಿತಿದ್ದರೆ ನನ್ನ ನೆರೆಯವರಿಗೂ ಆ ತಿಳಿವನ್ನು ಸುಲಭವಾಗಿ ಹಂಚಬಹುದಾಗಿತ್ತು; ಗುಜರಾತಿ ಸಾಹಿತ್ಯವನ್ನೂ ಬೆಳೆಸಬಹುದಾಗಿತ್ತು. ಜನತೆಗೆ ಇನ್ನೂ ಹೆಚ್ಚಿನ ಸೇವೆ ಸಲ್ಲುತ್ತಿತ್ತು.. ಪರಿಸ್ಥಿತಿ ಏನೇ ಇರಲಿ,ಈ ಕೂಡಲೆ ಶಿಕ್ಷಣ ಮಾಧ್ಯಮ ಬದಲಾವಣೆ ಹೊಂದಬೇಕು. ದೇಶಭಾಷೆಗಳಿಗೆ ಯೋಗ್ಯವಾದ ಸ್ಥಾನ ಲಭಿಸಬೇಕು. ಈ ಮಾರ್ಪಾಡಿನಿಂದ ಅಲ್ಪ ಸ್ವಲ್ಪ ಗೊಂದಲ ಕಳವಳ ತಲೆದೋರಿದರೂ ಅವೆಲ್ಲ ತಾತ್ಕಾಲಿಕವಾದುವು. ಆದರೆ ದಿನದಿನಕ್ಕೂ ಆಗುತ್ತಿರುವ ನಷ್ಟ ಒಟ್ಟುಗೂಡಿ ಕೊನೆಗೆ ಸರ್ವನಾಶ ಸಂಭವಿಸುವುದಕ್ಕಿಂತ

ಸ್ವಲ್ಪಕಾಲ ಗೊಂದಲದ ಪರಿಸ್ಥಿತಿ ಸಂಭವಿಸಿದರೂ ಚಿಂತೆಯಿಲ್ಲ... ಈ ಶಿಕ್ಷಣ ಮಾಧ್ಯಮ ಪ್ರಶ್ನೆಯನ್ನು ವಿದ್ಯಾಪ್ರವೀಣರ ಎಂದರೆ. Academicians ಎನ್ನಿಸಿಕೊಳ್ಳುವವರ ತೀರ್ಮಾನಕ್ಕೆ ಬಿಡುವುದು ಸರಿಯಲ್ಲವೆಂದೇ ನನ್ನ ಅಭಿಪ್ರಾಯ. ಹುಡುಗರಿಗೆ ಯಾವ ಭಾಷೆಯ ಮೂಲಕ ಪಾಠ ಹೇಳಿಕೊಡಬೇಕೆಂಬುದನ್ನು ಅವರು ಹೇಗೆ ನಿರ್ಣಯಿಸಿಯಾರು? ಪ್ರತಿಯೊಂದು ಸ್ವತಂತ್ರ ದೇಶದಲ್ಲಿಯೂ ಈ ಪ್ರಶ್ನೆ ಆದಿಯಲ್ಲಿಯೆ ನಿರ್ಧಾರವಾಗುತ್ತದೆ. ಹಾಗೆಯೆ ಯಾವ ವಿಷಯವನ್ನು ಕಲಿಸಬೇಕೆಂಬುದನ್ನೂ ಅವರು ನಿರ್ಧರಿಸಲಾರರು. ಆಯಾ ದೇಶದ ಅರಕೆ ಆವಶ್ಯಕತೆಗಳಿಗನುಗುಣವಾಗಿ ಅದನ್ನು ಗೊತ್ತುಪಡಿಸಬೇಕಾಗಿದೆ. ರಾಷ್ಟ್ರದ ಇಚ್ಛೆಯನ್ನು ಸರಿಯಾದ ರೀತಿಯಲ್ಲಿ ಕಾರ್ಯರೂಪಕ್ಕೆ ತಿರುಗಿಸುವುದಷ್ಟೆ ಅವರ ಕರ್ತವ್ಯ. ಈ ದೇಶ ಸ್ವತಂತ್ರವಾದ ಕೂಡಲೆ ಶಿಕ್ಷಣಮಾಧ್ಯಮದ ಪ್ರಶ್ನೆ ಪ್ರಶ್ನೆಯಾಗುಳಿಯುವುದಿಲ್ಲ..."

ಅಯ್ಯೊ ಪಾಪ, ಅವರು ಎಂತಹ ಅತಿ ಆಶಾವಾದಿ! ದೇಶ ಸ್ವತಂತ್ರವಾದ ಕೂಡಲೆ ಈ ಪ್ರಶ್ನೆ ಪ್ರಶ್ನೆಯಾಗುಳಿಯುವುದಿಲ್ಲ ಎಂದರು, ಸುಮಾರು ಇಪ್ಪತ್ತು ವರ್ಷಗಳ ಹಿಂದೆಯೇ! ದೇಶ ಸ್ವತಂತ್ರವಾಗಿ ಹತ್ತು ವರ್ಷ ಕಳೆದುದಾಗಿದೆ. ಅವರ ಭಾಷಾನುಗುಣ ಪ್ರಾಂತರಚನೆಯ ಬುದ್ಧಿವಾದವನ್ನೆ ತಲೆಕೆಳಗು ಮಾಡಲೆಳಸಿ ಚಿತ್ರವಿಚಿತ್ರವಾಗಿ ವಾದಿಸಿದೆವು ನಾವು. ಆದರೂ ಅವರ ಆಶೀರ್ವಾದದಿಂದ ಅವರು ಹೇಳಿದಂತೆಯೆ ಕಡೆಗೂ ಆಗಿ, ರಾಷ್ಟ್ರಕ್ಷೇಮ ಭದ್ರವಾಯಿತು. ಹಾಗೆಯೆ 'ದೇಶಭಾಷೆಗೆ ಪ್ರಥಮಸ್ಥಾನ ದೊರೆಯಬೇಕು; ದೇಶಭಾಷೆಯೆ ಶಿಕ್ಷಣಮಾಧ್ಯಮವಾಗಬೇಕು' ಎಂದ ಅವರ ಹಿತಬೋಧೆಯನ್ನು ನಮ್ಮಲ್ಲಿ ಕೆಲವರು ಇಂದು ಪ್ರಶ್ನಿಸಿ, ಅಲಕ್ಷಿಸಿ, ಅವರು ಮಹಾತ್ಮರಾದರೂ ವಿದ್ಯಾಭ್ಯಾಸಶಾಸ್ತ್ರಜ್ಞರಲ್ಲದ ಅವರ ಅಭಿಪ್ರಾಯ ಬರಿಯ ಬಾವೋಲ್ಲಾಸವೆ ಹೊರತು ಅನುಸರಣಯೋಗ್ಯವಾಗಲಾರದೆಂದು ವಾದಿಸುತ್ತಿದ್ದಾರೆ. ಭಾಷಾಪ್ರಾಂತ ರಚನೆಯ ವಿಷಯದಲ್ಲಿ ಆದಂತೆಯೆ ಈ ವಿಷಯದಲ್ಲಿಯೂ ಕೊನೆಗೂ ಅವರು ಹಾಕಿರುವ ಗೆರೆಯ ಮೇಲೆಯೆ ನಾವು ನಡೆಯಬೇಕಾಗುತ್ತದೆ, ನಡೆದೂ ನಡೆಯುತ್ತೇವೆ ಎನ್ನುವುದರಲ್ಲಿ ನನಗೆ ಸಂದೇಹವಿಲ್ಲ. ಆದರೆ ಜನತೆ ಬುದ್ಧಿಸೋಮಾರಿಯಾಗಿ ವರ್ತಿಸಿ, ಹತ್ತಿರದಲ್ಲಿರುವ ಮಂಗಳವನ್ನು ದೂರಕ್ಕೆ ತಳ್ಳಬಾರದು. ಕೋಟಿ ಕೋಟಿ ಭಾರತೀಯ ಮಕ್ಕಳ ಮನಶ್ಯಕ್ತಿಯ ವೃಥಾವ್ರಯದಿಂದ ರಾಷ್ಟ್ರಕ್ಕೆ ವರ್ಷ ವರ್ಷವೂ ಒದಗುತ್ತಿರುವ ಅಪಾರ ಧನ ಬುದ್ಧಿ ಧೈರ್ಯ ನಷ್ಟಗಳಿಂದಾಗುವ ಚೈತನ್ಯಹಾನಿಯನ್ನು ತಪ್ಪಿಸಬೇಕೆಂದು ಪ್ರಾರ್ಥಿಸುತ್ತೇನೆ.

ದೇಶಭಾಷೆಗಳ ಪರವಾಗಿ ಗಾಂಧೀಜಿ ಆ ಮಾತುಗಳನ್ನು ಹೇಳಿ ಇಪ್ಪತ್ತು ವರ್ಷಗಳ ಮೇಲಾಯಿತು. ಈ ಇಪ್ಪತ್ತು ಸೇತುವೆಯ ಕೆಳಗೆ ಎಷ್ಟೋ ನೀರು ಹರಿದುಹೋಗಿದೆ. ನಮ್ಮ ದೇಶಭಾಷೆಗಳ ಸ್ಥಿತಿ ಅಂದು ಇದ್ದಂತಿಲ್ಲ. ಬುದ್ಧಿಸಾಹಿತ್ಯ, ಭಾವಸಾಹಿತ್ಯ, ವಿಜ್ಞಾನಸಾಹಿತ್ಯಾದಿ ನಾನಾ ಪ್ರಕಾರಗಳಲ್ಲಿ ಅವು ಅದ್ಭುತವಾಗಿ

ವ್ರಯ = loss, perishing, decay – ಕಿಟ್ಟೆಲ್

ಮುಂದುವರಿದಿವೆ. ಕೇಂದ್ರದ ಸಾಹಿತ್ಯ ಅಕಾಡೆಮಿಯಂತಹ ಅಖಿಲಭಾರತಸಂಸ್ಥೆ ಆ ಪ್ರಗತಿಯನ್ನು ಗುರುತಿಸಿ ಅವುಗಳಿಗೆ ಅನೇಕ ವಿಧವಾಗಿ ಪ್ರೋತ್ಸಾಹ ನೀಡುತ್ತಿದೆ. ಸಾಹಿತ್ಯ ಅಕಾಡೆಮಿ ಪ್ರಕಟಿಸಿರುವ 'ಸಮಕಾಲೀನ ಭಾರತೀಯ ಸಾಹಿತ್ಯ' (Contemporary Indian Literature) ಎಂಬ ಪುಸ್ತಕವನ್ನು ಸಾಕ್ಷಿಯಾಗಿಟ್ಟುಕೊಳ್ಳುವುದಾದರೆ ಎಲ್ಲ ದೇಶಭಾಷೆಗಳೂ, ಗ್ರಂಥಸಂಖ್ಯೆ ಪುಸ್ತಕಗಾತ್ರಗಳಲ್ಲಿ ಅಲ್ಲದಿದ್ದರೂ, ವೈವಿಧ್ಯದಲ್ಲಿ ಔನ್ನತ್ಯದಲ್ಲಿ ವಿಸ್ತಾರದಲ್ಲಿ ಗುಣದಲ್ಲಿ ಪ್ರಪಂಚದ ಇತರ ಯಾವ ಭಾಷೆಗಳಿಗೂ ಬಿಟ್ಟು ಕೊಡದ ರೀತಿಯಲ್ಲಿ, ಅವುಗಳಿಗೆ ಹೆಗಲೆಣೆಯಾಗಿ ಹೊಯ್ ಕಯ್ಯಾಗಿ ಮುಂದುವರಿಯುತ್ತಿವೆ ಎಂದು ಹೆಮ್ಮೆಯಿಂದ ಹೇಳಬಹುದಾಗಿದೆ.

ಇತರ ದೇಶಭಾಷಾಸಾಹಿತ್ಯಗಳ ನೇರ ಪರಿಚಯವಿಲ್ಲದ ನಾನು ಇದುವರೆಗೆ ಆಂಗ್ಲಭಾಷೆ ಆಕ್ರಮಿಸಿದ್ದ ಸಿಂಹಾಸನಕ್ಕೆ ಏರಲು ಅವು ಎಷ್ಟರಮಟ್ಟಿಗೆ ಅರ್ಹವಾಗಿವೆ ಅಥವಾ ಸಿದ್ಧವಾಗಿವೆ ಎಂಬುದನ್ನು ಆಯಾ ಭಾಷೆಗಳವರು ಹೇಳುವಷ್ಟು ಧೈರ್ಯವಾಗಿ ವಾಸ್ತವಿಕಜ್ಞಾನದಿಂದ ಹೇಳಲಾರೆ. ಆ ಸಮರ್ಥನೆ ಏನಿದ್ದರೂ ಅದು ಅವರಿಗೆ ಸೇರಿದ್ದು. ಆದರೆ ಕನ್ನಡದ ಸಾಮರ್ಥ್ಯದ ಮತ್ತು ಅರ್ಹತೆಯ ವಿಚಾರವಾಗಿ ನಾನು ಸಿದ್ಧವಾಣಿಯಿಂದ ನುಡಿಯಬಲ್ಲೆನೆಂಬ ಧೈರ್ಯವಿದೆ. ಅಧಿಕಾರವೂ ಇದೆ ಎಂಬುದನ್ನು ತಾವು ನನ್ನನ್ನು ಈ ಅಧ್ಯಕ್ಷಸ್ಥಾನಕ್ಕೆ ಆರಿಸಿರುವುದರಿಂದಲೆ ಸದ್ಯಕ್ಕಾದರೂ ಸಿದ್ಧಾಂತಪಡಿಸಿದ್ದೀರಿ.

ಲೋಕಸಾಹಿತ್ಯಸೃಷ್ಟಿಯಲ್ಲಿಯೂ ಭಾವಸಾಹಿತ್ಯಸೃಷ್ಟಿಯಲ್ಲಿಯೂ ಕನ್ನಡ ಇಪ್ಪತ್ತು ಮೂವತ್ತು ವರ್ಷಗಳಿಂದ ಯಾವ ಭಾಷೆಯಾದರೂ ಹೆಮ್ಮೆಪಟ್ಟುಕೊಳ್ಳುವಷ್ಟರ ಮಟ್ಟಿಗೆ ಬೆಳೆದಿದೆ ಮತ್ತು ಬೆಳೆಯುತ್ತಿದೆ. ನಮ್ಮಲ್ಲಿ ಕೆಲವರು ಈ ವಿಚಾರವಾಗಿ ಮಾತನಾಡುವಾಗ ನೀಚೋಹಂ ಬುದ್ಧಿಯಿಂದಲೊ ದಾಸೋಹಂ ಭಾವದಿಂದಲೊ ಅಥವಾ ನೈಚ್ಯಾನುಸಂಧಾನವೆ ವಿನಯದ ಲಕ್ಷಣ ಎಂದು ಭ್ರಮಿಸಿಯೊ ತುಂಬ ಸಂಕೋಚದಿಂದ, ದೈನ್ಯದಿಂದ, ದರಿದ್ರರು ಶ್ರೀಮಂತರೆದುರು ಕುಗ್ಗಿ ಕುಸಿದು ವರ್ತಿಸುವಂತೆ ಮಾತನಾಡುತ್ತಾರೆ. ಅತಿಯಾದ ಆತ್ಮಶ್ಲಾಘನೆ ಸುಸಂಸ್ಕೃತಿಗೆ ಸಲ್ಲದೆಂದು ಒಪ್ಪಿಕೊಂಡರೂ ಆತ್ಮಾವಹೇಳನ ಆತ್ಮ ತಿರಸ್ಕಾರ ಆತ್ಮತೇಜೋವಧೆಗಳು ಅದಕ್ಕಿಂತಲೂ ಹೆಚ್ಚಿನ ಅಪಾಯಕ್ಕೆ ನಮ್ಮನ್ನು ಗುರಿಮಾಡುತ್ತವೆ. ಪ್ರವರ್ಧಮಾನ ಜೀವಕ್ಕೆ ಆತ್ಮಪ್ರತ್ಯಯ ಅತ್ಯಂತಾವಶ್ಯಕ.

ನಮ್ಮ ವಾಙ್ಮಯ ಕಾವ್ಯ, ಮಹಾಕಾವ್ಯ, ಕವನ, ಕಥೆ, ಕಾದಂಬರಿ, ಸಣ್ಣ ಕಥೆ, ವಿಮರ್ಶೆ, ಪ್ರಬಂಧ, ಜೀವನಚರಿತ್ರೆ, ನಾಟಕ ಮೊದಲಾದ ಭಾವೋಪಯೋಗಿಯಾದ ಶಕ್ತಿಸಾಹಿತ್ಯ ಪ್ರಕಾರಗಳಲ್ಲಿ ಉತ್ತಮ ಫಲಗಳನ್ನು ಸಾಧಿಸಿದೆ ಎಂಬಷ್ಟರಿಂದಲೆ ಆಗಿದ್ದರೆ ನಮ್ಮ ಆಶಾವಾದ ಅತಿರೇಕದ ದೋಷಕ್ಕೆ ಪಕ್ಕಾಗುತ್ತಿತ್ತು. ಏಕೆಂದರೆ ರಸಾನುಭವ ನಮಗೆ ಎಷ್ಟೇ ಪ್ರಿಯವಾಗಿದ್ದರೂ ಆಧುನಿಕ ಜೀವನದ ಲೌಕಿಕ ಬಹುಮುಖತೆಯಲ್ಲಿ ನಾವು ಇತರರೊಡನೆ ಸ್ಪರ್ಧಿಸಿ ಮುಂದುವರಿಯಬೇಕಾದರೆ ಶಕ್ತಿಸಾಹಿತ್ಯಕ್ಕಿಂತಲೂ

ಸಮಧಿಕ ಪ್ರಮಾಣದಲ್ಲಿ ಲೋಕೋಪಯೋಗಿಯಾದ ಜ್ಞಾನಸಾಹಿತ್ಯ ಬೆಳೆಯಬೇಕು. ವಿಜ್ಞಾನ, ಯಂತ್ರವಿದ್ಯೆ, ರಾಜ್ಯಶಾಸ್ತ್ರ, ಅರ್ಥಶಾಸ್ತ್ರ ಇತ್ಯಾದಿಗಳಿಗೆ ಸಂಬಂಧಿಸಿದಂತೆ ಸಂಶೋಧನಾತ್ಮಕವಾದ ಪ್ರೌಢಗ್ರಂಥಗಳೂ ಪ್ರಸಾರಾತ್ಮಕವಾದ ಜನಪ್ರಿಯ ಪುಸ್ತಕಗಳೂ ಹೇರಳವಾಗಿ ರಚಿತವಾಗಬೇಕು. ಈ ಕೆಲಸವೂ ಕಳೆದ ಕೆಲವು ವರ್ಷಗಳಲ್ಲಿ ತಕ್ಕಮಟ್ಟಿಗೆ ನಡೆದಿದೆ. ಹುಟ್ಟನ್ನು ದೋಣಿಯೊಳಗಿಟ್ಟುಕೊಂಡು ಕೃತಕೃತ್ಯರಾದೆವೆಂದು ನೆಮ್ಮದಿಯಾಗಿ ಕುಳಿತುಕೊಳ್ಳುವಷ್ಟರಮಟ್ಟಿಗೆ ಎಂದು ಯಾರೂ ಹೇಳುವುದಿಲ್ಲ. ಮಾಡಿರುವ ಕೆಲಸಕ್ಕೆ ಸಾವಿರ ಮಡಿಯಿದೆ ಮಾಡಬೇಕಾಗಿರುವ ಕೆಲಸ. ಆದರೆ ನಾವು ಸಾಧಿಸಿರುವ ಕಾರ್ಯದಿಂದ ಒಂದು ವಿಷಯ ಗೊತ್ತಾಗುತ್ತದೆ; ನಮ್ಮ ಭಾಷೆ ವೈಜ್ಞಾನಿಕವಾದ ಯಾವ ಹಳೆಯ ಅಥವಾ ಹೊಸ ವಿಷಯವನ್ನೇ ಆಗಲಿ, ಶಾಸ್ತ್ರೀಯವಾದ ಎಂತಹ ಗಹನ ಅಥವಾ ಸೂಕ್ಷ್ಮ ವಿಚಾರವನ್ನೆ ಆಗಲಿ ಅಭಿವ್ಯಕ್ತಪಡಿಸಲು ಸಂಪೂರ್ಣ ಸಮರ್ಥವಾಗಿದೆ ಎಂದು.

ವಿದ್ಯಾರ್ಥಿಗಳಾಗುವ ನಮ್ಮ ಮಕ್ಕಳ ಮೇಲೆ ನಮಗೇನಾದರೂ ಕರುಣೆಯಿದ್ದರೆ ಮೊದಲು ಅವರ ಎದೆಯ ಮೇಲೆ ಪರಕೀಯರು ಹೇರಿಟ್ಟು ಹೋಗಿರುವ ಹೆಣಭಾರದ ಹೊರಭಾಷೆಯ ಚಪ್ಪಡಿಯನ್ನು ಕಿತ್ತೊಗೆಯಬೇಕು. ಅವರ ವ್ಯಕ್ತಿತ್ವದ ಸರ್ವಾಂಗೀಣ ಅಭಿವೃದ್ಧಿಗೆ ಬೇಕಾಗುವ ಭಾವತುಷ್ಟಿ ಮತ್ತು ಬುದ್ಧಿಪುಷ್ಟಿಗಳೆರಡನ್ನೂ ಕನ್ನಡದ ತಾಯ್ಮೊಲೆಯ ಮೂಲಕವೆ ಅವರು ಹೀರಿಕೊಳ್ಳುವಂತೆ ಅವಕಾಶ ಕಲ್ಪಿಸಬೇಕು. ಅವರಬೆಳವಣಿಗೆಗೆ ಬೇಕಾಗಿರುವ ಒಂದು ಬಟ್ಟಲು ಹಾಲನ್ನು ಮಣಭಾರದ ಇಂಗ್ಲಿಷ್ ಕಡಾಯಿಯಲ್ಲಿ ಹಾಕಿಕೊಟ್ಟರೆ ಅವರು ಕುಡಿಯುವುದೆಂತು? ಆ ಕಡಾಯಿ ಚಿನ್ನದ್ದೆ ಆಗಿರಬಹುದು; ಮುತ್ತು ರತ್ನದ ಕೆತ್ತನೆಗಳಿಂದ ಶೋಭಿಸಿ ಲೋಕಪ್ರಸಿದ್ಧವೆ ಆಗಿರಬಹುದು; ಜಗತ್ತಿನ ಮಾರುಕಟ್ಟೆಯಲ್ಲಿ ಅದಕ್ಕೆ ಅನರ್ಘ್ಯವಾದ ಬೆಲೆಯೂ ಇರಬಹುದು. ಹಾಗೆಂದು ಪುಷ್ಟಿ ಬೇಕಾಗಿರುವ ನಮ್ಮ ದುರ್ಬಲ ಮಕ್ಕಳನ್ನು ಆ ವ್ಯಾಮೋಹಪೂತನಿಗೆ ಬಲಿಗೊಡುವುದೇನು? ಅನೇಕ ಮಕ್ಕಳು ಆ ಹೊಂಗಡಾಯಿಯ ಮೆಯ್ಯನ್ನೆ ತಬ್ಬಿ, ನೆಕ್ಕಿ, ಚಿನ್ನದ ಬಣ್ಣದ ಕಣ್ಣಿನ ತಳುಕನ್ನೆ ನಾಲಗೆಯ ತುಷ್ಟಿಯನ್ನಾಗಿ ಭ್ರಮಿಸಿ ವಂಚಿತರಾಗುತ್ತಾರೆ. ಅವರಲ್ಲಿ ಸ್ವಲ್ಪ ಹೆಚ್ಚು ಬಲಿಷ್ಠರಾದವರು, ಅಥವಾ ಬದುಕಬೇಕು ಬಾಳಬೇಕು ಎಂಬ ಹೇರಾಸೆಯ ಕೆಚ್ಚಿಗೆ ತುತ್ತಾದವರು, ಹುಟ್ಟಿನಿಂದ ಬಲಿಷ್ಠರಲ್ಲದಿದ್ದರೂ ಆ ಕಡಾಯಿಯನ್ನು ಎತ್ತಲಾರದೆ ಎತ್ತಿ ಮೈಮೇಲೆ ಹಾಕಿಕೊಂಡು ಅದರಡಿ ಸಿಕ್ಕಿ ಜಜ್ಜಿಹೋಗುತ್ತಾರೆ. ಆಗಲೂ ಹಿರಿಯರಾದ ನಮ್ಮಲ್ಲಿ ಕೆಲವರು 'ಸತ್ತರೂ ಚಿಂತೆಯಿಲ್ಲ' 'ಚಿನ್ನದ ಅಡಿಯಲ್ಲಿ ಸಿಕ್ಕಿ ಸಾಯುವುದು ಪುಣ್ಯವಲ್ಲವೆ?' ಎಂದು ಸಮಾಧಾನ ತಂದುಕೊಳ್ಳುತ್ತಾರೆ! ಮತ್ತೆ ಕೆಲವು ಮಕ್ಕಳು ತಂದೆ ತಾಯಿಯರು ಬೆನ್ನಿಗೆ ಕೈಕೊಟ್ಟು ನೂಕುವುದರಿಂಲೊ, ಅವರು ಬೆರಳೆತ್ತಿ ತೋರುವ ದಿಗಂತದಲ್ಲಿ ಹೊಳೆಯುವ ಐ.ಎ.ಎಸ್. ಮೊದಲಾದ ಭವಿಷ್ಯ ವೈಭವದ ಆಕರ್ಷಣೆಯಿಂದಲೊ, ಅಥವಾ ಶ್ರೀಮಂತರಾಗಿದ್ದರೆ ಒದಗುವ ಪ್ರೈವೇಟ್ ಟ್ಯೂಷನ್ ಆದಿ ಪ್ರಚಂಡ ಪ್ರೋತ್ಸಾಹದಿಂದಲೊ ಪ್ರೇರಿತರಾಗಿ ಕಡಾಯಿಯನ್ನೆತ್ತಿ, ಅದರ ತಳದ ಹಾಲನ್ನು

ಬಾಯಿಗೆ ಹೊಯ್ದುಕೊಳ್ಳುವ ಸಾಹಸದಲ್ಲಿಯೆ ಇದ್ದ ಶಕ್ತಿಯನ್ನೆಲ್ಲ ಕಳೆದುಕೊಂಡು, ಹಾಲಿನ ಅರ್ಧವನ್ನು ಮೈಮೇಲೆಯೆ ಚೆಲ್ಲಿಕೊಂಡು, ಉಳಿದರ್ಧದಿಂದಲೆ ತಾವೂ ತೃಪ್ತರಾಗಿ, ತಂದೆ ತಾಯಿಯರ ನಿರಾಧಾರ ತೃಪ್ತಿಗೂ ಕಾರಣರಾಗುತ್ತಾರೆ. ಎಲ್ಲಿಯೋ ಲಕ್ಷಕ್ಕೆ ಒಂದು ಮಗು ಶ್ರೀಕೃಷ್ಣನಂತೆ ಹಾಲಿನೊಡನೆ ಪೂತನಿಯ ಜೀವವನ್ನೆ ಹೀರಿ ಬೆಳೆದು, ಎಲ್ಲರ ಕಣ್ಣಿಗೂ ಬರುವಂತಾದಾಗ, ನಾವು ಶತಮಾನಕಾಲದಲ್ಲಿ ಇಡಿಯ ಭರತಖಂಡದ ವಿಸ್ತಾರದಲ್ಲಿ ಕೋಟಿಕೋಟಿ ಜನಸಂಖ್ಯೆಯಲ್ಲಿ ಅಂತಹ ನಾಲ್ಕಾರು ವಿಭೂತಿಪುರುಷರನ್ನೂ ಪ್ರತಿಭಾಶಾಲಿಗಳನ್ನೂ ತೋರಿ, ನಮ್ಮ ಇಂಗ್ಲಿಷ್ ಮಾಧ್ಯಮದ ಸಾರ್ಥಕತೆಯನ್ನು ಸಿದ್ಧಾಂತಪಡಿಸಲು ಪ್ರಯತ್ನಿಸುತ್ತಿದ್ದೇವೆ. ಇದು ಮೋಹಾಂಧವೊ ಅವಿವೇಕವೊ ಅಜ್ಞಾನವೋ ದೇವರೆ ಬಲ್ಲ! ಅಥವಾ 'ಕಮ್ಯುನಿಸಂ'ಗೆ ಈ ಸಮಸ್ಯೆಯ ಪರಿಹಾರ ಮೀಸಲಾಗಿದೆ ಎಂದು ಕಣಿ ಹೇಳುವವರ ಆಶೆಯ ಮಾತಿನಲ್ಲಿ ಹುರುಳಿದಯೊ ಏನೊ ಯಾರಿಗೆ ಗೊತ್ತು!

ಭಾರತದ ವಿವಿಧ ಪ್ರದೇಶಗಳಲ್ಲಿ ಪ್ರತಿವರ್ಷವೂ ಪ್ರೌಢ ಪರೀಕ್ಷೆಗಳಿಗೆ ಕೂರುವ ಲಕ್ಷಾಂತರ ವಿದ್ಯಾರ್ಥಿಗಳಲ್ಲಿ ನೂರಕ್ಕೆ ಐದರಿಂದ ಹತ್ತರವರೆಗೆ ತೇರ್ಗಡೆಹೊಂದುವುದೂ ಕಷ್ಟವಾಗಿದೆ. ಹೀಗೆ ಅನುತ್ತೀರ್ಣರಾಗುವುದಕ್ಕೆ ಹಲವಾರು ಕಾರಣಗಳಿರಬಹುದು . ಆದರೆ ಬಹುಮುಖ್ಯವಾದ ಮತ್ತು ಮೂಲಭೂತವಾಗಿರುವ ಕಾರಣ ಶಿಕ್ಷಣಮಾಧ್ಯಮದಿಂದ ಸಂಭವಿಸುತ್ತಿದೆ. ಆಂಗ್ಲ ಭಾಷೆಯಲ್ಲಿ ಸ್ವತಂತ್ರವಾಗಿ ಸರಿಯಾಗಿ ಎರಡು ವಾಕ್ಯ ಬರೆಯಲಾರದ ವಿದ್ಯಾರ್ಥಿ ಅರ್ಥಶಾಸ್ತ್ರ ರಾಜ್ಯಶಾಸ್ತ್ರ ತತ್ತ್ವಶಾಸ್ತ್ರ ಭೌತಶಾಸ್ತ್ರಾದಿ ಪ್ರಗಲ್ಭ ವಿಷಯಗಳನ್ನು ಕುರಿತು ಪ್ರೌಢಪ್ರಬಂಧಗಳನ್ನು ಬರೆಯುವುದಾದರೂ ಹೇಗೆ? ಅವನಿಗೆ ಒಂದು ವೇಳೆ ವಿಷಯ ಗೊತ್ತಿದ್ದರೂ ತನಗೆ ಬರದ ಭಾಷೆಯಲ್ಲಿ ಅದನ್ನು ಅಭಿವ್ಯಕ್ತಗೊಳಿಸಲಾರದೆ ತಪ್ಪುತಪ್ಪಾಗಿ ಬರೆಯುತ್ತಾನೆ. ಇಲ್ಲವೆ, ಲಾಟರಿಯಲ್ಲಿ ಗೆದ್ದ ಹಾಗೆ, ಕೆಲವು ಪ್ರಶ್ನೆಗಳಿಗೆ ಉತ್ತರ ಬರೆಸಿ, ಅದನ್ನು ಉರುಹೊಡೆದು, ಅದೃಷ್ಟವಶಾತ್ ಅವೇ ಪ್ರಶ್ನೆಗಳು ಅಥವಾ ಅವುಗಳಿಗೆ ದೂರಸಂಬಂಧಿಗಳಾದರೂ ಸರಿಯೆ, ಬಂದಿದ್ದರೆ ಬಾಯಿಪಾಠ ಮಾಡಿದುದನ್ನೆಲ್ಲ  ಉತ್ತರ ಪತ್ರಿಕೆಗೆ ಇಳಿಸಿ, ಗೆದ್ದೆ ಎಂದುಕೊಳ್ಳುತ್ತಾನೆ. ಒಮ್ಮೊಮ್ಮೆ ತೇರ್ಗಡೆಹೊಂದುವುದಲ್ಲದೆ ಪ್ರಥಮವರ್ಗವನ್ನೂ ಗಳಿಸುವುದುಂಟು! ಅಂದರೆ ವಾಸ್ತವವಾಗಿ ನಮ್ಮ ಪರೀಕ್ಷೆ ಜ್ಞಾನದ ಪರೀಕ್ಷೆಯಲ್ಲ; ಜ್ಞಾಪಕಶಕ್ತಿಯ ಮತ್ತು ಅದೃಷ್ಟದ ಪರೀಕ್ಷೆಯಾಗಿದೆ.

ಹಿಂದೆ ಹತ್ತು ಮಕ್ಕಳು ಓದುತ್ತಿದ್ದಲ್ಲಿ ಈಗ ಸಾವಿರ ಓದುತ್ತಾರೆ. ಹಿಂದೆ ಮುಂದುವರಿದ ನಾಗರಿಕತೆಯ ಕೇಂದ್ರಗಳಾಗಿದ್ದ ನಗರಗಳಲ್ಲಿ ಮಾತ್ರ ವಿದ್ಯಾಸಂಸ್ಥೆಗಳಿರುತ್ತಿದ್ದರೆ ಈಗ ಜಿಲ್ಲೆ ಜಿಲ್ಲೆಯ ತಾಲೂಕುಗಳಲ್ಲಿ ಹೋಬಳಿಗಳಲ್ಲಿ ಹಳ್ಳಿಗಳಲ್ಲಿ ಹೈಸ್ಕೂಲುಗಳೂ ಕಡೆಗೆ ಕಾಲೇಜುಗಳೂ ಹುಟ್ಟಿಕೊಂಡಿವೆ. ಹಿಂದೆ ಅನುವಂಶಿಕವಾಗಿ ವಿದ್ಯಾರ್ಜನೆ ಮಾಡುತ್ತಿದ್ದ ಉತ್ತಮ ವರ್ಗಕ್ಕೆ ಸೇರಿದ ಮನೆತನಗಳ ಮಕ್ಕಳು ಮಾತ್ರ ಶಾಲೆಗಳಿಗೆ ಬರುತ್ತಿದ್ದರೆ ಈಗ ಹಳ್ಳಿಯ ಮಕ್ಕಳು ಬಡವರ ಮಕ್ಕಳು ರೈತರ ಮಕ್ಕಳು ಕೂಲಿಗಳ ಮಕ್ಕಳಾದಿಯಾಗಿ ಎಲ್ಲ ವರ್ಗದಿಂದಲೂ ಮಕ್ಕಳು

ಓದುವುದಕ್ಕೆ ಬರುತ್ತಾರೆ. ಇಂಗ್ಲಿಷ್ ಸ್ವಲ್ಪ ಮಟ್ಟಿಗೆ ಪ್ರಚಲಿತವಾಗಿರುವ ಪಟ್ಟಣಗಳಲ್ಲಿಯೆ ಶ್ರೀಮಂತರು ಮತ್ತು ಹೆಚ್ಚು ಸಂಬಳ ಬರುವ ಅಧಿಕಾರವರ್ಗದವರಂತೆ ಪ್ರೈವೇಟ್ ಟ್ಯೂಷನ್ ನ ಕವಾಯಿತು ಕೊಡಲಾರದ ಮಧ್ಯಮವರ್ಗದ ಮತ್ತು ಜನಸಾಮಾನ್ಯರ ಮಕ್ಕಳು ಆ ಭಾಷೆಯನ್ನು ಬರೆಹದ ಮಾಧ್ಯಮವಾಗಿ ಉಪಯೋಗಿಸುವಷ್ಟು ಕಲಿಯಲು ಸಾಧ್ಯವಾಗಿಲ್ಲ ಎಂದ ಮೇಲೆ ಇನ್ನು ಆ ಸೌಕರ್ಯಗಳಾವುವೂ ಇಲ್ಲದೆ ಅದಕ್ಕೆ ವಿರುದ್ಧವಾದ ವಾತಾವರಣವೂ ಇರುವ ಗ್ರಾಮಾಂತರದ ಮಕ್ಕಳ ಆಂಗ್ಲಭಾಷಾಜ್ಞಾನ ಯಾವ ಮಟ್ಟದ್ದಾದೀತು? ಅವರು ಇಂಗ್ಲಿಷ್ ಮಾಧ್ಯಮದಲ್ಲಿ ಏನು ವಿದ್ಯೆ ಗಳಿಸಿಯಾರು? ಯಾವ ಪರೀಕ್ಷೆಗಳಲ್ಲಿ ತೇರ್ಗಡೆ ಹೊಂದಿಯಾರು? ಸಾವಿರಾರು ಮಕ್ಕಳು ಒಂದು ಎರಡು ಮೂರು ನಾಲ್ಕು ವರ್ಷ ಪರೀಕ್ಷೆಗಳಲ್ಲಿ ಸೋತು ನಿರಾಶರಾಗಿ, ನಿಷ್ಪ್ರಯೋಜಕರೂ ಸಮಾಜಕಂಟಕರೂ ಆಗಿ ಮುಯ್ಯಿ ತೀರಿಸಿಕೊಳ್ಳುತ್ತಾರೆ. ಈ ಕೃತಕ ಪರಿಸ್ಥಿತಿಯಿಂದ ನಮ್ಮ ಮಕ್ಕಳನ್ನು ಎಷ್ಟು ಬೇಗ ಪಾರುಮಾಡಿದರೆ ಅಷ್ಟು ಕ್ಷೇಮವಾಗುತ್ತದೆ ದೇಶಕ್ಕೆ.

ವಿದ್ಯಾಭ್ಯಾಸದ ಉನ್ನತ ಮಟ್ಟದಲ್ಲಿ ಬೋಧಕ ಭಾಷೆಯಾಗುವಷ್ಟು ಸಿದ್ಧವಾಗಿದೆಯೆ ನಮ್ಮ ಭಾಷೆ? ವಿಜ್ಞಾನ ಶಾಸ್ತ್ರಗಳಲ್ಲಿ ಉಪಯೋಗಿಸುವ ಪರಿಭಾಷೆಯ ಪದಗಳಿಗೆ ಸಮಾನಪದಗಳಿವೆಯೇ? ಕನ್ನಡ ಮಾಧ್ಯಮದಲ್ಲಿ ಪಾಠ ಹೇಳುವ ಅಧ್ಯಾಪಕರಿದ್ದಾರೆಯೆ? ಸ್ನಾತಕೋತ್ತರ ವಿಶೇಷ ವ್ಯಾಸಂಗಕ್ಕೂ ಸಂಶೋಧನೆಗೂ ಇಂಗ್ಲಿಷ್ ಭಾಷೆಯಿಲ್ಲದೆ ಸಾಧ್ಯವಾಗುತ್ತದೆಯೇ? ಉನ್ನತ ಸಂಶೋಧನೆಯ ಮಟ್ಟದಲ್ಲಿ ಭಾರತೀಯ ವಿವಿಧ ವಿಶ್ವವಿದ್ಯಾನಿಲಯಗಳ ನಡುವೆ ಪರಸ್ಪರ ಸಂಪರ್ಕಕ್ಕಾಗಿ ಇಂಗ್ಲಿಷಲ್ಲದೆ ಇನ್ನಾವುದರಲ್ಲಿ ವ್ಯವಹರಿಸಲು ಸಾಧ್ಯ? ಬೇರೆ ಬೇರೆ ಪ್ರದೇಶಗಳ ವಿಶ್ವವಿದ್ಯಾನಿಲಯಗಳು ಉನ್ನತ ಜ್ಞಾನ ಪ್ರಸಾರ ಮತ್ತು ವಿನಿಮಯಕ್ಕಾಗಿ ಪ್ರಾಧ್ಯಾಪಕರನ್ನು ವಿನಿಮಯ ಮಾಡಿಕೊಳ್ಳುವುದಕ್ಕಾಗಿ ಯಾವುದಾದರೊಂದು ಸಾಮಾನ್ಯ ಭಾಷೆ ಬೇಡವೆ? ಜ್ಞಾನ ವಿಜ್ಞಾನ ವಿಷಯಗಳಲ್ಲಿ ಅತ್ಯಂತ ಶ್ರೀಮಂತವಾಗಿರುವ ಇಂಗ್ಲಿಷನ್ನು ಬಿಟ್ಟರೆ ನಮಗೆ ನಷ್ಟವಲ್ಲವೆ? ನಮ್ಮ ಮಕ್ಕಳು ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ರಂಗಗಳಲ್ಲಿ ಪ್ರಕಾಶಕ್ಕೆ ಬರಲು ಅನುಕೂಲವಾಗುವಂತೆ ಅವರಿಗೆ ಇಂಗ್ಲಿಷ್ ಭಾಷೆಯನ್ನು ಕಲಿಸದಿದ್ದರೆ ಅನ್ಯಾಯ ಮಾಡಿದಂತಾಗುವುದಿಲ್ಲವೆ?

ಈ ಪ್ರಶ್ನೆಗಳೆಲ್ಲ ಒಂದೆ ಜಾತಿಯವೂ ಅಲ್ಲ., ಒಂದೇ ಭೂಮಿಕೆಗೆ ಸೇರಿದವೂ ಅಲ್ಲ. ಇಲ್ಲಿ ಯಾವುದಾದರೂ ಒಂದು ಪ್ರಶ್ನೆಗೆ ನಾವು ಕೊಡಬಹುದಾದ ಉತ್ತರವನ್ನು ಎಲ್ಲ ಸಮಸ್ಯೆಗಳಿಗೂ ಅನ್ವಯಿಸಲಾಗುವುದಿಲ್ಲ. ಉದಾಹರಣೆಗೆ: ಅಂತರರಾಷ್ಟ್ರೀಯ ರಂಗಗಳಲ್ಲಿ ಪ್ರಕಾಶಕ್ಕೆ ಬರಲು ಇಂಗ್ಲಿಷ್ ಅತ್ಯಾವಶ್ಯಕ ಎಂದು ನಾವು ಒಪ್ಪಿಕೊಂಡ ಮಾತ್ರಕ್ಕೆ ಇಂಗ್ಲಿಷ್ ಆವಶ್ಯಕ, ಆದ್ದರಿಂದ ಎಲ್ಲರೂ ಇಂಗ್ಲಿಷ್ ಕಲಿಯಬೇಕು, ಆದ್ದರಿಂದಲೆ ಇಂಗ್ಲಿಷನ್ನು ಕಡ್ಡಾಯವಾಗಿ ಎಲ್ಲರ ತಲೆಯ ಮೇಲೂ ಹೇರಬೇಕು, ಎಂದು ಊಹಿಸುವುದು ಅವಿವೇಕದ ಪರಮಾವಧಿಯಾದೀತು. ಒಂದು ದೇಶ ತನ್ನ ಮಕ್ಕಳಿಗೆ ಭಾಷೆಗಳನ್ನು ಕಲಿಸುವಾಗ ಯಾವ ಯಾವ ಭಾಷೆ

ಯಾರು ಯಾರಿಗೆ ಎಷ್ಟೆಷ್ಟು ಪ್ರಮಾಣದಲ್ಲಿ ಏತಕ್ಕಾಗಿ ಬೇಕಾಗುತ್ತದೆ ಎಂಬುದನ್ನು ಗೊತ್ತುಮಾಡಿಕೊಳ್ಳಬೇಕು. ಇಂಗ್ಲಿಷ್ ಆಗಲಿ ಹಿಂದಿಯಾಗಲಿ ನಮ್ಮ ಮಕ್ಕಳಿಗೆ ಬೇಕು ಎಂದ ಮಾತ್ರಕ್ಕೆ ಯಾರಿಗೆ? ಎಷ್ಟು? ಏಕೆ? ಎಂಬುದಾವುದನ್ನೂ ಪರಿಗಣಿಸದೆ ವರ್ತಿಸಿದರೆ, ತೇನ್ ಸಿಂಗ್ ಹಿಮಾಲಯದ ಶಿಖರೋನ್ನತಕ್ಕೆ ಏರಿ, ತಾವೂ ಪ್ರಖ್ಯಾತರಾಗಿ ಭಾರತಕ್ಕೂ ಗೌರವ ತಂದರು; ನಮ್ಮ ಮಕ್ಕಳಿಗೂ ಅಂತಹ ಸದವಕಾಶ ಕಲ್ಪಿಸಿ ಕೊಡಬೇಕು; ಆದ್ದರಿಂದ ಎಲ್ಲ ಮಕ್ಕಳಿಗೂ ಪರ್ವತಾರೋಹಣವನ್ನು ಕಡ್ಡಾಯದ ಶಿಕ್ಷಣ ವಿಷಯವನ್ನಾಗಿ ಕಲಿಸಬೇಕು ಎಂದಷ್ಟೇ ಮೂರ್ಖತನವಾಗುತ್ತದೆ. ಎಲ್ಲ ಮಕ್ಕಳ ಸಾಮರ್ಥ್ಯವೂ ಸಮಾನವಾದುದಲ್ಲ. ಎಲ್ಲ ಮಕ್ಕಳ ಜೀವಿತೋದ್ದೇಶವೂ ಒಂದೆ ತೆರನಾದುದಲ್ಲ. ಸಂಸ್ಕಾರದಲ್ಲಿ ಶಕ್ತಿಯಲ್ಲಿ ಜೀವಿತೋದ್ದೇಶದಲ್ಲಿ ರುಚಿ ಅಭಿರುಚಿಗಳಲ್ಲಿ ದೇಹಬಲ ಮೇಧಾಶಕ್ತಿಗಳಲ್ಲಿ ಅನುಕೂಲ ಅವಕಾಶಗಳಲ್ಲಿ ಮಕ್ಕಳು ಭಿನ್ನ ಭಿನ್ನ ವರ್ಗಸನ್ನಿವೇಶಗಳಿಗೆ ಸೇರಿದವರಾಗಿರುತ್ತಾರೆ. ಜೊತೆಗೆ ಸಮಾಜದ ಮತ್ತು ದೇಶದ ಆವಶ್ಯಕತೆಗಳ ದೃಷ್ಟಿಯಿಂದಲೂ ಆರ್ಥಿಕ ಶಕ್ತಿಯ ದೃಷ್ಟಿಯಿಂದಲೂ ಸಾಧನಸಿದ್ಧತೆಗಳ ದೃಷ್ಟಿಯಿಂದಲೂ ನಮ್ಮಲ್ಲಿರುವ ಅಲ್ಪ ಸ್ವಲ್ಪದರಿಂದಲೆ ಪರಮಾವಧಿ ಪ್ರಯೋಜನವನ್ನು ಸಾಧಿಸುವ ಯೋಜನೆಯನ್ನು ಕೈಕೊಳ್ಳಬೇಕಾಗಿದೆ.

ಕರ್ಣಾಟಕದಲ್ಲಿ ಎರಡು ವಿಶ್ವವಿದ್ಯಾನಿಲಯಗಳಿವೆ.* ಎರಡೂ ಬೋಧನೆ ಮತ್ತು ಸಂಶೋಧನೆಗಳ ಜೊತೆಗೆ ವಿದ್ಯಾಪ್ರಸಾರವನ್ನು ತಮ್ಮ ಕರ್ತವ್ಯಾಂಗವನ್ನಾಗಿ ಭಾವಿಸಿ ಪ್ರಚಾರೋಪನ್ಯಾಸಗಳನ್ನು ಕೈಕೊಂಡು ಜನಸಾಮಾನ್ಯರಲ್ಲಿ ಜ್ಞಾನ ಮತ್ತು ವಿಜ್ಞಾನವಿಚಾರಗಳನ್ನು ಪ್ರಸಾರ ಮಾಡುತ್ತಿವೆ.ವಿಷಯ ಯಾವುದೆ ಆಗಲಿ, ಪ್ರಾಚೀನವೆ ಆಗಲಿ ನವೀನವೆ ಆಗಲಿ, ಸಾಹಿತ್ಯವೆ ಆಗಲಿ ವಿಜ್ಞಾನವೆ ಆಗಲಿ, ಪಂಪಕಾಳಿದಾಸರೆ ಆಗಲಿ ಅಣುಶಕ್ತಿ ರೇಡಾರ್ ಗಳೆ ಆಗಲಿ, ಅದನ್ನು ಸಮಗ್ರವಾಗಿ ಸಮರ್ಪಕವಾಗಿ ವಿದ್ವತ್ ಪೂರ್ವಕವಾಗಿ ಸಾಮಾನ್ಯರೂ ಗ್ರಹಿಸುವಂತೆ ವಿಶೇಷಜ್ಞರೂ ಒಪ್ಪಿಕೊಳ್ಳುವಂತೆ ಭಾಷಣ ಮಾಡಬಹುದೆಂಬುದನ್ನು ಅಧ್ಯಾಪಕವರ್ಗದವರು ಕಳೆದ ಇಪ್ಪತ್ತೈದು ಮೂವತ್ತು ವರ್ಷಗಳಿಂದ ತೋರಿಸಿಕೊಟ್ಟಿದ್ದಾರೆ ಮತ್ತು ತೋರಿಸುತ್ತಿದ್ದಾರೆ. ಸ್ವತಂತ್ರ ವ್ಯಕ್ತಿಗಳೂ ವಿಶ್ವವಿದ್ಯಾನಿಲಯ ಸಂಸ್ಥೆಗಳೂ ಪ್ರಕಟಿಸುವ ಕಿರುಹೊತ್ತಿಗೆಗಳನ್ನೂ ಹೆಬ್ಬೊತ್ತಗೆಗಳನ್ನೂ ಸಮೀಕ್ಷಿಸಿದರೆ ಕನ್ನಡ ಭಾಷೆಗೆ ಇಂಗ್ಲಿಷ್ ಅಥವಾ ಜರ್ಮನ್ ಅಥವಾ ರಷ್ಯನ್ ಭಾಷೆಗಳು ಏನೇನು ವೈಜ್ಞಾನಿಕ ವಿಷಯಗಳನ್ನು ಹೇಳಬಲ್ಲವೊ ಅದೆಲ್ಲವನ್ನೂ ಅಷ್ಟೆ ಸ್ಪಷ್ಟವಾಗಿ ನಿಷ್ಕೃಷ್ಟವಾಗಿ ಹೇಳುವ ಶಕ್ತಿ ಸಿದ್ಧವಾಗಿದೆ ಎಂಬುದು ಎಂತಹ ಸಂದೇಹಗ್ರಸ್ತನಿಗೂ ವಿದಿತವಾಗುತ್ತದೆ. ಉದಾಹರಣೆಗಾಗಿ ಮಾತ್ರ ಕೆಲವನ್ನಿಲ್ಲಿ ಹೆಸರಿಸುತ್ತೇನೆ, ಏನು ಕೆಲಸ ನಡೆದಿದೆ, ಎಷ್ಟು ವಿವಿಧ ರೂಪದಲ್ಲಿ, ಎಂಬುದಕ್ಕೆ ದಿಕ್ ಸೂಚಿಯಾಗಲಿ ಎಂದು: ಆರೋಗ್ಯ, ಅದರ ಜ್ಞಾನ ಮತ್ತು ಸಾಧನ; ಜೀವ ವಿಜ್ಞಾನ; ಪ್ರಾಣಿಶಾಸ್ತ್ರ; ಜಗತ್ತುಗಳ ಹುಟ್ಟು ಸಾವು; ಶಕ್ತಿ; ಪದಾರ್ಥ ವಿಜ್ಞಾನ; ಭೌತಶಾಸ್ತ್ರ;

* ೧. ಮೈಸೂರು ವಿಶ್ವವಿದ್ಯಾಲಯ, ಮೈಸೂರು
೨. ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ರಸಾಯನ ಶಾಸ್ತ್ರ; ಪಂಚಾಂಗಗಳು ಮತ್ತು ಖಗೋಳ ಶಾಸ್ತ್ರ; ಬೀಜಗಣಿತ; ಬೀಜ ರೇಖಾಗಣಿತ; ಕಲನಶಾಸ್ತ್ರ; ಭೂವಿಜ್ಞಾನ; ಗಣಿತ ಶಾಸ್ತ್ರದ ಚರಿತ್ರೆ; ವಿಜ್ಞಾನಮಂಜರಿ; ಗೃಹ ವಿಜ್ಞಾನ; ನಕ್ಷತ್ರ ದರ್ಶನ;ಗಾಳಿಯಲ್ಲಿನ ಅಗೋಚರ ಶತ್ರುಗಳು; ಖಗೋಳ ಶಾಸ್ತ್ರ ಪ್ರವೇಶ; ವಿದ್ಯುಚ್ಛಕ್ತಿಯ ವೈಭವ; ಬೆಳಕು; ಶಬ್ದ ಪ್ರಪಂಚ; ಕೃತಕ ರೇಷ್ಮೆ; ಕಣ್ಣು ಮತ್ತು ಅದರ ರಕ್ಷಣೆ; ರಕ್ತ; ಕೀಟಗಳು; ಕಲ್ಲಿದ್ದಲು; ಅಲೆಗಳು; ಬಟ್ಟೆಗಳ ವೈಜ್ಞಾನಿಕ ಪರೀಕ್ಷೆ; ವಿಶ್ವವಿಸರಣ; ವ್ಯವಸಾಯದ ಮಣ್ಣುಗಳು; ಶಿಕ್ಷಣ ತತ್ತ್ವದರ್ಶನ; ಹೆರಿಗೆ ಮತ್ತು ಶಿಶುಪೋಷಣೆ; ಗ್ರಾಮ ನೈರ್ಮಲ್ಯ; ವಿದ್ಯುಚ್ಛಕ್ತಿಯ ಉಪಯೋಗ; ರೇಡಾರ್; ಪರಮಾಣು ಶಕ್ತಿ; ಲೋಹವಿದ್ಯೆ; ಖಗೋಲ ವಿಜ್ಞಾನ; ಜೀವದ ಉತ್ಪತ್ತಿ ಮತ್ತು ಪರಿವರ್ತನೆ; ವಿಜ್ಞಾನ; ಹಣ ಪ್ರಪಂಚ; ಇತ್ಯಾದಿ ಇತ್ಯಾದಿ.

ನಮ್ಮ ಭಾಷೆ ವಿದ್ಯಾಭ್ಯಾಸದ ಅತ್ಯುನ್ನತ ಮಟ್ಟಗಳಲ್ಲಿಯೂ ಶಿಕ್ಷಣ ಮಾಧ್ಯಮವಾಗಲು ಸಮರ್ಥವಾಗಿದೆ ಎನ್ನುವುದರ ಬಗೆಗೆ ಯಾರೂ ಸಂದೇಹ ಪಡಬೇಕಾಗಿಲ್ಲ.

ಇಲ್ಲಿಯವರೆಗೆ ಪ್ರಕಟವಾಗಿರುವ ಪುಸ್ತಕಗಳಿಂದ ಮತ್ತು ಉಪನ್ಯಾಸಗಳಿಂದ ಇನ್ನೊಂದು ವಿಷಯ ಸ್ಪಷ್ಟವಾಗುತ್ತದೆ. ಅದು ಪರಿಭಾಷೆಯ ವಿಚಾರ. ಊರಿಗೊಂದು ಪ್ರದೇಶಕ್ಕೊಂದು ಕಾಲಕಾಲಕ್ಕೊಂದು ಪರಿಭಾಷೆ ಇರುವುದಾದರೆ ವಿಜ್ಞಾನವಾಗಲಿ ಯಾವ ಶಾಸ್ತ್ರವಾಗಲಿ ಅಸ್ತಿತ್ವಕ್ಕೆ ಬರುವುದು ಅಸಂಭವ; ಪ್ರಗತಿಹೊಂದುವುದಂತೂ ಸಾಧ್ಯವೇ ಇಲ್ಲ. ಆಕ್ಸಿಜನ್ ಎಂಬ ಅನಿಲ ಧಾರವಾಡದಲ್ಲಿ 'ಪ್ರಾಣವಾಯು'ವಾಗಿ, ಮೈಸೂರಿನಲ್ಲಿ 'ಆಮ್ಲಜನಕ'ವಾಗಿ, ಇನ್ನೊಂದೂರಿನಲ್ಲಿ 'ಅಗ್ನಿವಾತ'ವಾಗಿ ಪರಿಣಮಿಸಿದರೆ ಶಾಸ್ತ್ರಾಧ್ಯಯನದ ಗತಿ ಏನಾಗಬೇಕು? ಅಂತಹ ಅವಿವೇಕಕ್ಕೆ ಕರ್ಣಾಟಕವಾಗಲಿ ಭಾರತದ ಯಾವ ಪ್ರಾಂತವಾಗಲಿ ಹೋಗದಿರುವುದು ನಮ್ಮ ವಿದ್ಯಾರ್ಜನೆಯ ಹಿತದೃಷ್ಟಿಯಿಂದ ಅತ್ಯಂತಾವಶ್ಯಕ. ಅಂತರರಾಷ್ಟ್ರೀಯವಾದ ವೈಜ್ಞಾನಿಕ ಪರಿಭಾಷೆಯನ್ನೆಲ್ಲ ಭಾಷಾಂತರಿಸುವುದು ವ್ಯರ್ಥಸಾಹಸ. ಅದರಿಂದ ಯಾವ ಪ್ರಯೋಜನವೂ ಇಲ್ಲ; ಗೊಂದಲಕ್ಕೆ ಮಾತ್ರ ಅವಕಾಶವಾಗುತ್ತದೆ. ಆದ್ದರಿಂದ ಎಲ್ಲ ಕಡೆಗೂ ಸರ್ವ ಸಮಾನವಾಗಿ ರೂಢಿಯಲ್ಲಿರಬಹುದಾದ ಎಲ್ಲಿಯೊ ಕೆಲವು ಪದಗಳ ಹೊರತು ಉಳಿದುದೆಲ್ಲವನ್ನೂ ಅಂತರರಾಷ್ಟ್ರೀಯವಾದ ಪರಿಭಾಷೆಯಿಂದಲೆ ವ್ಯವಹರಿಸುವುದು ಉಚಿತ. ಅಲ್ಲದೆ ಯಂತ್ರಗಳಿಗೆ ಸಂಬಂಧಪಟ್ಟ ಹಾಗೆ ಇರುವ ಸಾವಿರಾರು ಪರಿಭಾಷೆಯ ಪದಗಳು ಈಗಾಗಲೆ ಅವುಗಳ ಅಂತರರಾಷ್ಟ್ರೀಯ ರೂಪದಲ್ಲಿಯೆ ಭಾರತೀಯವಾಗಿ ಬಿಟ್ಟಿವೆ. ಒಂದು ಮೋಟಾರು ಕಾರನ್ನು ರಿಪೇರಿಮಾಡುವ ಮೆಕ್ಯಾನಿಕ್ ಅಥವಾ ನಡೆಸುವ ಡ್ರೈವರ್ ಅಥವಾ ಶುಚಿಗೊಳಿಸುವ ಕ್ಲೀನರ್, ಅವನಿಗೆ ಇಂಗ್ಲಿಷ್ ಭಾಷೆಯ ಗಂಧವೆ ಇಲ್ಲದಿದ್ದರೂ, ಯಂತ್ರದ ಭಾಗೋಪಭಾಗಗಳ ಸಾವಿರಾರು ಹೆಸರುಗಳನ್ನು, ಭಾಷಾಂತರದ ಗೊಡವೆಗೆ ಹೋಗದೆ, ಕಡೆಗೆ ಆ ಪದಗಳು ಅನ್ಯ ಭಾಷೆಯವೆಂಬುದನ್ನು ಅರಿಯದೆ ಅಥವಾ ಗಮನಿಸದೆ, ತನ್ನ ಕೆಲಸವನ್ನು ಸಮರ್ಪಕವಾಗಿ ನೆರವೇರಿಸಿಕೊಂಡು

ಹೋಗುತ್ತಿಲ್ಲವೆ? ಷೇಕ್ಸ್ ಪಿಯರ್ ಮಿಲ್ಟನ್, ಕಾರ್ಲೈಲಾದಿಗಳನ್ನೆ ಓದಿ, ಇಂಗ್ಲಿಷ್ ತಿಳಿದು, ಪರೀಕ್ಷೆಗಳಲ್ಲಿ ಇಂಗ್ಲಿಷಿನಲ್ಲಿಯೆ ಪ್ರಬಂಧಗಳನ್ನು ಬರೆದು ಪಾಸುಮಾಡಿ, ಆ ಅರ್ಹತೆಯ ತರುವಾಯವೆ ಎಂಜಿನಿಯರಿಂಗ್ ಕಾಲೇಜುಗಳಿಗೆ ಸೇರಿ ಬಿ.ಇ. ಪಾಸು ಮಾಡಿ, ತರುವಾಯ ಕಾರು, ಲಾರಿ, ಟ್ರಾಕ್ಟರ್ ಇತ್ಯಾದಿಗಳನ್ನು ನಡೆಸಬೇಕು ಎಂದು ನಾವು ತೀರ್ಮಾನಿಸಿದ್ದರೆ ಇಷ್ಟು ಹೊತ್ತಿಗೆ ನಮ್ಮ ದೇಶದಲ್ಲಿ ಒಂದು ನೂರಿನ್ನೂರೊ, ಹೆಚ್ಚು ಎಂದರೆ ಒಂದು ಐನೂರೊ ಅಂತಹ ಯಂತ್ರಗಳನ್ನು ಕಾಣುತ್ತಿದ್ದೆವಷ್ಟೆ! ಅಂತೆಯೆ ವಿವಿಧ ವಿಜ್ಞಾನಶಾಸ್ತ್ರಗಳಲ್ಲಿರುವ ಸಾವಿರಾರು ಪಾರಿಭಾಷಿಕ ಪದಗಳನ್ನು ನಾವು ಹಾಗೆ ಹಾಗೆಯೆ ನಮ್ಮ ನಮ್ಮ ಲಿಪಿಗಳಲ್ಲಿ ಬರೆದು ವ್ಯವಹರಿಸಿದ್ದೇ ಆದರೆ ವಿಜ್ಞಾನ ವಿದ್ಯೆಗೂ, ಕಾರ್ಯರಂಗದಲ್ಲಿ ಅದರ ಪ್ರಯೋಗಕ್ಕೂ, ಸೌಲಭ್ಯವುಂಟಾಗುತ್ತದೆ. ಕೇಂದ್ರಸರ್ಕಾರದ ವಿದ್ಯಾ ಇಲಾಖೆ ಹೊರಡಿಸಿರುವ ವಿವಿಧ ಕ್ಷೇತ್ರಗಳಿಗೆ ಸಂಬಂಧಿಸಿದ ಪಾರಿಭಾಷಿಕ ಪದಗಳ ಪಟ್ಟಿಕೆಗಳಲ್ಲಿಯೂ ಈ ವಿವೇಕದ ಮಾರ್ಗವನ್ನು ಬಹುಮಟ್ಟಿಗೆ ಅನುಸರಿಸಿದ್ದಾರೆ. ನಮ್ಮ ವಿಶ್ವವಿದ್ಯಾನಿಲಯ ಪ್ರಕಟಿಸುತ್ತಿರುವ ಪಠ್ಯಪುಸ್ತಕಗಳಲ್ಲಿಯೂ ಈ ತತ್ತ್ವವೆ ಅಂಗೀಕೃತವಾಗಿದೆ. ಆದ್ದರಿಂದ ವೈಜ್ಞಾನಿಕ ಪರಿಭಾಷೆಗೆ ನಮ್ಮ ಭಾಷೆಗಳಲ್ಲಿ ಪದಗಳಿಲ್ಲ ಎಂಬ ಕೊರತೆ ಉದ್ಭವಿಸುವುದೆ ಇಲ್ಲ. ತನ್ನ ಭಾಷೆಯಲ್ಲಿಯೆ ವಿಜ್ಞಾನಾಧ್ಯಯನ ಮಾಡಿ ಹಿಂದಿ ಅಥವಾ ಇಂಗ್ಲಿಷನ್ನು ಸ್ವಲ್ಪಮಟ್ಟಿಗೆ ಕಲಿತ ಯಾವನಿಗಾದರೂ ಸಮಸ್ಯೆ ಭಾರತೀಯವಾಗಿಯೂ ಅಂತರರಾಷ್ಟ್ರೀಯವಾಗಿಯೂ ಪರಿಹಾರ ಹೊಂದುತ್ತದೆ.

ಸಾಹಿತ್ಯ ಪರಿಷತ್ತಿನ ವಾರ್ಷಿಕ ಸಮ್ಮೇಲನದ ಅಧ್ಯಕ್ಷ ಪೀಠದಿಂದ ಈ ವಿಷಯವಾಗಿ ಇಷ್ಟು ದೀರ್ಘವಾಗಿ ಸಮಾಲೋಚನೆ ಮಾಡಿದುದರ ಅರ್ಥ ಏನು? ಉದ್ದೇಶವೇನು? ಸಾಹಿತ್ಯದ ವಿಚಾರವಾಗಿಯೂ ಕವಿಕಾವ್ಯವನ್ನು ಕುರಿತೊ, ಪ್ರತಿಭೆ ರಸಾಸ್ವಾದಾದಿ ಅಲೌಕಿಕಾನುಭವಗಳನ್ನೊ ಸಾಹಿತ್ಯ ವಿಮರ್ಶೆಯ ಅಥವಾ ಕಾವ್ಯಮೀಮಾಂಸೆಯ ತತ್ತ್ವಗಳನ್ನೊ ಸ್ವಾರಸ್ಯವಾಗಿ ಪ್ರಸ್ತಾವಿಸುತ್ತಾ ಹೋಗದೆ ಭಾಷೆ, ಶಿಕ್ಷಣ ಮಾಧ್ಯಮ, ಪಾರಿಭಾಷಿಕ ಪದ ಸಮಸ್ಯೆ ಇತ್ಯಾದಿ ಶಿಕ್ಷಣಶಾಸ್ತ್ರ ಸಮ್ಮೇಲನೋಚಿತ ಎನಿಸಬಹುದಾದ ವಿಷಯಗಳ ಪ್ರವೇಶಕ್ಕೆ ಇಲ್ಲಿ ಅಗತ್ಯವೇನಿತ್ತು?

ಯಾರ ಮನಸ್ಸಿನಲ್ಲಾದರೂ ಅಂತಹ ಪ್ರಶ್ನಾರ್ಥಕಚಿಹ್ನೆ ಹೆಡೆಯೆತ್ತಿದ್ದರೆ ಅಥವಾ ಆಶ್ಚರ್ಯಚಿಹ್ನೆ ನಿಮಿರಿ ನಿಂತಿದ್ದರೆ ಅದಕ್ಕೆ ಉತ್ತರ ಇಷ್ಟೆ! ಕೇರಳದಲ್ಲಿ ಮಲೆಯಾಳಿಯಂತೆ ಆಂಧ್ರದಲ್ಲಿ ತೆಲುಗಿನಂತೆ ತಮಿಳುನಾಡಿನಲ್ಲಿ ತಮಿಳಿನಂತೆ ಕರ್ಣಾಟಕದಲ್ಲಿ ಕನ್ನಡ ಪ್ರಥಮಭಾಷೆಯಾಗದಿದ್ದರೆ, ಕನ್ನಡವೆ ಶಿಕ್ಷಣಮಾಧ್ಯಮವಾಗದಿದ್ದರೆ ಕನ್ನಡಿಗರ ಬಾಳು ಕುಂಠಿತವಾಗುತ್ತದೆ; ಕನ್ನಡಿಗರ ಏಳಿಗೆಗೆ ಧಕ್ಕೆ ಬರುತ್ತದೆ; ಕರ್ಣಾಟಕದ ರಚನೆ ಅರ್ಥವಿಹೀನವಾಗುತ್ತದೆ; ನಮ್ಮ ತಾಯಿಗೆ ನಮ್ಮ ಮನೆಯಲ್ಲಿಯೆ ವರಾಂಡದಲ್ಲಿ ಮಲಗಿಕೊಳ್ಳಲು, ತಾಣವೂ ಅಲ್ಲ, ನಿಲ್ದಾಣ ಕೊಡಬೇಕಾಗುತ್ತದೆ; ನಮ್ಮ ಜನಸಾಮಾನ್ಯರ ಸರ್ವಾಂಗೀಣವಾದ ನ್ಯಾಯಬದ್ಧವಾದ ವಿಕಾಸಕ್ಕೆ ಅಡಚಣೆ ಒದಗುತ್ತದೆ; ನಮ್ಮ ಸಾಹಿತ್ಯವೂ ಸಮೃದ್ಧವಾಗಿ ಪುಷ್ಟವಾಗಿ ಬಹುಮುಖವಾಗಿ ಸರ್ವತೋಮುಖವಾಗಿ ಬದುಕಿನ ಮತ್ತು ವಿದ್ಯೆಯ ಸರ್ವಶಾಖೆಗಳಲ್ಲಿಯೂ ಚೈತನ್ಯಮಯವಾದ ಜನಜೀವನದ

ನೆಲದಿಂದ ಹೊಮ್ಮದೆ ಪ್ರದರ್ಶನಕ್ಕಾಗಿ ತೂಗುಹಾಕಿರುವ ಕುಂಡಗಳಲ್ಲಿ ಬೆಳೆಯುವ ಲಘುಮನೋರಂಜನೆಯ ವಸ್ತುವಾಗುತ್ತದೆ. ಅಂತಹ ದುಃಖದ ಅಮಂಗಳದ ದುರಂತದ ಪರಿಸ್ಥಿತಿಗೆ ಕಾರಣವಾಗುವವರೆಲ್ಲರೂ, ವ್ಯಕ್ತಿಗಳಾಗಲಿ ಸಂಸ್ಥೆಗಳಾಗಲಿ, ಚಿರಂತನವಾಗಿ ಶಾಪಗ್ರಸ್ತರಾಗುತ್ತಾರೆ: ಕವಿ ಪ್ರವಾದಿಯೂ ಆಗುತ್ತಾನೆ.

ಆದರೆ ಹಾಗಾಗುವುದಿಲ್ಲ. ನಮ್ಮ ಜನ ಹಾಗೆ ಆಗಗೊಡಲು ಬಿಡುವುದಿಲ್ಲ. ಒಂದು ವೇಳೆ ಕನ್ನಡಿಗರ ದೌರ್ಬಲ್ಯೋಪಮವಾದ ಅತ್ಯೌದಾರ್ಯದಿಂದಲೊ ಅತಿದಾಕ್ಷಿಣ್ಯದಿಂದಲೊ ಅವರು ಔದಾಸೀನ್ಯವನ್ನವಲಂಬಿಸಿದರೆ ತೆಲುಗು ತಮಿಳು ಮಲೆಯಾಳಿ ಮರಾಠಿ ಬಂಗಾಳಿ ಮೊದಲಾದ ಭಾರತೀಯ ಭಾಷೆಗಳ ನಮ್ಮ ನೆರೆಯ ಸಹೋದರರು ತಮ್ಮ ತಮ್ಮ ಭಾಷೆಗಳಿಗೆ ತಮ್ಮ ತಮ್ಮ ನಾಡುಗಳಲ್ಲಿ ಸರಿಯಾದ ಸ್ಥಾನಮಾನಗಳನ್ನು ಕಲ್ಪಿಸುವುದರಿಂದಲೆ ನಮ್ಮನ್ನು ಸರಿಯಾದ ದಾರಿಗೆ ಅನಿವಾರ್ಯವಾಗಿಯೆ ತಳ್ಳುವುದರಲ್ಲಿ ಸಂದೇಹವಿಲ್ಲ. ಆದ್ದರಿಂದ ನಾನು ಸಂಪೂರ್ಣ ಆಶಾವಾದಿಯಾಗಿದ್ದೇನೆ.

ಕನ್ನಡನಾಡಿನಲ್ಲಿ ಕನ್ನಡ ಆಡಳಿತದ ಭಾಷೆಯಾಗುತ್ತದೆ. ಕನ್ನಡನಾಡಿನ ಶಿಕ್ಷಣಕ್ರಮದಲ್ಲಿ ಕನ್ನಡ ಪ್ರಥಮಭಾಷೆಯಾಗುತ್ತದೆ. ವಿದ್ಯಾಭ್ಯಾಸದ ಎಲ್ಲ ಮಟ್ಟಗಳಲ್ಲಿಯೂ ಕನ್ನಡ ಶಿಕ್ಷಣ ಮಾಧ್ಯಮವಾಗುತ್ತದೆ. ಪ್ರದೇಶ ಪ್ರದೇಶದ ಮತ್ತು ಪ್ರದೇಶ ಕೇಂದ್ರದ ವ್ಯವಹಾರ ಮಾತ್ರಕ್ಕಾಗಿ ಹಿಂದಿ ಉಳಿಯುತ್ತದೆ. ಹೊರ ಪ್ರಪಂಚದೊಡನೆಯೂ ಮತ್ತು ದಿನ ದಿನವೂ ವಿಸ್ತರಿಸುತ್ತಿರುವ ಜಗತ್ತಿನ ಯಂತ್ರವಿದ್ಯೆ ಜ್ಞಾನವಿಜ್ಞಾನಗಳೊಡನೆಯೂ ಸಂಬಂಧ ಸಂಪರ್ಕಗಳನ್ನಿಟ್ಟುಕೊಳ್ಳುವ ಸಲುವಾಗಿ, ಇಂಗ್ಲಿಷ್, ಪ್ರಪಂಚದ ಇತರ ಪ್ರಸಿದ್ಧ ಭಾಷೆ ಗಳಂತೆಯೆ, ಐಚ್ಛಿಕಭಾಷೆಯಾಗಿ, ಮತ್ತು ಕೆಲವರ ಭಾಗಕ್ಕೆ ವಿಶೇಷ ಸಾಹಿತ್ಯಾಧ್ಯಯನ ವಿಷಯವಾಗಿಯೂ, ಮುಂದುವರಿಯುತ್ತದೆ.

ಕನ್ನಡ ಜನರ ಆಶೋತ್ತರಕ್ಕೂ ಮತ್ತು ಕರ್ಣಾಟಕಸಂಸ್ಕೃತಿಗೂ ಪ್ರತಿನಿಧಿಯಾದ ಕನ್ನಡ ಸಾಹಿತ್ಯಪರಿಷತ್ತು ಸದ್ಯಕ್ಕೆ ನಮ್ಮ ಅಭ್ಯುದಯಕ್ಕೆ ಆವಶ್ಯಕವಾದ ಭೌಗೋಳಿಕ ಚೌಕಟ್ಟನ್ನು ಸಾಧಿಸಿದೆ.ನವಮ್ಮೆಸೂರು ರಾಜ್ಯದ ಆ ಚೌಕಟ್ಟಿನ ಮೇಲೆ ನಮ್ಮ ಸಂಸ್ಕೃತಿಯ ಆದರ್ಶದ 'ಕರ್ಣಾಟಕ'ವನ್ನು ಕಟ್ಟಬೇಕಾಗಿದೆ. ಇದುವರೆಗೆ ಪರಿಷತ್ತಿನ ವಾರ್ಷಿಕ ಸಮ್ಮೇಲನ ಸ್ವಲ್ಪ ಹೆಚ್ಚು ಕಡಮೆ ಉತ್ಸವರೂಪದ ಪ್ರಚ್ಛನ್ನ ರಾಜಕೀಯ ಚಳುವಳಿಯಾಗಿಯೆ ಸಾಗುತ್ತಿತ್ತು. ಇನ್ನು ಮೇಲೆ ಈ ವಾರ್ಷಿಕ ಸಮ್ಮೇಲನ ಉತ್ಸವರೂಪಮಾತ್ರವಾಗಿ ಪರ್ಯವಸಾನ ಹೊಂದುವುದರಲ್ಲಿ ಔಚಿತ್ಯವಿಲ್ಲ. ಇದು ಸಾಹಿತ್ಯಕ್ಷೇತ್ರದ ಶ್ರಮ ಜೀವಿಗಳ ಮತ್ತು ಕಲಾಸಾಧಕರ ವಾರ್ಷಿಕ ಸಾಹಸಸಿದ್ಧಿಗಳ ಪರೀಕ್ಷೆಯ ನಿಕಷ ವೇದಿಕೆಯಾಗಿ ಪರಿಣಮಿಸಬೇಕು. ನಮ್ಮ ನೆರೆಯ ಸೋದರ ಭಾಷಾಸಾಹಿತ್ಯಗಳೊಡನೆ ಹೆಚ್ಚು ಸಂಪರ್ಕ ಬೆಳೆಸಲು ಪರಸ್ಪರ ಹೃದಯ ಪರಿಚಯದ ಮತ್ತು ಮೈತ್ರಿಸಾಧನೆಯ ರಂಗವಾಗಿ ಪರಿವರ್ತಿತವಾಗಬೇಕು. ಅಖಿಲ ಭಾರತೀಯವಾದ ಯಾವ ಮಹೋದ್ದೇಶದಿಂದ ಸಾಹಿತ್ಯ ಅಕಾಡೆಮಿ ಪ್ರೇರಿತವಾಗಿ ವಿವಿಧ ಕಾರ್ಯಗಳಲ್ಲಿ ಪ್ರವೃತ್ತವಾಗಿದೆಯೊ ಅದರ

ಪ್ರಾದೇಶಿಕ ಪ್ರತಿನಿಧಿಯಾಗಬೇಕು. ಕರ್ಣಾಟಕದ ವಿವಿಧ ಸಂಸ್ಥೆಗಳಲ್ಲಿ ವಿವಿಧ ಸಂಘಗಳಲ್ಲಿ ವಿವಿಧ ವ್ಯಕ್ತಿಗಳಲ್ಲಿ ರೂಪುಗೊಳ್ಳುತ್ತಿರುವ ಮತ್ತು ಅಭಿವ್ಯಕ್ತವಾಗುತ್ತಿರುವ ಪುರೋಗಾಮಿಗಳಾದ ಹೃದಯದ ಮತ್ತು ಬುದ್ಧಿಯ ಶಕ್ತಿಗಳನ್ನೆಲ್ಲಾ ಕ್ರೋಢೀಕರಿಸಿ, ಅವುಗಳನ್ನು ತಾತ್ಕಾಲಿಕತೆಯ, ವಿಫಲತೆಯ, ಅಲ್ಪಮನೋರಂಜನೆಯ, ವಿಕೃತ ಕಲ್ಪನೆಯ, ಶೀಘ್ರಕೀರ್ತಿಯ ಅಲ್ಪಪ್ರಯೋಜನದ ವ್ಯರ್ಥಸಾಹಸೋದ್ಯಮದಿಂದ ವಿಮುಖವನ್ನಾಗಿ ಮಾಡಿ, ರಕ್ಷಿಸಿ, ಮಹೋದ್ದೇಶದ ಹಾಗೂ ಚಿರಂತನ ಪ್ರಯೋಜನದ ಕಡೆಗೆ ತಿರುಗಿಸಿ ಶಿಷ್ಟಸಂಕಲ್ಪನಿಷ್ಠವನ್ನಾಗಿ ಮಾಡಬೇಕು.

ಈ ಮೂವತ್ತು ನಾಲ್ವತ್ತು ವರ್ಷಗಳಲ್ಲಿ ಕನ್ನಡ ಸಾಹಿತ್ಯ ಸಾಧಿಸಿರುವ ಸಂಪತ್ತು, ಪರಿಷತ್ತು ಸಕಾರಣವಾಗಿ ನಿಸ್ಸಂಕೋಚವಾಗಿ ಹೆಮ್ಮೆಪಟ್ಟುಕೊಳ್ಳುವಷ್ಟು ವೈಭವಪೂರ್ಣವಾಗಿದೆ, ವೈವಿಧ್ಯಪೂರ್ಣವಾಗಿದೆ, ಶ್ರೀಮಂತವಾಗಿದೆ. ಲೋಕಸಾಹಿತ್ಯದ ವಿಚಾರವಾಗಿ  ಹಿಂದೆ ಹೇಳಿದುದಕ್ಕಿಂತಲೂ ನೂರುಮಡಿ ಹೆಚ್ಚಾಗಿ ಹೇಳಬಹುದು ಭಾವಸಾಹಿತ್ಯದ ವಿಚಾರವಾಗಿ. ಉದ್ಧಾರಕ್ಕೆ ಎಲ್ಲೆ ಇದೆಯೆ? ಮಹಚ್ಚೇತನದ ಅಭೀಪ್ಸೆ ನಿಶ್ಶಿಖರವಾದುದಲ್ಲವೆ? "ಉತ್ಸರ್ಪಿಣೀ ಖಲು ಮಹಾತಾಂ ಪ್ರಾರ್ಥನಾ!" ಉದ್ಧಾರದ ಕೊನೆ ಮುಟ್ಟಿದೆವು ಎಂದುಕೊಳ್ಳುವುದೆ ಪತನಕ್ಕೆ ಮೊದಲ ಹೆಜ್ಜೆಯಾದೀತು! ಆದ್ದರಿಂದ ನಮ್ಮ ಉದ್ಧಾರದ ವಿಷಯದಲ್ಲಿ ಸ್ವಲ್ಪ ಅತೃಪ್ತಿಯಿರಬೇಕಾದ್ದು ಪ್ರಗತಿಗೆ ಆವಶ್ಯಕ. ಆದರೆ, ಆ ಅತೃಪ್ತಿ ಆತ್ಮಧಿಕ್ಕಾರದ ಮಟ್ಟಕ್ಕೇರಿ, ಸಾಧಿಸಿರುವ ಕಾರ್ಯದ ಅವಹೇಳನದ ರೂಪಕ್ಕೂ ತಿರುಗಿ, ದೋಷೈಕದೃಷ್ಟಿಯಾಗಿ, ಉತ್ತಮಾಂಶವನ್ನೆಲ್ಲ ಅಸೂಯಾಜನ್ಯವಾದ ನಿಂದಾಗ್ನಿಯಲ್ಲಿ ಹೋಮಮಾಡುವಂತಾದರೆ ಅಂತಹ ಅತೃಪ್ತಿಯನ್ನು ಮನೋವಿಕಾರಸಂಭೂತವಾದ ಒಂದು ರೋಗವನ್ನಾಗಿ ಭಾವಿಸಬೇಕಾಗುತ್ತದೆ. ಅಂತಹ ರೋಗದಿಂದ ವಿಮುಕ್ತರಾಗಿ ಪೂರ್ವಗ್ರಹದೂರವಾದ ಅವಿಕಾರಬುದ್ಧಿಯಿಂದಲೂ ಅನೇಕ ಸಾಹಿತ್ಯಾಧ್ಯಯನದಿಂದ ಸಿದ್ಧವಾದ ನಿಷ್ಪಕ್ಷಪಾತ ವಿಮರ್ಶಾದೃಷ್ಟಿಯಿಂದಲೂ ಸಮೀಕ್ಷಿಸಿದರೆ ಕನ್ನಡ ಸಾಹಿತ್ಯ ಈ ಮೂವತ್ತು ನಾಲ್ವತ್ತು ವರ್ಷಗಳಲ್ಲಿ ಅದ್ಭುತವನ್ನೆ ಸಾಧಿಸಿದೆ ಎಂದು ಹೇಳಬೇಕಾಗುತ್ತದೆ.

ಬ್ರಿಟಿಷರ ರಾಜಕೀಯ ಅಧಿಕಾರದೊಡನೆ ಅವರ ಭಾಷಾಪ್ರಚಾರವಾಯಿತು. ಅದರ ಪರಿಣಾಮವಾಗಿ ಇಂಗ್ಲಿಷ್ ಸಾಹಿತ್ಯದ ಪ್ರಭಾವ ಅಖಿಲ ಭಾರತೀಯ ಜೀವನದ ಮೇಲೆ ತನ್ನ ಮುದ್ರೆಯೊತ್ತಿತು. ಇಂಗ್ಲಿಷ್ ಭಾಷೆಯ ಗವಾಕ್ಷದಿಂದ ಪ್ರಪಂಚದ ಇತರ ದೇಶಗಳ ಸಂಸ್ಕೃತಿ ಸಾಹಿತ್ಯಗಳೂ ಬೆಳಕು ಬೀರಿ ನಮ್ಮನ್ನು ಆಕರ್ಷಿಸಿದುವು. ಸರಕಾರದ ಕಡೆಯಿಂದ ಪ್ರೋತ್ಸಾಹವಿರದಿದ್ದರೂ, ಇಂಗ್ಲಿಷಿನ ಮೋಹಕ್ಕೆ ವಶರಾಗಿ ಪ್ರತಿಷ್ಠಾವಂತರಾದವರಿಂದ ತಿರಸ್ಕೃತವಾಗಿದ್ದರೂ ದೇಶಭಾಷೆಗಳು ಅಲ್ಲಲ್ಲಿ ಸಾಹಸದಿಂದ ತಲೆಯೆತ್ತಲು ಪ್ರಯತ್ನಿಸಿದುವು. ಆ ಪ್ರಯತ್ನವೂ ಇಂಗ್ಲಿಷ್ ಕಲಿತ ಕೆಲವರಿಂದಲೆ ಬಹುಮಟ್ಟಿಗೆ ಆರಂಭವಾಯಿತೆನ್ನುವುದೂ ಕೃತಜ್ಞತೆಗೆ ಅರ್ಹವಾದ

ನಿಶ್ಶಿಖರ = ಕೊನೆಯಿಲ್ಲದ, ತುದಿಯಿಲ್ಲದ

ಸಂಗತಿ. ಆಂಗ್ಲೇಯ ಸಾಹಿತ್ಯದ ವೈಭವಕ್ಕೂ ವೈವಿಧ್ಯಕ್ಕೂ ಪ್ರತಿಷ್ಠೆಗೂ ಮಾರುಹೋದ ದೇಶಭಾಷೆಗಳು ಅದನ್ನು ಅನುಕರಿಸಿಯೂ ಅನುಸರಿಸಿಯೂ ಬೆಳೆಯತೊಡಗಿದುವು. ಕೊನೆಕೊನೆಗೆ, ನಮ್ಮಲ್ಲಿ ವಿದ್ಯಾರ್ಜನೆಗೆ ತೊಡಗಿದವರು ಸಂಸ್ಕೃತ ಮತ್ತು ದೇಶಭಾಷೆಗಳಲ್ಲಿ ಹೈಮಾಚಲ ಸಿಂಹಾಸನಸ್ಥವಾಗಿರುವ ನಮ್ಮ ಪ್ರಾಚೀನ ಸಂಸ್ಕೃತಿ ಸಾಹಿತ್ಯಗಳ ಪರಿಚಯವಾಗುವುದಕ್ಕೆ ಮೊದಲೆ, ಅವರು ಭಾವವಶರಾಗಿ ಹೊಸದಕ್ಕೆ ಕಣ್ಣು ತೆರೆಯುವ ಅಪ್ರಬುದ್ಧ ತಾರುಣ್ಯದಲ್ಲಿ, ಇಂಗ್ಲಿಷ್ ಸಾಹಿತ್ಯದ ಸೊಗಸಿಗೂ ಸೌಂದರ್ಯಕ್ಕೂ ಪ್ರತಿಷ್ಠೆಗೂ ಮೋಹಿನೀಶಕ್ತಿಗೂ ಒಳಗಾಗಿ, ವಶರಾಗಿ, ಅದರ ಆಲ್ಪ್ಸ್ ಶಿಖರಗಳನ್ನೆ ಉತ್ತಮೋತ್ತಮ ಮತ್ತು ಉನ್ನತತಮಗಳೆಂದು ಭಾವಿಸುವಂತಾಯಿತು. ಆದರೆ, ರಾಜಕೀಯವಾದ ಸ್ವಾತಂತ್ರ್ಯಸಂಗ್ರಾಮ ಪ್ರಾರಂಭವಾದ ಮೇಲೆ ಪರಿಸ್ಥಿತಿ ಕ್ರಮಕ್ರಮೇಣ ಬದಲಾಯಿಸುತ್ತಾ ಹೋಗಿ ಸಾಹಿತ್ಯಸಂಸ್ಕೃತಿಯ ರಂಗಗಳಲ್ಲಿ ಋಜುದೃಷ್ಟಿ ಮೂಡತೊಡಗಿತು. ಭಾರತೀಯವಾದ ಯಾವ ದೇಶಭಾಷೆಯ ಆಧುನಿಕ ಸಾಹಿತ್ಯವನ್ನು ತೆಗೆದುಕೊಂಡರೂ ಅದರ ಬೆಳವಣಿಗೆಯಲ್ಲಿ ಈ ವಿವಿಧ ಪ್ರಭಾವಗಳ ತರಂಗತಾಡನದ ಅಚ್ಚೊತ್ತುಗಳನ್ನು ನಾವು ಗುರುತಿಸಬಹುದು. ಆಧುನಿಕ ಕನ್ನಡ ಸಾಹಿತ್ಯವೂ ಮೇಲೆ ಹೇಳಿದುದಕ್ಕೆ ನಿದರ್ಶನವಾಗುತ್ತದೆ.

ನಾನಿಲ್ಲಿ ವಿವರಕ್ಕೆ ಹೋಗುವುದಿಲ್ಲ. ಅದಕ್ಕೆ ಕಾಲಾವಕಾಶವೂ ಇಲ್ಲ. ಅಲ್ಲದೆ ಆ ವಿಚಾರಗಳು ಸಮ್ಮೇಲನದ ಬೇರೆಬೇರೆಯ ಗೋಷ್ಠಿಗಳಲ್ಲಿ ಒಂದಲ್ಲ ಒಂದು ರೀತಿಯಲ್ಲಿ ಪರಿಶೀಲನೆಗೆ ಬರುವುದರಿಂದ ಇಲ್ಲಿಯೂ ಬರುವ ಅಗತ್ಯವಿಲ್ಲ. ಆದರೆ ಒಂದೆರಡು ಸಾಮಾನ್ಯ ವಿಚಾರಗಳನ್ನು ಕುರಿತು ಸಂಕ್ಷೇಪವಾಗಿ ನಿರೂಪಿಸಲು ಅವಕಾಶ ಬೇಡುತ್ತೇನೆ.

ನಮ್ಮ ಸಾಹಿತ್ಯ ಹಿಂದೆ ಸಂಸ್ಕೃತ ಸಾಹಿತ್ಯದ ಛಾಯೆಯಾಗಿ ಬೆಳೆಯಿತು; ಇಂದು ಇಂಗ್ಲಿಷ್ ಸಾಹಿತ್ಯದ ಛಾಯೆಯಾಗಿ ಬೆಳೆಯುತ್ತಿದೆ ಎಂಬರ್ಥದ ಅಸಮಾಧಾನದ ಟೀಕೆ ಕೆಲವು ಕಡೆಗಳಲ್ಲಿ ಕೇಳಿಬರುತ್ತಿದೆ. ನಾವೂ ಇತರರಾರೂ ಮಾಡದ ಏನಾದರೊಂದು ಹೊಸತನ್ನು ಮಾಡಿ, ಇನ್ನಾರದ್ದೂ ಅಲ್ಲದೆ ನಮ್ಮದೇ ಆಗಿರುವ ಮೂಲಸೃಷ್ಟಿರೂಪದ ಕಾಣಿಕೆಗಳನ್ನು ಪ್ರಪಂಚಕ್ಕೆ ದಾನ ಮಾಡಿ ಕೀರ್ತಿಪಡೆಯಬೇಕೆಂಬುದೆ ಈ ಅಸಮಾಧಾನದ ಮೂಲೋದ್ದೇಶ, ಅಂತಹ ಆಶೆ ಅಂತಹ ಉದ್ದೇಶ ಇರುವುದೇನೂ ತಪ್ಪಲ್ಲ. ಆದರೆ ಈ 'ಒರಿಜಿನಲ್' (ಸ್ವತಂತ್ರ ಸೃಷ್ಟಿ) ಆಗಬೇಕೆಂಬ ಬುದ್ಧಿ ಅತ್ಯಹಂಕಾರದ ಮಟ್ಟಕ್ಕೇರಿ ಭ್ರಾಂತಿವಿಕಾರವಾಗುವ ಸಂಭವವೂ ಉಂಟು. ನಮ್ಮ ತಂದೆ, ಅವರ ತಂದೆ, ಅವರ ತಂದೆ ಎಲ್ಲರೂ ಹೀಗೆಯೇ ಕಾಲು ಹಾಕಿ ನಡೆಯುತ್ತಿದ್ದರೆಂದು ಮರಿ ಮಗನಾದವನು ಬೇರೆಯ ರೀತಿಯಲ್ಲಿ ಕಾಲು ಹಾಕಲು ತೊಡಗಿದರೆ, ಬಹು ಬೇಗನೆ ನಾಲ್ಕಾರು ಜನರ ಗಮನ ಸೆಳೆಯಬಹುದಾದರೂ, ಅಷ್ಟೇ ಬೇಗನೆ ಎಲ್ಲರ ನಗೆಗೂ ಈಡಾಗಬೇಕಾಗುತ್ತದೆ; ಅಲ್ಲದೆ ನಡೆಯುವುದರ ಉದ್ದೇಶಕ್ಕೆ ಭಂಗತಂದುಕೊಂಡಂತೆಯೂ ಆಗಬಹುದು. ಆದ್ದರಿಂದ 'ಒರಿಜಿನಲ್' ಆಗಬೇಕೆಂಬ ಆತುರದಿಂದ ಲೋಕ ಸಹಜ ಮತ್ತು ನಿಸರ್ಗಸಿದ್ಧವಾದ ಪ್ರಕಾರಗಳನ್ನು ಉಲ್ಲಂಘಿಸುವುದು ಬರಿಯ ವಿಕಾರಸೃಷ್ಟಿಗೆ

ಅವಕಾಶವಾಗುತ್ತದೆ. ರೂಪಪರಿವರ್ತನೆಗೆ ಅಂತಃಪ್ರೇರಣೆಯ ವಿಕಾಸಾವಶ್ಯಕತೆಯ ಸಕಾರಣ ಪ್ರಚೋದನೆಯಿಲ್ಲದಿದ್ದರೆ ಅದು ಕ್ಷಣಿಕ ಕುತೂಹಲಕಾರಿಯಾದ ವಿಕಾರ ರಚನೆಯಾದೀತೆ ಹೊರತು ನೂತನ ಸೃಷ್ಟಿಯಾಗುವುದಿಲ್ಲ.

ಎಲ್ಲ ದೇಶದ ಎಲ್ಲ ಸಾಹಿತ್ಯಗಳಲ್ಲಿಯೂ, ಅತ್ಯಂತ ಸ್ವತಂತ್ರ ಎಂದು ತೋರುವ ಸೃಷ್ಟಿಯಲ್ಲಿಯೂ, ಪರತಂತ್ರತೆ ಅನ್ಯಪರತಂತ್ರತೆ ಇದ್ದೆ ಇರುತ್ತವೆ.ಆದ್ದರಿಂದಲೆ ವಿಮರ್ಶಕನೊಬ್ಬನು ಹೇಳಿದ್ದಾನೆ: 'ಜಗತ್ತಿನ ಮಹಾಕವಿಗಳನ್ನೆಲ್ಲ ಸಾಲಾಗಿ ನಿಲ್ಲಿಸಿ ನೋಡಿದರೆ ಏನು ಕಾಣುತ್ತದೆ? ಒಬ್ಬನ ಜೇಬಿನಲ್ಲಿ ಇನ್ನೊಬ್ಬನ ಕೈ!' ಅರ್ಧ ಪರಿಹಾಸ್ಯಕ್ಕೆ ಹೇಳಿರುವಂತೆ ತೋರಿದರೂ ಈ ವಿಮರ್ಶೋಕ್ತಿಯಲ್ಲಿ ತುಂಬ ಸತ್ಯಾಂಶವಿದೆ. ಸಾಹಿತ್ಯ ಭೂಮಿಕೆಯಲ್ಲಿ ಮಾತ್ರವಲ್ಲ; ಎಲ್ಲ ಭೂಮಿಕೆಗಳಲ್ಲೂ ಮನುಷ್ಯ ಪರಸ್ಪರೋಪಜೀವಿ. ಆದರೂ ಪ್ರತಿಯೊಬ್ಬ ವ್ಯಕ್ತಿಯೂ ಯಾವುದೊ ಒಂದು ರೀತಿಯಲ್ಲಿ ಅನನ್ಯಸಾಧಾರಣ; ಒಬ್ಬೊಬ್ಬನೂ ಇನ್ನೊಬ್ಬನಲ್ಲವಾಗಿರುವಷ್ಟು ಮಟ್ಟಿಗೆ ವಿಶೇಷವ್ಯಕ್ತಿ; ಮನುಷ್ಯತ್ವದಿಂದ ಸರ್ವಸಾಧಾರಣ ನಾದರೂ ವ್ಯಕ್ತಿತ್ವದಿಂದ ವಿಶೇಷ; ಸಾಧಾರಣತೆಯ ಪರತಂತ್ರತೆಯಲ್ಲಿ ವ್ಯಕ್ತಿತ್ವದ ವಿಶೇಷತೆಯನ್ನು ಪ್ರಕಟಿಸುವುದೆ ಅನನ್ಯಪರ ತಂತ್ರತೆ . ಅತ್ಯಂತ ಸ್ವತಂತ್ರ ಎನಿಸಿಕೊಳ್ಳುವ ನಮ್ಮ ಮೂಲ ಸೃಷ್ಟಿಯ ಪರಮಾವಧಿ ಈ ಅನನ್ಯಪರತಂತ್ರತೆಯೆ ವಿನಾ ಸಂಪೂರ್ಣ ಸ್ವಾತಂತ್ರ್ಯ ಎಂಬುದು ಇಲ್ಲವೆ ಇಲ್ಲ.

ಪಂಪ ಹರಿಹರ ಕುಮಾರವ್ಯಾಸ ರತ್ನಾಕರವರ್ಣಿ ಕಾಳಿದಾಸ ಮಿಲ್ಟನ್ ದಾಂತೆ ಷೇಕ್ಸ್ಪಿಯರ್ ಮೊದಲಾದ ಸ್ವತಂತ್ರಪ್ರತಿಭೆಯ ಉದ್ದಾಮ ಕವಿಗಳು ಅಲಂಕಾರ ವಸ್ತು ರೀತಿಗಳಲ್ಲಿ ಭಾವಾಂಶ ಚಿಂತನಾಂಶ ಕಲ್ಪನಾಂಶ ರೂಪಾಂಶಗಳಲ್ಲಿ ಇತರ ಭಾಷಾ ಸಾಹಿತ್ಯಗಳಿಗೆ ಮತ್ತು ಪೂರ್ವಕವಿಗಳಿಗೆ ಋಣಿಗಳಾಗಿದ್ದಾರೆ ಎಂದಮಾತ್ರಕ್ಕೆ ಅವರ ಕೃತಿಗಳು ಬರಿಯ ಛಾಯೆಗಳೆ? ತಂದೆ ತಾಯಿಯರಿಗೆ ಋಣಿಯಾಗಿರುವ ಮಗನ ಮೈ ಬರಿಯ ಛಾಯೆಯೆ? ಅವನು ಸ್ವತಂತ್ರ ಜೀವಿಯಲ್ಲವೆ? ಅವನು ತನ್ನ ಕರ್ಮಸಂಸ್ಕಾರ ಆಸೆ ಆಶಯ ಜೀವಿತೋದ್ದೇಶಗಳಿಗೆ ಅನುಸಾರಿಯಾಗಿ ಬೆಳೆಯುವುದಿಲ್ಲವೆ? ಅವನಿಗೆ ವ್ಯಕ್ತಿಸ್ವಾತಂತ್ರ್ಯವಿಲ್ಲವೆ? ಲೋಕ ಅವನಿಂದ ನಿರೀಕ್ಷಿಸುವುದಾದರೂ ಏನನ್ನು? ಯೋಗ್ಯ ವ್ಯಕ್ತಿಯಾಗಿ ಬಾಳಿ ಬೆಳೆದು, ತನ್ನ ಪೂರ್ಣತ್ವವನ್ನು ಸಾಧಿಸುವುದರ ಜೊತೆಗೆ ತನ್ನ ವ್ಯಕ್ತಿ ವಿಶೇಷತ್ವದ ಪ್ರಭಾವದಿಂದ ಲೋಕ ಕಲ್ಯಾಣಕ್ಕೂ ಕಾರಣನಾಗಬೇಕು ಎಂದಲ್ಲವೆ? ಸಾಹಿತ್ಯದಲ್ಲಿಯೂ ಅಷ್ಟೆ: ಅಷ್ಟನ್ನು ಸಾಧಿಸುವ ಯಾವ ಕೃತಿಯೂ ತಾನು 'ಛಾಯೆ' ಯಾದೆನೆಂದು ನಾಚುವುದು ಬೇಡ. ಅಂತಹ ಕೃತಿರಚನೆ ಮಾಡಿದಾತನು ಕೃತಕೃತ್ಯನೆ ಹೌದು. ಕೃತಿಯ ಸಜೀವತ್ವಕ್ಕೆ ಅನಿವಾರ್ಯವಾಗಿ ಬೇಕಾದುದು ಸ್ವಾನುಭವ, ತನ್ನದೆ ಆದ ಹೃದಯಾನುಭವ. ಆ ಅನುಭವನ್ನೈಜತೆ ಒಂದಿದ್ದರೆ ಅದು ಸ್ವತಂತ್ರ ಸೃಷ್ಟಿಯೆ. ಆ ಅನುಭವ ಹಿಂದಾರೂ ಪಡೆಯದ ಅನುಭವವಾಗಿರಬೇಕು ಎಂದೂ ಅಲ್ಲ. ಅದು ಕೃತಿಕಾರನ ನಿಜವಾದ ಅನುಭವವಾಗಿರಬೇಕು ಅಷ್ಟೆ.

ಈ ದೃಷ್ಟಿಯಿಂದ ಸಮೀಕ್ಷಿಸಿದರೆ ಆಧುನಿಕ ಕನ್ನಡ ಸಾಹಿತ್ಯದಲ್ಲಿ ಅನುಕರಣ,

ಅನುಸರಣ, ಛಾಯೆಗಳ ಜೊತೆಜೊತೆಗೆ ಸ್ವತಂತ್ರ ಸೃಷ್ಟಿಯೂ ವಿಪುಲವಾಗಿ ನಡೆದಿದೆ. ಸಾಹಿತ್ಯದ ಕೆಲವು ಪ್ರಕಾರಗಳಲ್ಲಂತೂ ಕನ್ನಡಿಗರು ಮಾತ್ರವಲ್ಲದೆ ಭಾರತೀಯರೂ ಹೆಮ್ಮೆಪಟ್ಟುಕೊಳ್ಳುವಂತಹ ಕೃತಿಗಳೂ ಮೈದೋರಿವೆ. ಅಷ್ಟೇಅಲ್ಲ: ಪೂರ್ಣಪರಿಣತ ಸ್ಥಿತಿಗೇರಿರುವ ಪ್ರಪಂಚದ ಯಾವ ಭಾಷೆಯ ಸಾಹಿತ್ಯಕ್ಕಾದರೂ ಕೋಡುಮೂಡಿಸುವ ಕೃತಿಗಳೂ ಕವನ, ಕಾದಂಬರಿ, ಸಣ್ಣಕತೆ, ನಾಟಕ, ಕಾವ್ಯ, ಮಹಾಕಾವ್ಯಾದಿ ಪ್ರಕಾರಗಳಲ್ಲಿ ಹೊರಹೊಮ್ಮಿವೆ. ಕನ್ನಡಿಗರು ವಿನಯಕ್ಕಾಗಿ ಬಗ್ಗಿ ನಡೆಯಬಹುದು; ಆದರೆ ರಿಕ್ತರಂತೆ ಕುಗ್ಗಿ ನಡೆಯಬೇಕಾಗಿಲ್ಲ.

ಎಂತಹ ಉತ್ಕೃಷ್ಟ ನಾಗರಿಕತೆಗೇರಿದ ಯಾವ ದೇಶದ ಎಷ್ಟು ಮುಂಬರಿದ ಸಾಹಿತ್ಯದಲ್ಲಾಗಲಿ ಹುಟ್ಟಿದುದೆಲ್ಲ ಬದುಕುವುದಿಲ್ಲ. ಕೆಲವು ಭಾಗ ಪತ್ರಿಕಾ ಸಾಹಿತ್ಯದಂತೆ ತನ್ನ ದಿನದ ಕರ್ತವ್ಯವನ್ನು ಮಾಡಿ ಮುಗಿಸಿ ಮಡಿಯುತ್ತದೆ. ಅದು ದೈನಂದಿನ ಆಯುಃಪರಿಮಾಣದ್ದು. ಕೆಲವು ಭಾಗ ಯಾವುದಾದರೊಂದು ಸಮಸ್ಯೆಯ ಪರಿಹಾರಕ್ಕಾಗಿಯೊ ಅಥವಾ ಯಾವುದಾದರೊಂದು ಹೊಸನೀತಿಯ ಪ್ರಚಾರಕ್ಕಾಗಿಯೊ ಹುಟ್ಟುತ್ತದೆ. ಆ ಉದ್ದೇಶ ನೆರವೇರಿದೊಡನೆಯೆ ಅದು ಮನಸ್ಸಿನಿಂದ ಮರೆಯಾಗುತ್ತದೆ. ಇನ್ನು ಸ್ವಲ್ಪಭಾಗ ತತ್ಕಾಲ ದೇಶ ಸನ್ನಿವೇಶದ ಪ್ರಭಾವದಿಂದ ಹೊಮ್ಮಿ, ಆ ಪರಿಸ್ಥಿತಿ ಸಜೀವವಾಗಿರುವ ತನಕ ಬಾಳಿ, ಕ್ರಮೇಣ ಜನಮನದಿಂದ ವಿಸ್ಮೃತವಾಗಿ ತರುವಾಯ ಸಾಹಿತ್ಯಚರಿತ್ರೆಯ ವಿಷಯವಾಗಿಯೊ ಅಥವಾ ಪಂಡಿತ ವಿಶೇಷಾಧ್ಯಯನದ ವಿಷಯವಾಗಿಯೊ ಉಳಿಯುತ್ತದೆ. ಎಲ್ಲಿಯೊ ಅಲ್ಪ ಸ್ವಲ್ಪ ಭಾಗ ಮಾತ್ರ ನಮ್ಮ ಚಿರಕಾಲಿಕ ಆಶೆ ಆದರ್ಶ ಆಕಾಂಕ್ಷೆ ಪ್ರಯೋಜನಗಳಿಗೆ ಸಂಬಂಧಪಟ್ಟು ನಮ್ಮ ನಿತ್ಯಜೀವನದ ನಿತ್ಯಪುರುಷಾರ್ಥಗಳಿಗೆ ನಿತ್ಯವೂ ನೀರೆರೆಯುವ ಹೊಂಗಿಂಡಿಗಳೊ ಹೊಂಗೊಡಗಳೊ ಆಗಿ ಪರಿಣಮಿಸಿ ನಿತ್ಯಸಾಹಿತ್ಯವಾಗಿರುತ್ತವೆ. ಈ ಎಲ್ಲ ಬಗೆಯ ಸಾಹಿತ್ಯಗಳೂ ಸಮಾನ ಸಾರ್ಥಕವಾದುವೆ. ನಿತ್ಯ ಸಾಹಿತ್ಯಕ್ಕೆ ಪತ್ರಿಕಾ ಸಾಹಿತ್ಯದ ಕೆಲಸಮಾಡಲು ಸಾಧ್ಯವಿಲ್ಲ. ಆದರೆ ತಮ್ಮ ತಮ್ಮ ಕೆಲಸವನ್ನು ಸಮರ್ಪಕವಾಗಿ ಮಾಡಿದ ಅವೆರಡೂ ಸಾರ್ಥಕವೆ.ಅದರ ಧರ್ಮ ಬೇರೆ; ಇದರ ಧರ್ಮ ಬೇರೆ. ಆದ್ದರಿಂದ ಅದರ ಕರ್ತವ್ಯಕರ್ಮ ಬೇರೆ; ಇದರ ಕರ್ತವ್ಯಕರ್ಮ ಬೇರೆ.

ಆದಕಾರಣ ನಾವು ಸಾಹಿತ್ಯಪ್ರಪಂಚವನ್ನು ಒಂದು ವೇದಿಕೆಯಂತೆ ಭಾವಿಸುವುದಕ್ಕಿಂತಲೂ ಒಂದು ಸೋಪಾನಪಂಕ್ತಿಯಂತೆಯೊ ಅಥವಾ ಒಂದು ಪರ್ವತಶ್ರೇಣಿಯಂತೆಯೊ ಭಾವಿಸಿದರೆ ಉತ್ತಮ. ಎಲ್ಲ ತರಹದ ಸಾಹಿತ್ಯವೂ ಸಮಾನ ಪ್ರಯೋಜನಕರವಾದುದೆಂದಾಗಲಿ ಸಮಾನ ಯೋಗ್ಯವಾದುದೆಂದಾಗಲಿ ನಿರೀಕ್ಷಿಸಿ, ಬೆಲೆಕಟ್ಟಿ, ಒಂದನ್ನು ಹೊಗಳಿ ಇನ್ನೊಂದನ್ನು ತೆಗಳುವುದು ಅನಾವಶ್ಯಕ. ಆಯಾ ಶ್ರೇಣಿಗೆ ಸೇರಿದ ಸಾಹಿತ್ಯ ತನ್ನ ಸ್ಥಾನ ತನ್ನಿಂದ ನಿರೀಕ್ಷಿಸುವುದನ್ನು ಮಾಡಿದರೆ ಅದು ಉತ್ತಮ ಸಾಹಿತ್ಯವೆ.

ವಿವಿಧ ಶ್ರೇಣಿಗೆ ಸೇರಿ ವಿವಿಧ ಸ್ಥಾನಗಳಲ್ಲಿ ನಿಂತಿರುವ ವಿವಿಧ ಸಾಹಿತ್ಯ

ಕೃತಿಗಳಿಂದ ಯಾವುದಾದರೂ ಒಂದೇ ಪ್ರಯೋಜನವನ್ನು ಬಯಸುವುದೂ ತಪ್ಪು. ಹತ್ತೊಂಬತ್ತನೆಯ ಶತಮಾನದ ಪಾಶ್ಚಾತ್ಯ ವಿಮರ್ಶಕರಿಂದ ಪ್ರಣೀತವಾಗಿ ಭಾರತೀಯ ತರುಣರ ಮತ್ತು ಯುವಕರ ಮನಸ್ಸನ್ನು ಮೋಹಿಸಿದ 'ಕಲೆಗಾಗಿಕಲೆ' ಯಂತಹ ಸ್ವಾರಸ್ಯವಾದ ಯುರೋಪೀಯ ಸಿದ್ಧಾಂತ ಭ್ರಾಂತಿಗಳಿಂದ ಆವಿಷ್ಟರಾಗದೆ ತೆರೆದ ಮನಸ್ಸಿನಿಂದಿರುವುದು ಲೇಸು. ರಸಾನುಭವವೇ ಕಾವ್ಯದ ಪರಮ ಪ್ರಯೋಜನವೆಂದು ಅದನ್ನು "ಸಕಲ ಪ್ರಯೋಜನಮೌಲಿಭೂತ" ಎಂಬುದಾಗಿ ವರ್ಣಿಸಿದ ನಮ್ಮ ಪ್ರಾಚೀನ ಕಾವ್ಯ ಮೀಮಾಂಸಕರ ಮತವನ್ನು ನಾವು ಸರಿಯಾಗಿ ಅರ್ಥಮಾಡಿಕೊಳ್ಳದೆ, 'ಕಲೆಗಾಗಿ ಕಲೆ'ಯ ಸಿದ್ಧಾಂತಕ್ಕೆ ಕಣ್ಣು ಮುಚ್ಚಿಕೊಂಡು ದುಮುಕಿದರೆ ಅನರ್ಥವಾದೀತು. ಕಾವ್ಯ ಪ್ರಯೋಜನಗಳನ್ನು ಹೇಳುವಾಗ ನಮ್ಮ ಪ್ರಾಚೀನ ಆಲಂಕಾರಿಕರು ಪರಮಪುರುಷಾರ್ಥವಾದ ಮೋಕ್ಷವನ್ನು ಗಂತವ್ಯ ಮತ್ತು ಗಮ್ಯವನ್ನಾಗಿ ಗುರುತಿಸಿದ್ದಾರೆ ಎಂಬುದನ್ನು ನೆನಪಿನಲ್ಲಿಡಬೇಕು. ಕಲೆಯನ್ನಾಗಲಿ ಕಾವ್ಯವನ್ನಾಗಲಿ ನಮ್ಮ ಆತ್ಮದ ವಿಕಾಸದ ಮತ್ತು ಆಧ್ಯಾತ್ಮಿಕ ಉದ್ಧಾರದ ಒರೆಗಲ್ಲಿನ ಮೇಲೆ ಉಜ್ಜಿಯೆ ಬೆಲೆ ಕಟ್ಟಬೇಕಾಗುತ್ತದೆ: ಬರಿಯ ಮನೋಲ್ಲಾಸದ ಅಥವಾ ಸುಖಾಸ್ವಾದನೆಯ ದೃಷ್ಟಿ ಮಾತ್ರದಿಂದಲ್ಲ.

ಸಾಹಿತ್ಯ ಅನೇಕ ವಿಧವಾಗಿರುವಂತೆ ಅದರ ಪ್ರಯೋಜನಗಳೂ ಅನೇಕ ವಿಧವಾಗಿವೆ. ಸಮಾಜಸುಧಾರಣೆ, ನೀತಿಬೋಧೆ, ವಿಚಾರಪ್ರಚೋದನೆ, ಮತವಿಡಂಬನೆ, ಮತಪ್ರಶಂಸೆ, ಸ್ವಮತಶ್ಲಾಘನೆ, ಅನ್ಯಮತಖಂಡನೆ, ಸ್ವಜಾತಿ ಸಂಕೀರ್ತನೆ, ಪರಜಾತಿ ನಿಂದನೆ, ವೈಜ್ಞಾನಿಕ ದೃಷ್ಟಿಪ್ರಸಾರ, ರಾಷ್ಟ್ರೀಯತಾ ಪ್ರಚಾರ, ಸಮನ್ವಯ ಧರ್ಮೋಪದೇಶ, ಸರ್ವೋದಯ, ಸಮದರ್ಶನ ಮತ್ತು ಪೂರ್ಣದೃಷ್ಟಿಪ್ರದಾನ ಇತ್ಯಾದಿ ಇತ್ಯಾದಿಯಾಗಿ ಶಿಷ್ಟ ಮತ್ತು ದುಷ್ಟೋದ್ದೇಶಗಳಿಗನುಸಾರವಾಗಿ ಪ್ರಯೋಜನಗಳೂ ಅನೇಕವಾಗಿವೆ. ಜ್ಞಾನ ಛಂದೋಬದ್ಧವಾಗುವಂತೆ ಮೂರ್ಖತೆಯೂ ಛಂದೋಬದ್ಧವಾಗಬಲ್ಲದು. ಸೌಂದರ್ಯ ಛಂದೋಬದ್ಧವಾಗುವಂತೆ ವಿಕಾರವೂ ಆಗಬಲ್ಲುದು. ಸೊಗಸಾಗಿ ಛಂದೋಬದ್ಧವಾದ ಮಾತ್ರಕ್ಕೆ ಅದು ಪೂಜ್ಯ, ದಿವ್ಯ, ಗ್ರಾಹ್ಯ, ಶ್ರೇಷ್ಠ ಎಂದು ಸರ್ವಶ್ಲಾಘ್ಯವಾಗಲಾರದು. ಸಮಾಜವನ್ನಾಗಲಿ ದೇಶವನ್ನಾಗಲಿ ವ್ಯಕ್ತಿಯನ್ನಾಗಲಿ ಉತ್ತಮತೆಯ ಕಡೆಗೊಯ್ಯುವ ಊರ್ಧ್ವಮುಖಿಯಾದ ಉದ್ಧಾರಶಕ್ತಿ ಎಲ್ಲೆಲ್ಲಿ ಇರುತ್ತದೆಯೊ ಅದೆಲ್ಲವೂ ಗ್ರಾಹ್ಯ, ಸ್ವೀಕಾರಯೋಗ್ಯ. ಅದಕ್ಕೆ ವಿರುದ್ಧವಾಗಿ ಅಧೋಮುಖಿಯಾದುದು ನಮಗೆ ಎಷ್ಟೆ ಸ್ವಾರಸ್ಯವಾಗಿರಲಿ ತ್ಯಾಜ್ಯ ಮತ್ತು ಖಂಡನೀಯ. ಅದರ ದಮನಕ್ಕೆ ದಾಕ್ಷಿಣ್ಯ ಅಡ್ಡಬರಬಾರದು; ಏಕೆಂದರೆ ಅದರಿಂದ ಮಾನವೀಯತೆಗೆ ಹಾನಿ ಮತ್ತು ಆತ್ಮಶ್ರೀಗೆ ಗ್ಲಾನಿ.

ನಮಗೆ ನಾನಾಪ್ರಯೋಜನದ ಕೆಲಸಗಳಿಗೆ ಬೇಕಾಗುವ ನಾನಾರೀತಿಯ ಸಾಹಿತ್ಯದ ಆವಶ್ಯಕತೆಯಿದೆ. ಅದರಲ್ಲಿ ಸತ್ಯಕ್ಕೆ ಬಹುಮುಖ್ಯವೆಂದು ತೋರುವ ಮೂರನ್ನು ನಿವೇದಿಸುತ್ತೇನೆ.

ಮೊದಲನೆಯದಾಗಿ: ನಮ್ಮ ರಾಷ್ಟ್ರವನ್ನು ಸೆಕ್ಯೂಲರ್ ಸ್ಟೇಟ್ ಎಂದು ಸಾರಿದ್ದೇವೆ, ಎಂದರೆ ಧರ್ಮಬಾಹಿರ, ಮತವಿದ್ವೇಷಕರ, ನಾಸ್ತಿಕ ಅಥವಾ ಚಾರ್ವಾಕ ಎಂದರ್ಥವಲ್ಲ; ಸಮನ್ವಯರಾಷ್ಟ್ರ ಎಂದರ್ಥ. ಎಲ್ಲ ಮತಗಳೂ ಸತ್ಯದೆಡೆಗೆ ನಮ್ಮನ್ನು ಕೊಂಡೊಯ್ಯುವ ಬೇರೆ ಬೇರೆ ಪಥಗಳು. ಆದ್ದರಿಂದ ಯಾವ ಮತವಾಗಲಿ ಇನ್ನೊಂದು ಮತವನ್ನು ನಿಂದಿಸಲು ಕಾರಣವಿಲ್ಲ. ಎಲ್ಲ ಮತಗಳೂ ದೇವರೆಡೆಗೆ ದಾರಿಗಳೆ ಆಗಿರುವುದರಿಂದ ಮತಾಂತರಗೊಳಿಸುವಂತಹ ಅರ್ಧಬರ್ಬರ ಕ್ರಿಯೆಗಳಿಗೂ ಇಲ್ಲಿ ಅರ್ಥವಿಲ್ಲ; ಆದ್ದರಿಂದ ಸ್ಥಾನವಿಲ್ಲ. ಎಲ್ಲರೂ ತಮ್ಮ ತಮ್ಮ ದಾರಿಗಳನ್ನರಿತು ಭಕ್ತಿಯಿಂದ ಭಗವಂತನೆಡೆಗೆ ಸಾಗುವುದರ ಜೊತೆಗೆ, ಅನ್ಯಮತಗಳನ್ನು ಸಹಾನುಭೂತಿಯಿಂದ ಅರಿತು, ಇತರರ ಸಾಮಾಜಿಕ ಜೀವನದೊಂದಿಗೆ ಮೈತ್ರಿಯಿಂದ ಬೆರೆತು, ಭಾಗವಹಿಸಿ, ರಾಷ್ಟ್ರದ ಜನರಲ್ಲಿ ಸಹೋದರಭಾವವನ್ನೂ ಐಕ್ಯಮತದ ಬುದ್ಧಿಯನ್ನೂ ನೆಲೆಗೊಳಸಬೇಕು. ಈ ಕೆಲಸದ ಹೊರೆಯ ಮತ್ತು ಹೊಣೆಯ ಮುಕ್ಕಾಲು ಮೂರು ವೀಸ ಪಾಲು ಸಾಹಿತ್ಯದ್ದಾಗಿದೆ. ಆದ್ದರಿಂದ ಸಾಹಿತಿ ಅಥವಾ ಲೇಖಕನಾಗುವವನು ತನ್ನ ಸ್ವಂತಜೀವನದಲ್ಲಿ ಈ ವಿಶಾಲಮನೋಧರ್ಮವನ್ನು ಸ್ಥಾಪಿಸಿಕೊಳ್ಳುವುದು ಅಗತ್ಯ. ಏಕೆಂದರೆ ನಮ್ಮ ತೇಗಿನಲ್ಲಿ ಹೊರ ಬೀಳುವುದು ನಾವು ತಿಂದುದರ ವಾಸನೆ ತಾನೆ!

ಎರಡನೆಯದಾಗಿ; ನಮ್ಮ ರಾಷ್ಟ್ರವನ್ನು ರಿಪಬ್ಲಿಕ್ ಅಥವಾ ಸರ್ವ ಪ್ರಜಾಧಿಪತ್ಯ ಎಂದು ಘೋಷಿಸಿದ್ದೇವೆ. ಅದರ ಗುರಿ ಸರ್ವೋದಯ. ಎಂದರೆ ಎಲ್ಲರ ಏಳಿಗೆ. ಎಲ್ಲರೂ ಸಮ, ಎಲ್ಲರೂ ಸಮಾನ ಎಂಬುದು ತತ್ತ್ವಜ್ಞಾನ ರೂಪದಲ್ಲಿ ಬಹಳ ಹಿಂದಿನಿಂದಲೂ ಋಷಿವಾಣಿಯಾಗಿ ಬಂದಿದೆ. ಸಮತೆ ಮತ್ತು ಸಮದರ್ಶನ ಭಾರತೀಯರ ಧರ್ಮಜೀವನದ ಅಡಿಗಲ್ಲು. ಆದರೆ ನಾನೂ ನೀವೂ ಒಂದೆ ಎಂದು ಆಧ್ಯಾತ್ಮಿಕವಾಗಿ ಒಪ್ಪಿಕೊಳ್ಳುವುದಕ್ಕೂ ನನ್ನ ಜೇಬಿಗೆ ನೀವು ಕೈಹಾಕಿದಾಗ ಒದಗುವ ಪರಿಸ್ಥಿತಿಗೂ ಅಜಗಜಾಂತರ ವ್ಯತ್ಯಾಸವಿದೆ! ಎಲ್ಲರೂ ದೇವರ ಮಕ್ಕಳೆ ಎಂದು ಹೇಳುತ್ತಾ ಆದಷ್ಟು ಲಾಭ ಸಂಪಾದಿಸಿ ಬಂಡವಾಳಗಾರನಾಗಿ, ತನ್ನ ಬಂಡವಾಳದ ರಕ್ಷಣೆಗಾಗಿ 'ಇನ್ನೊಬ್ಬರ ಧನಕ್ಕೆ ಆಸೆಪಡಬಾರದು!' 'ದೇವರು ಕೊಟ್ಟುದರಲ್ಲಿಯೆ ತೃಪ್ತಿಯಿಂದಿರಬೇಕು!' 'ಸುಖಕ್ಕೆ ಮೂಲಕಾರಣ ಧನವಲ್ಲ ಮನ!' ಎಂದೆಲ್ಲ ಧರ್ಮೋಪದೇಶಮಾಡುವುದಕ್ಕೆ ದತ್ತಿಗಳನ್ನು ಬೇಕಾದರೂ ಬಿಟ್ಟು, ಸಾಮಾನ್ಯಜನಕ್ಕೆ ಧರ್ಮದ ಅಫೀಮು ತಿನ್ನಿಸುವ ಕಾಲ ಹಿಂದಾಯಿತು. ಈಗ ಜನ ಅರ್ಥಶಾಸ್ತ್ರ ರಾಜಕೀಯಶಾಸ್ತ್ರ ವಿಜ್ಞಾನಾದಿ ವಿಚಾರಗಳನ್ನು ಸ್ವಪಕ್ಷಸಮರ್ಥನೆಯ ಚುನಾವಣಾಪ್ರಚಾರದ ಭಾಷಣಗಳಿಂದಲಾದರೂ ಅರಿಯತೊಡಗಿದ್ದಾರೆ. ದೇಶದ ಜಮೀನುದಾರರೂ ಶ್ರೀಮಂತರೂ ಬಂಡವಾಳಗಾರರು ದಿನದಿನವೂ ಉಚ್ಚಕಂಠದಿಂದ ಘೋಷಿತವಾಗಿ ಮನೆಯ ಬಾಗಿಲೊಳಗೂ ನುಗ್ಗಿಬರುತ್ತಿರುವ ಈ ಹೊಸ ಹೊಸ ತತ್ತ್ವಗಳ ನ್ಯಾಯಕ್ಕೆ ಹೊಂದಿಕೊಳ್ಳಲಾರದೆ ಅದನ್ನು ಒಂದು ರೀತಿಯ ದರೋಡೆ ಎಂದೆ ಭಾವಿಸುತ್ತಾರೆ. ಅದು ದರೋಡೆಯಲ್ಲ; ಹಿಂದೆ ಧಾರ್ಮಿಕ ಉಪಾಯಗಳಿಂದ ಮಾಡಿದ್ದ ದರೋಡೆಯನ್ನು ಈಗ ಕಾರ್ಮಿಕ ಉಪಾಯಗಳಿಂದ ಹಂಚುವ ವಿಧಾನ

ಎಂಬುದನ್ನು ಅವರಿಗೆ ಮನದಟ್ಟು ಮಾಡಿಕೊಡಬೇಕು. ಯವುದನ್ನು ಆಧ್ಯಾತ್ಮಿಕವಾಗಿ ಎಲ್ಲರೂ ಒಪ್ಪಿಕೊಳ್ಳುತ್ತಾ ಬಂದಿದ್ದಾರೊ ಅದನ್ನು ಲೌಕಿಕವಾಗಿಯೂ ಸಾಧಿಸುವುದಕ್ಕೆ ಆವಶ್ಯಕವಾದ ಮಾನಸಿಕ ಹಿನ್ನೆಲೆಯನ್ನೂ ಹೃದಯದ ಪರಿವರ್ತನೆಯನ್ನೂ ಉಂಟುಮಾಡಬೇಕು.ಆ ದಿಕ್ಕಿನಲ್ಲಿ ಸಾಹಿತ್ಯ ಮಾಡಬೇಕಾಗಿರುವ ಕೆಲಸ ಅತ್ಯಂತ ಮಹತ್ತಾದುದಾಗಿದೆ.

ಮೂರನೆಯದಾಗಿ: ಮಾನವನ ಬ್ರಾಹ್ಮೀಪ್ರಜ್ಞಾವಿಕಾಸಕ್ಕೆ ಪೂರ್ವಭಿತ್ತಿ ರೂಪವಾಗಿರುವ ಪೂರ್ಣದೃಷ್ಟಿಯ ರಸಸ್ಯಂದಿಯಾದ ಪ್ರತಿಪಾದನೆ. ತತ್ತ್ವದ ಮಟ್ಟದಲ್ಲಿ ಭಾರತೀಯ ಸಂಸ್ಕೃತಿ ಇದನ್ನು ಒಂದಲ್ಲ ಒಂದು ರೀತಿಯಲ್ಲಿ ವೇದೋಪನಿಷತ್ತುಗಳ ಕಾಲದಿಂದಲೂ ಸಾರುತ್ತಾ ಸಾಧಿಸುತ್ತಾ ಬಂದಿದೆ. ಅದನ್ನು ಆಯಾ ಯುಗದ ಧರ್ಮವಿಕಾಸದ ಸ್ವರೂಪಾನುಗುಣವಾಗಿ ಸಂಪೂರ್ಣವಾಗಿ ಸಾಧಿಸಿ, ಸಿದ್ಧಪುರುಷರಾಗಿ, ವಿಶ್ವಮಾನವರಾಗಿ, ಪೃಥ್ವೀತತ್ತ್ವಕ್ಕೆ ಪರಾಶಕ್ತಿಯ ಆವಾಹನೆ ಮಾಡಿ, ಅಲ್ಪಮಾನವ ಭೂಮಮಾನವನಾಗಿ ಪರಿವರ್ತನೆ ಹೊಂದುವುದಕ್ಕೆ ನೆರವಾಗಿ ಹೋದ ಋಷಿ ರಸಋಷಿವರೇಣ್ಯರೂ ಅನೇಕರಿದ್ದಾರೆ. ಈ ವಿಶ್ವಮಾನವ ರಚನೆಯೆ ನಮ್ಮ ಇತರ ಎಲ್ಲ ಉದ್ಧಾರೋದ್ಯಮಗಳ ಮತ್ತು ಸುಖ ಸಾಧನೆಯ ಸಾಹಸಗಳ ಅಂತರಾತ್ಮದಲ್ಲಿ ಅಡಗಿರುವ ಪ್ರಚ್ಛನ್ನ ಪ್ರೇರಣೆ. ಈ ಪೂರ್ಣದೃಷ್ಟಿ ದೇಶ ಕಾಲ ಪೂರ್ವ ಪಶ್ಚಿಮ ಮತ ಜಾತಿ ವರ್ಣ ಪಕ್ಷ ಪಂಥ ಸಿದ್ಧಾಂತಾದಿ ಎಲ್ಲ ತೆರನಾದ ಸೀಮೆಗಳನ್ನೂ ಉಲ್ಲಂಘಿಸಿ ಅತೀತವಾಗಿರುತ್ತದೆ, ಅನಿಕೇತನವಾಗಿರುತ್ತದೆ, ನಿತ್ಯವಾಗಿರುತ್ತದೆ. ಈ ಪೂರ್ಣದೃಷ್ಟಿ ಜನಾಂಗ ಜನಾಂಗಗಳ ನಡುವೆ ಗೋಡೆ ಕಟ್ಟಿಕೊಂಡು ನಿಂತಿರುವ ರಾಷ್ಟ್ರೀಯತೆಯನ್ನು ಉತ್ತರಿಸಿ, ಮಾನವನಿಂದ ಮಾನವನನ್ನು ಪ್ರತ್ಯೇಕಿಸುತ್ತಿರುವ ಕ್ಷುದ್ರಭೇದಗಳನ್ನು ಇಲ್ಲಗೈದು, ಶಾಶ್ವತವೂ ಸರ್ವ ಸಂಪೂರ್ಣತಾಸಿದ್ಧಿಕಾರಕವೂ ಆಗಿರುವ ನಿತ್ಯಶಾಂತಿಯ ಕಡೆಗೆ ಜಗತ್ತನ್ನು ಒಯ್ಯುತ್ತದೆ. ಸಕಲ ಪುರುಷಾರ್ಥಗಳ ಶಿಖರಪುರುಷಾರ್ಥಕ್ಕೆ ಜಗತೀಚೇತನೆಯನ್ನೇರಿಸುತ್ತದೆ. ಸಹೃದಯಯಾತ್ರಿ ಸಾಹಿತ್ಯಹೈಮಾಚಲ ಪರ್ವತಶ್ರೇಣಿಗಳಲ್ಲಿ ಈ ತುತ್ತತುದಿಯ ಶ್ರೇಣಿಯ ಈ ಕೈಲಾಸಪವಿತ್ರ ಕ್ಷೇತ್ರಕ್ಕೆ ಪ್ರವೇಶಿಸಿದಾಗ ಮಾನವತ್ವ ದೇವತ್ವದಲ್ಲಿ ಪದಾರ್ಪಣ ಮಾಡಿ ಸಾರ್ಥಕ್ಯ ಹೊಂದುತ್ತದೆ.

ಆದರೆ ಸಾಹಿತಿ ಯಾವ ತತ್ತ್ವವನ್ನಾಗಲಿ ಆಲೋಚಿಸಿ ಅದನ್ನೊಂದು ಸಿದ್ಧಾಂತರೂಪಕ್ಕೆ ತಂದುಕೊಂಡು ಆಮೇಲೆ ಅದನ್ನು ಬುದ್ಧಿಪೂರ್ವಕವಾಗಿ, ಪ್ರಯೋಜನವನ್ನು ಮೂರುಹೊತ್ತೂ ಮನಸ್ಸಿನ ಮುಂದೆ ಇಟ್ಟುಕೊಂಡು, ಬರೆಯತೊಡಗಿದರೆ ರಸಾತ್ಮಕವಾದ ಕೃತಿ ಮೂಡಲಾರದು. ಹಾಲು ಕೊಡುವ ಹಸು ಹೊಲಗದ್ದೆ ಕಾಡುಮೇಡುಗಳಲ್ಲಿ ಹುಲ್ಲು ಹಸುರು ಚಿಗುರು ಸೊಪ್ಪು ಹಣ್ಣುಕಾಯಿ ಮೊದಲಾದುವುಗಳನ್ನು ಮೇದು, ತಿಂದು, ಕೊಟ್ಟಿಗೆಗೆ ಬಂದು, ಮಲಗಿ ಮೆಲುಕುಹಾಕಿ, ಹೊತ್ತರೆಯಲ್ಲಿ ತನ್ನ ಕರುವಿಗೆ ಕೆಚ್ಚಲು ಸೊರಸುವಂತೆ, ಸಾಹಿತಿಯಾದವನು ತನ್ನ ಬುದ್ಧಿಭಾವಮಯವಾದ ಚಿತ್ಕೋಶವನ್ನು ಅಧ್ಯಯನದಿಂದ, ವಿದ್ವಜ್ಜನ ಸಂಪರ್ಕದಿಂದ,

ಲೋಕಾನುಭವದಿಂದ, ಸ್ವಂತ ಚಿಂತನ ಧ್ಯಾನ ಸಾಧನಾದಿಗಳಿಂದ ಸುಪುಷ್ಟವನ್ನಾಗಿ, ಸುವಿಸ್ತೃತವನ್ನಾಗಿ, ಶ್ರೀಮಂತವನ್ನಾಗಿ ಮಾಡಿಕೊಳ್ಳಬೇಕು. ಆ ಅನುಭವವೆಲ್ಲವೂ ಸೇರಿ ಆತನ ಚೇತನೆಯಲ್ಲಿ ಒಂದು ಸಪ್ರಾಣ ಜ್ಯೋತಿಶ್ಶಕ್ತಿ, ಯಾವ ಗುಣವೂ ಅಲ್ಲದೆ ಎಲ್ಲ ಗುಣಗಳನ್ನೂ ಒಳಗೊಂಡು ಯಾವ ಗುಣವಾಗಿ ಬೇಕಾದರೂ ಮೈದೋರುವ ಸಾಮರ್ಥ್ಯವುಳ್ಳ ನಿರ್ಗುಣವಾದ ಒಂದು ಚಿತ್ ತಪಸ್ ಶಕ್ತಿ, ಆವಿರ್ಭಾವವಾಗುತ್ತದೆ. ಅದರಿಂದ ಹೊಮ್ಮುತ್ತದೆ ಉತ್ತಮ ಸಾಹಿತ್ಯ, ಉತ್ಕೃಷ್ಟ ರಸಕೃತಿ.

ಗೋವು ಮೇಯುವ ಯಾವುದೆ ಆಹಾರವಾಗಿರಲಿ ರಸಮಾರ್ಗಸಹಜವಾದ ಅದರ ಕೆಚ್ಚಲಿನಿಂದ ಬಂದಾಗಲೆ ಕ್ಷೀರವಾಗುತ್ತದೆ. ಬೇರೆ ದಾರಿಗಳಿಂದ ಬಂದಾಗ ಗೋಮಯವಾಗಬಹುದು, ವಮನವಾಗಬಹುದು, ನೆತ್ತರಾಗಬಹುದು, ಸ್ವೇದವಾಗಬಹುದು; ಆದರೆ ಅಮೃತವಾಗಲಾರದು. ಗೋಮಯಾದಿಗಳಿಗೂ ಬೇರೆ ಬೆಲೆ, ಬೇರೆ ಪ್ರಯೋಜನಗಳಿರುತ್ತವೆ. ಆದರೆ ಹಾಲಿನ ಬೆಲೆ ಹಾಗೂ ಅದರ ಪ್ರಯೋಜನವೇ ಬೇರೆ. ಹಾಗೆಯೆ ಸಾಹಿತಿಯ ತಾತ್ತ್ವಿಕ ಸಿದ್ಧಾಂತಗಳು ಏನೆ ಇರಲಿ, ಆತನ ರಾಜಕೀಯ ಸಾಮಾಜಿಕ ಮತೀಯ ಆರ್ಥಿಕಾದಿ ಅಭಿಪ್ರಾಯಗಳೂ ಆದರ್ಶಗಳೂ ಆಲೋಚನೆಗಳೂ ಏನೆ ಆಗಿರಲಿ, ಅವೆಲ್ಲವೂ ಗೋವಿನ ಆ ಪೀನಪಯೋಧರಸದೃಶವಾದ ಆತನ ರಸಮಯ ಚಿತ್ಕೋಶದಿಂದ ಹೊಮ್ಮಿ ಬಂದಲ್ಲದೆ ಅಮೃತವಸ್ತುವಾಗಿ ಪರಿಣಮಿಸುವುದಿಲ್ಲ. ಆ ರಸಮಯ ಚಿತ್ಕೋಶದಿಂದಲ್ಲದೆ ಬೇರೆ ದಾರಿಗಳಲ್ಲಿ ಬಂದುದೆಲ್ಲ ಗೋಮಯಾದಿಗಳಂತೆ ಅನ್ಯಪ್ರಯೋಜನಕಾರಿಗಳಾದ ಆರ್ಥಿಕ ರಾಜಕೀಯ ಮತೀಯಾದಿ ಭೂಮಿಕೆಗಳಲ್ಲಿ ಸಫಲಕೃತಿಗಳಾಗಬಹುದೆ ವಿನಾ ನಮಗೆ ‘ಯಂ ಲಬ್ಧ್ವಾ ಚಾಪರಂ ಲಾಭಂ ಮನ್ಯತೇ ನಾಧಿಕಂ ತತಃ’ ಎಂಬಂತಹ ಅಮೃತವೀಯಲಾರವು.

ಆದ್ದರಿಂದ ಎಲ್ಲ ವಿಧವಾದ ಲೋಕಾನುಭವಗಳನ್ನೂ ರಸಾನುಭವಕ್ಕೆ ಪರಿವರ್ತಿಸುವ ಚಿದ್ಯಂತ್ರರೂಪಿಯಾಗಿ ಸಾಹಿತ್ಯದ ಸರ್ವಾಧಾರಮೂಲದಂತಿರುವ ಸಾಹಿತಿ ಮೊದಲು ತನ್ನನ್ನು ತಾನೆ ರಚಿಸಿಕೊಳ್ಳುವುದು ಅತ್ಯಗತ್ಯ. ಉತ್ತಮ ಸಾಹಿತ್ಯಕೃತಿ ಒಂದು ಆಚಾರ್ಯಚೇತನದ ಜೀವಿತ ಸಮಸ್ತದ ಸಾರ ಸರ್ವಸ್ವ ಎಂದು ಮಹಾಕವಿಯೊಬ್ಬನು ವರ್ಣಿಸಿದ್ದಾನೆ. ಆ ಸಾರಸರ್ವಸ್ವ ಜೀವನ ಗೋಕ್ಷೀರೋಪಮ; ಲೋಕದ ಕಹಿಯೆಲ್ಲವನ್ನೂ ಪರಿಹರಿಸಿ ಅಥವಾ ಪರಿವರ್ತಿಸಿ ನಮ್ಮ ಹೃದಯಕ್ಕೆ ಅಮೃತಪಾನಮಾಡಿಸುತ್ತದೆ. ನಮ್ಮನ್ನು ಆಶಿಷ್ಠರನ್ನಾಗಿ ದೃಢಿಷ್ಠರನ್ನಾಗಿ ಬಲಿಷ್ಠರನ್ನಾಗಿ ಮೇಧಾವಿಗಳನ್ನಾಗಿ ಮಾಡುತ್ತದೆ. ‘ಯಸ್ಮಿನ್ ಸ್ಥಿತೋ ನ ದುಃಖೇನ ಗುರುಣಾಪಿ ವಿಚಾಲ್ಯತೇ’ ಎಂಬ ಆನಂದಸ್ಥಿತಿಗೆ ನಮ್ಮನ್ನು ಏರಿಸುತ್ತದೆ.

**"ಸಂಸಾರದ ವಿಷವೃಕ್ಷದಿ ಹಣ್ಣೆರಡಿವೆ ಅಮೃತೋಪ:**
**ಕಾವ್ಯಾಮೃತದಾಸ್ವಾದನ ಮೇಣ್ ಸಜ್ಜನ ಸಲ್ಲಾಪ!"**

ಎಂಬರ್ಥದ ಒಂದು ಸಂಸ್ಕೃತ ಸುಭಾಷಿತವೂ ಇದನ್ನೆ ಪ್ರತಿಪಾದಿಸಿದೆ.

ಸಂಸಾರವು ವಿಷವೃಕ್ಷದಂತಿದ್ದರು ಅದು ಆಸ್ವಾದ್ಯ; ಏಕೆಂದರೆ ಅದರಲ್ಲಿ ಎರಡಾದರೂ ಅಮೃತಸದೃಶವಾದ ಹಣ್ಣುಗಳಿವೆ: ಒಂದು ಸಜ್ಜನಸಲ್ಲಾಪ, ಇನ್ನೊಂದು ಕಾವ್ಯಾಮೃತಾಸ್ವಾದನ.

ಸಾಹಿತಿಗೆ ಕವಿಗೆ ರಸಋಷಿಗೆ ಅವಶ್ಯವಾಗಿ ಬೇಕಾಗಿರುವ ಈ ಸಿದ್ಧತೆ ವಾಸ್ತವವಾಗಿಯೂ ಒಂದು ದೀರ್ಘ ತಪಸ್ಯೆ. ಅವನ ಬದುಕಿನ ವೃಕ್ಷ ಮುಗಿಲತ್ತ ಆಕಾಶದೆತ್ತರಕ್ಕೆ ಬೆಳೆಯಬೇಕಾದರೆ ಅದರ ತಾಯಿಬೇರು ಆಳವಾಗಿ ಇಳಿದು, ಕವಲುಕವಲಾಗೊಡೆದು, ದಿಕ್ಕುದಿಕ್ಕಿಗೆ ಪ್ರಸರಿಸಿ, ಆಹಾರ ಸತ್ತ್ವಗಳನ್ನು ಹೀರಿಕೊಳ್ಳಬೇಕಾಗುತ್ತದೆ. ಆ ತಾಯಿಬೇರಿನ ಕವಲುಗಳಲ್ಲಿ ಮುಖ್ಯೋಪಕರಣಗಳಂತಿರುವ ಮೂರನ್ನು ನಾನು ನಮ್ಮ ಪ್ರವರ್ಧಮಾನ ತರುಣರ ಮುಂದಿಡಲು ಬಯಸುತ್ತೇನೆ. ಭಾರತೀಯವಾದ ಪ್ರಾಚೀನ ವಿದ್ಯಾಸಂಸ್ಕೃತಿಗಳ ಸಾರಗ್ರಾಹಿಯಾಗಿ ಒಂದು ಹೆಗ್ಗವಲು ಇಳಿಯಬೇಕಾಗುತ್ತದೆ; ಭಾರತೇತರವಾದ ಉದ್ದಾಮ ವಿದ್ಯಾಸಂಸ್ಕೃತಿಗಳ ಸಾರಗ್ರಾಹಿಯಾಗಿ ಇನ್ನೊಂದು; ಕರ್ಣಾಟಕದ ಭಾಷೆ ವಿದ್ಯೆ ಕಲೆ ಸಂಸ್ಕೃತಿ ಇತ್ಯಾದಿಗಳ ಸಾರ ಮಾತ್ರವನ್ನಲ್ಲದೆ ವಿವರಗಳನ್ನೆಲ್ಲ ಕೂಲಂಕಷವಾಗಿ ಅರಿಯುವ ಮತ್ತು ಅಭ್ಯಸಿಸುವ ಸಲುವಾಗಿ ಮತ್ತೊಂದು. ಈ ಮೂರನ್ನೂ ಸಾಧಿಸಲು ಸಹಾಯಕವಾಗಿ ಕನಿಷ್ಠಪಕ್ಷ ಮೂರಾದರೂ ಭಾಷೆಗಳು ಬೇಕಾಗುತ್ತವೆ. ಒಂದು ಅನಿವಾರ್ಯವಾಗಿಯೆ ಕನ್ನಡ; ಇನ್ನೊಂದು ಅವಶ್ಯಕವಾಗಿಯೆ ಸಂಸ್ಕೃತ; ಮತ್ತೊಂದು, ಸದ್ಯದ ನಮ್ಮ ಪರಿಸ್ಥಿತಿಯಲ್ಲಿ, ಇಂಗ್ಲಿಷ್. ಬಹುಶಃ ಕೆಲವು ಕಾಲದಮೇಲೆ, ವ್ಯಾಪ್ತಿಯಲ್ಲಿ ಶಕ್ತಿಯಲ್ಲಿ ಇಂಗ್ಲಿಷಿಗೆ ಹೆಗಲೆಣೆಯಾಗಿ ಪ್ರಪಂಚಕ್ಕೂ ನಮಗೂ ನಡುವೆ ಕಾಲುವೆಯಾಗಬಲ್ಲ ಹಾಗೂ ಸೇತುವೆಯಾಗಬಲ್ಲ ಇನ್ನಾವುದಾದರೂ ಒಂದು ವಿದೇಶೀಯ ಭಾಷೆ. ಕನ್ನಡದಲ್ಲಿ ಏನಾದರೂ ತೂಕವಾದ ಮತ್ತು ನಾಲ್ಕು ಕಾಲ ಬಾಳುವ ಸತ್ತ್ವವುಳ್ಳ ಸಾಹಿತ್ಯ ಸೃಷ್ಟಿ ಮಾಡಬೇಕೆಂದು ಬಯಸುವ ಯಾವ ತರುಣನಾಗಲಿ ಮೇಲೆ ಸೂಚಿಸಿದ ದೀಕ್ಷೆಯಿಂದ ದೂರನಾಗಿಯೂ ಕೃತಕೃತ್ಯನಾಗುತ್ತೇನೆ ಎಂದು ಭಾವಿಸಿದರೆ ಅದು ಅಸಾಧ್ಯ.

ಕೊನೆಯದಾಗಿ, ಸಾಹಿತ್ಯಸೃಷ್ಟಿಯ ಉತ್ಕರ್ಷಕ್ಕೂ ಸಹೃದಯ ರಸಾಸ್ವಾದನೆಗೂ ಅತ್ಯಾವಶ್ಯಕವಾಗಿರುವ ಒಂದು ವಿಚಾರದತ್ತ ತಮ್ಮ ಗಮನ ಸೆಳೆಯಲು ಬಯಸುತ್ತೇನೆ. ನಮ್ಮ ಸಾಹಿತ್ಯ ತನ್ನ ಆಧುನಿಕ ಕಾಲಾವಧಿಯಲ್ಲಿ ನಾನಾಮುಖವಾಗಿ ಬೆಳೆದಿದೆ ಎಂಬುದೇನೊ ನಿಜ; ಆದರೆ ಸಾಹಿತ್ಯವಿಮರ್ಶೆಯ ಹಾಗೂ ಕಾವ್ಯಮೀಮಾಂಸೆಯ ಮುಖದಲ್ಲಿ ಮಾತ್ರ ಅದು ಇತರ ಮುಖಗಳಲ್ಲಿ ಮುಂದುವರಿದಂತೆ ಬೆಳೆದಿಲ್ಲ. ಈಗಾಗಲೆ ಸೃಷ್ಟಿಯಾಗಿರುವ ಸಾಹಿತ್ಯದ ಸ್ವರೂಪವನ್ನು ಜನತೆಗೆ ನಿರೂಪಿಸುವುದಕ್ಕೂ ಮುಂದೆ ಸೃಷ್ಟಿಯಾಗಲಿರುವ ಸಾಹಿತ್ಯವನ್ನು ಜನತಾಹೃದಯದ ದೃಷ್ಟಿಯಿಂದ ರೂಪಿಸುವುದಕ್ಕೂ ವಿಮರ್ಶೆ ನೆರವಾಗುತ್ತದೆ. ಸಾಹಿತ್ಯದ ಸ್ವರೂಪ, ಸಾಹಿತ್ಯದ ಉದ್ದೇಶ, ಸಾಹಿತ್ಯದ ಪ್ರಯೋಜನ, ಸಾಹಿತ್ಯಪ್ರಕಾರಗಳು, ಸಾಹಿತ್ಯಸತ್ತ್ವದ ವಿವಿಧಾಂಗಗಳು ಮೊದಲಾದ ಮೂಲತತ್ತ್ವಗಳನ್ನು ಕುರಿತು ಜಿಜ್ಞಾಸೆ ಸಾಹಿತಿಯ ದೃಷ್ಟಿ ರಚನೆಗೆ ಸಹಕಾರಿಯಾಗುತ್ತದೆ. ವಾಚಕನ ಅಥವಾ ಸಹೃದಯನ ದಿಕ್ಕಿನಿಂದಲೂ ಸಾಹಿತ್ಯವಿಮರ್ಶೆ ಆಧುನಿಕ ಸಾಹಿತ್ಯದ

ಪರಿಚಯ ಮಾಡಿಕೊಡುವುದು ಅತ್ಯಗತ್ಯವಾಗಿದೆ. ಯಾರ ಅಭಿರುಚಿ ಹಳೆಯ ರೀತಿಯ ಸುಪರಿಚಿತ ಸಾಹಿತ್ಯ ಪ್ರಕಾರಗಳಿಂದಲೆ ಇದುವರೆಗೂ ತೃಪ್ತಿಪಡೆಯುತ್ತ ಬಂದಿದೆಯೊ ಅವರಿಗೆ ಹೊಸದು ಮೊದಮೊದಲು ವಿಲಕ್ಷಣವಾಗಿ ಅಗ್ರಾಹ್ಯವಾಗುತ್ತದೆ. ಆದರೆ ಹೊಸದರಲ್ಲಿ ಏನಾದರೂ ನಿಜವಾದ ಸತ್ತ್ವಾಂಶ ರಸಾಂಶಗಳು ಇರುವ ಪಕ್ಷಕ್ಕೆ ಅದನ್ನು ತೋರಿಸಿಕೊಟ್ಟು ಅವರ ಅಭಿರುಚಿಯನ್ನು ಅಕೃಪಣವನ್ನಾಗಿ ಮಾಡಬೇಕಾದ ಕರ್ತವ್ಯ ವಿಮರ್ಶೆಯದು.

ಅಷ್ಟೇ ಅಲ್ಲ. ಹಳೆಯದರ ಹಳೆಯ ಪರಿಚಯವನ್ನೂ ಹೊಸತು ಮಾಡಿ ಕೊಡುವ ಮತ್ತೊಂದು ಮಹತ್ತರ ಕಾರ್ಯ ಸಾಹಿತ್ಯಮೀಮಾಂಸಕನ ಮುಂದೆ ಗುರುತರವಾಗಿದೆ. ನಮ್ಮ ಕಾವ್ಯ ಪುರಾಣಗಳನ್ನು ಜನತೆ ಇದುವರೆಗೆ ಒಂದು ಶ್ರದ್ಧೆಯಿಂದ, ಒಂದು ಭಕ್ತಿಯಿಂದ, ಒಂದು ಗೌರವದಿಂದ, ಒಂದು ಪ್ರೀತಿಯಿಂದ ಓದುತ್ತಾ ಆಸ್ವಾದಿಸುತ್ತಾ ಪೂಜಿಸುತ್ತಾ ಬಂದಿದೆ. ಆ ಪವಿತ್ರ ಕಥೆಗಳಲ್ಲಿ ಬರುವ ಕಥಾನಾಯಕಾದಿ ಪಾತ್ರಗಳ ವಿಚಾರದಲ್ಲಿಯೂ ಅವರು ನಡೆದ ನಡೆ, ನುಡಿದ ನುಡಿ, ಮಾಡಿದ ಕೆಲಸ, ಬೋಧಿಸಿದ ಉಪದೇಶ ಇತ್ಯಾದಿಗಳ ವಿಚಾರಲ್ಲಿಯೂ ಸಂಪ್ರದಾಯಸಿದ್ಧವಾದ ಒಂದು ಸ್ವೀಕಾರಬುದ್ಧಿ ಇದುವರೆಗೂ ನಮ್ಮ ಜನಸಾಮಾನ್ಯರಲ್ಲಿ ಅಸ್ಖಲಿತವಾಗಿತ್ತು. ಆದರೆ ಈಗ ವೈಜ್ಞಾನಿಕವಾದ ಒಂದು ವಿಚಾರದೃಷ್ಟಿ ಉದ್ದೀಪನವಾಗುತ್ತಿದೆ. ಎಲ್ಲ ನಂಬುಗೆಗಳನ್ನೂ, ಅವು ಎಷ್ಟೇ ಪ್ರಾಚೀನವಾಗಿರಲಿ, ಎಷ್ಟೇ ಪೂಜ್ಯವಾಗಿರಲಿ, ವಿಚಾರ ನಖದಿಂದ ಕೆರೆದುನೋಡುವ ಒಂದು ಸ್ವತಂತ್ರಮತಿ ಜನಸಾಮಾನ್ಯರಲ್ಲಿಯೂ ತನ್ನ ವೈಜ್ಞಾನಿಕ ಹಸ್ತಪ್ರಸಾರ ಮಾಡುತ್ತಿದೆ. ಆ ಕಥೆಗಳನ್ನೂ ಆ ಕಥೆಗಳಲ್ಲಿ ಬರುವ ದೈವೀಪಾತ್ರಗಳನ್ನೂ ಅಲ್ಲಿ ಸಂಭವಿಸುವ ಅದ್ಭುತ ಘಟನೆಗಳನ್ನೂ ನಂಬಲು ಆವಶ್ಯಕವಾದ ಒಂದು ಶಿಶುಸಹಜ ಮುಗ್ಧತೆ ಜನರಿಂದ ಮಾಯವಾಗುತ್ತಿದೆ. ಆ ಮೌಢ್ಯಭಂಗಿಯನ್ನು ನಾವು ಶ್ರದ್ಧೆ ಎಂದು ಕರೆದರೂ ದಿನ ದಿನವೂ ಬೆಳಗುತ್ತಿರುವ ವೈಜ್ಞಾನಿಕ ದೃಷ್ಟಿಯ ವಿಚಾರದೀಪ್ತಿಯ ಮುಂದೆ ಅದಕ್ಕೆ ಉಳಿಗತಿಯಿಲ್ಲವೆಂದು ತೋರುತ್ತದೆ. ವಿಜ್ಞಾನಬುದ್ಧಿಯ ಬಿಸಿಲಿನಲ್ಲಿ ಆ ಶ್ರದ್ಧೆ ಬತ್ತಿಹೋದಮೇಲೆ ಜನರು ಆ ಕಥೆಗಳನ್ನೂ ಆ ಪಾತ್ರಗಳನ್ನೂ ಆ ಘಟನೆಗಳನ್ನೂ ಕವಿಕಲ್ಪಿತ ಮಿಥ್ಯೆಗಳೆಂದೂ ಬರಿಯ ಕಲ್ಪನಾವಿಲಾಸದ ಒಂದು ಸೊಗಸಿಗಾಗಿ ಓದತಕ್ಕವೆಂದೂ ಅವುಗಳನ್ನೆಲ್ಲ ಈಸೋಫನ ಕತೆಗಳನ್ನೆಂತೊ ಅಂತೆ ಬಾಲಕರಿಗಾಗಿ ಮೀಸಲಿಡುತ್ತಾರೆ. ಹಾಗೇನಾದರೂ ಆದರೆ ಮಾನವ ಕುಲಕ್ಕೆ ಒಂದು ದೊಡ್ಡ ಅಪಘಾತ ಸಂಭವಿಸಿದಂತಾಗುತ್ತದೆ. ಆದರೆ ನಾವು ಈಗ ಹೋಗುತ್ತಿರುವ ಹಾದಿಯಲ್ಲಿಯೆ ಹೋಗುತ್ತಿದ್ದರೆ ಆ ಅಪಘಾತ ಅನಿವಾರ್ಯ. ಅಂತಹ ಅಪಘಾತದಿಂದ ನಮ್ಮ ಅನರ್ಘ್ಯರಸಭಂಡಾರದ ಕೃತಿಗಳನ್ನು ರಕ್ಷಿಸುವುದೆಂತು? ಅವುಗಳ ರಸಕೋಶದಲ್ಲಿರುವ ದರ್ಶನ ಜ್ಯೋತಿಯೂ ಶಕ್ತಿಯೂ ಮಾನವ ಹೃದಯಕ್ಕವತರಿಸಿ, ಅಲ್ಲಿ ಸುಪ್ತವಾಗಿರುವ ದೈವೀಪ್ರಜ್ಞೆಯ ಉನ್ಮೀಲನಕ್ಕೂ ಉನ್ಮೇಷನಕ್ಕೂ ಅವಕಾಶವೊದಗುವಂತೆ ಮಾಡುವುದು ಹೇಗೆ? ಭಾಷೆಗೆ ಲೋಕೋಪಯೋಗ ಮತ್ತು ಭಾವೋಪಯೋಗ ಎಂದು ಎರಡು ರೀತಿಯ ಪ್ರಯೋಜನಗಳಿವೆ ಎಂಬ ತತ್ತ್ವವನ್ನು

ಪ್ರತಿಪಾದಿಸಿ ಅವುಗಳಲ್ಲಿರಬಹುದಾದ ಮೌಢ್ಯಾಂಶವನ್ನು ತೊರೆದು ಜ್ಞಾನಾಂಶ ರಸಾಂಶ ದರ್ಶನಾಂಶಗಳನ್ನು ರಕ್ಷಿಸುವುದು ಸಾಧ್ಯವೆ? ಸಂಕೇತ, ಪ್ರತೀಕ ಮತ್ತು ಪ್ರತಿಮಾ ಈ ಮೂರಕ್ಕೂ ಇರುವ ವ್ಯತ್ಯಾಸವನ್ನು ಮನಶ್ಶಾಸ್ತ್ರೀಯವಾಗಿ ವಿವರಿಸಿ ಅವುಗಳಲ್ಲಿರುವ ನಿತ್ಯಾಂಶವನ್ನು ಸಹೃದಯರು ಗ್ರಹಿಸುವಂತೆ ಮಾಡಲು ಸಾಧ್ಯವೆ? ಪ್ರತಿಮಾವಿಧಾನದ ಮತ್ತು ದರ್ಶನ ಧ್ವನಿಯ ಸಿದ್ಧಾಂತಗಳನ್ನು ಮನೋವಿಜ್ಞಾನದ ಆಧಾರದ ಮೇಲೆ ತತ್ತ್ವಶಾಸ್ತ್ರೀಯವಾಗಿ ಪ್ರತಿಪಾದಿಸಿ ಆ ಮಹಾಕಾವ್ಯಪುರಾಣಗಳ ಕಥಾಪ್ರತಿಮೆಗಳಲ್ಲಿ ಕಾಲ ದೇಶ ಮತಾದಿ ಬದ್ಧವಾದ ನಶ್ವರಾಂಶವನ್ನು ಮೀರಿ ಸಾರ್ವದೇಶಿಕ ಮತ್ತು ಸಾರ್ವಕಾಲಿಕವಾದ ನಿತ್ಯಸತ್ಯಗಳಿರುವುದನ್ನು ಸಹೃದಯ ಹೃದಯ ವೇದ್ಯವನ್ನಾಗಿ ಮಾಡಲೋಸುಗ ನವೀನದೃಷ್ಟಿಗೂ ನವದರ್ಶನಕ್ಕೂ ಹೊಂದಿಕೊಳ್ಳುವಂತೆ, ಆದರೆ ಮೂಲದ ಆಶಯಕ್ಕೂ ಅಲ್ಲಿಯ ಸೌಂದರ್ಯಕ್ಕೂ ಊನ ಬರದಂತೆ, ಅವುಗಳನ್ನು ಪೂರ್ಣವಾಗಿಯಾಗಲಿ ಆಂಶಿಕವಾಗಿಯಾಗಲಿ ಪರಿವರ್ತಿಸಬಹುದೆ?

ಇಂತಹ ಅನೇಕ ಪ್ರಶ್ನೆಗಳೂ ಸಮಸ್ಯೆಗಳೂ ನಮ್ಮೆದುರು ನಿಲ್ಲುತ್ತವೆ. ವಿಮರ್ಶೆ ಅವನ್ನೆಲ್ಲ ಎದುರಿಸಬೇಕಾಗುತ್ತದೆ. ಅವಕ್ಕೆಲ್ಲ ಪರಿಹಾರ ಹುಡುಕಬೇಕಾಗುತ್ತದೆ. ಸಾಧ್ಯಾಸಾಧ್ಯತೆಯನ್ನೂ ಔಚಿತ್ಯವಿವೇಕಗಳನ್ನೂ ವಿಚಾರ ಪೂರ್ವಕವಾಗಿ ಪರಿಶೀಲಿಸಬೇಕಾಗುತ್ತದೆ. ಅಂತಹ ಬಹುಮುಖವಾದ ಮತ್ತು ವ್ಯಾಪಕವಾದ ಕಾರ್ಯನಿರ್ವಹಣೆಯಲ್ಲಿ ವಿಮರ್ಶಕನಿಗೆ ಒಂದು ಗಂಭೀರವಾದ ಮತ್ತು ವಿಶಾಲವಾದ ಪೂರ್ವಸಿದ್ಧತೆ ಬೇಕಾಗುತ್ತದೆ. ನಾನಾ ಸಾಹಿತ್ಯಗಳ ತಲಸ್ಪರ್ಶಿಯಾದ ಪರಿಚಯದ ಜೊತೆಗೆ ಮನಶ್ಶಾಸ್ತ್ರ, ತತ್ತ್ವಶಾಸ್ತ್ರ ಮತ್ತು ಯೋಗವಿಜ್ಞಾನಗಳೂ ಆತನಿಗೆ ನೆರವಾಗುತ್ತವೆ. ಕುಶಾಗ್ರ ಬುದ್ಧಿಯ ನಮ್ಮ ಪ್ರಾಚೀನ ಆಲಂಕಾರಿಕರ ಭಾರತೀಯ ಕಾವ್ಯಮೀಮಾಂಸೆಯ ಜೊತೆಗೆ ವಿಪುಲವಾಗಿ ಮತ್ತು ಪ್ರೌಢವಾಗಿ ಬೆಳೆದಿರುವ ಪಾಶ್ಚಾತ್ಯ ಸಾಹಿತ್ಯವಿಮರ್ಶೆಯ ಮತ್ತು ಕಾವ್ಯಮೀಮಾಂಸೆಯ ಜ್ಞಾನವೂ ನೆರೆಯಬೇಕಾಗುತ್ತದೆ. ಮುಂದಿನ ನಮ್ಮ ಸಾಹಿತ್ಯಜೀವನದಲ್ಲಿ ಅಧಿಕಾರಿಯಾದ ಅಂತಹ ವಿಮರ್ಶಕೋತ್ತಮನಿಗೆ ಒಂದು ಮಹತ್ತಾದ ಸ್ಥಾನವಿದೆ. ಆ ಸ್ಥಾನ ಎಂತಹ ಮಹೋನ್ನತಕವಿಯ ಸ್ಥಾನಕ್ಕೇನೂ ಕೀಳಾದುದಲ್ಲ.

ಮಹನೀಯರೆ, ಮಹಿಳೆಯರೆ, ಮಿತ್ರರೆ, ಈ ದೀರ್ಘ ಭಾಷಣಕ್ಕಾಗಿ ತಮ್ಮ ಕ್ಷಮೆ ಬೇಡುತ್ತೇನೆ. ತಮ್ಮ ತಾಳ್ಮೆಯನ್ನು ಇನ್ನೂ ಹೆಚ್ಚು ಶೋಷಿಸುವ ಸಾಹಸಕ್ಕೆ ನಾನು ಕೈ ಹಾಕುವುದಿಲ್ಲ. ಈ ಸಂಧರ್ಭದಲ್ಲಿ ಆವಶ್ಯಕವೆಂದು ನನಗೆ ತೋರಿದ ಕೆಲವು ಮೂಲಸೂತ್ರರೂಪವಾದ ವಿಷಯಗಳನ್ನು ಕುರಿತು ಸಾಧ್ಯವಾದಷ್ಟು ಮಟ್ಟಿಗೆ ಸಂಗ್ರಹಗೈದು ಪರಿಶೀಲನೆಗಾಗಿ ತಮ್ಮ ಮುಂದೆ ಇಟ್ಟಿದ್ದೇನೆ.

ಈ ಗೌರವದ ಸ್ಥಾನಕ್ಕೆ ನನ್ನನ್ನು ಆರಿಸಿ ಆಶೀರ್ವದಿಸಿರುವುದಕ್ಕಾಗಿ ವಾಗ್ದೇವಿಯ ಮಕ್ಕಳಾಗಿರುವ ನನ್ನ ಸಹೋದರರೆಲ್ಲರಿಗೂ ನಮಸ್ಕರಿಸುವುದರ ಮೂಲಕ ಆ ತಾಯಿಗೆ ನನ್ನ ಅನಂತಾನಂತ ಸಾಷ್ಟಾಂಗ ಪ್ರಣಾಮಗಳನ್ನು ನಿವೇದಿಸುತ್ತೇನೆ. ಅಮ್ಮ ನನ್ನಲ್ಲಿ

ಪ್ರಚೋದಿಸಿರುವ ಈ 'ಅನಿಕೇತನ' ಪ್ರಾರ್ಥನೆ ನಮ್ಮೆಲ್ಲರ ಅಭೀಪ್ಸೆಯಾಗಿ ಮೇಲೇರಿ ಆಕೆಯ ದಿವ್ಯಚರಣಗಳನ್ನು ಮುಟ್ಟಿ ಪೂಜಿಸುವ ಪುಷ್ಪರಾಶಿಯಾಗಲಿ ಎಂದು ಹಾರೈಸುತ್ತೇನೆ:

ಓ ನನ್ನ ಚೇತನ,
ಆಗು ನೀ ಅನಿಕೇತನ!
ರೂಪ ರೂಪಗಳನು ದಾಟಿ
ನಾಮ ಕೋಟಿಗಳನು ಮೀಟಿ,
ಎದೆಯ ಬಿರಿಯೆ ಭಾವದೀಟಿ,
ಓ ನನ್ನ ಚೇತನ,
ಆಗು ನೀ ಅನಿಕೇತನ!
ನೂರು ಮತದ ಹೊಟ್ಟ ತೂರಿ,
ಎಲ್ಲ ತತ್ತ್ವದೆಲ್ಲೆ ಮೀರಿ,
ನಿರ್ದಿಗಂತವಾಗಿ ಏರಿ,
ಓ ನನ್ನ ಚೇತನ,
ಆಗು ನೀ ಅನಿಕೇತನ!
ಎಲ್ಲಿಯೂ ನಿಲ್ಲದಿರು;
ಮನೆಯನೆಂದೂ ಕಟ್ಟದಿರು;
ಕೊನೆಯನೆಂದೂ ಮುಟ್ಟದಿರು;
ಓ ಅನಂತವಾಗಿರು!
ಓ ನನ್ನ ಚೇತನ,
ಆಗು ನೀ ಅನಿಕೇತನ!
ಅನಂತ ತಾನ್ ಅನಂತವಾಗಿ
ಆಗುತಿಹನೆ ನಿತ್ಯಯೋಗಿ;
ಅನಂತ ನೀ ಅನಂತವಾಗು;
ಆಗು, ಆಗು, ಆಗು, ಆಗು!
ಓ ನನ್ನ ಚೇತನ,
ಆಗು ನೀ ಅನಿಕೇತನ!

# ನಮಗೆ ಬೇಕಾಗಿರುವ ಇಂಗ್ಲಿಷ್

ಇಂದು ನಮ್ಮ ದೇಶದ ಮನಸ್ಸನ್ನ ಕುದಿಸುತ್ತಿರುವ ಸಮಸ್ಯೆಗಳಲ್ಲಿ ಭಾಷಾ ಸಮಸ್ಯೆಯೂ ಒಂದು ಪ್ರಮುಖಸ್ಥಾನ ಪಡೆದಿದೆ. ಪ್ರಾದೇಶಿಕ ದೃಷ್ಟಿಯಿಂದ, ಅಖಿಲ ಭಾರತೀಯ ದೃಷ್ಟಿಯಿಂದ, ಅಂತರರಾಷ್ಟ್ರೀಯ ದೃಷ್ಟಿಯಿಂದ, ಜ್ಞಾನಾರ್ಜನೆಯ ದೃಷ್ಟಿಯಿಂದ, ವಿದ್ಯಾಪ್ರಸಾರದ ದೃಷ್ಟಿಯಿಂದ, ಸಂಸ್ಕೃತಿಯ ದೃಷ್ಟಿಯಿಂದ, ನಾನಾ ದೃಷ್ಟಿಗಳಿಂದ ವಿವಿಧಾಭಿಪ್ರಾಯಗಳು ರಣರಂಗದಲ್ಲಿ ತುಮುಲಯುದ್ಧ ಹೂಡಿದಂತಿದೆ. ಆಯಾ ಪ್ರದೇಶದ ದೇಶಭಾಷೆಗೆ ಅಲ್ಲಲ್ಲಿ ಪ್ರಾಧಾನ್ಯವಿರಬೇಕೆನ್ನುವವರು ಕೆಲವರು; ಅಖಿಲ ಭಾರತೀಯವೆಂದು ಒಪ್ಪಿಕೊಂಡಿರುವ ಸಂಯುಕ್ತಭಾಷೆಗೆ ಪ್ರಥಮ ಸ್ಥಾನವಿರಬೇಕು ಎನ್ನುವವರು ಕೆಲವರು. ಸರ್ವ ವಿದ್ಯಾಶಾಸ್ತ್ರಗಳಿಗೂ ಆಗರವಾಗಿ, ವ್ಯಾವಹಾರಿಕ ದೃಷ್ಟಿಯಿಂದಲೂ ಅಂತರರಾಷ್ಟ್ರೀಯವಾಗಿರುವ ಇಂಗ್ಲಿಷ್ ಭಾಷೆಗೆ ಪ್ರಥಮ ಸ್ಥಾನವಿರಬೇಕೆಂದು ಕೆಲವರು.

ಈ ವಿಚಾರಮಂಥನ ನಿನ್ನೆಮೊನ್ನೆಯದಲ್ಲ. ಸ್ವಯಂ ಗಾಂಧೀಜಿಯೆ ಇವುಗಳನ್ನು ಕೂಲಂಕಷವಾಗಿ ಚರ್ಚಿಸಿ, ತಮ್ಮ ನಿರ್ಧಾರಗಳನ್ನು ಸಕಾರಣವಾಗಿ ವಾದಿಸಿ, ನಾಡಿನ ಮುಂದೆ ಇಟ್ಟು ಹೋಗಿದ್ದಾರೆ. ಅಲ್ಲದೆ ದೇಶ ವಿದೇಶಗಳ ತಜ್ಞರೂ ಮನಃಶಾಸ್ತ್ರೀಯವಾಗಿ ಪರಿಶೀಲಿಸಿ ತಮ್ಮ ಸಿದ್ಧಾಂತಗಳನ್ನು ಮುಂದಿಟ್ಟಿದ್ದಾರೆ. ನಾಡಿನ ಅಗ್ರಗಣ್ಯ ದೇಶಭಕ್ತರೂ ತಮ್ಮ ನಿಷ್ಪಕ್ಷಪಾತವಾದ ನಿರ್ಣಯಗಳನ್ನು ಆಗಿಂದಾಗ್ಗೆ ಘೋಷಿಸುತ್ತಾ ಬಂದಿದ್ದಾರೆ. ಈ ವಿಚಾರವಾಗಿ ಇನ್ನು ಸಾಕು ಎಂಬಷ್ಟು ಚರ್ಚೆ ನಡೆದಿದೆ. ಈ ಸಮಸ್ಯೆ ವಾದ ಪ್ರತಿವಾದದ ಎಲ್ಲೆಯನ್ನು ದಾಟಿ ಇತ್ಯರ್ಥದ ಸೀಮೆಯನ್ನು ಮುಟ್ಟಿದೆ ಎಂದು ಹೇಳಬಹುದು.

ಒಟ್ಟಿನಲ್ಲಿ ಆ ಇತ್ಯರ್ಥವನ್ನು ಹೀಗೆ ವಿವರಿಸಬಹುದು. ಆಯಾ ಪ್ರಾಂತಗಳಲ್ಲಿ ಆಯಾ ಪ್ರಾದೇಶಿಕ ಭಾಷೆಗಳಿಗೆ ಪ್ರಥಮಸ್ಥಾನ ಸಲ್ಲಬೇಕು. ಅಂತರ ಪ್ರಾಂತೀಯ ವ್ಯವಹಾರ ದೃಷ್ಟಿಯಿಂದ ಮತ್ತು ಕೇಂದ್ರದ ಆಡಳಿತ ದೃಷ್ಟಿಯಿಂದ ಅಖಿಲ ಭಾರತೀಯವಾದ ಸಂಯುಕ್ತ ಭಾಷೆಗೆ ಎರಡನೆ ಸ್ಥಾನ ಕೊಡಬೇಕು. ಅಂತರರಾಷ್ಟ್ರೀಯವಾದ ಭಾಷೆಗೆ ಅಥವಾ ಭಾಷೆಗಳಿಗೆ ಐಚ್ಛಿಕ ಸ್ಥಾನ ಕೊಡಬೇಕು. ಆಯಾ ಪ್ರಾಂತಗಳಲ್ಲಿ ಆಯಾ ದೇಶಭಾಷೆಗಳೆ ಆಡಳಿತ ಭಾಷೆಗಳಾಗಿರಬೇಕು. ಅಲ್ಲಿಯ ಶಿಕ್ಷಣವೆಲ್ಲ ಎಲ್ಲ ಮಟ್ಟಗಳಲ್ಲಿಯೂ ದೇಶ ಭಾಷಾ ಮಾಧ್ಯಮದಲ್ಲಿಯೆ ಸಾಗಬೇಕು.

ಈ ಸ್ಥೂಲವಿವರಣೆ ಬಹುಜನ ಸಮ್ಮತವಾಗಿರುವುದರಲ್ಲಿ ಸಂದೇಹವಿಲ್ಲ.

ಆದರೆ ಭಾಷೆಗಳ ಸ್ಥಾನವನ್ನು ಹೀಗೆ ನಿರ್ಣಯಿಸುವಾಗ ಅನೇಕರು ತಪ್ಪು ಅಭಿಪ್ರಾಯಗಳ ದೆಸೆಯಿಂದ ಆತಂಕಗೊಳ್ಳುತ್ತಾರೆ. ಅದರಲ್ಲಿಯೂ ಇಂಗ್ಲಿಷನ್ನು ಚೆನ್ನಾಗಿ

ಅಭ್ಯಾಸಮಾಡಿ ಅದರ ಸಾಹಿತ್ಯವನ್ನು ತಣಿಯುಂಡು ಸವಿದು, ಅದರ ವೈಭವಕ್ಕೂ ವೈಶಾಲ್ಯಕ್ಕೂ ಮಾರುಹೋದವರಿಗೆ ಸಹಿಸಲಸಾಧ್ಯವಾದ ಸಂಕಟವಾಗುತ್ತದೆ. ಇಂಗ್ಲಿಷ್ ಭಾಷೆಯ ಮೂಲಕವೇ ತಮ್ಮ ಲೌಕಿಕ ಅಭ್ಯುದಯವನ್ನು ಸಾಧಿಸಿಕೊಂಡವರಿಗಂತೂ ಆ ಭಾಷೆಯಿಂದಲ್ಲದೆ ಬೇರೆ ಯಾವ ಭಾಷೆಯಿಂದಲೂ ಅಭ್ಯುದಯ ಸಾಧ್ಯವೇ ಇಲ್ಲ ಎಂಬಂತೆ ಭಾಸವಾಗುತ್ತದೆ. ನಮ್ಮ ಪ್ರಾಚೀನವಾದ ದೇಶಭಾಷೆಗಳ ಸಾಹಿತ್ಯದ ಅಥವಾ ಪ್ರಪ್ರಾಚೀನವಾದ ಸಂಸ್ಕೃತ ಸಾಹಿತ್ಯದ ವೈಭವ ವೈಶಾಲ್ಯಗಳ ಪರಿಚಯವಿಲ್ಲದೆ ಇರುವ ಇಂಗ್ಲಿಷ್ ವಿದ್ವಾಂಸರಿಗಂತೂ ಇಂಗ್ಲಿಷ್ ಭಾಷೆಯನ್ನು ಈ ಗಣ್ಯ ಸ್ಥಾನದಿಂದ ಅಲುಗಿಸಿದರೆ ಭರತಖಂಡವೆಲ್ಲ ಕಗ್ಗತ್ತಲೆಯಲ್ಲಿ ಅದ್ದಿ ಹೋಗುತ್ತದೆ ಎಂದೇ ನಂಬಿಕೆ. ಅಂಥವರ ಭಯಾಶಂಕೆಗಳ ಸಾಧಾರ ನಿರಾಧಾರ ಸತ್ಯಾಸತ್ಯತೆಗಳೇನೇ ಇರಲಿ ಅದರ ವಿಶ್ಲೇಷಣಕ್ಕೆ ಹೋಗದೆ, ಇನ್ನು ಮುಂದೆ ಇಂಗ್ಲಿಷಿಗೆ ಭಾಷಾದೃಷ್ಟಿಯಿಂದ, ಸಾಹಿತ್ಯದೃಷ್ಟಿಯಿಂದ ನಮ್ಮ ದೇಶದಲ್ಲಿ ಇರಬೇಕಾದ ಸ್ಥಾನವೇನು? ಅದು ಯಾವ ರೂಪದಲ್ಲಿ, ಯಾವ ಪ್ರಮಾಣದಲ್ಲಿ, ಎಷ್ಟರಮಟ್ಟಿಗೆ, ಎಷ್ಟು ಜನಕ್ಕೆ ಬೇಕಾಗುತ್ತದೆ, ಎಂಬೆಲ್ಲ ವಿಷಯಗಳನ್ನು ಕುರಿತು ಆಲೋಚಿಸುತ್ತೇವೆ.

ದೇಶಭಾಷೆಗೆ ಪ್ರಥಮಸ್ಥಾನ ಸಲ್ಲಬೇಕು. ದೇಶಭಾಷೆ ಶಿಕ್ಷಣ ಮಾಧ್ಯಮವಾಗಬೇಕು ಎಂದೊಡನೆ ಕೆಲವರು ಇಂಗ್ಲಿಷ್ ಭಾಷಾಸಾಹಿತ್ಯಗಳಿಗೆ ಸಂಪೂರ್ಣ ಅರ್ಧಚಂದ್ರ ಪ್ರಯೋಗವಾಗಿಬಿಡುತ್ತದೆ ಎಂದು ವ್ಯಾಖ್ಯಾನಮಾಡಿ ದೇಶಭಾಷಾವಾದಿಗಳನ್ನು ಸ್ವಭಾಷಾಭ್ರಾಂತರೆಂದೂ ವಿದ್ಯಾಸಂಸ್ಕೃತಿ ವಿದ್ವೇಷಿಗಳೆಂದೂ ಸಂಕುಚಿತ ಮನೋಭಾವದವರೆಂದೂ ಟೀಕಿಸಿ ಖಂಡಿಸುತ್ತಾರೆ. ಇಂಗ್ಲಿಷ್ ಮೋಹಿಗಳ ಈ ಪ್ರಥಮಭ್ರಾಂತಿ ಮೊದಲು ನಿರಸನಗೊಳ್ಳಬೇಕು. ಇಂಗ್ಲಿಷ್ ಭಾಷೆಯ ಯೋಗ್ಯತೆ, ಅದರ ವ್ಯಾಪ್ತಿ, ಅದರಿಂದೊದಗುವ ಪ್ರಜ್ಞಾವೈಶಾಲ್ಯ, ಅದು ನಮ್ಮಲ್ಲಿ ಪ್ರಚೋದಿಸಿರುವ ವಿಚಾರಬುದ್ಧಿ, ಅದರಿಂದ ಮುಂದೆ ಎಂದೆಂದಿಗೂ ನಮಗೆ ಲಭಿಸಲಿರುವ ಸಂಪರ್ಕಸಹಾಯ ಮೊದಲಾದವುಗಳನ್ನೆಲ್ಲ ಅರಿತವರಾರೂ ಬ್ರಿಟಿಷರನ್ನು ಓಡಿಸಿದಂತೆ ಇಂಗ್ಲಿಷ್ ಭಾಷೆಯನ್ನೂ ಓಡಿಸಬೇಕೆಂದು ಹೇಳುವ ಅವಿವೇಕಕ್ಕೆ ಹೋಗಲಾರರು. ಹಾಗೆ ಹೇಳುವವರನ್ನು ಪ್ರಚ್ಛನ್ನ ದೇಶದ್ರೋಹಿಗಳೆಂದು ಕರೆಯಬೇಕಾಗುತ್ತದೆ. ಆದ್ದರಿಂದ ಇಂಗ್ಲಿಷ್ ನಮ್ಮೊಡನೆ ಉಳಿಯಬೇಕೆಂಬುದರಲ್ಲಿ ಭಿನ್ನಾಭಿಪ್ರಾಯವಿರುವುದಕ್ಕೆ ಅವಕಾಶವೇ ಇಲ್ಲ.

ಇಂಗ್ಲಿಷ್ ಉಳಿಯಬೇಕೆಂದು ನಿಶ್ಚಯಿಸಿದಮೇಲೆ ನಮ್ಮ ಮುಂದೆ ಏಳುವ ಪ್ರಶ್ನೆ: ಅದು ಯಾವರೂಪದಲ್ಲುಳಿಯಬೇಕು? ಯಾವ ಪ್ರಮಾಣದಲ್ಲಿ? ಯಾರಿಗೆ? ಏತಕ್ಕೆ? ಯಾವ ಯಾವ ಉದ್ದೇಶಗಳಿಗಾಗಿ?

ಇಂಡಿಯಾಕ್ಕೆ ಇಂಗ್ಲಿಷ್ ಬಂದದ್ದು ಮುಖ್ಯವಾಗಿ ರಾಜಕೀಯ ಕಾರಣಗಳಿಂದಾಗಿ. ಅದನ್ನು ಅಧಿಕಾರಿಭಾಷೆಯೆಂದು ಘೋಷಿಸಿ ಕಡ್ಡಾಯವಾಗಿ ಅದನ್ನೆಲ್ಲರೂ ಕಲಿಯಬೇಕೆಂದು ವಿಧಿಸಿದುದೂ ಅದೇ ಕಾರಣಕ್ಕಾಗಿ. ಬಹು ಜನರು

ನಮ್ಮ ದೇಶದಲ್ಲಿ ಇಂಗ್ಲಿಷನ್ನು ಕಲಿತುದಕ್ಕೆ ಕಾರಣವೂ ರಾಜಕೀಯವೆ. ಅಥವಾ ಅದರಿಂದ ಉದ್ಭವಿಸುವ ಆರ್ಥಿಕಾದಿ ಪ್ರಯೋಜನಕ್ಕಾಗಿ. ಅದನ್ನೀಗಲೂ ಬಯಸುವ ಬಳಸುವ ಜನರಲ್ಲಿ ಬಹುಪಾಲು ಲೋಕೋಪಯೋಗ ದೃಷ್ಟಿಯನ್ನೇ ಹೊಂದಿರುತ್ತಾರೆ. ಆದರೆ ಈಗ ನಮ್ಮ ರಾಜಕೀಯ ಪರಿಸ್ಥಿತಿ ಬದಲಾಗಿದೆ. ಸ್ವತಂತ್ರ ಭಾರತ ಬೇರೊಂದು ಭಾಷೆಯನ್ನು ತನ್ನ ಅಧಿಕಾರಿ ಭಾಷೆಯನ್ನಾಗಿ ಆರಿಸಿದೆ. ಈ ಹೊಸ ಪರಿಸ್ಥಿತಿಯಲ್ಲಿ ಇಂಗ್ಲಿಷಿಗೆ ಸಲ್ಲಬೇಕಾದ ಸ್ಥಾನ ಯಾವುದು? ಇಂಗ್ಲಿಷನ್ನು ಬಿಡುವಂತಿಲ್ಲ; ಆದರೆ ಅದಕ್ಕೆ ಹಿಂದಿದ್ದ ಸ್ಥಾನವನ್ನು ಕೊಡುವಂತೆಯೂ ಇಲ್ಲ.

ಇನ್ನು ಮುಂದೆ ಇಂಗ್ಲಿಷ್ ಹಲವರು ಕಲಿಯುವ ಭಾಷೆಯಲ್ಲ; ಕೆಲವರು ಕಲಿಯಬೇಕಾದ ಭಾಷೆ.

ಇನ್ನು ಮುಂದೆ ಅನೇಕರಿಗೆ ಬೇಕಾದ ಇಂಗ್ಲಿಷಿನ ಮಟ್ಟವೆಂದರೆ ಅದನ್ನೋದಿ ಅರ್ಥಮಾಡಿಕೊಳ್ಳುವಷ್ಟು ಹೊರತು ಅದರಲ್ಲಿ ಸಂಭಾಷಿಸುವುದಾಗಲಿ, ಭಾಷಣ ಮಾಡುವುದಾಗಲಿ, ಬರೆಯುವುದಾಗಲಿ ಅಲ್ಲ.

ಈ ದೃಷ್ಟಿಯಿಂದ ನಮ್ಮ ಅಧ್ಯಯನ ಕ್ರಮದಲ್ಲಿ ಅದಕ್ಕೆ ಗಾಂಧೀಜಿ ಕೊಟ್ಟಿರುವ ಐಚ್ಛಿಕ ಭಾಷಾಸ್ಥಾನವೆ ಯೋಗ್ಯವಾದದ್ದು. ಅದಕ್ಕೆ ಈಗ ಕೊಟ್ಟಿರುವ ಪ್ರಥಮ ಭಾಷಾಸ್ಥಾನ ದೇಶಕ್ಕೆ ಹಾನಿಕರ. ನಮ್ಮಬಾಲಕರ ಹಾಗೂ ತರುಣರ ಮನಶ್ಶಕ್ತಿಯನ್ನೆಲ್ಲ ಅಪವ್ಯಯಗೊಳಿಸಿ, ಅವರನ್ನು ಪರೀಕ್ಷೆಗಳಲ್ಲಿ ಅನ್ಯಾಯವಾಗಿ ಅನುತ್ತೀರ್ಣರನ್ನಾಗಿ ಮಾಡುವುದರಿಂದ ಅವರ ಹೃದಯದ ಆಶಾಭಾವನೆಯನ್ನೆ ಮೊಳಕೆಯಲ್ಲಿಯೆ ಚಿವುಟಿಹಾಕಿ ನಿರಾಶೆಯನ್ನೂ ಅಧೈರ್ಯವನ್ನೂ ತಂದೊಡ್ಡಿ, ಅವರ ಬದುಕನ್ನೆ ಬಯಲುಗೊಳಿಸುವ ಸಾಧನೆಯಾಗಿದೆ ಈ ಪರಭಾಷೆ! ನಮ್ಮ ಮಕ್ಕಳು ತಮಗೆ 'ಸಹಜ' ವಾದ ನೆಲದ ನುಡಿಯನ್ನು ಕಲಿತು ಇನ್ನೇನು ಭಾಷೆಯಿಂದ ಭಾವಕ್ಕೂ ಜ್ಞಾನಕ್ಕೂ ರೆಕ್ಕೆಗೆದರಿ ಹಾರಬೇಕು ಎನ್ನುವಷ್ಟರಲ್ಲಿ ಈ ಹೊರಭಾಷೆಯ ಕಲ್ಲುಚಪ್ಪಡಿಯನ್ನು ಅವರ ತಲೆಗಳ ಮೇಲೆ ಹೇರುತ್ತೇವೆ! ಸರಿ, ಕನ್ನಡದಲ್ಲಿ ಕಲಿತುಬಿಟ್ಟಿದ್ದ ಬೆಕ್ಕು ಇಲಿ ಚಾಪೆ ಟೋಪಿಗಳನ್ನೆ ಮತ್ತೆ ಕ್ಯಾಟ್ ರ್‍ಯಾಟ್ ಮ್ಯಾಟ್ ಹ್ಯಾಟ್ ಎಂದು ತಮಗೆ ಅರ್ಥವಾಗದ ಸ್ಪೆಲ್ಲಿಂಗ್ ಸಹಿತವಾಗಿ ಬಾಯಿಪಾಠ ಮಾಡಬೇಕು! ಕನ್ನಡದಲ್ಲಿ ದೊಡ್ಡ ದೊಡ್ಡ ಹೊತ್ತಗೆಗಳನ್ನು ಉಲ್ಲಾಸದಿಂದ ಓದಿ, ಭಾವಕ್ಕೂ ಚಿಂತನಕ್ಕೂ ಕಣ್ಣರಳಿ ಎದೆಯರಳಿ, ಸಾಹಸಿಯಾಗಿ ಮುನ್ನುಗ್ಗಲೆಳಸುವ ಮಾಧ್ಯಮಿಕ ಶಾಲೆಯ ಬಾಲಕನ ಹಸುರು ಚೇತನ ಇಂಗ್ಲಿಷ್ ಭಾಷಾಬಂಡೆಗೆ ಮುಗ್ಗುರಿಸಿ ಹಸುರುಗಟ್ಟಿ ಉಸಿರುಗಟ್ಟಿ ಸೋತು ನಿಲ್ಲುವುದನ್ನು ಮಕ್ಕಳಿದ್ದು ಅವರ ಓದಿನ ಕಡೆಗೆ ಒಂದಿನಿತಾದರೂ ಗಮನ ಕೊಟ್ಟವರೆಲ್ಲರೂ ನೋಡಿಯೆ ಇರುತ್ತಾರೆ. ಅಲ್ಲದೆ ಹಳ್ಳಿಹಳ್ಳಿಗೂ ಹೈಸ್ಕೂಲುಗಳೇಳುತ್ತಿರುವ ಈ ಸಮಯದಲ್ಲಿ, ಅಲ್ಲಿ ಇಂಗ್ಲಿಷ್ ಪಾಠ ಹೇಳುವ ಬೋಧಕರ ಮಟ್ಟವೂ ತುಂಬ ಇಳಿದು ಹೋಗಿರುವುದರಿಂದಲೂ, ಬಾಲಕರ ಸಂಖ್ಯೆ ಮತ್ತು ಸಂಸ್ಕಾರ ವೈವಿಧ್ಯಗಳಲ್ಲಿ ಹಿಂದಣಕ್ಕಿಂತ ವಿಪುಲ ವ್ಯತ್ಯಾಸಗಳಾಗಿರುವುದರಿಂದಲೂ, ಮೊದಲಿನಂತೆ ಬೆಂಚಿನ

ಮೇಲೆ ನಿಲ್ಲಿಸಿ, ಕಿವಿ ಹಿಂಡಿ, ಚಡಿ ಏಟುಕೊಟ್ಟು, ಫರಂಗಿಮಣೆ ಕೂರಿಸಿ, ಕಪಾಳಕ್ಕೆ ಬಿಗಿದು, ಬಾಯಿಪಾಠ ಮಾಡಿಸಿ, ವ್ಯಕ್ತಿ ವ್ಯಕ್ತಿಗೆ ಗಮನಕೊಡುವ ಇಂಡಿವಿಜುಯಲ್ ಅಟೆನ್‌ಷನ್ನಿನ ಕಸರತ್ತಿಗಾಗಲಿ ಕವಾಯಿತಿಗಾಗಲಿ ಈಗ ಅವಕಾಶವೆ ಇಲ್ಲ! ಹೀಗೆ ಪರೀಕ್ಷೆ ಪರೀಕ್ಷೆಯಲ್ಲಿಯೂ ಒಂದೊಂದು ಮೆಟ್ಟಲಲ್ಲಿಯೂ 'ಕೃಪೆ'ಯ ರಟ್ಟೆ ಹಿಡಿದು ಎತ್ತಿ ಮೇಲಿನ ಮೆಟ್ಟಲಿಗೆ ಹಾಕಿದ ಹುಡುಗನ ಇಂಗ್ಲಿಷ್ ಜ್ಞಾನದ ದೋಣಿ ಹೇಗೊ ಕಾಲೇಜಿನ ಜಲಪಾತ ಪ್ರಪಾತದ ವರೆಗೂ ಸಾಗುತ್ತದೆ. ಅದುವರೆಗೂ ಏನೋ ಎಂತೋ ಅಂಕು ಡೊಂಕು ಹರಿವ ಹೊಳೆ ಮಾತ್ರವಾಗಿದ್ದ ಇಂಗ್ಲಿಷು ಬಾಲಕನ ಕಣ್ಣಿಗೆ ಇದ್ದಕ್ಕಿದ್ದಂತೆ ಪ್ರಪಾತಕ್ಕೆ ಧುಮುಕುವ ಜಲಪಾತವಾಗಿ ಪರಿಣಮಿಸುತ್ತದೆ. ಇನ್ನೇನು ಮಾಡುತ್ತಾನೆ? ಪಾಪ, ಅದುವರೆಗೂ ತಾನು ಮಾಡುತ್ತಿದ್ದ ಅಲ್ಪ ಸ್ವಲ್ಪ ಪ್ರಯತ್ನದ ಹುಟ್ಟನ್ನೂ ಹೊಳೆಗೇ ಎಸೆದು, ಸುಮ್ಮನಾಗಿ, ದೋಣಿ ಮುಂಬರಿದು ತನಗೊದಗುವ 'ಗತಿ'ಯ ರುದ್ರರಮಣೀಯತೆಯ ರಸಾಸ್ವಾದನೆಯಲ್ಲಿ ತೊಡಗಬೇಕಾಗುತ್ತದೆ! ಅವನಿಗಿರುವ ಧೈರ್ಯ ಒಂದೇ ಒಂದು; ಈ ಅನಾಹುತದಲ್ಲಿ ತನ್ನೊಡನೆ ಸಮಪಾಲುಕೊಳ್ಳಲು ಒಡನಾಡಿಗಳು ಅಸಂಖ್ಯೇಯವಾಗಿದ್ದಾರೆ!

ದಡದಲ್ಲಿ ನಿಂತು ನೋಡುವ ಹಿರಿಯರ ಇತ್ಯರ್ಥವೇನು? ಹುಡುಗರೆಲ್ಲ ಈಚೀಚೆಗೆ ದಡ್ಡರಾಗುತ್ತಿದ್ದಾರೆ! ಸ್ಟಾಂಡರ್ಡ್ ತುಂಬ ಇಳಿದು ಹೋಗಿದೆ! ಹಾಗಾದರೆ ಏನು ಮಾಡಬೇಕು? ಇನ್ನಷ್ಟು ಇಂಗ್ಲಿಷ್ ಪಠ್ಯಪುಸ್ತಕ ಹೆಚ್ಚಿಸಿ! ಗ್ರಾಮರ್ ಲೇಹ್ಯ ಇನ್ನೂ ಸ್ವಲ್ಪ ಹೆಚ್ಚಾಗಿ ತಿನ್ನಿಸಿ! ಪರಿಣಾಮ: ಪರೀಕ್ಷೆಯ ಫಲಿತಾಂಶ ಪ್ರಕಟನೆ ಸಮಯದಲ್ಲಿ ಮತ್ತೆ 'ಕೃಪೆ ಯ ಕೈ ಹಿಡಿದು ಎತ್ತಬೇಕು. ಮುಂದಿನ ಮೆಟ್ಟಲಿಗೆ.

ಈ ನಾಟಕ–ದುರಂತನಾಟಕ–ಇನ್ನು ಸಾಕು. ಇನ್ನು ಮುಂದೆ ಇಂಗ್ಲಿಷಿನ ಈ ನೀರುನೀರು ಸಮಾರಾಧನೆ ನಿಲ್ಲಬೇಕು. ಅದಕ್ಕೆಬದಲಾಗಿ ಆಯ್ದ ಕೆಲವರಿಗೆ ಮಾತ್ರ ಗಟ್ಟಿ ಇಂಗ್ಲಿಷಿನ ಪುಷ್ಟಿಯೊದಗುವಂತೆ ನಮ್ಮ ವಿದ್ಯಾಭ್ಯಾಸ ಕ್ರಮದಲ್ಲಿ ಭಾಷೆಗಳ ಸ್ಥಾನ ನಿರ್ಣಯವಾಗಬೇಕು. ಇನ್ನು ಮುಂದೆ ಇಂಗ್ಲಿಷ್ ಎಲ್ಲರಿಗೂ ಬೇಡ: ಹಲವರಿಗೆ ಕೊಂಚಮಟ್ಟಿಗೆ ಬೇಕು; ಕೆಲವರಿಗೆ ಮಾತ್ರ ಚೆನ್ನಾಗಿಯೇ ಬೇಕು.

ಇಂಗ್ಲಿಷ್ ಕಲಿಯುವವರನ್ನು ಎರಡು ವಿಭಾಗವಾಗಿ ವಿಂಗಡಿಸಬಹುದು. ಭಾಷಾದೃಷ್ಟಿಯಿಂದ ಕಲಿಯುವವರು; ಸಾಹಿತ್ಯದೃಷ್ಟಿಯಿಂದ ಕಲಿಯುವವರು. ಭಾಷಾದೃಷ್ಟಿಯಿಂದ ಕಲಿಯುವವರಿಗೆ ಇಂಗ್ಲಿಷಿನ ಪರಿಚಯ ಚೆನ್ನಾಗಿ ಆಗಬೇಕು. ಅವರು ಆ ಭಾಷೆಯಲ್ಲಿ ಚೆನ್ನಾಗಿ ಓದಲೂ ಬರೆಯಲೂ ಮಾತನಾಡಲೂ ಭಾಷಣ ಮಾಡಲೂ ಬಲ್ಲವರಾಗಬೇಕು. ಅವರು ನಮಗೂ ಅಂತರರಾಷ್ಟ್ರೀಯ ಪ್ರಪಂಚಕ್ಕೂ ಸಾಹಿತ್ಯದಲ್ಲಿ, ಶಾಸ್ತ್ರದಲ್ಲಿ, ರಾಜಕೀಯದಲ್ಲಿ ಸಂಪರ್ಕ ಕಲ್ಪಿಸುವ ಸಾಧನಗಳಾಗಬೇಕು. ಇಂಥವರಿಗೆ ವಿದ್ಯಾಭ್ಯಾಸದ ಮೇಲಿನ ಮಟ್ಟದಲ್ಲಿ, ವಿಶೇಷವಾಗಿ ಸಾಹಿತ್ಯ ವಿಷಯಗಳಲ್ಲಿ, ಇಂಗ್ಲಿಷ್ ಶಿಕ್ಷಣ ಮಾಧ್ಯಮವಾಗಿದ್ದರೆ ಲೇಸು. ಏಕೆಂದರೆ ಅವರ ಉದ್ದೇಶವೇ ಆ ಭಾಷೆಯಲ್ಲಿ ಉದ್ದಾಮ ಪಾಂಡಿತ್ಯ ಸಂಪಾದನೆ.

ಆದರೆ ಇಂಗ್ಲಿಷನ್ನು ಆ ಭಾಷೆಯಲ್ಲಿರುವ ವಿಪುಲವಾದ ವಿವಿಧವಾದ ಶ್ರೀಮಂತವಾದ ಸಾಹಿತ್ಯಕ್ಕಾಗಿ ಅಭ್ಯಾಸ ಮಾಡುವವರ ವಿಷಯವೆ ಬೇರೆ. ಅವರಿಗೆ ಬೇಕಾದುದು ಭಾಷೆಯಲ್ಲ; ಕಾವ್ಯ, ಸಾಹಿತ್ಯ. ಅಲ್ಲಿಯ ಕವಿಗಳು, ಅಲ್ಲಿಯ ನಾಟಕಕಾರರು, ಅಲ್ಲಿಯ ತತ್ತ್ವಜ್ಞಾನಿಗಳು, ಅಲ್ಲಿಯ ರಾಜಕಾರಣಿಗಳು, ಸಹೃದಯರಿಗೆ ಜಿಜ್ಞಾಸುಗಳಿಗೆ ನೀಡುವ ರಸಾಂಶ, ಚಿಂತನಾಂಶ, ಸತ್ತ್ವ. ಇಂಗ್ಲಿಷನ್ನು ಅದರ ಸಾಹಿತ್ಯಕ್ಕಾಗಿ ಅಭ್ಯಾಸ ಮಾಡುವವರು ಆ ಭಾಷೆಯಲ್ಲಿ ಮಾತನಾಡುವುದನ್ನು ಅಭ್ಯಾಸ ಮಾಡಬೇಕಾಗಿಲ್ಲ; ಅದರಲ್ಲಿ ಬರೆಯುವುದಕ್ಕೂ ಶ್ರಮಿಸಬೇಕಾಗಿಲ್ಲ; ಅದನ್ನು ಓದಿ ಅರಿಯಬೇಕಾದುದೆಷ್ಟೊ ಅಷ್ಟೆ. ಆದ್ದರಿಂದ ಅವರು ಇಂಗ್ಲಿಷ್ ಸಾಹಿತ್ಯವನ್ನು ದೇಶಭಾಷಾ ಮಾಧ್ಯಮದ ಮೂಲಕವೆ ಅಭ್ಯಾಸಮಾಡಿದರೆ ಅದರ ರಸಸತ್ತ್ವ ಸುಲಭವಾಗಿ ಶೀಘ್ರವಾಗಿ ಜೀರ್ಣವಾಗಿ ರಕ್ತಗತವಾಗುತ್ತದೆ. ಎಲ್ಲ ದೇಶಗಳಲ್ಲಿಯೂ ಪರಭಾಷೆಯ ಸಾಹಿತ್ಯವನ್ನು ಸ್ವಭಾಷೆಯ ಮೂಲಕ ಕಲಿಯುವುದೇ ರೂಢಿ, ಸಹಜ ರೀತಿ. ಏಕೆಂದರೆ ಅವರ ಉದ್ದೇಶ ಆ ಪರಭಾಷೆಯಲ್ಲಿ ಬರೆಯುವ ಮಾತನಾಡುವ ಪಾಂಡಿತ್ಯ ಸಂಪಾದನೆಯಲ್ಲ, ಅದರ ಸಾಹಿತ್ಯದ ಸತ್ತ್ವದ ಆಸ್ವಾದನೆ ಮಾತ್ರ. ನಮ್ಮ ದೇಶದಲ್ಲಿ ಪರಕೀಯರ ಸೌಕರ್ಯಾರ್ಥವಾಗಿ ಆ ಭಾಷೆಯಲ್ಲಿ ಬರೆದು ಮಾತಾಡುವುದಕ್ಕಾಗಿಯೆ ನಮ್ಮ ವಿದ್ಯಾಭ್ಯಾಸ ಏರ್ಪಟ್ಟುದುದರಿಂದ ನಾವು ಪರಭಾಷಾ ಸಾಹಿತ್ಯವನ್ನು ನಮ್ಮ ಭಾಷೆಯ ಮಾಧ್ಯಮ ದಿಂದಲೇ ಕಲಿಸಿದ್ದರೆ ನಮ್ಮವರಿಗೆ ಈಗ ಒದಗಿರುವ ರಸಪುಷ್ಟಿಗಿಂತಲೂ ಸಾವಿರ ಪಾಲು ಹೆಚ್ಚಿನ ರಸಪುಷ್ಟಿ ಒದಗುತ್ತಿತ್ತು. ಪರಭಾಷಾ ಮಾಧ್ಯಮದಿಂದಲೆ ಕಲಿಯುವ ವಿಕಾರ ಪರಿಸ್ಥಿತಿ ಎಷ್ಟರಮಟ್ಟಿಗೆ ಮುಂದುವರಿದಿದೆಯೆಂದರೆ– ಷೇಕ್ಸ್‌ಪಿಯರ್, ಮಿಲ್ಟನ್, ವರ್ಡ್ಸ್‌ವರ್ತ್ ಮೊದಲಾದ ಕವಿಗಳ ಕೃತಿಗಳನ್ನು ಕನ್ನಡದ ಮೂಲಕ ಪಾಠ ಹೇಳಬಹುದೆಂಬ ಸಂಗತಿ ಇಂದಿಗೂ ಅನೇಕರಿಗೆ ದಿಗ್ಭ್ರಾಂತಿಕರ ವಿಸ್ಮಯವಾಗಿದೆ. ಆದರೆ ವಿಶ್ವವಿದ್ಯಾನಿಲಯಗಳಲ್ಲಿ ವಿದ್ಯಾರ್ಜನೆ ಮಾಡಿ, ಅಲ್ಲಿಯೆ ಅಧ್ಯಾಪಕರಾಗಿ ಸೇರಿ, ತಾವೇ ವಿದ್ಯಾರ್ಥಿಗಳಾಗಿಯೂ, ಅಧ್ಯಾಪಕರಾಗಿಯೂ, ವಿದ್ಯಾರ್ಥಿಗಳ ಇಂಗ್ಲಿಷ್ ಭಾಷಾ ಸಾಮರ್ಥ್ಯವನ್ನೂ, ಸಾಹಿತ್ಯ ರಸಾದ್ವಾದನಾ ಶಕ್ತಿಯನ್ನೂ ಗಮನಿಸುತ್ತಾ ಬಂದವರಿಗೆ ನಿಜಸ್ಥಿತಿ ಚೆನ್ನಾಗಿ ಗೊತ್ತು. ಇಂಗ್ಲಿಷ್ ಭಾಷೆಯಲ್ಲಿ ತನ್ನ ಅಭಿಪ್ರಾಯಗಳನ್ನು ವ್ಯಕ್ತಗೊಳಿಸುವ ಶಕ್ತಿ ಏನೇನೂ ಇಲ್ಲದ ವಿದ್ಯಾರ್ಥಿಗೆ ಪರೀಕ್ಷೆಯಲ್ಲಿ ಮ್ಯಾಕ್‌ಬೆತ್ ಪಾತ್ರದ ವಿಚಾರವಾಗಿ ಪ್ರಬಂಧ ಬರೆಯುವ ಸಂಕಟ ಒದಗಿದರೆ ಏನು ಮಾಡುತ್ತಾನೆ? ಪೂರ್ವಸಿದ್ಧತೆ ಮಾಡಿದ ಪ್ರಬಂಧವನ್ನು ಗಟ್ಟಿಮಾಡಿದ್ದರೆ ಅದನ್ನು ಉತ್ತರ ಪತ್ರಿಕೆಗೆ ಇಳಿಸಿ ತೇರ್ಗಡೆಹೊಂದುತ್ತಾನೆ. ಅಂತಹವನಿಗೆ ನಿಜವಾಗಿಯೂ ಷೇಕ್ಸ್‌ಪಿಯರ್ ನಾಟಕ ರಸಾಸ್ವಾದನೆಯಿಂದ ಅರಿವಾಗಿರುತ್ತದೆ ಎಂದು ಹೇಳಲಾಗುವುದಿಲ್ಲ. ಅದೇ ಇನ್ನೊಬ್ಬ ವಿದ್ಯಾರ್ಥಿಗೆ ಅದರ ಅರಿವು ಸ್ವಲ್ಪ ಮಟ್ಟಿಗೆ ಆಗಿದ್ದರೂ ಅದನ್ನು ಬರೆಯುವ ಭಾಷಾಸಾಮರ್ಥ್ಯವಿಲ್ಲದೆ ತಪ್ಪುತಪ್ಪಾಗಿ ಏನನ್ನೊ ಬರೆದು ಫೆಯಿಲ್ ಆಗುತ್ತಾನೆ. ತನ್ನ ಭಾಷೆಯಲ್ಲಿಯೆ ಉತ್ತರ ಬರೆಯುವ ಸ್ವಾತಂತ್ರ್ಯ ಅವನಿಗಿದ್ದಿದ್ದರೆ ಮ್ಯಾಕ್‌ಬೆತ್ ಪಾತ್ರವನ್ನು ಕುರಿತು ಚೆನ್ನಾಗಿಯೆ ಬರೆಯುತ್ತಿದ್ದನೆಂಬುದರಲ್ಲಿ ಸಂದೇಹವಿಲ್ಲ. ಈಚೀಚೆಗೆ

ನಮ್ಮ ವಿಶ್ವವಿದ್ಯಾನಿಲಯಗಳಲ್ಲಿ ಭಾಷೇತರ ವಿಷಯಗಳಲ್ಲಿ ಮೊದಲಿಗಿಂತಲೂ ಸಮಧಿಕ ಪ್ರಮಾಣದಲ್ಲಿ ಅನುತ್ತೀರ್ಣರಾಗುತ್ತಿರುವುದಕ್ಕೆ ಮುಖ್ಯಕಾರಣ ಇಂಗ್ಲಿಷ್ ಭಾಷಾ ಮಾಧ್ಯಮವೇ ಹೊರತು ವಿಷಯಗಹನತೆಯೂ ಅಲ್ಲ, ವಿದ್ಯಾರ್ಥಿವರ್ಗದ ಬುದ್ಧಿಶಕ್ತಿಯ ಸರ್ವತ್ರಾವನತಿಯೂ ಅಲ್ಲ. ಆದ್ದರಿಂದ ಇಂಗ್ಲಿಷನ್ನು ಅದರ ಸಾಹಿತ್ಯಕ್ಕಾಗಿ ಅಭ್ಯಾಸಮಾಡುವ ವಿದ್ಯಾರ್ಥಿಗಳಿಗೆ ಕನ್ನಡ ಮಾಧ್ಯಮದಲ್ಲಿಯೆ ಪಾಠ ಹೇಳಬೇಕು, ಪರೀಕ್ಷೆ ನಡೆಸಬೇಕು.

ಇಂಗ್ಲಿಷನ್ನು ಅದರ ಪ್ರಥಮ ಭಾಷಾಸ್ಥಾನದಿಂದ ಸದ್ಯಕ್ಕೆ ದ್ವಿತೀಯ ಸ್ಥಾನಕ್ಕೆ ಇಳಿಸಿ, ಕನ್ನಡವನ್ನು ಪ್ರಥಮ ಭಾಷಾಸ್ಥಾನಕ್ಕೆ ಏರಿಸಿ, ಪ್ರಥಮ ಭಾಷೆಯ ಮೂರು ಪ್ರಶ್ನೆ ಪತ್ರಿಕೆಗಳಲ್ಲಿ ಒಂದನ್ನು ಇಂಗ್ಲಿಷ್ ಸಾಹಿತ್ಯ ಎಂಬ ಹೆಸರಿನಲ್ಲಿ ಇಂಗ್ಲಿಷ್ ಸಾಹಿತ್ಯಕ್ಕೆ ಮೀಸಲಾಗಿರಿಸಿ, ಕನ್ನಡದಲ್ಲಿ ಪಾಠ ಹೇಳಿ, ಕನ್ನಡದಲ್ಲಿಯೆ ಉತ್ತರ ಬರೆಯುವಂತೆ ಮಾಡಿದರೆ, ನಮ್ಮ ಮಕ್ಕಳಿಗೆ ಇಂಗ್ಲಿಷ್ ಭಾಷೆಯ ಹೊರೆಯನ್ನು ತಪ್ಪಿಸುವುದರ ಜೊತೆಗೆ, ಇಂಗ್ಲಿಷ್ ಸಾಹಿತ್ಯದ ರಸಾಮೃತವನ್ನು ಪಾನ ಮಾಡಿಸಿದಂತಾಗಿ, ಅವರ ಪುಷ್ಟಿ ಈಗಿರುವುದಕ್ಕಿಂತಲೂ ನೂರ್ಮಡಿ ಹೆಚ್ಚುವುದರಲ್ಲಿ ಸಂದೇಹವಿಲ್ಲ.

ಇಂಗ್ಲೀಷ್ ಹೋದರೆ ಎಲ್ಲ ಕೊಚ್ಚಿಹೋಗುತ್ತದೆ ಎಂದು ಕೂಗಿಕೊಳ್ಳುವವರಿಗೆ ಇನ್ನೂ ಒಂದು ಸಮಾಧಾನ ಹೇಳಬೇಕಾಗುತ್ತದೆ. ಮೇಲೆ ವಿವರಿಸಿದಂತೆ, ಇಂಗ್ಲಿಷ್ ಸಂಪೂರ್ಣವಾಗಿ ಹೋಗುವುದಿಲ್ಲ. ಹಲವರಲ್ಲಿ ಸಾಹಿತ್ಯವಾಗಿ ಉಳಿದಿರುತ್ತದೆ. ಕೆಲವರಲ್ಲಿ ಭಾಷೆಯಾಗಿಯೂ ಉಳಿಯುತ್ತದೆ. ಅಲ್ಲದೆ ಇಂಗ್ಲಿಷ್ ಕಲಿಯದ ಇತರ ಬಹು ಜನರಿಗೂ ಇಂಗ್ಲಿಷ್ ಮೋಹಿಗಳು ಊಹಿಸುವಂತೆ ಯಾವ ತೆರನಾದ ಭಾವನಷ್ಟವಾಗಲಿ ಬುದ್ಧಿದಾರಿದ್ರ್ಯವಾಗಲಿ ಸಂಭವಿಸುವುದಿಲ್ಲ. ಏಕೆಂದರೆ ಕನ್ನಡದ ಈಗಿನ ಸ್ಥಿತಿ ಇಪ್ಪತ್ತಯ್ದು ಮೂವತ್ತು ವರ್ಷಗಳ ಹಿಂದೆ ಇದ್ದ ಸ್ಥಿತಿಯಲ್ಲ. ಈಗ ಇಂಗ್ಲಿಷ್ ಒಂದಕ್ಷರ ಬರದಿದ್ದವನೂ ಕೂಡ ಆಗ ಇಂಗ್ಲಿಷಿನ ಮೂಲಕವೇ ಪಡೆಯಬೇಕಾಗಿದ್ದ ಭಾವದ ಮತ್ತು ಬುದ್ಧಿಯ ಪುಷ್ಟಿಗಳನ್ನು ಕನ್ನಡದ ಮೂಲಕವೇ ಯಥೇಚ್ಛವಾಗಿ ಪಡೆಯುವಷ್ಟರ ಮಟ್ಟಿಗೆ ಕನ್ನಡ ವಾಙ್ಮಯ ಸಾಹಿತ್ಯದ ಮತ್ತು ಶಾಸ್ತ್ರದ ವಿವಿಧ ಶಾಖೆಗಳಲ್ಲಿ ಮುಂಬರಿದಿದೆ; ದಿನದಿನಕ್ಕೂ ಬೆಳೆದು ಪ್ರಗತಿ ಹೊಂದುತ್ತಿದೆ. ಅಷ್ಟೇ ಅಲ್ಲ, ಇಂಗ್ಲಿಷ್ ಸಾಹಿತ್ಯವನ್ನೂ ಅಮೂಲಾಗ್ರವಾಗಿ ಓದಿದವರೂ ಬೆಕ್ಕಸಬಡುವಂತಹ ಸಾಹಿತ್ಯ ಶೃಂಗಗಳೂ ಕನ್ನಡದಲ್ಲಿ ಕೆಲವಾದರೂ ಮೂಡಿವೆ.

ಹಿಂದಿನ ಮತ್ತು ಇಂದಿನ ಕನ್ನಡ ಸಾಹಿತ್ಯದ ರಸಸಾಗರದಲ್ಲಿ ಮುಳುಗಿದವನು ತಾನು ಇಲ್ಲಿ ಅನುಭವಿಸದಿದ್ದ ಅಥವಾ ಅನುಭವಿಸಲಾರದಿದ್ದ ಯಾವ ನೂತನತೆಯನ್ನಾಗಲಿ ರಸೋನ್ಮೇಷವನ್ನಾಗಲಿ ಅಲ್ಲಿ ಕಂಡು ಕರುಬುವ ಪರಿಸ್ಥಿತಿಯಿಂದ ನಾವು ಬಹುದೂರ ಮುಂದುವರಿದಿದ್ದೇವೆ. ತಾವು ವಿದ್ಯಾರ್ಥಿಗಳಾಗಿದ್ದಾಗ ಓದಿದ್ದ ಅಥವಾ ಶಾಲಾ ಕಾಲೇಜುಗಳಲ್ಲಿ ಕಡಮೆ ಸಂಬಳದ ಬಡ ಉಪಾಧ್ಯಾಯರಿಂದ ಪಾಠ ಕೇಳಿದ್ದ ಅಂತಸ್ತಿನಲ್ಲಿಯೆ ಕನ್ನಡ ಈಗಲೂ ಇದೆ ಎಂದು ಭ್ರಮಿಸಿರುವ ರಾಜ್ಯ ಲಲಾಟ

ಲೇಖನ ನೌಕೆಯ ಕರ್ಣಧಾರರಾಗಿರುವ ವಯಸ್ಕ ಮಹನೀಯರು ಮಾತ್ರ ಕನ್ನಡದ ಶಕ್ತಿಯ ವಿಚಾರವಾಗಿ ಶಂಕಿಸಬಹುದೆ ವಿನಾ ಉಳಿದ ತಿಳಿದವರಾರೂ ಶಂಕಿಸರು.[೧]

---

ಕರ್ಣಧಾರ = a helmsman, a pilot – ಕಿಟ್ಟೆಲ್

[೧] ಸದ್ಯದ ಈ ಲೇಖಕನ ದೃಷ್ಟಿ "ಬಹುಭಾಷೆಗಳಲ್ಲಿ ದ್ವಿಭಾಷೆ" ಎಂಬುದಾಗಿದೆ. ಭಾರತೀಯ ಮತ್ತು ವಿದೇಶಗಳ ಭಾಷೆಗಳಲ್ಲಿ ಸಾಧ್ಯವಾದವುಗಳನ್ನು ಮುಂದಿಟ್ಟು ಯಾವುದಾದರೂ ಎರಡು ಭಾಷೆಗಳನ್ನು ಆರಿಸಿಕೊಳ್ಳುವ ಸ್ವಾತಂತ್ರ್ಯವನ್ನು ವಿದ್ಯಾರ್ಥಿಗೆ ಬಿಟ್ಟುಬಿಡುವುದೊಂದೇ–ರಾಜಕೀಯ, ಆರ್ಥಿಕ, ಸಾಮಾಜಿಕ, ಸಾಂಸ್ಕೃತಿಕ ಇತ್ಯಾದಿ ಸಮಸ್ಯೆಗಳಿಗೆಲ್ಲ ಪರಿಹಾರವಾಗುತ್ತದೆ.

# ಭಾರತದಲ್ಲಿ ಇಂಗ್ಲಿಷಿನ ಸ್ಥಾನ[೧]

ಇಂಗ್ಲಿಷ್ ವಿಚಾರ ಗೋಷ್ಠಿಯಲ್ಲಿ ಭಾಗವಹಿಸಲು ಬಂದಿರುವ ಉಪಾಧ್ಯಾಯ ಸದಸ್ಯರೆ, ಮಹಿಳೆಯರೆ, ಮಹನೀಯರೆ,

ನೀವು ಭಾವಿಸಿರುವುದಕ್ಕಿಂತಲೂ ಅತ್ಯಂತ ಗುರುತರವಾಗಿ ತೋರುತ್ತಿರುವ ಒಂದು ಮಹತ್ಕಾರ್ಯದ ನಿರ್ಣಯದಲ್ಲಿ ನೀವು ಇಂದು ತೊಡಗಿದ್ದೀರಿ–ಎಂದು ನನ್ನ ಭಾವನೆ. ಏಕೆಂದರೆ, ಭಾರತೀಯ ಜೀವನದ ಪ್ರಗತಿಯ ಮೂಲಸೂತ್ರಗಳನ್ನು ಹಿಡಿದು ನಿರ್ಣಯಿಸಬೇಕಾದ ಭಾಷೆಯ ವಿಷಯವಾಗಿ ತಾವೆಲ್ಲ ಇಲ್ಲಿ ನೆರೆದು ವಿಚಾರ ಮಾಡಿ ನಿರ್ದಿಷ್ಟವಾದ ನಿರ್ಣಯಗಳನ್ನು ತೆಗೆದುಕೊಳ್ಳಲು ಸಿದ್ಧರಾಗಿದ್ದೀರಿ. ಇದು ಸರಿಯೆಂದು ತೋರುತ್ತದೆ. ಇಂಗ್ಲಿಷ್ ಭಾಷೆ ನಮ್ಮನ್ನು ಆಳುತ್ತಿದ್ದ ಬ್ರಿಟೀಷರ ಭಾಷೆಯಾಗಿದ್ದಾಗ ಬಹುಶಃ ಆ ಭಾಷೆಗೆ ರಕ್ಷಣೆ ಪೋಷಣೆಗಳನ್ನು ಕೊಡುವುದು ಅನಾವಶ್ಯಕವಾಗಿದ್ದಿತು. ಏಕೆಂದರೆ, ಆಳುವವರ ಭಾಷೆ ಆಳುವ ಭಾಷೆ; ಒಂದು ರೀತಿಯಾದ ದಂಡ ವಿಧಾನದಿಂದಲೆ ಅದು ನಮ್ಮನ್ನು ಆಕರ್ಷಿಸುತ್ತಿದ್ದಿತು. ಅಲ್ಲದೆ, ಅದರಿಂದ ಆಗುತ್ತಿದ್ದ ಆರ್ಥಿಕ ಪ್ರಯೋಜನವೂ ಅದರ ಅಭ್ಯಾಸಕ್ಕೆ ಒಂದು ಮಹತ್ ಪ್ರೇರಣೆಯಾಗಿತ್ತು.

ಈ ಮನೋಭಾವ ಕ್ರಮೇಣ ಬದಲಾಯಿಸಿತು. ಭಾರತದ ಸ್ವಾತಂತ್ರ್ಯ ಪೂರ್ವದಲ್ಲಿ ಸ್ವಾತಂತ್ರ್ಯಕ್ಕಾಗಿ ಮಹತ್ ಸಂಗ್ರಾಮ ನಡೆಯುತ್ತಿದ್ದಾಗ ಇಂಗ್ಲಿಷರನ್ನೆಂತೊ ಇಂಗ್ಲಿಷ್ ಭಾಷೆಯನ್ನೂ ಅಂತೆಯೆ ವೈರಿಯೆಂದು ಭಾವಿಸಲಾಯಿತು. ಆದರೆ ಅಂಥ ಭಯಂಕರ ಸತ್ಯಾಗ್ರಹ ಸಂಗ್ರಾಮದ ಸಂದರ್ಭದಲ್ಲಿಯೂ, ಪರಕೀಯರ ಮತ್ತು ಅವರಿಂದ ಪ್ರೇರಿತರಾದವರ ಲಾಠಿಯ ಏಟು ನಮ್ಮವರ ಮೈಯನ್ನು ಮುಪ್ಪು ಮಾಡುತ್ತಿದ್ದ ಕಾಲದಲ್ಲಿಯೂ ನಾನು ಇಂಗ್ಲಿಷ್ ಭಾಷೆಯನ್ನು ಸ್ವಲ್ಪವೂ ದ್ವೇಷಿಸಿದವನಲ್ಲ. ಅದರ ವಿಚಾರವಾಗಿ ನನ್ನ ಗೌರವ ಸ್ವಲ್ಪವೂ ಕಡಿಮೆಯಾಗಲಿಲ್ಲ. ಭಾಷೆಯನ್ನೂ ಮತ್ತು ಭಾಷೆಯಾಡುತ್ತಿದ್ದವನನ್ನೂ ಒಂದೇ ಕಾರಣಕ್ಕಾಗಿ ದ್ವೇಷಿಸುವುದು ಪಶುಮನೋ ವೃತ್ತಿಯೆಂದು ನನ್ನ ಭಾವನೆ.

ನನ್ನ ವಿದ್ಯಾರ್ಥಿದಶೆಯಲ್ಲಿ ಕನ್ನಡವೆಂಬುದು ಏನೋ ಪರೀಕ್ಷೆಗಾಗಿ ಓದುವ ಒಂದು ವಿಷಯವಾಗಿತ್ತು; ನನ್ನ ಅಭಿಮಾನವೆಲ್ಲ ಇಂಗ್ಲಿಷಿಗೆ ಮೀಸಲಾಗಿತ್ತು.

---

[೧] ಮೈಸೂರು ವಿದ್ಯಾಭ್ಯಾಸದ ಇಲಾಖೆಯ ಆಶ್ರಯದಲ್ಲಿ ಮೈಸೂರಿನಲ್ಲಿ ೨೫–೧–೧೯೫೯ ರಲ್ಲಿ ನಡೆದ ಇಂಗ್ಲಿಷ್ ಭಾಷಾ ವಿಚಾರಗೋಷ್ಠಿಯನ್ನು ಉದ್ಘಾಟಿಸಿದ ಸಂದರ್ಭದಲ್ಲಿ ಮೈಸೂರು ವಿಶ್ವವಿದ್ಯಾನಿಲಯದ ಛಾನ್ಸಲರ್ ಅವರು ಮಾಡಿದ ಭಾಷಣ.

ಬಹುಶಃ ನಿಮಗಾರಿಗೂ ಎಂದೂ ಇಲ್ಲದೆ ಇರುವಷ್ಟು ತಿರಸ್ಕಾರ (ಹಾಗೆಂದರೆ ಪ್ರಶಂಸೆಯಾದೀತೊ ಏನೊ!) ಅಥವಾ ಉದಾಸೀನವಿತ್ತು. ನನಗೆ ಕನ್ನಡದ ಮೇಲೆ, ನಾನು ಹೈಸ್ಕೂಲು ಮೊದಲನೆಯ ತರಗತಿಯಿಂದ ಮೊದಲ ವರ್ಷದ ಬಿ.ಎ. ಮುಗಿಯುವವರೆಗೆ ಇಂಗ್ಲಿಷಿನ ಕಟ್ಟಾಭಿಮಾನಿಯಾಗಿದ್ದೆ. ಇಂಗ್ಲಿಷ್ ಕವಿಗಳು, ನಾಟಕಕಾರರು (ಕಾದಂಬರಿಗಳನ್ನು ನಾನು ಮೂಸಿಯೂ ನೋಡಿದವನಲ್ಲ) ನನ್ನ ಜೀವ ಜೀವಾಳವಾಗಿದ್ದರು. ಜಗತ್ತಿನ ಪ್ರಸಿದ್ಧ ಇಂಗ್ಲಿಷ್ ಕವಿಯಾಗಬೇಕೆಂದು ನಾನು ಭ್ರಮಿಸಿದ್ದೆ. ಇಂಗ್ಲಿಷಿನಲ್ಲಿಯೆ ಕವಿತೆಗಳನ್ನೂ ಪ್ರಾರಂಭಿಸಿ ಹೈಸ್ಕೂಲಿನ ಕಡೆಯ ತರಗತಿಯಲ್ಲಿ ಓದುವ ವೇಳೆಗೆ "Beginner's Muse" ಎಂಬ ಹೆಸರಿನಿಂದ ಇಂಗಿಷ್ ಕವನ ಸಂಗ್ರಹವೊಂದನ್ನು ಅಚ್ಚು ಹಾಕಿಸಿದೆ. ಆ ಕವನಗಳೆಲ್ಲ ಕೇವಲ ಅನುಕರಣದ ಕವನಗಳು. ಮಿಲ್ಟನ್, ವರ್ಡ್ಸ್ ವರ್ತ್, ಷೆಲ್ಲಿ–ಮೊದಲಾದ ಕವಿಗಳಿಂದ ಮತ್ತು ಬ್ಯಾಲೆಡ್ ಕವನಗಳಿಂದ ಭಾವಗಳನ್ನು ಎತ್ತಿಕೊಂಡು ಕವನಗಳನ್ನು ರಚಿಸಿದೆ. ನನ್ನಮನಸ್ಸು ಕ್ರಮೇಣ ದಾರ್ಶನಿಕ ಕವಿಗಳ ಕಡೆಗೆ ತಿರುಗಿತು. ಗ್ರೀಸ್, ರೋಮ್, ಜರ್ಮನಿ, ಫ್ರಾನ್ಸ್, ಇಂಗ್ಲೆಂಡ್–ಮೊದಲಾದ ದೇಶಗಳ ತತ್ತ್ವಶಾಸ್ತ್ರಜ್ಞರ ಕೃತಿಗಳನ್ನೆಲ್ಲ ಇಂಗ್ಲಿಷ್ ಭಾಷೆಯ ಮೂಲಕ ತಕ್ಕಮಟ್ಟಿಗೆ ಅಧ್ಯಯನ ಮಾಡಿದೆ. ಇಷ್ಟೇ ಅಲ್ಲ, ನಮ್ಮ ಸ್ವಂತ ಆಸ್ತಿಯಾದ ವೇದ, ಉಪನಿಷತ್ತು, ದರ್ಶನಗಳನ್ನು ಇಂಗ್ಲಿಷ್ ಮುಖಾಂತರವಾಗಿಯೆ ಮೊದಲು ನಾನು ಅಧ್ಯಯನ ಮಾಡಿದ್ದು. ದೇವಭಾಷೆಯಲ್ಲಿನ ಪವಿತ್ರ ವಿಷಯಗಳನ್ನು ಓದಬಾರದು, ಕೇಳಬಾರದು ಎಂದು ಭಯ ಭೀತಿಗಳಿದ್ದ ಕಾಲದಲ್ಲಿ ಇಂಗ್ಲಿಷ್ ತನ್ನ ಭಾಷಾಂತರಗಳ ಮೂಲಕ ಇವುಗಳಿಗೆಲ್ಲ ಪ್ರವೇಶವನ್ನು ನೀಡಿದುದರಿಂದ ಅದಕ್ಕೆ ಸಂಸ್ಕೃತಕ್ಕಿಂತಲೂ ಹೆಚ್ಚು ಗೌರವ ಸಲ್ಲುವುದು ಸ್ವಾಭಾವಿಕವಾಗಿತ್ತು.

ನಾನು ಅದೇ ದಿಕ್ಕಿನಲ್ಲಿ ಅದೇ ದಾರಿಯಲ್ಲಿ ಮುಂದುವರಿದಿದ್ದರೆ ಏನಾಗುತ್ತಿತ್ತೊ! ನನ್ನ ದಾರಿ ದಿಕ್ಕುಗಳನ್ನು ಬದಲಾಯಿಸಿದವರು ಒಬ್ಬ ಐರಿಷ್ ಕವಿ, ಕಸಿನ್ಸ್ ಅವರು. ಅವರು ಮೈಸೂರಿಗೆ ಬಂದಿದ್ದಾಗ ನನ್ನ ಅಧ್ಯಾಪಕರೊಬ್ಬರ ಪ್ರಚೋದನೆಯಂತೆ ನನ್ನ ಇಂಗ್ಲಿಷ್ ಕವನಗಳನ್ನು ಅವರಿಗೆ ತೋರಿಸಿದೆ. ಅವರು ಆ ಕವನಗಳನ್ನೆಲ್ಲ ಓದಿ, ನನ್ನ ಖಾದಿ ಉಡುಪನ್ನು ಆಮೂಲಚೂಲವಾಗಿ ಗಮನಿಸಿ, "ಉಡುಪು ಖಾದಿ, ಕವನ ಇಂಗ್ಲಿಷ್–ಹೀಗೇಕೆ? ನಿಮ್ಮ ಭಾಷೆ ಇಲ್ಲವೆ? ಅದರಲ್ಲಿ ಬರೆಯಲಾಗುವುದಿಲ್ಲವೆ?" ಎಂದು ಕೇಳಿದರು. ಪ್ರಶಂಸೆಯನ್ನು ಕೇಳಲು ಹೋಗಿದ್ದ ನನಗೆ ಅವರ ಟೀಕೆ ಸರಿದೋರಲಿಲ್ಲ. ಅವರನ್ನು ಒಬ್ಬ ಆಂಗ್ಲ 'ಕಾಂಗ್ರೆಸ್ ವ್ಯಕ್ತಿ'ಯೆಂದು ಮನಸ್ಸಿನಲ್ಲಿಯೆ ಗೊಣಗಿಕೊಂಡು, "ಇಂಥ ಗಹನ ವಿಚಾರಗಳನ್ನು ಕನ್ನಡದಲ್ಲಿ ಹೇಳುವುದು ಅಸಾಧ್ಯ. ಅದರ ಛಂದಸ್ಸಿನಲ್ಲಿ ಯಾವ ವೈವಿಧ್ಯವೂ ಇಲ್ಲ" ಎಂದೆ. ಅವರು ಒಂದೇ ಮಾತು ಹೇಳಿದರು, "ಕನ್ನಡದಲ್ಲಿ ಏನಿದೆಯೊ ನನಗೆ ಗೊತ್ತಿಲ್ಲ; ಆದರೆ ಬಂಗಾಳಿಯನ್ನು ಕುರಿತು ಹೇಳುವುದಾದರೆ ಹಿಂದೆ ಇಲ್ಲದುದನ್ನು ಇಂದು ಅವರು ಸೃಷ್ಟಿಸಿಕೊಂಡಿದ್ದಾರೆ. ರವೀಂದ್ರನಾಥ ಠಾಕೂರರು ಛಂದಸ್ಸಿನ ವೈವಿಧ್ಯದಲ್ಲಿ ಇಂಗ್ಲಿಷನ್ನು ಮೀರಿಸಿದ್ದಾರೆ. ನೀವೂ ಹಾಗೆ ಮಾಡಬೇಕು" ಎಂದರು. ನಾನು ಅದೆಲ್ಲ ಅಸಾಧ್ಯವೆಂದುಕೊಂಡು ಕೇವಲ ನಿರಾಶೆಯಿಂದ ಹೊರಗೆ ಬಂದೆ .ಬರುವ ದಾರಿಯಲ್ಲಿ ಕಸಿನ್ಸ್ ಅವರ

ಹೇಳಿಕೆಯ ಪರಿಣಾಮವಾಗಿಯೊ ಅಥವಾ ಅದರಿಂದ ನನ್ನ ಮನಸ್ಸಿನ ಮೇಲಾದ ಪರಿಣಾಮದಿಂದಲೊ ಒಂದು ಕನ್ನಡ ಹಾಡು ನನ್ನ ಮನಸ್ಸಿನಲ್ಲಿ ಮೂಡಿ ಬಂದಿತು. ಅದನ್ನು ಈಗ ಯಾರಾದರೂ ಕೇಳಿದರೆ ಬಿದ್ದು ಬಿದ್ದು ನಕ್ಕಾರು. ಆ ಹಾಡನ್ನು ನನ್ನ ಕೊಠಡಿಯಲ್ಲಿದ್ದ ಸಹಪಾಠಿ ರಾಗಸಹಿತವಾಗಿ ಹಾಡಿದರು. ನಮ್ಮ ಸಂಗೀತಗಾರರು ಏನನ್ನು ಕೊಟ್ಟರೂ ತಮ್ಮ ಕಲಾಮಹಿಮೆಯಿಂದ ಅದನ್ನು ಅಪರಂಜಿಯಾಗಿ ಮಾಡುತ್ತಾರೆ . ನನ್ನ ಗೆಳೆಯರು ಒಳ್ಳೆಯ ಸಂಗೀತಗಾರರು; ಕವನವನ್ನು ಸೊಗಸಾಗಿ ಹಾಡಿದರು. ಅದರ ಯೋಗ್ಯತೆಯಿಂದಲ್ಲದಿದ್ದರೂ ಸಂಗೀತದ ಪ್ರಭಾವದಿಂದ ಅದು ಬಲು ಸೊಗಸಾಗಿ ಕಾಣಿಸಿತು. ಆಗ ನನಗನಿಸಿತು–ಇಂಗ್ಲಿಷಿನಲ್ಲಿ ಬರೆದರೆ ಹಾಡುವುದಕ್ಕಾಗುವುದಿಲ್ಲ. ರಾಗವಾಗಿ ಓದುವುದಕ್ಕೂ ಆಗುವುದಿಲ್ಲ. ಕನ್ನಡದಲ್ಲಿ ಬರೆದರೆ ಈ ಎರಡೂ ಉಂಟು–ಎಂದು. ನನ್ನನ್ನು ಕನ್ನಡದಲ್ಲಿ ಬರೆಯಲು ಪ್ರೇರಿಸಿದ ಸಂದರ್ಭವಿದು.

ನಾನು ಸವ್ಯಸಾಚಿಯಾಗುವೆನೆಂಬುದು ಕೆಲಕಾಲ ನನ್ನ ಕನಸಾಯಿತು. ಒಂದು ಕೈಯ್ಯಲ್ಲಿ ಇಂಗ್ಲಿಷ್, ಮತ್ತೊಂದು ಕೈಯ್ಯಲ್ಲಿ ಕನ್ನಡ ನನ್ನ ಹಿಡಿಕೆಯಲ್ಲಿ ನಿಲ್ಲುವುದೆಂದು ನಾನು ಭಾವಿಸಿದ್ದೆ. ಆದರೆ ಕವಿತಾದೇವತೆ ಏಕಪತ್ನೀವ್ರತಸ್ಥನಂತೆ ವ್ಯವಹರಿಸುವವಳು. ಆದ್ದರಿಂದಲೆ ಎರಡನ್ನೂ ಮುಂದುವರಿಸಲು ನನ್ನನ್ನು ಬಿಡಲಿಲ್ಲ. ಸ್ವಭಾವ ಸಹಜವಾಗಿಯೆ ನಾನು ಕನ್ನಡದ ಕಣಕ್ಕಿಳಿದೆ. ಅದು ಕನ್ನಡ ನವೋದಯವಾಗುತ್ತಿದ್ದ ಕಾಲ. ದಿವಂಗತ ಬಿ.ಎಂ.ಶ್ರೀ ಮೊದಲಾದವರ ಕವನಗಳು ಆಗತಾನೆ ಮಾಸಪತ್ರಿಕೆಗಳಲ್ಲಿ ಬರುತ್ತಿದ್ದವು; ಮನಸ್ಸು ಅವುಗಳ ಕಡೆ ಒಲಿಯಿತು; ಕನ್ನಡದಲ್ಲಿ ಬರಹ ಮುಂದೆ ಸಾಗಿತು; ನನ್ನ ಭಾವನೆ ಬದಲಾಯಿಸಿತು. ಪ್ರೊ॥ ಶಾಂತವೀರಪ್ಪನವರು ಇಂಗ್ಲಿಷ್ ಸಾಹಿತ್ಯವನ್ನು ಈಗತಾನೆ ಬೇಕಾದಷ್ಟು ಹೊಗಳಿದ್ದಾರೆ. ನಮ್ಮ ಸಾಹಿತ್ಯ ಪರಿಚಯವಾಗುವುದಕ್ಕೆ ಮುಂಚೆ ನನಗೂ ಇಂಗ್ಲಿಷ್ ಎಂಬುದು ಅದ್ವಿತೀಯ ಎಂಬ ಭಾವನೆ ಇತ್ತು. ಅದನ್ನು ಅಲ್ಲಗಳೆದವರೊಡನೆ ದೈಹಿಕ ಸ್ಪರ್ಧೆಗೂ ಸಿದ್ಧನಾಗುವಷ್ಟು ನಾನು ಇಂಗ್ಲಿಷ್ ಪ್ರೇಮಿಯಾಗಿದ್ದೆ. ನಮ್ಮ ಸಾಹಿತ್ಯ ದರ್ಶನಗಳ ಪರಿಚಯವಾದ ಮೇಲೆ ಆ ದೃಷ್ಟಿ ಬದಲಾಯಿಸಿತು.

'ನಮ್ಮ' ಎಂದು ಹೇಳಿದಾಗ ಕನ್ನಡ ಸಂಸ್ಕೃತಗಳೆರಡೂ ಎಂದು ನನ್ನ ಅರ್ಥ. ಭಾರತೀಯ ಭಾಷೆಗಳಿಗೆಲ್ಲಾ ಸಂಸ್ಕೃತ ತಾಯಿನೆಲೆಯಾಗಿ ಹಿಂದೆ ನಿಂತಿದೆ. ಕನ್ನಡ ಚೆನ್ನಾಗಿ ತಿಳಿದವರೆಂದರೆ ಸಂಸ್ಕೃತ ಬಹುಮಟ್ಟಿಗೆ ತಿಳಿದವರೆಂದೇ ಅರ್ಥ. ಆದ್ದರಿಂದ ನಮ್ಮ ಸಾಹಿತ್ಯ ದರ್ಶನ ಗ್ರಂಥಗಳನ್ನು ಪರಿಚಯ ಮಾಡಿಕೊಂಡ ಮೇಲೆ ನನಗನಿಸಿತು; ನಾವು ಎಷ್ಟಾದರೂ ಹಿಮಾಲಯದ ಮಕ್ಕಳು; ಪಾಶ್ಚಾತ್ಯರು ಆಲ್ಪ್ಸ್ ಪರ್ವತದ ಮಕ್ಕಳು ಎಂದು! ಅವರು ವಿಜ್ಞಾನದಲ್ಲಿ ಬಹು ಮುಂದುವರಿದಿದ್ದಾರೆ. ಆದರೆ ದರ್ಶನದಲ್ಲಿ ಅವರನ್ನು ಕುಬ್ಜರೆಂದು ಕರೆಯಬೇಕಾಗುತ್ತದೆ. ಇನ್ನು ಮುಂದೆ ನಾವು ಏರಲಿರುವ ಎತ್ತರ ಭಗವತಿ ವಾಗ್ದೇವಿ ನಮ್ಮಲ್ಲಿ ಸೃಷ್ಟಿಸುವ ಮಹಾಕವಿಗಳನ್ನೂ ಮಹಾ ದಾರ್ಶನಿಕರನ್ನೂ ಅವಲಂಬಿಸುತ್ತದೆ. ನಮ್ಮಭಾಷೆಗೆ ಜಗತ್ತಿನ ಯಾವ ಭಾಷೆಯ ಶ್ರೀಮಂತತೆಗಾದರೂ ಹೆಗಲೆಣೆಯಾಗಿ ನಿಲ್ಲುವ ಶಕ್ತಿಯಿದೆ.

ನಾನು ಇಂಗ್ಲಿಷ್ ಭಾಷೆಯ ದ್ವೇಷಿಯಲ್ಲ. (ಪ್ರೊ॥ ಶಾಂತವೀರಪ್ಪನವರೂ 'ಅಲ್ಲ' ಎಂದು ಹೇಳಿದ್ದಾರೆ) ಈಗಲೂ ನಾನು ಬಹುಶಃ ಕನ್ನಡ ಪುಸ್ತಕಗಳನ್ನು ಓದುವುದಕ್ಕಿಂತ ಹೆಚ್ಚಾಗಿ ಇಂಗ್ಲಿಷ್ ಗ್ರಂಥಗಳನ್ನು ಓದುತ್ತಿದ್ದೇನೆ. ಇದಕ್ಕೆ ಮುಖ್ಯ ಕಾರಣವೆಂದರೆ ಬೇರೆ ಬೇರೆ ಅತಿ ವಿವರದ ಶಾಸ್ತ್ರಗಳನ್ನು ಓದುವ ಅಭೀಪ್ಸೆ. ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಭಾಷಣದಲ್ಲಿ ನಾನು ಮೂರು ಮುಖ್ಯ ವಿಷಯಗಳನ್ನು ಪ್ರತಿಪಾದಿಸಿ ಮಾತನಾಡಿದ್ದೇನೆ. ನಮ್ಮಲ್ಲಿ ವಿಜ್ಞಾನದಲ್ಲಾಗಲಿ ಸಾಹಿತ್ಯದಲ್ಲಾಗಲಿ ಉತ್ತಮ ಕಾರ್ಯವನ್ನು ಮಾಡಬೇಕೆಂದಿರುವವರಿಗೆ ಮೂರು ಭಾಷೆಗಳ ಸಮರ್ಪಕವಾದ ಪರಿಚಯ ಅತ್ಯಂತ ಆವಶ್ಯಕ. ಮೊದಲನೆಯದಾಗಿ ಪ್ರಾದೇಶಿಕ ಭಾಷೆ, ಈಗ ನಮ್ಮ ಕನ್ನಡ. ಎರಡನೆಯದಾಗಿ ಅಂತರರಾಷ್ಟ್ರೀಯವಾಗಿ ಸಮಸ್ತ ತಿಳಿವಳಿಕೆಯ ಭಂಡಾರಕ್ಕೂ ಗವಾಕ್ಷವನ್ನು ತೆರೆಯುವ ಇಂಗ್ಲಿಷ್. ಮೂರನೆಯದಾಗಿ ಭಾರತೀಯ ತತ್ತ್ವಶಾಸ್ತ್ರ ಸಾಹಿತ್ಯಾದಿ ವಿಚಾರಗಳನ್ನು ಅರಿಯಲು ಸಾಧಕವಾದ ಸಂಸ್ಕೃತ. ವಿಶೇಷವಾದ ಜ್ಞಾನವನ್ನು ಪಡೆಯುವವರಿಗೆ ಈ ಮೂರು ಭಾಷೆಗಳ ಉತ್ತಮಜ್ಞಾನ ಅತ್ಯಂತ ಆವಶ್ಯಕ. ಕೇವಲ ತೇಲಿಕೆಯ ನೀರು ನೀರಾದ ಪರಿಚಯ ಸಾಲದು. ಈಚೆಗೆ ನಮ್ಮ ಬಿ.ಎ., ಬಿ.ಎಸ್ ಸಿ. ಪರೀಕ್ಷೆಗಳಲ್ಲಿ ತೇರ್ಗಡೆಯಾಗಿ ಹೋಗುವ ವಿದ್ಯಾರ್ಥಿಗಳಿಗೆ ಇಂಗ್ಲಿಷ್ ವೃತ್ತಾಂತ ಪತ್ರಿಕೆಗಳನ್ನು ಓದಿ ಅರ್ಥ ಮಾಡಿಕೊಳ್ಳುವುದೂ ಕಷ್ಟವಾಗಿದೆ. ಸಾಮಾನ್ಯರ ವಿಚಾರ ಬೇರೆ. ಸಂಶೋಧಕರಿಗೆ, ತಜ್ಞರಿಗೆ, ಇಂಗ್ಲಿಷಿನ ಆಳವಾದ ಪರಿಚಯ ಆವಶ್ಯಕ.

ಇಲ್ಲಿ ನೀವೆಲ್ಲರೂ ಸೇರಿರುವುದು ವಿಚಾರ ಮಾಡುವುದಕ್ಕಾಗಿ. ಈ ವಿಚಾರ ಗೋಷ್ಠಿಯಲ್ಲಿ ನಮ್ಮ ನಾಡಿನ ಹಿತವನ್ನು ಕುರಿತು ಸಮಾಲೋಚನೆ ಮಾಡುವುದು ಅತ್ಯಂತ ಆವಶ್ಯಕ. ನಮ್ಮ ನಾಡಿನ ಲಕ್ಷಾಂತರ ಮಕ್ಕಳ ಉದ್ಧಾರ ಅಥವಾ ಅಧೋಗತಿ ನಮ್ಮ ನಿರ್ಣಯಗಳ ಮೇಲೆ ನಿಂತಿದೆ. ವಿವೇಚನೆಯಿಂದ ನಡೆದುಕೊಂಡರೆ ವಿದ್ಯಾರ್ಜನೆಯ ಹೆಸರಿನಲ್ಲಿ ಹಾಳಾಗುತ್ತಿರುವ ಕೋಟ್ಯಂತರ ರೂಪಾಯಿಗಳನ್ನು ಸಾರ್ಥಕಗೊಳಿಸಬಹುದು. ನಾನು ಪ್ರಾಧ್ಯಾಪಕನಾಗಿದ್ದಾಗ ಈ ವಿಚಾರ ಅರ್ಥವಾಗುತ್ತಿರಲಿಲ್ಲ. ವೈಸ್ ಛಾನ್ಸಲರ್ ಆದಮೇಲೆ ಪ್ರತಿ ಪರೀಕ್ಷೆ ನಡೆದಾಗಲೂ ಆಗುವ ಆರ್ಥಿಕ ಮಾನಸಿಕ ನಷ್ಟವನ್ನು ಕಂಡು, ನಮ್ಮ ದೇಶದ ದುಃಸ್ಥಿತಿಯನ್ನು ನೋಡಿ ಮರುಗುವಂತಾಗಿದೆ. ಈ ಸ್ಥಿತಿಯಲ್ಲಿ ನಾವು ಏನು ಮಾಡಬೇಕು? ಉಸುಬಿನಲ್ಲಿ ಸಿಕ್ಕಿಬಿದ್ದಿದ್ದೇವೆ. ಉಪಾಧ್ಯಾಯರೂ ಮಕ್ಕಳೂ ಈ ಉಸುಬಿನಲ್ಲಿ ಸಿಕ್ಕಿ ನರಳುತ್ತಿದ್ದಾರೆ. ಯಾರು ಯಾರನ್ನು ಎತ್ತುವುದು? ಈ ಸಂಕಟದಿಂದ ಪಾರಾಗುವುದೆ ಕಷ್ಟವಾಗಿದೆ. ಈ ವಿಚಾರಗಳನ್ನು ಚೆನ್ನಾಗಿ ಮನನಮಾಡಿ ದೇಶದ ಅಭ್ಯುದಯದ ದೃಷ್ಟಿಯಿಂದ ನೀವು ನಿರ್ಣಯಗಳನ್ನು ಮಾಡಬೇಕು. ನನ್ನ ಕೆಲವು ಅಭಿಪ್ರಾಯಗಳನ್ನು ನಿಮ್ಮ ಮುಂದೆ ಹೇಳುತ್ತೇನೆ.

ಸ್ವಾತಂತ್ರ್ಯಪೂರ್ವದಲ್ಲಿ ಇಂಗ್ಲಿಷಿಗಿದ್ದ ಸ್ಥಾನ ಈಗ ಸಂಪೂರ್ಣವಾಗಿ ಬದಲಾವಣೆ ಹೊಂದಿದೆ. ಹಿಂದೆ ದೇಶಭಾಷೆಗಳು ಅವನತ ಮತ್ತು ಅವಮಾನಿತ

ಸ್ಥಿತಿಯಲ್ಲಿದ್ದುವು. ಆದರೆ ಈಗ ಮೂವತ್ತು ವರ್ಷಗಳಲ್ಲಿ ಕಾಲ ಬದಲಾಯಿಸಿದೆ. ಪ್ರಥಮವರ್ಗಕ್ಕೆ ಸೇರಿದ ಕೃತಿಗಳು ಕನ್ನಡದಲ್ಲಿ ಮೂಡಿವೆ. ಇತರ ದೇಶಭಾಷೆಗಳಲ್ಲಿ ಏನಾಗಿದೆ ಎಂಬುದನ್ನು ಅಧಿಕಾರವಾಣಿಯಿಂದ ಮಾತಾಡಲು ನನಗೆ ಸಾಧ್ಯವಿಲ್ಲ. ಸಾಹಿತ್ಯ ಅಕಾಡೆಮಿಯವರು ಪ್ರಕಟಿಸಿರುವ "Comtemporary Literature" ಎಂಬ ಪುಸ್ತಕ ಭಾರತದ ಇತರ ದೇಶಭಾಷೆಗಳು ಸಾಧಿಸಿರುವ ಪ್ರಗತಿ ಅಲ್ಪವಾದುದಲ್ಲ ಎಂದು ತಿಳಿಸುತ್ತದೆ.

ನಾವು ಇಂದು ಇಂಗ್ಲಿಷ್ ಭಾಷೆಯನ್ನು ಅಂತರರಾಷ್ಟ್ರೀಯ ಭಾಷೆ ಎಂದು ವಾದಿಸುತ್ತಿದ್ದೇವೆ. ಯಾವ ದೇಶಕ್ಕೆ ಹೋದರೂ ಇಂಗ್ಲಿಷ್ ತಿಳಿದವರು ಕೆಲವರಾದರೂ ಇರುವುದರಿಂದ ಇಂಗ್ಲಿಷ್‌ನಲ್ಲಿ ವ್ಯವಹರಿಸಬಹುದು. ಈ ದೃಷ್ಟಿಯಲ್ಲಿ ಇಂಗ್ಲಿಷ್ ಅಂತರರಾಷ್ಟ್ರೀಯ ಭಾಷೆ. ಆದರೆ ನಾವು ಭಾವಿಸಿದ ಪ್ರಮಾಣದಲ್ಲಿ ಇಂಗ್ಲಿಷ್ ನ ವ್ಯಾಪ್ತಿ ಅನೇಕ ದೇಶಗಳಲ್ಲಿ ಕಂಡುಬರುವುದಿಲ್ಲ. ಯಾವ ದೇಶಕ್ಕೆ ಹೋದರೂ ಇಂಗ್ಲಿಷ್ ತಿಳಿದವರು ಕೆಲವರಾದರೂ ಇರುತ್ತಾರೆ, ನಿಜ. ಇಂಗ್ಲಿಷ್ ಭಾಷೆಯಲ್ಲಿ ಇತರ ದೇಶಗಳ ಉತ್ತಮ ಕೃತಿಗಳೆಲ್ಲ ಭಾಷಾಂತರವಾಗಿವೆ; ಆದ್ದರಿಂದ ಇಂಗ್ಲಿಷ್ ಭಾಷೆ ಕರಗತವಾದರೆ ಸ್ವಲ್ಪ ಹೆಚ್ಚು ಕಡಿಮೆ ಪ್ರಪಂಚದ ಸಾಹಿತ್ಯ, ವಿಜ್ಞಾನ ಮೊದಲಾದ ಜ್ಞಾನವನ್ನೆಲ್ಲ ಬಹುಮಟ್ಟಿಗೆ ತಿಳಿಯಲು ಸಹಾಯಕವಾಗುತ್ತದೆ. ಆದರೆ ಈಗ ಸಂಸ್ಕೃತವನ್ನು ಒಳಗೊಂಡು ನಮ್ಮ ದೇಶಭಾಷೆಗಳಲ್ಲಿರುವ ಸಂಪತ್ತು ಹಾಗೂ ನಮಗೆ ಬರಬಹುದಾದ ಸಂಪತ್ತುಗಳನ್ನು ಭಾವಿಸಿದಾಗ ನಾವೇನೂ ಕುಗ್ಗಬೇಕಾಗಿಲ್ಲ, ತತ್ತರಿಸಬೇಕಾಗಿಲ್ಲ. ಈಗ ಇಂಗ್ಲಿಷ್ ಇನ್ನೂರು ಮುನ್ನೂರು ವರ್ಷಗಳಲ್ಲಿ ಸಾಧಿಸಿರುವುದನ್ನು ನಾವು ಇನ್ನು ಐವತ್ತು ಅರುವತ್ತು ವರ್ಷಗಳಲ್ಲಿಯೆ ಸಾಧಿಸಬಹುದು. ಈಗ ಇಂಗ್ಲಿಷ್ ದೊಡ್ಡದೊ ಅಲ್ಲವೊ ಎಂಬ ಪ್ರಶ್ನೆಯಲ್ಲ, ನಮ್ಮ ಮುಂದಿರುವುದು. ಇಂಗ್ಲಿಷನ್ನು ಎಷ್ಟರಮಟ್ಟಿಗೆ ಬಳಸಬೇಕೆಂಬುದನ್ನು ನಾವು ಇಂದು ನಿಶ್ಚಯಸಬೇಕಾಗಿದೆ.

ಸ್ವಾತಂತ್ರ್ಯೋತ್ತರದ ತರುವಾಯ ಇಂಗ್ಲಿಷ್ ವಿದ್ಯಾಭ್ಯಾಸದ ರೀತಿ ವ್ಯತ್ಯಾಸವಾಗಿದೆ. ಹಿಂದೆ ಒಂದು ತರಗತಿಯಲ್ಲಿ ಹದಿನೈದು ಮಂದಿ ವಿದ್ಯಾರ್ಥಿಗಳಿರುತ್ತಿದ್ದರು. ಆಗ ಮನೆಯಲ್ಲಿ "Private Tuition" ಕೊಡಿಸುವ ಆವಶ್ಯಕತೆ ಇರಲಿಲ್ಲ. ತರಗತಿಯಲ್ಲಿ ಉಪಾಧ್ಯಾಯರು ಬೋಧನೆಯಲ್ಲಿ ಹೆಚ್ಚು ಶ್ರದ್ಧೆ ವಹಿಸುತ್ತಿದ್ದರು. ತಪ್ಪುಗಳನ್ನು ಹೇಳಿ ಬರೆಯಿಸಿ, ತಪ್ಪು ಹೇಳಿದ ವಿದ್ಯಾರ್ಥಿಯ ಕಿವಿಯನ್ನು ಸರಿಯಾಗಿ ಹೇಳಿದ ವಿದ್ಯಾರ್ಥಿಯ ಕೈಯಿಂದ ಹಿಂಡಿಸಿ, ಬಾಯಿಪಾಠ ಮಾಡಿಸಿ, ಇಂತಹ ಅನೇಕ 'ಡ್ರಿಲ್' ಮಾಡಿಸಿ ಇಂಗ್ಲಿಷ್ ಹೇಳಿಕೊಡುತ್ತಿದ್ದರು. ಆಗ ಶಾಲೆಗೆ ಬರುತ್ತಿದ್ದ ಮಕ್ಕಳು ಕೂಡ ಉತ್ತಮವರ್ಗದಿಂದ, ಶ್ರೀಮಂತರ ಮನೆಗಳಿಂದ ಬರುತ್ತಿದ್ದರು. ಬರುತ್ತ ಬರುತ್ತ ಈ ಹದಿನೈದು ಜನವಿರುತ್ತಿದ್ದ ತರಗತಿಯ ಸಂಖ್ಯೆ ಬೆಳೆದು ಇಂದು ನೂರ ಐವತ್ತಾಗಿದೆ. ಶತಮಾನಗಳಿಂದ ವಿದ್ಯೆ, ಅಕ್ಷರ, ಸಂಸ್ಕೃತಿ ಎಂಬುದನ್ನು ಮೂಸಿ ಕೂಡ ನೋಡದೆ ಇರುವ ಮನೆತನಗಳಿಂದ ಬಂದ ಮಕ್ಕಳು ಇಂದು ಶಾಲೆಯಲ್ಲಿ ವಿದ್ಯಾಭ್ಯಾಸ ಮಾಡುತ್ತಿದ್ದಾರೆ. ಈ ಮಕ್ಕಳಿಗೆ ಶ್ರೀಮಂತರ ಅಥವಾ ವಿದ್ಯಾವಂತರ

ಮಕ್ಕಳಿಗಿರುವ "Private Tuition" (ಮನೆಯ ಪಾಠದ) ಸೌಲಭ್ಯ ಒಂದೂ ಇಲ್ಲ. ಈ ಮಕ್ಕಳಿಗೆ ಉತ್ತಮ ಆರ್ಥಿಕ ಸಾಮರ್ಥ್ಯವನ್ನು ಪಡೆಯುವ ಅನುಕೂಲಗಳಿಲ್ಲ; ಮನೆಯಲ್ಲಿ ಸಂಸ್ಕೃತಿಯ ವಾತಾವರಣವೂ ಇಲ್ಲ. ಇಂತಹ ಲಕ್ಷಾಂತರ ಮಕ್ಕಳು ವಿದ್ಯಾಭ್ಯಾಸ ಮಾಡಬೇಕಾಗಿದೆ. ಹಿಂದೆ ಹೈಸ್ಕೂಲ್ ಮತ್ತು ಕಾಲೇಜುಗಳು ಜಿಲ್ಲೆಯ ಕೇಂದ್ರಗಳಲ್ಲಿ ಅಥವಾ ಮೈಸೂರು ಬೆಂಗಳೂರು ಅಂತಹ ನಗರಗಳಲ್ಲಿದ್ದುವು. ಅಲ್ಲಿ ವ್ಯಾಸಂಗ ಮಾಡುವವರ ಸಂಖ್ಯೆಯೂ ಕಡಿಮೆಯಾಗಿತ್ತು. ಈಗ ದೊಡ್ಡ ದೊಡ್ಡ ಹಳ್ಳಿಗಳಲ್ಲಿಯೂ ಹೈಸ್ಕೂಲುಗಳಿವೆ. ಕಾಲೇಜುಗಳೂ ಪ್ರಾರಂಭವಾಗುತ್ತಿವೆ . ಹಿಂದೆ ಪ್ರಾಥಮಿಕಶಾಲೆಯನ್ನು ತೆರೆಯುವುದೇ ಕಷ್ಟವಾಗಿದ್ದ ಕಡೆ ಇಂದು ಕಾಲೇಜುಗಳು ಹುಟ್ಟಿಕೊಳ್ಳುತ್ತಿವೆ. ಬದಲಾಯಿಸಿರುವ ಈ ಸನ್ನಿವೇಶವನ್ನು ಉಪಾಧ್ಯಾಯರೂ ಶಿಕ್ಷಣತಜ್ಞರೂ ಚೆನ್ನಾಗಿ ಅರಿಯಬೇಕು.

ಈ ವರ್ಷದ ಎಸ್.ಎಸ್.ಎಲ್.ಸಿ. ಪರೀಕ್ಷೆಗೆ ಇಟ್ಟಿರುವ 'ಟೆಕ್ಸ್ಟ್' ತೆಗೆದುಕೊಂಡು ಅಲ್ಲಿರುವ ಕೆಲವು ಪದ್ಯ ಭಾಗಗಳನ್ನು ಓದಿ ನೋಡಿ. ಅವುಗಳನ್ನು ಇಂಗ್ಲಿಷಿನಲ್ಲಿಯೆ ವಿವರಿಸಿದರೆ ವಿದ್ಯಾರ್ಥಿಗಳಿಗೆ ಹೇಗೆ ತಾನೆ ತಿಳಿದೀತು! ಅನೇಕ ಮಕ್ಕಳಿಗೆ ಇಂಗ್ಲಿಷ್ ಗಂಧವೆ ಗೊತ್ತಿಲ್ಲ. ಹೋಗಲಿ, ಅವರಿಗೆ ಆ ಪದ್ಯಗಳಲ್ಲಿ ಬರುವ ವಿಷಯವಾದರೂ ತಿಳಿಯಲೆಂದರೆ, ಇಂಗ್ಲಿಷ್ ಉಪಾಧ್ಯಾಯರು ಕನ್ನಡದಲ್ಲಿ ವಿವರಿಸಿ ಪಾಠ ಹೇಳುವುದಿಲ್ಲ. ಕನ್ನಡದಲ್ಲಿ ಪಾಠ ಹೇಳಿದರೆ ಕೆಲವರು ತಮ್ಮ ಘನತೆಗೆ ಧಕ್ಕೆಯಾಗುವುದೆಂದು ಭಾವಿಸುವವರಿದ್ದಾರೆ. ಕೆಲವರಿಗೆ ಮೇಲಿನ ಅಧಿಕಾರಿಗಳ ಭೀತಿ ಇರಬಹುದು. ಈ ಸ್ಥಿತಿಯಲ್ಲಿ ಮಕ್ಕಳಿಗೆ ಆಗುತ್ತಿರುವ ನಷ್ಟವನ್ನು ಯಾರೂ ಗಮನಿಸುತ್ತಿಲ್ಲ. ಉಪಾಧ್ಯಾಯರು ತಮ್ಮ ಹೃದಯವನ್ನು ಶೋಧಿಸಿಕೊಳ್ಳಬೇಕಾಗಿದೆ. ಎಲ್ಲರೂ ಈ ಪರಿಸ್ಥಿತಿಯನ್ನು ಯೋಚಿಸಿ ಮುಂದೆ ಇಂಗ್ಲಿಷ್ ಕಲಿಸುವ ವಿಧಾನವನ್ನೆ ಬದಲಾಯಿಸಬೇಕು.

ಈ ವಿಚಾರವನ್ನು ಯೋಚಿಸಿಯೇ ನಾನು "ನಮಗೆ ಬೇಕಾಗಿರುವ ಇಂಗ್ಲಿಷ್" ಅನ್ನು ಕುರಿತು ಕನ್ನಡದಲ್ಲಿ ಒಂದು ಲೇಖನವನ್ನು ಬರೆದೆ. ಅದನ್ನು ಇಂಗ್ಲಿಷಿಗೆ ಭಾಷಾಂತರ ಮಾಡಿಸಿ "The English we need"ಎಂಬ ಸಣ್ಣ ಪುಸ್ತಕವನ್ನೂ ಅಚ್ಚು ಹಾಕಿಸಿದ್ದೇನೆ. ಇಂಗ್ಲಿಷ್ ನಮಗೆ ಬೇಕು ಎಂಬ ವಿಚಾರದಲ್ಲಿ ಸಂದೇಹವಿಲ್ಲ. ಆದರೆ ಯಾರಿಗೆ ಬೇಕು? ಎಷ್ಟು ಬೇಕು? ಏತಕ್ಕೆ ಬೇಕು? ಈ ಮೂರನ್ನು ಮಾತ್ರ ಚೆನ್ನಾಗಿ ಗಮನಿಸಬೇಕು.

ಹೈಸ್ಕೂಲಿನಲ್ಲಿರುವ ವಿದ್ಯಾರ್ಥಿಗಳು ಇಂಗ್ಲಿಷ್ ಕಲಿಯುವ ಕಷ್ಟವನ್ನು ಕುರಿತು ಪ್ರಸ್ತಾಪಿಸಿದ್ದೇನೆ. ಇನ್ನು ವಿಶ್ವವಿದ್ಯಾನಿಲಯವನ್ನು ತೆಗೆದುಕೊಂಡರೆ, ಅಲ್ಲಿನ ವಿದ್ಯಾರ್ಥಿಗಳ ಇಂಗ್ಲಿಷ್ ಉತ್ತರಪತ್ರಿಕೆಗಳನ್ನು ತೆಗೆದು ನೋಡಿ ಅಧ್ಯಾಪಕರು ಮರುಭೂಮಿಯಲ್ಲಿ ನೀರನ್ನು ಹುಡುಕುವಂತೆ ಸ್ವಲ್ಪ ಆಧಾರ ಸಿಕ್ಕಿದರೂ ಸಾಕು 'ನಂಬರ್' ಕೊಡೋಣವೆಂದು ಹೊರಟರೂ, ಪಾಪ, ಅವರಿಗೆ ಹತಾಶೆ,

ಅಧ್ಯಾಪಕರು ಎಷ್ಟು ಉದಾರಿಗಳಾದರೂ ಶೇಕಡ ಇಪ್ಪತ್ತುಮಂದಿ ವಿದ್ಯಾರ್ಥಿಗಳು ತೇರ್ಗಡೆಯಾಗುವುದೂ ಸಾಧ್ಯವಿಲ್ಲ. ವಿದ್ಯಾರ್ಥಿಗಳು, "ನಾವು ಇಂಗ್ಲಿಷಿಗೆ ಕಷ್ಟಪಡುವಷ್ಟು ಇನ್ನು ಯಾವುದಕ್ಕೂ ಇಲ್ಲ, ಆದರೂ ಇಂಗ್ಲಿಷ್ ನಲ್ಲಿ ನಮ್ಮನ್ನು ತಳ್ಳಿಬಿಡುತ್ತಾರಲ್ಲ!" ಎಂದು ನೊಂದುಕೊಳ್ಳುತ್ತಾರೆ. 'ಗ್ರೇಸ್' ಅಂಕಗಳ ಕೃಪೆಯಿಂದ ಶೇಕಡ ಇಪ್ಪತ್ತು ಮಂದಿ ವಿದ್ಯಾರ್ಥಿಗಳು ಕಷ್ಟದಿಂದ ತೇರ್ಗಡೆಯಾಗಿ ವಿಶ್ವವಿದ್ಯಾನಿಲಯಕ್ಕೆ ಬರುತ್ತಾರೆ. ಅನೇಕ ವಿದ್ಯಾರ್ಥಿಗಳು ಕನ್ನಡ, ಗಣಿತ ಇತ್ಯಾದಿ ಬೇರೆ ವಿಷಯಗಳಲ್ಲಿ ಶೇಕಡ ೫೦, ಶೇಕಡ ೬೦ ಅಂಕಗಳನ್ನು ತೆಗೆಯುವವರು ಇಂಗ್ಲಿಷಿನಲ್ಲಿ ಶೇಕಡ ೧೫ ಅಂಕಗಳನ್ನು ಪಡೆಯುವುದೂ ಕಷ್ಟವಾಗಿರುತ್ತದೆ. ಈ ಸ್ಥಿತಿಯಲ್ಲಿಯೇ ಬಿಟ್ಟರೆ ತೇರ್ಗಡೆಯಾಗುವವರ ಸಂಖ್ಯೆ ಅತಿ ಕಡಿಮೆಯಾಗುತ್ತದೆ. ಅದರ ಪರಿಣಾಮವಾಗಿ ಭಯಂಕರ ಚಳವಳಿಗೂ ಗಲಾಟೆಗಳಿಗೂ ಅವಕಾಶವಾಗುವುದೆಂಬ ಭಯದಿಂದ 'ಗ್ರೇಸ್' ಸೇರಿಸುವುದು ಇಂದು ಅಭ್ಯಾಸವಾಗಿದೆ. 'ಗ್ರೇಸ್' ಸೇರಿಸುವುದನ್ನು ಕುರಿತು ಯೋಚಿಸಿದರೆ, ನಾವು ಮಾಡುತ್ತಿರುವ ಕೆಲಸ ಆತ್ಮವಂಚನೆಯಲ್ಲವೆ ಎಂದೆನಿಸುತ್ತದೆ. ಇಂಗ್ಲಿಷಿನಲ್ಲಿ ಒಂದು ಪತ್ರವನ್ನು ಸರಿಯಾಗಿ ಬರೆಯಲು ತಿಳಿಯದ, ಕ್ರಿಯಾಪದವನ್ನು ಎಲ್ಲಿ ಹಾಕಬೇಕೆಂದು ತಿಳಿಯದ ವಿದ್ಯಾರ್ಥಿಗಳು ಇಂಗ್ಲಿಷಿನಲ್ಲಿ ಗಹನವಾದ ವಿಚಾರವನ್ನು ಬರೆಯತೊಡಗಿದರೆ ಉತ್ತರ ಯಾವ ಮಟ್ಟದಲ್ಲಿದ್ದೀತು? ಯಾರ ಹತ್ತಿರವೊ ಬರೆಸಿ ಬಾಯಿಪಾಠಮಾಡಿ, ಅದೃಷ್ಟವಶಾತ್ ಬಾಯಿಪಾಠ ಮಾಡಿದ್ದಕ್ಕೂ ಪ್ರಶ್ನೆ ಬಂದಿದ್ದಕ್ಕೂ ಹೊಂದಿಕೆಯಾಗಿ ವಿದ್ಯಾರ್ಥಿಗಳು ತೇರ್ಗಡೆಯಾಗಬೇಕಾಗಿದೆ. ಬಾಯಿಪಾಠಮಾಡಿದ ಪ್ರಶ್ನೆಗಳು ಬಾರದಿದ್ದರೆ ಆ ವಿದ್ಯಾರ್ಥಿಗಳ ವಿಚಾರ ಗೊತ್ತೇ ಇದೆ.

ಈ ವಿಚಾರಗಳನ್ನು ಪರಿಶೀಲಿಸಿ ಇಂಗ್ಲಿಷ್ ಎಲ್ಲರಿಗೂ ಆವಶ್ಯಕವೆ? ಎಂಬುದನ್ನು ನಿರ್ಣಯ ಮಾಡಬೇಕು. ನಮ್ಮ ಕರ್ಣಾಟಕದಲ್ಲಿ ಎಷ್ಟು ಮಂದಿ ವಿದ್ಯಾರ್ಥಿಗಳು ಅಖಿಲ ಭಾರತದ ರಂಗಕ್ಕೆ ಹೋಗುತ್ತಾರೆ? ಎಷ್ಟು ಮಂದಿ ವಿದ್ಯಾರ್ಥಿಗಳು ಅಂತರರಾಷ್ಟ್ರೀಯ ರಂಗಕ್ಕೆ ಪ್ರವೇಶಿಸುತ್ತಾರೆ?–ಈ ವಿಚಾರವನ್ನು ಮನನಮಾಡಬೇಕು. ಅಖಿಲ ಭಾರತೀಯ ರಂಗಕ್ಕೆ ಪ್ರವೇಶಿಸುವವರಿಗೆ ಇಂಗ್ಲಿಷ್ ಬೇಕು. ಅಂತಹ ವಿದ್ಯಾರ್ಥಿಗಳ ಪ್ರಮಾಣ ಎಷ್ಟು? ಅಂತರರಾಷ್ಟ್ರೀಯ ಸ್ಥಾನಮಾನಗಳಲ್ಲಿ ರಾಜಕೀಯ, ವೈಜ್ಞಾನಿಕ ಇತ್ಯಾದಿ ಶಾಖೆಗಳಿಗೆ ಪ್ರವೇಶಿಸುವವರಿಗೆ ಇಂಗ್ಲಿಷ್ ಭಾಷೆಯ ಜ್ಞಾನ ಆವಶ್ಯಕ. ಇನ್ನು ಕರ್ಣಾಟಕದಲ್ಲಿಯೆ ಇದ್ದು ತಮ್ಮ ಜೀವನವನ್ನು ರೂಪಿಸಿಕೊಳ್ಳುವವರೂ ಇದ್ದಾರೆ. ಈ ಮೂರುವರ್ಗದ ವಿದ್ಯಾರ್ಥಿಗಳನ್ನು ವಿಭಾಗಮಾಡಿಕೊಂಡು ಯಾರು ಯಾರಿಗೆ ಎಷ್ಟು ಇಂಗ್ಲಿಷ್ ಬೇಕು ಎಂಬುದನ್ನು ನಿಷ್ಕರ್ಷಿಸಬೇಕು.

ನಮ್ಮಲ್ಲಿ ಬಹುಜನರಿಗೆ ಓದಿ ವಿಷಯವನ್ನು ತಿಳಿದುಕೊಳ್ಳುವಷ್ಟು ಇಂಗ್ಲಿಷ್ ಬಂದರೆ ಸಾಕು. ಅದಕ್ಕಿಂತ ಕಡಿಮೆ ಸಂಖ್ಯೆಯ ಜನರಿಗೆ ಇಂಗ್ಲಿಷ್ ಮಾತನಾಡುವ ಮತ್ತು ಓದುವ ಜ್ಞಾನ ಬೇಕು. ಅದಕ್ಕಿಂತಲೂ ಕಡಿಮೆ ಸಂಖ್ಯೆಯ ಜನರಿಗೆ ಇಂಗ್ಲಿಷ್ ಮಾತನಾಡುವ, ಓದುವ, ಬರೆಯುವ ಜ್ಞಾನ ಬೇಕು. ಈಗ ನನಗೆ ಸಂಸ್ಕೃತ ಮಾತನಾಡಲು ಬರುವುದಿಲ್ಲ, ಆದರೆ ಸಂಸ್ಕೃತ ಗ್ರಂಥಗಳನ್ನು ಓದಿ ವಿಷಯವನ್ನೂ

ವಿಚಾರವನ್ನೂ ಗ್ರಹಿಸುತ್ತೇನೆ. ಬಂಗಾಳಿ ಭಾಷೆಯಲ್ಲಿ ಮಾತನಾಡಲು ನನಗೆ ಬರುವುದಿಲ್ಲ. ಆದರೆ ಪುಸ್ತಕಗಳನ್ನು ಓದಿ ಅದರ ವಿಚಾರವನ್ನು ಗ್ರಹಿಸಿ ಪುಷ್ಟಿಯನ್ನು ಪಡೆಯಬಲ್ಲೆ. ನಮ್ಮ ದೇಶದಲ್ಲಿ ವಿಷಯ ಪರಿಜ್ಞಾನಕ್ಕಾಗಿ ಅನೇಕರಿಗೆ ಇಂಗ್ಲಿಷ್ ಭಾಷೆಯನ್ನು ಓದಿ ಅರ್ಥ ಮಾಡಿಕೊಳ್ಳುವಷ್ಟು ಜ್ಞಾನವಿದ್ದರೆ ಸಾಕು.

ಒಬ್ಬ 'ಎಂಜಿನಿಯರ್' 'ಮೆಡಿಕಲ್ ಮ್ಯಾನ್' ಇವರಿಗೆ ಭಾಷಾ ಜ್ಞಾನ ಬೇಕು. ಹಾಗೆಯೆ ಒಬ್ಬ ಮಂತ್ರಿಯಾಗುವವನಿಗೂ ಭಾಷಾಜ್ಞಾನ ಬೇಕು. ಎಂಜಿನಿಯರ್ ಅಥವಾ ಮೆಡಿಕಲ್ ಮ್ಯಾನ್ ಆಗುವವನನ್ನು ಷೇಕ್ಸ್‌ಪಿಯರ್, ಕೀಟ್ಸ್, ಮಿಲ್ಟನ್, ವರ್ಡ್ಸ್‌ವರ್ತ್, Mysticism of Coleridge- ಈ ವಿಚಾರಗಳಲ್ಲಿ ಇಂಗ್ಲಿಷಿನಲ್ಲಿ ಪ್ರಬಂಧ ಬರೆಯಲಿಲ್ಲವೆಂದು ಐದು ವರ್ಷ 'ಫೇಲ್' ಮಾಡಿಸಿದರೆ ದೇಶಕ್ಕೆ ದೊಡ್ಡ ನಷ್ಟ. "ನಿಮ್ಮ ಇಂಗ್ಲಿಷ್ ತಂಟೆಗೆ ಬರೋದಿಲ್ಲ. ನಾನು Polytechinc ಗೋ Politicsಗೋ ಹೋಗುತ್ತೇನೆ. ಬಿಟ್ಟುಬಿಡಿ" ಎಂದರೆ ನಾವು ಬಿಡುವುದಿಲ್ಲ. "ಇಲ್ಲ Mysticism of Coleridge ಬರೆದ ಹೊರತು ಬಿಡುವುದಿಲ್ಲ", ಎಂದರೆ ಅವನು ಎಷ್ಟು ಪ್ರಯತ್ನ ಮಾಡಿದರೂ ಏನೂ ಪ್ರಯೋಜನವಾಗುವುದಿಲ್ಲ. "ನಾನು ಏತಕ್ಕೂ ಪ್ರಯೋಜನವಿಲ್ಲದವನು" ಎಂದು ನಿರಾಶೆಗೊಳ್ಳುತ್ತಾನೆ. ಕೆಲವರು ಬೇರೆ ರೀತಿಯ ಧೈರ್ಯ ಮಾಡಿಕೊಂಡು ರೈಲ್ವೆ ಕಂಬಿಗೆ ಸಿಕ್ಕುತ್ತಾರೆ, ಹೊಳೆಗೆ ಹಾರುತ್ತಾರೆ! ಈ ರೀತಿಯಾದ ನಷ್ಟಕ್ಕೆ ಅವಕಾಶ ಕೊಡದಂತೆ ನೋಡಿಕೊಳ್ಳಬೇಕಾದುದು ಅತ್ಯಂತ ಅವಶ್ಯಕ. ನಾಳೆಯದಿನ ಎಂಜಿನಿಯರ್ ಆಗಲು ಹೋಗುವವನಿಗೆ 'mysticism of Colegridge' 'The character of Hamlet' ತಿಳಿಯದಿದ್ದರೂ ಕ್ಷಮಿಸಬೇಕಾಗುತ್ತದೆ. ಯಂತ್ರಶಿಲ್ಪ, ವೈದ್ಯ ಇತ್ಯಾದಿ ಶಾಖೆಗಳಲ್ಲಿ ಪರಿಣತರಾಗುವ ವಿದ್ಯಾರ್ಥಿಗಳಿಗೆ ಇಂಗ್ಲಿಷನ್ನು ಭಾಷೆಗೋಸ್ಕರವಾಗಿಯೆ ಕಲಿಸಬೇಕು. ಸಾಹಿತ್ಯದಲ್ಲಿ ಅಭಿರುಚಿ ಇಲ್ಲದವನನ್ನು ಸಾಹಿತ್ಯದ ಕಡೆಗೆ ಬರಬೇಡವೆಂದು ಹೇಳಿಕಳುಹಿಸಬೇಕು.

ಇಂತಾದರೆ, ವಿದ್ಯಾರ್ಥಿಗೆ ಸಾಹಿತ್ಯದ ಗಂಧವೆ ಬೇಡವೆ? ಎಂದು ಪ್ರಶ್ನಿಸಬಹುದು. ಈ ಕಾರ್ಯವನ್ನು ಇನ್ನು ಮುಂದೆ ಕನ್ನಡಕ್ಕೆ ಬಿಟ್ಟುಬಿಡಿ. ಅತ್ಯುನ್ನತ ಸಾಹಿತ್ಯ ಕೃತಿಗಳು, ಅತ್ಯಂತ ಗಹನವಾದ ಆಲೋಚನಾ ವಿಚಾರಗಳು ಇವುಗಳೆಲ್ಲ ಕನ್ನಡ ಸಾಹಿತ್ಯದಲ್ಲಿ ಈಗಾಗಲೆ ಮೈದೋರಿವೆ. ಇಂಗ್ಲಿಷ್ ಸಾಹಿತ್ಯಕ್ಕೆ ಸರಿಸಾಟಿಯಾಗಿ, ಪ್ರಮಾಣದಲ್ಲಿ ಅಲ್ಲದಿದ್ದರೂ ಗುಣದಲ್ಲಿ, ಸಾಕಷ್ಟು ಸಾಹಿತ್ಯ ಸಿದ್ಧವಾಗಿದೆ, ಮುಂದೆ ಸಿದ್ಧವಾಗುತ್ತದೆ. ಕನ್ನಡವು ಒದಗಿಸುವಷ್ಟು ಹೃದಯಸ್ಪರ್ಶಿಯಾಗಿ ಇಂಗ್ಲಿಷ್ ಒದಗಿಸಲಾರದು. ಭಾವ ಬುದ್ಧಿ ಪುಷ್ಟಿಗಳನ್ನು ಪಡೆಯಲು ಕನ್ನಡವಿದೆ, ಸಂಸ್ಕೃತವಿದೆ. ಈಗ ಇಂಗ್ಲಿಷಿನ ಉತ್ತಮ ಕೃತಿಗಳು ಕನ್ನಡಕ್ಕೆ ಬಂದಿವೆ, ಮುಂದೆ ಇನ್ನೂ ಬರುತ್ತವೆ.

ಇಂಗ್ಲಿಷ್ ಅಭ್ಯಾಸವನ್ನು ಕುರಿತು ಒಂದು ಸಣ್ಣ ಉದಾಹರಣೆ ಕೊಡುತ್ತೇನೆ. ಫ್ರಾನ್ಸಿಸ್ ಥಾಮ್ಸನ್ ರಚಿಸಿದ 'ಹೌಂಡ್ ಆಫ್ ಹೆವನ್' ಎಂಬ ಕವನ ಕನ್ನಡದಲ್ಲಿ 'ದೇವಕೇತು' ಎಂಬ ಹೆಸರಿನಿಂದ ದೊರಕುತ್ತದೆ. ಈ ಕನ್ನಡ ಕವನವನ್ನು ಓದಿ

'ಹೌಂಡ್ ಆಫ್ ಹೆವನ್' ಕವನದ ಪುಷ್ಟಿ ಶಕ್ತಿಗಳನ್ನು ವಿದ್ಯಾರ್ಥಿ ಗ್ರಹಿಸುತ್ತಾನೆ. ಇಂಗ್ಲಿಷ್ ಭಾಷೆಯನ್ನು ಕಲಿತಮೇಲೆ ಇಂಗ್ಲಿಷ್ ಸಾಹಿತ್ಯದ ಪುಷ್ಟಿ ಶಕ್ತಿಗಳನ್ನು ಕನ್ನಡದ ಭಾಷಾಂತರಗಳ ಮೂಲಕ ಪಡೆಯುವುದು ಸಾಧ್ಯ. ಈಗ ಫ್ರಾನ್ಸ್ ದೇಶದಲ್ಲಿ ಷೇಕ್ಸ್ ಪಿಯರ್ ಕೃತಿಗಳನ್ನು ಇಂಗ್ಲಿಷಿನಲ್ಲಿ ಓದಿ ಫ್ರೆಂಚ್ ಭಾಷೆಯಲ್ಲಿ ವಿವರಿಸುತ್ತಾರೆ. ಇನ್ನು ಮುಂದೆ ಇಂಗ್ಲಿಷ್ ಪುಸ್ತಕಗಳನ್ನು ಕನ್ನಡದಲ್ಲಿಯೆ ಪಾಠ ಹೇಳಬೇಕು. ನಮ್ಮಲ್ಲಿ ಸಾಹಿತ್ಯಕ್ಕೋಸ್ಕರ ಕನ್ನಡ ಆನರ್ಸ್ ತರಗತಿಗಳಲ್ಲಿ ವ್ಯಾಸಂಗ ಮಾಡುವ ವಿದ್ಯಾರ್ಥಿಗಳು ಇಂಗ್ಲಿಷ್ ಸಾಹಿತ್ಯವನ್ನು ಚೆನ್ನಾಗಿ ಅಭ್ಯಾಸಮಾಡಬೇಕು. ಅವರು ಇಂಗ್ಲಿಷಿನಲ್ಲಿರುವ ಮೂಲಕೃತಿಗಳನ್ನು ಅಧ್ಯಯನ ಮಾಡಬೇಕು, ಭಾಷಾಂತರವನ್ನಲ್ಲ. ಆದರೆ ಪರೀಕ್ಷೆಗಳಲ್ಲಿ ಉತ್ತರವನ್ನು ಕನ್ನಡದಲ್ಲಿಯೆ ಬರೆಯಬೇಕು. ಎಲ್ಲಿ ಅಗತ್ಯವೋ ಅಲ್ಲಿ ಇಂಗ್ಲಿಷಿನಲ್ಲಿ ಉದ್ಧರಿಸುತ್ತಾನೆ. ಮಿಲ್ಟನ್ ಕವಿಯ 'Paradise Lost' ಎಂಬ ಕಾವ್ಯದ ವಿಚಾರವಾಗಿ ಪ್ರಬಂಧವನ್ನು ಬರೆಯುವವನು ಕನ್ನಡದಲ್ಲಿ ಉತ್ತಮವಾಗಿ ಬರೆಯಬಲ್ಲ. ಕಾವ್ಯದ ಮುಖ್ಯ ಭಾಗಗಳನ್ನು ಇಂಗ್ಲಿಷಿನಲ್ಲಿಯೆ ಉದ್ಧರಿಸಿ ಬರೆಯುವುದರಿಂದ ಇಂಗ್ಲಿಷ್ ಸಾಹಿತ್ಯದ ಪುಷ್ಟಿ ಶಕ್ತಿಗಳನ್ನು ಗ್ರಹಿಸಿದಂತಾಗುತ್ತದೆ. ಇಂಗ್ಲಿಷಿನಲ್ಲಿಯೆ ಪ್ರಬಂಧವನ್ನು ಬರೆದರೆ ಕನ್ನಡದಲ್ಲಿ ಬರೆಯುವಷ್ಟು ಸಮರ್ಪಕವಾಗಿ ಬರೆಯಲಾರ. ಈ ವಿಚಾರವನ್ನು ನಾನೊಮ್ಮೆ ಹಿಂದೆ ಅಕ್ಯಾಡೆಮಿಕ್ ಕೌನ್ಸಿಲ್ ಸದಸ್ಯರಿಗೆ ಹೇಳಿದಾಗ ಕೆಲವರು ನಕ್ಕುಬಿಟ್ಟರು. ಅವರಿಗೆ ಈ ವಿಚಾರವನ್ನು ಕಟುವಾದ ರೀತಿಯಲ್ಲಿ ಹೇಳಿ ತೋರಿಸಬೇಕಾಯಿತು. ಆಗತಾನೆ ಸ್ವಾತಂತ್ರ್ಯ ಬಂದ ಕಾಲ. ನಾನು ಹೇಳಿದೆ: "ಸರಪಣಿಯಿಂದ ಬಹುಕಾಲ ಕಟ್ಟಿದ ನಾಯಿ ಬಿಚ್ಚಿದ ಮೇಲೆಯೂ ಅಲ್ಲಿಯೆ ಕುಳಿತಿರುತ್ತದೆ. ಯಾರಾದರೂ ಒದ್ದಹೊರತು ಮುಂದೆ ಹೋಗುವುದಿಲ್ಲ. ಸರಪಣಿ ಬಿಚ್ಚಿದರೂ, ಇಲ್ಲಿಯೆ ಇರಬೇಕು, ಇದು ನನ್ನ ಹಣೆಬರಹ ಎಂದು ತಿಳಿದುಕೊಂಡಿರುತ್ತದೆ. ದಾಸ್ಯದ ಸಂಕೋಲೆ ಬಿಚ್ಚಿದರೂ ಮನಸ್ಸಿನ ದಾಸ್ಯ ಹೋಗುವುದಿಲ್ಲ." ನಮಗೆ ಇಂಗ್ಲಿಷ್ ಸಾಹಿತ್ಯದ ಭಾವ, ಪುಷ್ಟಿ, ಶಕ್ತಿಗಳು ಬೇಕು. ಕನ್ನಡ, ಸಂಸ್ಕೃತ ಮೊದಲಾದ ಸಾಹಿತ್ಯವಿಭಾಗದ ಆನರ್ಸ್ ವಿದ್ಯಾರ್ಥಿಗಳಿಗೆ ಇಂಗ್ಲಿಷ್ ಸಾಹಿತ್ಯದ ವಿಶೇಷ ಅಭ್ಯಾಸ ಬೇಕು. ಅವರು ಷೇಕ್ಸ್ ಪಿಯರ್, ಮಿಲ್ಟನ್, ವರ್ಡ್ಸ್ ವರ್ತ್ ಮೊದಲಾದ ಕವಿಗಳನ್ನು ಚೆನ್ನಾಗಿ ಅಭ್ಯಾಸಮಾಡಿ ನಿಷ್ಕೃಷ್ಟವಾದ ಜ್ಞಾನವನ್ನು ಪಡೆಯಲಿ. ಆದರೆ ಇಂಗ್ಲಿಷನ್ನು ಕನ್ನಡದಲ್ಲಿ ಬೋಧಿಸಬೇಕು. ಪರೀಕ್ಷೆಯಲ್ಲಿ ಉತ್ತರಗಳನ್ನು ಕನ್ನಡದಲ್ಲಿ ಬರೆಯಬೇಕು. ನೀವು ಈ ಕ್ರಮದಲ್ಲಿ ಮುಂದುವರಿಯಬೇಕು. ಅದರಿಂದ ದೇಶಕ್ಕೆ ಕ್ಷೇಮ. ಸಹಸ್ರಾರು ವಿದ್ಯಾರ್ಥಿಗಳ ಶ್ರೇಯಸ್ಸೂ ಆಗುತ್ತದೆ. ಇಲ್ಲದಿದ್ದರೆ ವಿದ್ಯಾರ್ಥಿಗಳಿಗೆ ದಂಗೆಯ ಮನೋಭಾವವನ್ನು ಬೆಳೆಸಲು ಅವಕಾಶ ಮಾಡಿಕೊಟ್ಟಂತಾಗುತ್ತದೆ.

ಒಮ್ಮೆ ಎಸ್.ಎಸ್.ಎಲ್.ಸಿ. ಪರೀಕ್ಷೆಗೆ ಮಿಲ್ಟನ್ ಕವಿಯ "On His Blindness" ಎಂಬ ಸಾನೆಟ್ ಕವನವಿತ್ತು. ಅದನ್ನು ಶಾಲೆಯಲ್ಲಿ ಪಾಠಹೇಳಿ ಇಂಗ್ಲಿಷಿನಲ್ಲಿ ತಾತ್ಪರ್ಯ ಬರೆಸಿದ್ದರು. ಅದನ್ನು ಓದಿದ ವಿದ್ಯಾರ್ಥಿ ಉತ್ತರವನ್ನು ಹೊಲಸಾಗಿ ಬರೆದಿದ್ದ. ಅದನ್ನು ಕಂಡು, ನೋಡಪ್ಪ, ಈ ಕವನದ ಭಾವ ಇಷ್ಟು ಎಂದು ಕನ್ನಡದಲ್ಲಿ ವಿವರಿಸಿದಾಗ "ಇಷ್ಟೇನೆ!" ಎಂದು ಹೇಳಿದ. ಕನ್ನಡದಲ್ಲಿ ಬರೆಯಲು ಹೇಳಿದಾಗ ಉತ್ತಮ ರೀತಿಯಲ್ಲಿ

ಬರೆದ. ನಮಗೆ ಬೇಕಾದುದು ಇಂಗ್ಲಿಷ್ ಸಾಹಿತ್ಯದ ಪುಷ್ಟಿ, ಶಕ್ತಿ. ಅದನ್ನು ಪಡೆಯಲು ಇಂಗ್ಲಿಷ್ ಪಾಠಗಳನ್ನು ಕನ್ನಡದಲ್ಲಿ ಬೋಧಿಸಬೇಕು. ಪರೀಕ್ಷೆಯಲ್ಲಿ ಉತ್ತರವನ್ನು ಕನ್ನಡದಲ್ಲಿ ಬರೆಯಬೇಕು. ಇದರಿಂದ ದೇಶದ ಕಲ್ಯಾಣವಾಗುತ್ತದೆ. ಇಂಗ್ಲಿಷ್ ಕವಿಗಳೂ ಸಾಹಿತಿಗಳೂ ಹೆಚ್ಚು ಆತ್ಮೀಯರಾಗಿ ನಮ್ಮ ಬಳಿಗೆ ಬರುತ್ತಾರೆ. ಯಾವ ಪೂರ್ವಾಭಿಪ್ರಾಯಗಳನ್ನೂ ಇಟ್ಟುಕೊಳ್ಳದೆ ಶಿಕ್ಷಣತಜ್ಞರು ನಿರ್ಮಲ ಹೃದಯದಿಂದ ಈ ವಿಚಾರಗಳನ್ನು ಮನನಮಾಡಬೇಕು.

ಇನ್ನು ಇಂಗ್ಲಿಷ್ ಕೃತಿಗಳನ್ನು ಭಾಷಾಂತರ ಮಾಡುವ ವಿಚಾರ. ಈ ವಿಚಾರವನ್ನು ರಾಜಕೀಯ ಕಾರಣಗಳಿಗೋಸ್ಕರವಾಗಿಯೊ, ಬೇರೆ ಕಾರಣಗಳಿಗಾಗಿಯೊ ಮಾತನಾಡುವ ವಿಚಾರ ಬೇರೆ. ಸಾಹಿತ್ಯದ ವಿಚಾರವಾಗಿ ಇಂಗ್ಲಿಷ್ ಕೃತಿಗಳನ್ನು ಕನ್ನಡಕ್ಕಾಗಲಿ, ಕನ್ನಡ ಕೃತಿಗಳನ್ನು ಇಂಗ್ಲಿಷಿಗಾಗಲಿ ಭಾಷಾಂತರಿಸುವ ಕೆಲಸವನ್ನು ಪ್ರತಿಭೆ ಮತ್ತು ಶಕ್ತಿಗೆ ಬಿಡಬೇಕು. ಈ ಕಾರ್ಯಕ್ಕೆ ಯಾರನ್ನು ಆರಿಸಬೇಕೆಂದು ಹೇಳುವುದು ಕಷ್ಟ. ಪ್ರತಿಭೆ ಇರುವವರನ್ನೆ ಆರಿಸಬೇಕು. ಅಂದರೆ, ಇಂಗ್ಲಿಷ್ ಸಾಹಿತ್ಯವನ್ನು ಚೆನ್ನಾಗಿ ಅರಿತು ಕನ್ನಡದಲ್ಲಿ ಅತ್ಯುತ್ತಮವಾದ ರೀತಿಯಲ್ಲಿ ಬರೆಯುವ ಸಾಮರ್ಥ್ಯವಿರಬೇಕು. ಒಂದು ದೃಷ್ಟಿಯಲ್ಲಿ ಭಾಷಾಂತರ ಕಾರ್ಯ ಮೂಲಸೃಷ್ಟಿ ಕಾರ್ಯಕ್ಕಿಂತ ಕಷ್ಟತರ. ಏಕೆಂದರೆ ಮೂಲಸೃಷ್ಟಿಗೆ ಒಂದು ಭಾಷೆ ತಿಳಿದಿದ್ದರೆ ಸಾಕು. ಭಾಷಾಂತರಕ್ಕೆ ಎರಡೂ ಭಾಷೆಯ ವಿಶೇಷಜ್ಞಾನ ಆವಶ್ಯಕ.

ನಮ್ಮ ಮಕ್ಕಳ ವಿದ್ಯಾಭ್ಯಾಸದ ಕ್ರಮವನ್ನು ಸ್ವಲ್ಪ ಗಮನಿಸೋಣ. ಮಾಧ್ಯಮಿಕ ಶಾಲೆಯಲ್ಲಿ ಇಟ್ಟಿರುವ ಇಂಗ್ಲಿಷ್ ವ್ಯಾಕರಣದ ಗಾತ್ರವನ್ನು ನೋಡಿಯೆ ಮಕ್ಕಳು ಮೂರ್ಛೆ ಹೋಗುವಂತಿದೆ! ನನಗೆ ತಿಳಿದ ಇಂಗ್ಲಿಷ್ ವ್ಯಾಕರಣವೆಲ್ಲವನ್ನು ಬರೆದರೂ ಏಳು ಎಂಟು ಪುಟಗಳಾಗಬಹುದು! ಇಂಗ್ಲಿಷ್ ಮಾತ್ರವಲ್ಲ, ಎಲ್ಲ ಭಾಷೆಯ ವ್ಯಾಕರಣಗಳೂ ಅಷ್ಟೆ. ಅವು ಮಕ್ಕಳ ಮನಸ್ಸಿಗೆ ಗ್ರಾಹ್ಯವಾಗುವಷ್ಟು ಚಿಕ್ಕದಾಗಿರಬೇಕು. ಮಕ್ಕಳ ಮುಂದೆ ಪಾಂಡಿತ್ಯ ಪ್ರದರ್ಶನ ಬೇಡ. ಚರಿತ್ರೆ, ಭೂಗೋಳದ ಪುಸ್ತಕಗಳೂ ಅಷ್ಟೆ. ಆ ಗಾತ್ರದಿಂದ ಮಕ್ಕಳಿಗೆ ಪ್ರಯೋಜನವಾಗುವುದಿಲ್ಲ. ಪಠ್ಯಪುಸ್ತಕಗಳನ್ನು ಸಿದ್ಧಮಾಡುವಾಗ ಮನಶ್ಶಾಸ್ತ್ರ ದೃಷ್ಟಿಯಿಂದ, ಅದರಲ್ಲೂ ಮಕ್ಕಳ ಮನಸ್ಸಿನ ಪರಿಜ್ಞಾನದಿಂದ ಬೇರೆ ಬೇರೆ ಭಾಷೆಯವರು ಏನು ಮಾಡಿದ್ದಾರೆ, ಏನು ಹೇಳುತ್ತಾರೆ–ಎಂಬುದನ್ನು ಮನ್ನಿಸಬೇಕು. ಈಗ ರಷ್ಯಾದಲ್ಲಿ ನೂರಾರು ಭಾಷೆಗಳಿವೆ. ಉಜ್‌ಬೆಕ್ ಸಂಸ್ಥಾನದಲ್ಲಿ ಆಡುವ ಭಾಷೆ ಹೊರತು ಲಿಪಿ ಕೂಡ ಇರಲಿಲ್ಲ. ಅಂತಹ ಕಾಡು ಜನರಿದ್ದ ದೇಶವದು. ಈಗ ಅದರ ಭಾಷೆ ಬೆಳೆದು ಒಂದು ವಿಶ್ವವಿದ್ಯಾನಿಲಯವು ನಿರ್ಮಿತವಾಗಿ ಲಕ್ಷಾಂತರ ಗ್ರಂಥಗಳು ಸೃಷ್ಟಿಯಾಗಿ ಸಂಶೋಧನೆಯ ಕಾರ್ಯವೂ ನಡೆಯುತ್ತಿದೆ. ಇದನ್ನು ನೋಡಿದಾಗ ಆಶ್ಚರ್ಯವೂ ಆನಂದವೂ ಆಗುತ್ತದೆ. ಎಲ್ಲೊ ಒಂದು ಮೂಲೆಯ ದೇಶ ಇಂತಹ ಅದ್ಭುತ ರೀತಿಯಲ್ಲಿ ಮುಂದುವರಿದಿರುವಾಗ ಆ ದೇಶ ವೈಜ್ಞಾನಿಕ ಜ್ಞಾನವನ್ನು ಹೇಗೆ ಪಡೆಯುತ್ತಿದೆ, ಇಂಗ್ಲಿಷನ್ನು ಎಷ್ಟರಮಟ್ಟಿಗೆ ಬಳಸುತ್ತಿದೆ–ಎಂಬುದನ್ನು ತಿಳಿಯಬೇಕು. Let us not be sentimental. Letus be scientific and rational. ಚೀಣಾ ಮೊದಲಾದ ದೇಶಗಳಲ್ಲಿ ಇಂಗ್ಲಿಷಿನ

ಸ್ಥಾನಮಾನವೇನೆಂಬುದನ್ನು ಅರಿತುಕೊಳ್ಳೋಣ. ಈ ವಿಶಾಲವಾದ ದೃಷ್ಟಿಯಿಂದಲೂ ವಿಚಾರದಿಂದಲೂ ವಿವೇಕಿಗಳಾಗಿ ಇನ್ನು ಮುಂದೆ ನಮ್ಮ ಮಕ್ಕಳ ತಲೆಯ ಮೇಲೆ ಇಂಗ್ಲಿಷ್ ಚಪ್ಪಡಿಯ ಭಾರವನ್ನು ಹೊರಿಸಿ ಅವರನ್ನು ಕುಂಠಿತರನ್ನಾಗಿ ಮಾಡುವ ಅನುಚಿತ ಕಾರ್ಯವನ್ನು ನಿಲ್ಲಿಸಬೇಕು. ಈ ವಿಚಾರವಾಗಿ ಎಲ್ಲ ಉಪಾಧ್ಯಾಯರೂ ಚೆನ್ನಾಗಿ ಆಲೋಚಿಸಿ ರಾಷ್ಟ್ರದ ಅಭ್ಯುದಯಕ್ಕೆ ಸಾಧಕವಾದುದನ್ನು ಕಾರ್ಯರೂಪಕ್ಕೆ ತರಲು ಯತ್ನಿಸಬೇಕು. ಇಂಗ್ಲಿಷಿನಲ್ಲಿ ಸಾಧಿಸಿರುವಷ್ಟನ್ನು ನಾವು ಸಾಧಿಸಿಲ್ಲವೆಂದು ದುಃಖಿಸಬೇಕಾಗಿಲ್ಲ. ವೈಜ್ಞಾನಿಕ ಕ್ಷೇತ್ರವನ್ನು ಬಿಟ್ಟರೆ ಸಾಹಿತ್ಯ, ಅಲಂಕಾರ ಇತ್ಯಾದಿ ಪ್ರಕಾರಗಳಲ್ಲಿ ಭಾರತೀಯರು ನಾಚಿಕೊಳ್ಳಬೇಕಾಗಿಲ್ಲ. ಗ್ರೀಕ್, ಫ್ರೆಂಚ್, ಜರ್ಮನ್, ಲ್ಯಾಟಿನ್–, ಈ ಯಾವ ಭಾಷೆಗಳೂ ಮಾಡದ ಅದ್ಭುತ ಪ್ರಗತಿಯನ್ನು ಭಾರತೀಯ ಕಾವ್ಯಮೀಮಾಂಸೆ ಸಾಧಿಸಿದೆ. ಈಚೆಗೆ ಐ.ಎ. ರಿಚರ್ಡ್ಸ್ ಮೊದಲಾದವರು ಈ ದೃಷ್ಟಿಯಲ್ಲಿ ಸ್ವಲ್ಪಮಟ್ಟಿಗೆ ವಿಚಾರಮಾಡಿದ್ದಾರೆ ಅಷ್ಟೆ.

ಇನ್ನು ಇಂಗ್ಲಿಷ್ ಉಚ್ಚಾರಣೆಯ ವಿಚಾರ. ಇಂಗ್ಲಿಷಿನವರಂತೆಯೆ ಉಚ್ಚಾರಣೆ ಮಾಡುವವರು ಮಾಡಿಕೊಳ್ಳಲಿ. ಎಲ್ಲರೂ ಹಾಗೆಯೆ ಮಾತನಾಡಬೇಕಾದುದು ಅನಾವಶ್ಯಕ. ಬಂಗಾಳ ದೇಶದಲ್ಲಿ ಹಿರಿಯ ವಿಜ್ಞಾನಿಗಳು ಇಂಗ್ಲಿಷಿನಲ್ಲಿ ಮಾತನಾಡಿದುದನ್ನು ದಕ್ಷಿಣ ದೇಶದವರು ಅರ್ಥ ಮಾಡಿಕೊಳ್ಳುವುದು ಕಷ್ಟವಾಯಿತಂತೆ! ಅದಕ್ಕೆ ಮುಖ್ಯ ಕಾರಣ ಉಚ್ಚಾರಣೆಯ ರೀತಿ. ಬೆಂಗಳೂರು ಕಂಟೋನ್ಮೆಂಟಿನಲ್ಲಿರುವವರು ಇಂಗ್ಲಿಷಿನವರಂತೆಯೆ ಮಾತನಾಡುವುದನ್ನು ಕಲಿತಿದ್ದಾರೆ. ಅವರು ಹಾಗೆಯೆ ಮಾತನಾಡಲಿ. ಆಕಾಶವಾಣಿಯಲ್ಲಿ ಬೇಕಾದರೆ ಪ್ರಸಾರ ಮಾಡಿಕೊಳ್ಳಲಿ. ಆದರೆ ವಿದ್ಯಾರ್ಥಿಗಳು ಹಾಗೆಯೆ ಮಾತನಾಡಲಿ ಎಂದು ಒತ್ತಾಯಪಡಿಸುವುದು ಬೇಡ. ಎಷ್ಟು ಸಾಧ್ಯವೊ ಅಷ್ಟರಮಟ್ಟಿಗೆ ಸ್ಪಷ್ಟವಾದ ಉಚ್ಚಾರಣೆಯನ್ನು ಕಲಿತರೆ ಸಾಕು.

ಪ್ರೊ॥ ಶಾಂತವೀರಪ್ಪನವರು ಶ್ರೀರಾಜಗೋಪಾಲಾಚಾರಿ ಅವರು ಇಂಗ್ಲಿಷ್ ವಿಚಾರವಾಗಿ ಹೇಳಿರುವುದನ್ನು ಪ್ರಸ್ತಾಪಿಸಿದರು. ಶ್ರೀ ರಾಜಗೋಪಾಲಾಚಾರಿಯವರು ಬಿ.ಸಿ.ಜಿ. ವ್ಯಾಕ್ಸಿನೇಷನ್ ವಿಚಾರವಾಗಿ ಮಾತನಾಡಿದ್ದಾರೆ, ಇಂಗ್ಲಿಷ್ ವಿಚಾರವಾಗಿ ಹೇಳಿದ್ದಾರೆ, ಇನ್ನೂ ಅನೇಕ ವಿಚಾರವಾಗಿ ಮಾತನಾಡಿದ್ದಾರೆ, ಅವರು ಹೇಳಿದುದೆಲ್ಲ ಸತ್ಯವೆಂದು ನಂಬುವುದಕ್ಕಾಗುತ್ತದೆಯೆ? ಈ ವಿಚಾರವಾಗಿ ನಾವು ಸ್ವತಂತ್ರವಾಗಿ ಆಲೋಚನೆ ಮಾಡಬೇಕು. ನಮ್ಮ ದೇಶದಲ್ಲಿ ಕೆಲವರು ಇಂಗ್ಲಿಷ್ ಬೇಡವೆ ಬೇಡ ಎಂದು ಹೇಳಿದರೆ ಮತ್ತೆ ಕೆಲವರು ಇಂಗ್ಲಿಷ್ ನಿಂದಲೆ ಸಕಲ ಅಭ್ಯುದಯ ಎಂದು ಹೇಳುವವರಿದ್ದಾರೆ. ಇನ್ನೊಬ್ಬ ಪ್ರತಿಭಾಶಾಲಿಗಳು ಭಾರತದ ದೊಡ್ಡ ಸ್ಥಾನದಲ್ಲಿದ್ದು ಈಗ ನಿವೃತ್ತರಾದವರು–ಹೇಳಿದರು: "ನಾವು ಆ ಭಾಷೆ ಈ ಭಾಷೆ ಎಂದು ಕಟ್ಟಿಕೊಂಡು ಒದ್ದಾಡುವುದಕ್ಕಿಂತ ಚಿಕ್ಕಂದಿನಿಂದಲೆ ಮಕ್ಕಳು ಮರಿ ಎಲ್ಲರೂ ಇಂಗ್ಲಿಷನ್ನೆ ಅಭ್ಯಾಸ ಮಾಡಲಿ, ವ್ಯವಹಾರ ಭಾಷೆಗೂ ಇಂಗ್ಲಿಷೆ ಆಗಲಿ. ಅದರಿಂದ 'One world' ಆಗುವುದಕ್ಕೆ ಸಹಾಯವಾಗುತ್ತದೆ" ಎಂದು. ಅದಕ್ಕೆ ನಾನು ಹೇಳಿದೆ, "ನೀವು ಸೈನ್ಯ ಕ್ಷೇತ್ರದಲ್ಲಿ ಕೆಲಸ ಮಾಡಿದವರು, ದೊಡ್ಡ ದೊಡ್ಡ Campaign ನಡೆಸಿದವರು. ಆದರೆ ವಿದ್ಯಾಕ್ಷೇತ್ರದಲ್ಲಿ Campaign ಭಾವನೆ ಸಲ್ಲದು" ಎಂದು. ನಮ್ಮ ದೇಶದಲ್ಲಿ

ಇಂಗ್ಲಿಷ್ ಬೇಡವೆ ಬೇಡ ಎಂದು ಹೇಳುವವರು ಕೆಲವರಿದ್ದಾರೆ; ದೇಶಭಾಷೆಗಳೆ ಬೇಡ, ಇಂಗ್ಲಿಷಿರಲಿ ಎಂದು ಹೇಳುವವರೂ ಇದ್ದಾರೆ. ಈ ಎರಡೂ ತೀವ್ರಭಾವನೆಗಳನ್ನು ದೂರ ಮಾಡಿ ಯಾವ ಮಾರ್ಗವನ್ನು ಕೈಗೊಂಡರೆ ನಮ್ಮ ದೇಶಕ್ಕೆ ಕ್ಷೇಮವೊ ಸಹಾಯವೊ ಆ ಮಾರ್ಗವನ್ನು ನಿಶ್ಚಯಿಸಬೇಕು.

ನಿಮ್ಮಲ್ಲಿ ಎಸ್.ಎಸ್.ಎಲ್.ಸಿ. ಪರೀಕ್ಷೆಯ ಮಂಡಲಿಯಲ್ಲಿ ಕೆಲಸ ಮಾಡಿದವರಿದ್ದೀರಿ. ಅಲ್ಲಿ ಬೇರೆ ಬೇರೆ ವಿಷಯಗಳ ಫಲಿತಾಂಶವನ್ನು ನೋಡಿದ್ದೀರಿ. ಇಂಗ್ಲಿಷಿನಲ್ಲಿ ತೇರ್ಗಡೆಯಾಗದ ಸಂಖ್ಯೆಯನ್ನು ಕಂಡು ಮರುಗಿದ್ದೀರಿ. ವಿದ್ಯಾರ್ಥಿಗಳ ಉತ್ತರ ಪತ್ರಿಕೆಗಳನ್ನು ಬೆಲೆ ಕಟ್ಟಿದ್ದೀರಿ. ವಿಶ್ವವಿದ್ಯಾನಿಲಯದಲ್ಲಿ ನಾವು ನೋಡುತ್ತ ಇದ್ದೇವೆ. ವಿಶ್ವವಿದ್ಯಾನಿಲಯದವರು "ಹೈಸ್ಕೂಲಿನಲ್ಲಿ ಅಸ್ತಿಭಾರ ಸರಿಯಾಗಿಲ್ಲ, ನಾವೇನು ಮಾಡುವುದಕ್ಕಾಗುತ್ತದೆ?" ಎನ್ನುತ್ತಾರೆ. ಹೈಸ್ಕೂಲಿನವರು, "ನಾವು ಏನು ಮಾಡುವುದಕ್ಕಾಗುತ್ತದೆ; ಮಾಧ್ಯಮಿಕ ಶಾಲೆಯಲ್ಲಿ ಏನೇನೂ ಶಿಕ್ಷಣವಿಲ್ಲ" ಎನ್ನುತ್ತಾರೆ. ಹೀಗೆ ಇನ್ನೊಬ್ಬರ ಮೇಲೆ ತಪ್ಪುಹೊರಿಸುವುದರಿಂದ ಸಮಸ್ಯೆಯನ್ನು ಪರಿಹರಿಸಿದಂತಾಗುವುದಿಲ್ಲ. ಇದು ತುಂಬ ಗಹನವಾದ ವಿಚಾರ. ನಿಮ್ಮ ನಿರ್ಣಯಗಳ ಸಾಮೂಹಿಕ ಆಧಾರಗಳಿಂದಲಾದರೂ ಮಕ್ಕಳು ಇಂಗ್ಲಿಷ್ ಚಪ್ಪಡಿಗಳನ್ನು ಹೊರುವ ಕೆಲಸವನ್ನು ತಪ್ಪಿಸಬೇಕು. ವಿದ್ಯಾರ್ಥಿಗಳು ತಮ್ಮ ಕಾಲ ಮತ್ತು ಶಕ್ತಿಯ ಮೂರು ಪಾಲನ್ನು ಇಂಗ್ಲಿಷ್ ಕಲಿಯುವುದಕ್ಕಾಗಿ ಉಪಯೋಗಿಸುತ್ತಿದ್ದಾರೆ. ವ್ಯರ್ಥಪರಿಣಾಮದ ಈ ವೃಥಾ ಶ್ರಮವನ್ನು ಪರಿಹರಿಸುವುದು ಸಾಧ್ಯ.

ಈಗ ಪ್ರಿ-ಯೂನಿವರ್ಸಿಟಿ ತರಗತಿಗಳಲ್ಲಿ ಕನ್ನಡ ಮಾಧ್ಯಮದಲ್ಲಿ ಬೋಧನೆ ನಡೆಯುತ್ತಿದೆ. Logic ಬಹಳ ಕಷ್ಟವಾದ ಪಾಠವೆಂದು ವಿದ್ಯಾರ್ಥಿಗಳು ತಿಳಿದಿದ್ದರು. ಈಗ ಆ ಪಾಠವನ್ನು ಕನ್ನಡದಲ್ಲಿ ಬೇಗನೆ ಗ್ರಹಿಸುವಂತಾಗಿದೆ. ಭೌತಶಾಸ್ತ್ರ ಮೊದಲಾದುವು ಕನ್ನಡದ ಮೂಲಕ ಸುಲಭವಾಗಿ ವಿದ್ಯಾರ್ಥಿಗಳಿಗೆ ತಿಳಿಯುತ್ತದೆ. ಇನ್ನು ಕನ್ನಡದಲ್ಲಿ ಹೆಚ್ಚಾಗಿ ಗಹನವಾದ ಶಾಸ್ತ್ರ ಗ್ರಂಥಗಳು ಸಿದ್ಧವಾಗಿ ವಿದ್ಯಾರ್ಥಿಗಳು ಸುಲಭವಾಗಿ ಗ್ರಹಿಸುವಂತಾಗುತ್ತದೆ. ಈ ದೃಷ್ಟಿಯಲ್ಲಿ ಮುಂದುವರಿದರೆ ತಂದೆತಾಯಿಗಳಿಗಾಗುತ್ತಿರುವ ನಷ್ಟವೂ, ಉಪಾಧ್ಯಾಯರ ವ್ಯರ್ಥಶ್ರಮವೂ, ವಿದ್ಯಾರ್ಥಿಗಳ ನಿರಾಶೆ ಹತಾಶೆಗಳೂ ಪರಿಹಾರವಾಗಿ ರಾಷ್ಟ್ರದ ಸರ್ವೋದಯಕ್ಕೆ ಹೊಸ ಚೈತನ್ಯ ಮೂಡಿದಂತಾಗುತ್ತದೆ. ಇಂಗ್ಲಿಷನ್ನು ದೊಡ್ಡ 'ಚಿನ್ನದ' ಕಡಾಯಿಯೆಂದೇ ಭಾವಿಸೋಣ. ಅದರ ತುಂಬ ಹಾಲಿರುವುದನ್ನೂ ಒಪ್ಪಿಕೊಳ್ಳೋಣ. ಆದರೆ ನಮ್ಮ ಮಕ್ಕಳಿಗೆ ಪುಷ್ಟಿಯಾಗಿ ಹಾಲು ಕೊಡುವಾಗ ಚಿಕ್ಕ ಒಳಲೆಯಲ್ಲಿ ಕೊಟ್ಟರೆ ಸಾಕು. ಅದಕ್ಕೆ ಬದಲಾಗಿ ಚಿನ್ನದ ಕಡಾಯಿ ಬಹಳ ಬೆಲೆಯುಳ್ಳದ್ದು ಎಂದು ಮಕ್ಕಳು ಅದರಲ್ಲಿ ಹಾಲು ಕುಡಿಯಲೆಂದು ಬಿಟ್ಟರೆ ಆ ಕಡಾಯಿಯನ್ನು ಎತ್ತುವಾಗ ಹಾಲನ್ನು ಚೆಲ್ಲಿಕೊಂಡು ಆ ಭಾರವಾದ ಕಡಾಯಿಯನ್ನು ಮೈಮೇಲೆ ಹಾಕಿಕೊಂಡು ಮಕ್ಕಳು ಅಪಘಾತಕ್ಕೆ ಒಳಗಾಗುತ್ತಾರೆ. ಒಂದುವೇಳೆ ಎತ್ತಲು ಸಮರ್ಥರಾದ ಮಕ್ಕಳೂ ಅದನ್ನು ಚೆಲ್ಲಿಕೊಂಡು ಸುರಿದುಕೊಂಡರೂ ಹಾಲು ಹೊಟ್ಟೆಗೆ ಹೋಗದಿರಬಹುದು. ಚಿನ್ನದ ಕಡಾಯಿ ಎಷ್ಟೇ ಬೆಲೆಬಾಳುವುದಾದರೂ ಅದರ ಭಾರಾಘಾತ ನಮಗೆ ಬೇಡ.

ಕಂಟೋನ್ಮೆಂಟ್ ಹೈಸ್ಕೂಲಿನ ಸಮಕ್ಕೆ ತಿಪ್ಪಗೊಂಡದ ಹೈಸ್ಕೂಲ್ ಬರಬೇಕೆಂದರೆ ಹೇಗೆ ಸಾಧ್ಯ? ಹಳ್ಳಿಯ ವಿದ್ಯಾರ್ಥಿ ಪಟ್ಟಣದ ವಿದ್ಯಾರ್ಥಿಯ ಸ್ಥಿತಿಗೆ ಬರಬೇಕೆಂದರೆ ಹೇಗೆ ಸಾಧ್ಯ? ನಮ್ಮ ದೇಶದಲ್ಲಿ ನಡೆಯುತ್ತಿರುವ ಎಲ್ಲ ಕಾರ್ಖಾನೆ ಅಣೆಕಟ್ಟುಗಳ ಕೆಲಸಕಾರ್ಯಗಳನ್ನೂ ನಿಲ್ಲಿಸಿ, ಅದರಿಂದ ಉಳಿತಾಯವಾಗುವ ಎಲ್ಲ ಸಂಪತ್ತನ್ನೂ ಇಂಗ್ಲಿಷ್ ವಿದ್ಯಾಭ್ಯಾಸದ ಮಟ್ಟವನ್ನು ಏರಿಸಲು ವಿನಿಯೋಗಿಸಿದರೂ, ಇನ್ನೂ ಕೋಟ್ಯಂತರ ರೂಪಾಯಿಗಳನ್ನು ಸುರಿದರೂ, ಇನ್ನು ನೂರು ವರ್ಷಗಳ ಕಾಲ ಸತತವಾಗಿ ದುಡಿದರೂ ಇಂಗ್ಲಿಷ್ ಭಾಷಾಜ್ಞಾನ ನಮ್ಮ ವಿದ್ಯಾರ್ಥಿಗಳಲ್ಲಿ ಈಗಿರುವುದಕ್ಕಿಂತಲೂ ಹೆಚ್ಚೇನೂ ಉತ್ತಮವಾಗುವುದಿಲ್ಲವೆಂದು ಖಚಿತವಾಗಿ ಹೇಳುತ್ತೇನೆ. ಒಂದು ವೇಳೆ ನಾಲ್ವರು ವಿದ್ಯಾರ್ಥಿಗಳಿಗೆ ಒಬ್ಬ ಇಂಗ್ಲಿಷ್ ಅಧ್ಯಾಪಕನನ್ನು ನೇಮಿಸಿ ಇಂಗ್ಲಿಷನ್ನು ದಿನಕ್ಕೆ ನಾಲ್ಕು ಗಂಟೆಗಳಕಾಲ ಪಾಠ ಹೇಳಿಸಿದರೆ ಉಳಿದ ಪಾಠಗಳ ಗತಿಯೇನು? ಈ ಭ್ರಾಂತಿಯನ್ನು ಬಿಟ್ಟು ದೇಶದ ಅಪಾರ ನಷ್ಟವನ್ನು ತಡೆಗಟ್ಟಲು ಇಂಗ್ಲಿಷಿನ ಹೊರೆಯನ್ನು ಕಡಿಮೆಮಾಡಿ ವಿದ್ಯಾರ್ಥಿಗಳ ನವೋದಯಕ್ಕೆ ಪ್ರೇರಕವಾಗುವ ನಿರ್ಣಯಗಳನ್ನು ಮಾಡಬೇಕು.

ಇಂದಿನ ವಿದ್ಯಾರ್ಥಿಗಳು ಇಂಗ್ಲಿಷ್ ಪರೀಕ್ಷೆಯಲ್ಲಿ ತೇರ್ಗಡೆಯಾಗಲು ಇನ್ನೊಬ್ಬರು ಬರೆದುಕೊಟ್ಟ ಪ್ರಬಂಧಗಳನ್ನು ಬಾಯಿಪಾಠಮಾಡಿ, ಪರೀಕ್ಷೆಯಲ್ಲಿ ಅದೃಷ್ಟವಶಾತ್ ಅವೇ ಪ್ರಶ್ನೆಗಳು ಬಂದರೆ ಹೇಗೋ ತೇರ್ಗಡೆಯಾಗುವ ಮಾರ್ಗವೊಂದನ್ನೆ ಅನುಸರಿಸುತ್ತಿದ್ದಾರೆ. ಪರೀಕ್ಷೆಯ ಮರುದಿನವೆ ಅವರಿಗೆ ಎಲ್ಲವೂ ಮರೆತುಹೋಗಿರುತ್ತದೆ. ನಾನು ವಿದ್ಯಾರ್ಥಿಯಾಗಿದ್ದಾಗ ವರ್ಡ್ಸ್‌ವರ್ತ್ ಕವಿಯ TinternAbbey ಎಂಬ ಕವನವು ಪಠ್ಯಪುಸ್ತಕದಲ್ಲಿತ್ತು. ನನಗೆ 'ದರ್ಶನ'ದಲ್ಲಿ ಆಸಕ್ತಿ ಇದ್ದುದರಿಂದ ಕವನವನ್ನು ಅರ್ಥ ಮಾಡಿಕೊಂಡು ಪ್ರಬಂಧ ಬರೆದಿದ್ದೆ. ಪರೀಕ್ಷೆಯಲ್ಲಿಯೂ (ಕ್ಲಾಸ್ ಪರೀಕ್ಷೆಯಲ್ಲಿ) ಉತ್ತಮರೀತಿಯಲ್ಲಿ ಬರೆದೆ. ಅಧ್ಯಾಪಕರು ಆ ಉತ್ತರವನ್ನು ಮೆಚ್ಚಿ "What a good answer!" ಎಂದು ತರಗತಿಯಲ್ಲಿ ತಂದು ಓದಿದರು. ಕೆಲವು ವಿದ್ಯಾರ್ಥಿಗಳು ನಾನು ಬರೆದ ಪ್ರಬಂಧವನ್ನು ಬಾಯಿಪಾಠ ಮಾಡಿ ತೇರ್ಗಡೆಯಾದರು. ಈ ಸ್ಥಿತಿಯಲ್ಲಿ ನಮ್ಮ ಇಂಗ್ಲಿಷ್ ವಿದ್ಯಾಭ್ಯಾಸ ನಡೆಯುತ್ತಿದೆ. ಎಲ್ಲರ ಬಾಯಿಗೂ ಇಂಗ್ಲಿಷನ್ನು ತುರುಕುವ ಹವ್ಯಾಸವನ್ನು ಬದಲಾಯಿಸಬೇಕು. ಆದ್ದರಿಂದ ಯಾರಿಗೆ ಎಷ್ಟು ಇಂಗ್ಲಿಷ್ ಬೇಕೆಂಬುದನ್ನು ನಿರ್ಣಯಿಸಿದರೆ ದೇಶದ ಕ್ಷೇಮವನ್ನು ಸಾಧಿಸಿ, ದೇಶಕ್ಕೆ ಜನಕ್ಕೆ ಆಗುತ್ತಿರುವ ಅಪಾರ ನಷ್ಟವನ್ನು ನಿಲ್ಲಿಸಬಹುದು.

ಇಂಗ್ಲಿಷ್ ತರಗತಿಯಲ್ಲಿ ಎದ್ದು ನಿಂತು ಇಂಗ್ಲಿಷಿನಲ್ಲಿಯೆ ಪ್ರಶ್ನೆ ಕೇಳಬೇಕು. ವಿದ್ಯಾರ್ಥಿಗೆ ತಿಳಿಯುವ ಬಯಕೆ ಇದ್ದರೂ ಇಂಗ್ಲಿಷಿನಲ್ಲಿ ಪ್ರಶ್ನೆಕೇಳಲು ಸರಿಯಾಗಿ ಬರುವುದಿಲ್ಲ. ಅದರೊಡನೆ ಇಂಗ್ಲಿಷ್ ತಪ್ಪಾದರೆ ಯಾರಾದರೂ ನಗುವರೊ ಎಂಬ ಹೆದರಿಕೆ. ಇಂತಾಗಿ ಬಾಯಿಬಿಡದೆ ತೆಪ್ಪಗೆ ಕುಳಿತಿರುತ್ತಾನೆ. ಇಂಗ್ಲಿಷನ್ನು ಕನ್ನಡದಲ್ಲಿ ಬೋಧಿಸಿದರೆ ವಿದ್ಯಾರ್ಥಿ ತನ್ನ ಸಂದೇಹಗಳನ್ನು ಪರಿಹರಿಸಿಕೊಳ್ಳಲು ಸಮರ್ಥನಾಗುತ್ತಾನೆ. ತಲೆಹರಟೆ ಎಂದು ಹೇಳಿಸಿಕೊಳ್ಳುವವರೆಗೆ ಬೇಕಾದರೂ ಪ್ರಶ್ನೆಗಳನ್ನು ಧೈರ್ಯವಾಗಿ ಕೇಳುತ್ತಾನೆ. ಅದರಿಂದ ಅವನ ಜ್ಞಾನವಿಕಾಸಕ್ಕೆ ತುಂಬ ಪ್ರಯೋಜನವಾಗುತ್ತದೆ.

ಈ ದೃಷ್ಟಿಯಿಂದ ವಿದ್ಯಾರ್ಥಿಗಳ ಅಭ್ಯುದಯಕ್ಕಾಗಿ ನಾವು ಎಷ್ಟು ಇಂಗ್ಲಿಷ್ ಬಳಸಬೇಕೆಂಬುದನ್ನು ನಾವೇ ನಿರ್ಣಯಿಸಬೇಕು. ಬೇರೆಯವರು ನಿರ್ಣಯಿಸಲೆಂದು ಬಿಡುವುದು ಹೆಚ್ಚು ಅಪಾಯಕರ. ರಾಜಕೀಯ ಕಾರಣಕ್ಕಾಗಿ ದುಡಿಯುವ ವ್ಯಕ್ತಿಗಳು ಉಗ್ರವಾದ ನಿರ್ಣಯಗಳನ್ನು ಬೇಕಾದರೂ ಕೈಗೊಳ್ಳಬಹುದು. ತಮ್ಮ ಪ್ರತಿಷ್ಠೆಯನ್ನು ಬೆಳೆಸಿಕೊಳ್ಳಬೇಕೆನ್ನುವವರು ಈ ದೌರ್ಬಲ್ಯಗಳನ್ನು ಆಶ್ರಯಿಸಿಕೊಂಡು "ಮಕ್ಕಳೇ, ನಿಮ್ಮ ಭವಿಷ್ಯವನ್ನು ನಾವು ಕಟ್ಟುತ್ತೇವೆ, ನಮಗೆ ಬೆಂಬಲ ಕೊಡಿ" ಎಂದು ಹೇಳಿ ಗಲಾಟೆ ಎಬ್ಬಿಸಬಹುದು. ಇದಕ್ಕೆ ಅವಕಾಶ ಕೊಡದೆ ನೀವು ಈ ಗಹನವಾದ ವಿಚಾರವನ್ನು ಚೆನ್ನಾಗಿ ಪರಿಶೀಲಿಸಿ ಇಂಗ್ಲಿಷನ್ನು ಎಷ್ಟು ಇಟ್ಟುಕೊಳ್ಳಬೇಕು, ಯಾವ ತೆರದಲ್ಲಿ ಇಟ್ಟುಕೊಳ್ಳಬೇಕು, ಯಾರ ತಲೆಯ ಮೇಲೆ ಎಷ್ಟು ಭಾರವನ್ನು ಹೊರಿಸಬೇಕು– ಎಂದು ನಿರ್ಣಯಿಸಿ, ಇಂಗ್ಲಿಷಿನ ಭವಿಷ್ಯವನ್ನು ನಿರ್ಣಯಿಸಿದರೆ ದೇಶಕ್ಕೆ ಕ್ಷೇಮ. ದೇಶಹಿತಕ್ಕಾಗಿ ಯೋಗ್ಯ ನಿರ್ಣಯಗಳನ್ನು ಕೈಗೊಳ್ಳಲು ವಾಗ್ದೇವಿ ತಮಗೆಲ್ಲರಿಗೂ ಶಕ್ತಿಯನ್ನು ದಯೆಗೈಯಲೆಂದು ಪ್ರಾರ್ಥಿಸಿ ಧನ್ಯವಾದಗಳನ್ನು ಅರ್ಪಿಸುತ್ತೇನೆ.

***

ಇಂಗಿಹೋಗುತಿದೆ ಇಂಗ್ಲಿಷಿನ ಮರುಭೂಮಿಯಲಿ
ನಿನ್ನ ಮಕ್ಕಳ ಶಕ್ತಿ–ಬುದ್ಧಿ–ಪ್ರತಿಭಾ;
ರಾಷ್ಟ್ರನಾಯಕ ಮನದಿ ವಿವೇಕರೂಪದಿ ಮೂಡಿ,
ಓ ರಸಮಯೀ ಸರಸ್ವತಿಯೆ, ಪೊರೆ ಬಾ!

ಕಲ್ಲ ಕುಂಡದಿ ನೆಟ್ಟ ಅಶ್ವತ್ಥ ಸಸಿಯಂತೆ
ಕಿಮುಳ್ಚಿ ಗುಜ್ಜಾಗುತಿದೆ ಮೊಳೆವ ಚೈತನ್ಯ;
ಭೂಮಿಯಲಿ ಬೇರೂರಿ, ಬಾನೆಡೆಗೆ ತಲೆಯೆತ್ತಿ
ನಿಲುವವರಿಗೇತಕೀ ದಾಸ್ಯದೈನ್ಯ?

ಗಾಂಧಿಯಿಂದಿಂಗ್ಲಿಷರ ದಾಸ್ಯದಿಂ ಪಾರಾದೆ;
ಅವನ ಕೊಂದಿಂಗ್ಲಿಷಿಗೆ ದಾಸಿಯಾದೆ.
ಓ ತಾಯಿ ಭಾರತಿಯೆ, ಚೀಣೀಯರನೆ ಮೀರಿ
ಹಿಂಡುತಿದೆ ಕಂದರನು ಇಂಗ್ಲಿಷಿನ ಮಾರಿ!

# ವಿಶ್ವವಿದ್ಯಾ ಮತ್ತು ಪ್ರಸಾರಾಂಗ[೧]

ಭಗವಾನ್ ಸೌಮ್ಯಕೇಶವನಿಗೆ ಅನಂತಾನಂತ ನಮಸ್ಕಾರಗಳನ್ನು ಅರ್ಪಿಸಿ, ನಾಗಮಂಗಲದ ಮತ್ತು ಅದರ ಸುತ್ತಮುತ್ತಲಿಂದ ಬಂದಿರುವ ಎಲ್ಲ ಸಹೃದಯರಿಗೂ ನನ್ನ ವಂದನೆಗಳನ್ನು ನಿವೇದಿಸುತ್ತೇನೆ.

ಮಹನೀಯರೇ,ವಿಶ್ವವಿದ್ಯಾನಿಲಯವು ಕೈಕೊಂಡಿರುವ ಒಂದು ಮಹತ್ ಕಾರ್ಯದಲ್ಲಿ ಭಾಗಿಯಾಗುವುದಕ್ಕಾಗಿ ನಾನು ಇಂದು ಇಲ್ಲಿಗೆ ಬಂದಿದ್ದೇನೆ. ಇದೇ ಅವಕಾಶವನ್ನು ಉಪಯೋಗಿಸಿಕೊಂಡು ನಾಗಮಂಗಲದ ಪುರಜನರು ನನಗೆ ಸನ್ಮಾನ ಪತ್ರವನ್ನು ಅರ್ಪಿಸಲು ಬಯಸಿದುದರಿಂದ ಇಷ್ಟೊಂದು ವಿಶ್ವಾಸದ ಕೋರಿಕೆಗೆ 'ಇಲ್ಲ' ಎನ್ನಲಾರದೆ ಅದಕ್ಕೂ ಒಪ್ಪಿದ್ದೇನೆ.

ನಾನು ಇಂದು ಮೈಸೂರಿನಿಂದ ಹೊರಟು ಇಲ್ಲಿಗೆ ಬರುವಾಗ, ದಾರಿಯಲ್ಲಿ ಮೇಲುಕೋಟೆಯ ದೇವಾಲಯದ ಗೋಪುರ ಆಕಾಶಕ್ಕೆದುರಾಗಿ ದಿಗಂತಭವ್ಯವಾಗಿ ಗೋಚರಿಸಿತು. ಅದನ್ನು ಕಂಡು ನಾನು ಅಂತಹ ದಿವ್ಯ ಸಾನ್ನಿಧ್ಯದ ಆಶ್ರಯದಲ್ಲಿರುವ ಎಲ್ಲ ನಗರಗಳೂ ಆ ದಿವ್ಯ ಸಾನ್ನಿಧ್ಯವನ್ನು ಪಡೆದಿರಬೇಕೆಂದುಕೊಂಡೆ. ಇಲ್ಲಿ ನನ್ನನ್ನು ಮತ್ತು ತಮ್ಮೆಲ್ಲರನ್ನು ಸ್ವಾಗತಿಸಿದವರು ಹೇಳಿದ ವಿಚಾರಗಳಿಂದ ಆ ಭಾವನೆಗೆ ಮತ್ತಷ್ಟು ಪೋಷಣೆ ದೊರೆತಂತಾಯಿತು. ನಾಗಮಂಗಲವೆಂಬುದು ನನಗೆ ಯಾವುದೋ ಒಂದು ಯಃಕಶ್ಚಿತ ಊರಾಗಿ ಮಾತ್ರ ಗೋಚರಿಸದೆ, ಭವ್ಯ ಇತಿಹಾಸದ ಒಂದು ಪವಿತ್ರ ಕೋಶವನ್ನೊಳಗೊಂಡ ನಗರ ಎಂದು ಗೋಚರಿಸಿತು. ಇಲ್ಲಿ ಮಂಟಪಕ್ಕೆ ಬಂದೊಡನೆಯೆ ನನ್ನನ್ನು ಮೊದಲು ಇದಿರುಗೊಂಡುದು ಈ ಜಗತ್ ಪೂಜ್ಯವಾದ ಜಗನ್ನೇತ್ರಾದ್ಭುತಕರವಾದ ನಟರಾಜ ವಿಗ್ರಹ. ಈ ನಾಗಮಂಗಲದ ಊರಿನಲ್ಲಿಯೆ ಈ ಮಹತ್ತಾದ ಶಿಲ್ಪಕಲೆ ಇತ್ತು, ಇದೆ ಮತ್ತು ಮುಂದೆಯೂ ಮುಂದು ವರಿಯುತ್ತದೆ–ಎಂಬ ಸೂಚನೆಯನ್ನು ಕೇಳಿದೊಡನೆಯೆ, ನಾಗಮಂಗಲದ ರೂಪವೆ ಬದಲಾಯಿಸಿತು ನನ್ನ ಕಣ್ಣಿಗೆ. ಮುರುಕು ಮನೆಗಳೂ ಓಡುಹೆಂಚಿನ ಮನೆಗಳೂ ಕಲ್ಲು ಕಟ್ಟಣೆಗಳೂ ಕೊರಕಲು ದಾರಿಗಳೂ ಕಿರುಗಲ್ಲಿಗಳೂ ಇರುವ, ಅಸಹ್ಯವಾಗಿ ಹೇಸಿಗೆಯಿಂದ ತುಂಬಿದವುಗಳಾಗಿರುವ ಊರುಗಳು ನಮ್ಮಲ್ಲಿ ಎಲ್ಲೆಲ್ಲಿ ಹೋದರೂ ಗೋಚರಿಸುತ್ತವೆ. ಇವೆಲ್ಲ ಹೊರಗಣ್ಣಿಗೆ ಕಾಣುವ ಊರುಗಳು. ಒಳಗಣ್ಣಿಗೆ ಕಾಣುವ

[೧] ತಾ॥ ೧೩–೬–೧೯೫೮ರಂದು ನಾಗಮಂಗಲದಲ್ಲಿ ನಡೆದ ಪ್ರಚಾರೋಪನ್ಯಾಸ ಸಪ್ತಾಹದ ಉದ್ಘಾಟನಾ ಮಹೋತ್ಸವದಲ್ಲಿ ಮೈಸೂರು ವಿಶ್ವವಿದ್ಯಾನಿಲಯದ ಉಪಕುಲಪತಿಗಳಾಗಿ ಮಾಡಿದ ಭಾಷಣ.

ಊರುಗಳನ್ನು ಆ ಊರಿನ ಜನರ ಕಲ್ಪನೆ, ಆಶೆ, ಪ್ರಾರ್ಥನೆ–ಇವು ಸೂಚಿಸುತ್ತವೆ. ಅವರ ಆದರ್ಶವೇನು? ಅವರು ಏನನ್ನು ಅಪೇಕ್ಷಿಸುತ್ತಾರೆ? ಏನನ್ನು ಪ್ರೀತಿಸುತ್ತಾರೆ? ಏನನ್ನು ಬಯಸುತ್ತಾರೆ? ಅವರ ಆತ್ಮ, ಚೇತನ ಯಾವುದರ ಕಡೆ ಹೋಗುತ್ತದೆ? ಇವುಗಳಿಂದ ಆ ಪುರವನಿತೆಯ ಅಂತರಂಗ ರೂಪ ಗೋಚರಿಸುತ್ತದೆ. ನನಗೆ ಈಗ ಗೋಚರಿಸುತ್ತಿರುವುದು ನಾಗಮಂಗಲದ ಬಹಿರಂಗದ ಮೃಣ್ಮಯರೂಪವಲ್ಲ; ಇಲ್ಲಿನ ಜನ ಶತಶತಮಾನಗಳಿಂದ ಬಾಳಿದ, ಆಶಿಸಿದ, ಸಾಧಿಸಿದ, ಸಿದ್ಧಿಪಡೆದ, ಸಿದ್ಧಿಪಡೆಯಲು ಆಶಿಸುತ್ತಿರುವ–ಈ ಸಂಕಲ್ಪಕೋಟಿಗಳಿಂದ ಉತ್ಪನ್ನವಾದ ಚಿನ್ಮಯಶ್ರೀ ನಗರ.ಇಲ್ಲಿಗೆ ಸಮೀಪದ ಬೆಳ್ಳೂರಿನಲ್ಲಿದ್ದವರು ಶ್ರೀ ಬಿ.ಎಂ.ಶ್ರೀ ಯವರು; ಇಲ್ಲಿಗೆ ಸಮೀಪದ ಬಿಂಡಿಗನವಲೆಯವರು ಕಾದಂಬರಿಕಾರರಾದ ಶ್ರೀ ಬಿ.ವೆಂಕಟಾಚಾರ್ಯರು. ಈ ಮಾತುಗಳನ್ನು ಹೇಳುತ್ತಿರುವಾಗ ನಾಗಮಂಗಲವು ಇತರ ಅನೇಕ ನಗರಗಳಂತೆ, ಊರುಗಳಂತೆ ಒಂದಲ್ಲ; ನಮ್ಮ ಕನ್ನಡನಾಡಿನ ಸಾಹಿತ್ಯದ ಜೀವಕೇಂದ್ರಗಳಲ್ಲಿ ಇದೂ ಒಂದು–ಎಂದು ನಾನು ಭಾವಿಸುತ್ತೇನೆ.

ನನ್ನನ್ನು ಸ್ವಾಗತಿಸುತ್ತಾ ಮತ್ತು ನನಗೆ ಮಾನಪತ್ರವನ್ನು ಅರ್ಪಿಸುತ್ತಾ ಇಬ್ಬರು ಮಹನೀಯರು ಕೆಲವುಸೌಹಾರ್ದದ, ಪ್ರಶಂಸೆಯ ಮಾತುಗಳನ್ನು ಆಡಿದ್ದಾರೆ.ಆ ಒಂದೊಂದು ಶ್ಲಾಘನೆಯ ಮಾತಿನ ಗೌರವ ಭಾರದಿಂದ ನಾನು ಕುಗ್ಗಿ ಕುಸಿದು ಹೋಗಿದ್ದೇನೆ, ನನ್ನ ಮಿತ್ರರು ಹಾಕಿದ ಈ ದೊಡ್ಡ ಹೂವಿನ ಹಾರದಿಂದ ಎಂತೊ ಅಂತೆ. ಆದರೆ ನೀರಿನಲ್ಲಿ ಮುಳುಗಿದ ಕಲ್ಲು ಹೇಗೆ ಭಾರವಾಗುವುದಿಲ್ಲವೊ, ಹಾಗೆಯೆ ಅಹಂಕಾರವನ್ನು ಭಗವಂತನ ಪದತಲದಲ್ಲಿ ಅರ್ಪಿಸಿದ ಚೇತನಕ್ಕೆ ಹೊಗಳಿಕೆಯ ಚಪ್ಪಡಿ ಭಾರವಾಗಲಾರದು. ನಾನು ಇಲ್ಲಿ ನಿಂತಾಗ ಹೂವಿನ ಹಾರಗಳನ್ನು ತಂದು ತಂದು ಹಾಕುತ್ತಿದ್ದರು. ಇದನ್ನೆಲ್ಲ ನಾನೆಲ್ಲಿಯಾದರು ಈ ಸಣ್ಣ ಅಹಂಕಾರದ 'ನಾನಾಗಿ' ಸ್ವೀಕರಿಸಿದರೆ, ಒಂದೊಂದು ಹಾರವೂ ನನ್ನ ಕತ್ತನ್ನು ಕೊಯ್ದೀತು. ಈ ಒಂದೊಂದು ಹಾರವೂ ಭಗವಂತನ ಪಾದಾರವಿಂದಕ್ಕೆ ಈ ರೂಪದಿಂದ ಅರ್ಪಿತವಾಗಿದೆ–ಎಂಬುದನ್ನು ನಾನು ಮನಸ್ಸಿನಲ್ಲಿ ಆಲೋಚಿಸುವುದರಿಂದ ಈ ಭಾರವನ್ನು ನಾನು ಸ್ವಲ್ಪವೂ ಭಯವಿಲ್ಲದೆ ವಹಿಸಿದ್ದೇನೆ. ನಮ್ಮ ಎಲ್ಲರ ಚೇತನಗಳಲ್ಲಿಯೂ ಭಗವಂತನು ದೇವಸ್ಥಾನ ಕಟ್ಟಿಸಿಕೊಂಡಿದ್ದಾನೆ. ಒಂದೊಂದು ಚೇತನವೂ ಆ ಭಗವಂತನ ಪೂರ್ಣತ್ವವನ್ನು ಒಳಗೆ ಬೀಜರೂಪವಾಗಿ ಪಡೆದಿದೆ.'ಈ ಪ್ರಪಂಚದಲ್ಲಿ ನಾವು ಹುಟ್ಟಿಬರುವುದು ಆ ಬೀಜರೂಪವಾದ ಭಗವಂತ ಅರಳಿ, ಬೆಳೆದು, ವೃಕ್ಷರೂಪವಾಗಿ ಗೋಚರಿಸಲಿ ಎಂದೇ'– ಎಂದು ತಿಳಿದವರು ಹೇಳುತ್ತಾರೆ. ಆದ್ದರಿಂದಲೆ ನಮಗೆ ದೊಡ್ಡದನ್ನು ಕಾಣುತ್ತಲೆ ಗೌರವ ಮೂಡುತ್ತದೆ; ಉತ್ತಮವಾದುದನ್ನು ಕಾಣುತ್ತಲೆ ಆಸೆ ಉದಿಸುತ್ತದೆ. ಅದರ ಅರ್ಥವೇನೆಂದರೆ– ಬಡವನಾದವನಿಗೆ ಐಶ್ವರ್ಯವಂತನಾದವನನ್ನು ಕಾಣುತ್ತಲೆ ಅವನ ಐಶ್ವರ್ಯದ ವಿಚಾರದಲ್ಲಿ ಹೇಗೆ ಆಸೆ ಉದಿಸುತ್ತದೆಯೊ ಹಾಗೆಯೆ ಉತ್ತಮರನ್ನೂ ಉತ್ತಮವಾದುದನ್ನೂ ಕಾಣುತ್ತಲೆ ನಮ್ಮಲ್ಲಿ ಅದರ ಪವಿತ್ರತೆಯ ವಿಚಾರವಾಗಿ ಆದರ ಹುಟ್ಟುತ್ತದೆ. ಇದರ ಅರ್ಥವೇನೆಂದರೆ– ಈ ಚೇತನ ಆಗಲೆ

ತನ್ನ ನಾಲಗೆಯನ್ನು ಚಾಚಿದೆ, ಆ ಅಮೃತವನ್ನು ಸವಿಯುವುದಕ್ಕೆ; ಆದ್ದರಿಂದ ಆ ಚೇತನದ ಉದ್ಧಾರದ ಬಾಗಿಲು ತೆರೆದಿದೆ; ಅದು ಮುಂದೆ ಧನ್ಯವಾಗುತ್ತದೆ–ಇದು ಅದರ ಅರ್ಥ. ನನ್ನ ಮೂಲಕವಾಗಿ ಸರಸ್ವತಿದೇವಿ ಜನತೆಗೆ ಅರ್ಪಿಸಿರುವ ಕೃತಿಗಳನ್ನು ನೀವು ಓದಿ, ಸಂತೋಷಪಟ್ಟು,ನನಗೆ ಗೌರವ ತೋರಿದ್ದೀರಿ. ವಾಸ್ತವವಾಗಿ ನೀವು ಈ ಗೌರವ ತೋರುತ್ತಿರುವುದು ಈ ಮನುಷ್ಯವ್ಯಕ್ತಿಗೆ ಅಲ್ಲ. ಸರಸ್ವತಿಯ ತತ್ವಕ್ಕೆ, ಚೇತನಕ್ಕೆ, ಆ ದಿವ್ಯತೆಗೆ ನಿಮ್ಮ ಗೌರವ ಸಲ್ಲುತ್ತಿದೆ. ಆದ್ದರಿಂದಲೆ ಆ ಶಕ್ತಿ ನಿಮ್ಮ ನಮಸ್ಕಾರದ, ಪೂಜೆಯ, ಪ್ರಾರ್ಥನೆಯ ಮುಖಾಂತರ ನಿಮ್ಮೆಲ್ಲರ ಹೃದಯಗಳಿಗೂ ಇಳಿಯುತ್ತದೆ. ಈ ಗೌರವ, ಸಂಭಾವನೆಯೆಲ್ಲವೂ ಅದರ ಪ್ರತೀಕ. ಹಿಂದಿನ ಮಹಾಕವಿಗಳೆಲ್ಲರೂ–ಅವರು ಯಾವ ದೇಶದವರಾದರೂ ಆಗಲಿ, ಯಾವ ಭಾಷೆಯಲ್ಲಿಯೆ ಬರೆದಿರಲಿ, ಯಾವ ಮತಕ್ಕೆ ಸೇರಿರಲಿ, ಯಾವ ದೇವರನ್ನೆ ಪೂಜಿಸುತ್ತಿರಲಿ–ತಮ್ಮ ಕೃತಿಗಳ ಪ್ರಾರಂಭದಲ್ಲಿಯೆ ಒಂದು ಮಾತನ್ನು ಹೇಳುತ್ತಾರೆ. ಅದೇನೆಂದರೆ–'ನಾನು ಬರಿಯ ಲೇಖನಿ, ಬರೆಯುವವನು ಭಗವಂತ.' ಇದು ಸರಿ. ಮಹತ್ ಕಾರ್ಯಗಳನ್ನು ಮಹತ್ ಪ್ರಮಾಣದಲ್ಲಿ ಸಾಧಿಸುವುದು ಅಲ್ಪ ಚೇತನಗಳಿಗೆ ಅಸಾಧ್ಯ. ಮಹಾಕಾರ್ಯವನ್ನು ಮಾಡಿದೊಡನೆಯೆ ಗೊತ್ತಾಗುತ್ತದೆ–ಅದನ್ನು ಸಾಧಿಸಿರುವ ಶಕ್ತಿ ಮತ್ತೊಂದು,ನಾನಲ್ಲ; ಆ ಶಕ್ತಿ ಇದನ್ನು ಎತ್ತದಿದ್ದರೆ, ಯಾರುತಾನೆ ಈ ಭಾರವನ್ನು ಎತ್ತಲು ಸಾಧ್ಯವಾಗುತ್ತದೆ? ಎಂದು.ಆದ್ದರಿಂದ ನನ್ನ ಕೃತಿಗಳಿಂದ ಜನತೆಯ ಜನಾರ್ದನನಿಗೆ ಏನಾದರೂ ಪುಷ್ಪಾಂಜಲಿ ಅರ್ಪಿತವಾಗಿದ್ದರೆ ಅದರಿಂದ ನಾನು ನಿಜವಾಗಿಯೂ ಧನ್ಯ. ನನ್ನ ಮೂಲಕವಾಗಿ ಹೊರಗೆ ಬಂದಿರುವ ಕೃತಿಗಳನ್ನು ಓದಿ, ಓದಿಸಿ ಕೇಳಿ–ನೀವು ಯಾರೇ ಆಗಲಿ,ಎಲ್ಲೇ ಆಗಲಿ–ಆನಂದ ಪಡುತ್ತಿದ್ದರೆ, ಆ ಆನಂದದ ಅಂಶ ಯಾವುದೊ ಒಂದು ರೀತಿಯಲ್ಲಿ ನನ್ನ ಚೇತನಕ್ಕೂ ತಾಕುತ್ತದೆ; ನನ್ನನ್ನು ಉದ್ಧಾರ ಮಾಡುತ್ತದೆ. ಅದು ಭಗವಂತನಿಗೆ ಸಮರ್ಪಿತವಾಗುತ್ತದೆ–ಎಂದು ನಾನು ಭಾವಿಸುತ್ತೇನೆ.

ನನ್ನನ್ನು ನಾನಾ ವಿಧವಾಗಿ ಪ್ರಶಂಸಿಸುತ್ತಾ, ಕೀರ್ತಿಯನ್ನು ಬೆನ್ನಟ್ಟಿದವನಲ್ಲ–ಎಂದು ಸೂಚಿಸಿದ್ದೀರಿ. ನನ್ನ ವಿದ್ಯಾಗುರುಗಳಲ್ಲಿ ಒಬ್ಬರಾದ ಶ್ರೀಮಾನ್ ಕೃಷ್ಣಶಾಸ್ತ್ರಿಗಳು ಒಮ್ಮೆ ಬೆಂಗಳೂರಿನಲ್ಲಿ ಮಾತನಾಡುತ್ತಾ 'ಇವರು ಕೀರ್ತಿಯನ್ನು "ಶನಿ" ಎಂತ ಕರೆದು ಅಟ್ಟಿದರು; ಈಗ ಆ ಶನಿ ಬೆನ್ನು ಹತ್ತಿದೆ'–ಎಂದು ವಿನೋದಕ್ಕಾಗಿ ಹೇಳಿದರು. ಆದರೆ ಸಾಮಾನ್ಯ ಕೀರ್ತಿಗೂ, ನಾನು ಯಾವುದನ್ನೂ ಯಶೋಲಕ್ಷ್ಮಿಯೆಂದು ಕರೆಯುತ್ತೇನೆಯೊ ಅದಕ್ಕೂ ಬಹಳ ವ್ಯತ್ಯಾಸವಿದೆ. ಸಾಮಾನ್ಯ ಕೀರ್ತಿ ನಮ್ಮ ಅಹಂಕಾರವನ್ನು ಪೋಷಿಸುತ್ತದೆ. ಈ ಅಹಂಕಾರವನ್ನು ಪೋಷಿಸುವುದಕ್ಕಾಗಿಯೆ ನಾವು ಅದನ್ನು ಪಡೆಯ ಯತ್ನಿಸಿದಲ್ಲಿ ಅದು ನಮ್ಮ ಅಹಂಕಾರವನ್ನು ಹೆಚ್ಚಿಸಿ, ನಮ್ಮನ್ನು ಮತ್ತೆ ಮತ್ತೆ ಅಧೋಗತಿಗೆ ಕರೆದೊಯ್ಯುತ್ತದೆ. ಆದರೆ ನಾವು ನಮ್ಮ ಅಹಂಕಾರವನ್ನು ಬಿಟ್ಟು, ಭಗವದರ್ಪಣ ಬುದ್ಧಿಯಿಂದ ಸಾಗುತ್ತಿದ್ದರೆ, ಆಗ ಬರುವುದು ಯಶೋಲಕ್ಷ್ಮಿ. ಅದರಿಂದ ನಮಗೂ ಕಲ್ಯಾಣವಾಗುತ್ತದೆ, ಲೋಕಕ್ಕೂ ಉಪಕಾರವಾಗುತ್ತದೆ. ನನಗೆ ಬಂದಿರುವ ಈ ಯಶೋಲಕ್ಷ್ಮಿ ಭಗವಂತನ ಆಶೀರ್ವಾದದಿಂದ ನನ್ನ ಉದ್ಧಾರಕ್ಕೂ

ಕಾರಣವಾಗಲಿ, ಜನತೆಗೂ ಆ ಉದ್ಧಾರ ಸಿದ್ಧವಾಗಲಿ–ಎಂದು ನಾನು ಹಾರೈಸುತ್ತೇನೆ. ಮತ್ತೊಮ್ಮೆ ನಾಗಮಂಗಲದ ಪುರಜನರಿಗೂ ಸುತ್ತುಮುತ್ತಿನ ಊರುಗಳ ಮಾನ್ಯ ಮಹನೀಯರಿಗೂ, ಅವರು ತೋರಿರುವ ಈ ಗೌರವಕ್ಕಾಗಿ ನನ್ನ ಅನಂತ ವಂದನೆಗಳು.

ಇಂದು ನಾನಿಲ್ಲಿಗೆ ಬಂದಿರುವುದು ವಿಶ್ವವಿದ್ಯಾನಿಲಯದ ಈ ವರ್ಷದ ಪ್ರಚಾರೋಪನ್ಯಾಸ ಮಾಲೆಯನ್ನು ಪ್ರಾರಂಭಿಸಲೆಂದು. ಆ ವಿಚಾರವಾಗಿ ಒಂದೆರಡು ಮಾತುಗಳನ್ನು ನಿವೇದಿಸಿಕೊಳ್ಳಲು ನಾನು ಬಯಸುತ್ತೇನೆ. ಈ ಊರಿನಲ್ಲಿ ಒಂದು ಹೈಸ್ಕೂಲಿದೆ, ಇದರ ಸುತ್ತಮುತ್ತಲ  ಇನ್ನು ಕೆಲವು ಊರುಗಳಲ್ಲಿ ಇನ್ನೂ ಎರಡು ಮೂರು ಹೈಸ್ಕೂಲುಗಳಿವೆ–ಎಂದು ನೀವು ಹೇಳಿದ್ದೀರಿ. ದೇಶದಲ್ಲಿ ಈಗ ಪ್ರಾಥಮಿಕ ಶಾಲೆಗಳು ಮಾಧ್ಯಮಿಕ ಶಾಲೆಗಳು ಹೈಸ್ಕೂಲುಗಳೂ ದೊಡ್ಡ ದೊಡ್ಡ ಹಳ್ಳಿಗಳಲ್ಲಿ ಕೂಡ ಮೇಲೇಳುತ್ತಿವೆ. ಎಂದರೆ, ವಿದ್ಯೆಯನ್ನು ಆಶಿಸುವ, ಅಪೇಕ್ಷಿಸುವ ಜನ ಹೆಚ್ಚಾಗುತ್ತಿದ್ದಾರೆ. ನಮ್ಮ ಕಾಲೇಜುಗಳಲ್ಲಿ ಕೂಡ ಹಿಂದೆ ನೂರಿದ್ದ ಕಡೆ ಈಗ ಐನೂರು ವಿದ್ಯಾರ್ಥಿಗಳಿದ್ದಾರೆ. ಇಂಟರ್ ಮೀಡಿಯಟ್ ಮತ್ತು ಫಸ್ಟ್ ಗ್ರೇಡ್ ಕಾಲೇಜುಗಳೂ ಈಗ ದೇಶದ ಮೂಲೆ ಮೂಲೆಗಳಲ್ಲಿಯೂ ಪ್ರಾರಂಭವಾಗುತ್ತಿವೆ. ಬಹುಶಃ ಬಹಳ ಮುಂದಿರುವ ದೇಶಗಳನ್ನು ಗಮನಕ್ಕೆ ತೆಗೆದುಕೊಂಡರೆ ನಮ್ಮಲ್ಲಿನ ವಿದ್ಯಾಸಂಸ್ಥೆಗಳ, ವಿದ್ಯಾರ್ಥಿಗಳ ಸಂಖ್ಯೆ ಅತ್ಯಲ್ಪವೆಂದೇ ಹೇಳಬೇಕು. ಆ ದೇಶಗಳಲ್ಲಿ ಊರೂರಿಗೆ ಒಂದೊಂದು ಯೂನಿವರ್ಸಿಟಿ ಇದ್ದೀತು. ಈ ವಿಚಾರದಲ್ಲಿ ನಮ್ಮ ದೇಶ ಈಗ ತಾನೆ ಕಣ್ಣು ತೆರೆಯುತ್ತಿದೆ.

ನೀವು–ಎಂದರೆ ರೈತವರ್ಗದವರು–ಸರ್ಕಾರಕ್ಕೆ ಕಂದಾಯವನ್ನು ಕೊಡುತ್ತೀರಿ. ಅದಕ್ಕೆ ಪ್ರತಿಫಲವಾಗಿ ಸರ್ಕಾರ ರಸ್ತೆ, ಬಾವಿ ಮೊದಲಾದ ಅನುಕೂಲ್ಯಗಳನ್ನು ಕಲ್ಪಿಸಿಕೊಡುತ್ತದೆ. ಇದಕ್ಕೂ ಹೆಚ್ಚಾಗಿ ವಿದ್ಯಾಭ್ಯಾಸದ ವ್ಯವಸ್ಥೆಯನ್ನು ಮಾಡಿಕೊಡುತ್ತದೆ. ಜನರು ಈ ಅನುಕೂಲ್ಯಗಳನ್ನು ಉಪಯೋಗಿಸಿಕೊಂಡು ವಿದ್ಯಾವಂತರಾಗಬೇಕು. 'ವಿದ್ಯೆ' ಎನ್ನುವುದು ಸಾಮಾನ್ಯ ಮನುಷ್ಯನನ್ನು ಮೃಗತ್ವದಿಂದ ದೇವತ್ವಕ್ಕೆ ಎತ್ತುವ ಒಂದು ಸಾಧನ ಮತ್ತು ವಿಧಾನ. ನಮಗೆ ಅಂತಹ ವಿದ್ಯೆ ಬೇಕು ಎಂದು ಹೇಳುವ ಕಾಲ ಈಗ ಬಂದಿದೆ. ನಮ್ಮಲ್ಲಿ ಎಷ್ಟೇ ಹೈಸ್ಕೂಲುಗಳಿರಲಿ, ಏನೇ ಮಾಡಲಿ, ಸದ್ಯಕ್ಕೆ ನಮ್ಮದೇಶದಲ್ಲಿ ಎಲ್ಲರಿಗೂ ವಿಶ್ವವಿದ್ಯಾನಿಲಯಕ್ಕೆ ಪ್ರವೇಶ ದೊರೆಯುವುದೆಂದು ನಾನು ಹೇಳಲಾರೆ. ಪ್ರವೇಶ ಸಿಕ್ಕುವುದಿರಲಿ; ನಮ್ಮಲ್ಲಿ ಶೇ.೮೦ರಷ್ಟು ಜನ ಪ್ರಾಥಮಿಕ ವಿದ್ಯಾಭ್ಯಾಸದ ಕೊನೆಯಲ್ಲಿಯೆ ತಮ್ಮ ವಿದ್ಯಾಭ್ಯಾಸವನ್ನು ನಿಲ್ಲಿಸಿಬಿಡುತ್ತಾರೆ. ಉಳಿದಿಪ್ಪತ್ತರಲ್ಲಿ ಅಷ್ಟು ಜನ ಮಾಧ್ಯಮಿಕದ ಮಧ್ಯದಲ್ಲಿಯೊ ಕೊನೆಯಲ್ಲಿಯೊ ಕೈಬಿಡುತ್ತಾರೆ; ಹೈಸ್ಕೂಲ್ ವಿದ್ಯಾಭ್ಯಾಸದ ಕೊನೆಯಲ್ಲಿಯೆ ತಮ್ಮ ವಿದ್ಯಾಭ್ಯಾಸವನ್ನು ನಿಲ್ಲಿಸಿಬಿಡುತ್ತಾರೆ. ಉಳಿದಿಪ್ಪತ್ತರಲ್ಲಿ ಅಷ್ಟು ಜನ ಮಾಧ್ಯಮಿಕದ ಮಧ್ಯದಲ್ಲಿಯೊ ಕೊನೆಯಲ್ಲಿಯೊ ಕೈಬಿಡುತ್ತಾರೆ; ಹೈಸ್ಕೂಲ್ ವಿದ್ಯಾಭ್ಯಾಸವನ್ನು ಮುಗಿಸಿದೊಡನೆಯೆ ಮತ್ತಷ್ಟು ಜನ ಓದು ನಿಲ್ಲಿಸುತ್ತಾರೆ. ಹೀಗಾಗಿ ಕಾಲೇಜು ಮಟ್ಟಕ್ಕೆ ಬರಲು ಅರ್ಹತೆ ಪಡೆಯುವವರೆ ವಿರಳ. ಇವರಲ್ಲಿಯೂ ಎಷ್ಟೋ ಜನ ಓದು ನಿಲ್ಲಿಸುತ್ತಾರೆ.

ಇವರಲ್ಲಿಯೂ ಎಷ್ಟೋ ಜನ ದೂರದ ಕಾರಣದಿಂದಲೊ, ಮನೆಯ ಕ್ಲೇಶ ಸಂಕಟಗಳ ಕಾರಣದಿಂದಲೊ ವಿಶ್ವವಿದ್ಯಾನಿಲಯಕ್ಕೆ ಸೇರಲಾಗುವುದಿಲ್ಲ. ಹೀಗೆ ದೇಶದ ಬಹುಜನ ವಿಶ್ವವಿದ್ಯಾನಿಲಯವನ್ನು ಪ್ರವೇಶಮಾಡಿ, ಸಂಸ್ಕೃತಿ ವಿಜ್ಞಾನಗಳಲ್ಲಿ ಪರಿಣತರಾಗಲು ಸಾಧ್ಯವಿಲ್ಲ. ಇಂತಹರಿಗಾಗಿ ಮೈಸೂರು ವಿಶ್ವವಿದ್ಯಾನಿಲಯ ೧೯೩೩ನೆ ಇಸವಿಯಲ್ಲಿ ಎಂದರೆ ಈಗ ಸುಮಾರು ೨೫ ವರ್ಷಗಳ ಕೆಳಗೆ ಪ್ರಚಾರೋಪನ್ಯಾಸಗಳನ್ನು ಪ್ರಾರಂಭಿಸಿತು.

ಏನು ಈ ಪ್ರಚಾರೋಪನ್ಯಾಸ? ದೇಶದಲ್ಲಿರುವ ಎಲ್ಲರೂ ವಿಶ್ವವಿದ್ಯಾನಿಲಯಕ್ಕೆ ಹೋಗಲಾರರಷ್ಟೆ! ಆದರೆ ವಿಶ್ವವಿದ್ಯಾನಿಲಯ ಎಲ್ಲರ ಮನೆಯ ಬಾಗಿಲಿಗೂ ಹೋಗಬಲ್ಲುದು. ದೇಶದಲ್ಲಿ ಎಲ್ಲೆಲ್ಲಿ ಈ ಅಪೇಕ್ಷೆ ಮೂಡುತ್ತದೆಯೊ ಅಲ್ಲಿಗೆ, ಯಾರು ಆಹ್ವಾನಿಸುತ್ತಾರೋ ಅವರಲ್ಲಿಗೆ, ವಿಶ್ವವಿದ್ಯಾನಿಲಯದ ಉಪಾಧ್ಯಾಯ ವರ್ಗದವರು ಮೂರು ನಾಲ್ಕು ಜನ ಬಂದು ಒಂದೆರಡುದಿನ ಅಲ್ಲಿಯೆ ತಂಗಿ, ಉಪನ್ಯಾಸಗಳನ್ನು ಕೊಡುತ್ತಾರೆ. ಮಧ್ಯೆ ಮಧ್ಯೆ ಮನರಂಜನೆಯ ಕಾರ್ಯಕ್ರಮಗಳು–ಕಾವ್ಯವಾಚನ, ನಾಟಕ ವಾಚನ–ಇತ್ಯಾದಿಗಳಿಂದ ಜನತೆಯನ್ನು ಆಕರ್ಷಿಸಿ, ಉತ್ತಮವಾದ ಉಪನ್ಯಾಸಗಳನ್ನು ಕೊಡುತ್ತಾರೆ. ಮೊದಮೊದಲು ಜನರು ಅಪೇಕ್ಷಿಸಿ, ಕರೆದಲ್ಲಿಗೆ ಹೋಗುವ ಪದ್ಧತಿ ಇತ್ತು. ಬರಬರುತ್ತಾ ಈ ಕರೆ ಬರುವುದು ಹೆಚ್ಚಾಯಿತು. ಆದ್ದರಿಂದ ವಿಶ್ವವಿದ್ಯಾನಿಲಯ ಈ ಪ್ರಚಾರೋಪನ್ಯಾಸಗಳನ್ನು ಮುಂದುವರಿಸಲು ಸಾಕಷ್ಟು ಹಣವನ್ನು ಮೀಸಲಾಗಿರಿಸಬೇಕಾಯಿತು. ಇದರ ಜೊತೆಗೆ ಉಪನ್ಯಾಸಗಳನ್ನು ಸಣ್ಣ ಸಣ್ಣಪುಸ್ತಕಗಳ ರೂಪದಲ್ಲಿ ಪ್ರಕಟಿಸಿ ಅತ್ಯಂತ ಅಲ್ಪ ಬೆಲೆಗೆ ಅವುಗಳನ್ನು ಮಾರಲು ಏರ್ಪಡಿಸಲಾಯಿತು. ಮೊದಲು ಇವುಗಳ ಬೆಲೆ ಕೇವಲ ಎರಡಾಣೆ ಇತ್ತು. ಈಗ ಮೂರು ಅಥವಾ ನಾಲ್ಕು ಆಣೆ ಆಗಿರಬಹುದು. ಇವುಗಳ ಅಚ್ಚಿನ ವೆಚ್ಚ ಕೂಡ ಇವುಗಳ ವಿಕ್ರಯದಿಂದ ಹುಟ್ಟುವುದಿಲ್ಲ. ಇವುಗಳ ಉದ್ದೇಶ ದುಡ್ಡು ಮಾಡುವುದಲ್ಲ, ಜನತೆಯಲ್ಲಿ ಜ್ಞಾನ ಪ್ರಸಾರ ಮಾಡುವುದು. ಇನ್ನುಮುಂದೆ ಇಲ್ಲಿ ನಡೆಯುವ ಉಪನ್ಯಾಸಗಳಿಗೆ ನೀವು ಹೋಗುತ್ತೀರಿ; ಆಗ ನಮ್ಮ ಕಾರ್ಯದರ್ಶಿಗಳು ಈ ವಿಚಾರದ ವಿವರಗಳನ್ನು–ಎಷ್ಟು ಲಕ್ಷಾಂತರ ಪುಸ್ತಕಗಳು ಬಿಕರಿಯಾಗಿವೆ, ಜನರಲ್ಲಿ ಇವು ಎಷ್ಟು ಪ್ರಿಯವಾಗಿವೆ–ಎಂಬುದನ್ನು ನಿಮಗೆ ತಿಳಿಸುತ್ತಾರೆ. ಎಷ್ಟು ವಿಚಾರಗಳನ್ನು ಈ ಪುಸ್ತಕಗಳು ಒಳಗೊಂಡಿವೆ–ಆಧುನಿಕ ವಿಜ್ಞಾನದ ವಿಷಯಗಳು, ಕೊನೆಗೆ ವೈದ್ಯಕೀಯ ವಿಷಯಗಳು, ಕಣ್ಣು ಮತ್ತು ಅದರ ರಕ್ಷಣೆ, ಹೆರಿಗೆ ಮತ್ತು ಶಿಶುಸಂರಕ್ಷಣೆ, ರೇಡಾರ್! ಹೀಗೆ ಅತ್ಯಂತ ಗಹನವಾದ ವಿಷಯಗಳನ್ನು ಎಲ್ಲರಿಗೂ ತಿಳಿಯುವಂತೆ ಸುಲಭವಾದ ಭಾಷೆಯಲ್ಲಿ ಉಪನ್ಯಾಸಮಾಡಿ, ಪುಸ್ತಕ ರೂಪದಲ್ಲಿ ಪ್ರಕಟಮಾಡಿ, ಜ್ಞಾನಪ್ರಸಾರವನ್ನು ನಡೆಸುತ್ತಿದ್ದಾರೆ. ಹಿಂದಿನಿಂದ ಕನ್ನಡದಲ್ಲಿ ಬಂದಿರುವ ಕಾವ್ಯಗಳನ್ನು ಕುರಿತು ಮಾತ್ರವೆ ಅಲ್ಲದೆ ಬೇರೆ ಬೇರೆ ಭಾಷೆಗಳಲ್ಲಿ –ಅದು ಪರ್ಷಿಯನ್ ಭಾಷೆಯಾಗಿರಬಹುದು, ಇಂಗ್ಲಿಷ್ ಭಾಷೆಯಾಗಿರಬಹುದು, ಗ್ರೀಕ್ ಭಾಷೆಯಾಗಿರಬಹುದು–ಆಯಾ ಭಾಷೆಗಳಲ್ಲಿ ತಜ್ಞರಾದವರು ಆಯಾ ವಿಷಯಗಳನ್ನು

ಕುರಿತು ಉಪನ್ಯಾಸ ಮಾಡುತ್ತಾರೆ. ಇದರಿಂದ ನಮ್ಮ ಜನ ನಮ್ಮ ಸಾಹಿತ್ಯವನ್ನು ಮಾತ್ರವೆ ಅಲ್ಲದೆ ಇತರ ಸಾಹಿತ್ಯಗಳ ಪರಿಚಯವನ್ನೂ ಪಡೆದುಕೊಂಡಂತೆ ಆಗುತ್ತದೆ. ಇಂದು ಪ್ರಪಂಚ ಹತ್ತಿರ ಹತ್ತಿರವಾಗುತ್ತಿದೆ. ಕನ್ನಡಿಗನಾದವನು ಭರತಖಂಡದ ಇತರರನ್ನು ಅರಿಯಬೇಕು. ಇಷ್ಟೇ ಅಲ್ಲ, ಬೇರೆ ಬೇರೆ ಹೊರದೇಶಗಳವರನ್ನೂ ಅರಿತುಕೊಳ್ಳಬೇಕು. ಸಂಪರ್ಕಾನುಕೂಲ್ಯದಿಂದ ವಿಶಾಲಜಗತ್ತು ಇಂದು ಚಿಕ್ಕದಾಗಿ ಹೋಗಿದೆ. ಆದ್ದರಿಂದ ಇಡೀ ಪ್ರಪಂಚದ ವಿಸ್ತಾರವಾದ ಮತ್ತು ವಿವರವಾದ ಜ್ಞಾನವನ್ನು ಸಾಮಾನ್ಯ ಜನತೆಗೆ ಮಾಡಿಕೊಡಬೇಕಾದುದು ಅತ್ಯಗತ್ಯ. ಹಾಗೆ ಕೊಡುವುದಕ್ಕೋಸ್ಕರವೆ ವಿಶ್ವವಿದ್ಯಾನಿಲಯ ಈ ಪ್ರಕಟನೆ ಮತ್ತು ಪ್ರಚಾರೋಪನ್ಯಾಸ ಶಾಖೆಯನ್ನು ತೆರೆದಿದೆ. ಈ ಶಾಖೆಯಲ್ಲಿ ಎರಡಾಣೆ ಮೂರಾಣೆ ಪುಸ್ತಕಗಳಿವೆ, ಹನ್ನೆರಡಾಣೆ ಒಂದು ರೂಪಾಯಿ ಮಟ್ಟದ ಪುಸ್ತಕಗಳಿವೆ; ಅದಕ್ಕೂ ಮೇಲಿನ ಮಟ್ಟದ ಪುಸ್ತಕಗಳೂ ಇವೆ. ಅವರವರ ಅರ್ಹತೆಗೆ, ಯೋಗ್ಯತೆಗೆ, ಆಢ್ಯತೆಗೆ ತಕ್ಕಹಾಗೆ ಅವುಗಳನ್ನು ತೆಗೆದುಕೊಂಡು ಓದಬಹುದು.

ನಮ್ಮ ವಿಶ್ವವಿದ್ಯಾನಿಲಯವನ್ನು ನಾನು ಈ ಮೂರು ಅಂಗಗಳಲ್ಲಿ ಆಲೋಚಿಸುತ್ತೇನೆ. ಅವುಗಳಲ್ಲಿ ಒಂದು ಸಂಶೋಧನೆ. ಅದು ಎಂ.ಎ., ಎಂ.ಎಸ್ ಸಿ., ಮತ್ತು ಅವಕ್ಕೂ ಮುಂದಿನ ವ್ಯಾಸಂಗಕ್ಕೆ ಸಂಬಂಧಿಸಿದ ಕೆಲಸ. ಅದು ಮೇಲ್ಮಟ್ಟದ ಕೆಲಸ. ವಿಶ್ವವಿದ್ಯಾನಿಲಯದ ತಲೆಯಿದ್ದಂತೆ. ಇನ್ನೊಂದು, ವಿದ್ಯಾರ್ಥಿಗಳಿಗೆ ಬೋಧಿಸತಕ್ಕದ್ದು. ವಿಶ್ವವಿದ್ಯಾನಿಲಯದ ಕೈ ಇದ್ದಂತೆ. ಇಂದಿನ ಪೀಳಿಗೆಯವರು ಸುಸಂಸ್ಕೃತರಾಗಿ, ನಾಗರಿಕರಾಗಿ, ವಿದ್ಯಾವಂತರಾಗಿ, ಪ್ರಪಂಚದ ಇತರ ಜನರೊಡನೆ ಸಮಸ್ಪರ್ಧಿಗಳಾಗಿ ಹೇಗೆ ಬಾಳಬೇಕೆಂದು ಕಲಿಸುವುದು ಇದರ ಕೆಲಸ. ಇದರಲ್ಲಿ ಪೋಸ್ಟ್ ಗ್ರಾಜುಯೇಟ್ ಸ್ಟಡೀಸ್ ಅಂಡ್ ಟೀಚಿಂಗ್ ಒಂದು ಭಾಗವಾದರೆ ಅಂಡರ್ ಗ್ರಾಜುಯೇಟ್ ಸ್ಟಡೀಸ್ ಅಂಡ್ ಟೀಚಿಂಗ್ ಮತ್ತೊಂದು ಭಾಗ. ಈ ಸಂಶೋಧನೆ ಭೋಧನೆಗಳಿಗಿಂತಲೂ ನನ್ನ ಮನಸ್ಸಿಗೆ ಮುಖ್ಯವಾದ, ಮೂಲಭೂತವಾದ, ಅತ್ಯಂತ ಆವಶ್ಯಕವೆಂದು ತೋರುತ್ತಿರುವ ಅಂಗ ಈ ಪ್ರಚಾರೋಪನ್ಯಾಸ ಮತ್ತು ಪ್ರಕಟನೆಯ ಅಂಗ; ಪ್ರಸಾರಾಂಗ. ಇದೇ ವಿಶ್ವವಿದ್ಯಾನಿಲಯದ ಜೀವನಾಡಿ ಮಿಡಿಯುತ್ತಿರುವ ಹೃದಯ. ಏಕೆಂದರೆ ನಮ್ಮ ಜನ ಬೆವರು ಸುರಿಸಿ ದುಡಿದುಕೊಟ್ಟ ಹಣದಿಂದ ನಮ್ಮ ಸರ್ಕಾರ ವಿಶ್ವವಿದ್ಯಾನಿಲಯವನ್ನು ನಡೆಸುತ್ತಿದೆ. ವಿಶ್ವವಿದ್ಯಾನಿಲಯ ಮೇಲ್ಮಟ್ಟದ ಜನಕ್ಕೆ ಬೋಧಿಸುತ್ತಿದೆ. ಜನಸಾಮಾನ್ಯನಿಗೆ ಏನು ಬಂತು? ವಿಶ್ವವಿದ್ಯಾನಿಲಯದ ಪ್ರಚಾರೋಪನ್ಯಾಸ ಶಾಖೆ ಜನತೆಯ ಅಂಗ. ವಿಶ್ವವಿದ್ಯಾನಿಲಯ ಹಿಂದಿನಿಂದಲೂ ಇದಕ್ಕೆ ಮಾನ್ಯತೆಯನ್ನು ಕೊಡುತ್ತಾ ಬಂದಿದೆ. ಅದಕ್ಕೂ ಸಮಧಿಕವಾಗಿ ಜನತೆಯಲ್ಲಿ ಜ್ಞಾನ ಪ್ರಸಾರಮಾಡುವ ಕಾರ್ಯವನ್ನು ಈಗ ಮತ್ತೊಮ್ಮೆ ವಿಶ್ವವಿದ್ಯಾನಿಲಯ ಕೈಗೊಳ್ಳುತ್ತದೆ; ಕೈಗೊಂಡಿದೆ. ಅದಕ್ಕೆ ಜನತೆಯ ಬೆಂಬಲ ಬೇಕು. ಉಪನ್ಯಾಸಗಳಿಗೆ ಜನರು ಬಂದು ನೆರೆಯಬೇಕು. ನಿಮಗೆ ಬೇಕಾದ ವಿಷಯಗಳೇನೆಂಬುದನ್ನು ತಿಳಿಸಬೇಕು. ಕಾರ್ಯದರ್ಶಿಗಳಿಗೆ ಕಾಗದ ಬರೆಯಬೇಕು. ಅವರು ಏರ್ಪಡಿಸುವ ಉಪನ್ಯಾಸಗಳನ್ನು ಕೇಳಬೇಕು.

ನಮ್ಮ ವಿಶ್ವವಿದ್ಯಾನಿಲಯ ಕೈಕೊಂಡಿರುವ ಈ ಬಗೆಯ ಕಾರ್ಯ, ಈ ರೂಪದಲ್ಲಿ,

ಭರತಖಂಡದ ಮತ್ತಾವ ವಿಶ್ವವಿದ್ಯಾನಿಲಯದಲ್ಲೂ ಕಂಡು ಬಂದಿಲ್ಲ.ನಮ್ಮ ಮಹಿಮೆ, ಮಹತ್ತು ನಮಗೇ ಗೊತ್ತಿರಲಿಲ್ಲ. ಹೊರಗಿನಿಂದ ಇಲ್ಲಿಗೆ ಬಂದವರು–ಹೊರಗಿನ ದೊಡ್ಡ ಗವರ್ನರುಗಳು ಗ್ರಾಂಟ್ಸ್ ಕಮೀಷನ್ನಿನವರು ನಮ್ಮ ವಿಶ್ವವಿದ್ಯಾನಿಲಯಕ್ಕೆ ಬಂದು ಕ್ರಾಫರ್ಡ್ ಹಾಲಿನ ಪ್ರಕಟನ ಶಾಖೆಯನ್ನೂ ಅಲ್ಲಿನ ಪುಸ್ತಕಗಳನ್ನೂ ನೋಡಿ, ಉಪನ್ಯಾಸಗಳ ವಿಚಾರವನ್ನು ಕೇಳಿ ತಿಳಿದುಕೊಂಡು, ಮೂಗಿನ ಮೇಲೆ ಬೆರಳಿಟ್ಟು 'ಇದೇನು ಅದ್ಭುತವಾದ ಕೆಲಸ ಮಾಡುತ್ತಿದ್ದೀರಿ! ಭರತಖಂಡದ ಮತ್ತಾವ ವಿಶ್ವವಿದ್ಯಾನಿಲಯದಲ್ಲೂ ಈ ಪ್ರಚಾರೋಪನ್ಯಾಸದ ರೀತಿ, ಈ ಪ್ರಕಟನೆಯ ವಿಧಾನ–ಇವೆರಡೂ ಇಲ್ಲ'–ಎಂದು ಪ್ರಶಂಸಿಸಿ, ನಮಗೆ ಹೇಳಿ, ಬರೆದೂ ತಿಳಿಸಿದ್ದಾರೆ. ಹೀಗೆ ಅವರು ಹೇಳಿದಮೇಲೆ ನಮಗೆ ಗೊತ್ತಾಯಿತು–ಓಹೋ, ನಾವೂ ಬಹಳ ಕೆಲಸ ಮಾಡುತ್ತಿದ್ದೇವೆ–ಅಂತ. ಆದರೆ ಆ ಕೆಲಸ ಬರಿಯ ವಿಶ್ವವಿದ್ಯಾನಿಲಯದ ಅಧ್ಯಾಪಕ ವರ್ಗದವರಿಂದ ಮಾತ್ರ ಆಗತಕ್ಕದ್ದಲ್ಲ. ಜನತೆಯ ಸಹಕಾರದಿಂದ ಮಾತ್ರವೆ ಇದು ಸಾರ್ಥಕವಾಗಬೇಕಾದರೆ. ಆದ್ದರಿಂದ ನಾನು ಈ ವರ್ಷದ ಪ್ರಚಾರೋಪನ್ಯಾಸಮಾಲೆಯನ್ನು ಪ್ರಾರಂಭಿಸುತ್ತಾ ನಾಗಮಂಗಲದ ಜನತೆಯ ಮುಖಾಂತರವಾಗಿ ಕರ್ಣಾಟಕದ ಎಲ್ಲ ಜನತೆಯನ್ನೂ ಕೇಳಿಕೊಳ್ಳುತ್ತೇನೆ. ಈ ಪ್ರಚಾರೋಪನ್ಯಾಸಗಳನ್ನು ಅಲ್ಲಲ್ಲಿ ಏರ್ಪಡಿಸಿ, ಪ್ರಚಾರೋಪನ್ಯಾಸ ಶಾಖೆಯ ಕಾರ್ಯದರ್ಶಿಯವರಿಗೆ ಬರೆದರೆ ಅವರು ನೀವು ಕೇಳಿದ ಕಡೆ ಸಂತೋಷದಿಂದ ಉಪನ್ಯಾಸಗಳನ್ನು ಏರ್ಪಡಿಸುತ್ತಾರೆ. ನೀವು ತಿಳಿದುಕೊಳ್ಳಬೇಕೆಂದಿರುವ ವಿಷಯಗಳನ್ನು ಸೂಚಿಸಿದರೆ ಆಯಾ ವಿಷಯಗಳಲ್ಲಿ ತಜ್ಞರಾದವರನ್ನು ಕರೆದುಕೊಂಡು ಬಂದು ನಿಮಗೆ ಬೇಕಾದ ಮನರಂಜನೆಯ ವಿಷಯಗಳನ್ನೊ ವಿಜ್ಞಾನ ವಿಷಯಗಳನ್ನೊ ತಿಳಿಸಿ ಕೊಡುತ್ತಾರೆ.

ವಿಶ್ವವಿದ್ಯಾನಿಲಯದಲ್ಲಿ ಬೋಧಿಸುವುದು ಜನತೆಗೆ ಗೊತ್ತಾಗದ ಅನ್ಯ ಭಾಷೆಯಲ್ಲಿ. ಅದರಲ್ಲಿಯೆ ವಿಶೇಷ ಅಧ್ಯಯನ ಮಾಡಿದವರಿಗೆ ಮಾತ್ರ ಅದು ಅರ್ಥವಾಗುತ್ತದೆ. ಆದರೆ ಇಲ್ಲಿ ಬಂದು ನಿಮಗೆಲ್ಲರಿಗೂ ತಿಳಿಯುವ ಕನ್ನಡ ಭಾಷೆಯಲ್ಲಿ ಉಪನ್ಯಾಸಕೊಟ್ಟು, ನಿಮ್ಮೊಡನೆ ನಿಮ್ಮಂತೆಯೆ ಇದ್ದು ಕೊಂಡು,ನೀವು ಕೇಳುವ ಪ್ರಶ್ನೆಗಳಿಗೆಲ್ಲ ನೇರವಾಗಿ ಉತ್ತರ ಕೊಟ್ಟು ಸರಸ್ವತಿಯ ಸೇವೆಮಾಡಲು ಅವರು ಸಿದ್ಧರಾಗಿದ್ದಾರೆ, ಉತ್ಸುಕರಾಗಿದ್ದಾರೆ. ಆ ಪೂಜೆಯಲ್ಲಿ ತಾವೆಲ್ಲರೂ ಭಾಗಿಗಳಾಗಬೇಕೆಂದು ನಾನು ಪ್ರಾರ್ಥಿಸುತ್ತೇನೆ.

ಕಡೆಯದಾಗಿ ಮತ್ತೊಂದು ವಿಷಯ. ನಮ್ಮ ವಿಶ್ವವಿದ್ಯಾನಿಲಯ ಪ್ರಚಾರೋಪನ್ಯಾಸಗಳನ್ನೂ ಇತರ ಗ್ರಂಥಮಾಲೆಗಳನ್ನೂ ಹೊರಡಿಸುತ್ತಿರುವಂತೆಯೆ ತ್ರೈಮಾಸಿಕ ಪತ್ರಿಕೆಯೊಂದನ್ನು ಹೊರಡಿಸುತ್ತಿದೆ. ಅದು ಹಿಂದೆ ವಿಶ್ವ ವಿದ್ಯಾನಿಲಯದ ಪತ್ರಿಕೆ ಆಗುವುದಕ್ಕೆ ಮುನ್ನ ಜನತೆಯ ಮಾಸ ಪತ್ರಿಕೆಯೆ ಆಗಿತ್ತು. ಅದೇ 'ಪ್ರಬುದ್ಧ ಕರ್ಣಾಟಕ.' ಅದು ವರ್ಷಕ್ಕೆ ನಾಲ್ಕು ಸಲ ಬರುತ್ತದೆ. ಒಂದೊಂದು ಸಾರಿಯೂ ಸುಮಾರು ಐನೂರು ಪುಟಗಳನ್ನು ಒಳಗೊಂಡಿರುತ್ತದೆ. ಅದರ ವಾರ್ಷಿಕ ಚಂದಾ

೩ ರೂಪಾಯಿ. ಸ್ವಲ್ಪ ಹೆಚ್ಚು ಕಡಿಮೆ ಅದರ ಕಾಗದದ ಬೆಲೆಯಾಯಿತು. ಅದರಲ್ಲಿ ಆಧುನಿಕ ಸಾಹಿತ್ಯ, ವಿಜ್ಞಾನಗಳ ಜ್ಞಾನಭಂಡಾರ ತುಂಬಿರುತ್ತದೆ. ನೀವು ಓದಿ ಬಿಸಾಡುವ ಇತರ ಪತ್ರಿಕೆಗಳಂತೆ ಅಲ್ಲ ಅದು. ಶಾಶ್ವತವಾಗಿ ಗ್ರಂಥ ಭಂಡಾರದಲ್ಲಿ ಇಟ್ಟುಕೊಳ್ಳಬೇಕಾದ ಅಮೂಲ್ಯವಾದ ಪತ್ರಿಕೆ ಅದು. ಒಮ್ಮೆ ಚಂದಾದಾರರಾಗಿ ಒಂದು ವರ್ಷ ತರಿಸಿ ನೋಡಿ. ಮುಂದೆ ನಿಮ್ಮ ಇಚ್ಛೆ ತಿಳಿದಂತೆ ನೀವು ಮಾಡಬಹುದು.

ಕೊನೆಯದಾಗಿ, ನನ್ನ ಮಿತ್ರರು ಅನೇಕರು ಇಲ್ಲಿ ನೆರೆದು, ನಾನು, ನನ್ನ ಇತರ ಅನೇಕ ಮಿತ್ರರು ಕೈಕೊಂಡಿರುವಂತೆ, ಕೈಕೊಂಡಿರುವ ಸರಸ್ವತಿಯ ಸೇವೆಯನ್ನು ವಿಶ್ವಾಸದಿಂದ ಸ್ವಲ್ಪ ಹೆಚ್ಚಾಗಿಯೆ ಶ್ಲಾಘನೆ ಮಾಡಿ, ನನಗೆ ಈ ಮಾನಪತ್ರವನ್ನು ಅರ್ಪಿಸಿ ಗೌರವಿಸಿದ್ದೀರಿ. ನಾನು ಇದಕ್ಕೆ ಎಷ್ಟರಮಟ್ಟಿಗೆ ಅರ್ಹನೋ ನಾನರಿಯೆ. ಆದರೆ ನನ್ನ ಅರ್ಹತೆಗಿಂತಲೂ ಹೆಚ್ಚಾಗಿ ತಮ್ಮ ಹೃದಯದ ವಿಶ್ವಾಸದ ಅರ್ಹತೆ ಅದಕ್ಕಿದೆ ಎಂದು ನಾನು ಬಲ್ಲೆ. ಅದು ನನಗೆ ಒಂದು ವಿಧವಾದ ಆಶೀರ್ವಾದವಾಗಿ ಪರಿಣಮಿಸಿ ನನ್ನ ಶ್ರೇಯಸ್ಸಿಗೆ ಕಾರಣವಾಗಲೆಂದು ಹಾರೈಸುತ್ತೇನೆ. ಅಲ್ಲದೆ, ನನ್ನ ಚೇತನದ ದೇವತೆಯೆ ಮೂರ್ತಿವೆತ್ತಂತೆ ಇರತಕ್ಕ ಈ ನಾಟ್ಯಸರಸ್ವತಿಯ ವಿಗ್ರಹವನ್ನು ನನಗೆ ಇಲ್ಲಿ ಕಾಣಿಕೆಯಾಗಿ ಅರ್ಪಿಸಿದ್ದೀರಿ. ಅದರ ಬೆಲೆ ಅನರ್ಘ್ಯವಾದುದು. ಮಾತನಾಡಿ ಅದರ ಬೆಲೆಯನ್ನು ಕಡಮೆ ಮಾಡಲು ನನಗೆ ಇಷ್ಟವಿಲ್ಲ. ಏಕೆಂದರೆ ಮಾತೆಲ್ಲ ಸೋತುಹೋಗುವಷ್ಟು ದೊಡ್ಡದು ಈ ಅರ್ಪಣೆ. ಇದು ನನಗೆ ಬರಿಯ ಕಲಾವಸ್ತು ಮಾತ್ರವಲ್ಲ; ಪೂಜಾ ವಸ್ತು. ಅಂದರೆ ಮನೆಯಲ್ಲಿ ಷೋಕಿಗಾಗಿ ಇಡುವ ಪದಾರ್ಥ ಮಾತ್ರವಲ್ಲ; ಅದು ನಿಜವಾಗಿಯೂ ವಾಗ್ದೇವಿ, ಮಾತಿನ ದೇವತೆ, ಆ ದೇವತಾಶಕ್ತಿ, ಆ ದೇವತಾಶಕ್ತಿಯ ಪ್ರತೀಕ. ಅದನ್ನು ನಾನು ಮನೆಯಲ್ಲಿ ನೋಡಿದಾಗಲೆಲ್ಲ ನಾಗಮಂಗಲವನ್ನೂ ನಾಗಮಂಗಲದ ಮಹಾ ಜನರನ್ನೂ, ಈ ಮಹಾಸೌಮ್ಯಕೇಶವನ ಬೃಹದ್ಗೋಪುರದ ದೇವಾಲಯವನ್ನೂ ನೆನೆನೆನೆದು ನನ್ನ ಅಂತಃಕರಣದ ಪೂಜೆಯನ್ನು ಈ ನಾಟ್ಯಸರಸ್ವತಿಗೆ ಅರ್ಪಿಸುತ್ತೇನೆ–ಎಂದು ತಮ್ಮಲ್ಲಿ ನಿವೇದಿಸಿಕೊಳ್ಳುತ್ತೇನೆ.

ಇಷ್ಟೊಂದು ಜನ ನೆರೆದು ಇಷ್ಟೊಂದು ಸಾವಧಾನವಾಗಿ ಎಲ್ಲವನ್ನೂ ಕೇಳಿ ನಿಜವಾಗಿಯೂ ತಮ್ಮ ಅಂತಃಕರಣಗಳನ್ನು ತೆರೆದುದಕ್ಕಾಗಿ ಮತ್ತೊಮ್ಮೆ ಆ ಸೌಮ್ಯಕೇಶವ ದೇವನಿಗೆ ನನ್ನ ನಮಸ್ಕಾರಗಳನ್ನು ಅರ್ಪಿಸುತ್ತೇನೆ.

# ಕನ್ನಡಕ್ಕಾಗಿ ಕೈಯೆತ್ತು[೧]

ಇದೋ ವಾಗ್ದೇವಿಯ ಹರಕೆಯ ಶಿಶುವಾಗಿ ನಿನಗೆ ಕೈಮುಗಿದು ನಮಸ್ಕರಿಸಿ ಬಿನ್ನವಿಸುತ್ತೇನೆ: ನನ್ನ ನಮಸ್ಕಾರಕ್ಕಾದರೂ ನಿನ್ನ 'ಅಲ್ಪತೆ' ತೊಲಗಲಿ; ನಿನ್ನ ಹೃದಯದಲ್ಲಿ 'ಭೂಮ' ಚೇತನ ಉದ್ದೀಪನವಾಗಿ ತೊಳಗಲಿ; ಕನ್ನಡ ನುಡಿದೀವಿಗೆಯಿಂದ ನಾಡ ಬಾಳು ಬೆಳಗಲಿ! ನನ್ನ ನಮಸ್ಕಾರದಿಂದ ನನ್ನ ಅಹಂಕಾರವಳಿದು ಅಲ್ಲಿ ದೇವತ್ವ ಸಂಚಾರವಾಗುತ್ತದೆಂದು ನಂಬಿ ಭಗವತಿ ಶ್ರೀ ಸರಸ್ವತಿಯ ಈ ಹರಕೆಯನ್ನು ನಿನ್ನಲ್ಲಿ ಬಿನ್ನವಿಸುತ್ತಿದ್ದೇನೆ.

ಹೇ ರಾಜಕಾರಣಿ, ಹೇ ಮಂತ್ರಿವರೇಣ್ಯ, ಹೇ ಅಧಿಕಾರಿ ಸರ್ವೋತ್ತಮ, ಹೇ ವಣಿಗ್ವರ, ಹೇ ಶ್ರಮಜೀವಿ, ಹೇ ಅಧ್ಯಾಪಕ ಮಹಾಶಯ, ಓ ನೇಗಿಲ ಯೋಗಿ, ನೀನು ಯಾರೆ ಆಗಿರು, ಎಲ್ಲಿಯೆ ಇರು, ಕನ್ನಡವನ್ನು ಕೈಬಿಡದಿರು. ನಾಳೆ ಎಂದರಾಗದು; ಮುಂದೆ ಎಂದರಾಗದು; ಇಂದೆ ನೀನು ನಿರ್ಣಯಿಸಬೇಕು. ಇಂದೆ ಎತ್ತಿ ಪೊರೆಯಬೇಕು. ಬೆಂಕಿಗೆ ಬಿದ್ದವರನ್ನು ನಾಳೆ ಎತ್ತುತ್ತೇನೆಂದರೆ ದೊರೆಯುವುದೇನು? ಬೂದಿಯಲ್ಲವೆ! ನೀರಿಗೆ ಬಿದ್ದವರನ್ನು ನಾಳೆ ಎತ್ತುತ್ತೇನೆಂದರೆ ಲಭಿಸುವುದೇನು? ಹೆಣವಲ್ಲವೆ!

ಇದು ನಿನ್ನ ಭಾಷೆ; ಇದು ದೇಶಭಾಷೆ; ಇದು ಸಾವಿರಾರು ವರ್ಷಗಳ ಸುಪುಷ್ಟ ಸಾಹಿತ್ಯಭಾಷೆ; ಇದು ಮಹಾಕವಿಗಳನ್ನೂ ಶಿಲ್ಪಿಗಳನ್ನೂ ರಾಜಾಧಿರಾಜರನ್ನೂ ವೀರಾಧಿವೀರರನ್ನೂ ರಸಋಷಿದಾರ್ಶನಿಕರನ್ನೂ ಹಡೆದಿರುವ ಭಾಷೆ! ಏನೊ ನಡುವೆ ನಾಲ್ಕು ದಿನ ವಿಧಿ ಮುನಿಯೆ ಸಿರಿಯಳಿದು, ಮನೆ ಮುರಿಯೆ ಬೀದಿ ಸೇರಿದ ಮಾತ್ರದಿಂದ ನಿನ್ನ ತಾಯಿ ರಾಣಿಯಾಗಿದ್ದಳೆಂಬುದನ್ನು ಮರೆತುಬಿಡುವೆಯ? ಸ್ವತಂತ್ರನಾದಮೇಲೆಯೂ ಆಕೆಯನ್ನು ತೊತ್ತಾಗಿರಿಸುವೆಯ?

ಅನ್ಯಮೋಹಕ್ಕೆ ಇಂದು ಅವಕಾಶವಿಲ್ಲ. ಮೀನಮೇಷಕ್ಕೆ ಇದು ಸಮಯವಲ್ಲ. ಧೈರ್ಯವಿರಲಿ; ಶ್ರದ್ಧೆಯಿರಲಿ; ಮನಸ್ಸು ಚಂಚಲವಾಗದಿರಲಿ!

ಕನ್ನಡಕ್ಕಾಗಿ ಕೈಯೆತ್ತು; ನಿನ್ನ ಕೈ ಕಲ್ಪವೃಕ್ಷವಾಗುತ್ತದೆ! ಕನ್ನಡಕ್ಕಾಗಿ ಕೊರಳೆತ್ತು; ಅಲ್ಲಿ ಪಾಂಚಜನ್ಯ ಮೂಡುತ್ತದೆ! ಕನ್ನಡಕ್ಕಾಗಿ ಕಿರುಬೆರಳೆತ್ತಿದರೂ ಸಾಕು ಇಂದು ಅದೆ ಗೋವರ್ಧನ ಗಿರಿಧಾರಿಯಾಗುತ್ತದೆ.

**ಇಂದು; ನಾಳೆಯಲ್ಲ. ತಿಳಿ, ತಿಳಿ! ತಿಳಿದು ಉಳಿ, ಇಲ್ಲ ಅಳಿ!**

**ಏಳ್! ಗೆಲ್! ಬಾಳ್! ಓಂ ಶಾಂತಿಃ ಶಾಂತಿಃ ಶಾಂತಿಃ**

---

[೧] ದೇಜಗೌ ಅವರ "ಕನ್ನಡಿಗರೆ, ಎಚ್ಚರಗೊಳ್ಳಿ!" ಎಂಬ ಪುಸ್ತಕಕ್ಕೆ ಬರೆದ ಮುನ್ನುಡಿ. ಮೈಸೂರು: ಮಾರ್ಚಿ ೨೦, ೧೯೫೧.

# ಬಲಾತ್ಕಾರದ ಇಂಗ್ಲಿಷ್: ಪ್ರಚ್ಛನ್ನ ಭ್ರಷ್ಟಾಚಾರ

ಕರ್ಣಾಟಕ ಭಾಷಾ ಸಾಹಿತ್ಯಗಳಿಗೂ ತನ್ಮೂಲಕ ಮಹಾಮಾತೃಸದೃಶಳಾಗಿರುವ ಭಾರತಮಾತೆಯೂ ನಾನು ಸಲ್ಲಿಸಿರುವ ಸೇವೆಗಾಗಿ ನನಗೆ 'ರಾಷ್ಟ್ರಕವಿ' ಪ್ರಶಸ್ತಿಯನ್ನು ನೀಡಲು ನಿರ್ಧರಿಸಿರುವ ತಮ್ಮೆಲ್ಲರನ್ನೂ ಹೃತ್ಪೂರ್ವಕವಾಗಿ ವಂದಿಸುತ್ತೇನೆ. ಸಾಹಿತ್ಯ, ಸಂಸ್ಕೃತಿ, ನಾಡು, ನುಡಿಗಳಿಗೆ ತಾವು ತೋರಿಸುತ್ತಿರುವ ಗೌರವಾದರಗಳ ಸಂಕೇತವಾಗಿ ಈ ತೀರ್ಮಾನವನ್ನು ಕೈಗೊಂಡಿದ್ದೀರೆಂದು ಭಾವಿಸಿ, ತಾವು ನೀಡುವ ಪ್ರಶಸ್ತಿಯನ್ನು ಅತ್ಯಂತ ಕೃತಜ್ಞತೆಯಿಂದ ಸ್ವೀಕರಿಸುತ್ತೇನೆ.

ರಾಜ್ಯದ ಸುಭದ್ರತೆಗೆ ಆವಶ್ಯಕವಾದ ಮನೋಧರ್ಮವನ್ನು ಶಿಥಿಲಗೊಳಿಸಿ, ಭಾವಲಾಲಿತ್ಯ ಮತ್ತು ಭಾವಾತಿರೇಕಗಳನ್ನು ಉದ್ರೇಕಿಸಿ, ಸುಖಲೋಲುಪತ್ವ ಮತ್ತು ಹೃದಯಮೃದುತ್ವಗಳನ್ನು ಉಲ್ಬಣ ಮಾಡಿ, ರಾಷ್ಟ್ರ ರಕ್ಷಣೆಗೆ ಬೇಕಾಗುವ ಪೌರುಷತೆ ಕಠೋರತೆಗಳಿಗೆ ಬದಲಾಗಿ ಸ್ತ್ರೈಣಮಾಧುರ್ಯಾಭಿರುಚಿಗಳು ವರ್ಧಿಸುವಂತೆ ಮಾಡುತ್ತಾರೆಂದು ಒಬ್ಬ ಗ್ರೀಕ್ ತತ್ತ್ವಜ್ಞಾನಿ ಕವಿಗಳನ್ನೆಲ್ಲ ಗಡಿಪಾರು ಮಾಡಲು ಸಲಹೆ ಕೊಟ್ಟಿದ್ದನಂತೆ! ಅದಕ್ಕೆ ಉತ್ತರವಾಗಿ ಅವನ ಶಿಷ್ಯನಾಗಿದ್ದ ಮತ್ತೊಬ್ಬ ಗ್ರೀಕ್ ತತ್ತ್ವಜ್ಞಾನಿ ತನ್ನ ಗುರುವಿನ ಮತವನ್ನು ಖಂಡಿಸಿ, ಅದಕ್ಕೆ ವಿರುದ್ಧವಾಗಿ, ಕವಿಗಳನ್ನು ಉತ್ಸಾಹದ ಮತ್ತು ಉಲ್ಲಾಸದ ನಿಧಿಗಳೆಂದೂ ಅವರಿಂದೊದಗುವ ಭಾವಪುಷ್ಟಿ ಮತ್ತು ಭಾವಸಂಸ್ಕಾರಗಳಿಂದ ನಾಡಿನ ಜನತೆಯ ಚೇತನ ಉದ್ದೀಪಿತವಾಗಿ ಕವಿಹೃದಯದ ಆಶಾವಾದದ ಧೀರಧ್ವನಿಯಿಂದ ಸ್ಫೂರ್ತಿಗೊಂಡ ರಾಷ್ಟ್ರದಲ್ಲಿ ಸುಖ ಕ್ಷೇಮ ಶಾಂತಿಗಳು ಸ್ಥಾಪಿತವಾಗುತ್ತವೆಂದೂ ಪ್ರತಿವಾದಘೋಷ ಮಾಡಿದ್ದನಂತೆ!

ಕ್ರಾಂತದರ್ಶಿಯಾದ ಇನ್ನೊಬ್ಬ ಇಂಗ್ಲಿಷ್ ಕವಿ, ಕವಿಗಳನ್ನು ಅನಧಿಕೃತ ಶಾಸನಕರ್ತರಂದೂ, ಕವಿಗಳು ಭವಿಷ್ಯತ್ತು ವರ್ತಮಾನದ ಮೇಲೆ ಹಾಯಿಸುವ ಬೃಹಚ್ಛಾಯೆಗಳಂತೆ ಇದ್ದಾರೆಂದೂ ಶ್ಲಾಘಿಸಿದ್ದಾನೆ.

ಪ್ಲೇಟೋ, ಅರಿಸ್ಟಾಟಲ್, ಶೆಲ್ಲಿ ಇವರೆಲ್ಲರ ಅನುಭವಗಳನ್ನೂ ಒಟ್ಟಿಗೆ ಪಡೆದು, ತನ್ನ ಕಾಲದ ಮತ್ತು ದೇಶದ ಕಾವ್ಯ ಮತ್ತು ರಾಜಕೀಯ ಪ್ರಪಂಚಗಳೆರಡಲ್ಲಿಯೂ ಶಿಖರ ವ್ಯಕ್ತಿಯಾಗಿ, ಕವಿಯೂ ಕಲಿಯೂ ಆಗಿದ್ದ ಕನ್ನಡದ ಆದಿಯ ಮಹಾಕವಿ ಪಂಪ 'ಸೇವಿಪುದೆ ಕಷ್ಟಮಿಳಾಧಿನಾಥರಂ!' ಎಂದೂ ಉದ್ಗಾರ ತೆಗೆದಿದ್ದಾನೆ.

ಭಾರತೀಯ ಕಾವ್ಯಮೀಮಾಂಸೆ ಋಷಿಯಲ್ಲದವನು ಕವಿಯಾಗಲಾರ' ಎಂಬರ್ಥದ ಮಾತನ್ನೂ ಆಡಿದೆ.

---

[೧]'ರಾಷ್ಟ್ರಕವಿ' ಪ್ರಶಸ್ತಿಯನ್ನು ಸ್ವೀಕರಿಸಿ ಮಾಡಿದ ಭಾಷಣ ಬೆಂಗಳೂರು, ಜನವರಿ ೨೭, ೧೯೬೫

ಈ ಶ್ಲಾಘನೆ ಖಂಡನೆ ನಿಂದೆ ಸ್ತುತಿ ಪರಾಕು ಹತಾಶೆ ಇವುಗಳನ್ನು ಗಮನಿಸಿದರೆ ಒಂದು ವಿಷಯ ಸ್ಪಷ್ಟವಾಗುತ್ತದೆ: ಕವಿತೆ ಅಥವಾ ಸಾಹಿತ್ಯ ಸ್ವರೂಪತಃ ಕೆಟ್ಟದ್ದು ಅಲ್ಲ, ಒಳ್ಳೆಯದೂ ಅಲ್ಲ: ಅದೊಂದು ಶಕ್ತಿ, ಪ್ರಯೋಗಿಸುವವರ ಮತ್ತು ಉಪಯೋಗಿಸುವವರ ಪ್ರಜ್ಞಾನುಗುಣವಾಗಿ ಪರಸ್ಪರ ವಿರುದ್ಧವಾದ ಫಲಿತಾಂಶಗಳನ್ನು ಉಂಟುಮಾಡಬಲ್ಲದು. ಕಾಲದಿಂದ ಕಾಲಕ್ಕೆ ಅದನ್ನು ಪರಿಶೀಲಿಸಿ ಆ ಶಕ್ತಿ ನಮ್ಮನ್ನು ತಪ್ಪುದಾರಿಗೆ ಕರೆದೊಯ್ಯದಂತೆ ನೋಡಿಕೊಳ್ಳಬೇಕಾಗುತ್ತದೆ, ಲೋಕಹೃದಯದ ಆಚಾರ್ಯಪ್ರಜ್ಞೆ. ಆ ಪ್ರಜ್ಞೆ ವ್ಯಕ್ತಿ ವ್ಯಕ್ತಿಗಳಲ್ಲಿ ಪ್ರಕಟಗೊಂಡರೂ ಅದು ವ್ಯಷ್ಟಿನಿಷ್ಠವಾಗಿರದೆ ಸಮಷ್ಟಿರೂಪದಲ್ಲಿ ಅಭಿವ್ಯಕ್ತವಾಗುತ್ತದೆ. ರಾಜ್ಯ ರಾಜ್ಯಗಳಲ್ಲಿ ಪ್ರಾತಿನಿಧಿಕವಾಗಿರುವ ಇಂತಹ ಮಹಾ ಸಭಾ ಸಂಸ್ಥೆಗಳು ಆ ಆಚಾರ್ಯಪ್ರಜ್ಞೆಯ ಮುಖಪಾತ್ರಗಳಾಗುತ್ತವೆ.

ಅಂತಹ ಮುಖಪಾತ್ರವಾಗಿರುವ ಈ ಮಹಾಸದಸ್ಸು ತನ್ನ ನಾಡಿನ ಕವಿಯೊಬ್ಬನಿಗೆ, ಗ್ರೀಕ್ ತತ್ವಜ್ಞಾನಿಯ ಸೂಚನೆಯಂತೆ ಅವನನ್ನು ಗಡಿಪಾರು ಮಾಡುವುದಕ್ಕೆ ಬದಲಾಗಿ, 'ರಾಷ್ಟ್ರಕವಿ' ಪ್ರಶಸ್ತಿಯನ್ನು ನೀಡಲು ಈ ಮಹಾ ಸಮಾರಂಭದಲ್ಲಿ ನೆರೆದಿರುವ ಸಂಗತಿ ಸಾಮಾನ್ಯವಾದುದೇನಲ್ಲ. ಸ್ವಲ್ಪ ಪರಿಭಾವಿಸಿದರೆ ಅದು ಎಷ್ಟು ಮಹತ್ವಪೂರ್ಣವಾದುದು ಎಂಬುದು ಹೃದಯಕ್ಕೆ ಗೋಚರವಾಗುತ್ತದೆ.

ನೆಮ್ಮದಿ, ಸಂಸ್ಕೃತಿ, ಶಾಂತಿ–ಇವುಗಳೆ ಲೌಕಿಕ ಜೀವನದ ಗಂತವ್ಯ. ಅದನ್ನು ಸಾಧಿಸಲೂ ಸಾಧಿಸಿದ್ದನ್ನು ಹೃದಯ ಹೃದಯಕ್ಕೆ ನಿವೇದಿಸಲು ಕವಿತೆ ಸಾಹಿತ್ಯ ಕಲೆಗಳೆ ಅಗ್ರಗಣ್ಯ ಸಾಧನಗಳಾಗಿವೆ. ಆದ್ದರಿಂದ ಯಾವ ಜನತೆ ತನ್ನ ಪ್ರಾತಿನಿಧಿಕ ಸಂಸ್ಥೆಯ ಮೂಲಕ ಸುಖ ಸಂಸ್ಕೃತಿ ಶಾಂತಿದೂತನಾದ ತನ್ನ ಕವಿಯನ್ನು ಸನ್ಮಾನಿಸುತ್ತದೆಯೋ ಅದು ತನ್ನ ಪೂರ್ಣತ್ವ ಸಾಧನೆಯ ಉದ್ಧಾರ ಮಾರ್ಗದಲ್ಲಿ ಬಹುದೂರ ಮುಂದುವರಿದಿದೆ ಎಂದೇ ಅರ್ಥವಾಗುತ್ತದೆ. ತಮ್ಮಂತಹ ಪ್ರತಿನಿಧಿಗಳನ್ನು ಪಡೆದಿರುವ ಜನತೆ ಧನ್ಯ! ಅಂತಹ ಜನತೆ ಇರುವ ನಾಡೂ ಧನ್ಯ! ಅಂತಹ ನಾಡಿನಲ್ಲಿ ಜನ್ಮವೆತ್ತುವ ಸುಕೃತಕ್ಕೆ ಭಾಜನನಾಗಿರುವ ಕವಿಯೂ ಧನ್ಯ!

ಸಂಸ್ಕೃತಿ ಕರ್ಣಾಟಕದ ನಿತ್ಯಚಕ್ರವರ್ತಿ ನೃಪತುಂಗದೇವನು ಸಾವಿರ ವರ್ಷಗಳ ಹಿಂದೆ (ಕ್ರಿ.ಶ. ೮೧೪)

**ಕಾವೇರಿಯಿಂದಮಾ ಗೋದಾವರಿವರಮಿರ್ದ ನಾಡದಾ**
**ಕನ್ನಡದೊಳ್ ಭಾವಿಸಿದ ಜನಪದಂ..... ಪದನರಿದು**
**ನುಡಿಯಲುಂ, ನುಡಿದುದನ್ ಅರಿದು ಆರಯಲುಂ ಆರ್ಪರ್, ಆ**
**ನಾಡವರ್ಗಳ್ ಚದುರರ್ ನಿಜದಿಂ: ಕುರಿತೋದದೆಯುಂ**
**ಕಾವ್ಯಪ್ರಯೋಗಪರಿಣತಮತಿಗಳ್!**

ಎಂದು ಹಾಡಿದುದು ಇಂದಿಗೂ ಅಸಾರ್ಥಕವಾಗಿಲ್ಲವೆಂದೆ ತೋರುತ್ತದೆ!

ಇಂದಿನ ಈ ಗುರುಸಮಾರಂಭದಲ್ಲಿ, ಅನಾಹೂತನಾಗಿದ್ದರೂ

ಲೆಕ್ಕಿಸದೆ ಅಕ್ಕರೆಯುಕ್ಕಿಬಂದು ತನ್ನ ಸೂಕ್ಷ್ಮ ಕಾಯದಲ್ಲಿ ನಿಂತು, ಅವಲೋಕಿಸಿ, ಆಶೀರ್ವದಿಸುತ್ತಿರುವ ಸಂಸ್ಕೃತಿ ಕರ್ಣಾಟಕದ ನಿತ್ಯ ಮುಖ್ಯಮಂತ್ರಿಯಾಗಿರುವ ಆ ಪಂಪ ಮಹಾಕವಿ ಮತ್ತೊಮ್ಮೆ ಕನ್ನಡನಾಡಿನಲ್ಲಿ ಹುಟ್ಟುವ ತನ್ನ ಬಯಕೆಯನ್ನು, ತಾನು ಹಿಂದೆ ಬನವಾಸಿಯನ್ನು ನೆನೆದು ಹಾಡಿದುದನ್ನೆ ತುಸು ಬದಲಿಸಿ, (ಕ್ರಿ.ಶ. ೯೪೧)

**ಚಾಗದ ಭೋಗದಕ್ಕರದ ಗೇಯದ ಗೊಟ್ಟಿಯಲಂಪಿನಿಂಪುಗ**
**ಳ್ಗಾಗರವಾದ ಮಾನಿಸರೆ ಮಾನಿಸರ್. ಅಂತವರಾಗಿ ಪುಟ್ಟಲೇ**
**ನಾಗಿಯುಮೇನೊ ತೀರ್ದಪುದೆ? ತೀರದೊಡಂ ಮರಿದುಂಬಿಯಾಗಿ ಮೇಣ್**
**ಕೋಗಿಲೆಯಾಗಿ ಪುಟ್ಟುವದು ನಂದನದೊಳ್ 'ಕರುನಾಡ' ದೇಶದೊಳ್**

ಎಂದು ಹಿಗ್ಗಿ ಹಾಡಿಕೊಳ್ಳುತ್ತಿರುವನೆಂದು ಭಾವಿಸಿ ನಾನು ಪುಲಕಿತನಾಗುತ್ತಿದ್ದೇನೆ. ತಾವುಗಳೂ ಆಗುತ್ತಿದ್ದೀರಿ, ಅಲ್ಲವೆ?

ಭಾರತಾಂತರ್ಗತವಾಗಿರುವ ಕರ್ಣಾಟಕವನ್ನು ಹಿಂದಿನ ಆ ಕವಿಗಳೂ ಚಕ್ರವರ್ತಿಗಳೂ ಕಂಡ ಕನಸು ನನಸಾಗುವಂತೆ, ಸರ್ವಾಂಗ ಸುಂದರವನ್ನಾಗಿ ಮಾಡಲು ಶಾಸಕರಾಗಿ ತಾವೆಲ್ಲ ಕಂಕಣಬದ್ಧರಾಗಿದ್ದೀರಿ. ಆಂಗ್ಲೇಯ ಕವಿ ಶೆಲ್ಲಿ ಹೇಳಿರುವಂತೆ 'ಅನಧಿಕೃತ ಶಾಸನಕರ್ತ'ರಲ್ಲಿ ಒಬ್ಬನಾಗಿ ನಾನೂ ಆ ಸ್ವಪ್ನವು ಲೋಕವಾಸ್ತವವಾಗಿ ಮೂಡಲು ನಿಮ್ಮೊಡನೆ ಸೇವೆ ಸಲ್ಲಿಸುತ್ತೇನೆಂದೂ, ನನ್ನ ಕ್ಷೇತ್ರದಲ್ಲಿ ಮತ್ತು ನನ್ನ ರೀತಿಯಲ್ಲಿ ಕೈಲಾದಮಟ್ಟಿಗೆ ಕೊನೆಯುಸಿರು ಇರುವವರೆಗೂ ದುಡಿಯುತ್ತೇನೆಂದೂ ಭರವಸೆ ಕೊಡುತ್ತೇನೆ.

ಸಾಧಿತವಾಗಬೇಕಾಗಿರುವ ಕಲ್ಯಾಣವೊ ಅಪಾರವಾಗಿದೆ. ನೂರಾರು ಮಂಗಲದ ಮುಖಗಳು ನಮ್ಮ ನಿರಂತರ ವ್ಯವಸಾಯವನ್ನು ಹಾರೈಸುತ್ತಿವೆ. ಪರಿಹರಿಸಿಕೊಳ್ಳಬೇಕಾಗಿರುವ ಅನಿಷ್ಟಗಳೂ ಅನೇಕವಿದ್ದು ಸಾಕಷ್ಟು ಕಾಡುತ್ತಿವೆ. ಸಣ್ಣಪುಟ್ಟ ವಿವರಗಳಲ್ಲಿ ನಮ್ಮೆಲ್ಲರಿಗೂ ಒಮ್ಮತ ಒಕ್ಕೊರಲು ಇರದಿದ್ದರೂ ರಾಷ್ಟ್ರಕ್ಷೇಮಸಾಧನೆಯ ವಿಷಯದಲ್ಲಿ ನಾವೆಲ್ಲ ಏಕಹೃದಯರೆ! ಸರ್ವಾಧಿಕಾರ ಮಾರ್ಗದಲ್ಲಿ ಸತ್ ಫಲವಾಗಲಿ ದುಷ್ಫಲವಾಗಲಿ ಶೀಘ್ರಸಿದ್ಧವಾಗುವಂತೆ ಪ್ರಜಾಸತ್ತೆಯ ವಿಧಾನಮಾರ್ಗದಲ್ಲಿ ಆಗಲು ಸಾಧ್ಯವಿಲ್ಲವೆಂದು ಅರಿತಿರುವ ನಾವೆಲ್ಲರೂ, ಕ್ಷೇಮಕಾತರತೆಯಲ್ಲಾಗಲಿ ಅದನ್ನು ಬೇಗ ಸಾಧಿಸಬೇಕೆಂಬ ತೀವ್ರಾತುರದಲ್ಲಾಗಲಿ ಮಂದಜಡರಾಗದೆ, ನಿರ್ವೈರವಾದ ಮೈತ್ರಿಯ ಮೂಲಾಧಾರದ ಮೇಲೆ ಮುಂದುವರಿಯುತ್ತಿದ್ದೇವೆ ಎಂಬುದರಲ್ಲಿ ಸಂದೇಹವಿಲ್ಲ.

ನಿಮ್ಮಲ್ಲಿ ಅನೇಕರು ಸ್ವಾತಂತ್ರ್ಯ ಸಂಗ್ರಾಮದಲ್ಲಿ ಕಾಲಾಳುಗಳಾಗಿ ದಳಪತಿಗಳಾಗಿ ಹೋರಾಡಿದ್ದೀರಿ; ಕೆಲವರಂತೂ ಅತಿರಥ ಮಹಾರಥರಾಗಿ ಹೋರಾಡಿ ಹೆಸರುಗಳಿಸಿದ್ದೀರಿ. ಕೆಲವರು ದೇಶಸೇವೆಗಾಗಿ ಮನೆಮಾರು ಜೀವನವೃತ್ತಿಗಳನ್ನು ತ್ಯಾಗಮಾಡಿದ್ದೀರಿ; ಕೆಲವರು ಲಾಠಿಯೇಟು ತಿಂದಿದ್ದೀರಿ; ಕೆಲವರು ಸೆರೆಮನೆಗಳಲ್ಲಿ ತಪಸ್ಸುಮಾಡಿದ್ದೀರಿ; ಮತ್ತೆ ಕೆಲವರು ನೇರವಾಗಿ ಸಂಗ್ರಾಮದಲ್ಲಿ ಭಾಗವಹಿಸದಿದ್ದರೂ ಮನ ಧನ ಸುತ ಬಂಧು ಮಿತ್ರರನ್ನು ಸ್ವಾತಂತ್ರ್ಯಕಾಳಿಗೆ ಬಲಿದೆತ್ತು ದುಃಖಾಗ್ನಿಯಲ್ಲಿ

ಬೆಂದಿದ್ದೀರಿ. ಅವರಿವರಿರಲಿ, ಯಃಕಶ್ಚಿತರು ಕೂಡ, ಅಯಸ್ಕಾಂತದ ಪ್ರಭಾವಕ್ಕೆ ಸಿಲುಕುವ ಸಾಮಾನ್ಯ ಲೋಹವೂ ಕಾಂತತ್ವ ಪಡೆಯುವಂತೆ, ಮಹಾತ್ಮಾ ಗಾಂಧೀಜಿಯ ತಪೋಮಯ ಸಾನ್ನಿಧ್ಯದ ಪ್ರಭಾವಕ್ಕೆ ಒಳಗಾಗಿ ಪೌರಾಣಿಕಸದೃಶವಾದ ಮಹಾ ವೀರತ್ವದಿಂದ ಅದ್ಭುತ ಸಾಹಸಗಳನ್ನೆಸಗಿ ಹೋಗಿದ್ದಾರೆ. ಅವರೆಲ್ಲರ ಬಲಿದಾನದ ಮುಂದೆ ನನ್ನಂತಹನ ಸೇವೆ, ಹಾಲಿನ ಮುಂದೆ ನೀರಿನಂತೆ, ನಗಣ್ಯ ಎಂಬುದನ್ನು ಚೆನ್ನಾಗಿ ಮನಸ್ಸಿನಲ್ಲಿಟ್ಟುಕೊಂಡು, ನಾನು ಮುಂದೆ ಆಡಲಿರುವ ನಾಲ್ಕು ಮಾತುಗಳಿಗೆ ಅಪಾರ್ಥವನ್ನಾಗಲಿ ಅಹಂಕಾರವನ್ನಾಗಲಿ ಆರೋಪಿಸದಿರಲಿ ಎಂಬುವ ಉದ್ದೇಶದಿಂದ ಆತ್ಮಕಥಾರೂಪವಾದ ಒಂದೆರಡು ಮಾತು ಹೇಳುತ್ತೇನೆ, ಕ್ಷಮಿಸಬೇಕು.

ನಾನು ಲಾಠಿಯೇಟು ತಿಂದಿಲ್ಲ; ಸೆರೆಮನೆಗೆ ಹೋಗಿಲ್ಲ; ಬ್ರಿಟಿಷರ ವಿರುದ್ಧವಾಗಿ ತಿಲಕರ ಮತ್ತು ಗಾಂಧಿಜಿಯ ಪ್ರಭಾವವು ಪ್ರಚೋದಿಸಿದ ವಿದ್ಯಾರ್ಥಿಮೆರವಣಿಗೆಗಳಲ್ಲಿ ಕೂಗಿಕೊಂಡು ಅಲೆದಿದ್ದೇನೆ. ವಿದೇಶಿ ವಸ್ತ್ರದಹನ ಯಜ್ಞಗಳಲ್ಲಿ ಭಾಗವಹಿಸಿ, ಪ್ರೇಕ್ಷಕನಾಗಿ ನಿಂತಿದ್ದು, ಪಕ್ಕದಲ್ಲಿ ನಿಂತಿದ್ದ ಮಿತ್ರರು ಹುರಿದುಂಬಿಸಿದ್ದಕ್ಕಾಗಿ ತಾತ್ಕಾಲಿಕ ಭಾವಾವೇಶಕ್ಕೆ ಒಳಗಾಗಿ ಇದ್ದದ್ದೊಂದು ಅಂಗಿಯನ್ನೂ ಟೋಪಿಯನ್ನೂ ಬೆಂಕಿಗೆ ಎಸೆದದ್ದೂ ಉಂಟು!

ಆದರೆ ದೇಶದಲ್ಲಿ ನಡೆಯುತ್ತಿದ್ದದ್ದು ಏನು ಎಂಬುದರ ಅರ್ಥದ ಅರಿವು ಮಲೆನಾಡಿನ ಕಾಡಿನ ಮೂಲೆಯ ಹಳ್ಳಿಯಿಂದ ಬಂದಿದ್ದ ಬಾಲಕನ ಗ್ರಾಮೀಣ ಪ್ರಜ್ಞೆಗೆ ಗೋಚರವಾದ ಮೇಲೆ, ಸುಮಾರು ೧೯೨೫-೨೬ರಿಂದ ೧೯೪೭-೪೮ರವರೆಗೆ ನಡೆದ ಭಾರತದ ಜಗನ್ಮಹಾದ್ಭುತ ಸ್ವಾತಂತ್ರ್ಯಸಂಗ್ರಾಮದ ಚಿತ್ಸಾಗರದಲ್ಲಿ ನನ್ನ ಕವಿಚೇತನಸಮುದ್ರ ಸಂಪೂರ್ಣ ಮಗ್ನವಾಗಿಬಿಟ್ಟಿತು. ಆ ಬೃಹತ್ ಸಾಗರದ ಸಂಮಥನ ಕ್ಷೋಭೆಯಿಂದ ಉಲ್ಲೋಲಕಲ್ಲೋಲವಾದ ಮಹಾತರಂಗಗಳೆಲ್ಲ ಈ ಕವಿಚೇತನ ಸಮುದ್ರದಲ್ಲಿಯೂ ಪ್ರತಿಫಲಿತವಾಗಿ ಸಾವಿರಾರು ಕವನರಾಶಿ ಪುಂಜೀಭೂತವಾದುವು, ಸಾಹಿತ್ಯವೇಲೆಯಲ್ಲಿ. ಆ ಕಾಲದಲ್ಲಿ ನಡೆದ ಯಾವ ಮಹಾಘಟನೆಯೂ ಬಹುಶಃ ನನ್ನ ಲೇಖನಿಯಿಂದ ವಂಚಿತವಾಗಿಲ್ಲ. ವಿಭೂತಿ ಪ್ರಮಾಣದ ಯಾವ ಮಹದ್ ವ್ಯಕ್ತಿಯಾಗಲಿ ಯಾವ ಮಹತ್ ಸಂಗತಿಯಾಗಲಿ ಈ ಕವಿಚೇತನದಲ್ಲಿ ಪ್ರತಿಸ್ಪಂದಿತವಾಗದೆ ಹೋಗಿಲ್ಲ. 'ಪಾಂಚಜನ್ಯ', 'ಕೋಗಿಲೆ ಮತ್ತು ಸೋವಿಯಟ್ ರಷ್ಯಾ', 'ಕೃತ್ತಿಕೆ', ಮತ್ತು 'ಇಕ್ಷುಗಂಗೋತ್ರಿ' ಈ ಕವನ ಸಂಗ್ರಹದಲ್ಲಿ ನಮ್ಮ ಸ್ವಾತಂತ್ರ್ಯ ಸಂಗ್ರಾಮದ ಚಿರಸ್ಮರಣೀಯವಾದ ಸನ್ನಿವೇಶಗಳೂ ಘಟನೆಗಳೂ ವ್ಯಕ್ತಿಗಳೂ ವ್ಯಕ್ತಿಜೀವನದ ಭವ್ಯವ್ಯಾಪಾರಗಳೂ ಕಂಡರಣೆಗೊಂಡು, ಆ ಸಂಗ್ರಾಮದ ಇತಿಹಾಸವನ್ನು ಶಾಶ್ವತಗೈಯ್ಯುವ ಸ್ತಂಭದೀಪಿಕೆಗಳಂತೆ ಪಂಕ್ತಿಗೊಂಡು ನಿಂತಿವೆ. ಅರುವತ್ತು ದಿವಸದ ಉಪವಾಸಾನಂತರ ಜೈಲಿನಲ್ಲಿಯೆ ಹುತಾತ್ಮನಾದ ಜತೀಂದ್ರನಾಥದಾಸನಿಂದ ೨೦-೯-೧೯೨೯ರಲ್ಲಿ ಪ್ರೇರಿತವಾದ 'ಪಾಂಚಜನ್ಯ'

ವೇಲೆ = the sea-shore – ಕಿಟ್ಟೆಲ್

ಎಂಬ ವೀರಕವನದಿಂದ ಹಿಡಿದು ಸಾವಿರದ ಒಂಭೈನೂರ ನಾಲ್ವತ್ತೇಳನೆಯ ಆಗಸ್ಟ್ ಹದಿನೈದರ ಮಧ್ಯರಾತ್ರಿಯ ಜಗದ್ ಭವ್ಯ ಮಹಾಸಮಾರಂಭದಿಂದ ಪ್ರಚೋದಿತವಾದ 'ಸ್ವಾತಂತ್ರ್ಯೋತ್ಸವ ಮಹಾಪ್ರಗಾಥ'ದ ವರೆಗು ವ್ಯಾಪಿಸಿದೆ ಆ ಜ್ಯೋತಿಃಪಂಕ್ತಿ.

ಅಖಿಲ ಭಾರತೀಯ ಮಟ್ಟದಲ್ಲಿ ಮಾತ್ರವಲ್ಲ, ಪ್ರಾದೇಶಿಕ ಮಟ್ಟಕ್ಕೂ ಅದು ವ್ಯಾಪಿಸುತ್ತದೆ. ಇನ್ನೂ ಎಲ್ಲಿಯೂ ಪ್ರಕಟವಾಗದಿರುವ ಒಂದು ಕವನದ ಮೊದಲನೆಯ ಎರಡು ಪಂಕ್ತಿಗಳು ನನ್ನ ನೆನಪಿಗೆ ಬರುತ್ತಿವೆ. ಮೈಸೂರು ಕಾಂಗ್ರೆಸ್ಸಿನ ಹೋರಾಟಕ್ಕೆ ಸೇರಿದ್ದವು ಅವು:

**ಈ ಧ್ವಜಗೌರವವನು ಕಾಯಿ:**
**ಶಿವನೆದೆ ತಲ್ಲಣಿಪುದು, ತಾಯಿ!**

ಬಹುಶಃ ಆ ಕವನ ಶಿವಪುರದ ಕಾಂಗ್ರೆಸ್ ಅಧಿವೇಶನದಲ್ಲಿ ಕಾಂಗ್ರೆಸ್ ಧ್ವಜಾರೋಹಣಕ್ಕೆ ಸಂಬಂಧಪಟ್ಟಿದ್ದೆಂದು ತೋರುತ್ತದೆ. ಪತ್ರಿಕೆಗಳಲ್ಲಿ ಓದಿದ್ದ ಜ್ಞಾಪಕ ನನಗೆ. ಮಹಿಳೆಯೊಬ್ಬರು ಧ್ವಜಧಾರಿಯಾಗಿ ಆರೋಹಿಸಲು ಮುನ್ನುಗ್ಗುತ್ತಿದ್ದಾಗ ಗುಂಡು ಹಾರಿಸಲು ಸಿದ್ಧರಾಗಿ ಕೋವಿಯ ಬಿಲ್ಲೆತ್ತಿ ನಿಂತಿದ್ದ ಪೋಲೀಸರು ತಡೆದ ಸಂದರ್ಭವಿರಬೇಕು. ಬಹುಶಃ ಮಿರ್ಜಾ ಸಾಹೇಬರ ವಿವೇಕಪೂರ್ಣವಾದ ಸದ್ಭಾವದಿಂದ ಗುಂಡು ಹಾರುವುದು ತಪ್ಪಿ ಆ ಮಾನ್ಯ ಮಹಿಳೆ ಇಂದು ಉಚ್ಚ ಸ್ಥಾನದಲ್ಲಿ ಅಧಿಕಾರಾರೂಢರಾಗಿರಲು ಸಾಧ್ಯವಾಯಿತೆಂದು ತೋರುತ್ತದೆ.

ಸದ್ಯಕ್ಕೆ ಅದಿರಲಿ. ಎಂತೋ ಅಂತು ಆ ದಾರುಣ ದಿವ್ಯ ಕಥೆ ಮುಗಿದು ನಾವೀಗ ಭವ್ಯ ಸ್ವತಂತ್ರ ಭಾರತದ ಪುಣ್ಯವಂತ ಪ್ರಜೆಗಳಾಗಿದ್ದೇವೆ. ಸಮಾಜವಾದ ಸ್ವರೂಪದ ಸ್ವತಂತ್ರಪ್ರಜಾಸತ್ತೆಯ ಸರ್ವಧರ್ಮ ಸಮನ್ವಯದ ಮತ್ತು ಸರ್ವೋದಯದ ಲೌಕಿಕ ಕ್ಷೇಮ ರಾಷ್ಟ್ರವನ್ನು ನಿರ್ಮಿಸಲು ವ್ರತತೊಟ್ಟು ಕಾರ್ಯೋನ್ಮುಖರಾಗಿದ್ದೇವೆ. ಎಡರು ತೊಡರುಗಳೇನೆ ಇರಲಿ, ಕ್ಷೇಮ ಕಷ್ಟಗಳೇನೆ ಬರಲಿ, ಅದು ಸಿದ್ಧಿಸುವುದರಲ್ಲಿ ಸಂದೇಹವಿಲ್ಲ. ಕವಿ ಸರ್ವನಾಶದ ಇದಿರಿನಲ್ಲಿಯೂ ಆಶಾವಾದಿಯೆ! ಆಟಂ ಬಾಂಬಿನ ಮೃತ್ಯುಗರ್ಭದಲ್ಲಿಯೂ ಅಮೃತೋದ್ಭವವಾಗುವ ಹಾರೈಕೆಯನ್ನು ಕೈಬಿಡುವುದಿಲ್ಲ.

ಕನ್ನಡನಾಡು ಒಟ್ಟಾಗಿದೆ. ಕನ್ನಡವನ್ನು ಅಧಿಕೃತ ಭಾಷೆ ಎಂದು ಘೋಷಿಸಿದ್ದೀರಿ. ಇತರ ರಾಜ್ಯಗಳಂತೆ ಕರ್ಣಾಟಕವೂ ರಾಜ್ಯಾಂಗದ ಪ್ರಕಾರ ತನ್ನ ರಾಜ್ಯಪಾಲರನ್ನು ಪಡೆದು, ಪ್ರಜಾಸತ್ತೆಯಲ್ಲಿ ಉಳಿದ ರಾಜ್ಯಗಳಿಗೆ ಹಿಂದೆ ಬೀಳದೆ ಸಮಾನತೆಯನ್ನು ಸಾಧಿಸಿದೆ. ಇನ್ನು 'ಕರ್ಣಾಟಕ' ಎಂದು ಹೆಸರಿಡುವ ವಿಚಾರದಲ್ಲಿ ಏನೋ ಒಂದು ತರಹದ ಒಲಿದು ಒಂದಾದವರ ಮುನಿಸಿನ ಕಚ್ಚಾಟ ನಡೆಯುತ್ತಿರುವಂತೆ ತೋರುತ್ತಿದೆ. ಆರ್ಷೇಯ ಕಾಲದಿಂದಲೂ, ಭೌಗೋಲಿಕವಾಗಿ ಬೇರೆ ಬೇರೆ ಹೆಸರಿದ್ದ ಬಹು ರಾಜ್ಯಗಳಲ್ಲಿ ಹಂಚಿ ಹೋಗಿದ್ದಾಗಲೂ, ಯಾವ ಪ್ರದೇಶವನ್ನು ಕವಿಗಳೂ ಸಾಹಿತಿಗಳೂ ಮತಪ್ರಚಾರಕರೂ ಜಗದ್ಗುರುಗಳೂ ಮಹಾಜನರೂ ಇತಿಹಾಸಕಾರರೂ ವಿದೇಶೀಯ ಪ್ರವಾಸಿಗಳೂ 'ಕರ್ಣಾಟಕ' ಎಂದು ಕರೆದೂ ಕರೆದೂ ಅದನ್ನೊಂದು 'ಮಂತ್ರ'

ವನ್ನಾಗಿ ಮಾಡಿ, ಅದಕ್ಕೆ 'ಶಕ್ತಿ' ನೀಡಿದ್ದಾರೆಯೊ ಆ ಪ್ರದೇಶಕ್ಕೆ ಕರ್ಣಾಟಕ ಎಂಬ ಹೆಸರು ಅತ್ಯಂತ ಸಮಂಜಸವೂ ಉಚಿತವೂ ಆಗಿರುವುದರಿಂದ ಇಂದೊ ನಾಳೆಯೊ ಅದು, ರಾಜಕೀಯದ ಸ್ಪರ್ಧಾಭಾವದಿಂದಲ್ಲದೆ, ಸಾಂಸ್ಕೃತಿಕವಾದ ಮೈತ್ರಿಯಿಂದಲೆಯೆ ಸರ್ವಸಂತೋಷದಿಂದ ಸರ್ವಸಮ್ಮತವಾಗಿ ಘೋಷಿತವಾಗುತ್ತದೆ ಎಂಬುದು ಕವಿಯ ಶ್ರದ್ಧೆ.

ಈ ನಮ್ಮ ಕರ್ಣಾಟಕತ್ವ ಎಂದೆಂದಿಗೂ ಭಾರತೀಯತ್ವಕ್ಕೆ ಅವಿರುದ್ಧವಾಗಿ ನಿಲ್ಲುತ್ತದೆ. ಕರ್ಣಾಟಕ ಮಾತೆಗೆ ಜಯಘೋಷ ಮಾಡುವಾಗಲೆಲ್ಲ ಭಾರತಮಾತೆಯ ಪುತ್ರಿಯೆಂದು ಮೊದಲೆ ಘೋಷಿತಳಾಗುತ್ತಾಳೆ.

**ಜಯ್ ಭಾರತ ಜನನಿಯ ತನುಜಾತೆ,**<br>
**ಜಯ ಹೇ ಕರ್ಣಾಟಕ ಮಾತೆ!–**

ನಾವು ಮಕ್ಕಳಾಗಿದ್ದಾಗ ಕೆಲವರು ಕಿತಾಪತಿಯ ದೊಡ್ಡವರು ತಮಾಷೆ ನೋಡುವುದಕ್ಕಾಗಿ ನಮಗೊಂದು ಪ್ರಶ್ನೆ ಹಾಕುತ್ತಿದ್ದರು: "ನೀನು ಅವ್ವನ ಮಗನೋ? ಅಪ್ಪಯ್ಯನ ಮಗನೋ?"ಎಂದು . ನಾವು ಕಕ್ಕಾಬಿಕ್ಕಿಯಾಗುತ್ತಿದ್ದೆವು. ಪ್ರಶ್ನೆ ಕೇಳುವವರಿಗೆ ಬೇಕಾಗಿದ್ದುದೂ ಅದೇಯೆ. ನಾವು ನಮ್ಮ ಪುಟ್ಟ ಮಿದುಳಿನಿಂದಲೆ ಸ್ವಲ್ಪ ಯೋಚನೆ ಮಾಡಿ –ಹುಟ್ಟಿದಂದಿನಿಂದಲೂ ಹಾಲುಕೊಟ್ಟು ಹತ್ತಿರ ಮಲಗಿಸಿಕೊಳ್ಳುವವಳು ಅವ್ವ ತಾನೆ?– 'ನಾನು ಅವ್ವನ ಮಗ!' ಎಂದರೆ, ಕೇಕೆಹಾಕಿ ಕೈ ಚಪ್ಪಾಳೆ ಹೊಡೆದು ನಗುತ್ತಿದ್ದರು. ಅರೆ! ಅರೆ! ಏನೋ ತಪ್ಪು ಹೇಳಿಬಿಟ್ಟೆನಲ್ಲಾ ಎಂದು, ಅದನ್ನು ಬೇಗನೆ ತಿದ್ದಿಕೊಳ್ಳಲೆಂದು 'ಅಲ್ಲ, ಅಲ್ಲ; ನಾನು ಅಪ್ಪಯ್ಯನ ಮಗ!' ಎಂದರೆ ಇನ್ನೂ ಗಟ್ಟಿಯಾಗಿ ಕೇಕೆ ಹಾಕಿ ಕೈ ಚಪ್ಪಾಳೆ ಕುಟ್ಟಿ, ನಕ್ಕು, ನಮ್ಮನ್ನು ಕಂಗಾಲು ಮಾಡುತ್ತಿದ್ದರು. ಹಾಗೆಯೆ ಈ ತಂದುಹಾಕುತನದ ಕಿತಾಪತಿಯ ಜನ ನಮ್ಮ ಕರ್ಣಾಟಕತ್ವ ಮಹಾರಾಷ್ಟ್ರತ್ವ ಆಂಧ್ರತ್ವಗಳಿಗೂ ನಮ್ಮ ಭಾರತೀಯತ್ವಕ್ಕೂ ವಿರೋಧ ಭಾವದ ಆರೋಪಣೆ ಮಾಡುತ್ತಾರೆ, ತಮ್ಮ ಸ್ವಾರ್ಥಸಾಧನೆಗಾಗಿ. ಅಂತಹ ಕುಹಕದ ಕೂಣಿಗೆ ಬೀಳದಂತೆ ನಮ್ಮ ರಾಷ್ಟ್ರನಿಷ್ಠೆಯನ್ನು ರಕ್ಷಿಸಿಕೊಂಡು ನಾವು ವಿವೇಕಶಾಲಿಗಳಾಗಿ ಮುಂಬರಿಯಬೇಕು.

ಮಹನೀಯರೆ, ಕೊನೆಯದಾಗಿ ಅಧಿಕೃತ ಶಾಸನಕರ್ತರಾದ ನಿಮ್ಮಲ್ಲಿ ಅನಧಿಕೃತ ಶಾಸನಕರ್ತನಾದ ನನ್ನ ಒಂದು ಅಹವಾಲು: ಅದು ಇಂಗ್ಲಿಷ್ ಭಾಷೆಗೂ ಶಿಕ್ಷಣ ಮಾಧ್ಯಮಕ್ಕೂ ಸಂಬಂಧಪಟ್ಟಿದ್ದು. ವಿವರಕ್ಕಾಗಲಿ ವಾದಕ್ಕಾಗಲಿ ಜಿಜ್ಞಾಸೆಗಾಗಲಿ ನಾನೀಗ ಕೈ ಹಾಕುವುದಿಲ್ಲ. ಅದು ತತ್ಸಮಯ ಸಾಧ್ಯವು ಅಲ್ಲ; ಅದಕ್ಕಿಲ್ಲಿ ಕಾಲಾವಕಾಶವೂ ಇಲ್ಲ. ತಮ್ಮ ಗಮನವನ್ನು ಅತ್ತಕಡೆ ಎಳೆದು, ಅದು ತಮ್ಮ ಶೀಘ್ರ ಪರಿಶೀಲನೆಗೂ ಇತ್ಯರ್ಥಕ್ಕೂ ಒಳಗಾಗುವಂತೆ ಮಾಡುವುದೆ ನನ್ನ ಸದ್ಯಃಪ್ರಯತ್ನದ ಮುಖ್ಯ ಉದ್ದೇಶ. ಆ ವಿಚಾರವಾಗಿ ನಮ್ಮ ರಾಷ್ಟ್ರ ಪಿತನಾದಿಯಾಗಿ ಸಾವಿರಾರು ದೇಶಭಕ್ತರೂ ನೂರಾರು ಸ್ವದೇಶೀಯ ಮತ್ತು ವಿದೇಶೀಯ ವಿದ್ಯಾತಜ್ಞರೂ ಹೇಳಿದ್ದಾರೆ, ಮಾತನಾಡಿದ್ದಾರೆ, ಬರೆದಿದ್ದಾರೆ. ಹೊತ್ತಗೆ ಹೊತ್ತಗೆಗಳನ್ನೆ ಪ್ರಕಟಿಸಿಯೂ ಇದ್ದಾರೆ.

ಆದರೆ ನಮ್ಮ ದೇಶದ ಪ್ರಚ್ಛನ್ನ ಶತ್ರುಗಳಾದ ಸ್ವಾರ್ಥಸಾಧಕ ಪಟ್ಟಭದ್ರಹಿತಾಸಕ್ತ ಪ್ರತಿಗಾಮಿ ಶಕ್ತಿಗಳು,ಮಕ್ಕಳಿಗೆ ಹಾಲುಣಿಸುವ ನೆವದಿಂದ ಅವರನ್ನು ಕೊಲ್ಲುತ್ತಿದ್ದ ಭಾಗವತ ಪುರಾಣದ ಪೂತನಿಯಂತೆ, ಬಲಾತ್ಕಾರದ ಇಂಗ್ಲಿಷ್ ಭಾಷೆಯಿಂದಲೂ ಇಂಗಿಷ್ ಮಾಧ್ಯಮದಿಂದಲೂ ವರ್ಷ ವರ್ಷವೂ ಪರೀಕ್ಷೆಯ ಜಿಲೊಟಿನ್ನಿಗೆ ಕೋಟ್ಯಂತರ ಬಾಲಕರ ಮತ್ತು ತರುಣರ ತಲೆಗಳನ್ನು ಬಲಿಕೊಡುತ್ತಿದ್ದಾರೆ. ಆ ನಷ್ಟದ ಪರಿಮಾಣವನ್ನು ಊಹಿಸಲೂ ಸಾಧ್ಯವಿಲ್ಲ. ಬಹುಶಃ ಸರಿಯಾಗಿ ಲೆಕ್ಕ ಹಾಕಿದರೆ, ನಾಲ್ಕಾರು ಪಾಂಚವಾರ್ಷಿಕ ಯೋಜನೆಗಳ ಮೊತ್ತವೆ ಆದರೂ ಆಗಬಹುದೇನೊ!

ಇಂಗ್ಲಿಷ್ ಭಾಷೆ ಬಲತ್ಕಾರದ ಸ್ಥಾನದಿಂದ ಐಚ್ಛಿಕ ಸ್ಥಾನಕ್ಕೆ ನಿಯಂತ್ರಣ ಗೊಳ್ಳದಿದ್ದರೆ, ಇಂಗ್ಲಿಷ್ ಶಿಕ್ಷಣ ಮಾಧ್ಯಮ ತೊಲಗಿ ಪ್ರಾದೇಶಿಕ ಭಾಷೆಗೆ ಆ ಸ್ಥಾನ ಲಭಿಸದಿದ್ದರೆ,ನಮ್ಮ ದೇಶ ಹತ್ತೇ ವರ್ಷಗಳಲ್ಲಿ ಸಾಧಿಸಬೇಕಾದುದನ್ನು ಇನ್ನೊಂದು ನೂರು ವರ್ಷಗಳಲ್ಲಿಯೂ ಸಾಧಿಸಲಾರದೆ ನಿತ್ಯರೋಗಿಯಂತಿರಬೇಕಾಗುತ್ತದೆ. ಅಲ್ಲದೆ ಮತ್ತೂ ಒಂದನ್ನು ಕಂಡಂತೆ ಹೇಳುತ್ತೇನೆ ತಮಗೆ; ನಮ್ಮ ಕಾರ್ಖಾನೆಗಳನ್ನೆಲ್ಲ ನಿಲ್ಲಿಸಿ, ಆಣೆಕಟ್ಟುಗಳನ್ನೆಲ್ಲ ತಡೆಹಿಡಿದು, ಪ್ರಯೋಗಶಾಲೆ ಸಂಶೋಧನಾಗಾರಗಳನ್ನೆಲ್ಲ ವಜಾಮಾಡಿ, ಹಲವು ಪಾಂಚವಾರ್ಷಿಕ ಯೋಜನೆಗಳ ಆ ಹಣವನ್ನೆಲ್ಲ ಇಂಗ್ಲಿಷ್ ಸ್ಟಾಂಡರ್ಡ್ ಅನ್ನು ಉತ್ತಮಗೊಳಿಸುವುದಕ್ಕಾಗಿಯೆ ವೆಚ್ಚಮಾಡಿದರೂ, ಇನ್ನು ನೂರು ವರ್ಷಗಳ ಅನಂತರವೂ ನಮ್ಮ ಮಕ್ಕಳ ಇಂಗ್ಲಿಷಿನ ಮಟ್ಟ ಈಗಿರುವುದಕ್ಕಿಂತ ಮೇಲಕ್ಕೇರುವುದಿಲ್ಲ! ಅಲ್ಲದೆ, ಸಂಖ್ಯೆಯೂ ವಿಸ್ತಾರವೂ ಹೆಚ್ಚುತ್ತಿರುವುದನ್ನು ಗಮನಿಸಿದರೆ, ಈಗಿರುವ ಮಟ್ಟವೂ ಇಳಿದು ದುರ್ಗತಿಹೊಂದುವುದರಲ್ಲಿ ಸಂದೇಹವಿಲ್ಲ. ಆಹಾರ ಸಮಸ್ಯೆಗಿಂತಲೂ ಚೀಣಿಯರ ಸಮಸ್ಯೆಗಿಂತಲೂ ಗುರುತರವಾದ ಸಮಸ್ಯೆ ಇದು. ಈ ಬಲಾತ್ಕಾರದ ಇಂಗ್ಲಿಷ್‌ಶಿಕ್ಷಣದ ಪ್ರಚ್ಛನ್ನ ಭ್ರಷ್ಟಾಚಾರವನ್ನು, ನಷ್ಟದಲ್ಲಾಗಲಿ ಹಾನಿಯಲ್ಲಾಗಲಿ, ಸರಿದೂಗುವ ಭ್ರಷ್ಟಾಚಾರ ಮತ್ತೊಂದಿಲ್ಲ. ಆದರೆ ಅದು ಪ್ರಚ್ಛನ್ನವಾದ್ದರಿಂದಲೂ, ಅದರ ದುಷ್ಪರಿಣಾಮ ದೃಗ್ಗೋಚರವಾಗುವ ಮಟ್ಟಕ್ಕೇರಲು ಸ್ವಲ್ಪ ದೀರ್ಘಕಾಲ ಹಿಡಿಯುವುದರಿಂದಲೂ, ನಾವು ಹುಸಿ ನೆಮ್ಮದಿಯ ಭಾವದಲ್ಲಿ ಈಗಲೆ ಎಚ್ಚರಗೊಳ್ಳದೆ ತಟಸ್ಥರಾಗಿದ್ದರೆ, ಮುಂದೆ ಮಹಾ ಪಶ್ಚಾತ್ತಾಪಕ್ಕೆ ಒಳಗಾಗಬೇಕಾಗುತ್ತದೆ.

ನಿಮ್ಮ ಕಣ್ಣು ಮುಂದೆಯೆ ನಡೆಯುತ್ತಿರುವ ಒಂದು ಖಚಿತವೂ ಮುಷ್ಟಿ ಗ್ರಾಹ್ಯವೂ ಆದ ನಿದರ್ಶನ ತೆಗೆದುಕೊಂಡರೆ ವಿಷಯ ಸ್ಪಷ್ಟತರವಾಗುತ್ತದೆ. ಈ ವರ್ಷದಿಂದ ಅನೇಕ ಹೈಸ್ಕೂಲುಗಳಲ್ಲಿ ಹನ್ನೊಂದನೆಯ ತರಗತಿಯನ್ನು ತೆರೆದಿದ್ದಾರೆ. ಹನ್ನೊಂದನೆಯ ತರಗತಿ ವಿಶ್ವವಿದ್ಯಾನಿಲಯದ ಪ್ರೀಯೂನಿವರ್ಸಿಟಿ ಕೋರ್ಸಿಗೆ ಸಮವಾದದ್ದು. ಪಿ.ಯು.ಸಿ.ಯಲ್ಲಿಯೆ ೧೯೫೮ರಿಂದ ಕನ್ನಡ ಶಿಕ್ಷಣ ಮಾಧ್ಯಮದ ಸೆಕ್ಷನ್ ಗಳನ್ನು ತೆರೆಯಲಾಯಿತು. ಅದಕ್ಕೆ ಬೇಕಾದ ಎಲ್ಲ ಪಠ್ಯಪುಸ್ತಕಗಳೂ ಸಿದ್ಧವಾದುವು. ಫಲಿತಾಂಶಗಳೂ ಆಶ್ಚರ್ಯವಾಗುವಮಟ್ಟಿಗೆ ಉತ್ತಮಗೊಳ್ಳುತ್ತಾ ಬಂದಿವೆ. ಹೀಗಿರುವಲ್ಲಿ, ಗಾಳಿಯಲ್ಲಿಯೂ ಇಂಗ್ಲಿಷಿನ ಗಂಧವಿಲ್ಲದ ಹಳ್ಳಿಗಾಡಿನ ಹೈಸ್ಕೂಲುಗಳಲ್ಲಿ, ಪಿ.ಯು.ಸಿ.ಗೆ

ಸಮನಾಗಿ ಹನ್ನೊಂದನೆಯ ತರಗತಿಗಳನ್ನು ತೆರೆದು, ಎಸ್.ಎಸ್.ಎಸ್.ಸಿ. ವರೆಗೆ ಕನ್ನಡ ಮಾಧ್ಯಮದಲ್ಲಿಯೆ ಓದಿದ್ದ ಹುಡುಗರಿಗೆ, ಇಂಗ್ಲಿಷಿನಲ್ಲಿ ಮಾಧ್ಯಮವನ್ನು ಬಲಾತ್ಕಾರವಾಗಿ ಹೇರಿ–(ಬಲಾತ್ಕಾರವಾಗಿ ಎಂಬುದನ್ನು ತಾವು ಗಮನಿಸಬೇಕು,ಕನ್ನಡ ಮಾಧ್ಯಮವನ್ನು ಸಂಪೂರ್ಣವಾಗಿ ಬಹಿಷ್ಕರಿಸಿರುವುದು ಮಾತ್ರವಲ್ಲದೆ ಆ ತರಗತಿಗಳಲ್ಲಿ ಕನ್ನಡದಲ್ಲಿ ಮಾತನಾಡಲೆ ಕೂಡದು ಎಂಬ ಸುಗ್ರೀವಾಜ್ಞೆಯೂ ಹೊರಟಿದೆಯಂತೆ)– ಹಾಗೆ ಇಂಗ್ಲಿಷ್ ಮಾಧ್ಯಮವನ್ನು ಬಲಾತ್ಕಾರವಾಗಿಹೇರಿದುದರ ಉದ್ದೇಶವೇನೊ ಗೊತ್ತಾಗುವುದಿಲ್ಲ. ಮುಂದಿನ ವರ್ಷದ ಪರೀಕ್ಷೆಗಳಲ್ಲಿ ನೀವೆ ನೋಡುತ್ತೀರಿ– ಆ ಹಿಂದುಳಿದ ಗ್ರಾಮ ಪ್ರದೇಶದ ವಿಧ್ಯಾರ್ಥಿಗಳು ನೂರಕ್ಕೆ ನೂರೂ ಉದುರಿಹೋಗುತ್ತಾರೆ! ಇದಕ್ಕೆ ಯಾರು ಕಾರಣರು: ಎಸ್.ಎಸ್.ಎಲ್.ಸಿ. ಕನ್ನಡ ಮಾಧ್ಯಮದಲ್ಲಿ ಫಸ್ಟ್ ಕ್ಲಾಸಿನಲ್ಲಿ ಪಾಸಾಗಿ ನಾಲ್ಕನೆಯ ಅಥವಾ ಐದನೆಯ ರ್‍ಯಾಂಕ್ ಗಳಿಸಿದ ವಿದ್ಯಾರ್ಥಿ ಪಿ.ಯು.ಸಿ.ಯ ಇಂಗ್ಲಿಷ್ ಮಾಧ್ಯಮದಲ್ಲಿ ಎರಡೋ ಮೂರೋ ವರ್ಷ ಫೈಲ್ ಆದರೆ ಅದಕ್ಕೆ ಯಾರು ಕಾರಣ: ವಿದ್ಯಾರ್ಥಿಯೊ? ಇಂಗ್ಲಿಷ್ ಮಾಧ್ಯಮವನ್ನು ಬಲಾತ್ಕಾರವಾಗಿ ಹೇರಿದ ಅದೂರದೃಷ್ಟಿಯ ಅಧಿಕಾರ ವರ್ಗವೋ? ರಾಜ್ಯದ ಆಡಳಿತ ವಹಿಸಿಕೊಂಡಿರುವ ಸಚಿವ ಮಂಡಲಿಯೊ? ಆ ಸಚಿವ ಮಂಡಲಿಗೆ ಕಾರಣರಾದ ಜನತಾ ಪ್ರತಿನಿಧಿಗಳೊ? ಆ ಪ್ರತಿನಿಧಿಗಳನ್ನು ಆರಿಸಿರುವ–ವಿದ್ಯಾರ್ಥಿವರ್ಗದ ತಂದೆ ತಾಯಿಯರೆ ಆಗಿರುವ–ಜನತೆಯೊ? ಯಾರು? ಎಂತಾದರಿರಲಿ:

ನಾಡ ಬದುಕಿನ ಬೇರನ್ನೆ ಹಿಡಿದಿರುವ ಈ ಕೇಡಿನ ಕಡೆಗೆ ತಮ್ಮ ಗಮನವನ್ನು ಸೆಳೆದಿದ್ದೇನೆ, ಅಷ್ಟೆ. ಶಾಸನಕರ್ತರಾದ ತಮಗೆ ಬಿಟ್ಟಿದ್ದು ಮುಂದಿನ ಕ್ಷೇಮಂಕರ ಕರ್ತವ್ಯ.

ಮಹನೀಯರೆ, ಔತಣದ ತುದಿಯಲ್ಲಿ ಹಾಗಲಕಾಯಿ ತಿನ್ನಿಸುವಂತೆ,ಕೃತಜ್ಞತಾ ಸೂಚನಾರ್ಥವಾಗಿಯೆ ಮಾಡಿರುವ ನನ್ನ ಭಾಷಣವನ್ನು ಈ ಸಮಸ್ಯಾಕಟುತ್ವದಿಂದ ಕೊನೆಗಾಣಿಸುವುದು ಅಕ್ಷಮ್ಯ ಅಪರಾಧವಾದೀತು. ಬಿಡಿಸುವ ಸಮಸ್ಯೆಗಳೇನೋ ಯಾವಾಗಲೂ ಇದ್ದೇ ಇರುತ್ತವೆ. ಎಲ್ಲ ಮುಗಿಯಿತು ಎಂಬ ಕಾಲ ಎಂದಿಗು ಬರುವುದಿಲ್ಲ. ನಿರಂತರ ಹೋರಾಟವೆ ಸಜೀವತ್ವದ ಲಕ್ಷಣವಲ್ಲವೆ?

ಆದರೆ ಈ ಇಪ್ಪತ್ತು ಇಪ್ಪತ್ತೈದು ವರ್ಷಗಳಲ್ಲಿ ಎಂತೆಂತಹ ಸಮಸ್ಯೆಗಳು ಪರಿಹಾರವಾಗಿವೆ? ಎಂತೆಂತಹ ಹೋರಾಟಗಳಲ್ಲಿ ಜಯಗಳಿಸಿದ್ದೇವೆ? ಎಂತೆಂತಹ ಮಹತ್ ಸಾಧನೆಗಳನ್ನು ಕೈಗೊಂಡು ಸಿದ್ಧಿ ಪಡೆದಿದ್ದೇವೆ. ಯಾವ ಯಾವ ವಲಯಗಳಲ್ಲಿ ಎಂತೆಂತಹ ನವೋದಯಗಳನ್ನು ಉತ್ಥಾನಗೊಳಿಸಿದ್ದೇವೆ. ನೆನೆದರೆ, ರೋಮಾಂಚಿತರಾಗದೆ ಇರಲು ಸಾಧ್ಯವಿಲ್ಲ. ಭಾರತದಂತಹ ಮಹಾ ರಾಷ್ಟ್ರದ ಸ್ವಾತಂತ್ರ ಸಾಧನೆಯೊಂದೇ ಸಾಲದೆ ಒಂದು ಶತಮಾನದ ಹಿಗ್ಗಿಗೆ?

ಈ ಸಮಾರಂಭಕ್ಕೆ ಪ್ರಕೃತವಾದ ಸಾಹಿತ್ಯ ಕ್ಷೇತ್ರದಲ್ಲಂತೂ ಪೂರ್ವೋಕ್ತ ಅವಧಿಯಲ್ಲಿ, ಕನ್ನಡಿಗರು ಅದ್ಭುತ ಕಾರ್ಯಸಾಧನೆ ಮಾಡಿದ್ದಾರೆ. ಇತರ ಯಾವ

ದೇಶದ ಯಾವ ಸಾಹಿತ್ಯಕ್ಕೂ ಬಿಟ್ಟುಕೊಡದ ಪ್ರಮಾಣದಲ್ಲಿ ಮಹೋನ್ನತ ಶಿಖರಗಳನ್ನೇರಿ ನಿಂತಿದ್ದಾರೆ. ಧಾರವಾಡದಲ್ಲಿ ಶ್ರೀ ನಿಜಲಿಂಗಪ್ಪನವರಿಂದ ಉದ್ಘಾಟಿತವಾಗಿ ನಡೆದ ಸಾಹಿತ್ಯ ಸಮ್ಮೇಲನದ ನನ್ನ ಅಧ್ಯಕ್ಷ ಭಾಷಣದಲ್ಲಿ ಹೇಳಿದ ಮಾತನ್ನು ಇಲ್ಲಿ ಮತ್ತೊಮ್ಮೆ ಧೈರ್ಯವಾಗಿ ಘೋಷಿಸಬಯಸುತ್ತೇನೆ: "ಕನ್ನಡಿಗರು ವಿನಯಕ್ಕಾಗಿ ಬಗ್ಗಿ ನಡೆಯಬಹುದು: ಆದರೆ ರಿಕ್ತರಂತೆ ಕುಗ್ಗಿ ನಡೆಯಬೇಕಾಗಿಲ್ಲ."

ಕನ್ನಡಿಗರ ಆ ಅಭ್ಯುದಯದ ಮತ್ತು ಶ್ರೇಯಸ್ಸಿನ ಮಹಾ ವಿಜಯಕ್ಕೆ ಕಿರೀಟಪ್ರಾಯವಾದ ಸಂಕೇತ ಸಾಕ್ಷಿಯಾಗಿದೆ, ನಾಡಿನ ಕವಿಯೊಬ್ಬನಿಗೆ ನಾಡಿನ ಮಹಾಜನರ ಪ್ರತಿನಿಧಿಗಳಾದ ತಾವು, ಇಂದು, ಈ ಸಮಾರಂಭದಲ್ಲಿ, ಆಶೀರ್ವಾದಪೂರ್ವಕವಾಗಿ ನೀಡುತ್ತಿರುವ ಈ 'ರಾಷ್ಟ್ರಕವಿ' ಪ್ರಶಸ್ತಿ. ಆ ಗೌರವ ಪ್ರದಾನಕ್ಕಾಗಿ ನಾನು ಮತ್ತೊಮ್ಮೆ ತಮ್ಮೆಲ್ಲರಿಗೂ ನನ್ನ ಕೃತಜ್ಞತಾಪೂರ್ವಕವಾದ ಧನ್ಯವಾದಗಳನ್ನೂ ಅನಂತಾನಂತ ನಮಸ್ಕಾರಗಳನ್ನೂ ನಿವೇದಿಸುತ್ತೇನೆ.

ಜಯ್ ಕರ್ಣಾಟಕ!

ಜಯ್ ಹಿಂದ್!

# ಪ್ರಾದೇಶಿಕ ವೈಶಿಷ್ಟ್ಯದ ರಕ್ಷಣೆ

ತಮ್ಮ ವಿಶ್ವಾಸ ಔದಾರ್ಯಗಳು ನನಗೆ ದಯಪಾಲಿಸಿರುವ ಈ ಗೌರವ ಡಾಕ್ಟರೇಟ್ ಪದವಿಯ ಮಹತ್ ಕೃಪೆಗಾಗಿ ನಾನು ತಮ್ಮೆಲ್ಲರಿಗೂ ಹೃತ್ಪೂರ್ವಕವಾದ ಕೃತಜ್ಞತೆಯನ್ನು ನಿವೇದಿಸುತ್ತೇನೆ. ಉತ್ತರಕರ್ಣಾಟಕದ ವಿದ್ಯಾ ಸಂಸ್ಕೃತಿ ಕೇಂದ್ರವಾದ ಈ ನಗರಕ್ಕೆ ಸುಮಾರು ಎರಡು ವರ್ಷಗಳ ಹಿಂದೆಯೆ ನಾನು ಆಗಮಿಸಿ ಕರ್ಣಾಟಕ ವಿಶ್ವವಿದ್ಯಾನಿಲಯದ ಈ ಗೌರವ ಪದವಿಯನ್ನು ಸ್ವೀಕರಿಸಬೇಕಾಗಿತ್ತು. ಆದರೆ ನಾನೇ ಕಾರಣವಾಗಿ ತಂದೊಡ್ಡಿದ ಕೆಲವು ಅಡೆತಡೆಗಳಿಂದ ಅದು ಮುಂದಕ್ಕೆ ಹೋಗಬೇಕಾಗಿ ಬಂತು.

ಅದರ ಏನು ಏತಕ್ಕೆ ಎಂಬುದನ್ನು ಕುರಿತು ಎರಡು ಮಾತು ಆಡಿದರೆ ಅಪ್ರಕೃತವಾಗಲಾರದು. ಅಪ್ರಕೃತವಾಗುವುದಿರಲಿ, ಅದನ್ನು ಈ ಸಂದರ್ಭದಲ್ಲಿ ಜನತೆಗೆ ತಿಳಿಸಬೇಕಾದ್ದೂ ತುಂಬ ಪ್ರಕೃತವೂ ಆಗಿದೆ ಎಂದು ನನ್ನ ಅಭಿಪ್ರಾಯ. ಆದ್ದರಿಂದ ನನಗೂ ವೈಸ್ ಛಾನ್ಸಲರ್ ಡಾ.ಪಾವಟೆಯವರಿಗೂ ನಡೆದ ಪತ್ರವ್ಯವಹಾರದ ಸಾರಾಂಶವನ್ನು ಇಲ್ಲಿ ಹೊರಗೆಡಹಲು ತಮ್ಮ ಅನುಮತಿ ಬೇಡುತ್ತೇನೆ.

ನಾನು ಪತ್ರ ಬರೆದೆ:

ಕರ್ಣಾಟಕ ವಿಶ್ವವಿದ್ಯಾನಿಲಯವು ನನ್ನನ್ನು ಗೌರವಿಸುತ್ತಿರುವುದಕ್ಕಾಗಿ ಕೃತಜ್ಞನಾಗಿದ್ದೇನೆ. ಆದರೆ ಈ ಗೌರವ ನನಗೆ ಯಾವ ಕಾರಣಕ್ಕಾಗಿ ಸಲ್ಲುತ್ತಿದೆಯೋ ಆ ಕಾರಣ ಅಥವಾ ಕಾರಣಗಳು ಇನ್ನೂ ತಮ್ಮ ಪರಿಪೂರ್ಣತೆಯನ್ನು ಸಾಧಿಸಿಲ್ಲ. ಆ ಪರಿಪೂರ್ಣತೆ ಸಾಧಿತವಾದ ಮೇಲೆ ಸಂತೋಷದಿಂದ ತಮ್ಮಲ್ಲಿಗೆ ಬಂದು ಗೌರವ ಪದವಿಯನ್ನು ಹೆಮ್ಮೆಯಿಂದ ಸ್ವೀಕರಿಸುತ್ತೇನೆ. ಅಲ್ಲಿಯವರೆಗೆ ದಯವಿಟ್ಟು ತಡೆಯಿರಿ, ನಾನೆ ವೈಯಕ್ತಿಕವಾಗಿ ಹಾಜರಾಗಬೇಕು ಎಂಬ ಆಶಯವಿದ್ದ ಪಕ್ಷದಲ್ಲಿ. ಹಾಗಿಲ್ಲದ ಪಕ್ಷದಲ್ಲಿ ನನ್ನ ಗೈರುಹಾಜರಿಯಲ್ಲಿಯೆ ತಾವು ಗೌರವ ಪದವಿಯನ್ನು ದಯಪಾಲಿಸಬಹುದು.

ಡಾ. ಪಾವಟೆಯವರು ಹಾಗೆಲ್ಲ ಸುಲಭದಲ್ಲಿ ಸೋಲೊಪ್ಪಿಕೊಳ್ಳುವವರಲ್ಲ ಎಂಬುದು ನಿಮಗೆಲ್ಲ ಅನುಭವತಃ ಗೊತ್ತಿರಲೇಬೇಕಲ್ಲವೆ? ಈ ವಿಶ್ವವಿದ್ಯಾನಿಲಯದ ಬೃಹದಾಕಾರದ ಮಹದ್ ಭವ್ಯ ಸೌಧಸ್ವರೂಪವೆ ಅದಕ್ಕೆ ಶೈಲಸಾಕ್ಷಿಯಾಗಿ ನಿಂತಿರುವುದನ್ನು ನಾವೆಲ್ಲ ಕಾಣುತ್ತಿದ್ದೇವೆ.

---

[೧]ಕರ್ನಾಟಕ ವಿಶ್ವವಿದ್ಯಾನಿಲಯದ ಗೌರವ ಡಿ.ಲಿಟ್. ಪ್ರಶಸ್ತಿಯನ್ನು ಸ್ವೀಕರಿಸಿ ಮಾಡಿದ ಭಾಷಣ. ಧಾರವಾಡ: ಫೆಬ್ರವರಿ ೨೭, ೧೯೬೬.

ಅವರು ಉತ್ತರ ಬರೆದರು, ವಿಶೇಷ ಘಟಿಕೋತ್ಸವವನ್ನಾದರೂ ಏರ್ಪಡಿಸುತ್ತೇವೆ; ನೀವು ಅನುಕೂಲಮಾಡಿಕೊಂಡು ಬರಲೇಬೇಕು ಎಂದು.

ನನ್ನ ಆಗಮನಕ್ಕೆ ನಾಲ್ಕು ಗುರುತರ ಉಪಾಧಿಗಳನ್ನೆ ಒಡ್ಡಿದ್ದೆ. ಒಟ್ಟುಗೂಡಿದ ನಾಡಿನ ಹೆಸರು ಅಧಿಕೃತವಾಗಿ ಕರ್ಣಾಟಕ ಎಂದಾಗಬೇಕೆಂದೂ, ಸರಕಾರ ಕನ್ನಡವನ್ನು ಅಧಿಕೃತಭಾಷೆಯೆಂದು ಘೋಷಿಸಬೇಕೆಂದೂ, ರಾಜ್ಯಾಂಗದ ಪ್ರಕಾರ ರಾಜ್ಯಪಾಲರ ನೇಮಕವಾಗಬೇಕೆಂದೂ ಮತ್ತು ವಿಶ್ವವಿದ್ಯಾನಿಲಯದ ಮಟ್ಟದಲ್ಲಿ, ಸದ್ಯಕ್ಕೆ ಇಂಗ್ಲಿಷಿನ ಜೊತೆಗೆ, ಪ್ರಾದೇಶಿಕ ಭಾಷೆಯೂ ಶಿಕ್ಷಣ ಮಾಧ್ಯಮವಾಗಬೇಕೆಂದು.

ಆ ಆಶೆಗಳು ಕೈಗೂಡುವ ನಿರೀಕ್ಷೆಯಲ್ಲಿ ಒಂದು ವರುಷವೇ ಕಳೆಯಿತು.

ಮರುವರ್ಷ ಮತ್ತೆ ಬಂದಿತು ಉಪಕುಲಪತಿಗಳ ಪತ್ರ: ಸದ್ಯದ ರಾಜಕೀಯ ಪರಿಸ್ಥಿತಿಯನ್ನೂ, ರಾಜಕಾರಣಿಗಳ ಗೊಂದಲಮಯ ಮನೋಧರ್ಮವನ್ನೂ ಗಮನಿಸಿದರೆ ನಿಮ್ಮ ಆಶೆಗಳ ನೆರವೇರಿಕೆಗೆ ಇನ್ನೆಷ್ಟು ಕಾಲ ಕಾಯಬೇಕಾಗುತ್ತದೆಯೋ? ಆದ್ದರಿಂದ ನಿಮ್ಮ ಗೈರುಹಾಜರಿಯಲ್ಲಿಯೆ ನಮ್ಮ ವಿಶ್ವವಿದ್ಯಾನಿಲಯವು ನಿಮಗೆ ಗೌರವ ಡಾಕ್ಟರೇಟ್ ಪದವಿಯನ್ನು ನೀಡಲು ನಿಶ್ಚಯಿಸಿದೆ ಎಂದು.

ಆದರೆ ಈ ಸಾರಿ ನಾನು ಅದಕ್ಕೆ ಸಿದ್ಧನಿರಲಿಲ್ಲ.

ಅಷ್ಟು ಹೊತ್ತಿಗಾಗಲೆ ನನ್ನ ನಾಲ್ಕು ಆಶೆಗಳಲ್ಲಿ ಎರಡು ಈಡೇರಿದ್ದುವು. ಕರ್ಣಾಟಕದ ಏಕೀಕರಣಕ್ಕೆ ರಾಜಕೀಯ ಭೂಮಿಕೆಯಲ್ಲಿ ದುಡಿದ ಹಿರಿಯ ವ್ಯಕ್ತಿಗಳಲ್ಲಿ ಅಗ್ರಮಾನ್ಯರಾಗಿರುವ ಶ್ರೀ ನಿಜಲಿಂಗಪ್ಪನವರು ಮುಖ್ಯ ಕರ್ಣಧಾರರಾಗಿ ಸರಕಾರದ ಸೂತ್ರಗಳನ್ನು ಕೈಗೆ ತೆಗೆದುಕೊಂಡ ತರುವಾಯ, ರಾಜ್ಯಾಂಗದ ಪ್ರಕಾರ ರಾಜ್ಯಪಾಲರ ನೇಮಕವಾಗಿ ಕನ್ನಡ ಅಧಿಕೃತ ಭಾಷೆ ಎಂದು ಘೋಷಿತವಾಗಿತ್ತು. ಪ್ರಾದೇಶಿಕ ಭಾಷೆಯ ಶಿಕ್ಷಣ ಮಾಧ್ಯಮವೂ ಅರ್ಧಂಬರ್ಧವಾಗಿ ತೇಪೆ ತೇಪೆಯಾಗಿ ಕೈಗೂಡುವ ಹಾದಿ ಹಿಡಿದಂತೆ ತೋರುತ್ತಿತ್ತು. ರಾಜ್ಯದ ಹೆಸರಿನ ವಿಷಯ ಮಾತ್ರ ವಿಧಾನ ಸಭೆಯ ಟಕ್ಕಾಟಿಕ್ಕಿಯಲ್ಲಿ ಅಧಿವೇಶನದಿಂದ ಅಧಿವೇಶನಕ್ಕೆ ಜೋಲಿ ಹೊಡೆಯುತ್ತಿತ್ತು. ಪಕ್ಷ ವಿಪಕ್ಷಗಳ ಕ್ರೀಡಾ ಸ್ಪರ್ಧೆಯೆಂಬಂತೆ.

ನಾನು ಡಾ. ಪಾವಟೆಯವರಿಗೆ ಬರೆದ ಮರು ಉತ್ತರದಲ್ಲಿ ಅವರು ಅಷ್ಟೊಂದು ನಿರಾಶರಾಗಬಾರದೆಂದೂ, ನಮ್ಮ ಆಶೆಗಳಲ್ಲಿ ಎರಡು ತಕ್ಕ ಮಟ್ಟಿಗೆ ಪೂರ್ಣವಾಗಿವೆ ಯೆಂದೂ, ಒಂದು ಕೈಗೂಡುವ ದಾರಿಯಲ್ಲಿ ಅರೆಬರೆಯಾದರೂ ಸಾಗಿದೆಯೆಂದೂ, ಇನ್ನೊಂದೂ ಇಂದೊ ನಾಳೆಯೊ ಕೈಗೂಡುವುದರಲ್ಲಿ ಸಂದೇಹವಿಲ್ಲವೆಂದೂ, ಸ್ವಲ್ಪ ಸಾವಧಾನವಾದರೂ ಚಿಂತೆಯಿಲ್ಲ, ಇನ್ನೊಂದು ವರ್ಷವಾದರೂ ಕಾದು ನೋಡುವ ಅವಕಾಶ ಕೊಡಬೇಕೆಂದೂ ಕ್ಷಮಾಯಾಚನೆ ಮಾಡಿದೆ.

ಅಷ್ಟರಲ್ಲಿ ದುರದೃಷ್ಟವಶಾತ್ ಭಾರತ ರಾಷ್ಟ್ರದ ಅಸ್ತಿತ್ವವನ್ನೆ ಅಲುಗಾಡಿಸುವಂತಹ ಪೀಡಾಕರ ಕ್ಷೋಭೆಗಳು ತಮ್ಮ ಕರಾಳ ಛಾಯೆಗಳಿಂದ ಸಮಗ್ರ ದೇಶಜೀವನವನ್ನೆ

ಮುಸುಗಿ ಉತ್ತರ ಪಶ್ಚಿಮ ದಿಗಂತಗಳಲ್ಲಿ ಭಯಂಕರವಾಗಿ ಕಾಣಿಸಿಕೊಂಡು ಮೇಲ್ವಾಯ ತೊಡಗಿದುವು. ಜೊತೆಗೆ ರಾಷ್ಟ್ರದ ಜೀವಸ್ವರೂಪದಂತಿದ್ದ ನಾಯಕತ್ವವನ್ನೂ ವಿಧಿ ಕಸಿದುಕೊಂಡು ನಮ್ಮನ್ನು ದುಃಖ ಸಾಗರದಲ್ಲಿ ಮುಳುಗಿಸಿಬಿಟ್ಟಿತು. ರಕ್ಷಣೆ ಮತ್ತು ಆಹಾರದಂತಹ ಅತ್ಯಂತ ಪ್ರಮುಖ ಸಮಸ್ಯೆಗಳಿಂದಲೂ ರಾಷ್ಟ್ರ ಜೀವನ ತಾಡಿತವಾಗಿ ತತ್ತರಿಸಿತು. ಸಮಗ್ರ ರಾಷ್ಟ್ರಜೀವನದ ಸಾವು ಬದುಕಿನ ಪ್ರಶ್ನೆಯ ಮುಂದೆ ನಮ್ಮ ಈ ಸಣ್ಣ ಪುಟ್ಟ ಆಶಾ ಸಮಸ್ಯೆಗಳೆಲ್ಲ ಬಾಲ ಮುದುರಿಕೊಂಡು ಮೂಲೆ ಸೇರಲೆಬೇಕಾಯಿತು.

ನಾನು ಒಳಗೊಳಗೆ ತುಸು ಹರ್ಷದಿಂದಲೆ ಭಾವಿಸಿದ್ದೆ, ಸದ್ಯಕ್ಕೆ ಡಾ.ಪಾವಟೆಯವರು ಗೌರವ ಪದವೀಪ್ರದಾನ ಸಮಾರಂಭವನ್ನು ಕೈಬಿಟ್ಟಿರಬೇಕು ಎಂದು. ಆದರೆ ಒಂದು ದಿನ ಕರ್ಣಾಟಕ ವಿಶ್ವವಿದ್ಯಾನಿಲಯದ ದೃಢಮನಸ್ಸಿನ ಉಪಕುಲಪತಿಗಳ ಸುದೃಢ ವಿಗ್ರಹ ಮೈಸೂರಿನ ನಮ್ಮ ಮನೆ 'ಉದಯರವಿ' ಯಲ್ಲಿಯೆ ಪ್ರತ್ಯಕ್ಷವಾಯಿತು. ಒಂದೆರಡು ಘಂಟೆಯ ಕಾಲದ ಮಾತುಕತೆಯಲ್ಲಿ ಅವರ ಸರಳತೆ, ಅವರ ವಿಶ್ವಾಸ, ಅವರ ಹೃತ್ಪೂರ್ವಕ ಪ್ರೇಮ, ಅವರ ಅದಮ್ಯ ಶ್ರದ್ಧೆ ಇವುಗಳು ನನ್ನ ಸಂಕಲ್ಪದ ನಿಷ್ಠುರತೆಯನ್ನು ಪಳಗಿಸಿದುವು. ಆ ಅಹೇತುಕವಾದ ಅಕ್ಕರೆಗೆ ನಾನು ಸೋಲದಿರಲು ಸಾಧ್ಯವಾಗಲಿಲ್ಲ. ಯಾರ ಅವಿರಾಮ ಶ್ರಮದಿಂದ, ಯಾರ ಅಚಂಚಲ ನಿಷ್ಠೆಯಿಂದ, ಯಾರ ಬಹುವರ್ಷಗಳ ಶ್ರದ್ಧಾಮಯ ತಪಸ್ಯೆ ಮತ್ತ ವ್ಯವಹಾರ ಚಾತುರ್ಯಗಳಿಂದ ಕರ್ಣಾಟಕ ವಿಶ್ವವಿದ್ಯಾನಿಲಯದಂತಹ ಸಹ್ಯಾಚಲಸ್ಪರ್ಧಿಯಾದ ಮಹಾಸಂಸ್ಥೆ ಕಟ್ಟಲ್ಪಟ್ಟು ಅಭಿವೃದ್ಧವಾಗಿ ಕೀರ್ತಿಶಿಖರಸ್ಥಾಯಿಯಾಗಿದೆಯೋ ಅಂತಹ ಮಹಾನುಭಾವರು ಉಪಕುಲಪತಿ ಸ್ಥಾನದಲ್ಲಿರುವಾಗ ಅವರ ಕೈಯಿಂದ ಗೌರವ ಪದವಿಯನ್ನು ಗೈರುಹಾಜರಿಯಲ್ಲಿ ಪಡೆಯುವ ದೌರ್ಭಾಗ್ಯಕ್ಕೆ ನನ್ನ ಮನಸ್ಸು ಒಪ್ಪಲಿಲ್ಲ. ಧಾರವಾಡಕ್ಕೆ ಬಂದು ವಿಶೇಷ ಘಟಿಕೋತ್ಸವದಲ್ಲಿ ಗೌರವಪದವಿಯನ್ನು ಹೆಮ್ಮೆಯಿಂದ ಸ್ವೀಕರಿಸುತ್ತೇನೆ ಎಂದು ಮಾತು ಕೊಟ್ಟಮೇಲೆಯೆ ಅವರು 'ಉದಯರವಿ'ಯ ಮೆಟ್ಟಿಲಿಳಿದರು.

ಅದರ ಪರಿಣಾಮವಾಗಿ ನಾನು ಇಂದು ಇಲ್ಲಿಗೆ ಬಂದಿದ್ದೇನೆ. ತಾವು ಉತ್ಸಾಹಪೂರ್ವಕವಾಗಿ ನೀಡಿದ ಗೌರವಾದರಗಳ ಶ್ರೀಭಾರಕ್ಕೆ ನನ್ನ ಶಿರಸ್ಸು ಧನ್ಯತೆಯನ್ನು ಅನುಭವಿಸುತ್ತಿದ್ದರೂ ದೈನ್ಯದಿಂದ ಬಾಗುತ್ತಿದೆ; ವಿಶ್ವವಿದ್ಯಾನಿಲಯ ಭಗವತಿ ಶ್ರೀ ಸರಸ್ವತಿಯ ಅಡಿದಾವರೆಯ ಕೃಪೆಗೆ ಹಣೆಯಿಟ್ಟು ನಮಿಸುತ್ತಿದೆ.

ವಿಶ್ವವಿದ್ಯಾನಿಲಯಗಳು ಅಣೆಕಟ್ಟುಗಳಂತಲ್ಲ; ಕಾಗದದ, ಉಕ್ಕಿನ ಅಥವಾ ಹೆಂಚಿನ ಕಾರ್ಖಾನೆಗಳಂತಲ್ಲ. ಅವುಗಳಿಂದ ಸಿದ್ಧವಾಗುವ ತಯಾರಿಕೆಗಳನ್ನು ಕಾರ್ಖಾನೆಯ ಸಿದ್ಧ ಪದಾರ್ಥಗಳನ್ನು ಪರೀಕ್ಷಿಸುವಂತೆ ಪರಿಶೀಲಿಸಿ ಬೆಲೆಕಟ್ಟುವಂತಿಲ್ಲ. ಅವುಗಳಿಂದ ಹೊರಬೀಳುವ ವಸ್ತುಗಳು ಸಜೀವವಾದುವು; ಸಚೇತನವಾದುವು. ಒಂದೊಂದೂ ತನ್ನ ವಿಶಿಷ್ಟತೆಯಿಂದ ನಿರುಪಮವಾದುದು. ಸರ್ವಕ್ಕೂ ಸರ್ವ ಸಾಧಾರಣವಾದ ಕೆಲವು ಅಂಶಗಳು ಅನಿವಾರ್ಯವಾಗಿ ಇರುತ್ತವೆಯಾದರೂ,

ಸಮಷ್ಟಿಯ ಐಕ್ಯತೆಯ ದೃಷ್ಟಿಯಿಂದ ಅವು ಇರಬೇಕಾದದ್ದು ಅತ್ಯಂತ ಅವಶ್ಯಕವೆ ಆದರೂ, ಅವು ಹೆಂಚುಗಳಂತಾಗಲಿ ಉಕ್ಕಿನ ಉಪಕರಣಗಳಂತಾಗಲಿ ಕಾಗದದಂತಾಗಲಿ ಸರ್ವಸಮವಾಗಿರಲು ಸಾಧ್ಯವಿಲ್ಲ. ಜಡದಿಂದ ಭಿನ್ನವಾದ ಚೈತನ್ಯದ ಲಕ್ಷಣಗಳನ್ನು ಪರಿಭಾವಿಸುವ ಪಕ್ಷದಲ್ಲಿ, ಸರ್ವ ಸಮತ್ವ ಎಂಬುದು ಅವುಗಳಿಗೆ ಸಾವಿಗಿಂತಲೂ ಹೀನತರವಾದ ನೀರಸ ಸ್ಥಿತಿಯಾಗುತ್ತದೆ. ಅದರಲ್ಲಿಯೂ ವ್ಯಕ್ತಿಯ ವ್ಯಕ್ತಿತ್ವವನ್ನು ಪರಮ ಮೌಲ್ಯಗಳಲ್ಲಿ ಒಂದನ್ನಾಗಿ ಪರಿಗಣಿಸುವ ಪ್ರಜಾಸತ್ತೆಯಲ್ಲಂತೂ ವ್ಯಷ್ಟಿಯ ವಿಶಿಷ್ಟತೆಗೆ ಸಮಷ್ಟಿಯ ಸಾಧಾರಣತೆಗೆ ಇರುವಷ್ಟೆ ಗೌರವ ಸಲ್ಲುತ್ತದೆ. ಆದ್ದರಿಂದ ಸಮಷ್ಟಿಯ ಕ್ಷೇಮವನ್ನು ಕಾಪಾಡುವ ಆತುರದಲ್ಲಿ ವ್ಯಷ್ಟಿಯನ್ನು ಬಲಿಗೊಟ್ಟು ವ್ಯಕ್ತಿಯ ವಿಶಿಷ್ಟತೆಯನ್ನು ನಿರ್ಲಕ್ಷಿಸಿದರೆ ಪ್ರಜಾಸತ್ತೆಯ ಬುಡಕ್ಕೆ ಕೊಡಲಿಯಿಟ್ಟಂತಾಗುತ್ತದೆ. ಹಸುರಾಗಿ, ವರ್ಣಮಯವಾಗಿ ವೈವಿಧ್ಯ ಸೌಂದರ್ಯಗಳಿಂದ ಕೂಡಿ ಕಂಗೊಳಿಸುವ ರಮಣೀಯ ಕಾನನಕ್ಕೆ ಬದಲಾಗಿ ನಿರ್ವಿಶಿಷ್ಟವೂ ಸರ್ವಸಮವೂ ನಿರ್ಜೀವವೂ ನೀರಸವೂ ಆಗಿರುವ ಕಟ್ಟಿಗೆಯ ರಾಶಿ ಸಿದ್ಧವಾಗುತ್ತೆ.

ಸರ್ವಸಮರೂಪದ ವಸ್ತುಗಳನ್ನು ತಯಾರಿಸುವ ಮಹಾಕಾರ್ಖಾನೆ ಗಳನ್ನೂ ಯಂತ್ರೋಪಕರಣ ನಿರ್ಮಾಣದ ಬೃಹದ್ ಯಂತ್ರಸ್ಥಾವರಗಳನ್ನೂ ಮತ್ತು ಯಾವ ವಿಶಿಷ್ಟತೆಯನ್ನೂ ಅಪೇಕ್ಷಿಸದ ಶುದ್ಧ ವೈಜ್ಞಾನಿಕ ಸಂಸ್ಥೆಗಳನ್ನೂ ಸ್ಥಾಪಿಸುವಾಗ ನಾವು ಅಖಿಲ ಭಾರತಕ್ಕೂ ಸರ್ವಸಾಧಾರಣವಾದ ರೀತಿ, ನೀತಿ ಮತ್ತು ಧ್ಯೇಯಗಳನ್ನು ಅನುಸರಿಸುವಂತೆ ವಿಶ್ವವಿದ್ಯಾನಿಲಯಗಳ ಸ್ಥಾಪನೆಯಲ್ಲಾಗಲಿ ಸಂಚಾಲನೆಯಲ್ಲಾಗಲಿ ಅನುಸರಿಸಿದರೆ ತಪ್ಪಾಗುತ್ತದೆ. ವ್ಯಷ್ಟಿಯ ವಿಶಿಷ್ಟತೆಯ ವಿಧ್ವಂಸನದಿಂದಲೆ ಸ್ಥಾಪಿತವಾಗುವ ಆ ಐಕ್ಯತೆ ಮರುಭೂಮಿಯ ಅಚೇತನ ಏಕರೂಪವಾಗುತ್ತದೆಯೆ ಹೊರತು ಅನೇಕ ವಿಧವಾದ ರಾಗಗಳಿಂದ ಸುಮಧುರವಾಗುವ ಸಂಗೀತದಂತೆ ಸಚೇತನ ಸುಸ್ವರಮೇಲವಾಗುವುದಿಲ್ಲ.

ಅಖಿಲ ಭಾರತದ ಸಮಗ್ರತೆಯ ಮತ್ತು ಭಾವೈಕ್ಯದ ಸಾಧನೆಗಾಗಿ ಬೇರೆ ಬೇರೆಯ ಭಾಷಾ ಪ್ರದೇಶಗಳಲ್ಲಿ ಮತ್ತು ರಾಜ್ಯಗಳಲ್ಲಿ ಇರುವ ಮತ್ತು ಮುಂದೆ ಬರುವ ಎಲ್ಲ ವಿಶ್ವವಿದ್ಯಾನಿಲಯಗಳೂ, ಒಂದರಂತೆ ಒಂದು, ಅಚ್ಚೊತ್ತಿದಂತೆ ಇರಬೇಕು ಎಂದು ಕೆಲವರು ಅಭಿಪ್ರಾಯಪಡುತ್ತಾರೆ. ಕಾರ್ಖಾನೆಯ ರೂಪದ ಮತ್ತು ತಾಂತ್ರಿಕ ಲಕ್ಷಣದ ಶುದ್ಧ ವೈಜ್ಞಾನಿಕ ಸಂಸ್ಥೆಗಳಿಗೆ ಆ ತತ್ವ ಅನ್ವಯವಾಗುವುದರಲ್ಲಿ ಅರ್ಥವಿದೆ. ವಿಶ್ವವಿದ್ಯಾನಿಲಯಗಳಲ್ಲಿಯೂ ಶುದ್ಧ ವಿಷಯಕರವಾದ ವಿಭಾಗಗಳಿಗೂ ಅದು ಬಹುಮಟ್ಟಿಗೆ ಅನ್ವಯವಾಗುತ್ತದೆ. ಆದರೆ ಭಾಷಾ ಸಾಹಿತ್ಯ ಸಂಸ್ಕೃತಿ ದರ್ಶನ ಇತಿಹಾಸಾದಿ ಹೃದಯ ಸಂಸ್ಕಾರ ಮತ್ತು ಬುದ್ಧಿ ವಿಚಾರಗಳಿಗೆ ಸಂಬಂಧಪಟ್ಟ ಮಾನವೀಯ ಶಾಸ್ತ್ರ ಭಾಗಗಳಿಗೆ ಆ ಯಾಂತ್ರಿಕತ್ವ ಒಂದಿನಿತೂ ಅನ್ವಯವಾಗುವುದಿಲ್ಲ. ವ್ಯಕ್ತಿರೂಪದ ವ್ಯಷ್ಟಿಯ ವ್ಯಕ್ತಿತ್ವಕ್ಕೂ ಮತ್ತು ಹೃದಯ ಬುದ್ಧಿ ಸಂಸ್ಕಾರಗಳಿಗೂ ವೈಜ್ಞಾನಿಕ ವಿಷಯಗಳಿಗೆ ಇಲ್ಲದ ಒಂದು ವಿಶಿಷ್ಟತೆ ಇರುತ್ತದೆ. ಆ ವೈಶಿಷ್ಟ್ಯದ ಪಾಲನೆ, ರಕ್ಷಣೆ, ಪೋಷಣೆ, ಸಂಶೋಧನೆ ಮತ್ತು ಪ್ರಸಾರ ಇವು ಆಯಾ ಭಾಷಾ ಪ್ರದೇಶದ

ರಾಜ್ಯಗಳಲ್ಲಿರುವ ವಿಶ್ವವಿದ್ಯಾನಿಲಯಗಳ ಆದ್ಯಕರ್ತವ್ಯವಾಗಿರಬೇಕು. ಆ ವಿಚಾರದಲ್ಲಿ ಔದಾಸೀನ್ಯ ಸಲ್ಲದು. ತಿರಸ್ಕಾರವಂತೂ ಅಕ್ಷಮ್ಯ ಜನತಾದ್ರೋಹವಾಗುತ್ತದೆ.

ಭಾಷಾನುಗುಣವಾಗಿ ರಾಜ್ಯಗಳನ್ನು ವಿಂಗಡಿಸಿದಾಗಲೇ ನಮ್ಮ ಪ್ರಜಾಸತ್ತಾತ್ಮಕವಾದ ರಾಜ್ಯಾಂಗ ಈ ಪ್ರಾದೇಶಿಕ ವೈಶಿಷ್ಟ್ಯವನ್ನು ಕಾನೂನುಬದ್ಧವಾಗಿಯೆ ಗುರುತಿಸಿದಂತಾಗಿದೆ. ಆದ್ದರಿಂದ ಆಯಾ ಭಾಷಾ ಪ್ರದೇಶದ ರಾಜ್ಯಗಳಲ್ಲಿರುವ ವಿಶ್ವವಿದ್ಯಾನಿಲಯಗಳು ಆಯಾ ಪ್ರದೇಶದ ಭಾಷಾ ಸಾಹಿತ್ಯ ಕಲಾ ಸಂಸ್ಕೃತಿಗಳಿಗೆ ವಿಶೇಷ ಪ್ರೋತ್ಸಾಹವಿಯುವುದು ಅತ್ಯಗತ್ಯ. ಏಕೆಂದರೆ ಆಯಾ ಪ್ರಾದೇಶಿಕ ವಿಶ್ವವಿದ್ಯಾನಿಲಯಗಳು ಆ ಕೆಲಸವನ್ನು ಕೈಕೊಳ್ಳದಿದ್ದರೆ ಪ್ರಪಂಚದ ಇನ್ನಾವ ವಿದ್ಯಾಸಂಸ್ಥೆಗಳೂ ಅದನ್ನು ಕೈಕೊಳ್ಳುವುದಿಲ್ಲ. ಕರ್ಣಾಟಕದಲ್ಲಿರುವ ವಿಶ್ವವಿದ್ಯಾನಿಲಯಗಳು ಕನ್ನಡನುಡಿಯ, ಸಾಹಿತ್ಯದ, ಇತಿಹಾಸದ, ಕಲೆಯ ಮತ್ತು ಸಂಸ್ಕೃತಿಯ ರಕ್ಷಣೆ ಪೋಷಣೆಗಳನ್ನು ನಿರ್ಲಕ್ಷಿಸಿದರೆ ಅದು ಕಡಲ ಪಾಲಾದಂತೆಯೆ. ಇಂಗ್ಲಿಷ್ ಭಾಷೆ ತನ್ನ ಅಭಿವೃದ್ಧಿಗೆ ಕರ್ಣಾಟಕ ಅಥವಾ ಮೈಸೂರು ವಿಶ್ವವಿದ್ಯಾನಿಲಯಗಳ ಕೈ ಹಾರೈಸುವುದಿಲ್ಲ. ಜಗತ್ತಿನ ಇತರ ಸಾವಿರಾರು ಸಂಸ್ಥೆಗಳಲ್ಲಿ ಅದು ಸುಪುಷ್ಟವಾಗಿ ಮುಂದುವರಿದೇವರಿಯುತ್ತದೆ; ಭೌತ ರಸಾಯನಾದಿ ವಿಜ್ಞಾನ ವಿಷಯಗಳ ಸಂಶೋಧನೆ ಇಲ್ಲಿ ನಡೆಯದಿದ್ದರೆ ಜಗತ್ತಿನ ಇತರ ಲಕ್ಷಾಂತರ ಸಂಸ್ಥೆಗಳಲ್ಲಿ ಅದು ನಡೆಯುತ್ತಲೆ ಇರುತ್ತದೆ. ಹಿಂದಿಗೆ ಅದರ ಏಳಿಗೆಗಾಗಿ ಇಲ್ಲಿ ನಾವು ಪ್ರೋತ್ಸಾಹವೀಯಬೇಕಾಗಿಲ್ಲ; ಭಾರತದ ಸಾವಿರಾರು ಇತರ ಕಡೆಗಳಲ್ಲಿ ಅದು ರಕ್ಷಿತ ಪೋಷಿತವಾಗುತ್ತಿದೆ. ಕಡೆಗೆ ಉರ್ದುವಿನಂತಹ ಭಾಷೆಗಿರುವ ಆ ರಕ್ಷೆ ನಮ್ಮ ಕನ್ನಡಕ್ಕಾಗಲಿ, ಮರಾಠಿ, ತಮಿಳು, ಮಲೆಯಾಳಗಳಿಗಾಗಲಿ ಇಲ್ಲ. ಪಾಕಿಸ್ಥಾನದ ಮಾತಿರಲಿ, ಭಾರತದಲ್ಲಿಯೆ ಇರುವ ನಾಲ್ವತ್ತೈವತ್ತು ವಿಶ್ವವಿದ್ಯಾನಿಲಯಗಳಲ್ಲಿ ಒಂದೊಂದು ವಿಶ್ವವಿದ್ಯಾನಿಲಯದಲ್ಲಿಯೂ ಅದಕ್ಕೆ ಆಯಾ ಪ್ರಾದೇಶಿಕ ಭಾಷೆಗಳಿಗಿರುವಂತೆಯೆ ಸಮಾನಸ್ಥಾನ ಒದಗಿ, ಒಟ್ಟುಮೊತ್ತದಲ್ಲಿ ನೋಡಿದರೆ ಅದಕ್ಕೆ ಪ್ರಾದೇಶಿಕ ಭಾಷೆಗಳಿಗೆ ಲಭಿಸುವ ಪ್ರೋತ್ಸಾಹಕ್ಕೆ ನಾಲ್ವತ್ತೈವತ್ತರಷ್ಟು ಹೆಚ್ಚಿನ ಪ್ರೋತ್ಸಾಹ ಒದಗುತ್ತದೆ. ಕನ್ನಡಕ್ಕೆ ಕನ್ನಡ ನಾಡಿನಲ್ಲಿ ಹೆಚ್ಚು ಎಂದರೆ ಮೂರು ನಾಲ್ಕು ವಿಶ್ವವಿದ್ಯಾನಿಲಯ ಮಟ್ಟದ ಪ್ರಾಧ್ಯಾಪಕ ಸ್ಥಾನಗಳಿದ್ದರೆ ಉರ್ದು ಹಿಂದಿಯಂತಹ ಭಾಷೆಗಳಿಗೆ ಭಾರತದಲ್ಲಿಯ ನಾಲ್ವತ್ತೋ ಐವತ್ತೋ ಪ್ರಾಧ್ಯಾಪಕ ಸ್ಥಾನಗಳು ಮೀಸಲಾಗಿರುತ್ತವೆ.

ಇನ್ನು ಇಂಗ್ಲಿಷಿನಂತಹ ಭಾಷೆಗಳಂತೂ ಕೇಳುವುದೇ ಬೇಡ. ಪ್ರಪಂಚದಲ್ಲಿ ಅದಕ್ಕೆ ಲಕ್ಷಾಂತರ ಪ್ರಾಧ್ಯಾಪಕ ಸ್ಥಾನಗಳಿವೆ. ಇರಲಿ, ನಮಗೇನೂ ಹೊಟ್ಟೆಕಿಚ್ಚಿಲ್ಲ. ಒಂದು ನಿದರ್ಶನಕ್ಕಾಗಿ ಅಂಕೆ ಅಂಶಗಳ ರೂಪದಲ್ಲಿ ನಾನು ಅದನ್ನು ಉಲ್ಲೇಖಿಸುತ್ತಿರುವುದರ ಉದ್ದೇಶ ಅಸೂಯೆಯಿಂದ ಸಂಭವಿಸಿದ್ದು ಎಂದು ಯಾರೂ ಭಾವಿಸಬಾರದು; ನಮ್ಮ ಪ್ರಾದೇಶಿಕ ವಿಶ್ವವಿದ್ಯಾನಿಯಗಳು ತಮ್ಮ ಪ್ರಾದೇಶಿಕ ಭಾಷೆ ಸಾಹಿತ್ಯ ಇತಿಹಾಸ ಕಲಾ ಸಂಸ್ಕೃತಿಗಳನ್ನು ನಿರ್ಲಕ್ಷಿಸಿದರೆ, ಅವುಗಳಿಗೆ ವಿಶೇಷ ಗಮನ ನೀಡಿ ಪ್ರೋತ್ಸಾಹಿಸದಿದ್ದರೆ ಅವಕ್ಕೆ ಉಳಿಗತಿಯಿಲ್ಲ; ಬೇರೆ ಯಾರೂ ಅವನ್ನು ಮೂಸಿಯೂ ನೋಡುವುದಿಲ್ಲ.

ಅವು ದುರ್ಗತಿಗಿಳಿದು, ಅವಮಾನಿತವಾಗಿ ಇತರ ಸಶಕ್ತ ಮತ್ತು ಪ್ರಗತಿಪರ ಭಾಷೆಗಳಿಟ್ಟ ಧಾಳಿಗೆ ಸಿಕ್ಕಿ, ಹೇಳ ಹೆಸರಿಲ್ಲದಂತೆ ವಿಲುಪ್ತವಾಗುತ್ತವೆ ಎಂಬ ಕಠೋರ ಸತ್ಯವನ್ನು ತಮ್ಮ ಗಮನಕ್ಕೆ ತರುವ ಆಶಯದಿಂದಲೆ ಈ ಕೆಲಸ ಮಾಡಿದ್ದೇನೆ; "ಏಳಿ! ಎಚ್ಚರಗೊಳ್ಳಿ! ಇಲ್ಲದಿದ್ದರೆ ಅನಂತಕಾಲವೂ ಪತಿತರಾಗಿ ಸರ್ವನಾಶವಾಗಿ ಹೋಗುತ್ತೇವೆ!"

ಈ ಪ್ರಾದೇಶಿಕತೆಯ ವೈಶಿಷ್ಟ್ಯದ ರಕ್ಷಣೆಯಿಂದ ಅಖಿಲ ಭಾರತದ ಸಮಗ್ರತೆಗೂ ಐಕ್ಯತೆಗೂ ಹಾನಿ ಉಂಟಾಗುತ್ತದೆ ಎಂದು ಗೊಂದಲವೆಬ್ಬಿಸುವವರ ಹೃದಯದಲ್ಲಿರುವ ಗುಟ್ಟು ಏನು ಎಂಬುದನ್ನು ನಾವು ಹೊಕ್ಕು ನೋಡಿದರೆ ಅದರ ಹೊಳ್ಳು ಹೊರದೋರುತ್ತದೆ. ಅದರ ದುರುದ್ದೇಶ ಬಯಲಾಗುತ್ತದೆ. ಹಾಗೆ ಕೂಗಾಡುವರ ಒಲವೆಲ್ಲ ಸಾಮಾನ್ಯವಾಗಿ ವಿದೇಶೀ ಭಾಷೆಯೊಂದರ ಪರವಾಗಿರುತ್ತದೆ. ಅವರೂ ಆ ವರ್ಗಕ್ಕೆ ಸೇರಿದವರೂ ಪರಕೀಯ ಆಳರಸರ ಕಾಲದಲ್ಲಿ ಆ ಭಾಷೆಯನ್ನು ಕಲಿತು ಅದರಿಂದ ಸ್ಥಾನಮಾನ ಲಾಭಗಳನ್ನು ಪಡೆದು ಕೃತಕೃತ್ಯರಾಗಿದ್ದಾರೆ. ಆ ಸ್ಥಾನ ಮಾನ ಲಾಭಗಳನ್ನು ಇನ್ನು ಮುಂದೆಯೂ ಉಳಿಸಿಕೊಂಡು ಹೋಗಲೂ, ಈಗಾಗಲೆ ಕಷ್ಟಪಟ್ಟು ಕಲಿತಿರುವ ಆ ಭಾಷೆಯನ್ನೆ ಮುಂದೆಯೂ ಮೊದಲಿನಂತೆಯೆ ಉಪಯೋಗಿಸುವಂತೆ ಮಾಡಿ, ಇತರರಿಗಿಂತ ಮುನ್ನವೆ ಸುಭದ್ರವಾಗಿ ನೆಲೆಸಿ, ಅದರ ಲಾಭ ಪ್ರಯೋಜನ ಪಡೆಯಬೇಕೆಂಬುದೂ ಅವರ ಅಂತರರಾಷ್ಟ್ರೀಯತಾ ವಾದದ ಹಿಂದಿರುವ ಹೃದಯರಹಸ್ಯವಾಗಿರುತ್ತದೆ. ಸಂಖ್ಯೆಯಲ್ಲಿ ನೂರಕ್ಕೆ ಒಂದರಷ್ಟೂ ಇಲ್ಲದ ಆ ವರ್ಗದ ಜನರಿಗೆ ಉಳಿದ ತೊಂಬತ್ತೊಂಬತ್ತರಷ್ಟು ಸಾಮಾನ್ಯ ಜನರ ಕ್ಷೇಮ ಚಿಂತನೆ ಬೇಡವಾಗಿದೆ.

ಆದರೆ ನಿಜವಾಗಿ ಆಲೋಚಿಸಿ ನೋಡಿದರೆ, ಈ ಪ್ರಾದೇಶಿಕ ವೈಶಿಷ್ಟ್ಯದ ರಕ್ಷಣೆಯಿಂದ ಅಖಿಲ ಭಾರತೀಯ ಐಕ್ಯತೆಗೆ ಒಂದಿನಿತೂ ವ್ಯಾಘಾತ ಒದಗುವುದಿಲ್ಲ ಎಂಬುದು ವಿದಿತವಾಗತ್ತದೆ. ಏಕೆಂದರೆ ಭಾಷೆಗಳಲ್ಲಿ ಅಲ್ಪ ಸ್ವಲ್ಪ ವ್ಯತ್ಯಾಸವಿದ್ದರೂ ಬೇರೆ ಬೇರೆಯ ಪ್ರದೇಶ ಮತ್ತು ರಾಜ್ಯಗಳ ಕಲಾ ಮತ್ತು ಸಾಹಿತ್ಯಾದಿಗಳ ವಸ್ತು ಮತ್ತು ದೃಷ್ಟಿಗಳಲ್ಲಿ ಅಖಿಲ ಭಾರತೀಯವಾದ ಏಕೈಕ ಮೂಲ ಸಂಸ್ಕೃತಿಯ ಶೇಕಡ ತೊಂಬತ್ತೈದಕ್ಕಿಂತಲೂ ಹೆಚ್ಚಾಗಿ ಸರ್ವಸಾಧಾರಣವಾಗಿದೆ. ಆ ಮೂಲಸಂಸ್ಕೃತಿಯ ವಜ್ರಬೆಸುಗೆ ನಮ್ಮ ಒಗ್ಗಟ್ಟನ್ನು ಎಂದೆಂದಿಗೂ ಒಡೆಯಲು ಬಿಡುವುದಿಲ್ಲ. ಅಷ್ಟೇ ಅಲ್ಲ. ನಮಗೀಗ ಒದಗಿರುವ ರಾಜಕೀಯ ಅಖಂಡತೆಗೂ ಐಕ್ಯತೆಗೂ ಮೂಲಕಾರಣವೂ ಆ ಅಖಿಲ ಭಾರತೀಯವಾಗಿರುವ ಸಂಸ್ಕೃತಿಯ ಮೂಲದಲ್ಲಿಯೆ ಇದೆ ಎಂಬುದನ್ನು ನಮ್ಮ ಇತಿಹಾಸ ಎಂತಹ ಮಂದಮತಿಗೂ ಸುಗೋಚರವಾಗುವಂತೆ ಪ್ರದರ್ಶಿಸುತ್ತದೆ.

ಆ ವೈಶಿಷ್ಟ್ಯ ರಕ್ಷಣೆಯ ಕರ್ತವ್ಯನಿರ್ವಹಣೆಯಲ್ಲಿ ಕರ್ನಾಟಕ ವಿಶ್ವವಿದ್ಯಾನಿಲಯವು ಇತರ ಭಾರತೀಯ ವಿಶ್ವವಿದ್ಯಾನಿಲಯಗಳಿಗೆ ಮಾರ್ಗದರ್ಶನ ಮಾಡಲೂ ಅರ್ಹವಾಗುವಷ್ಟರ ಮಟ್ಟಿಗೆ ಸ್ನಾತಕೋತ್ತರ ವಿಭಾಗದಲ್ಲಿ ಕಾರ್ಯ ಪ್ರಾರಂಭಮಾಡಿ ಮುಂದುವರಿಯುತ್ತಿದೆ ಎಂಬುದನ್ನು ಕೇಳಿ ನನಗೆ ಮಹದಾನಂದವಾಗಿದೆ. ಬಹುಶಃ

ನನಗೆ ಇಂದು ಅದು ತೋರುತ್ತಿರುವ ಗೌರವವೂ ನೀಡಿರುವ ಪ್ರಶಸ್ತಿಯೂ ಆ ವೈಶಿಷ್ಟ್ಯ ರಕ್ಷಣೆಯ ಕರ್ತವ್ಯದ ಒಂದು ಉಪಾಂಗವೆ ಆಗಿದೆ ಎಂದು ಭಾವಿಸಿದರೆ ತಪ್ಪಾಗುವುದಿಲ್ಲ. ಏಕೆಂದರೆ ಕನ್ನಡ ನಾಡುನುಡಿಗಳಿಗೆ ಸೇವೆ ಸಲ್ಲಿಸಿದವರಿಗೆ ಕನ್ನಡನಾಡಿನ ವಿಶ್ವವಿದ್ಯಾನಿಲಯಗಳಲ್ಲದೆ ಅನ್ಯರು ಏಕೆ ಗೌರವ ತೋರಿಸುತ್ತಾರೆ? ಅನ್ಯ ಭಾಷೆಯವರಿಗೆ ಆ ಸೇವೆ ಗೊತ್ತಾಗುವುದಾದರೂ ಹೇಗೆ? ಆದ್ದರಿಂದಲೆ ಕನ್ನಡ ನಾಡಿನ ಸಾಹಿತಿ ಸಂಶೋಧಕ ಕಲಾವಿದರುಗಳಿಗೆ ಅವರ ರಚನಾತ್ಮಕ ಕಾರ್ಯದಲ್ಲಿ ಧನರೂಪದ ನೆರವಿತ್ತು ಪ್ರೋತ್ಸಾಹಿಸುವುದರ ಜೊತೆಗೆ ಅವರ ಅತ್ಯುತ್ತಮ ಕೃತಿಗಳಿಗೆ ಮಾನರೂಪದ ಗೌರವವನ್ನು ತೋರುವುದೂ ಪೂರ್ವೋಕ್ತ ವೈಶಿಷ್ಟ್ಯ ರಕ್ಷಣೆಯ ಮಾರ್ಗದಲ್ಲಿ ಒಂದು ಮುಖ್ಯ ಮೈಲಿಕಲ್ಲಾಗುತ್ತದೆ.

ಸ್ನಾತಕೋತ್ತರವಾದ ತನ್ನ ಸಂಶೋಧನಾಂಗದಲ್ಲಿ ಸರಿಯಾದ ದಿಕ್ಕಿಗೆ ಮುಖ ಮಾಡಿ ಅಡಿಯಿಟ್ಟಿರುವ ಕರ್ಣಾಟಕ ವಿಶ್ವವಿದ್ಯಾನಿಲಯವು ಸ್ನಾತಕಪೂರ್ವದ ತನ್ನ ಬೋಧನಾಂಗದಲ್ಲಿಯೂ ಮತ್ತು ಕೆಲವೆ ವರ್ಷಗಳ ಹಿಂದೆ ಅದು ಪ್ರಾರಂಭಿಸಿರುವ ತನ್ನ ಪ್ರಸಾರಾಂಗದಲ್ಲಿಯೂ ಡಾ. ಪಾವಟೆಯವರಂಥ ಶಿಕ್ಷಣತಜ್ಞರ ಸಮರ್ಥ ಮಾರ್ಗದರ್ಶಿತ್ವದಲ್ಲಿ ಯಶಸ್ವಿಯಾಗಿ ಮುನ್ನಡೆಯುವುದರಲ್ಲಿ ನನಗೆ ಸ್ವಲ್ಪವೂ ಸಂದೇಹವಿಲ್ಲ. ಆ ಯಶಸ್ಸಿನ ಕೈಗೂಡಿಕೆಗೆ ಬಹುಮಟ್ಟಿಗೆ ಕಾರಣವಾಗುತ್ತದೆ ಭಾಷಾ ಮಾಧ್ಯಮ ನೀತಿ. ಈ ವಿಚಾರವಾಗಿ ನಾನು ಅನೇಕ ಸಾರಿ ಮಾತನಾಡಿಯೂ ಬರೆದೂ ಇದ್ದೇನೆ. ಅವುಗಳಲ್ಲಿ ಕೆಲವಾದರೂ ಭಾಷಣಗಳೂ ಬರೆಹಗಳೂ ಅಚ್ಚಾಗಿ ಪುಸ್ತಕರೂಪದಲ್ಲಿ ದೊರೆಯುತ್ತವೆ; ನಾಡಿನ ಬಾಂಧವರಿಗೆ ಆ ವಿಚಾರವಾಗಿರುವ ನನ್ನ ಭಾವನೆಗಳೆಲ್ಲ ಸುಪರಿಚಿತವಾಗಿಯೆ ಇವೆ; ಆದ್ದರಿಂದ ಇಲ್ಲಿ ಆ ನಿರ್ವಿವಾದವಾಗಿರುವ ದೇಶಭಾಷಾ ಶಿಕ್ಷಣಮಾಧ್ಯಮದ ಶ್ರೇಯಸ್ಸನ್ನು ಕುರಿತು ವಾದಕ್ಕಾಗಲಿ ವಿವರಕ್ಕಾಗಲಿ ನಾನು ಹೋಗುವುದಿಲ್ಲ. ಅದು ಚರ್ವಿತ ಚರ್ವಣವಾದೀತು.

ಅದೂ ಅಲ್ಲದೆ ಸದ್ಯಕ್ಕೆ ಇಲ್ಲಿಗೆ ಅದು ಅಪ್ರಕೃತ. ಏಕೆಂದರೆ ಈ ವಿಶ್ವವಿದ್ಯಾನಿಲಯದ ವಿಧಾಯಕ ಸೂತ್ರಗಳನ್ನು ತನ್ನ ಭದ್ರಮುಷ್ಟಿಯಲ್ಲಿ ಹಿಡಿದಿರುವ ಅದರ ಅಧಿನೇತೃ ವೈಸ್ ಛಾನ್ಸಲರ್ ಡಾ. ಪಾವಟೆಯವರಿಗೂ ನನಗೂ ಆಯಾ ಪ್ರದೇಶಗಳಲ್ಲಿ ಆಯಾ ಪ್ರಾದೇಶಿಕ ಭಾಷೆಯೆ ಶಿಕ್ಷಣಮಾಧ್ಯಮವಾಗಬೇಕು ಎಂಬ ವಿಷಯದಲ್ಲಿ ಭಿನ್ನಾಭಿಪ್ರಾಯವಿಲ್ಲ, ಮೂಲತತ್ವದಲ್ಲಾಗಲಿ ಅಥವಾ ಅಂತಿಮ ಧ್ಯೇಯದಲ್ಲಾಗಲಿ. ಕೆಲವು ವರ್ಷಗಳ ಹಿಂದೆಯೆ ನಾನು ಮೈಸೂರು ವಿಶ್ವವಿದ್ಯಾನಿಲಯದ ಉಪಕುಲಪತಿಯಾಗಿ ಕನ್ನಡ ಮಾಧ್ಯಮವನ್ನು ಪ್ರಿಯೂನಿವರ್ಸಿಟಿ ಮತ್ತು ಡಿಗ್ರಿ ತರಗತಿಗಳಲ್ಲಿ ಪ್ರಾರಂಭಿಸಿ ಅದಕ್ಕೆ ಬೇಕಾದ ಪಠ್ಯಪುಸ್ತಕಗಳನ್ನು ಪ್ರಸಾರಾಂಗದ ಮೂಲಕ ಸಿದ್ಧಗೊಳಿಸಿದ ಕಾಲದ ತರುಣದಲ್ಲಿಯೆ ಅಖಿಲ ಭಾರತೀಯ ವೈಸ್ ಛಾನ್ಸಲರುಗಳ ಸಭೆಯೊಂದರಲ್ಲಿ ಅದರ ಅಧ್ಯಕ್ಷಸ್ಥಾನದಿಂದ ಅವರು–ಪ್ರಾದೇಶಿಕ ಭಾಷೆಯೆ ಶಿಕ್ಷಣಮಾಧ್ಯಮವಾಗಬೇಕು. ಅರ್ಥವಾಗದ ವಿದೇಶಿ ಭಾಷಾ ಮಾಧ್ಯಮವೇ ವಿದ್ಯಾರ್ಥಿಗಳಲ್ಲಿ ಅಶಿಸ್ತು ಹೆಚ್ಚಾಗುವುದಕ್ಕೂ ಮತ್ತು ಇನ್ನಾವ ದೇಶದಲ್ಲಿಯೂ ಕಂಡುಬರದ ಪ್ರಮಾಣದಲ್ಲಿ

ವಿದ್ಯಾರ್ಥಿಗಳು ಪರೀಕ್ಷೆಗಳಲ್ಲಿ ಅನುತ್ತೀರ್ಣರಾವುದಕ್ಕೂ ಮುಖ್ಯಕಾರಣವಾಗಿದೆ– ಎಂದೆಲ್ಲ ತಮ್ಮ ಭಾಷಣದಲ್ಲಿ ತುಸು ದೀರ್ಘವಾಗಿಯೇ ಪ್ರತಿಪಾದಿಸಿದ್ದರು. ಕನ್ನಡ ಶಿಕ್ಷಣಮಾಧ್ಯಮ ಇಲ್ಲಿ ಯಶಸ್ವಿಯಾಗದಿರುವುದಕ್ಕೆ ವಿದ್ಯಾರ್ಥಿಗಳೂ ಸಾರ್ವಜನಿಕರೂ ಸರಕಾರವೂ ಸಾಕಷ್ಟು ಪ್ರಮಾಣದಲ್ಲಿ ಸಹಕರಿಸದಿರುವುದೇ ಮುಖ್ಯ ಕಾರಣವಾಗಿದೆ ಎಂಬುದು ಅವರ ದೂರು. ಕರ್ಣಾಟಕ ವಿಶ್ವವಿದ್ಯಾನಿಲಯ ತನ್ನ ಕಡೆಯಿಂದ ಅದಕ್ಕೆ ಪೂರ್ಣ ಅನುಮತಿ ನೀಡಿದೆ ಎಂದು ಅವರು ಹೇಳುತ್ತಾರೆ. ಮುಂದಿನ ಮುಂದಾಳುತನ ವಹಿಸಲಿರುವ ಇಂದಿನ ವಿದ್ಯಾರ್ಥಿವರ್ಗ ದೃಢಮನಸ್ಸು ಮಾಡಿದರೆ ಸರಕಾರ ಮತ್ತು ಸಾರ್ವಜನಿಕರು ಹಿಂಬಾಲಿಸದೆ ಇರುವುದು ಸಾಧ್ಯವಿಲ್ಲ.

ವಿಶ್ವವಿದ್ಯಾನಿಲಯದ ಸಂಶೋಧನಾಂಗ ಮತ್ತು ಬೋಧನಾಂಗಗಳಿಗೆ ಯಾವ ವಿಧದಲ್ಲಿಯೂ ದ್ವಿತೀಯವಲ್ಲದ ಸ್ಥಾನ ಅದರ ಪ್ರಸಾರಾಂಗಕ್ಕೆ ಸಲ್ಲುತ್ತದೆ. ಅಷ್ಟೇ ಅಲ್ಲ. ಪ್ರಜಾಸತ್ತೆಯನ್ನೆ ತನ್ನ ರಾಜಕೀಯಕ್ಕೆ ತತ್ತ್ವದ ಅಡಿಗಲ್ಲನ್ನಾಗಿ ಮಾಡಿಕೊಂಡಿರುವ ನಮ್ಮ ಗಣರಾಜ್ಯದ ಅಭ್ಯುದಯವನ್ನು ಗಮನಿಸುವುದಾದರೆ ಪ್ರಸಾರಾಂಗಕ್ಕೆ ಬಹು ಮುಖ್ಯಸ್ಥಾನವನ್ನೆ ನೀಡಬೇಕಾದುದು ಅನಿವಾರ್ಯವಾಗುತ್ತದೆ. ಹಾಗಲ್ಲದೆ ನಮ್ಮ ಜನತಾ ಪ್ರಜಾಸತ್ತೆ ಯಶಸ್ವಿಯಾಗುವುದಿಲ್ಲ; ಸರ್ವೋದಯಕ್ಕೆ ಎಂದಿಗೂ ಜಯ ಲಭಿಸುವುದಿಲ್ಲ. ಮುಗಿಲಿನಿಂದ ಮಳೆಯನ್ನು ಪಡೆದು ನೀರನ್ನು ಸಂಗ್ರಹಿಸಿದ ಗಿರಿನೆತ್ತಿ, ಆ ನೀರನ್ನು ಹೊಳೆಗಳ ಮುಖಾಂತರ ಕೆಳನಾಡಿನ ಮೂಲೆಮೂಲೆಗೂ ಒಯ್ದು ಹಂಚಿ ಹುಲುಸಾದ ಬೆಳೆಗೆ ಕಾರಣವಾಗುವಂತೆ, ವಿಶ್ವವಿದ್ಯಾ ಉನ್ನತ ಕ್ಷೇತ್ರದಲ್ಲಿ ಸಂಗ್ರಹಗೊಂಡ ಜ್ಞಾನ ವಿಜ್ಞಾನಗಳು ಪ್ರಸಾರ ರೂಪದ ವಾಹಿನಿಗಳಲ್ಲಿ ಕೆಳಗಿಳಿದು ಸಂಚರಿಸಿ ಜನಸಾಮಾನ್ಯರ ಜೀವನಪ್ರವೇಶಮಾಡಿ, ಅಲ್ಲಿಯ ಮತಮೌಢ್ಯಾದಿ ಅಜ್ಞಾನವನ್ನು ಅಪಹರಿಸಿ ವೈಜ್ಞಾನಿಕ ದೃಷ್ಟಿ ಮತ್ತು ವಿಚಾರಬುದ್ಧಿಗಳನ್ನು ಸ್ಥಾಪಿಸದಿದ್ದರೆ, ರಾಜಕೀಯ ಮಾತ್ರವಾಗಿರುವ ನಮ್ಮ ಸ್ವಾತಂತ್ರ್ಯವು ಸಾಂಸ್ಕೃತಿಕವಾಗಿಯೂ ಸಫಲವಾಗುವುದು ಬರಿಯ ದಿಗಂತಾದರ್ಶವಾಗಿಯೆ ಉಳಿಯಬೇಕಾಗುತ್ತದೆ. ಬಹುಭಾಷೆ, ಬಹುಮತ, ಅನೇಕಾಚಾರ ಮೊದಲಾದ ಅಸಂಖ್ಯ ಭೇದಗಳಿಂದ ಕೂಡಿರುವ ನಮ್ಮ ರಾಷ್ಟ್ರಜೀವನ, ತನ್ನ ಏಕತ್ವವನ್ನು ರಕ್ಷಿಸಿಕೊಂಡು ಹೋಗಬೇಕಾದರೆ ವಿಜ್ಞಾನ ದೃಷ್ಟಿಯ ಮತ್ತು ವಿಚಾರಬುದ್ಧಿಯ ಆಧಾರದ ಮೇಲೆ ನಿಲ್ಲುವ ಮನುಜಮತಕ್ಕೂ ಮತ್ತು ವಿಶ್ವ ಪಥಕ್ಕೂ ನಮ್ಮ ಜನವನ್ನು ತಿರುಗಿಸುವುದು ಅತ್ಯಂತ ಆವಶ್ಯಕ. ಸುಮಾರು ಮೂವತ್ತು ವರ್ಷಗಳ ಹಿಂದೆ ನನ್ನ ಲೇಖನಿಯಿಂದ ಹೊಮ್ಮಿದ ಒಂದು ಕವನ ನನ್ನ ಹೃದಯದ ಆ ಆಕಾಂಕ್ಷೆಯನ್ನು ಸಮರ್ಥವಾಗಿ ಘೋಷಿಸುತ್ತದೆ. ನಿಮ್ಮ ಕ್ಷಮೆ ಬೇಡಿ, ಅನುಮತಿ ಪಡೆದು ಅದನ್ನು ಓದುತ್ತೇನೆ: ಕಿವಿಗೊಟ್ಟು ಮಾತ್ರವಲ್ಲ, ಎದೆಗೊಟ್ಟು ಆಲೈಸುವಿರೆಂದು ಆಶಿಸುತ್ತೇನೆ;

**ಗುಡಿ ಚರ್ಚು ಮಸಜೀದಿಗಳ ಬಿಟ್ಟು ಹೊರಬನ್ನಿ,**
**ಬಡತನವ ಬುಡಮುಟ್ಟ ಕೀಳ ಬನ್ನಿ:**
**ಮೌಢ್ಯತೆಯ ಮಾರಿಯನು ಹೊರದೂಡತನ್ನಿ,**

ವಿಜ್ಞಾನ ದೀವಿಗೆಯ ಹಿಡಿಯ ಬನ್ನಿ:
ಓ ಬನ್ನಿ, ಸೋದರರೆ, ಬೇಗ ಬನ್ನಿ!

ಅದೊ ನೋಡಿ, ರಷ್ಯಾ ಜಪಾನು ತುರ್ಕಿಗಳೆಲ್ಲ
ಪೊರೆಗಳಚಿ ಹೊರಟಿಹವು ಹೊಸ ಪಯಣಕೆ;
ಬೆಳಗಿಹರು ನೆತ್ತರೆಣ್ಣೆಯ ತಿಳಿವಿನುರಿಯಲ್ಲಿ
ಕಿಚ್ಚಿಟ್ಟು ಹಳೆ ಕೊಳಕು ಬಣಗು ತೃಣಕೆ:
ಓ ಬನ್ನಿ, ಸೋದರರೆ, ರಾಷ್ಟ್ರರಣಕೆ!

ಸಿಲುಕದಿರಿ ಮತವೆಂಬ ಮೋಹದಜ್ಞಾನಕ್ಕೆ;
ಮತಿಯಿಂದ ದುಡಿಯಿರೈ ಲೋಕಹಿತಕೆ.
ಆ ಮತದ ಈ ಮತದ ಹಳೆಮತದ ಸಹವಾಸ
ಸಾಕಿನ್ನು ಸೇರಿರೈ ಮನುಜ ಮತಕೆ:
ಓ ಬನ್ನಿ, ಸೋದರರೆ, ವಿಶ್ವ ಪಥಕೆ!

ಮನುಜ ಮತ, ವಿಶ್ವ ಪಥ, ವಿಜ್ಞಾನ ದೃಷ್ಟಿ, ವಿಚಾರ ಬುದ್ಧಿ–ಇವು ನಮ್ಮ ಜನಹೃದಯದ ನಿತ್ಯಮಂತ್ರಗಳಾಗುವಂತೆಯೂ ನಮ್ಮ ಜನಮನದ ಧ್ಯೇಯೋಕ್ತಿಗಳಾಗುವಂತೆಯೂ ಮಾಡುವ ಕರ್ತವ್ಯ ವಿಶ್ವವಿದ್ಯಾ ನಿಲಯದ ಪ್ರಸಾರಾಂಗದ ಪಾಲಿಗೆ ಸೇರಿದ್ದು. ವಿಜ್ಞಾನ, ಸಾಹಿತ್ಯ, ಇತಿಹಾಸ, ರಾಜ್ಯಶಾಸ್ತ್ರ, ಮನಶ್ಶಾಸ್ತ್ರ, ತತ್ವಶಾಸ್ತ್ರ ಸಮಾಜಶಾಸ್ತ್ರ ಮೊದಲಾದ ಎಲ್ಲ ಶಾಸ್ತ್ರವಿಷಯದ ಅಧ್ಯಾಪಕರೂ ಈ ನಿಟ್ಟಿನಲ್ಲಿ ದುಡಿಯಬೇಕಾಗಿದೆ. ದೂರ, ಎತ್ತರದಲ್ಲಿ, ಸಾಮಾನ್ಯರಿಗೆ ಎಟುಕದ ಎತ್ತರದಲ್ಲಿ, ಸಾಮಾನ್ಯರಿಗೆ ನಿಲುಕದ ದೂರದಲ್ಲಿ, ಸಂಸ್ಕೃತದ ದುರ್ಗಮ ಶಿಖರಗಳಲ್ಲಿ, ಇಂಗ್ಲೀಷಿನ ಕಂಟಕಮಯ ಔನ್ನತ್ಯಗಳಲ್ಲಿ, ಅನ್ಯಭಾಷೆಗಳ ದುರ್ಜ್ಞೇಯ ಗುಹಾಂಗಣಗಳಲ್ಲಿ, ಶೀಲಾಪೀಠಸ್ಥವೋ ಸಿಂಹಾಸನಸ್ಥವೋ ತಪೋಮಗ್ನವೋ ಆಗಿರುವ ವಿಶ್ವವಿದ್ಯೆಯನ್ನು ನಾಡಿನ ಮೂಲೆಮೂಲೆಯ ಗುಡಿಸಲುಗಳಿಗೂ ಕೊಂಡೊಯ್ಯುವ ಅವಶ್ಯಕಾರ್ಯದಲ್ಲಿ ವಿಶ್ವವಿದ್ಯಾನಿಲಯಗಳು ತಮ್ಮ ಗರ್ವೋನ್ನತ ಉದಾಸೀನತೆಯನ್ನು ಕಿತ್ತೊಗೆದು, ಕಿರೀಟಶಿರ ತಾಟಸ್ಥ್ಯ ಧೋರಣೆಯಿಂದ ಪಾರಾಗಿ, ಅಜ್ಞಾನ ಮೌಢ್ಯ ಅವಿವೇಕಗಳ ವಿರುದ್ಧ ನಾವು ಹೂಡುವ ಯುದ್ಧದಲ್ಲಿ ಇದು ತುರ್ತುಪರಿಸ್ಥಿತಿಯೆಂದು ಭಾವಿಸಿ, ಅಚಲ ನಿಷ್ಠೆಯಿಂದ ಅವಿಲಂಬವಾಗಿ ಮುಂದುವರಿಯಲಿ ಎಂದು ನಾನು ಈ ಸಂದರ್ಭದಲ್ಲಿ ಕವಿಹೃದಯ ಕಾತರತೆಯಿಂದ ವಿಜ್ಞಾಪಿಸುತ್ತೇನೆ.

ಮೇಲೆ ಹೇಳಿದ ಆ ಎಲ್ಲ ಕಾರ್ಯಸಾಧನೆಯ ಸಾಫಲ್ಯಕ್ಕಾಗಿ ಆಯಾ ಪ್ರದೇಶದ ರಾಜ್ಯಗಳಲ್ಲಿ ಆಯಾ ಪ್ರಾದೇಶಿಕ ಭಾಷೆಯನ್ನು ವಿದ್ಯಾಭ್ಯಾಸ ಕ್ರಮದಲ್ಲಿ ಪ್ರಪ್ರಥಮ

ಜ್ಞೇಯ = the state of being cognizable or perceptible – ಕಿಟ್ಟೆಲ್

ಸ್ಥಾನಕ್ಕೆ ಎತ್ತಬೇಕು. ಇಂಗ್ಲಿಷನ್ನು ಈಗಿರುವ ಬಲಾತ್ಕಾರದ ಸ್ಥಾನದಿಂದ ತೆಗೆದು ಹಾಕಿ ಐಚ್ಛಿಕಸ್ಥಾನದಲ್ಲಿಡಬೇಕು. ಪ್ರಾದೇಶಿಕ ಭಾಷೆಯೇ ವಿದ್ಯಾಭ್ಯಾಸದ ಎಲ್ಲ ಮಟ್ಟಗಳಲ್ಲಿಯೂ ಶಿಕ್ಷಣ ಮಾಧ್ಯಮವಾಗಬೇಕು. ತಾನು ಕೈಕೊಳ್ಳಲಿರುವ ಪ್ರಚಂಡ ಕಾರ್ಯಕ್ಕೆ ಸಮರ್ಪಕವಾಗಿ ಅರ್ಹವಾಗುವಂತೆ ಪ್ರಾದೇಶಿಕಭಾಷೆಯನ್ನು ನಿಶಿತ ಗೊಳಿಸಬೇಕು; ನಿಷ್ಕೃಷ್ಟಗೊಳಿಸಬೇಕು; ಸುಲಭಗೊಳಿಸಬೇಕು; ಸಾಮಾನ್ಯಗೊಳಿಸಬೇಕು: ಜಗತ್ತಿನ ಯಾವ ಜ್ಞಾನವಾಗಲಿ ವಿಜ್ಞಾನವಾಗಲಿ ಪ್ರಾದೇಶಿಕ ಭಾಷೆಯಲ್ಲಿ ಲಭಿಸುವಂತೆ ವಿಶ್ವವಿದ್ಯಾನಿಲಯಗಳು ತಮ್ಮ ಪ್ರವೀಣ ಅಧ್ಯಾಪಕ ವರ್ಗದವರಿಂದ ಗ್ರಂಥರಚನೆ ಮಾಡಿಸುವ ಸಕ್ರಮ ಕಾರ್ಯಕ್ರಮಗಳನ್ನು ಕೈಗೊಳ್ಳಬೇಕು; ಅಧ್ಯಾಪಕವರ್ಗದ ಸ್ವಭಾಷಾ ಪ್ರೇಮ ಒಂದರ ಮೇಲೆಯೇ ಭಾರಹಾಕದೆ ಸ್ಥಾನಮಾನ ಧನಾದಿ ಲೌಕಿಕ ಆಕರ್ಷಣೆಗಳಿಂದಲೂ ಅವರು ಪ್ರೋತ್ಸಾಹಿತರಾಗುವಂತೆ ಮಾಡಬೇಕು. ಆಗ ಮಾತ್ರವೇ ನಮ್ಮ ಪ್ರಜಾಸತ್ತೆ, ಜಗತ್ತಿನಲ್ಲೆಲ್ಲ ಅತ್ಯಂತ ಹಿರಿಯದೆಂದು ಪರಿಗಣಿತವಾಗಿರುವ ಭಾರತದ ಪ್ರಜಾಸತ್ತೆ, ತನ್ನ ಸರ್ವತೋಮುಖವಾದ ಅಭ್ಯುದಯವನ್ನು ಶೀಘ್ರದಲ್ಲಿಯೆ ಸಾಧಿಸಲು ಸಮರ್ಥವಾಗುತ್ತದೆ; ಸರ್ವೋದಯ ಸಿದ್ಧಾಂತವು ಸಾಮಾನ್ಯ ಜನಜೀವನದಲ್ಲಿ ನಿತ್ಯಧರ್ಮವಾಗಿ ಪರಿಣಮಿಸಿ ಲೋಕ ಕಲ್ಯಾಣವೂ ಸಾಧಿತವಾಗುತ್ತದೆ.

ಮಹಾಶಯರೆ, ತಿಳಿದವರಾದ ತಮ್ಮ ಮುಂದೆ ಇದನ್ನೆಲ್ಲ ಹೇಳಿ, ಬೆಟ್ಟಕ್ಕೆ ಕಲ್ಲು ಹೊತ್ತೆನೋ ಏನೋ? ಏನಾದರಾಗಲಿ ನನ್ನ ಹೃದಯವನ್ನು ಸಮಹೃದಯರ ಮುಂದೆ ತೋಡಿಕೊಂಡಿದ್ದೇನೆ ಎಂಬ ತೃಪ್ತಿ ನನ್ನದಾಗಿದೆ. ಪ್ರಶಾಂತರಾಗಿ ಕುಳಿತು, ಆಲಿಸಿ, ನನಗೆ ಆ ತೃಪ್ತಿಯನ್ನೊದಗಿಸಿದುದಕ್ಕಾಗಿ ತಮ್ಮೆಲ್ಲರಿಗೂ ನನ್ನ ಹೃತ್ಪೂರ್ವಕವಾದ ಕೃತಜ್ಞತೆಯನ್ನು ಅರ್ಪಿಸುತ್ತೇನೆ.

ಈ ಘನ ಗೌರವ ಪದವಿಯನ್ನಿತ್ತು ನನ್ನನ್ನು ಸತ್ಕರಿಸಿದುದಕ್ಕಾಗಿ ಕರ್ಣಾಟಕ ವಿಶ್ವವಿದ್ಯಾನಿಲಯವನ್ನೂ, ವಿಶೇಷತಃ ಅದರ ಉಪಕುಲಪತಿಗಳಾಗಿರುವ ನನ್ನ ಸನ್ಮಿತ್ರ ಡಾ. ಪಾವಟೆಯವರನ್ನೂ ವಂದಿಸಿ ಬೀಳ್ಕೊಳ್ಳುತ್ತೇನೆ; ನಮಸ್ಕಾರ.

ಸಿರಗನ್ನಡಂಗೆಲ್ಗೆ! ಜಯ್ ಹಿಂದ್! ಜಯ್ ಜಗತ್!

# ಬಹುಜಿಹ್ವಾ ಭಾರತಿಗೆ ಐಕ್ಯತೆಯ ಆರತಿ[೧]

**ಬ್ರಹ್ಮಸ್ವರೂಪಾ ಪರಮಾ ಜ್ಯೋತಿರೂಪಾ ಸನಾತನೀ**
**ಸರ್ವವಿದ್ಯಾಧಿದೇವಿ ಯಾ ತಸ್ಯೈ ವಾಣ್ಯೈ ನಮೋ ನಮಃ**
**ಯಯಾ ವಿನಾ ಜಗತ್ ಸರ್ವಂ ಶಶ್ವಜ್ಜೀವನ್ ಮೃತಂ ಭವೇತ್**
**ಜ್ಞಾನಾಧಿದೇವೀ ಯಾ ತಸ್ಯೈ ಸರಸ್ವತ್ಯೈ ನಮೋ ನಮಃ**
**ಯಯಾ ವಿನಾ ಜಗತ್ ಸರ್ವಂ ಮೂಕಮುನ್ಮತ್ತವತ್ ಸದಾ**
**ಯಾ ದೇವೀ ವಾಗಧಿಷ್ಠಾತ್ರಿ ತಸ್ಯೈ ವಾಣ್ಯೈ ನಮೋ ನಮಃ**
**ಮಾತರ್ ಮಾತರ್ ನಮಸ್ತೇ**
**ದಹ ದಹ ಜಡತಾಂ**
**ದೇಹಿ ಬುದ್ಧಿಂ ಪ್ರಶಾಂತಾಂ!**

ವಾಗ್ದೇವಿಗೆ ನಮಸ್ಕಾರ, ಸಹೃದಯ ಬಂಧು ಭಗಿನಿಯರಿಗೆ ನಮಸ್ಕಾರ, ಸೋದರ ಸಾಹಿತಿಗಳಿಗೆ ನಮಸ್ಕಾರ:

ಕರ್ಣಾಟಕದ ಪರವಾಗಿ, ಕನ್ನಡಿಗರ ಪರವಾಗಿ, ಸರ್ವಭಾಷಾಮಯೀ ಕನ್ನಡ ಸರಸ್ವತಿಯ ಪರವಾಗಿ ಭಾರತ ಭಾರತಿಯ ಮತ್ತು ವಿಶ್ವಭಾರತಿಯ ಶ್ರೀ ಚರಣಗಳಿಗೆ ವಂದಿಸುತ್ತೇನೆ.

ಯಾರ ಘನ ಔದಾರ್ಯದಿಂದ ಮತ್ತು ಸುದೂರದರ್ಶಿತ್ವದಿಂದ ವಾಙ್ಮಯ ಲೋಕ ಕಲ್ಯಾಣಕಾರಿಯಾಗಿರುವ 'ಭಾರತೀಯ ಜ್ಞಾನಪೀಠ' ಸಂಸ್ಥಾಪನೆಯಾಯಿತೋ ಆ ಪುಣ್ಯಚೇತನಗಳಿಗೆ ವಂದನಾರ್ಪಣೆ ಮಾಡಿ, ಅವರನ್ನು ಹೃತ್ಪೂರ್ವಕವಾಗಿ ಅಭಿನಂದಿಸುವುದು ನನ್ನ ಮೊದಲ ಕರ್ತವ್ಯ. ಏಕೆಂದರೆ ಸ್ವಾತಂತ್ರ್ಯಾನಂತರ ಭರತ ಖಂಡದ ಭೌಗೋಲಿಕ ಸಮಗ್ರತೆಯನ್ನೂ ಐಕ್ಯತೆಯನ್ನೂ ನಮ್ಮ ರಾಜ್ಯಾಂಗ ಸಂವಿಧಾನವು ತನ್ನ ರಾಜಕೀಯ ಶಕ್ತಿಬಾಹುಗಳಿಂದ ಬಂಧಿಸಿರುವಂತೆ, ಈ ಭಾರತೀಯ ಜ್ಞಾನಪೀಠ ಸಂಸ್ಥೆಯು ದೇಶಭಾಷಾ ರೂಪಿಯಾದ ತನ್ನ ಚತುರ್ದಶ ಪ್ರೇಮ ಬಾಹುಗಳಿಂದ, ಸಾಂಸ್ಕೃತಿಕವಾಗಿ, ಸಮಗ್ರ ಭರತಖಂಡವನ್ನೂ ಒಂದುಗೂಡಿಸಲು ತಪಸ್ವಿಯಾಗಿ ನಿಂತಿದೆ. ಅಖಿಲ ಭಾರತೀಯವಾದ ಈ ಸಮಗ್ರತೆ ಐಕ್ಯತೆಗಳು ರಾಜಕೀಯವಾಗಿ ಅರ್ವಾಚೀನವಾದುವಾದರೂ ಧಾರ್ಮಿಕವಾಗಿ ಮತ್ತು ಸಾಂಸ್ಕೃತಿಕವಾಗಿ ಪ್ರಪ್ರಾಚೀನವಾದುವುಗಳಾಗಿವೆ. ವೇದೋಪನಿಷತ್ತು ದರ್ಶನಾದಿಗಳಿಂದ ಪರಿಪುಷ್ಟಿಗೊಂಡ ಆ ಐಕ್ಯತೆ, ಅತ್ಯಂತಛಿದ್ರವಿಚ್ಛಿದ್ರಕವಾದ ರಾಜಕೀಯ ಪರಿಸ್ಥಿತಿಯಲ್ಲಿಯೂ, ಒಂದಿನಿತೂ

[೧] ಜ್ಞಾನಪೀಠ ಪ್ರಶಸ್ತಿಯನ್ನು ಸ್ವೀಕರಿಸಿ ಮಾಡಿದ ಭಾಷಣ. ನವದೆಹಲಿ: ಡಿಸೆಂಬರ್ ೨೦, ೧೯೬೮

ಚ್ಯುತಿಗೊಳ್ಳದ ರೀತಿಯಲ್ಲಿ ರಕ್ಷಿತವಾಗಿತ್ತು, ವಾಲ್ಮೀಕಿ ವ್ಯಾಸಾದಿ ಋಷಿ ಕವಿಗಳಿಂದ, ರಾಮಾಯಣ ಮಹಾಭಾರತಾದಿ ದಿವ್ಯ ಕಾವ್ಯ ಕೃತಿಗಳ ಶಿಲ್ಪ ಮಹಿಮೆಯಿಂದ . ಆ ದೃಷ್ಟಿಯಿಂದ ನೋಡಿದರೆ ಅಖಿಲ ಭಾರತದ ಸಮಗ್ರತೆ ಐಕ್ಯತೆಗಳನ್ನು ಅನಂತಕಾಲವೂ ಸಂರಕ್ಷಿಸುವ ನಿತ್ಯಶಕ್ತಿ ಎಂದರೆ ಸಾಹಿತ್ಯ ಶಕ್ತಿಯಾಗಿದೆ. ಆವಿರ್ಭವಿಸಿರುವ ಅಂತಹ ಸಾಹಿತ್ಯ ಶಕ್ತಿದೇವತೆಗೆ ಅವಿಚ್ಛಿನ್ನವಾಗಿ ಆರಾಧನೆ ನಡೆದು ಆಕೆಯನ್ನು ನಿರಂತರವೂ ಜಾಗ್ರತವಾಗಿರಿಸುವ ಅಗ್ನಿವೇದಿಕೆಯಾಗಿದೆ ಈ ಜ್ಞಾನಪೀಠ!

ಆದ್ದರಿಂದಲೆ ಈ ಜ್ಞಾನಪೀಠ ಸಂಸ್ಥಾಪನೆಗೆ ಕಾರಣರಾದ ಉದಾತ್ತ ಮಹನೀಯರನ್ನು ನನ್ನ ಆದ್ಯಕರ್ತವ್ಯವಾಗಿ ವಂದಿಸಿದ್ದು, ಮತ್ತು ಅಭಿನಂದಿಸಿದ್ದು. ಈ ಸಂದರ್ಭದಲ್ಲಿ ನನಗೆ, ಅನೇಕ ವರ್ಷಗಳ ಹಿಂದೆ, ವಿಶ್ವವಿದ್ಯಾನಿಲಯವೊಂದರ ಪ್ರತಿಷ್ಠಾಪನೆಗಾಗಿ ವಿಪುಲ ಧನಾರ್ಪಣೆ ಮಾಡಿದ ಮಹಾದಾತೃವೊಬ್ಬರ ನೆನಪಿಗಾಗಿ ರಚಿಸಿದ್ದ ಅಷ್ಟಷಟ್ಪದಿ ಒಂದರ ನೆನಪಾಗುತ್ತಿದೆ. ಅದು ಈ ಸಂದರ್ಭಕ್ಕೆ ಇನ್ನೂ ಹೆಚ್ಚು ಔಚಿತ್ಯಪೂರ್ಣವಾಗಿ ಅನ್ವಯವಾಗುವುದರಿಂದ ಅದನ್ನಿಲ್ಲಿ ತಮಗೆ ನಿವೇದಿಸಿದರೆ ತಾಳ್ಮೆಯಿಂದ ಆಲಿಸುವಿರೆಂದು ನಂಬುತ್ತೇನೆ:

**ಸರಸತಿಯ ಬೀಣೆಗೊದಗಿಸೆ ತಂತಿಯಂ, ಧನ್ಯೆ**
**ದಲ್ ಲಕ್ಷ್ಮಿ! ಲೌಹನಿನದಮೆ ವೈಣರವಮಾಗಿ**
**ಪೊರೆವುದು ಚಿರಂತನದ ಸುರಗಾನದಿಂ, ತ್ಯಾಗಿ,**
**ನಿನ್ನ ಜಸಮಂ ವಿಸ್ಮೃತಿಯ ಮೃತ್ಯುವಿಂ. ಮುನ್ನೆ**
**ವಿಕ್ರಮಾರ್ಜನವಿಜಯಮಂ ಬರೆದು ಪಂಪಕವಿ**
**ಕೊರೆದನರಿಕೇಸರಿಯ ಪೆಸರಂ, ಚಿರಂ ಬಾಳ್ವ**
**ಕೃತಿಶಿಲಾಶಾಸನದಿ: ಕಾವ್ಯವೋದುವ ಕೇಳ್ವ**
**ಕನ್ನಡಿಗರೆಲ್ಲರ ಕೃತಜ್ಞತೆಗೆ, ಚಂದ್ರ ರವಿ**
**ಪೊಳೆವನ್ನೆಗಂ, ಪಾತ್ರನಾಗಿರ್ಪನಾ ನೃಪತಿ,**
**ತನ್ನುಳಿದ ಕಜ್ಜಗಳ್ ತನ್ನ ರಾಜ್ಯಂಗೂಡಿ**
**ಪೇಳೆ ಪೆಸರಿಲ್ಲದಾಗಿರ್ಪೊಡಂ. ದಿವ್ಯಕೃತಿ,**
**ಹೇ ಧನಿಯೆ, ನಿನ್ನ ದಾನವನಮೃತಮಂ ಮಾಡಿ**
**ನಿನ್ನಾತ್ಮಕಮೃತ ತೃಪ್ತಿಯನೀವುದಾವಗಮ್:**
**ನಿನಗಕ್ಕೆ ಆ ಸೈಪಿನಾ ಶಾಂತಿಯಾ ಸೊಗಮ್!**

ಕೊಳಲಿಗೆ ಅನೇಕ ಕಣ್ಣುಗಳಿರುವಂತೆ ಭಾರತಿಗೆ ಬಹು ಜಿಹ್ವೆಗಳಿವೆ.ಪೀಪಿ ಊದುವ ಹುಡುಗನಿಗೆ ಕೊಳಲಿಗೆ ಅನೇಕ ರಂಧ್ರಗಳಿರುವುದು ತೊಂದರೆಯ ವಿಷಯವಾಗುತ್ತದೆ; ಆದರೆ ವೇಣುವಾದನ ನಿಪುಣನಿಗೆ ಆ ರಂಧ್ರಗಳ ಅನೇಕತೆಯೆ ಸಂಗೀತದ ಸ್ವರಮೇಲ ಮಾಧುರ್ಯಕ್ಕೆ ಅವಶ್ಯ ಸಾಧನವಾಗುತ್ತದೆ. ಸ್ವಾತಂತ್ರ್ಯಾನಂತರ ಭಾರತದಲ್ಲಿ ಭಾಷಾನುಗುಣ ರಾಜ್ಯಗಳ ರಚನೆಯಾಗಿರುವುದು ಕೆಲವು ಅರೋಚಿಭೀರುಗಳಿಗೆ ರುಚಿಸುತ್ತಿಲ್ಲ; ಹಿಡಿಸುತ್ತಿಲ್ಲ; ಕೆಲವರಂತೂ

ದಿಗಿಲುಗೊಂಡಿದ್ದಾರೆ. ಹೋರಾಡಿ ಸಂಪಾದಿಸಿದ ಸ್ವಾತಂತ್ರ್ಯಕ್ಕೆ ಸ್ವಭಾಷಾಪ್ರೇಮದ ಅತಿರೇಕದಿಂದ ಉಂಟಾಗಬಹುದಾದ ಅನೈಕ್ಯತೆ ಎಲ್ಲಿ ಧಕ್ಕೆ ತರುತ್ತದೆಯೊ ಎಂದು ಅವರು ಹೆದರಿದ್ದಾರೆ. ಅಂತಹರಿಗಿರುವ ಭಯವನ್ನು ಸಂಪೂರ್ಣ ಹೋಗಲಾಡಿಸುತ್ತದೆ ಜ್ಞಾನಪೀಠದ ಇಂದಿನ ಸಮಾರಂಭ.

ಜ್ಞಾನಪೀಠದ ಈ ವಿಶಾಲ ವೇದಿಕೆಯಲ್ಲಿ ಭಾರತೀಯ ಭಾಷೆಗಳೆಲ್ಲ ತಮ್ಮ ತಮ್ಮ ಸ್ನೇಹಹಸ್ತಗಳನ್ನು ಚಾಚಿ, ಕೌಟುಂಬಿಕ ಸ್ವರೂಪದ ಪರಸ್ಪರ ಭಿನ್ನತೆ ವಿವಾದಗಳನ್ನೆಲ್ಲ ಹಿಂದಿಕ್ಕಿ, ಐಕ್ಯತೆಯ ಆರತಿಯನ್ನೆತ್ತಿ ಭರತಮಾತೆಗೆ ಪೂಜೆ ಸಲ್ಲಿಸುತ್ತಿವೆ. ಆಚೆಯ ವರುಷ ಕೇರಳದೇವಿಗೂ, ಹೋದವರುಷ ವಂಗದೇವಿಗೂ ಸಲ್ಲಿಸಿದ ಗೌರವವನ್ನು ಈ ವರ್ಷ ಕರ್ಣಾಟಕ ಸೌರಾಷ್ಟ್ರದೇವಿಯರಿಗೆ ಒಟ್ಟಿಗೆ ಸಲ್ಲಸುತ್ತಿವೆ. ಹಾಗೆಯೆ, ಮುಂಬರುವ ಸಂವತ್ಸರಗಳಲ್ಲಿ ಒಂದಾದಮೇಲೊಂದರಂತೆ ಉಳಿದ ಇತರ ಭಾಷಾದೇವಿಯರಿಗೂ ಈ ಗೌರವ ಸಲ್ಲುವುದರಲ್ಲಿ ಸಂದೇಹವಿಲ್ಲ.

ನಾನು ರಾಜ್ಯದೃಷ್ಟಿಯಿಂದ ಕರ್ಣಾಟಕದವನು; ಭಾಷಾದೃಷ್ಟಿಯಿಂದ ಕನ್ನಡಿಗನು; ಆದರೆ ಸಂಸ್ಕೃತಿಯ ದೃಷ್ಟಿಯಿಂದ ಮತ್ತು ರಾಷ್ಟ್ರದೃಷ್ಟಿಯಿಂದ ಭಾರತೀಯನು. ನನ್ನ ಕರ್ಣಾಟಕತ್ವ ಭಾರತೀಯತ್ವಕ್ಕೆ ಎಂದಿಗೂ ಎದುರು ನಿಲ್ಲುವುದಿಲ್ಲ. ಕರ್ನಾಟಕತ್ವ ಭಾರತೀಯತ್ವಕ್ಕೆ ಎಂದೆಂದಿಗೂ ಅವಿರೋಧಿಯಾಗಿ ಸೇವೆ ಸಲ್ಲಿಸುವುದರಿಂದಲೇ ತನ್ನ ಅಸ್ತಿತ್ವವನ್ನು ರಕ್ಷಿಸಿಕೊಳ್ಳುತ್ತದೆ. ಭಾರತಿ ತಾಯಿ; ಕರ್ಣಾಟಕ ಮಗಳು. ಭಾರತಕ್ಕೆ ಧಕ್ಕೆ ಒದಗಿದರೆ ಕರ್ಣಾಟಕ ಉಳಿಯುವುದಿಲ್ಲ; ಮಗಳು ಕರ್ಣಾಟಕಕ್ಕೆ ಕೇಡಾದರೆ ತಾಯಿ ಭಾರತಮಾತೆ ಸಹಿಸುವುದಿಲ್ಲ. ಪರಸ್ಪರ ಕ್ಷೇಮರಕ್ಷಣೆಯಿಂದಲೆ ಸರ್ವರ ಕ್ಷೇಮವೂ ರಕ್ಷಿತವಾಗುತ್ತದೆ.

ಆದ್ದರಿಂದಲೆ ಕರ್ಣಾಟಕದ ಕವಿ 'ಜಯ ಹೇ ಕರ್ಣಾಟಕ ಮಾತೆ!' ಎಂದು ಹಾಡಿದಾಗ ಆ ಜಯಗಾಥೆಯನ್ನು 'ಜಯ ಭಾರತ ಜನನಿಯ ತನುಜಾತೆ!' ಎಂದೇ ಪ್ರಾರಂಭಿಸುತ್ತಾನೆ. ಮೊದಲು ಭಾರತದ ಜನನಿಗೆ ಜಯಕಾರ. ತನ್ನ ಗಾಥೆಯ ಒಂದೊಂದು ಪದ್ಯದ ಕೊನೆಯ ಚರಣವನ್ನೂ ಭಾರತದ ಏಕತ್ವ ರಕ್ಷಣೆಯ ಮಂತ್ರವನ್ನಾಗಿ ಘೋಷಿಸಿದ್ದಾನೆ: 'ರಾಘವ ಮಧುಸೂದನರವತರಿಸಿದ ಭಾರತ ಜನನಿಯ ತನುಜಾತೆ, ಜಯ ಹೇ ಕರ್ಣಾಟಕ ಮಾತೆ!' 'ಕಪಿಲ ಪತಂಜಲ ಗೌತಮ ಜಿನನುತ ಭಾರತ ಜನನಿಯ ತನುಜಾತೆ, ಜಯ ಹೇ ಕರ್ಣಾಟಕ ಮಾತೆ!' 'ನಾನಕ ರಾಮಾನಂದ ಕಬೀರರ ಭಾರತ ಜನನಿಯ ತನುಜಾತೆ, ಜಯ ಹೇ ಕರ್ಣಾಟಕ ಮಾತೆ!' 'ಚೈತನ್ಯ ಪರಮಹಂಸ ವಿವೇಕರ ಭಾರತ ಜನನಿಯ ತನುಜಾತೆ, ಜಯ ಹೇ ಕರ್ಣಾಟಕ ಮಾತೆ!' ಇಲ್ಲಿ ಕರ್ಣಾಟಕ ಮಾತೆಗೆ ತನ್ನದೇ ಆಗಿರುವ ಪ್ರತ್ಯೇಕ ಅಸ್ತಿತ್ವ ಇಲ್ಲ; ಸರ್ವದಾ ತಾಯಿ ಭಾರತಿಯ ಮಗಳಾಗಿಯೇ ಇರುವುದರಿಂದ ಮಾತ್ರ ಆಕೆಯ ಅಸ್ತಿತ್ವಕ್ಕೆ ರಕ್ಷೆಯೊದಗುತ್ತದೆ; ಅದರ ಪೋಷಣೆಗೆ ಅಮೃತಸಹಾಯ ಲಭಿಸುತ್ತದೆ. ಆದ್ದರಿಂದ ಭಾಷಾನುಗುಣ ರಾಜ್ಯರಚನೆಯಿಂದ ಭಾರತರಾಷ್ಟ್ರದ ಸಮಗ್ರತೆಗೆ ಭಂಗ

ಬರುತ್ತದೆ ಎಂಬುದು ಭ್ರಾಂತಿಯ ಮಾತಾಗುತ್ತದೆ; ರಚಿತವಾಗಿರುವ ಭಾಷಾ ರಾಜ್ಯಗಳನ್ನು ಮತ್ತೆ ಅಳಿಸಿ, ಭಾವೈಕ್ಯತೆಯನ್ನು ಸಾಧಿಸುತ್ತೇವೆ ಎನ್ನುವವರು ರಾಷ್ಟ್ರ ಕ್ಷೇಮವನ್ನು ಹಾನಿಗೀಡುಮಾಡುವ ದೇಶದ್ರೋಹಿಗಳಾಗುವುದರಲ್ಲಿ ಸಂದೇಹವಿಲ್ಲ.

ಕರ್ಣಾಟಕವನ್ನು 'ಭಾರತ ಜನನಿಯ ತನುಜಾತೆ' ಎಂದು ಹಾಡಿದ ಕವಿಯೇ 'ಭರತ ಭೂಮಿ ನನ್ನ ತಾಯಿ' ಎಂದೂ ಹಾಡಿದ್ದಾನೆ. 'ಮತದ ಬಿರುಕುಗಳನು ತೊರೆವೆ; ನುಡಿಗಳೊಡಕುಗಳನು ಮರೆವೆ; ತೊತ್ತ ತೊಡಕುಗಳನು ಬಿರಿವೆ; ಜೀವನವನೆ ದೇವಿಗೆರೆವೆ ಬಿಡುತೆ ಗುಡಿಯ ಕಟ್ಟಲು!' ಎಂದೂ ಹಾಡುತ್ತಾನೆ. ಕನ್ನಡದ ಕವಿಯಂತೆಯೆ ಇತರ ಎಲ್ಲ ಭಾರತೀಯ ಭಾಷೆಯ ಕವಿಗಳೂ ಹಾಡಿದ್ದಾರೆ ಎಂಬುದರಲ್ಲಿ ನನಗಿನಿತು ಶಂಕೆಯಿಲ್ಲ.

ಯಾವುದಾದರೂ ಭಾಷೆಯ ಯಾವನಾದರೂ ಒಬ್ಬ ಸಾಹಿತಿ ಸೌಹಾರ್ದಕ್ಕೆ ಭಂಗತರುವ ರೀತಿಯಲ್ಲಿ ಅಪಸ್ವರವೆತ್ತಿ ಹಾಡಿದ್ದರೆ, ಅದು ಖಂಡನೀಯ; ಅದು ಆಸುರೀ ಸಾಹಿತ್ಯವಾಗುತ್ತದೆ. ನಿಜವಾದ ಸಾಹಿತ್ಯ ಐಕ್ಯಕಾರಿ. ಸಾಮರಸ್ಯ, ಸಮನ್ವಯ, ಸಹಾನುಭೂತಿ, ಸರ್ವೋದಯಭಾವನೆ ಇವುಗಳನ್ನು ಪ್ರಚೋದಿಸುವುದು ದೈವೀ ಸಾಹಿತ್ಯದ ಲಕ್ಷಣ. ಅಸೂಯೆ, ದ್ವೇಷ, ಸ್ವಾರ್ಥತೆ, ನಿಷ್ಕರುಣೆ, ಅನುಕಂಪನರಾಹಿತ್ಯ ಇತ್ಯಾದಿಗಳನ್ನು ಕೆರಳಿಸುವ ಬರಹ ಆಸುರೀಸಾಹಿತ್ಯವಾಗುವುದರಿಂದ ಅದು ದಮನಯೋಗ್ಯವಾಗುತ್ತದೆ.

ಈ ವರ್ಷದ ಜ್ಞಾನಪೀಠ ಪ್ರಶಸ್ತಿ ನನ್ನ ಮತ್ತು ನನ್ನ ಮಿತ್ರರ ಹೆಸರಿಗೆ ವೈಯಕ್ತಿಕವಾಗಿ ಲಭಿಸಿದಂತೆ ಪ್ರಕಟವಾಗಿದ್ದರೂ, ವಾಸ್ತವವಾಗಿ, ಅದು ಕನ್ನಡದ ಮತ್ತು ಗುಜರಾತಿಯ ಎಲ್ಲ ಕವಿ, ಎಲ್ಲ ಸಾಹಿತಿ, ಎಲ್ಲ ಲೇಖಕರ ಸಮಷ್ಟಿ ಸತ್ತ್ವಕ್ಕೂ ಇಟ್ಟ ಕಿರೀಟವಾಗಿದೆ. ನಾನು ಮತ್ತು ಶ್ರೀ ಉಮಾಶಂಕರ ಜೋಷಿಯವರು ಕನ್ನಡ ಮತ್ತು ಗುಜರಾತಿಗಳ ವಿನಮ್ರ ಪ್ರತಿನಿಧಿಗಳಾಗಿ ಮಾತ್ರವೆ ಅದನ್ನು ಹೆಮ್ಮೆಯಿಂದ, ನಮ್ಮ ನಮ್ಮ ನುಡಿಗಳಿಗೆ ದೊರೆತ ಗೌರವಕ್ಕಾಗಿ ಹೆಮ್ಮೆಪಡುತ್ತಾ, ಶಿರವೆತ್ತಿ ನಿಲ್ಲಲು, ಶಿರಬಾಗಿ ಸ್ವೀಕರಿಸುತ್ತಿದ್ದೇವೆ. ಯಾವುದಾದರೂ ಒಂದು ಕಾಲಾವಧಿಯಲ್ಲಿ ಪ್ರಕಟವಾದ ಸಾಹಿತ್ಯ ಕೃತಿಗಳಲ್ಲಿ ಸರ್ವಶ್ರೇಷ್ಠವೆಂದು ಪರಿಗಣಿತವಾದುದಕ್ಕೆ ಪ್ರಶಸ್ತಿ ಸಲ್ಲುತ್ತದೆ ಎಂಬುದು ವ್ಯಾವಹಾರಿಕವಾಗಿ ಅನಿವಾರ್ಯವಾಗಿ ಅನುಸರಿಸಬೇಕಾಗಿರುವ ಒಂದು ವಿಧಾನವೆ ಹೊರತು, ಕೇವಲವೆನ್ನಬಹುದಾದ ನಿರಪೇಕ್ಷಸತ್ಯವಾಗಲಾರದು. ಆರಿಸಿಕೊಂಡ ಹಲವಾರು ಉತ್ತಮ ಗ್ರಂಥಗಳಲ್ಲಿ ಯಾವುದಾದರೊಂದನ್ನೆ ಸರ್ವೋತ್ತಮ ಎಂದು ನಿರ್ಣಯಿಸುವುದು ಎಷ್ಟು ಕಷ್ಟದ ಮತ್ತು ಚರ್ಚಾಸ್ಪದ ವಿಷಯವಾಗುತ್ತದೆ, ಎಂಬುದು ಎಲ್ಲ ಶ್ರೇಷ್ಠ ವಿಮರ್ಶಕರಿಗೂ ತಿಳಿದ ವಿಷಯವೆ ಆಗಿರುತ್ತದೆ. ಒಂದೊಂದು ದೃಷ್ಟಿಯಿಂದ ಪರಿಶೀಲಿಸಿದಾಗ ಒಂದೊಂದು ಸರ್ವಶ್ರೇಷ್ಠವಾಗಿ ತೋರಬಹುದು. ಪ್ರಶಸ್ತಿಪ್ರದಾನದ ಅವಶ್ಯ ನಿಯಮಕ್ಕೆ ಅನುಗುಣವಾಗಿ, ಎಲ್ಲವೂ ಶ್ರೇಷ್ಠವಾಗಿರಬಹುದಾದ ಆ ಉತ್ತಮ ಕೃತಿಗಳಲ್ಲಿ ಯಾವುದಾದರೊಂದನ್ನು 'ಸರ್ವೋತ್ತಮ' ಎಂದು

ನಿರ್ಣಯಿಸಲೇಬೇಕಾಗುತ್ತದೆ. ಅಂದ ಮಾತ್ರಕ್ಕೆ ಉಳಿದವುಗಳ ಶ್ರೇಷ್ಠತ್ವಕ್ಕೆ ಚ್ಯುತಿ ಬಂದಂತಾಗುವುದಿಲ್ಲ; ಅವುಗಳ ಹಿರಿಮೆಯನ್ನು ಅಲ್ಲಗಳೆದಂತಾಯಿತೆಂದು ತಿಳಿದವರಾರೂ ತಿಳಿಯುವುದಿಲ್ಲ.

ಕನ್ನಡ ಸಾಹಿತ್ಯ ಚರಿತ್ರೆ ಹತ್ತು ಹನ್ನೊಂದು ಶತಮಾನಗಳ ಪೂರ್ವದ ಕಾಲದಿಗಂತದಲ್ಲಿ ಕಣ್ಮರೆಯಾಗುತ್ತದೆ. ಹತ್ತನೆಯ ಶತಮಾನದಲ್ಲಿಯೆ, ಜಗತ್ತಿನ ಯಾವ ಮಹಾಕಾವ್ಯಗಳಿಗೂ ಹೆಗಲೆಣೆಯಾಗಿ ನಿಲ್ಲುವಂತಹ ಮಹಾಕಾವ್ಯ ಕೃತಿಗಳು ಕನ್ನಡದಲ್ಲಿ ಸೃಷ್ಟಿಯಾಗಿರುವ ವೈಭವದ ದೃಶ್ಯ ನಮ್ಮ ವಿಸ್ಮಿತ ನೇತ್ರಗಳಿಗೆ ಗೋಚರವಾಗುತ್ತದೆ. ಷೇಕ್ಸ್‌ಪಿಯರ್ ಮಹಾಕವಿ ಹುಟ್ಟುವುದಕ್ಕೆ ಆರುನೂರು ವರ್ಷಗಳ ಮುನ್ನವೆ ಮಹಾಕವಿ ಪಂಪ ಜನಿಸಿದ್ದನೆಂಬುದನ್ನು ನೆನೆದರೆ ನಿಮಗೆ ಕನ್ನಡ ಸಾಹಿತ್ಯದ ಹಿರಿಮೆ ಗರಿಮೆಗಳ ಸ್ವರೂಪ ಇನಿತಾದರೂ ಮನೋಗೋಚರವಾಗಬಹುದು. ಪಂಪನ ಮಹಾಕಾವ್ಯ ಕ್ರಿ.ಶ. ೯೪೩ ರಲ್ಲಿ. 'ಗದಾಯುದ್ಧ' ಕಾವ್ಯದ ಅದ್ಭುತ ಕವಿ ರನ್ನನ ಕಾಲ (ಕ್ರಿ.ಶ. ೯೯೩) ಹತ್ತನೆ ಶತಮಾನದ ಕೊನೆಯ ಭಾಗವಾದರೆ, 'ಪ್ಯಾರಡೈಸ್ ಲಾಸ್ಟ್' ಮಹಾಕಾವ್ಯದ ಕರ್ತೃ ಮಿಲ್ಟನ್ ಕವಿಯ ಕಾಲ (ಕ್ರಿ.ಶ. ೧೬೦೮) ಹದಿನೇಳನೆಯ ಶತಮಾನದ ಆದಿಭಾಗವಾಗುತ್ತದೆ.

ಕನ್ನಡದಂತೆಯೆ ನಮ್ಮ ಇತರ ಅನೇಕ ಪ್ರದೇಶ ಭಾಷೆಗಳೂ ಪ್ರಾಚೀನತೆಯಲ್ಲಿ, ಶ್ರೀಮಂತತೆಯಲ್ಲಿ, ಶಕ್ತಿಸಾಮರ್ಥ್ಯಗಳಲ್ಲಿ ಮೇಲುಮಟ್ಟದಲ್ಲಿವೆ ಎಂದು ನಾನು ನಂಬುತ್ತೇನೆ. ನನ್ನ ನಂಬುಗೆ ಬರಿಯ ಭಾವೋಲ್ಲಾಸ ವಿಷಯವಲ್ಲ, ವಾಸ್ತವವಾದದ್ದು; ಎಂಬುದಕ್ಕೆ ಈ ಜ್ಞಾನಪೀಠ ಸಾಕ್ಷಿ ಒದಗಿಸುತ್ತಿದೆ, ತನ್ನ ಪ್ರಾಚೀನ ಗ್ರಂಥಗಳ ಸಂಪಾದನೆ ಮತ್ತು ಪ್ರಕಾಶನಗಳಿಂದ. ಅದು ಪ್ರಕಟಿಸುತ್ತಿರುವ ಮತ್ತು ಪ್ರಕಟಿಸಲು ಕಾರ್ಯಕ್ರಮ ಹಾಕಿಕೊಂಡಿರುವ ಗ್ರಂಥಪಟ್ಟಿ ಎಂತಹರನ್ನೂ ವಿಸ್ಮಯ ಗೊಳಿಸುವಂತಹುದಾಗಿದೆ.

ಇಷ್ಟು ಪೂರ್ವಿಕತೆ ಮತ್ತು ಸಾಹಿತ್ಯಸಮೃದ್ಧಿ ಇರುವ ದೇಶಭಾಷೆಗಳು ರಾಜಕೀಯ ಕಾರಣಗಳಿಂದಲೂ ಜನಜೀವನದ ಅವನತಿಯಿಂದಲೂ ಕ್ರಮೇಣ ಅಪಗತಿಗಿಳಿದು, ಬ್ರಿಟಿಷರು ಭರತಖಂಡವನ್ನು ಆಕ್ರಮಿಸಿ ಆಳತೊಡಗಿದ ಮೇಲೆ, ಜ್ಞಾನ ವಿಜ್ಞಾನ ಸಂಪನ್ನವೂ ನವಜೀವನ ಸತ್ವಪೂರ್ಣವೂ ಆಗಿದ್ದು ಅಧಿಕೃತ ಭಾಷಾಪಟ್ಟಕ್ಕೂ ಏರಿದ ಇಂಗ್ಲಿಷಿನ ಮುಂದೆ ಕಾಂತಿಹೀನವಾಗಿ, ಬಡವಾಗಿ, ದಾಸಸ್ಥಾನಕ್ಕೆಬಿದ್ದು, ತನ್ನವರಿಂದಲೆ ಅವಹೇಳನಕ್ಕೂ ತಿರಸ್ಕಾರಕ್ಕೂ ಪಕ್ಕಾಗಿ ಮೂಲೆ ಸೇರಿದುವು. ಆ ದುರಂತಕಥೆ ಸಾಹಿತ್ಯ ಪ್ರೇಮಿಗಳೆಲ್ಲರಿಗೂ ತಿಳಿದ ವಿಷಯವೆ ಆಗಿದೆ. ಆ ಕತ್ತಲೆಯಲ್ಲಿಯೂ ದೈವೀಕೃಪೆಯಂತೆ ಹೊಳೆಯುತ್ತಿದ್ದ ಒಂದು ಆಶಾಕಿರಣವಿದ್ದುದು ನಮ್ಮ ಭಾಗ್ಯ; ಅದೆಂದರೆ, ರಾಜಕಾರಣಕ್ಕಲ್ಲದೆ ಮತಪ್ರಚಾರಕ್ಕಾಗಿ ಬಂದಿದ್ದ ಆ ವಿದೇಶಿಯರಲ್ಲಿ ಕೆಲವು ಮಹನೀಯರು ನಮ್ಮ ದೇಶಭಾಷೆಗಳ ಪ್ರಾಚೀನತೆಯನ್ನೂ ಅವುಗಳ ಮಹತ್ತನ್ನೂ ಗ್ರಹಿಸಿ, ತಮ್ಮ ತಪಸ್ಯಾಸದೃಶವಾದ ಅನ್ವೇಷಕ ಶ್ರಮದಿಂದ, ನಶಿಸಿ ಹೋಗುತ್ತಿದ್ದ ಹಳೆಯ ಓಲೆಯ ಗ್ರಂಥಗಳನ್ನು ಉದ್ಧರಿಸಿ, ಪ್ರಕಟಿಸಿ,

ವ್ಯಾಕರಣಾದಿಗಳನ್ನು ಬರೆದು, ನಿಘಂಟುಗಳನ್ನು ರಚಿಸಿ, ಅವುಗಳು ಸಂಪೂರ್ಣವಾಗಿ ಖಿಲವಾಗದಂತೆ ನೋಡಿಕೊಂಡಿದ್ದು.

ಸ್ವಾತಂತ್ರ್ಯಪೂರ್ವದಲ್ಲಿಯೆ ಪೂಜ್ಯ ಗಾಂಧೀಜಿಯೆ ಮೊದಲಾಗಿ ಅನೇಕ ದೇಶೀಯ ಮತ್ತು ವಿದೇಶೀಯ ವಿದ್ಯಾತಜ್ಞರು ನಮ್ಮ ದೇಶಭಾಷೆಗಳಿಗೆ ಶಿಕ್ಷಣ ಮಾಧ್ಯಮದಿಂದ ಹಿಡಿದು ಆಡಳಿತ ಭಾಷೆಯವರೆಗೆ ಬದುಕಿನ ಎಲ್ಲ ರಂಗಗಳಲ್ಲಿಯೂ ಪ್ರಥಮಸ್ಥಾನ ಕೊಡಬೇಕೆಂದು ವಾದಿಸಿದ್ದರು. ಇಂಗ್ಲಿಷಿಗೆ ಇತರ ವಿದೇಶೀ ಭಾಷೆಗಳೊಂದಿಗೆ ನಮ್ಮ ವಿದ್ಯಾಭ್ಯಾಸ ಕ್ರಮದಲ್ಲಿ ಐಚ್ಛಿಕಸ್ಥಾನ ಕೊಡಬೇಕೆಂಬುದೂ ಅವರ ಮತವಾಗಿತ್ತು.

ಆದರೆ ಸ್ವಾತಂತ್ರ್ಯಾನಂತರ ಸ್ವಾತಂತ್ರ್ಯಶಿಲ್ಪಿ ಬಾಪೂಜಿಯ ಎದೆಗೆ ಹೊಕ್ಕ ಗುಂಡು ಸ್ವಾತಂತ್ರ್ಯಪೂರ್ವದಲ್ಲಿದ್ದ ನಮ್ಮ ಅನೇಕ ಆದರ್ಶ, ಆಶಯ ಮತ್ತು ಧ್ಯೇಯಗಳ ಗುಂಡಿಗೆಗೂ ತಗುಲಿದಂತಿದೆ!

ಇಂಗ್ಲಿಷನ್ನು ಶಿಕ್ಷಣಮಾಧ್ಯಮ ಸ್ಥಾನದಿಂದ ತೆಗೆದುಹಾಕಿ ಪ್ರಾದೇಶಿಕ ಭಾಷೆಗಳಿಗೆ ಆ ಸ್ಥಾನ ನೀಡುವ ಮಾತಂತಿರಲಿ, ಇಂಗ್ಲಿಷನ್ನು ಈಗ ಅದಕ್ಕಿರುವ ಬಲಾತ್ಕಾರದ ಸ್ಥಾನದಿಂದ ಐಚ್ಛಿಕ ಸ್ಥಾನಕ್ಕೆ ಇಳಿಸಲೂ ಒಪ್ಪದೆ, ಅದಕ್ಕಿರುವ ಬಲಾತ್ಕಾರದ ಸ್ಥಾನವನ್ನೆ ಸರ್ವಕಾಲಕ್ಕೂ ಶಾಶ್ವತಗೊಳಿಸುವ, ನಾಡಿನ ಏಳಿಗೆಗೆ ಅತ್ಯಂತ ಹಾನಿಕರವಾದ, ನಿರ್ಣಯವನ್ನೂ ತ್ರಿಭಾಷಾ ಸೂತ್ರದ ಹೆಸರಿನಲ್ಲಿ ಕೈಕೊಳ್ಳುವ ಸಂಭವ ತೋರುತ್ತಿದೆ. ಅಂತಹ ಚಿರಂತನ ಅಪಾಯದಿಂದ ನಮ್ಮ ರಾಷ್ಟ್ರವನ್ನು ಪಾರುಮಾಡಿ ರಕ್ಷಿಸಲಿ ಎಂದು ಈ ಭಾರತೀಯ ಜ್ಞಾನಪೀಠ ಪವಿತ್ರವೇದಿಕೆಯಿಂದ ಶ್ರೀ ವಾಗ್ದೇವಿಗೆ ನಾನು ಪ್ರಾರ್ಥಿಸಿ ಮೊರೆಯಿಡುತ್ತೇನೆ.

ಕಳೆದ ಇಪ್ಪತ್ತು ಮೂವತ್ತು ವರ್ಷಗಳಿಂದ, ಇಂಗ್ಲಿಷ್ ಭಾಷಾ ಸಾಹಿತ್ಯದ ಪ್ರೇರಣೆಯಿಂದಲೆ, ನಮ್ಮ ದೇಶಭಾಷೆಗಳು ತಮ್ಮ ಗತಪೂರ್ವದ ಸಂಸ್ಕೃತಿಯ ಪುನರುಜ್ಜೀವನದೊಂದಿಗೆ ನವೀನ ಪ್ರಪಂಚದ ಜ್ಞಾನ ವಿಜ್ಞಾನ ಸಂಸ್ಕೃತಿಗಳಿಂದ ಉತ್ತೇಜಿತವಾಗಿ, ಸಶಕ್ತವಾಗಿ ಊರ್ಜಿತಗೊಂಡಿವೆ; ದಿನದಿನವೂ ಮೇಲಮೇಲಕ್ಕೇರುತ್ತವೆ. ಕೆಲವು ಭಾಷೆಗಳಲ್ಲಿ, ಅದರಲ್ಲಿಯೂ ಸಾಹಿತ್ಯಕ್ಷೇತ್ರದಲ್ಲಿ, ಅಲ್ಪಸ್ ಪರ್ವತ ಶಿಖರಗಳನ್ನು ನಾಚಿಸುವ ಹಿಮಾಲಯ ಪರ್ವತ ಶಿಖರಗಳಂತೆ, ಯಾವ ಪಾಶ್ಚಾತ್ಯ ಸಾಹಿತ್ಯ ಕೃತಿಯೂ ಇದುವರೆಗೂ ಏರಲಾರದಂತಹ ಮಹೋನ್ನತಿಗೆ ಕೆಲವಾದರೂ ಸಾಹಿತ್ಯ ಕೃತಿಗಳು ಏರಿನಿಂತಿವೆ. ಅತಿಶಯ ಎಂದು ಕೆಲವರಿಗೆ ತೋರಬಹುದಾದ ಈ ಉಕ್ತಿಯ ಸತ್ಯ ಗೊತ್ತಾಗಬೇಕಾದರೆ, ನಮ್ಮ ಪ್ರದೇಶ ಭಾಷಾ ಸಾಹಿತ್ಯಗಳ ಪರಿಚಯ ಪರಸ್ಪರರಿಗೆ ಅರಿವಾಗುವಂತೆ ಅನುವಾದ ಕಾರ್ಯ ನಡೆಯಬೇಕಾಗಿದೆ. ಈ ಕಾರ್ಯ ಈಗಾಗಲೆ ಅಲ್ಪಸ್ವಲ್ಪವಾಗಿ ನಾನಾ ಸಂಸ್ಥೆಗಳ ಮುಖಾಂತರ ಪ್ರಾರಂಭವಾಗಿದೆ . ಸಾಹಿತ್ಯ ಅಕಾಡೆಮಿಯಂತೆ ಭಾರತೀಯ ಜ್ಞಾನಪೀಠವು ಆ ಗುರಿಯತ್ತ ಭರದಿಂದ ಸಾಗುತ್ತಿದೆ.

ನನಗೆ ತಿಳಿದಿರುವ ಮಟ್ಟಿಗೆ, ನಮ್ಮ ಪ್ರದೇಶ ಭಾಷೆಗಳು, ರಾಷ್ಟ್ರವು ತಮ್ಮ ಮೇಲೆ ಹೊರಿಸಬಹುದಾದ ಎಲ್ಲ ಹೊರೆ ಹೊಣೆಗಳನ್ನೂ ಭರಿಸಲು ಸಮರ್ಥವಾಗಿವೆ. ಅಭ್ಯಾಸಕ್ಕೂ ಪ್ರಯೋಗಕ್ಕೂ ಅವಕಾಶ ಕೊಟ್ಟರೆ ಅತ್ಯಲ್ಪ ಕಾಲದಲ್ಲಿಯೆ ಅವು ವಿಶ್ವವಿದ್ಯಾನಿಲಯಗಳ ಬೋಧನಾಂಗ, ಸಂಶೋಧನಾಂಗ ಮತ್ತು ಪ್ರಸಾರಂಗದ ಎಲ್ಲ ಕಾರ್ಯಗಳನ್ನೂ, ಇನ್ನೂ ಸಂಪೂರ್ಣತರ ಸಾಮರ್ಥ್ಯದಿಂದ ನಿರ್ವಹಿಸುತ್ತವೆ ಎಂಬುದರಲ್ಲಿ ಸಂದೇಹವಿಲ್ಲ. ಅಂತಹ ಅಭ್ಯಾಸ ಮತ್ತು ಪ್ರಯೋಗಗಳನ್ನು ಸುಮಾರು ಇಪ್ಪತ್ತು ಇಪ್ಪತ್ತೈದು ವರ್ಷಗಳಿಂದಲೂ ನಡೆಸಿ ಜಯಪ್ರದವಾಗಿ ಮುನ್ನಡೆಯುತ್ತಿರುವ ಒಂದು ವಿಶ್ವವಿದ್ಯಾನಿಲಯದಲ್ಲಿ ವಿದ್ಯಾರ್ಥಿಯಾಗಿ, ಅಧ್ಯಾಪಕನಾಗಿ, ಪ್ರಾಧ್ಯಾಪಕನಾಗಿ, ಪ್ರಿನ್ಸಿಪಾಲ್ ಆಗಿ, ಉಪಕುಲಪತಿಯಾಗಿ ಸಕ್ರಿಯ ಭಾಗವಹಿಸುವ ಸುಯೋಗ ನನ್ನದಾಗಿದ್ದುದರಿಂದ ಇದನ್ನು ಅಧಿಕಾರವಾಣಿಯಿಂದ ಘೋಷಿಸಿದರೆ ಕ್ಷಮಿಸುವಿರೆಂದು ನಂಬುತ್ತೇನೆ.

'ಜ್ಞಾನಂ ವಿಜ್ಞಾನಸಹಿತಂ ಯತ್ ಜ್ಞಾತ್ವಾ ಮೋಕ್ಷ್ಯಸೇ ಶುಭಾತ್' ಎಂದು ಸಾರುತ್ತದೆ ಗೀತೆ. ಒಂದುಕಾಲದಲ್ಲಿ, ಪಾಶ್ಚಾತ್ಯ ದೇಶಗಳಿನ್ನೂ ಅರ್ಧ ಬರ್ಬರ ಸ್ಥಿತಿಯಲ್ಲಿದ್ದ ಸಮಯದಲ್ಲಿ, ನಮ್ಮ ದೇಶ ಜ್ಞಾನ ವಿಜ್ಞಾನಗಳಲ್ಲಿ ಮುಂದಾಳಾಗಿ ಮುಂದುವರಿಯುತ್ತಿತ್ತು. ತರುವಾಯ, ಮಧ್ಯಂತರ ಯುಗದಲ್ಲಿ, ರಾಜಕೀಯ ರೂಪದ ಅನೈಕ್ಯತೆ ಅಂತಃಕಲಹಗಳಿಂದಲೊ, ಮತೀಯ ಸ್ವರೂಪದ ಅಂಧಶ್ರದ್ಧೆಯಿಂದ ಒದಗಿದ ಮೂಢಾಚಾರ ಮೌಢ್ಯಗಳಿಂದಲೊ ನಡೆಗೆಟ್ಟು ಹಿಂದೆಬಿದ್ದಿತು. ಜನತೆ ಧರ್ಮದ ಹೆಸರಿನಲ್ಲಿ ತಮಸ್ಸಿಗೆ ಪಟ್ಟಕಟ್ಟಿತು; ವೈರಾಗ್ಯದ ವೇಷತೊಟ್ಟು, ತಪಸ್ಸಿನ ಹೆಸರಿಟ್ಟು, ಜೀವನ ಸ್ರೋತವು ಚಲನಹೀನವಾಗಿ, ಮಡುಗಟ್ಟಿ ನಾರುವಂತಾಯಿತು. ಬ್ರಿಟಿಷರ ಆಗಮನದ ಅನಂತರ ಪಾಶ್ಚಾತ್ಯ ನಾಗರಿಕತೆಯ ಪ್ರಭಾವದ ಪರಿಣಾಮವಾಗಿ ನಮ್ಮಲ್ಲಿ ಒಂದು ಪುನರುತ್ಥಾನ ಮತ್ತು ನವೋದಯ ಪ್ರಾರಂಭವಾಗಿ, ರಾಜಕೀಯ ಕ್ಷೇತ್ರದಲ್ಲಿ ಸ್ವಾತಂತ್ರ್ಯ ಸಂಗ್ರಾಮವಾಗಿಯೂ ಧಾರ್ಮಿಕ ಕ್ಷೇತ್ರದಲ್ಲಿ ಆಧ್ಯಾತ್ಮಿಕ ಆಂದೋಲನ ವಾಗಿಯೂ ಜನತೆಯನ್ನು ಎಚ್ಚರಗೊಳಿಸಿ, ಹುರಿದುಂಬಿಸಿ, ನವಚೇತನ ದೀಪ್ತರನ್ನಾಗಿ ಮಾಡಿ, ಹೊಸ ಸಾಹಸಗಳತ್ತ ಮುನ್ನೂಕಿತು.

ಆಶ್ಚರ್ಯದ ಸಂಗತಿ ಎಂದರೆ, ಭರತಖಂಡದ ಇತ್ತೀಚಿನ ಇತಿಹಾಸದಲ್ಲಿ ಸ್ವಾತಂತ್ರ್ಯ ಪೂರ್ವದ ಸುಮಾರು ಒಂದು ಶತಮಾನದಲ್ಲಿ, ಯಾವ ಕಾಲಮಾನವನ್ನು ನಾವು ರಾಜಕೀಯದಲ್ಲಿ ದಾಸ್ಯ, ಆರ್ಥಿಕದಲ್ಲಿ ದಾರಿದ್ರ್ಯ, ಸಾಮಾಜಿಕದಲ್ಲಿ ಛಿದ್ರ, ದಾರ್ಮಿಕದಲ್ಲಿ ಕ್ಷುದ್ರ ಎಂದು ವರ್ಣಿಸುತ್ತೇವೆಯೊ ಆ ಕಾಲಮಾನದಲ್ಲಿ, ನಮ್ಮ ದೇಶದಲ್ಲಿ ಗೋಚರವಾದ ಆತ್ಮಶ್ರೀಗೆ ಸಮಾನ ತೇಜಸ್ಸಿನ ಆತ್ಮಶ್ರೀ ಪ್ರಪ್ರಪಂಚದ ಮತ್ತಾವ ಭಾಗದಲ್ಲಿಯೂ ಆವಿರ್ಭೂತವಾಗಲಿಲ್ಲ ಎಂಬುದು: ರಾಜಾರಾಮಮೋಹನರಾಯ್, ಶ್ರೀರಾಮಕೃಷ್ಣ ಪರಮಹಂಸ, ಸ್ವಾಮಿ ವಿವೇಕಾನಂದ, ಋಷಿ ದಯಾನಂದ ಸರಸ್ವತಿ, ಕವಿ ರವೀಂದ್ರನಾಥಠಾಕೂರ್, ಶ್ರೀ ರಮಣ ಮಹರ್ಷಿ, ಶ್ರೀ ಅರವಿಂದರು, ಮಹಾತ್ಮಾ ಗಾಂಧೀಜಿ – ಈ ಒಂದೊಂದೂ ಹೆಸರಿನ ಹಿಂದೆ ಎಂತಹ ವಿಭೂತಿಪ್ರಮಾಣದ

ಭವ್ಯ ತೇಜಸ್ಸು ಸ್ಫುರಿಸುತ್ತದೆ ಎಂಬುದನ್ನು ಗ್ರಹಿಸಲು ನಾವು ಸಮರ್ಥರಾದರೆ ಮೇಲೆ ಹೇಳಿದ ಮಾತಿನ ಸತ್ಯಾಂಶ ಸ್ವಸಂವೇದ್ಯವಾಗುತ್ತದೆ.

ಪಾಂಚಜನ್ಯ ಸದೃಶವಾದ ಆ ವಿಭೂತಿಪುರುಷರ ಕರೆಗೆ ಓಗೊಟ್ಟು ನಾಡು, ರಾಜಕೀಯಾದಿ ಕ್ಷೇತ್ರಗಳಲ್ಲಿ ಕಾರ್ಯೋನ್ಮುಖಿಯಾದಂತೆಯೆ, ಕಲಾ ಭಾಷಾ ಸಾಹಿತ್ಯಾದಿ ಕ್ಷೇತ್ರಗಳಲ್ಲಿಯೂ ಎಚ್ಚತ್ತು ಎದ್ದು, ಹೊಸ ಹೊಸ ಸಾಹಸಗಳಿಗೆ ಸೊಂಟಕಟ್ಟಿ ಮುನ್ನಡೆಯತೊಡಗಿತು. ಆ ಸಾಹಿತ್ಯಿಕ ಪ್ರಗತಿ ನಮ್ಮ ಎಲ್ಲ ದೇಶಭಾಷೆಗಳಲ್ಲಿಯೂ ತುಸು ಹೆಚ್ಚು ಕಡಮೆ ಒಂದೇ ರೀತಿಯಲ್ಲಿ ಸಾಗಿದಂತೆ ತೋರುತ್ತದೆ. ಯಾರು ಬಲ್ಲರು? ಬಹುಶಃ ವರ್ಷಕ್ಕೆ ಹದಿನಾಲ್ಕು ಜ್ಞಾನಪೀಠ ಪ್ರಶಸ್ತಿಗಳಿದ್ದ ಪಕ್ಷದಲ್ಲಿ ಪ್ರತಿವರ್ಷವೂ ಹದಿನಾಲ್ಕು ಭಾಷೆಗಳೂ ಆ ಬಹುಮಾನ ಪಡೆಯಲು ಅರ್ಹವಾಗುತ್ತಿದ್ದುವೊ ಏನೊ?

ಸ್ವಾತಂತ್ರ್ಯೋತ್ತರ ಭಾರತಕ್ಕೆ, ರಸಾಸ್ವಾದನವೀಯುವ ಸೃಜನಾತ್ಮಕ ಸಾಹಿತ್ಯದ ಸೃಷ್ಟಿಯಷ್ಟೇ ಆವಶ್ಯಕವಾಗಿ, ಅಥವಾ ಅದಕ್ಕಿಂತಲೂ ಹೆಚ್ಚು ಆವಶ್ಯಕವಾಗಿ, ಜ್ಞಾನವಿಜ್ಞಾನ ಪ್ರಧಾನವಾದ ವಿಚಾರಾತ್ಮಕ ವಾಙ್ಮಯದ ರಚನೆಯಾಗಬೇಕಾಗಿದೆ. ನಮ್ಮ ಮಕ್ಕಳ ಶಿಕ್ಷಣವೆಲ್ಲ ಆಯಾ ಪ್ರದೇಶ ಭಾಷೆಯಲ್ಲಿಯೆ ನಡೆದು, ಅವರು ಜ್ಞಾನ ವಿಜ್ಞಾನ ಬೋಧೆಯನ್ನು ಸುಲಭವಾಗಿ ಗ್ರಹಿಸುವಂತಾಗಿ, ಪ್ರತಿ ವರ್ಷವೂ ಅಧಿಕಾಧಿಕ ಸಂಖ್ಯೆಯಲ್ಲಿ ಅನುತ್ತೀರ್ಣರಾಗಿ ತಮಗೂ ರಾಷ್ಟ್ರಕ್ಕೂ ಉಂಟಾಗುತ್ತಿರುವ ಆರ್ಥಿಕ ಮತ್ತು ಮಾನಸಿಕ ರೂಪದ ಮಹಾನಷ್ಟವನ್ನು ತಪ್ಪಿಸಬೇಕಾದರೆ ಲೇಖಕವರ್ಗ ಬೌದ್ಧಿಕ ಸಾಹಿತ್ಯ ಸೃಷ್ಟಿಗೆ ಆದ್ಯಗಮನ ಕೊಡಬೇಕಾಗಿದೆ. ಮಹತ್ ಪ್ರತಿಭಾಶಕ್ತಿಯಿಂದ ಹೊಮ್ಮುವ ಸೃಜನಾತ್ಮಕ ಸಾಹಿತ್ಯವು ಅದಮ್ಯ ಸ್ಫೂರ್ತಿಯಿಂದ ಪ್ರೇರಿತವಾಗುವುದರಿಂದ ಅದಕ್ಕೆ ಬಹುಮಾನ ಪ್ರಶಸ್ತಿ ಪ್ರಶಂಸೆ ಕೀರ್ತಿ ಮೆಚ್ಚುಗೆಗಳ ಬೆನ್ನುತಟ್ಟು ಇಲ್ಲದಿದ್ದರೂ ಅದರ ಅಭಿವ್ಯಕ್ತಿ ತಿರೋಹಿತವಾಗುವುದಿಲ್ಲ; ಅದರ ಪ್ರಕಾಶನಕ್ಕೆ ಚ್ಯುತಿ ಬರುವುದಿಲ್ಲ. ಆದರೆ ವೈಜ್ಞಾನಿಕವೂ ಬೌದ್ಧಿಕವೂ ಆದ ವೈಚಾರಿಕ ಸಾಹಿತ್ಯಕ್ಕೆ ಅಧಿಕೃತ ಪ್ರೋತ್ಸಾಹ ಆವಶ್ಯಕ; ಅದು ಫಲಾಪೇಕ್ಷಿಯಾದುದು: ಪ್ರಯೋಜನವನ್ನೂ ನಿರೀಕ್ಷಿಸುತ್ತದೆ. ಪ್ರಯೋಜನವೇ ಅದರ ಪರಮ ಗುರಿ. ಕಾವ್ಯಕ್ಕೆ ರಸವೇ 'ಸಕಲ ಪ್ರಯೋಜನ ಮೌಲಿಭೂತ' ವಾದದ್ದು ಎಂಬರ್ಥದಲ್ಲಿ. "All Art is useless" ಎನ್ನುವಂತೆ, "All Science must be useful" ಎಲ್ಲ ವಿಜ್ಞಾನವು ಲೌಕಿಕವಾದ ಪ್ರತ್ಯಕ್ಷ ಫಲದಾಯಿಯಾಗಿರಬೇಕು ಎಂಬರ್ಥದಲ್ಲಿ. ಜ್ಞಾನಪೀಠವು ಸೃಜನ ಸಾಹಿತ್ಯಕ್ಕೆ ನೀಡುತ್ತಿರುವ ಪ್ರೋತ್ಸಾಹವನ್ನು ವಿಶ್ವವಿದ್ಯಾನಿಲಯಗಳು ವೈಚಾರಿಕ, ಬೌದ್ಧಿಕ ಮತ್ತು ವೈಜ್ಞಾನಿಕ ಸಾಹಿತ್ಯ ಸೃಷ್ಟಿಗೆ ನೀಡುತ್ತವೆ ಎಂದು ಹಾರೈಸುತ್ತೇನೆ.

ಜ್ಞಾನಪೀಠಪ್ರಶಸ್ತಿ ಮಹತ್ ಕೃತಿಗಳನ್ನು ಸೃಷ್ಟಿಸುವುದಿಲ್ಲವಾದರೂ ಸೃಷ್ಟಿಯಾದ ಮಹತ್ ಕೃತಿಗಳನ್ನು ಮರೆಯಿಂದ ಹೊರಗೆ ಬೆಳಕಿಗೆ ತಂದು, ಬಹುಜನರ ಕಣ್ಣಿಗೆ ಅದು ಬೀಳುವಂತೆ ಮಾಡಿ, ಬೇರೆ ಬೇರೆ ಭಾಷೆಯ ಸಹೃದಯರ ಗಮನವನ್ನು ಅದರತ್ತ ಸೆಳೆಯುವ ಮಹೋಪಕಾರ ಮಾಡುವುದರಲ್ಲಿ ಸಂದೇಹವಿಲ್ಲ. ನಮ್ಮ

ಪ್ರಾಚೀನ ಕಾವ್ಯಮೀಮಾಂಸಕರು ಕಾವ್ಯಪ್ರಯೋಜನಗಳನ್ನು ಕುರಿತು ಹೇಳುವಾಗ

**ಕಾವ್ಯಂ ಯಶಸೇರ್ಥಕೃತೇ ವ್ಯವಹಾರವಿದೇ ಶಿವೇತರಕ್ಷತಯೇ।**
**ಸದ್ಯಃಪರನಿರ್ವೃತಯೇ ಕಾಂತಾಸಮ್ಮಿತತಯೋಪದೇಶಯುಜೇ॥**

ಎಂದು–ಕೀರ್ತಿ, ಧನ, ಲೋಕವ್ಯವಹಾರ ಜ್ಞಾನ, ಶಿವೇತರ ಕ್ಷತಿ, ಸದ್ಯಃಪರವಾದ ಆನಂದ, ಕಾಂತಾ ಸಮ್ಮಿತದಂತಹ ಉಪದೇಶ–ಇವುಗಳನ್ನು ಹೆಸರಿಸಿದ್ದಾರೆ. ವೈಯುಕ್ತಿಕವಾದ ಪ್ರತಿಷ್ಠೆಯನ್ನು ಅಪೇಕ್ಷಿಸುವ ಮತ್ತು ಸವಿಯುವ ಕವಿ ಕೀರ್ತಿಗೂ ಬೆಲೆ ಕೊಡುತ್ತಾನೆ. ಆದರೆ ಕೀರ್ತಿಯ ವಿಚಾರದಲ್ಲಿ ಅಷ್ಟೇನೂ ಆಸಕ್ತನಲ್ಲದ ಆತ್ಮ ಸುಖಕ್ಕಾಗಿ ಹಾಡುವ ಕವಿಗೆ ಅದು ಉಪಲಕ್ಷ್ಯವೂ ಆಗದಿರಬಹುದು; ಮುಖ್ಯ ಲಕ್ಷ್ಯವಂತೂ ಎಂದಿಗೂ ಆಗುವುದಿಲ್ಲ. ಆದರೂ, ಶ್ರೀ ಅರವಿಂದರು ತಮ್ಮ ಸಂವಾದ ಒಂದರಲ್ಲಿ ಹೇಳುವಂತೆ, ಕೀರ್ತಿಗೆ ಬೇರೊಂದು ಜನೋಪಕಾರಿಯಾದ ಪ್ರಯೋಜನವಿದೆ. ಆ ಪ್ರಯೋಜನ ವ್ಯಕ್ತಿಪ್ರತಿಷ್ಠೆಗೆ ಸಂಬಂಧಿಸಿಲ್ಲ; ಅದು ಲೋಕಕಲ್ಯಾಣಕರ ಸ್ವರೂಪದ್ದು; ಅಧ್ಯಾತ್ಮ ಕ್ಷೇತ್ರದಲ್ಲಿಯೆ ಆಗಲಿ, ಸಾಹಿತ್ಯಾದಿ ಕಲಾಕ್ಷೇತ್ರಗಳಲ್ಲಿಯೆ ಆಗಲಿ, ಎಲೆಮರೆಯ ಹೂವಾಗಿ ಯಾರ ಕಣ್ಣಿಗೂ ಬೀಳದೆ ಹೋಗುತ್ತಿದ್ದ ಮಹಾಪುರುಷನನ್ನೂ ಮಹಾಮೇರುಕೃತಿಯನ್ನೂ ಲೋಕಲೋಚನಗಳಿಗೆ ಗೋಚರವಾಗುವಂತೆ ಮಾಡಿ ಜನರನ್ನು ಆ ಎಡೆಗೆ ಆಕರ್ಷಿಸಿ, ಆ ವಿಭೂತಿಪುರುಷನಿಂದ ಅಥವಾ ಆ ಮೇರುಕೃತಿಯಿಂದ ಲಭಿಸುವ ಜ್ಞಾನ ಮತ್ತು ಆನಂದಗಳ ಪೀಯೂಷಪಾನದಿಂದ ಅವರು ಧನ್ಯರಾಗುವಂತೆ ಮಾಡುತ್ತದೆ.

ನನಗೆ ದೊರೆತಿರುವ ಈ ಜ್ಞಾನಪೀಠ ಪ್ರಶಸ್ತಿಯಲ್ಲಿ ನಾನು, ಪ್ರಧಾನವಾಗಿ, ಯಶಸ್ಸಿನ ಪ್ರಯೋಜನದ ಈ ಮುಖವನ್ನು ಗುರುತಿಸುತ್ತೇನೆ. ಪ್ರಾಚ್ಯ ಪಾಶ್ಚಾತ್ಯ ಪ್ರಾಚೀನ ಅರ್ವಾಚೀನಗಳ ಸಾರ್ವಕಾಲಿಕ ಮತ್ತು ಸಾರ್ವಧಾರ್ಮಿಕ ಸಮಷ್ಟಿರೂಪದ ಯುಗಪ್ರಜ್ಞೆಯ ಆವಿರ್ಭೂತಿಯಂತಿರುವ 'ಶ್ರೀ ರಾಮಾಯಣ ದರ್ಶನಂ' ಮಹಾಕಾವ್ಯವನ್ನು ವ್ಯಾವಹಾರಿಕವಾಗಿ 'ಕುವೆಂಪು ಕೃತಿ' ಎಂದು ಕರೆಯಲಾಗಿದ್ದರೂ ಪಾರಮಾರ್ಥಿಕವಾಗಿ ನೋಡಿದರೆ 'ಕುವೆಂಪು'ವನ್ನೆ ಅದು ಸೃಜಿಸಿದೆ. ಅದು ಯುಗಚೈತನ್ಯದ ಸಮಷ್ಟಿಪ್ರಜ್ಞೆಯ ಸೃಷ್ಟಿ. ಅದು ಶ್ರೀ ರಾಮಾಯಣದ ಅತ್ಯಂತ ಆಧುನಿಕ ಅವತಾರ; ಅದು ವೈದಿಕ ಸಂಪ್ರದಾಯದ ವಾಲ್ಮೀಕಿ ರಾಮಾಯಣಕ್ಕೆ ಋಣಿಯಾಗಿರುವಂತೆ ಜೈನ ಸಂಪ್ರದಾಯದ ರಾಮಾಯಣಗಳಿಗೂ ಋಣಿಯಾಗಿದೆ. ವ್ಯಾಸ, ವಾಲ್ಮೀಕಿ, ಪಂಪ, ನಾಗಚಂದ್ರಾದಿ ಗಳಿಗೆಂತೊ ಅಂತೆಯೆ ಹೋಮರ್, ವರ್ಜಿಲ್, ಡಾಂಟೆ, ಮಿಲ್ಟನ್ನರಿಗೂ ಋಣಿಯಾಗಿದೆ. ಅಲ್ಲಿ ಶ್ರೀ ರಾಮಕೃಷ್ಣ–ವಿವೇಕಾನಂದರ ಸಮನ್ವಯ ದರ್ಶನವನ್ನೆಂತೊ ಅಂತೆಯೆ ಗಾಂಧೀಜಿ–ವಿನೋಬಾಜಿಯವರಿಂದ ಪ್ರಣೀತವಾದ ಸರ್ವೋದಯ ಭಾವನೆಯನ್ನೂ, ಪಾಶ್ಚಾತ್ಯ ವಿಜ್ಞಾನದ ವಿಕಾಸವಾದವನ್ನೆಂತೊ ಅಂತೆ ಶ್ರೀ ಅರವಿಂದ ಪ್ರಣೀತವಾದ ಪೂರ್ಣಯೋಗ ದರ್ಶನವನ್ನೂ ಸಂದರ್ಶಿಸಬಹುದು. ಸಮನ್ವಯ, ಸರ್ವೋದಯ ಮತ್ತು ಪೂರ್ಣ ದೃಷ್ಟಿ–ಇವುಗಳೇ 'ಶ್ರೀ ರಾಮಾಯಣ ದರ್ಶನ'ದ ತ್ರಿನೇತ್ರಗಳಾಗಿವೆ.

ಭಾರತೀಯ ಜ್ಞಾನಪೀಠವು ಆ ಮಹಾಕಾವ್ಯಕ್ಕೆ ಈ ವರ್ಷದ ಪ್ರಶಸ್ತಿಯನ್ನು ನೀಡಿ, ಅದು ಸಮಸ್ತ ಭಾರತೀಯರ ಗಮನವನ್ನು ಆಕರ್ಷಿಸುವ ಅವಕಾಶ ಕಲ್ಪಿಸಿದೆ. ಡಾ. ಶ್ರೀಮತಿ ಸರೋಜಿನಿ ಮಹಿಷಿಯವರಂತಹ ಬಹುಭಾಷಾ ವಿದುಷಿಯರು ಅದರ ಆಯ್ದ ಕೆಲವು ಭಾಗಗಳನ್ನು ಹಿಂದಿಗೆ ಭಾಷಾಂತರಿಸಿ, ಇದುವರೆಗೆ ಕರ್ಣಾಟಕ ವ್ಯಾಪ್ತಿಯ ಸ್ಥಳೀಯವಾಗಿದ್ದ ಅದರ ಯಶೋವಲಯವನ್ನು ಅಖಿಲ ಭಾರತೀಯ ವ್ಯಾಪ್ತಿಗೆ ವಿಸ್ತರಿಸಿ, ಸಹೃದಯರೆಲ್ಲರ ಕೃತಜ್ಞತೆಗೆ ಪಾತ್ರರಾಗಿದ್ದಾರೆ. ಸಮನ್ವಯ, ಸರ್ವೋದಯ ಮತ್ತು ಪೂರ್ಣದೃಷ್ಟಿಗಳ ಅದರ ತ್ರಿವೇಣಿಯಲ್ಲಿ ಮಿಂದು, ಅಲ್ಲಿ ಅಭಿವ್ಯಕ್ತಗೊಂಡಿರುವ ಪ್ರಪ್ರಾಚೀನತಾ ಸಾರಪೂರ್ಣವಾದ ಅದರ ನವೋನವ ಆತ್ಮವಿಜ್ಞಾನ ಪ್ರಜ್ಞೆಯ ಅಗ್ನಿತೀರ್ಥದಲ್ಲಿ ಮುಳುಗಿ ಬೆಂದು ನಾಂದು, ಬುದ್ಧಿಪುಷ್ಟಿ ಮತ್ತು ಭಾವತುಷ್ಟಿಗಳನ್ನು ಪಡೆಯುವ ಭಾರತೀಯರ ಸಮಷ್ಟಿ ಚೇತನವು ತನ್ನ ತಮದಿಂದ ಮುಕ್ತರಾಗಿ 'ದೀಪ್ಯ ದೈವೀಪ್ರಜ್ಞೆಯಮೃತ ಗೋಪುರ'ಕ್ಕೆ ಏರುವಂತಾಗಲಿ ಎಂದು ಕೈಜೋಡಿಸಿ ಪ್ರಾರ್ಥಿಸುತ್ತೇನೆ:

**ಮನ್ಮನೋ ಮಂದಿರಕೆ, ಓ,**
**ಲೋಕ ಗುರುಗಳೆಲ್ಲ ಬನ್ನಿ,**
**ಬನ್ನಿ ಬನ್ನಿ ಬನ್ನಿ!**

**ತುಳಿಯೆ ನಿಮ್ಮ ಪದತಲ**
**ದಲದಲದಲ ಅರಳ್ವುದೆನ್ನ**
**ಶಿರಃಕಮಲ ಕುಟ್ಮಲ:**

**ತಮೋತಿಮಿರವಳಿಯಲಲ್ಲಿ**
**ಪರಂಜ್ಯೋತಿ ಬೆಳಗಲಿ:**
**ಋತದ ಶಿವದ ಆನಂದದ**
**ಚಿದ್ವಿಭೂತಿ ತೊಳಗಲಿ.**

**ಮನ್ಮನೋ ಮಂದಿರಕೆ ಓ,**
**ಲೋಕಗುರುಗಳೆಲ್ಲ ಬನ್ನಿ,**
**ಬನ್ನಿ, ಬನ್ನಿ, ಬನ್ನಿ!**

# ಕನ್ನಡ ನಾಡಿನ ರಾಜಧಾನಿಯಲ್ಲಿ ಕನ್ನಡವೆ ಸಾರ್ವಭೌಮ ಭಾಷೆ[೧]

ಸಾಹಿತ್ಯ ಮತ್ತು ಶಿಕ್ಷಣ ಕ್ಷೇತ್ರದಲ್ಲಿ ನಾನು ಸಲ್ಲಿಸಿರುವ ಸೇವೆಯನ್ನು ತಾವೆಲ್ಲರೂ ಔದಾರ್ಯದಿಂದ ಕಂಡು ಈ ಗೌರವ ಡಾಕ್ಟರೇಟ್ ಪದವಿಯನ್ನು ನೀಡುವ ಕೃಪೆ ಮಾಡಿರುವುದಕ್ಕಾಗಿ ತಮಗೆಲ್ಲರಿಗೂ ಅತ್ಯಂತ ಕೃತಜ್ಞತೆಯ ವಂದನೆಗಳನ್ನರ್ಪಿಸುತ್ತೇನೆ. ಈ ಗೌರವಕ್ಕೆ ಪಾತ್ರನಾದ ನಾನು ನಿಮಿತ್ತ ಮಾತ್ರನೆಂಬುದು ನನಗೆ ಗೊತ್ತಿದೆ. ವಾಸ್ತವವಾಗಿ ಇದು ದೇಶಭಾಷೆಗಳಿಗೆ ಸಲ್ಲುತ್ತಿರುವ ಗೌರವವಾಗಿದೆ. ಇದುವರೆಗೆ ತಮ್ಮತಮ್ಮ ಮನೆಗಳಲ್ಲಿಯೆ ಅತಿಥಿಗಳೆಂದು ಬಂದವರ ದುರಾಕ್ರಮಣಕ್ಕೆ ಸಿಕ್ಕಿ ದಾಸ್ಯದೈನ್ಯಗಳಿಗೆ ಭಾಜನವಾಗಿ ಧಿಕ್ಕರಿಸಲ್ಪಟ್ಟಿದ್ದ ದೇಶ ಭಾಷಾ ಮಾತೆಯರೆಲ್ಲ ಮತ್ತೊಮ್ಮೆ ತಮ್ಮ ಯಾಜಮಾನ್ಯದ ಸಿಂಹಾಸನಕ್ಕೆ ಏರುತ್ತಿದ್ದಾರೆ ಎಂಬುದಕ್ಕೆ ಇಂದಿನ ಸಮಾರಂಭ ಒಂದು ಅಭಿಷೇಕ ಸಾಕ್ಷಿಯಾಗಿದೆ.

ಅಚಿರಪೂರ್ವದಲ್ಲಿ ಅಸ್ತಿತ್ವಕ್ಕೆ ಬಂದಿರುವ ಬೆಂಗಳೂರು ವಿಶ್ವವಿದ್ಯಾನಿಲಯವು ಶಿಕ್ಷಣ ಮತ್ತು ಸಾಹಿತ್ಯ ಕ್ಷೇತ್ರಗಳಲ್ಲಿ ವಿಶೇಷ ಅನುಭವ ಪಡೆದಿರುವ ಸಮರ್ಥರೊಬ್ಬರ ನೇತೃತ್ವಕ್ಕೆ ಅಧೀನವಾಗಿರುವುದು ಅತ್ಯಂತ ಸಮಾಧಾನದ ಮತ್ತು ಸಂತೋಷದ ಸಂಗತಿ. ಕನ್ನಡ ನಾಡಿನ ರಾಜಧಾನಿಯಲ್ಲಿ ಕನ್ನಡವೇ ಅಗ್ರಗಣ್ಯ ಮತ್ತು ಅಗ್ರಮಾನ್ಯ; ಆಡಳಿತ ಭಾಷೆಯಿಂದ ಹಿಡಿದು ಶಿಕ್ಷಣ ಮಾಧ್ಯಮದವರೆಗು ಸರ್ವಕ್ಷೇತ್ರಗಳಲ್ಲಿಯೂ ಸರ್ವಸ್ತರಗಳಲ್ಲಿಯೂ ಕನ್ನಡ ಭಾಷೆಗೇ ಅಗ್ರಸ್ಥಾನ–ಈ ಧ್ಯೇಯಗಳನ್ನು ದೂರದೃಷ್ಟಿಯಿಂದಲೂ ಮತ್ತು ಧೈರ್ಯದಿಂದಲೂ ಅವರು ಕಾರ್ಯಗತಗೊಳಸುತ್ತಾರೆ ಎಂದು ನಾನು ಸಂಪೂರ್ಣವಾಗಿ ಭರವಸೆ ಹೊಂದಿದ್ದೇನೆ.

ಭಾರತದಂತಹ ವೈವಿಧ್ಯಮಯವಾದ ವಿಶಾಲ ರಾಷ್ಟ್ರದ ದೊಡ್ಡ ದೊಡ್ಡ ಔದ್ಯೋಗಿಕ ನಗರಗಳೆಲ್ಲ ವೇಷ ಭೂಷಣ ಭಾಷೆ ಸಂಸ್ಕೃತಿ ಮೊದಲಾದವುಗಳಲ್ಲಿ ಸಂಕ್ಷಿಪ್ತ ಭಾರತಗಳೇ ಆಗಿರಬೇಕಾದುದು ಅನಿವಾರ್ಯ. ಕನ್ನಡನಾಡಿನ ರಾಜಧಾನಿಯಾದ ಬೆಂಗಳೂರು ನಗರವೂ ಅಂಥ ಒಂದು ಸಂಕ್ಷಿಪ್ತ ಭಾರತವೇ ಆಗಿದೆ. ಇಲ್ಲಿ ಅನೇಕ ಭಾಷೆಗಳನ್ನು ಮಾತನಾಡುವ ಅಲ್ಪ ಸಂಖ್ಯಾತರಿರುವುದು ಸಹಜ. ಆ ಎಲ್ಲ ಭಾಷೆಗಳಿಗೂ ಸಲ್ಲಬೇಕಾದುದನ್ನು ಸಲ್ಲಿಸಬೇಕಾದುದು ನಮ್ಮ ಕರ್ತವ್ಯವಾದರೂ ಇಲ್ಲಿ

---

[೧] ಬೆಂಗಳೂರು ವಿಶ್ವವಿದ್ಯಾನಿಲಯದ ಗೌರವ ಡಿ.ಲಿಟ್. ಪ್ರಶಸ್ತಿಯನ್ನು ಸ್ವೀಕರಿಸಿ ಮಾಡಿದ ಭಾಷಣ. ಬೆಂಗಳೂರು: ಜನವರಿ ೮.೧೯೬೬.

ಕನ್ನಡವೇ ಸಾರ್ವಜನಿಕ ಕ್ಷೇತ್ರದ ಸಾರ್ವಭೌಮ ಭಾಷೆಯಾಗಿರಬೇಕಾಗುತ್ತದೆ; ಕನ್ನಡಕ್ಕೆ ಮೊದಲ ಮನ್ನಣೆ ಸಲ್ಲಬೇಕಾದದ್ದು ಅಗತ್ಯವಾಗುತ್ತದೆ.

ಈ ಮಾತು ಕನ್ನಡಿಗರಿಗೆ ಮಾತ್ರ ಅನ್ವಯಿಸುವುದಲ್ಲ. ಎಲ್ಲ ರಾಜ್ಯಗಳ, ಎಲ್ಲ ನಗರಗಳ ವಿಚಾರದಲ್ಲಿಯೂ ಇದೇ ಸೂತ್ರ ಆವಶ್ಯಕ. ಆಯಾ ರಾಜ್ಯದಲ್ಲಿ ಆಯಾ ರಾಜ್ಯಭಾಷೆಗಳೇ ಪ್ರಥಮ ಮತ್ತು ಪ್ರಧಾನ. ಬೆಂಗಳೂರಿನಲ್ಲಿ ಅನ್ಯ ಭಾಷೆಗಳನ್ನಾಡುವ ಜನರಿದ್ದಾರೆ ಎಂದರೆ ಅದು ನಮ್ಮ ಆತಿಥ್ಯದ ಔದಾರ್ಯವನ್ನು ಸೂಚಿಸುತ್ತದೆ; ಅದು ನಮಗೆ ಹೆಮ್ಮೆ ಹಾಗೂ ಗೌರವ. ಆದರೆ ಇದೇ ಕಾರಣದಿಂದಾಗಿ ಕನ್ನಡಕ್ಕೆ ನ್ಯಾಯವಾಗಿ ದೊರಕಬೇಕಾದ ಸ್ಥಾನಮಾನಗಳಿಗೆ ಯಾವ ಅಡಚಣೆಯೂ ಉಂಟಾಗಬಾರದು. ಮುಂಬಯಿನಲ್ಲೊ ಮದ್ರಾಸಿನಲ್ಲೊ ಅಥವಾ ಬೇರೆ ಇನ್ನೆಲ್ಲೊ ಕನ್ನಡಿಗರು ಹೋಗಿ ವಾಸಿಸುತ್ತಿದ್ದರೆ ಅವರ ಇರುವಿಕೆ ಆ ಪ್ರದೇಶದ ಭಾಷೆಯ ಪ್ರಗತಿಗೆ ತಡೆಯಾಗಬಾರದು. ಕನ್ನಡಿಗರು ಕನ್ನಡನಾಡಿನ ಹೊರಗಿದ್ದಾಗ ವೈಯಕ್ತಿಕವಾಗಿ ಕನ್ನಡಿಗರು, ಅಷ್ಟೆ. ಪ್ರಾದೇಶಿಕವಾಗಿ ಅವರು ತಾವು ಇರುವ ಪ್ರದೇಶದವರೇ. ಈ ಮಾತು ಕನ್ನಡ ನಾಡಿನಲ್ಲಿರುವ ಅನ್ಯ ಭಾಷೀಯರಿಗೂ ಅನ್ವಯವಾಗುತ್ತದೆ. ಅವರು ತಮ್ಮ ಮಾತೃಭಾಷೆಯ, ಪ್ರಾದೇಶಿಕ ಸಂಸ್ಕೃತಿಯ ದೃಷ್ಟಿಯಿಂದ ಯಾರೇ ಆಗಿರಲಿ ಇಲ್ಲಿ ಅವರು ಕನ್ನಡನಾಡಿನವರು. ಕನ್ನಡ ಭಾಷೆ, ಸಾಹಿತ್ಯ, ಸಂಸ್ಕೃತಿ ಎಲ್ಲದರ ಪ್ರಗತಿಯಲ್ಲಿಯೂ ಅವರು ಭಾಗಿಗಳಾಗಿರಬೇಕು. ಅವರಿದ್ದಾರೆ ಎನ್ನುವುದು ಕನ್ನಡಕ್ಕೆ ಕಾಲ್ತೊಡಕಾಗಬಾರದು.

ಬೆಂಗಳೂರಿನಂತಹ ಮಹಾನಗರಗಳ ವಿಚಾರದಲ್ಲಿ ನಾವು ಈ ಮಾತನ್ನು ಸ್ಪಷ್ಟವಾಗಿ ಅರ್ಥಮಾಡಿಕೊಳ್ಳಬೇಕು. ಈ ಹಿನ್ನೆಲೆಯಲ್ಲಿ, ಕನ್ನಡನಾಡಿನ ರಾಜಧಾನಿಯಾದ ಬೆಂಗಳೂರಿನಲ್ಲಿ, ಅಲ್ಲಿನ ವಿಶ್ವವಿದ್ಯಾನಿಲಯದಲ್ಲಿ ಕನ್ನಡಕ್ಕೆ ಯಾವ ಸ್ಥಾನವಿರಬೇಕೆಂದು ಯೋಚಿಸುವುದರಲ್ಲಾಗಲಿ ಚರ್ಚಿಸುವುದರಲ್ಲಾಗಲಿ ನನಗೆ ಯಾವ ಅರ್ಥವೂ ಕಾಣಿಸುವುದಿಲ್ಲ. ಕನ್ನಡ ಮಾತೃಭಾಷೆಯಲ್ಲದವರ ಶಿಕ್ಷಣಕ್ಕೆ ಇಲ್ಲಿ ಅವಕಾಶವನ್ನು ಕಲ್ಪಿಸುವುದು ನಮ್ಮ ಹೊಣೆಯಾದರೂ, ಕನ್ನಡವನ್ನು ಭದ್ರಸ್ಥಾನದಲ್ಲಿರಿಸಬೇಕಾದುದು ಆದ್ಯ ಕರ್ತವ್ಯ . ಆ ಭದ್ರಸ್ಥಾನವು ಸಂಸ್ಥಾಪಿತವಾಗುವುದಕ್ಕೆ ಮುನ್ನ ಅದನ್ನು ಭಂಗಗೊಳಿಸುವ ಯಾವ ಕಾರ್ಯ ವ್ಯೂಹಕ್ಕೂ ಕೈಹಾಕದಿರುವುದು ಲೇಸು.

ಬೆಂಗಳೂರು ವಿಶ್ವವಿದ್ಯಾನಿಲಯವನ್ನು ಕೇಂದ್ರ ವಿಶ್ವವಿದ್ಯಾನಿಲಯವನ್ನಾಗಿ ಪರಿವರ್ತಿಸುವ ಯೋಜನೆಯ ಅಂಗವಾಗಿ ಅಲ್ಲಿ, ಸಂಪರ್ಕ ಭಾಷೆಯಾದ ಹಿಂದೀ ಮಾಧ್ಯಮದ ಪ್ರಸ್ತಾಪವೆತ್ತಿರುವುದನ್ನು ನಾನು ಮೊನ್ನೆ ಮೊನ್ನೆ ಪತ್ರಿಕೆಗಳಲ್ಲಿ ಓದಿದ್ದೇನೆ.ಅದೇನಾದರೂ ನಿಜವಾಗಿದ್ದ ಪಕ್ಷದಲ್ಲಿ ಅಚಾತುರ್ಯದ ನೀತಿಯೆಂದೇ ಭಾವಿಸಬೇಕಾಗುತ್ತದೆ. ಇದು ಈ ಘಟ್ಟದಲ್ಲಿ ತುಂಬ ಅಪಾಯಕಾರಿ ಹೆಜ್ಜೆ ಎಂಬುದನ್ನು ನಾನು ಸ್ಪಷ್ಟಪಡಿಸಬೇಕಾಗಿದೆ. ನಾವು ಇನ್ನೂ ಇಂಗ್ಲಿಷಿನ ನೊಗದಿಂದಲೆ ಹೆಗಲು ಕಳಚಿಲ್ಲ; ಆಗಲೇ ಬೇರೊಂದು ನೊಗಕ್ಕೆ ಹೆಗಲು ಕೊಡಲು ಸಿದ್ಧರಾಗಿದ್ದೇವೆ. ಈ

ದುರದೃಷ್ಟಕರ ಪರಿಸ್ಥಿತಿ ಕನ್ನಡನಾಡಿನಲ್ಲಲ್ಲದೆ ಬೇರೆ ಯಾವ ಕಡೆಯೂ ಇರಲಾರದು. ಕನ್ನಡಕ್ಕೆ ಎಂದೋ ದೊರೆಯಬೇಕಾಗಿದ್ದ ಗೌರವದ ಮನ್ನಣೆಯ ಸ್ಥಾನವನ್ನು ಕೊಡಲು ಇನ್ನೂ ಮೀನ ಮೇಷ ಎಣಿಸುತ್ತಿರುವ ನಾವು ಹಿಂದೀ ಮಾಧ್ಯಮದ ಬಗೆಗೆ ಕಾತರತೆ ತೋರುತ್ತಿರುವುದು ಒಂದು ಬಗೆಯ ವಿಪರ್ಯಾಸವೇ ಸರಿ. ಮುಂದೆ ಎಂದಾದರೂ ಹಿಂದೀ ಮಾಧ್ಯಮದ ತರಗತಿಗಳು ಬರಬಹುದು. ಆದರೆ ಕನ್ನಡ ನಮ್ಮ ಶಿಕ್ಷಣವನ್ನೂ ಸಮಸ್ತ ಜೀವನವನ್ನೂ ಸಂಪೂರ್ಣವಾಗಿ ಆವರಿಸಿಕೊಳ್ಳುವ ಮೊದಲೇ ಇದಕ್ಕೆ ಅವಕಾಶಕೊಡುವುದು ರಾಷ್ಟ್ರಘಾತಕವಾಗುತ್ತದೆ; ಅನೈಕ್ಯತೆಗೆ ದಾರಿಮಾಡಿ ಕೊಟ್ಟಂತಾಗುತ್ತದೆ. ಈ ದಿಸೆಯಲ್ಲಿ ಕನ್ನಡಿಗರ ಔದಾರ್ಯ ಸಲ್ಲಕ್ಷಣಗಳು ಅಸಹಾಯಕತೆಯಾಗಬಾರದು; ನಿರ್ವಿಣ್ಣತೆ ಯಾಗಬಾರದು.

ಕನ್ನಡ ನಾಡಿನ ವಿಶ್ವವಿದ್ಯಾನಿಲಯವಾದ ಈ ಬೆಂಗಳೂರು ವಿಶ್ವವಿದ್ಯಾನಿಲಯವು ಮೊದಲು ಈ ಪ್ರದೇಶದ ಆವಶ್ಯಕತೆಗಳನ್ನು ಗುರುತಿಸಿ ಈಡೇರಿಸಬೇಕು. ಈ ಭಾಗದ ಜನತೆಯ ಋಣ ತೀರಿಸಬೇಕು. ಅದು ಕನ್ನಡದಿಂದ ಮಾತ್ರ ಸಾಧ್ಯ; ಇನ್ನಾವ ಭಾಷೆಯಿಂದಲೂ ಸಾಧ್ಯವಿಲ್ಲ. ಫಲವಾಗಿ ವಿಶ್ವವಿದ್ಯಾನಿಲಯದ ಎಲ್ಲ ತರಗತಿಗಳಲ್ಲೂ ವ್ಯಾಪಕವಾಗಿ ಕ್ನನಡ ಮಾಧ್ಯಮ ಜಾರಿಗೆ ಬರಬೇಕು. ಮಾತೃಭಾಷೆಯ ಮೂಲಕವಾಗಿ ನಡೆಯುವ ಶಿಕ್ಷಣವೇ ಸರ್ವೋತ್ಕೃಷ್ಟವಾದುದೆಂಬುದು ಎಂದೂ ಚರ್ಚೆಯ ವಿಷಯವಲ್ಲ. ಇನ್ನು ಭಾಷೆಯ ವಿಷಯವಾಗಿ ಹೇಳುವುದಾದರೆ, ನಾನು ಯಾವುದೇ ಭಾಷೆಯನ್ನು ಕಡ್ಡಾಯಮಾಡಿ ಎಂದು ಹೇಳುವುದಿಲ್ಲ. ಯಾವುದಾದರೂ ಎರಡು ಭಾಷೆಗಳನ್ನು ಆಯ್ದುಕೊಂಡು ಅಭ್ಯಾಸಮಾಡಲು ಅವಕಾಶವಿರಬೇಕೆಂಬುದಷ್ಟೇ ನನ್ನ ಅಪೇಕ್ಷೆ.

ಕಲಿಕೆಯ ಭಾಷೆಯಾಗಿ ಇಂಗ್ಲಿಷ್ ಬಲಾತ್ಕಾರದ್ದಾಗಿ ಉಳಿಯುವುದು ಬೇಡ. ಬೇಕೆಂದರೆ ನೂರಕ್ಕೆ ನೂರು ಜನರೂ ಅದನ್ನೇ ಆರಿಸಿಕೊಳ್ಳಲಿ; ಬೇಡವಾದರೆ ಒಬ್ಬನಿಗಾದರೂ ಅದನ್ನು ಬಿಡುವ ಅವಕಾಶವಿರಲಿ. ಇಂಗ್ಲಿಷನ್ನು ಬಲಾತ್ಕಾರದ ಸ್ಥಾನದಿಂದ ಐಚ್ಛಿಕಸ್ಥಾನಕ್ಕೆ ಇಳಿಸುವುದಷ್ಟೆ ಈಗ ಆಗಬೇಕಾದ ಕೆಲಸ. ಇಂಗ್ಲಿಷ್ ಬೇಡ ಎನ್ನುವವರ ಗುಂಪಿಗೆ ನಾನು ಸೇರಿದವನಲ್ಲ. ಆದರೆ ಯಾವುದೇ ಭಾಷೆಯನ್ನಾದರೂ ಯಾರಿಗೆ? ಎಷ್ಟು? ಏಕೆ? ಎನ್ನುವ ತತ್ವದ ಒರೆಗಲ್ಲಿಗೆ ಹಚ್ಚದೆ ಮುಂದುವರಿಯುವುದು ಕ್ಷೇಮವಲ್ಲ. ಬಲಾತ್ಕಾರದ ಅಂಶವಂತೂ ಪ್ರಜಾಸತ್ತೆಗೆ ಮಾರಕವಾಗುತ್ತದೆ.

'ಜ್ಞಾನಂ ವಿಜ್ಞಾನಸಹಿತಂ' ಎಂಬುದು ಈ ವಿಶ್ವವಿದ್ಯಾನಿಲಯದ ಧ್ಯೇಯೋಕ್ತಿಯಾಗಿದೆ. ವಿಜ್ಞಾನಕ್ಕೇ ಮೂಲಭೂತವಾದ ಮನೋಧರ್ಮ–ವೈಚಾರಿಕ ಬುದ್ಧಿ. ಅದನ್ನು ಜಾಗ್ರತಗೊಳಿಸಬೇಕಾದುದು ವಿಶ್ವವಿದ್ಯಾನಿಲಯಗಳ ಕರ್ತವ್ಯ. ಕಾರ್ಖಾನೆಗಳು, ವೈಜ್ಞಾನಿಕ ತಾಂತ್ರಿಕ ಸಂಸ್ಥೆಗಳು, ಸಂಶೋಧನಾಲಯಗಳು ಇವುಗಳಷ್ಟರಿಂದಲೇ ವಿಜ್ಞಾನ ಸಿದ್ಧಿಸುವುದಿಲ್ಲ. ಲೌಕಿಕ ಅಭ್ಯುದಯಗಳ ಸಾಧನೆಯಿಂದಲೇ ವೈಜ್ಞಾನಿಕ ದೃಷ್ಟಿ ಬೆಳೆದಂತಾಗುವುದಿಲ್ಲ. ವಿಚಾರ ಮತ್ತು ವಿಜ್ಞಾನಗಳು ಮನೋಬುದ್ಧಿಗಳನ್ನು ಸಂಪೂರ್ಣವಾಗಿ ಪ್ರವೇಶಿಸಿ ಪರಿವರ್ತಿಸಿದಾಗಲೆ

ವೈಜ್ಞಾನಿಕ ದೃಷ್ಟಿಗೆ ಅರ್ಥ ಬರುವುದು. ಶತಶತಮಾನಗಳಿಂದ ನಮ್ಮಲ್ಲಿ ಬೆಳೆದು ಬಂದಿರುವ ಜಾತಿ ಮತ ಆಚಾರ ಸಂಪ್ರದಾಯಗಳ ಹೆಸರಿನಲ್ಲಿ ನಡೆಯುತ್ತಿರುವ ಮೌಢ್ಯಮೂಲವಾದ ಅವೈಜ್ಞಾನಿಕ ಘಟನೆಗಳು ನಮ್ಮ ಪ್ರಗತಿಗೆ ಕಂಟಕಪ್ರಾಯವಾಗಿದೆ. ಆದಷ್ಟು ಬೇಗ ನಾವು ಇವುಗಳಿಂದ ಪಾರಾಗಬೇಕು. ಇದು ವೈಜ್ಞಾನಿಕ ದೃಷ್ಟಿ, ವಿಚಾರಬುದ್ಧಿಗಳಿಂದ ಮಾತ್ರ ಸಾಧ್ಯವೆ ಹೊರತು ಲೌಕಿಕ ಪ್ರಯೋಜನಕಾರಿಯಾದ ವಿಜ್ಞಾನವಿದ್ಯೆ ಮತ್ತು ಯಂತ್ರವಿದ್ಯೆಗಳಷ್ಟರಿಂದಲೆ ನಡೆಯುತ್ತದೆಂದು ಭಾವಿಸುವುದು ತಪ್ಪಾಗುತ್ತದೆ. ಪ್ರತ್ಯೇಕ ವಿಶ್ವವಿದ್ಯಾನಿಲಯವಾಗಿ ಅಸ್ತಿತ್ವಕ್ಕೆ ಬರುವುದಕ್ಕೆ ಮೊದಲಿನಿಂದಲೆ ವಿಜ್ಞಾನವಿದ್ಯೆಗೆ ಕೇಂದ್ರವಾಗಿದ್ದ ಬೆಂಗಳೂರು ವಿಶ್ವವಿದ್ಯಾನಿಲಯವು ನವದೃಷ್ಟಿ, ನವವಿಚಾರಗಳ ನೆಲೆಯಾಗಿ ತನ್ನ ಧ್ಯೇಯೋಕ್ತಿಯನ್ನು ಸಾರ್ಥಕಪಡಿಸಿಕೊಳ್ಳಲೆಂದು ನಾನು ಹಾರೈಸುತ್ತೇನೆ.

ಈ ವಿಶ್ವವಿದ್ಯಾನಿಲಯವು ನನ್ನದೇ ಎಂಬ ಅಭಿಮಾನ ನನಗಿದೆ. ಇದಕ್ಕೆ ಕಾರಣಗಳೂ ಇಲ್ಲದಿಲ್ಲ. ಯಾವ ವಿಶ್ವವಿದ್ಯಾನಿಲಯ ನನ್ನ ವಿದ್ಯಾಮಾತೆಯೂ ಕಾರ್ಯರಂಗವೂ ಆಗಿತ್ತೋ ಆ ಮೈಸೂರು ವಿಶ್ವವಿದ್ಯಾನಿಲಯದ ಭಾಗವೇ ಆಗಿತ್ತು ಇದು, ನಿನ್ನೆ ಮೊನ್ನೆಯವರೆಗೆ. ಈ ವಿಶ್ವವಿದ್ಯಾನಿಲಯದ ಎರಡು ಮುಖ್ಯ ಕಾಲೇಜುಗಳಲ್ಲಿ ನಾನು ಕೆಲವು ವರ್ಷ ಅಧ್ಯಾಪಕನಾಗಿಯೂ ಕೆಲಸ ಮಾಡಿದ ನೆನಪು ಇನ್ನೂ ಹಸುರಾಗಿದೆ. ಈಗ ಈ ಗೌರವ ಡಾಕ್ಟರೇಟ್ ಪದವಿಯಿಂದ ನಾನು ಈ ವಿಶ್ವವಿದ್ಯಾನಿಲಯದ ವಿದ್ಯಾರ್ಥಿಯೂ ಆಗಿದ್ದೇನೆ. ಇದಕ್ಕಿಂತ ಹೆಚ್ಚಿನ ಸಂತೋಷ ಗೌರವ ಇನ್ನು ಯಾವುದಿದೆ?

ನನ್ನಲ್ಲಿ ತೋರಿದ ಈ ಗೌರವಕ್ಕಾಗಿ ನಾನು ತಮ್ಮೆಲ್ಲರಿಗೂ ಮತ್ತೊಮ್ಮೆ ಕೃತಜ್ಞತೆಗಳನ್ನರ್ಪಿಸುತ್ತೇನೆ.

# ಕದನಕ್ಕೆ ಸಜ್ಜು[೧]

ಮಿತ್ರರಲ್ಲಿ ವಿಜ್ಞಾಪನೆ. ಇದುವರೆಗಿನ ಸೈನ್ಯದ ಸಜ್ಜಿನ ವಿಚಾರ ಇವುಗಳನ್ನೆಲ್ಲ ಕುರಿತು ಮಾನಪ್ಪನಾಯಕರು ಮತ್ತು ಲಕ್ಷ್ಮಣರಾಯರು ಮಾತನಾಡಿದ್ದಾರೆ. ಇಲ್ಲಿ ನೀವು ನೆರೆದಿರುವುದು ಪ್ರಾರಂಭವಾಗಲಿರುವ ಕದನಕ್ಕೆ ಮುಂದೆ ನುಗ್ಗುವ ಸೂಚನೆ ಕೊಡುವ ತೂರ್ಯಧ್ವನಿಗಾಗಿ.

ಸ್ವಾತಂತ್ರ್ಯಾನಂತರ ಎಷ್ಟೋ ಕ್ಷೇತ್ರಗಳಲ್ಲಿ ಅನಾಹುತಗಳನ್ನು ಕೂಡ ಅನುಭವಿಸಿಕೊಂಡು ನಮ್ಮ ದೇಶ ಮುಂದೆ ಹೋಗುತ್ತಾ ಇದೆ. ತಕ್ಕಮಟ್ಟಿಗೆ ಬಹಿಃ ಸ್ವಾತಂತ್ರ್ಯವನ್ನೇನೊ ಸಾಧಿಸಿಕೊಂಡಿದ್ದೇವೆ. ಆದರೆ ಅಂತಃಸ್ವಾತಂತ್ರ್ಯದ ವಿಚಾರದಲ್ಲಿ ನಾವು ಸಿದ್ಧಿಸಿಕೊಳ್ಳಬೇಕಾದುದು ಬಹಳ ಇದೆ. ಈ ಭಾಷೆ, ಸಾಹಿತ್ಯ ಅಥವಾ ಶಿಕ್ಷಣಮಾಧ್ಯಮ ಅನ್ನುವುದರ ಅಂತರಾರ್ಥ ಈ ಸ್ವಾತಂತ್ರ್ಯವನ್ನು ಸಂಪಾದಿಸಿಕೊಳ್ಳುವ ವಿಧಾನ ಮಾತ್ರವಾಗಿದೆ. ಬಹುಕಾಲದಿಂದ ರೂಢಿಯಲ್ಲಿರುವ ಯಾವುದಾದರೂ ಒಂದು ಅಭ್ಯಾಸವನ್ನು ಬಿಟ್ಟುಕೊಡುವುದು ಸಾಮಾನ್ಯಚೇತನಗಳಿಗೆ ಬಹಳ ಕಷ್ಟದ ವಿಷಯ. ನಾವೆಲ್ಲ ನಿಮ್ಮಂತೆಯೆ, ನಿಮ್ಮಲ್ಲಿರುವ ಕೆಲವರಂತೆಯಾದರೂ, ಆಗತಾನೆ ವಿದ್ಯಾರ್ಥಿದಶೆಯಿಂದ ಹೊರಗೆ ಬಂದ ಕಾಲದಿಂದ ಹಿಡಿದು ಇವತ್ತಿನವರೆಗೂ, ಸುಮಾರು ನಲವತ್ತು ವರ್ಷಗಳಿಂದ, ಇದಕ್ಕಾಗಿ ನಾನಾರೀತಿಗಳಲ್ಲಿ, ಸಭ್ಯವಾಗಿಯೊ ಅಸಭ್ಯವಾಗಿಯೊ, ಪ್ರಯತ್ನಗಳನ್ನು ನಡೆಸುತ್ತ ಬಂದಿದ್ದೇವೆ. ನಾನಾ ತರಹದ ಅಸಂತೃಪ್ತಿಗಳೂ ಮೀನಮೇಷಗಳೂ ಎಲ್ಲ ನಡೆದಿವೆ. ಮೊದಮೊದಲು ಈ ಕಾರ್ಯಮಾಡಬೇಕು ಅನ್ನುವವರೆಲ್ಲ ಒಂದು ಅಭಿಮಾನದಿಂದ–ದೇಶಾಭಿಮಾನ, ಭಾಷಾಭಿಮಾನ, ಸಾಹಿತ್ಯಾಭಿಮಾನ, ನಮ್ಮದು, ನಮ್ಮಭಾಷೆ, ನಮ್ಮ ನಾಡು ಅನ್ನೋ ಅಭಿಮಾನದಿಂದಲೇ ಪ್ರಾರಂಭ ಮಾಡುತ್ತಿದ್ದೆವು. ಲಾಭ ಏನೂ ಇರಲಿಲ್ಲ. ಅಷ್ಟೇ ಅಲ್ಲ, ಅದಕ್ಕೆ ತದ್ವಿರುದ್ಧವಾಗಿ ನಷ್ಟವು ಕೂಡಾ ಆಗುತ್ತಾ ಇತ್ತು. ಆದರೆ ಸದಾಕಾಲವೂ ಅಭಿಮಾನಕ್ಕೋಸ್ಕರವಾಗಿಯೇ ದುಡಿಯಿರಿ ಎಂದು ಕೇಳಿಕೊಳ್ಳುವುದು ಅಷ್ಟು ಸಭ್ಯತೆಯೂ ಅಲ್ಲ. ಇತ್ತೀಚೆಗೆ ಸ್ವಲ್ಪಮಟ್ಟಿಗೆ ಅಭಿಮಾನಕ್ಕೆ ತಕ್ಕ ಪ್ರತಿಫಲವೂ ದೊರೆಯಲು ಪ್ರಾರಂಭವಾಗಿದೆ. ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಈ ಕನ್ನಡ ಮಾಧ್ಯಮದ ಮುಖಾಂತರವಾಗಿ ಪ್ರಚಾರೋಪನ್ಯಾಸಗಳನ್ನು ಏರ್ಪಡಿಸಿ ಆ ಭಾಷಣಗಳನ್ನು ಸಣ್ಣಸಣ್ಣ ಪುಸ್ತಕಗಳ ರೂಪದಲ್ಲಿ ಬರೆಸಿ ಪ್ರಕಟಿಸುತ್ತಿದ್ದಾರೆ. ಸುಮಾರು ೪೫–೫೦ ವರ್ಷಗಳಿಂದ ಈ ಕೆಲಸ ನಡೆಯುತ್ತಾ ಇದೆ. ಆದ್ದರಿಂದಲೆ ಭರತಖಂಡದ ಇನ್ನಾವ

[೧]ಮೈಸೂರು ವಿಶ್ವವಿದ್ಯಾನಿಲಯದ ಕನ್ನಡ ಅಧ್ಯಯನ ಸಂಸ್ಥೆ ವ್ಯವಸ್ಥೆಗೊಳಿಸಿದ್ದ ವಿಜ್ಞಾನಲೇಖಕರ ಮೊದಲ ಕಾರ್ಯಶಿಬಿರವನ್ನು ಉದ್ಘಾಟಿಸಿ ಮಾಡಿದ ಭಾಷಣ. ಮೈಸೂರು: ಜೂನ್ ೧, ೧೯೭೦.

ವಿಶ್ವವಿದ್ಯಾನಿಲಯದಲ್ಲೂ ನಡೆಯದೆ ಇದ್ದ ಕೆಲಸ ಇಲ್ಲಿ ನಡೆಯಿತು, ನಡೆಯುತ್ತಾ ಇದೆ. ವಿಶ್ವವಿದ್ಯಾನಿಲಯಗಳಲ್ಲಿ ಅನೇಕ ಕಡೆಗಳಲ್ಲಿ ಬಹುಶಃ ಬೋಧನಾಂಗವೆ ಪ್ರಧಾನವಾಗಿ ಕೆಲಸ ಮಾಡುತ್ತಾ ಇದೆ. ಸ್ನಾತಕೋತ್ತರ ಸಂಶೋಧನಾಂಗವು ಅನೇಕ ಕಡೆಗಳಲ್ಲಿ ಇದೆ. ಆದರೆ ಈ ಪ್ರಸಾರಯೋಜನೆ ಬೇರೆ ಕಡೆಗಳಲ್ಲಿ ಇರಲಿಲ್ಲ. ಪ್ರಿನ್ಸಿಪಾಲ್ ಜೆ.ಸಿ. ರಾಲೊ ಅವರು ಇಂಗ್ಲೆಂಡಿಗೆ ಹೋಗಿ ಅಲ್ಲಿ ಯಾವುದೊ ಒಂದು ವಿದ್ಯಾಸಮ್ಮೇಳನದಲ್ಲಿ ನಮ್ಮ ಈ ಯೋಜನೆಯನ್ನು ಕುರಿತು ಮಾತನಾಡಿದಾಗ ಅವರು ಕೂಡ ಇಂಥ ಕೆಲಸ ಬಹಳ ಅಪೂರ್ವವಾದುದು ಎಂದು ಪ್ರಶಂಸಿಸಿದರಂತೆ. ವಿಶ್ವವಿದ್ಯಾನಿಲಯವನ್ನು ಸಾಮಾನ್ಯ ಜನವರ್ಗದ ಬಳಿಗೆ ತೆಗೆದುಕೊಂಡ ಹೋಗತಕ್ಕ ವಿಧಾನ ಎಂದು ಅವರು ಶಿಫಾರಸ್ಸನ್ನು ಕೂಡ ಪಡೆದುಕೊಂಡು ಬಂದಿದ್ದರು. ಆದರೆ ಅಂದು ನಮ್ಮವರೆ ಆದಂತಹ ಪ್ರಚ್ಛನ್ನ ವಿರೋಧಿಗಳು ನಾನಾರೂಪದಲ್ಲಿ ಎದುರುಕೆಲಸ ಮಾಡುತ್ತಾ ಇದ್ದರು. ಅಲ್ಲಿ ಕೆಲವರು ಚಕ್ರ ಮುಂದೆ ಹೋಗೋದಕ್ಕೆ ತಳ್ಳುತ್ತಾ ಇದ್ದರೆ, ಕೈಯೇನೊ ತಳ್ಳುತ್ತಾ ಇದ್ದ ಹಾಗೆ ಕಾಣುತ್ತಿತ್ತು! ಆದರೆ ವಾಸ್ತವವಾಗಿ ಅವರು ಮಾಡುತ್ತಿದ್ದ ಕೆಲಸ ಹಿಂದಕ್ಕೆ ಜಗ್ಗುತ್ತಾ ಇದ್ದದ್ದು. ಅಪಾಯವಾಗದೆ ಇರುವಂತೆ, ಅತೀವೇಗದಲ್ಲಿ ಹೋಗಿ ಮುಗ್ಗರಿಸಿ ಉರುಳದೆ ಇರುವಂತೆ ಮಾಡಲು ಬಿರಿಯೂ ಅಷ್ಟೇ ಆವಶ್ಯಕ. ಆದರೆ ಚಕ್ರದ ಕೆಲಸ ಮಾಡುವವರಿಗಿಂತ ಬಿರಿಯ ಕೆಲಸ ಮಾಡುವವರೆ ಹೆಚ್ಚಾದರೆ ಪ್ರಗತಿಯೆ ಆಗುವುದಿಲ್ಲ. ಈಗ ಆ ಸ್ಥಿತಿ ಇಲ್ಲ. ನಾವೀಗ ವೀರಾವೇಶ ಮಾಡಬೇಕಾದಂತಹ ಸ್ಥಿತಿಯಿಲ್ಲ. ಆದರೂ ಈ ಯುದ್ಧ ನಡೆಯುತ್ತದೆ. ಇನ್ನೂ ಎಷ್ಟೋ ವರ್ಷಗಳವರೆಗೆ ನಡೆಯುವಂತೆ ಕಾಣುತ್ತದೆ. ಅದರಲ್ಲಿ ಮುನ್ನುಗ್ಗುವುದಕ್ಕೋಸ್ಕರವಾಗಿ ಈಗ ಕೆಲಸ ನಡೆಯುತ್ತಾ ಇದೆ. ಈಗ ಜನರ ಮನಸ್ಸಿನಲ್ಲಿ ಈ ವಿಚಾರವಾಗಿ ಒಂದು ನಿರ್ದಿಷ್ಟವಾದ ಇತ್ಯರ್ಥ ಒದಗಿದೆ. ಏನೆಂದರೆ, ಆಯಾ ರಾಜ್ಯಗಳಲ್ಲಿ ಆಯಾ ರಾಜ್ಯಭಾಷೆಯೆ ಅಧಿಕೃತ ಭಾಷೆ, ಪ್ರಥಮ ಭಾಷೆ, ಶಿಕ್ಷಣದ ಮಾಧ್ಯಮದ ಭಾಷೆ, ಕೋರ್ಟ್ ಮತ್ತಿತರ ಎಲ್ಲ ವ್ಯವಹಾರಗಳ ಭಾಷೆಯಾಗಬೇಕು ಎಂಬುದು.

ಈಗ ಕೇಂದ್ರ ಸರ್ಕಾರವೆ ಒಂದೊಂದು ರಾಜ್ಯಕ್ಕೆ ಒಂದೊಂದು ಕೋಟಿ ರೂಪಾಯಿಗಳನ್ನು ಕೊಡುತ್ತಾ ಇದೆ. ಮೂರು ಹೊತ್ತೂ ಮೂರುಕಾಸು ಅಂದ್ರೇನೆ ಹೆಚ್ಚು ಅನ್ನುವವರಿಗೆ ಒಂದು ಕೋಟಿ ರೂಪಾಯಿ ಅಂದರೆ ಬಹಳ ದೊಡ್ಡದಾಗಿ ಕಾಣುತ್ತದೆ. ಆದರೆ ಉಳಿದ ದೇಶಗಳಲ್ಲಿ ಅವರು ಇದಕ್ಕೆಲ್ಲ ಖರ್ಚುಮಾಡುತ್ತಾ ಇರುವುದನ್ನು ನೋಡಿದರೆ, ನಮ್ಮ ಒಂದು ಕೋಟಿರೂಪಾಯಿ ವಾಸ್ತವವಾಗಿ ಹೆಚ್ಚಲ್ಲ. ಸೈನ್ಯಕ್ಕೆ, ನಮ್ಮ ನಮ್ಮ ಅವಿವೇಕದ ಜಗಳಗಳನ್ನು ಬಗೆಹರಿಸುವುದಕ್ಕೆ, ಎಷ್ಟೋ ಕೋಟಿರೂಪಾಯಿಗಳನ್ನು ಖರ್ಚು ಮಾಡುತ್ತಾ ಇದ್ದೇವೆ. ಹೀಗೆ ನಿಷೇಧಾತ್ಮಕವಾದ ಕಾರ್ಯಗಳಿಗೆ ಎಷ್ಟೊಂದು ಖರ್ಚು ಆಗುತ್ತಾ ಇದೆ! ಆದರೆ ಈ ಕಾರ್ಯ ನಿಷೇಧಾತ್ಮಕವಾದುದಲ್ಲ. ಇದರಿಂದ ಏನೊ ಒಂದು ರಚನಾತ್ಮಕವಾದದ್ದು ನಡೆಯುತ್ತದೆ. ಈ ಕೆಲಸಕ್ಕೆ ಒಂದು ಕೋಟಿ ಹೆಚ್ಚಲ್ಲ. ಆದರೂ ನಾವು ಹಿಂದೆ ಇದ್ದ ಸ್ಥಿತಿಯನ್ನು ನೋಡಿದರೆ, ನಿಜಕ್ಕೂ ನಾವು ತಕ್ಕಮಟ್ಟಿಗೆ ಶ್ರೀಮಂತರಾಗಿದ್ದೇವೆ ಎಂದುಕೊಳ್ಳಬಹುದು. ಈಗ ಆ ರೀತಿಯ

ಕಾರ್ಯಗಳಿಗೆ ಹಣದ ಕೊರತೆಯೇನೂ ಇಲ್ಲ. ಕೆಲಸಕ್ಕೆ ಜನ ಒದಗುವುದು ಸಾಲದಾಗಿದೆ. ಈಚೀಚೆಗೆ ವ್ಯಕ್ತಿಗಳಿಗೆ ಬರಿ ಅಭಿಮಾನ, ಉತ್ಸಾಹ ಅನ್ನುವುದು ಮಾತ್ರವಲ್ಲದೆ, ಅದರಿಂದ ಪ್ರತಿಫಲವೂ ಲಭಿಸುತ್ತಿದೆ. ಪ್ರಸಾರಾಂಗದಿಂದಾಗಲಿ ಅಥವಾ ಅಧ್ಯಯನಸಂಸ್ಥೆಯಿಂದಾಗಲಿ ಒಂದು ಪುಸ್ತಕ ಪ್ರಕಟವಾದರೆ ಅದರ ಮುಖಬೆಲೆಯ ಮೇಲೆ ಶೇಕಡಾ ಇಂತಿಷ್ಟು ಅಂತಾ ತಕ್ಷಣ ಸಂಭಾವನೆ ದೊರೆಯುತ್ತದೆ. ಇದನ್ನು ನಾವು ಹಿಂದೆ ಕನಸಿನಲ್ಲೂ ಆಲೋಚನೆ ಮಾಡುವುದಕ್ಕೆ ಆಗುತ್ತಿರಲಿಲ್ಲ. ಎಷ್ಟರಮಟ್ಟಿಗೆ ಎಂದರೆ ೨೦-೩೦ ವರ್ಷಗಳಿಗೆ ಹಿಂದೆ ನಮ್ಮ ಬರಹವನ್ನು ಯಾರಾದರೂ ಕಿವಿಗೊಟ್ಟು ಕೇಳುತ್ತಾರೆ ಅಂದರೇ ಸಂತೋಷವಾಗುತ್ತಿತ್ತು; ಯಾರಾದರೂ ಅಚ್ಚು ಹಾಕಿಸುತ್ತಾರೆ ಅಂದರೆ ಇನ್ನು ಅದಕ್ಕಿಂತಲೂ ನಮಗೆ 'ವೈಕುಂಠಪ್ರಾಪ್ತಿ' ಮತ್ತೊಂದಿಲ್ಲ ಎಂಬಷ್ಟು ಆನಂದವಾಗುತ್ತಿತ್ತು! ಯಾರಾದರೂ ನಮ್ಮ ಪದ್ಯವನ್ನೊ ಲೇಖನವನ್ನೊ ತೆಗೆದುಕೊಂಡು ಅದಕ್ಕೆ ಪ್ರತಿಯಾಗಿ ಗೌರವಧನ ಕೊಡುತ್ತಾರೆ ಅಂದುಬಿಟ್ಟರಂತೂ ನಮಗಂತೂ ಭಯಂಕರವಾದ ಆಶ್ಚರ್ಯವಾಗುತ್ತಿತ್ತು! ಬೆಲೆಯೇ ಇಲ್ಲದ ವಸ್ತು, ಅದಕ್ಕೆ ದುಡ್ಡು ಬೇರೆ ಕೊಡುತ್ತಾರೆಯೇ ಎಂಬಂಥ ಸ್ಥಿತಿ ಇತ್ತು. ಆ ಸ್ಥಿತಿಯಿಲ್ಲ ಈಗ. ಬಹಳ ದೂರ ಬಂದಿದ್ದೇವೆ.

ಗಾತ್ರದಲ್ಲಿ ಅಲ್ಲದೆ ಇದ್ದರೂ ಗುಣದಲ್ಲಿ ನಮ್ಮ ಸಾಹಿತ್ಯದಲ್ಲಿ ೩೦-೩೫ ವರ್ಷಗಳಿಂದ ಏನೇನು ಸೃಷ್ಟಿಯಾಗಿದೆ? ಎಷ್ಟೆಷ್ಟು ವೈವಿಧ್ಯ ಇದೆ? ಅನ್ನುವುದರ ವಿವರಣಾತ್ಮಕ ಅಧ್ಯಯನ ಮಾಡಬೇಕಾಗಿದೆ. ವಿವಿಧ ಪ್ರಕಾರದ ವಿವಿಧ ಸಾಹಿತ್ಯವನ್ನು ತೆಗೆದುಕೊಂಡರೆ ನಮ್ಮ ಸಾಹಿತ್ಯ ಯಾವ ಸಾಹಿತ್ಯದ ಮಟ್ಟಕ್ಕೂ ಕಿರಿದಲ್ಲ. ಭಾಷೆಯ ಪ್ರಯೋಗ-ಉಪಯೋಗಗಳ ವಿಚಾರವನ್ನು ತೆಗೆದುಕೊಂಡರೆ, ಇಂಗ್ಲಿಷ್ ಸಾಹಿತ್ಯದ ಉತ್ಕೃಷ್ಟ ಕೃತಿಗಳಲ್ಲಿ ಏನೇನು ಹೇಳಲು ಶಕ್ತಿ ಕನ್ನಡ ಸಾಹಿತ್ಯಕ್ಕಿದೆ ಎನ್ನುವುದನ್ನು ನಮ್ಮ ಲೇಖಕರು ತೋರಿಸಿಕೊಟ್ಟಿದ್ದಾರೆ. ಅಷ್ಟೇ ಅಲ್ಲ., ಆ ಪಾಶ್ಚಾತ್ಯದೇಶಗಳ ಸಾಹಿತ್ಯಗಳಿಗೆ ಎಂದೆಂದೂ ಕನಸಿನಲ್ಲಿಯೂ ಎಟುಕಲಾರದಂಥ ಕೆಲವು ಭಾವಗಳು, ಕೆಲವು ಸತ್ಯಗಳು, ಕೆಲವು ಅನುಭಾವಗಳು ಇವುಗಳನ್ನೆಲ್ಲ, ನಾವು ನಮ್ಮ ಹಿರಿಯರಿಂದ ಪಡೆಯುವುದರಿಂದ, (ಅವರಿಗಿಂತ ನಾವು ದೊಡ್ಡವರು ಎಂದೇನೂ ಅರ್ಥವಲ್ಲ!) ನಮ್ಮ ಸಾಹಿತ್ಯದ ಶಿಖರಗಳಲ್ಲಿ ನಿಂತಾಗ ಅವರ ಸಾಹಿತ್ಯದ ಶಿಖರಗಳಿಗಿಂತಲೂ ನಾವು ಹೆಚ್ಚಿನ ಮಟ್ಟದಲ್ಲಿ, ಹೆಚ್ಚಿನ ಎತ್ತರದಲ್ಲಿ ನಿಂತಿದ್ದೇವೆ ಎನ್ನಿಸುತ್ತದೆ. ಅವರಲ್ಲಿ ಅತ್ಯಂತ ಉನ್ನತವಾದವನು ನಿಂತರೂ ಆಲ್ಪ್ಸ್ ಪರ್ವತದ ಮೇಲೆ ನಿಲ್ಲುತ್ತಾನೆ; ನಮ್ಮಲ್ಲಿ ಅತ್ಯಂತ ಕುಬ್ಜನಾದವನು ನಿಂತರೂ ಹಿಮಾಲಯದ ಶಿಖರದ ಮೇಲೆ ನಿಲ್ಲುತ್ತಾನೆ! ಆದ್ದರಿಂದ ಎಂದಿದ್ದರೂ ನಾವು ಅವರಿಗಿಂತ ಎತ್ತರವಾಗಿಯೆ ಇರುತ್ತೇವೆ. ಅದು ನಮ್ಮ ಪಿತ್ರಾರ್ಜಿತವಾದ ವೈಶಿಷ್ಟ್ಯ. ಆದ್ದರಿಂದ ಆ ವಿಚಾರದಲ್ಲಿ ತಿಳಿದವರು ಯಾರೂ ನಮ್ಮ ಭಾಷೆಗೆ ಬಡತನವಿದೆ, ದೌರ್ಬಲ್ಯವಿದೆ ಎಂಬ ಮಾತುಗಳನ್ನು ಆಡಲಾರರು. ಇನ್ನು ನಮ್ಮ ತತ್ತ್ವಶಾಸ್ತ್ರ, ನಮ್ಮ ತರ್ಕಶಾಸ್ತ್ರ, ನಮ್ಮ ಯೋಗಶಾಸ್ತ್ರ ಇವುಗಳು ಮಾಡಿರುವ ಕೆಲಸ, ಇವುಗಳ ಪರಿಭಾಷೆ, ಇವುಗಳ ಮುಂದೆ ಪಾಶ್ಚಾತ್ಯರ

ಬಡತನ ಎದ್ದು ಕಾಣುತ್ತದೆ. ಆ ವಿಚಾರದಲ್ಲಿ ನಾವು ಅವರಿಂದ ಪಡೆಯಬೇಕಾದ್ದಿಲ್ಲ; ಕೊಡಬೇಕಾದ್ದು ಬೇಕಾದಷ್ಟು ಇದೆ. ವಿಜ್ಞಾನದ ವಿಚಾರದಲ್ಲಿ ಮಾತ್ರ ನಾವು ಅವರಿಂದ ಪಡೆಯಬೇಕಾದ್ದು, ಅವರಿಂದ ಕಲಿಯಬೇಕಾದ್ದು ಬೇಕಾದಷ್ಟು ಇದೆ. ಇನ್ನೂ ಆ ಮಟ್ಟಕ್ಕೆ ನಾವು ಏರಬೇಕಾದರೆ ಬಹಳಷ್ಟು ವರ್ಷಗಳೇ ಬೇಕಾಗುತ್ತವೆ.

ನಾನು ಕುಲಪತಿಯಾಗಿದ್ದಾಗ ಕನ್ನಡ ಮಾಧ್ಯಮ ಯೋಜನೆಯನ್ನು ಜಾರಿಗೆ ತಂದೆ. ವಿದ್ವಾಂಸರು ಆರು ತಿಂಗಳಲ್ಲಿ ಇಂಟರ್‌ಮೀಡಿಯಟ್ ಅಥವಾ ಪಿ.ಯು.ಸಿ. ಮಟ್ಟದ ಪುಸ್ತಕಗಳನ್ನೂ ಬರೆದುಕೊಟ್ಟರು. ವಿಜ್ಞಾನವನ್ನು ಸರಳ ಶೈಲಿಯಲ್ಲಿ ಹೇಳುವ ಮೂಲಭೂತ ಕಾರ್ಯ ನಮ್ಮ ಪ್ರಚಾರೋಪನ್ಯಾಸಮಾಲೆಯಲ್ಲಿ ಆಗಲೇ ಆಗಿದ್ದುದರಿಂದ ಈ ಕಾರ್ಯ ಶೀಘ್ರವಾಗಿ ಸಾಧ್ಯವಾಯಿತು. ಈಗಂತೂ ವಾಸ್ತವವಾಗಿ ನಾವು ಒಂದು ಕದನವನ್ನೆ ಪ್ರಾರಂಭ ಮಾಡುತ್ತಾ ಇದ್ದೇವೆ. ಪರಿಭಾಷೆಯ ವಿಚಾರವನ್ನು ತೆಗೆದುಕೊಂಡು ಇದನ್ನು ಹೇಗೆ ಹೇಳುತ್ತೀರಿ? ಅದನ್ನು ಹೇಗೆ ಹೇಳುತ್ತೀರಿ? ಎನ್ನುತ್ತಿದ್ದರು. ನಾನು ಅಂದು ಹೇಳುತ್ತಾ ಇದ್ದದ್ದನ್ನೇ ಇಂದೂ ಹೇಳುತ್ತೇನೆ. ಒಂದು ರೀತಿಯಲ್ಲಿ ಪಾರಿಭಾಷಿಕ ಶಬ್ದಗಳು ಅಂಕಿತನಾಮಗಳಿದ್ದಂತೆ. ಏನೋ ಒಂದು ಕೆಲಸ, ಅದನ್ನೆಲ್ಲಾ ವಿವರಿಸುವುದಕ್ಕೆ ಬದಲಾಗಿ ಒಂದು ಹೆಸರು. ಆ ಹೆಸರನ್ನು ಅಂಕಿತನಾಮದಂತೆ ಹಾಗೆಯೇ ಉಪಯೋಗಿಸಬಹುದು. ಅದನ್ನು ನಾನು ತಮಾಷೆಯಾಗಿ ಹೇಳುತ್ತಿದ್ದುದುಂಟು: ನೀವು 'ವಾಟರ್' ತೆಗೆದುಕೊಂಡು 'ಟೆಸ್ಟ್ ಟ್ಯೂಬ್'ಗೆ 'ಪೋರ್' ಮಾಡಿ ಅಂತ ಹೇಳಿದರೂ ಸಂತೋಷ. ನನಗೇನೂ ಅಭ್ಯಂತರ ಇಲ್ಲ. ಯಾಕೆ ಅಂದರೆ ಹುಡುಗರಿಗೆ ವಿಜ್ಞಾನದ ವಿಷಯ ತಿಳಿಯಬೇಕು ಅನ್ನುವುದು ನಮ್ಮ ಉದ್ದೇಶವೆ ಹೊರತು, ಆಂಡಯ್ಯ 'ಕಬ್ಬಿಗರ ಕಾವ' ಬರೆದ ಹಾಗೆ ಎಲ್ಲವನ್ನೂ ಕನ್ನಡದಲ್ಲಿ ಬರೆಯುತ್ತೇವೆ, ಎಲ್ಲವನ್ನೂ ಕನ್ನಡದಲ್ಲಿ ಮಾಡುತ್ತೇವೆ ಎಂಬ ಛಲವಲ್ಲ. ಅವನಿಗೆ ಸೌಲಭ್ಯವನ್ನು ಒದಗಿಸಿಕೊಡುವುದು  ಮುಖ್ಯ. ಬೇರೆ ಮಾತನ್ನು ಉಪಯೋಗಿಸಲು ಸಾಧ್ಯವಿಲ್ಲದೆ ಇದ್ದರೆ ಆ ಶಬ್ದಗಳನ್ನು ಹಾಗೆಯೇ ಬಳಸಿ. ಹೇಗೆ ಸೂರ್ಯ, ಚಂದ್ರ ಅನ್ನೋ ಪದಗಳು ಕನ್ನಡ ಆಗಿ ಬಿಟ್ಟಿವೆಯೇ ಹಾಗೆ ಸ್ವಿಚ್ಚು, ಬಲ್ಬು, ಬೋರ್ಡು, ಇವೆಲ್ಲ ಕನ್ನಡ ಪದಗಳೆ! ಅದನ್ನು ಯಾರೂ ಇಂಗ್ಲಿಷ್ ಅನ್ನುವುದಿಲ್ಲ. ಹಾಗೆಯೆ ಈ ಪಾರಿಭಾಷಿಕ ಪದಗಳೂ ಸಂಪೂರ್ಣವಾಗಿ ಕನ್ನಡವೇ ಆಗುತ್ತವೆ. ಆದ್ದರಿಂದ ಆದಷ್ಟುಮಟ್ಟಿಗೂ ಅಂತರರಾಷ್ಟ್ರಿಯ ಪರಿಭಾಷೆಯನ್ನು, ಸಂಕೇತಗಳನ್ನೂ, ಪ್ಲಸ್, ಮೈನಸ್ ಸ್ಕ್ವೇರ್ ರೂಟ್ ಇವನ್ನೆಲ್ಲಾ–ಹಾಗೆ ಹಾಗೆ ಉಪಯೋಗಿಸುವುದರಿಂದ ಏನೂ ತೊಂದರೆಯಿಲ್ಲ. ಮೊದಮೊದಲು ವಿನೂತನವಾಗಿ ಕಾಣಬಹುದು. ಮುಂದಿನ ತಲೆಮಾರಿನ ಹೊತ್ತಿಗೆ ಅವೆಲ್ಲ ನಮ್ಮವೇ ಆಗಿರುತ್ತವೆ.

ಮೊನ್ನೆ ಈ 'ವಿಜ್ಞಾನ ಕರ್ಣಾಟಕ'ದಲ್ಲಿ ಆರ್.ಎಲ್. ನರಸಿಂಹಯ್ಯನವರ ಬಗ್ಗೆ ಒಳ್ಳೊಳ್ಳೆ ಲೇಖನಗಳನ್ನೆಲ್ಲ ನೋಡುತ್ತಾ ಇದ್ದೆ. ಅದರಲ್ಲಿ ಎ.ಎನ್. ಮೂರ್ತಿರಾಯರು ಬರೆದ ಒಂದು ಲೇಖನ ಇದೆ. ಆರ್.ಎಲ್. ನರಸಿಂಹಯ್ಯನವರು ಒಂದು ಕೋಶವನ್ನು ಮಾಡುತ್ತಾ ಇದ್ದರು ಎಂದು ಹೇಳಿದ್ದಾರೆ. ಅಲ್ಲ ಅವರು Electro-encephalograph

ಎಂಬುದನ್ನು 'ವಿದ್ಯುನ್ ಮಸ್ತಿಷ್ಕ ರೇಖಾ' ಎಂದು ಮಾಡಿದ್ದರಂತೆ. ಮೂರ್ತಿರಾಯರು 'ಇದಕ್ಕಿಂತಲೂ ಅದೇ ಹೆಸರಿಟ್ಟುಕೊಳ್ಳೋಣ' ಎಂದು ಹೇಳಿದರಂತೆ. ಇವರು 'ಇಲ್ಲ, ನಾನೇನೋ ಇದನ್ನೇ ಉಪಯೋಗಿಸುತ್ತೀನಿ. ಆಮೇಲೆ ಬೇಕಾದರೆ ಏನು ಬೇಕಾದರೂ ಮಾಡಿಕೊಳ್ಳಿ' ಅಂದರಂತೆ. ಎಲ್ಲಿ ಪರಿಭಾಷೆ ಅರ್ಥನಿಷ್ಠವಾಗಿರುತ್ತದೆಯೊ ಅಲ್ಲ ನಮ್ಮ ಭಾಷೆಯನ್ನು ಉಪಯೋಗಿಸಿಕೊಳ್ಳುವುದು ವಾಸಿ ಅಂತ ಕಾಣಿಸುತ್ತದೆ. ಏಕೆಂದರೆ 'Electro-encephalograph' ಅಂತ ಹೇಳಿದಾಗ ಅರ್ಥವಾಗದಿದ್ದ ವಿಷಯ 'ವಿದ್ಯುನ್ ಮಸ್ತಿಷ್ಕ ರೇಖಾ' ಎಂದು ಹೇಳಿದಾಗ ವಿವರಿಸಿದಂತಾಗಿ ಏನೋ ಒಂದು ಸ್ವಲ್ಪ ಅರ್ಥವಾಗುತ್ತದೆ. ಮೊನ್ನೆ ಒಂಬತ್ತೂಕಾಲು ಘಂಟೆಯಿಂದ ಒಂಬತ್ತೂವರೆಯ ವರೆಗೆ ಮೂರು ಜನ ಜೆಟ್ ವಿಮಾನದ ವಿಚಾರದಲ್ಲಿ –ನೀವು ಕೇಳಿದಿರೋ ಬಿಟ್ಟಿರೋ ಗೊತ್ತಿಲ್ಲ–ಅತ್ಯಂತ ಕ್ಲಿಷ್ಟ, ಗಹನ, ಸೂಕ್ಷ್ಮ ವಿಚಾರಗಳನ್ನೆಲ್ಲ ಕುರಿತು ಸಂವಾದ ಮಾಡಿದರು. ನನಗೆ ಎಲ್ಲಕ್ಕೂ ಆಶ್ಚರ್ಯವಾದದ್ದು, ಆ ಮೂರು ಜನ ಮಾತನಾಡುತ್ತಿದ್ದುದನ್ನು ನೋಡಿದರೆ ಬಹುಕಾಲದಿಂದ ಕನ್ನಡ ಪ್ರಾಧ್ಯಾಪಕರಾಗಿದ್ದರೂ ಆ ರೀತಿಯಲ್ಲಿ ಅಷ್ಟೊಂದು ಸುಲಭವಾಗಿ ಸ್ಪಷ್ಟವಾಗಿ ಮಾತನಾಡುತ್ತಿದ್ದರೋ ಇಲ್ಲವೋ ಅನ್ನೋ ಹಾಗೆ ಮಾತನಾಡುತ್ತಾ ಇದ್ದರು. ಈಗ ಅತ್ಯಂತ ಗಹನವಾದ ವಿಜ್ಞಾನದ ವಿಚಾರಗಳನ್ನೂ ಕನ್ನಡದಲ್ಲಿ ಹೇಳಬಹುದು. ಹುಡುಗರು, ಇಂಗ್ಲಿಷ್‌ನಲ್ಲಿ ಹೇಳುತ್ತಾ ಇರೋವಾಗ ಸುಮ್ಮನೆ ತಟಸ್ಥರಾಗಿ ಸಮಾಧಿಸ್ಥಿತಿಯಲ್ಲಿ ಎಂಬಂತೆ ಕುಳಿತಿರುತ್ತಾರೆ, ಅನೇಸ್ತೀಸಿಯಾ ಕೊಟ್ಟಂತೆ, ಏನಾದರೂ ಹೇಳಿಕೊಳ್ಳಲಿ ಅನ್ನುವಂತೆ. ಅದನ್ನೇ ನೀವು ಕನ್ನಡದಲ್ಲಿ ಹೇಳಲು ಶುರುಮಾಡಿದಾಗ ಕಣ್ಣಿನಲ್ಲಿ ಹೊಳಪು ಬರುತ್ತದೆ. ಮುಖದಲ್ಲಿ ನಗೆ ಮೂಡುತ್ತದೆ; ಒಂದು ತಿಳುವಳಿಕೆ ಉಂಟಾಗುತ್ತದೆ. ಅವನು ಎದ್ದು ಪ್ರಶ್ನೆ ಕೇಳುತ್ತಾನೆ. ಇಂಗ್ಲಿಷಿನಲ್ಲೇ ಮಾತನಾಡುತ್ತಾ ಇದ್ದರೆ, ಅವನು ಪ್ರಶ್ನೆಯನ್ನೂ ಕೇಳುವ ಗೋಜಿಗೇ ಹೋಗುವುದಿಲ್ಲ. ಎಲ್ಲವನ್ನೂ ತಿಳಿದುಕೊಂಡವನ ಹಾಗೆ ಸುಮ್ಮನಿದ್ದುಬಿಡುತ್ತಾನೆ. ಅಪ್ಪಿ ತಪ್ಪಿ ಪ್ರಶ್ನೆ ಕೇಳಿದರೆ, ಕೇಳುವಾಗ ಪ್ರಶ್ನೆಯಲ್ಲಿಯೇ ಎಲ್ಲಿ ತಪ್ಪಾಗಿ ಎಲ್ಲರೂ ನಕ್ಕುಬಿಡುತ್ತಾರೋ ಎಂಬ ಭಯದಿಂದ ಅದರ ತಂಟೆಗೇ ಹೋಗುವುದಿಲ್ಲ. ಇಂಗ್ಲಿಷ್ ನಲ್ಲಿ ನೀವು ಪಾಠ ಹೇಳುತ್ತಾ ಇದ್ದರೆ, ಹುಡುಗರಿಗೆ ಅನೇಸ್ತೀಸಿಯಾ ಕೊಟ್ಟಹಾಗೆ ಇರುತ್ತೆ. ಏನು ಆಪರೇಷನ್ ಬೇಕಾದರೂ ಮಾಡಿ! ಎಲ್ಲ ಮಕ್ಕಳೂ ಒಂದುಘಂಟೆ ಆದಮೇಲೆ ಎಚ್ಚರಗೊಳ್ಳುತ್ತಾರೆ. ಆಮೇಲೆ ಕಣ್ಣುಬಿಟ್ಟುಕೊಂಡು ಹೊರಗೆ ಬರುತ್ತಾರೆ. ಮುಂದೆ ಏನು ಮಾಡಬೇಕು? ಯಾರಾದರೂ ಒಬ್ಬರ ಹತ್ತಿರ ಹೋಗಿ ಒಂದಷ್ಟು ದುಡ್ಡುಕೊಟ್ಟು, ದಮ್ಮಯ್ಯ ಗುಡ್ಡೆಹಾಕಿ ಒಂದು ಪ್ರಬಂಧ ಬರೆಸಿಕೊಂಡು ಬಾಯಿಪಾಠ ಮಾಡಿ ಪರೀಕ್ಷೆಯಲ್ಲಿ ಒಪ್ಪಿಸುತ್ತಾರೆ.

ಈ ಪರಿಭಾಷೆಯ ವಿಚಾರದಲ್ಲಿ ಮತ್ತೊಂದು ಮಾತು ಹೇಳಬೇಕು. ಈ ಮೂರು ವಿಶ್ವವಿದ್ಯಾನಿಲಯದವರು ಪಠ್ಯಪುಸ್ತಕಗಳನ್ನು ಬರೆಯುವವರು–ಒಬ್ಬೊಬ್ಬರು ಒಂದೊಂದು ಪರಿಭಾಷೆಯನ್ನು ಉಪಯೋಗಿಸುವುದು ಖಂಡಿತಾ ಕೂಡದು. ಅದು ಮಾತ್ರ ನಿಶ್ಚಯ. ಎಲ್ಲರಿಗೂ ಕಡೆಗೆ ಕನ್ನಡದಲ್ಲಾದರೂ, ಒಂದೇ ಒಂದು ಪರಿಭಾಷೆ

ಇರಬೇಕು. ಇದನ್ನು ನಾವು ಸಾಧಿಸಲೇಬೇಕು. ಕರ್ಣಾಟಕ ವಿಶ್ವವಿದ್ಯಾನಿಲಯದವರು 'ಪ್ರಾಣವಾಯು' ಅನ್ನುವುದು, ಮೈಸೂರು ವಿಶ್ವವಿದ್ಯಾನಿಲಯದವರು 'ಆಮ್ಲಜನಕ' ಅನ್ನುವುದು ಇದು ಆಗಬಾರದು. ಆಕ್ಸಿಜನ್, ಹೈಡ್ರೋಜನ್, ಕ್ಲೋರಿನ್ ಇಂಥ ಮಾತುಗಳನನ್ನು ಹಾಗೆ ಹಾಗೆ ಉಪಯೋಗಿಸಿದರೆ ವಾಸಿ. ಅದು ಅಂತರರಾಷ್ಟ್ರೀಯವಾಯಿತು, ಅಖಿಲಭಾರತೀಯವಾಯಿತು. ನಮಗೂ ರಗಳೆ ತಪ್ಪಿತು. ಇನ್ನು ಸಂಕೇತಗಳು ಸಿಂಬಲ್ಸ್, ABC ಅಥವಾ ಪ್ಲಸ್. ಮೈನಸ್ ಇತ್ಯಾದಿ. ಅವನ್ನು ಮಾತ್ರ ಅಂತರರಾಷ್ಟ್ರೀಯವಾದದ್ದನ್ನು ಹಾಗೆ ಹಾಗೆಯೇ ಇಟ್ಟುಕೊಳ್ಳಬೇಕು. ನಾನು ಹಿಂದೆ ಕನ್ನಡಸಾಹಿತ್ಯ ಪರಿಷತ್ತಿನ ಅಧ್ಯಕ್ಷನಾಗಿ ಧಾರವಾಡಕ್ಕೆ ಹೋದಾಗ ಅಲ್ಲೊಂದು ಪುಸ್ತಕ ಪ್ರದರ್ಶನ ನಡೆಯಿತು. ನಾನೊಂದು 'ಆಲ್ಜೀಬ್ರಾ' ಪುಸ್ತಕವನ್ನು ತೆಗೆದು ನೋಡಿದೆ. ಅ,ಬ,ಕ ಎಂದಿತ್ತು a,b,c ಎನ್ನುವುದಕ್ಕೆ! ನಾನು ಅಂದೇ ಹೇಳಿದೆ: "ನೋಡಿ ಇದು ಕನ್ನಡ ಮಾಧ್ಯಮ ಆದರೆ, ನಾನು ಇದಕ್ಕೆ ಸಂಪೂರ್ಣ ವಿರೋಧಿ. ಇಂಗ್ಲಿಷ್ ಮಾಧ್ಯಮವೆ ಇರಲಿ ಅಂತ ಹೇಳ್ತೇನೆ. ಖಂಡಿತಾ ಬೇಡ ಇದು. "ಈ ಅಕ್ಷರಗಳು, ಎಬಿಸಿ, ಸಿಂಬಲ್ಸ್, ಇವೆಲ್ಲ ಹಾಗೆ ಹಾಗೆ ಇರಬೇಕು.

ನನ್ನದು ಇನ್ನೊಂದು ಸೂಚನೆ ಇದೆ. ವರ್ಣಮಾಲೆಯಲ್ಲಿ ನಮ್ಮ ಮಕ್ಕಳಿಗೆ ನಾವು ಅ ಆ ಇ ಈ ಕಲಿಸುತ್ತೇವೆ. ಇನ್ನು ಒಂದು, ಎರಡು, ಮೂರು ನಾಲ್ಕು ಅಂತ ಕಲಿಸುತ್ತೇವೆ. ಕನ್ನಡದ ಅಂಕಿಗಳನ್ನೂ ಕಲಿಸುತ್ತೇವೆ. ರೋಮನ್ ಮತ್ತು ಅರಾಬಿಕ್ ಅಂಕಿಗಳನ್ನೂ ಕಲಿಸುತ್ತೇವೆ. ಅದೇನೂ ಕಷ್ಟ ಇಲ್ಲ. ಹಾಗೆಯೆ ಎಬಿಸಿ ಯಿಂದ ಜಡ್ ವರೆಗೆ ಇಪ್ಪತ್ತಾರು ಅಕ್ಷರಗಳನ್ನು ಕಲಿಸುವುದು, ಕಲಿತುಕೊಳ್ಳುವುದೂ ಏನೂ ಕಷ್ಟವಲ್ಲ. ಆದ್ದರಿಂದ ನಮ್ಮ ವರ್ಣಮಾಲೆಯಲ್ಲಿ ಕನ್ನಡದ ವರ್ಣಮಾಲೆಯ ಜೊತೆಗೆ ಇಂಗ್ಲಿಷ್ ವರ್ಣಮಾಲೆಯನ್ನೂ ಸೇರಿಸಿ ಹೇಳಿಕೊಡಿ. ಎಬಿಸಿ ಮುಂತಾದವನ್ನು ಎಲ್ಲ ಕ್ಷೇತ್ರಗಳಲ್ಲಿಯೂ ಬಳಸಬೇಕಾಗುತ್ತದೆ. ಆದ್ದರಿಂದ ಕನ್ನಡದ ವರ್ಣಮಾಲೆಯಲ್ಲಿ ೨೬ ಇಂಗ್ಲಿಷ್ ಅಕ್ಷರಗಳನ್ನು ಸೇರಿಸಿ ಹೇಳಿಕೊಟ್ಟುಬಿಟ್ಟರಾಯಿತು. ಇಂಗ್ಲಿಷ್ ಭಾಷೆ ತನ್ನ ಅಂತಃಸತ್ವದಿಂದ ಅಂತರ್‌ಮೌಲ್ಯದಿಂದಲೇ ಒಂದು ರೀತಿಯಲ್ಲಿ ವಿಶಿಷ್ಟ ಭಾಷೆಯಾಗಿಬಿಟ್ಟಿದೆ. ಅದರ ಸ್ಥಾನ ಎಂದಿಗೂ ಚ್ಯುತವಾಗುವುದಿಲ್ಲ. ನಿಶ್ಚಯ ಅದು. ಆ ಧೈರ್ಯ ಇಂಗ್ಲಿಷ್ ಮಾಧ್ಯಮವಾದಿಗಳಿಗಿಲ್ಲ, ನಮಗಿದೆ ಅದು. ಆದ್ದರಿಂದ ಅದನ್ನು ನಾನು ಹೇಳಿದೆ ಅಷ್ಟೆ. ಕನ್ನಡ ಮಾಧ್ಯಮ ಜಾರಿಗೆ ಬಂದಾಗ ಮೊದಲು ತರ್ಕಶಾಸ್ತ್ರವನ್ನು ಕನ್ನಡದಲ್ಲಿ ಬೋಧಿಸುವುದಕ್ಕೆ ಶುರು ಮಾಡಿದೆವು. ದಿವಂಗತ ಯಾಮುನಾಚಾರ್ಯರು ಪುಸ್ತಕ ಬರೆದುಕೊಟ್ಟರು. ಪರೀಕ್ಷೆಯಲ್ಲಿ ಕನ್ನಡ ಮಾಧ್ಯಮ ವಿದ್ಯಾರ್ಥಿಗಳು ೭೦–೮೦ರ ಮೇಲೆ ಅಂಕಗಳನ್ನು ತೆಗೆದುಕೊಂಡಿದ್ದರು. ಆಮೇಲೆ ಇದು ಹೇಗೆ ಸಾಧ್ಯವಾಯಿತು ಎಂದು ಆ ಹುಡುಗರನ್ನು ನಾನು ಕೇಳಿದೆ. ತರ್ಕಶಾಸ್ತ್ರ ಇಂಗ್ಲಿಷ್ ಮಾಧ್ಯಮದವರಿಗೆ ಕಷ್ಟ; ನಮಗೇನು ನೀರು ಕುಡಿದ ಹಾಗೆ. ಇಂಗ್ಲಿಷ್ ಭಾಷೆಯಲ್ಲಿ ಆ ಲ್ಯಾಟಿನ್ ಟರ್ಮ್ಸ್‌ನಲ್ಲಿ ಬಾಯಿಪಾಠ ಮಾಡಿಕೊಂಡು ಅದನ್ನು ಹಾಗೆ ಹಾಗೆ ನೆನಪಿಟ್ಟುಕೊಂಡು ಬರೆಯಬೇಕು. ಅಂಥ ಕ್ಲೇಶ ಕನ್ನಡ ಮಾಧ್ಯಮದಲ್ಲಿ ಇಲ್ಲ

ಎಂದರು. ಪಾಶ್ಚಾತ್ಯರಲ್ಲಿ ಅನೇಕರು, ವಿಶ್ವವಿದ್ಯಾನಿಲಯಗಳ ಮೆಟ್ಟಿಲನ್ನು ಕೂಡಾ ಹತ್ತದೇ ಇರುವವರು, ಎಷ್ಟೋಜನ ವಿಜ್ಞಾನದಲ್ಲಿ ದೊಡ್ಡ ಆವಿಷ್ಕಾರಗಳನ್ನು ಮಾಡಿದ್ದಾರೆ. ಕಾರಣ ಏನೆಂದರೆ ಅವರವರ ಭಾಷೆಗಳಲ್ಲಿ ಅವರು ಚಿಂತನ ನಡೆಸಿದ್ದಾರೆ. ಪುಸ್ತಕಗಳು ಕನ್ನಡದಲ್ಲಿ ಎಲ್ಲಕಡೆಯೂ ಇದ್ದರೆ ಪ್ರತಿಭೆ ಇರುವವನು ತಾನೇ ಓದಿಕೊಳ್ಳುತ್ತಾನೆ, ತಾನೇ ಕೆಲಸ ಮಾಡುತ್ತಾನೆ. ಈಗ ವಿಜ್ಞಾನದ ಜ್ಞಾನ ಸಾರ್ವತ್ರಿಕವಾದದ್ದು. ಸಮಸ್ತ ಜನಗಳಲ್ಲಿ ಹಬ್ಬುವಂತದ್ದು. ನಮ್ಮ ಜನ ಜೀವನದಲ್ಲಿಯೂ ಇದರ ಆವಶ್ಯಕತೆ ಎಷ್ಟಿದೆ? ಕಡೆಗೆ ಒಬ್ಬ ರೈತ, ಕೃಷಿಕ ಅವನೂ ಈಗ ಒಂದು 'ಟಿಲ್ಲರ್' ಉಪಯೋಗಿಸುತ್ತಾನೆ. ಅದೇನಾದರೂ ಸ್ವಲ್ಪ ಕೆಟ್ಟು ಹೋದರೆ, ನಿಮ್ಮ ಕನ್ನಡ ವಿಜ್ಞಾನ ಪುಸ್ತಕ ಓದಿ ಸರಿಮಾಡಿಕೊಳ್ಳುತ್ತಾನೆ. ಈಗ ಏನಾಗಿದೆ ಅಂದರೆ ಅವನಿಗೆ ಅದು ಗೊತ್ತೂಇಲ್ಲ. ಅವನು ಯಾರನ್ನಾದರೂ ಕರೆದುಕೊಂಡು ಬರಬೇಕಾದರೆ, ಎಲ್ಲೋ ಬೆಂಗಳೂರಿಗೋ ಮೈಸೂರಿಗೋ ಬಂದು ಹಿಂದೆ ಮಹರ್ಷಿಗಳನ್ನು ಕರೆದುಕೊಂಡು ಹೋಗುತ್ತಿದ್ದಂತೆ ಮೆಕ್ಯಾನಿಕ್ ಮಹಾರಾಜನನ್ನು ಕರೆದುಕೊಂಡು ಹೋಗಬೇಕು. ಒಂದು ನಿಮಿಷದಲ್ಲೊ ಎರಡು ನಿಮಿಷದಲ್ಲೊ ಮಾಡುವ ಕೆಲಸವನ್ನು ಈ ಮೆಕ್ಯಾನಿಕ್ ಮಹಾರಾಜ ಎರಡು ದಿವಸಾನೋ ಮೂರು ದಿವಸಾನೋ ಆರು ದಿವಸಾನೋ ಮಾಡ್ತಾನೆ. ಹೀಗಾಗಿ ಎಷ್ಟೋ ಟ್ರಾಕ್ಟರುಗಳು–೧೦ ಸಾವಿರ ಇಪ್ಪತ್ತು ಸಾವಿರ ಕೊಟ್ಟು ತೆಗೆದುಕೊಂಡು ಬಂದ ಟ್ರಾಕ್ಟರುಗಳು–ಗದ್ದೆ ಒಳಗೆ ನಿಂತುಬಿಟ್ಟಿರುತ್ತವೆ. ನಾಲ್ಕುವರ್ಷ ಆಗುತ್ತಿದ್ದ ಹಾಗೆ ಅವು ಯಾತಕ್ಕೂ ಬರದ ಹಾಗೆ ಆಗುತ್ತವೆ. ಯೋಚನೆಮಾಡಿ. ಎಷ್ಟೊಂದು ನಷ್ಟ ಆಗುತ್ತಾ ಇದೆ. ಆದ್ದರಿಂದ ಈ ವಿಜ್ಞಾನದಿಂದ ಸಮಸ್ತ ಜನರಿಗೂ ಸಾಕಷ್ಟು ಸಹಾಯವಾಗುತ್ತದೆ. ಬರೀ ವಿದ್ಯಾರ್ಥಿಗಳಿಗೆ ಮಾತ್ರ ಅಲ್ಲ ಇದು. ನಮ್ಮ ದೇಶದಲ್ಲಿ ಮತಮೌಢ್ಯದಿಂದ ರೂಢಿ ಸಂಪ್ರದಾಯಗಳಿಂದ ಅವಿವೇಕದ ಪರಂಪರೆಗಳನ್ನೂ ನಾವು ಎಷ್ಟೋ ನಂಬಿಕೆಯಿಂದ ನಡೆಸಿಕೊಂಡು ಹೋಗುತ್ತಾ ಇದ್ದೇವೆ. ಸಾಮಾನ್ಯ ಜನರಲ್ಲಂತೂ ಇಷ್ಟೊಂದು ಕಲಹ, ಹೊಡೆದಾಟ ನಮ್ಮ ದೇಶದಲ್ಲಿ ಆಗುತ್ತ ಇರುವುದಕ್ಕೆ ವೈಜ್ಞಾನಿಕ ಮನೋಧರ್ಮ ವೈಜ್ಞಾನಿಕ ಶಿಕ್ಷಣ ಇಲ್ಲದಿರುವುದೇ ಕಾರಣ. ಈ ವೈಜ್ಞಾನಿಕದೃಷ್ಟಿ ಬಂದುಬಿಟ್ಟರೆ ಆ ತೊಂದರೆಗಳೆಲ್ಲಾ ಪರಿಹಾರವಾಗಿಬಿಡುತ್ತವೆ. ವೈಜ್ಞಾನಿಕದೃಷ್ಟಿ ಮತ್ತು ವಿಚಾರಬುದ್ಧಿ ಇವು ವಿಜ್ಞಾನದಿಂದಲೇ ಸಾಧ್ಯ. ಈ ವಿಜ್ಞಾನದ ಮನೋಧರ್ಮ, ವೈಜ್ಞಾನಿಕದೃಷ್ಟಿ, ವಿಚಾರಬುದ್ಧಿಯುಳ್ಳವರು ನಮ್ಮಲ್ಲಿ ಇಲ್ಲ ಎಂದಲ್ಲ; ವೇದಾಂತಗಳಲ್ಲಿ ಪರಮವಿಚಾರ ಬುದ್ಧಿಯನ್ನು ಪಡೆದಂಥವರು ಸಾವಿರಾರು ಜನ ದೊಡ್ಡ ದೊಡ್ಡವರೆಲ್ಲ ಆಗಿಹೋಗಿದ್ದಾರೆ. ಆದರೆ ಆ 'ವಿಚಾರಬುದ್ಧಿ' ಸಾಮಾನ್ಯ ಜನತೆಗೂ ಬರಬೇಕಷ್ಟೆ. ಇದು ಅತ್ಯಂತ ಆವಶ್ಯಕ.

ಇಂಗ್ಲೆಂಡಿನಲ್ಲಿ ಲ್ಯಾಟಿನ್ ಭಾಷೆಯೇ ಪ್ರಧಾನವಾಗಿದ್ದ ಕಾಲದಲ್ಲಿ, ಲ್ಯಾಟಿನ್, ಗ್ರೀಕ್ ತೆಗೆದುಕೊಳ್ಳುವವರೆಲ್ಲ ಮೇಲ್ಮಟ್ಟದ ವಿದ್ಯಾರ್ಥಿಗಳು; ಇಂಗ್ಲಿಷ್ ಅನ್ನು ತೆಗೆದುಕೊಳ್ಳುವವರು ದಡ್ಡರು, ಇವನು ದಡ್ಡ ಎಂದು ಇವನನ್ನು ಇಂಗ್ಲಿಷ್ ಗೆ ಹಾಕಿದ್ದರಂತೆ! ಬಹಳ ಮೇಲ್ಮಟ್ಟದವರಿಗೆ ಲ್ಯಾಟಿನ್ ಗ್ರೀಕ್ ಕೊಡುತ್ತಾ ಇದ್ದರು ಎಂದು

ಚರ್ಚ್‌ಹಿಲ್ ತನ್ನ ಆತ್ಮಕಥೆಯಲ್ಲಿ ಬರೆಯುತ್ತಾನೆ. ಅಂದು ಅಲ್ಲಿ ಇಂಥ ಸ್ಥಿತಿ ಇತ್ತು. ಅವರು ಆಗ ಇದ್ದ ಸ್ಥಿತಿಯಲ್ಲಿ ನಾವು ಈಗ ಇದ್ದೇವೆ. ಬಹುಶಃ ಇನ್ನೂರು ವರ್ಷ ಹಿಂದೆಯೂ ಇದ್ದೇವೆ. ಮುಂದೆ ನಮ್ಮದೇಶವೂ ಅಂಥ ಸ್ಥಿತಿಗೆ ಬಂದಾಗ ನಮಗೇ ಆಶ್ಚರ್ಯವಾಗುತ್ತದೆ. ಸ್ವಲ್ಪ ನಗುವೂ ಬರುತ್ತದೆ! ಆದರೆ ಈಗ ಐವತ್ತು ವರ್ಷದಿಂದ ತಕ್ಕಮಟ್ಟಿಗೆ ಕೆಲಸ ನಡೆದುಕೊಂಡು ಹೋಗುತ್ತಾ ಇದೆ. ಸದ್ಯಕ್ಕೆ ಪರವಾ ಇಲ್ಲ. ದೇಶ, ಜನ, ಸರ್ಕಾರ, ವಿಶ್ವವಿದ್ಯಾನಿಲಯಗಳು ಎಲ್ಲರೂ–ಇಷ್ಟವಿರಲಿ ಇಲ್ಲದೆ ಇರಲಿ–ಒಪ್ಪಿಕೊಂಡುಬಿಟ್ಟಿದ್ದಾರೆ. ಈಗ ಯಾರೂ ಅದನ್ನು ಪ್ರಶ್ನೆ ಮಾಡುತ್ತಾ ಇಲ್ಲ. ಕೆಲವರಂತೂ ಚಕ್ರವನ್ನ ಮುಂದಕ್ಕೆ ನೂಕುವ ನೆವದಲ್ಲಿ ಅದನ್ನು ಪ್ರಶ್ನೆ ಮಾಡುತ್ತಾ ಇಲ್ಲ. ಅಂದರೆ, ಸಾಕಷ್ಟು ಪುಸ್ತಕಗಳು ಬರಲಿ, ಆಮೇಲೆ ಪ್ರಾರಂಭ ಮಾಡೋಣ; ಸಾಕಷ್ಟು ವಿದ್ಯಾರ್ಥಿಗಳು ಬರಲಿ, ಆಮೇಲೆ ಪ್ರಾರಂಭ ಮಾಡೋಣ; ಎಂದೆಲ್ಲಾ ಹೇಳುತ್ತಾ ಬಿರಿಯಿಕ್ಕಲು ಯತ್ನಿಸುತ್ತಾ ಇದ್ದಾರೆ. ಅವರ ಉದ್ದೇಶವೇ ಬೇರೆ. ಆದರೆ ನೀವು ಪುಸ್ತಕ ಬರೆಯಬೇಕು, ಪಾಠ ಹೇಳಬೇಕು, ಪ್ರಚಾರ ಮಾಡಬೇಕು. ಈ ಕೆಲಸ ಇನ್ನೂ ಒಂದು ನೂರುವರ್ಷದವರೆಗೆ ಒಂದೇ ಸಮನೆ ನಡೆಯಬೇಕು. ನೂರು ವರ್ಷ ಆಗಲಾರದು ಅಂತ ಕಾಣುತ್ತೆ. ನಾಳೆ ನೀವು ಶಾಲೆಯಲ್ಲಿಯೊ ಕಾಲೇಜಿನಲ್ಲಿಯೊ ಕನ್ನಡ ಮಾಧ್ಯಮದ ತರಗತಿಗಳನ್ನು ತೆಗೆಸುವ ಕೆಲಸ ಮಾಡಬೇಕು. ಅಧ್ಯಾಪಕರ ಉತ್ಸಾಹ, ಶ್ರದ್ಧೆಯಮೇಲೆ ಇವುಗಳ ಯಶಸ್ಸು ನಿಂತಿರುತ್ತದೆ. ಕನ್ನಡ ಮಾಧ್ಯಮದಲ್ಲಿ ಚೆನ್ನಾಗಿ ಪಾಠ ಹೇಳುತ್ತಾರೆ ಅಂದರೆ ಎಲ್ಲ ವಿದ್ಯಾರ್ಥಿಗಳೂ ಅಲ್ಲಿಗೆ ಹೋಗುತ್ತಾರೆ. ಉಪಾಧ್ಯಾಯರಾಗಿರುವವರು ಈ ವಿಚಾರದಲ್ಲಿ ಒಂದೊಂದು ಕಾಲೇಜಿನಲ್ಲೂ ಸಂಘದ ಮುಖಾಂತರವಾಗಿಯೋ, ಬೇರೆ ಯಾವುದಾದರೂ ವ್ಯವಸ್ಥೆಯ ಮೂಲಕವೋ ಎಚ್ಚರದಿಂದಿದ್ದು ಕಾರ್ಯ ನಿರ್ವಹಿಸಬೇಕು. ಏಕೆಂದರೆ ಕರಣಿಕರಿಂದಾದಿಯಾಗಿ ಉಪದೇಶ ಹೇಳ್ತಾರೆ, ಹೊಸದಾಗಿ ಬರುವ ಹುಡುಗರಿಗೆ: "ಯಾಕೆ ಕನ್ನಡ ತೆಗೆದುಕೊಳ್ಳುತ್ತೀರೊ? ಮುಂದೆ ಇಲ್ಲದ ಕಷ್ಟಕ್ಕೆ ಸಿಕ್ಕುವುದು ಯಾಕೆ? ಅದರ ಬದಲು ಇಂಗ್ಲಿಷ್ ತೆಗೆದುಕೊಳ್ಳಿ?" ಪಾಪ, ಹುಡುಗ ಹೊಸದಾಗಿ ಬಂದಿರುತ್ತಾನೆ. ಕರಣಿಕ ಮಹಾಶಯನನ್ನೇ ಮಾರ್ಗದರ್ಶಿ ಎಂದು ಭಾವಿಸಿ ಮೋಸ ಹೋಗುತ್ತಾನೆ.

ಭಾಷೆಗಳನ್ನು ಕಲಿಯುವ ವಿಚಾರವೇ ಬೇರೆ. ನೀವು ಬೇರೆ ಬೇರೆ ಭಾಷೆಗಳನ್ನು ಕಲಿಯಿರಿ, ಯಾರು ಬೇಡ ಅಂತಾರೆ. ಇಂಗ್ಲಿಷ್ ಅನ್ನೂ ಕಲಿಯಿರಿ, ಅದಕ್ಕಾಗಿಯೆ ನಮ್ಮ ವಿಶ್ವ ವಿದ್ಯಾನಿಲಯದಲ್ಲಿ ಈಗ ಸದ್ಯಕ್ಕೆ ಯಾವುದಾದರೂ ಎರಡು ಭಾಷೆಗಳನ್ನು ಆರಿಸಿಕೊಳ್ಳಬಹುದು ಎಂದು ಮಾಡಿದ್ದಾರೆ. ಕೇಂದ್ರಸರ್ಕಾರದ್ದು ತ್ರಿಭಾಷಾ ಸೂತ್ರ. ತ್ರಿಭಾಷಾ ಸೂತ್ರ ಅಂದರೆ ತ್ರಿಶೂಲ ಇದ್ದಹಾಗೆ ಎಂದು ನಾನು ಭಾವಿಸಿದ್ದೇನೆ. ಇಂಗ್ಲಿಷ್ ಒಂದರಿಂದಲೇ ಕಷ್ಟ ಆಗಿದೆ. ಅಂಥದ್ದರಲ್ಲಿ ಮತ್ತೊಂದನ್ನ ಕಲಿಯಿರಿ ಅಂದರೆ ಹೇಗೆ? ಕಾರಣ, ತ್ರಿಭಾಷಾ ಸೂತ್ರದಲ್ಲಿ ಕಡೆಗೆ ಕಷ್ಟಕ್ಕೆ ಒಳಗಾಗುವುದು ನಮ್ಮ ಕನ್ನಡವೇ ಹೊರತು ಇಂಗ್ಲಿಷ್ ಅಲ್ಲ, ಹಿಂದೀನೂ ಅಲ್ಲ. ಇಂಗ್ಲಿಷ್, ಹಿಂದಿ ಕಡ್ಡಾಯಮಾಡಿ ಬಿಡುತ್ತಾರೆ. ಹುಡುಗರೆಲ್ಲ ಅದನ್ನು ತೆಗೆದುಕೊಳ್ಳುತ್ತಾರೆ. ಕನ್ನಡವನ್ನೆ ಬಿಟ್ಟು ಬೇರೆ

ಏನು ಬೇಕಾದರೂ ತೆಗೆದುಕೊಳ್ಳಬಹುದಲ್ಲ, ಕನ್ನಡದ ಅಭಿಮಾನ ಇಲ್ಲದ ಹುಡುಗರು.

ಅದೂ ಅಲ್ಲದೆ ಇಂಗ್ಲಿಷ್ ಅನ್ನು ಎಲ್ಲರೂ ಕಲಿಯಬೇಕು; ಹಿಂದಿಯನ್ನು ಎಲ್ಲರೂ ಕಲಿಯಬೇಕು ಅನ್ನುವುದು ನನಗೆ ಅರ್ಥವಾಗುವುದಿಲ್ಲ. ಯಾಕೆ ಹೇಳುವುದಕ್ಕೆ ಬಂದೆ ಅಂದರೆ, ಇಂಗ್ಲಿಷ್ ಅನ್ನು ಶೇಕಡಾ ಒಂದರಷ್ಟು ಕಲಿತ್ತಿದ್ದರೋ ಇಲ್ಲವೋ ಅಥವಾ ಇಂಗ್ಲಿಷ್ ಅನ್ನು ಚೆನ್ನಾಗಿ ಕಲಿತವರ ಸಂಖ್ಯೆ ಶೇಕಡಾ ೦.೦೫ ಇರಬಹುದು. ಅಷ್ಟೆ. ಇಷ್ಟುಕಡಿಮೆ ಇಂಗ್ಲಿಷ್ ಕಲಿತವರನ್ನು ಇಟ್ಟುಕೊಂಡು ಇನ್ನೂರು ವರ್ಷ ಸಮರ್ಥವಾಗಿ ರಾಜ್ಯಭಾರ ಮಾಡಿದ್ದಾರೆ ಇಂಗ್ಲಿಷಿನವರು. ಶೇಕಡಾ ೦.೦೫ರಷ್ಟು ಮಂದಿ ಇತರ ಭಾಷೆಗಳನ್ನು ಕಲಿತರೆ ಸಾಕು. ಹಿಂದಿಯನ್ನಾಗಲಿ, ಇಂಗ್ಲಿಷನ್ನಾಗಲಿ ಎಲ್ಲರೂ ಕಲಿಯಬೇಕು ಅನ್ನುವಂಥ ಅವಿವೇಕ ಮತ್ತೊಂದಿಲ್ಲ. ಆದ್ದರಿಂದ ಈ ಸ್ವಾತಂತ್ರ್ಯವನ್ನು ಮಕ್ಕಳಿಗೆ ಮತ್ತು ಅವರ ತಂದೆ ತಾಯಿಗಳಿಗೆ ಬಿಟ್ಟುಬಿಡಿ. ಯಾವುದಾದರೂ ಎರಡು ಭಾಷೆ ಆರಿಸಿಕೊಳ್ಳಲಿ. ಮೂರುಭಾಷೆ ಅಂತ ಬಲಾತ್ಕಾರ ಮಾಡಬೇಡಿ, ಅಂದರೆ 'ಬಹು ಭಾಷೆಗಳಲ್ಲಿ ದ್ವಿಭಾಷೆ' ಎನ್ನುವುದು ನನ್ನ ಸೂತ್ರ. ಆಗ ಒಬ್ಬ ಹುಡುಗ ಕನ್ನಡ ರಷ್ಯನ್ ತೆಗೆದುಕೊಳ್ಳಬಹುದು. ನಾಳೆ ದಿವಸ ಅವನು ರಷ್ಯಕ್ಕೆ ಹೋಗಿ ಏನಾದರೂ ಮಾಡಬೇಕು ಎಂಬ ಮನಸ್ಸು ಇದ್ದರೆ ಕನ್ನಡ, ರಷ್ಯನ್ ಕಲಿಯಲಿ; ಕನ್ನಡ ಜರ್ಮನ್ ಕಲಿಯಲಿ, ಕನ್ನಡ ಜಪಾನೀಸ್ ಕಲಿಯಲಿ. ಹೀಗೆ 'ಬಹುಭಾಷೆಗಳಲ್ಲಿ ದ್ವಿಭಾಷಾ ಸೂತ್ರ'ಕ್ಕನುಗುಣವಾಗಿ ಬೇಕಾದವರು ಬೇಕಾದ ಎರಡು ಭಾಷೆಗಳನ್ನು ತೆಗೆದುಕೊಳ್ಳಲಿ. ಕನ್ನಡದವರು ಕನ್ನಡವನ್ನೇ ಬಿಟ್ಟು ಬಿಡಬಹುದಲ್ಲ ಅನ್ನಿಸಬಹುದು. ಅಂಥವರು ಕನ್ನಡವನ್ನು ಬಿಡುವುದರಿಂದ ಏನೂ ಅಪಾಯ ಆಗುವುದಿಲ್ಲ. ಕನ್ನಡದವನೇ ಆಗಿ ಕನ್ನಡವನ್ನೇ ಬಿಟ್ಟ ಅಂದುಕೊಳ್ಳಿ, ಹಿಂದೀನೋ ಜರ್ಮನ್ನೋ ತೆಗೆದುಕೊಂಡ ಅಂತ ಇಟ್ಟುಕೊಳ್ಳಿ, ಕನ್ನಡ ಅಧಿಕೃತ ಭಾಷೆಯಾಗಿ ಘೋಷಿತವಾದಾಗ, ಇಲ್ಲಿ ವ್ಯವಹಾರವೆಲ್ಲ ಕನ್ನಡದ ಮೂಲಕ ನಡೆಯುವಂತಾದಾಗ, ಕನ್ನಡವನ್ನು ಬಿಡುವವನು ತಾನು ಈ ದೇಶದವನಲ್ಲ, ಬೇರೆ ಕಡೆಗೆ ಹೋಗುತ್ತೇನೆ ಎಂತಲೇ ಕನ್ನಡವನ್ನು ಬಿಡುತ್ತಾನೆ. ಆದ್ದರಿಂದ ಅವನ ವಿಚಾರದಲ್ಲಿ ನಿಮಗೆ ಯಾವ ಭಯವೂ ಬೇಡ. 'ಬಹು ಭಾಷೆಗಳಲ್ಲಿ ದ್ವಿಭಾಷೆ' ಅನ್ನುವ ಸೂತ್ರವನ್ನು ಬಲವಾಗಿ ಹಿಡಿಯಬೇಕು.

ಈ ಸೂತ್ರ ರಾಜಕೀಯವಾಗಿಯೂ ಪರಿಹಾರ ಒದಗಿಸುತ್ತದೆ. ಉದಾಹರಣೆಗೆ ತಮಿಳುನಾಡಿನ ಉದಾಹರಣೆಯನ್ನು ತೆಗೆದುಕೊಳ್ಳಿ. ಅವರು ಹಿಂದಿ ಬೇಡವೇಬೇಡ ಅನ್ನುತ್ತಾರೆ. ಅವರಲ್ಲಿ ತ್ರಿಭಾಷೆಗೆ ಹೇಗೆ ಮಾಡುತ್ತೀರಿ? 'ಬಹು ಭಾಷೆಗಳಲ್ಲಿ ದ್ವಿಭಾಷೆ' ಎಂದಾಗ ಅವರು ಮಾತನಾಡುವ ಹಾಗೆ ಇಲ್ಲ. ನಾವು ಇಂಗ್ಲಿಷ್‌ನ್ನೂ ಹೇರುತ್ತಾ ಇಲ್ಲ; ಹಿಂದಿಯನ್ನೂ ಹೇರುತ್ತಾ ಇಲ್ಲ; ಯಾವುದೇ ಭಾಷೆಯನ್ನೂ ಹೇರುತ್ತಾ ಇಲ್ಲ ಎಂದಾಗುತ್ತದೆ. ತಮಿಳುನಾಡಿನವನು ಹಿಂದಿ ಬೇಡ ಅಂದರೆ ಆಗ ಸಮಸ್ಯೆ ಆಗುವುದಿಲ್ಲ. ಆದರೆ ಮದರಾಸಿನಲ್ಲಿ 'ಬಹುಭಾಷೆಗಳಲ್ಲಿ ದ್ವಿಭಾಷೆ' ಅಂದಾಗ ನಾಲ್ಕು ಜನ ಹಿಂದಿಯನ್ನು ಕಲಿಯುತ್ತೇವೆ ಎಂದರೆ ಬೇಡ ಅನ್ನುವ ಹಾಗಿರುವುದಿಲ್ಲ. ಆದ್ದರಿಂದ ರಾಜಕೀಯವಾಗಿಯೂ ಇದೊಂದು ಸಮಸ್ಯೆಯನ್ನು ಬಗೆಹರಿಸುತ್ತದೆ.

ಈ ವಿಷಯಕ್ಕೆ 'ಬಹು ಭಾಷೆಗಳಲ್ಲಿ ದ್ವಿಭಾಷೆ' ಎನ್ನುವ ಸೂತ್ರಕ್ಕೆ ನಮ್ಮ ಪತ್ರಿಕೆಯವರು ದಪ್ಪ ದಪ್ಪ ಅಕ್ಷರಗಳಲ್ಲಿ ಎಷ್ಟು ಪ್ರಚಾರ ಕೊಡುತ್ತಾರೋ ಅಷ್ಟು ಒಳ್ಳೆಯದು. ತ್ರಿಭಾಷಾ ಸೂತ್ರ ಬಹು ಭಯಂಕರವಾಗುತ್ತೆ. ನಾನು 'ಸಾಕು ಈ ಬಲಾತ್ಕಾರ' ಎನ್ನುವ ಕವನದಲ್ಲಿ ಈ ಬಲಾತ್ಕಾರ ಬೇಡ ಎನ್ನುವ ಅಂಶವನ್ನೆ ಒತ್ತಿ ಹೇಳಿದ್ದೇನೆ. ನಾವು ಇಂಗ್ಲಿಷ್ ದ್ವೇಷಿಗಳೂ ಅಲ್ಲ, ಹಿಂದಿ ದ್ವೇಷಿಗಳೂ ಅಲ್ಲ. ಎಲ್ಲರು ಎಲ್ಲವನ್ನೂ ಕಲಿಯಬೇಕು ಅನ್ನುವ ಬಲವಂತ ಬೇಡ. ಆದ್ದರಿಂದ 'ಬಹು ಭಾಷೆಗಳಲ್ಲಿ ದ್ವಿಭಾಷೆ' ಅನ್ನುವ ಸೂತ್ರವನ್ನು ಇಟ್ಟುಕೊಳ್ಳಿ ಅಂತ ಹೇಳಿದರೆ ಅದು ಎಲ್ಲ ರೀತಿಯ ಸಮಸ್ಯೆಗಳಿಗೂ ಪರಿಹಾರ ಒದಗಿಸುತ್ತದೆ. ಯಾರ ಅಭಿಮಾನವನ್ನೂ ಕೆರಳಿಸುವುದಿಲ್ಲ. ಯಾರ ಸ್ವಾತಂತ್ರ್ಯವನ್ನೂ ಕಸಿದುಕೊಳ್ಳುವುದಿಲ್ಲ.

ಇನ್ನೂ ಒಂದು ಕೆಲಸ ನಡೆಯುತ್ತಾ ಇದೆ. ಅದನ್ನೂ ಹೇಳಿಬಿಡುತ್ತೇನೆ. ಏಕೆಂದರೆ ನೀವು ಉಪಾಧ್ಯಾಯ ವರ್ಗದವರಾಗಿರುವುದರಿಂದ ಏನೇನು ನಡೆಯುತ್ತಾ ಇದೆ ಅನ್ನುವುದನ್ನು ತಿಳಿದುಕೊಂಡಿರಬೇಕು. ಒಂದು ಹೈಸ್ಕೂಲಿನಲ್ಲಿ ಮೊದಲು ಕನ್ನಡದ ಮಾಧ್ಯಮ ಮಾತ್ರವೇ ಇತ್ತು. ಆಮೇಲೆ ಇದ್ದಕ್ಕಿದ್ದ ಹಾಗೆ ಕೆಲವರಿಗೋಸ್ಕರವಾದರು ಇಂಗ್ಲಿಷ್ ಮಾಧ್ಯಮ ಇರಲಿ ಎಂದು ಒಂದು ವಿಭಾಗ ತೆರೆದರು. ಇಂಗ್ಲಿಷ್ ಮಾಧ್ಯಮ ತೆರೆಯುತ್ತಾರೆ ಎಂದು ಕೇಳಿದ ತಕ್ಷಣ ಕೆಲವರೆಲ್ಲ ಹಳ್ಳಿಯವರೂ ಸೇರಿದಂತೆ ಬಂದುಬಿಟ್ಟರು –ನಮ್ಮ ಹುಡುಗನಿಗೆ ಇಂಗ್ಲಿಷ್ ಮಾಧ್ಯಮ ಕೊಡಿ ಎಂದು! ಆಗ ಏನಾಯ್ತು ಅಂದರೆ, ಒಂದು ಇಂಗ್ಲಿಷ್ ಟೆಸ್ಟ್ ಮಾಡುತ್ತೇವೆ ಎಂದರು. ಇಂಗ್ಲಿಷ್ ನಲ್ಲಿ ಯಾರ್‍ಯಾರು ಪಾಸಾಗ್ತಾರೋ ಅವರಿಗೆಲ್ಲ ಇಂಗ್ಲಿಷ್ ಮಾಧ್ಯಮ ಎಂದೂ ಉಳಿದವರಿಗೆಲ್ಲ ಕನ್ನಡ ಮಾಧ್ಯಮ ಎಂದೂ ಗೊತ್ತು ಮಾಡಿದರು. ಅಂದರೆ ಇದ್ದವರಲ್ಲಿ ಸ್ವಲ್ಪ ಉತ್ತಮ ಬುದ್ಧಿಶಕ್ತಿ ಇರುವ ವಿದ್ಯಾರ್ಥಿಗಳನ್ನೆಲ್ಲ ಇಂಗ್ಲಿಷ್ ಮಾಧ್ಯಮಕ್ಕೆ ಸೇರಿಸಿಬಿಟ್ಟರು. ಇನ್ನು ಉಳಿದವರು ಹಿಂದುಳಿದ ಪಂಗಡದವರು, ಅಂದರೆ ಜಾತಿಯ ದೃಷ್ಟಿಯಿಂದಲ್ಲ, ಯಾವುದೋ ಒಂದು ಸೆಕ್ಷನ್ 'ಸಿ'ನೋ 'ಡಿ'ನೋ ಆದರು. ಪರೀಕ್ಷೆಯಲ್ಲಿ ಏನು? 'ಡಿ' ಸೆಕ್ಷನ್‌ನಲ್ಲಿ ಎಲ್ಲರೂ ಫೇಲು? ಏಕೆ? ಕನ್ನಡ ಮಾಧ್ಯಮ ತೆಗೆದುಕೊಂಡಿದ್ದಕ್ಕೆ ! ನೋಡಿ ಅಪಖ್ಯಾತಿ! ಡಿ ಸೆಕ್ಷನ್ನಿನಲ್ಲಿದ್ದವರೆಲ್ಲರೂ ಕನ್ನಡ ಮಾಧ್ಯಮ ತೆಗೆದುಕೊಂಡಿದ್ದರು. ವಾಸ್ತವವಾಗಿ ಆಗಿದ್ದೇನು ಅಂದರೆ ಉತ್ತಮರನ್ನೆಲ್ಲ ಆರಿಸಿ, ಆರಿಸಿ, ಬೇರೆ ಸೆಕ್ಷನ್ನಿನಲ್ಲಿ ಇಂಗ್ಲಿಷ್ ಕೊಟ್ಟರು. ಅಷ್ಟು ಮಾತ್ರ ಅಲ್ಲ, ಹಳೇ ಮೇಷ್ಟ್ರುಗಳನ್ನೆಲ್ಲಾ, ಚೆನ್ನಾಗಿ ಪಾಠ ಹೇಳುವವರನ್ನೆಲ್ಲಾ ಇಂಗ್ಲಿಷ್ ಪಾಠ ಹೇಳುವುದಕ್ಕೆ ಸಮರ್ಥರೇ ಬೇಕು ಎಂದುಕೊಂಡು ಇಂಗ್ಲಿಷ್ ಮಾಧ್ಯಮದ ತರಗತಿಗೇ ಹಾಕಿದರು. ಹೊಸದಾಗಿ ಸೇರಿದವರು ಮತ್ತು ಮೇಷ್ಟ್ರುಗಳಲ್ಲಿಯೂ 'ಹಿಂದುಳಿದ ಪಂಗಡದವರು' ಇರುತ್ತಾರಲ್ಲಾ ಅವರನ್ನು ಈ 'ಡಿ' ಸೆಕ್ಷನ್ನಿಗೆ ಕಳುಹಿಸಿದರು! ಹೀಗೆ ಕನ್ನಡಕ್ಕೆ ಕೆಟ್ಟ ಹೆಸರು ತರುವುದಕ್ಕೆ ಏನೇನು ಮಾಡಬೇಕೋ ಅದನ್ನೆಲ್ಲ ಮಾಡುತ್ತಾ ಇದ್ದಾರೆ. ಆದ್ದರಿಂದ 'ಕುಕಾರ್ಯ ಮಾಡಬೇಡಿ; ಕನ್ನಡಕ್ಕೆ ಸರಿಯಾಗಿ ಕೆಲಸಮಾಡಿ' ಎಂದು ಮತ್ತೆ ಮತ್ತೆ ಹೇಳಬೇಕಾಗುತ್ತದೆ.

ನನಗೆ ಈ 'ಬಹುಭಾಷೆಗಳಲ್ಲಿ ದ್ವಿಭಾಷೆ' ಸೂತ್ರದ ಪ್ರತಿಪಾದನೆಗೆ ಅವಕಾಶ

ಕಲ್ಪಿಸಿಕೊಟ್ಟಿದ್ದಕ್ಕಾಗಿ ನಿಮಗೆ ವಂದನೆಗಳು. ನಿಮಗೆ ಯುದ್ಧದಲ್ಲಿ ಖಂಡಿತ ಜಯ ಲಭಿಸಿಯೇ ಲಭಿಸುತ್ತದೆ. ಪ್ರತಿಯೊಬ್ಬರೂ ಅದಕ್ಕಾಗಿ ಮುಂದೆ ನುಗ್ಗುವ ಯೋಧರಾಗಿ. ಜಯಲಕ್ಷ್ಮಿ ತನ್ನ ಸಾವಿರಾರು ಕರಗಳಿಂದ ನಿಮಗೆ ಜಯಮಾಲೆ ಹಾಕಲಿ ಎಂದು ಹಾರೈಸುತ್ತೇನೆ!

# ಕರ್ನಾಟಕ: ಇಟ್ಟ ಹೆಸರು ಕೊಟ್ಟ ಮಂತ್ರ[೧]

ಕಡೆಗೂ ಕನ್ನಡ ಜನಕೋಟಿಯ ಹೊಂಗನಸು ಇಂದು ನನಸಾಗಿದೆ; ಅನೇಕ ದಶಕಗಳ ತೀವ್ರ ನಿರೀಕ್ಷೆ ಇಂದು ಕೈಗೂಡಿದೆ; ಹಲವಾರು ಚೇತನಗಳ ನೋಂಪಿ ಫಲಿಸಿದೆ–ನಾಡಿಗೆ 'ಕರ್ಣಾಟಕ' ಎಂಬ ಹೆಸರನ್ನು ಸರಕಾರ ಅಧಿಕೃತವಾಗಿ ಘೋಷಿಸಿದ್ದರಿಂದ. ಯಾವುದು ಚಿರಕಾಲದಿಂದಲೂ ಒಂದು 'ಮಂತ್ರ'ವಾಗಿತ್ತೋ ಅದು ಇಂದು 'ತಂತ್ರ'ವಾಗಿಯೂ ಸಾರ್ಥಕತೆಯನ್ನು ಆರ್ಜಿಸಿಕೊಂಡಿದೆ; ಯಾವುದು ಮನೋಮಯ ಸಾಂಸ್ಕೃತಿಕ ಭೂಮಿಕೆಯಲ್ಲಿ ಶಾಶ್ವತವು ಸುದೃಢವೂ ಆದ ಭಾವಸತ್ಯವಾಗಿ ಎಂದೋ ಸಿದ್ಧವಾಗಿತ್ತೋ ಅದು ಇಂದು ರಾಜಕೀಯ ಶಕ್ತಿಯ

---

[೧] ನಿರ್ದೇಶನದಲ್ಲಿ ಬರೆದವರು ಸಿ.ಪಿ.ಕೆ.

ಈ ಲೇಖನ ಕುವೆಂಪುರವರ ಸೂಚನೆ ಮೇರೆಗೆ ಸಿ.ಪಿ.ಕೆ. ಯವರೇ ಮೈಸೂರು ದಸರಾ ಸ್ಮರಣ ಸಂಚಿಕೆಗಾಗಿ ಸಿದ್ಧಪಡಿಸಿದ್ದು. ಇಲ್ಲಿ ಇರುವ ನಾಡಗೀತೆಯ ಆವೃತ್ತಿಯನ್ನು ಪರಿಷ್ಕರಿಸದೆ ಉಳಿಸಿಕೊಂಡಿರುವುದು ಚಾರಿತ್ರಿಕ ದಾಖಲೆಯಾಗಿಯೇ ಹೊರತು ಅದು ನಾಡಗೀತೆಯ ಅಧಿಕೃತ ಆವೃತ್ತಿ ಎಂದಲ್ಲ. ಈ ಕುರಿತು ಶ್ರೀ ಸಿ.ಪಿ.ಕೆ.ಯವರು ಕೊಟ್ಟಿರುವ ವಿವರಣೆಯನ್ನು ಕೆಳಗೆ ಕೊಡಲಾಗಿದೆ.

"ವಿಚಾರಕ್ರಾಂತಿಗೆ ಆಹ್ವಾನದಲ್ಲಿರುವ ಈ ಲೇಖನ ವಾಸ್ತವವಾಗಿ ಕುವೆಂಪುರವರು ಸ್ವತಃ ಬರೆದದ್ದಲ್ಲ. (ಇದೊಂದು ಮಹತ್ವದ ಅಂಶ). ದಸರಾ ಸ್ಮರಣ ಸಂಚಿಕೆಗಾಗಿ ಅದರ ಸಂಪಾದಕರಾದ ಚದುರಂಗರು ಕುವೆಂಪು ಅವರಿಂದ ಕರ್ನಾಟಕದ ಬಗೆಗೆ ಲೇಖನ ಒಂದನ್ನು ಬಯಸಿದರು. ಆ ವೇಳೆಗೆ ಕುವೆಂಪುರವರು ಬರವಣಿಗೆ ನಿಲ್ಲಿಸಿದ್ದರು. ಆದ್ದರಿಂದ ನನಗೆ ಕೆಲವು ಸೂಚನೆಗಳನ್ನು ಕೊಟ್ಟು ಅವುಗಳನ್ನು ವಿಸ್ತರಿಸಿ ಲೇಖನವೊಂದನ್ನು ಸಿದ್ಧಪಡಿಸುವಂತೆ ನನಗೆ ಹೇಳಿದರು. ಅದರಂತೆ ನಾನು ಈ ಲೇಖನ ಬರೆದೆ.

ನಾನು ಬರೆದ ಲೇಖನ ಕುವೆಂಪುರವರು ಓದಿ, ಪ್ರಕಟಣೆಗೆ ಒಪ್ಪಿಗೆ ಕೊಟ್ಟರು. ಆದರೆ ಕಡೆಯಲ್ಲಿದ್ದ ನಾಡಗೀತೆಯನ್ನು ಸರಿಯಾಗಿ ಲಕ್ಷಿಸಲಿಲ್ಲವೆಂದು ತೋರುತ್ತದೆ. ಲಕ್ಷಿಸಿದ್ದರೆ ಅಥವಾ ಲೇಖನವನ್ನು ಅವರೇ ಸ್ವತಃ ಬರೆದಿದ್ದರೆ ಮಧ್ವರ ಹೆಸರನ್ನು ಅವರು ಉಳಿಸಿಕೊಳ್ಳುತ್ತಿರಲಿಲ್ಲ. ಏಕೆಂದರೆ 'ಮಧ್ವಾಚಾರ್ಯರು ––––––, ಅದು 'ಫಿಲಾಸಫಿ'ಯೇ ಅಲ್ಲ. ಪರಿಷತ್ತು ನಾಡಗೀತೆಗಾಗಿ ಬೇಕಾದರೆ ಸೇರಿಸಿಕೊಳ್ಳಲಿ. ನನ್ನ ಪುಸ್ತಕದಲ್ಲಿ ಅದು ಸೇರುವುದಿಲ್ಲ.' ಎಂದು ಸ್ಪಷ್ಟವಾಗಿ ಹೇಳಿದ್ದನ್ನು ನಾನು 'ಮಹಾಕವಿಯೊಡನೆ ಮಾತುಕತೆ' ಪುಸ್ತಕದಲ್ಲಿ ದಾಖಲಿಸಿದ್ದೇನೆ.

ಈಗ ವಿಷಯ ಇಷ್ಟೇ ಅವರ ಕೊಳಲು ಸಂಕಲನದಲ್ಲಿ ಪ್ರಕಟವಾಗಿರುವ ನಾಡಗೀತೆಯನ್ನು ಮಾತ್ರ ನಾವು ಅಧಿಕೃತ ಎಂದು ಭಾವಿಸಬೇಕು. ನಾಡಗೀತೆಯಲ್ಲಿ ಮಧ್ವರ ಹೆಸರಿನ ಸೇರ್ಪಡೆ ಕುವೆಂಪುರವರ ಆಶಯಕ್ಕೆ ನಿಶ್ಚಿತವಾಗಿಯೂ ವಿರುದ್ಧವಾದದ್ದು."

–ಸಿ.ಪಿ.ಕೆ.

ಮೂಲಕ ಭವಸತ್ಯವಾಗಿಯೂ ಸಾಕ್ಷಾತ್ಕಾರಗೊಂಡು ಮತ್ತೂ ಅಪ್ರತಿಹತವಾಗಿ ಪರಿಣಮಿಸಿದೆ. "ಕರ್ಣಾಟಕ ಎಂಬ ಹೆಸರು ಅತ್ಯಂತ ಸಮಂಜಸವೂ ಉಚಿತವೂ ಆಗಿರುವುದರಿಂದ ಇಂದೊ ನಾಳೆಯೊ ಅದು, ರಾಜಕೀಯ ಸ್ಪರ್ಧಾಭಾವದಿಂದಲ್ಲದೆ ಸಾಂಸ್ಕೃತಿಕವಾದ ಮೈತ್ರಿಯಿಂದಲೆಯೆ, ಸರ್ವ ಸಂತೋಷದಿಂದ ಸರ್ವಸಮ್ಮತವಾಗಿ ಘೋಷಿತವಾಗುತ್ತದೆ ಎಂಬುದು ಕವಿಯ ಶ್ರದ್ಧೆ." ಎಂದು ಹಿಂದೊಮ್ಮೆ ನಾನು ಹೇಳಿದ್ದೆ. ತುದಿಗೆ ಆ ಶ್ರದ್ಧೆಯೆ ಗೆದ್ದುದಕ್ಕಾಗಿ ಕವಿಗೆ ಅಪರಿಮಿತ ಹೆಮ್ಮೆಯುಂಟಾಗಿದೆ. ನಮ್ಮ ನಾಡಿಗೆ 'ಕರ್ಣಾಟಕ'ಎಂದು ನಾಮಕರಣವಾಗಬೇಕು ಎಂಬ ಅಭೀಪ್ಸೆ ಎಷ್ಟು ಸಾರ್ವತ್ರಿಕವೂ ಶಕ್ತಿ ಸಮನ್ವಿತವೂ ಆಗಿತ್ತೆಂಬುದಕ್ಕೆ ವಿಧಾನಸಭೆ ವಿಧಾನ ಪರಿಷತ್ತುಗಳೆರಡೂ ನಾಮಾಂತರವನ್ನು ಏಕಕಂಠದಿಂದ ಹರ್ಷೋತ್ಸಾಹಸಹಿತ ಸ್ವಾಗತಿಸಿದ್ದೇ ಭೂಮ ಬಂಧುರ ಸಾಕ್ಷಿ.

ನಾನು 'ಕರ್ಣಾಟಕ ರಾಷ್ಟ್ರಗೀತೆ' ಎಂಬ ಹೆಸರಿನಲ್ಲಿ ಒಂದು ಕವನವನ್ನು ೧೯೨೪ರಲ್ಲಿ ಎಂಟ್ರೆನ್ಸ್ ವಿದ್ಯಾರ್ಥಿಯಾಗಿದ್ದಾಗಲೆ ರಚಿಸಿದೆ. ಅದೇ ಗೀತೆ ಪರಿಷ್ಕೃತವಾಗಿ ೧೯೨೮ರಲ್ಲಿ ದಿ.ವೆಂಕಟಕೃಷ್ಣಯ್ಯನವರು ಹೊರಡಿಸುತ್ತಿದ್ದ 'ಸಂಪದಭ್ಯುದಯ' ಪತ್ರಿಕೆಯಲ್ಲಿ ಪ್ರಕಟವಾಗಿತ್ತು. ಅದು ಮತ್ತೂ ಸಂಸ್ಕಾರಗೊಂಡು 'ಕೊಳಲು' ಸಂಕಲನದಲ್ಲಿ (೧೯೩೦) 'ಜಯ ಹೇ ಕರ್ಣಾಟಕ ಮಾತೆ' ಎಂಬ ಹೆಸರಿನಲ್ಲಿ ಸೇರಿದೆ. (ಈಗ ಅದು ಸಂಗ್ರಹಗೊಂಡು, ಕಿಂಚಿತ್ ಮಾರ್ಪಾಟಿನೊಡನೆ ನಾಡಗೀತೆಯಾಗಿ ಸ್ವೀಕೃತವಾಗಿದೆ.) ವಿದ್ಯಾರ್ಥಿ ದಶೆಯ ಆ ಕಾಲದಿಂದಲೂ ನಾನು ಕರ್ಣಾಟಕವನ್ನು ಭರತ ಖಂಡದ ಒಂದು ಅವಿಭಾಜ್ಯಾಂಗವಾಗಿ ಪರಿಕಲ್ಪಿಸಿಕೊಂಡಿದ್ದೇನೆಯೆ ಹೊರತು, ಪ್ರತ್ಯೇಕತಾಭಾವನೆಗೆ ಎಂದೂ ಲೇಶ ಮಾತ್ರವೂ ಅವಕಾಶವಿತ್ತಿಲ್ಲ. ಆದ್ದರಿಂದಲೆ ಕರ್ಣಾಟಕ ಮಾತೆಯನ್ನು ಕುರಿತು ಹಾಡುವಾಗ 'ಜಯ್ ಭಾರತ ಜನನಿಯ ತನುಜಾತೆ' ಎಂದೇ ಪ್ರಾರಂಭಿಸಿದ್ದು. ಬೇರೊಂದೆಡೆ ನಾನು ಹೇಳಿರುವಂತೆ "ಕರ್ಣಾಟಕ ಮಾತೆಗೆ ಸಲ್ಲುವ ಜಯಕಾರ ಆಕೆ ಭಾರತಜನನಿಯ ತನುಜಾತೆಯಾಗಿರುವುದರಿಂದಲೆ. ಅಂಗೋದ್ಭವೆಯಾಗಿ ವಿನಾ ಕರ್ಣಾಟಕಕ್ಕೆ ಬೇರೆಯ ಅಸ್ತಿತ್ವವೆಲ್ಲಿ? ನಾನು ರಾಜ್ಯದೃಷ್ಟಿಯಿಂದ ಕರ್ಣಾಟಕದವನು; ಭಾಷಾದೃಷ್ಟಿಯಿಂದ ಕನ್ನಡಿಗನು; ಆದರೆ ಸಂಸ್ಕೃತಿಯ ದೃಷ್ಟಿಯಿಂದ ಮತ್ತು ರಾಷ್ಟ್ರದೃಷ್ಟಿಯಿಂದ ಭಾರತೀಯನು. ನನ್ನ ಕರ್ಣಾಟಕತ್ವ ಭಾರತೀಯತ್ವಕ್ಕೆಎಂದಿಗೂ ಎದುರುನಿಲ್ಲುವುದಿಲ್ಲ."

ಆದರೆ ಬ್ರಿಟಿಷ್ ಪ್ರಭುತ್ವದ ಅಂದಿನ ದಿನಗಳಲ್ಲಿ 'ಕರ್ಣಾಟಕ' ಎನ್ನುವುದು ಭೌಗೋಳಿಕವಾಗಿ ಅಸ್ತಿತ್ವಗೊಂಡಿರಲಿಲ್ಲ. ಹರಿದು ಹಂಚಿಹೋಗಿದ್ದ ಕನ್ನಡನಾಡಿನ ಭಾಗಗಳು ಒಂದುಗೂಡುತ್ತವೆ ಎಂಬುದು ಆಗ ಕನಸಿನ ಮಾತಾಗಿತ್ತು. ಏಕೆಂದರೆ ಭರತ ಖಂಡ ಸ್ವತಂತ್ರವಾಗುತ್ತದೆ ಎಂಬ ಕಲ್ಪನೆಯೆ ಆಗ ಯಾರಿಗೂ ಇರಲಿಲ್ಲ; ಬ್ರಿಟಿಷ್ ಚಕ್ರಾಧಿಪತ್ಯದ ಸುಭದ್ರತೆ, ನಿತ್ಯತೆಗಳಲ್ಲಿ ಎಲ್ಲರೂ ಭರವಸೆಯಿಟ್ಟಿದ್ದ ಕಾಲವದು. ಆದ್ದರಿಂದಲೆ ನಾನು 'ಕರ್ಣಾಟಕ ಮಾತೆ'ಯನ್ನು ಕೀರ್ತಿಸಿದರೂ ಅದು ಭೌಗೋಳಿಕವಾದುದಕ್ಕಿಂತ ವಿಶೇಷವಾಗಿ ಸಾಂಸ್ಕೃತಿಕವಾಗಿತ್ತು. ಈ ಸಾಂಸ್ಕೃತಿಕ

ಕರ್ಣಾಟಕದ ನಿಲುವನ್ನು ಮತ್ತೂ ಖಚಿತ ಸ್ಪಷ್ಟವಾಗಿ ನಾನು ಪ್ರತಿಪಾದಿಸಿದೆ, 'ಮೈಸೂರು' ಎಂಬ ಹೆಸರಿನಡಿಯಲ್ಲೆ ಕನ್ನಡನಾಡು ಒಂದಾದಾಗ:

"ನಮ್ಮ ಕರ್ಣಾಟಕ ಬರಿಯ ದೇಶವಿಸ್ತೀರ್ಣಕ್ಕೆ ಮಾತ್ರ ಸಂಬಂಧಪಟ್ಟುದಲ್ಲ; ಕಾಲವಿಸ್ತೀರ್ಣವನ್ನೂ ನಾವು ಪ್ರಮುಖವಾಗಿ ಭಾವಿಸುತ್ತೇವೆ. ಅದನ್ನು ಚದರಮೈಲಿಗಳಿಂದ ಅಳೆದರೆ ಸಾಲದು; ಚದರವರ್ಷಗಳಿಂದಲೂ ಗುರುತಿಸಬೇಕು. ವ್ಯಷ್ಟಿರೂಪವಾದ ವ್ಯಕ್ತಿಗೆ ಕೋಶಗಳಿರುವಂತೆ ಸಮಷ್ಟಿ ರೂಪವಾದ ದೇಶಕ್ಕೂ ಕೋಶಗಳಿವೆ ಎಂದು ಭಾವಿಸುವುದಾದರೆ ಕರ್ಣಾಟಕಕ್ಕೆ ಅನ್ನಮಯ ರೂಪವಾದ ಭೂಪ್ರದೇಶವಿರುವಂತೆಯೆ ಪ್ರಾಣಮನೋಮಯ ರೂಪವಾದ ಚಿತ್ ಪ್ರದೇಶವೂ ಇದೆ. ಚಿನ್ಮಯವೂ ಆಧಾತ್ಮಿಕವೂ ಆಗಿರುವ ಆ ಸಂಸ್ಕೃತಿಕೋಶವೆ ಆಗಿರುವ ಭೂವಿಸ್ತೀರ್ಣ ರೂಪವಾದ ಲೀಲಾಸ್ಥೂಲ ಶರೀರವನ್ನು ಸರ್ವದಾ ಧಾರಣೆ ಮಾಡುತ್ತಿರುತ್ತದೆ ಆ ನಿತ್ಯ ಭಾವತನು. ಆ ಜ್ಯೋತಿಶ್ಶರೀರಿಯೆ ದೇವಿ. ಆ ದೇವಿಯ ಉಪಾಸನೆಯೆ ಕವಿ ಕಲಾವಿದ ತತ್ವಜ್ಞ ಸಾಧಕರಾದಿಯಾಗಿ ಸಕಲರ ಗಂತವ್ಯ ಮತ್ತು ಗಮ್ಯ. ಕರ್ಣಾಟಕದ ಕಾವ್ಯ ಸಂಸ್ಕೃತಿಗಳನ್ನು ಹೃದಯದಲ್ಲಿ ಪ್ರತಿಷ್ಠಾಪಿಸಿಕೊಂಡ ಕನ್ನಡಿಗನು ಭೌಗೋಲಿಕವಾದ ಎಲ್ಲೆಗಳಿಂದ ಹೆದರಬೇಕಾದ್ದಿಲ್ಲ.... ಕನ್ನಡ ಕಾವ್ಯಗಳನ್ನೋದುವಾತನು ಅಮೆರಿಕೆಯಲ್ಲಿದ್ದರೂ ಅದು 'ಕರ್ಣಾಟಕವೆ' 'ಪಂಪನನೋದುವ ನಾಲಗೆ' ಮಿಸಿಸಿಪಿಹೊಳೆಯ ನೀರನ್ನು ಈಂಟಿದರೂ ಅದು ಕಾವೇರಿಯೆ. 'ಕುಮಾರವ್ಯಾಸನನಾಲಿಪ ಕಿವಿ' ಆಂಡೀಸ್ ಪರ್ವತವನ್ನೇರುತ್ತಿದ್ದರೂ ಅದು ಸಹ್ಯಾದ್ರಿಯೆ. 'ಕಾವೇರಿಯಿಂದಮಾ ಗೋದಾವರಿವರಮಿರ್ದನಾಡು' ಎಂದು ನೃಪತುಂಗನು ಬಣ್ಣಿಸಿದ ಕರ್ನಾಟಕದ ನೆಲದ ಎಲ್ಲೆ ಇಂದು ಭೌಗೋಲಿಕವಾಗಿ ವ್ಯತ್ಯಸ್ತವಾಗಿರುವುದಕ್ಕಾಗಿ ನಾವು ಪರಿತಪಿಸುವುದು ಅನಾವಶ್ಯಕ. ಕಾವೇರಿ ಮತ್ತು ಗೋದಾವರಿಗಳು ನಿತ್ಯವೂ ನಿರ್ದಿಗಂತವಾಗಿ ವಿಸ್ತರಿಸುತ್ತಿರುವ ಕರ್ಣಾಟಕದ ಸಾಂಸ್ಕೃತಿಕ ಹಾಗೂ ಆಧ್ಯಾತ್ಮಿಕ ಭೂಮಿಕೆಯ ಗಡಿಗಳಿಗೆ ಸಂಕೇತ ಮಾತ್ರಗಳಾಗಿರಲಿ. ಅವು ಭಾವೋಪಯೋಗಿಗಳೆ ಹೊರತು ಲೋಕೋಪಯೋಗಿಗಳಾಗುವುದಿಲ್ಲ. ಏಕೆಂದರೆ ಮೈಸೂರಿನ ಎಲ್ಲೆ ರಾಜಕೀಯದಿಂದ ಭೌಗೋಲಿಕವಾಗಿ ನಿರ್ಣಯವಾಗಿದ್ದರೂ ಕರ್ಣಾಟಕದ ಸಾಂಸ್ಕೃತಿಕ ಮೇರೆ ನಮ್ಮೆಲ್ಲರಿಂದ ಮಾನಸಿಕವಾಗಿ ನಿರಂತರವೂ ನಿರ್ಣಯವಾಗುತ್ತಿರುತ್ತದೆ. ಕನ್ನಡಿಗರ ಸಂಸ್ಕೃತಿಗೆ ಪ್ರತಿಮಾರೂಪವಾಗಿರುವ ಕರ್ಣಾಟಕದ ವಿಸ್ತಾರ ನಿರ್ದಿಗಂತವಾದದ್ದು: ಅದರ ಔನ್ನತ್ಯ ನಿಶ್ಶಿಖರವಾದದ್ದು. ಅಂತಹ ಸಾಂಸ್ಕೃತಿಕ ಕರ್ಣಾಟಕದ ಸ್ಥಾಪನೆ ರಕ್ಷಣೆ, ಪೋಷಣೆ ಮತ್ತು ವಿಸ್ತರಣೆಗಳಿಗಾಗಿಯೆ ಸಹೃದಯ ಸಮಷ್ಟಿರೂಪವಾದ ಸಾಹಿತ್ಯ ಪರಿಷತ್ತು ನಿರಂತರವೂ ತಪಸ್ವಿಯಾಗಿ ದುಡಿಯಬೇಕಾಗಿದೆ. ಏಕೆಂದರೆ ಭೌಗೋಲಿಕವಾಗಿ ಕಾರ್ಣಟಕ ರಾಜ್ಯಸ್ಥಾಪನೆಯಾಯಿತು ಎಂದು ನಾವು ಸಡಿಲ ಬಾಳಿಗರಾಗಿ ಸುಮ್ಮನಾದರೆ ರಾಜ್ಯ ಸ್ಥಾಪನೆಯ ಮೂಲೋದ್ದೇಶವೆ ವಿಫಲವಾಗುತ್ತದೆ.[೨]

[೨] ಷಷ್ಟಿ ನಮನ, ಪು. ೪–೫

೧೯೪೯ರಲ್ಲಿ ಒಮ್ಮೆ ನಾನು ಮಹಾರಾಜಾ ಕಾಲೇಜಿನಲ್ಲಿ ನಡೆದ ಸಮಾರಂಭವೊಂದರಲ್ಲಿ ಏಕೀಕರಣದ ಪರವಾಗಿ ಮಾತನಾಡಿದಾಗ, ಸಚಿವರೊಬ್ಬರಿಂದ ಎಚ್ಚರಿಕೆಯ 'ನೋಟೀಸ್' ಬಂತು. ಅದಕ್ಕೆ ಪ್ರತ್ಯುತ್ತರವಾಗಿ ಮೊಳಗಿದ ಕವನ 'ಅಖಂಡ ಕರ್ಣಾಟಕ.' ಅದರಲ್ಲಿ ಕೂಡ ಉದ್ ಘೋಷಿತವಾಗಿರತಕ್ಕದ್ದು ಸಂಸ್ಕೃತಿ ಕರ್ಣಾಟಕವೆ ವಿನಾ ಭೌಗೋಲಿಕ ಕರ್ಣಾಟಕವಲ್ಲ:

**ಅಖಂಡ ಕರ್ಣಾಟಕ:**
**ಅಲ್ತೊ ನಮ್ಮ ಬೂಟಾಟದ ರಾಜಕೀಯ ನಾಟಕ!**
**ಇಂದು ಬಂದು ನಾಳೆ ಸಂದು**
**ಹೋಹ ಸಚಿವ ಮಂಡಲ**
**ರಚಿಸುವೊಂದು ಕೃತಕವಲ್ತೊ**
**ಸಿರಿಗನ್ನಡ ಸರಸ್ವತಿಯ**
**ವಜ್ರಕರ್ಣ ಕುಂಡಲ!**

**ಅಖಂಡ ಕರ್ಣಾಟಕ:**
**ಅಲ್ತೊ ನಮ್ಮ ನಾಲ್ಕುದಿನದ ರಾಜಕೀಯ ನಾಟಕ!**
**ನೃಪತುಂಗನೆ ಚಕ್ರವರ್ತಿ!**
**ಪಂಪನಲ್ಲಿ ಮುಖ್ಯಮಂತ್ರಿ!**
**ರನ್ನ ಜನ್ನ ನಾಗವರ್ಮ**
**ರಾಘವಾಂಕ ಹರಿಹರ**
**ಬಸವೇಶ್ವರ ನಾರಣಪ್ಪ**
**ಸರ್ವಜ್ಞ ಷಡಕ್ಷರ:**
**ಸರಸ್ವತಿಯೆ ರಚಿಸಿದೊಂದು**
**ನಿತ್ಯ ಸಚಿವ ಮಂಡಲ**
**ತನಗೆ ರುಚಿರ ಕುಂಡಲ!**

**ಕರ್ನಾಟಕ ಎಂಬುದೇನು**
**ಹೆಸರೆ ಬರಿಯ ಮಣ್ಣಿಗೆ?**
**ಮಂತ್ರ ಕಣಾ! ಶಕ್ತಿ ಕಣಾ!**
**ತಾಯಿ ಕಣಾ! ದೇವಿ ಕಣಾ!**
**ಬೆಂಕಿ ಕಣಾ! ಸಿಡಿಲು ಕಣಾ!**
**ಕಾವ ಕೊಲುವ ಒಲವ ಬಲವ**
**ಪಡೆದ ಚಲದ ಚಂಡಿ ಕಣಾ**
**ಋಷಿಯ ಕಾಣ್ಬ ಕಣ್ಣಿಗೆ!**[೩]

[೩] ಇಕ್ಷು ಗಂಗೋತ್ರಿ', ಪು. ೫೪-೫೬

ಹೀಗೆ, ನಾನು ಪರಿಭಾವಿಸುವ, ಆರಾಧಿಸುವ ಕರ್ಣಾಟಕ ಯಾವಾಗಲೂ ಸಂಸ್ಕೃತಿ ಕರ್ಣಾಟಕವೆ ಆಗಿದೆ. "ಎಲ್ಲಾದರು ಇರು; ಎಂತಾದರು ಇರು; ಎಂದೆಂದಿಗು ನೀ ಕನ್ನಡವಾಗಿರು" ಎಂಬುದೆ ಅದರ ಅಧಿಷ್ಠಾನ ಸೂತ್ರ.

ಮೈಸೂರಿನ ಪ್ರಜಾಪ್ರತಿನಿಧಿ ಸಭೆಯಲ್ಲಿ 'ಏಕೀಕರಣಕ್ಕೆ ಇದು ಸಕಾಲವಲ್ಲ' ಎಂಬ ನಿರ್ಣಯ ಅಂಗೀಕೃತವಾದಾಗ (ನವೆಂಬರ್ ೧೯೪೯)'ಕರ್ಣಾಟಕ ಮಂತ್ರದೀಕ್ಷೆ.' ಎಂಬ ಕವಿತೆ ಉದ್ಭವಿಸಿ ಕನ್ನಡಿಗರಿಗೆ ಕರೆ ಕೊಟ್ಟಿತು:

**ದೀಕ್ಷೆಯ ತೊಡು ಇಂದೇ;**
**ಕಂಕಣ ಕಟ್ಟಿಂದೇ!**
**ಕನ್ನಡ ನಾಡೊಂದೇ;**
**ಇನ್ನೆಂದೂ ತಾನೊಂದೇ!**[೮] **(ಅದೇ, ಪು. ೫೨)**

ಅಂತೂ ಕಡೆಗೊಮ್ಮೆ ಏಕೀಕರಣವಾಯಿತು. ಆದರೆ ನಾಡಿಗೆ ಅಧಿಕೃತವಾಗಿ 'ಮೈಸೂರು' ಎಂಬ ನಾಮಧೇಯ ಉಳಿಯಿತೆ ಹೊರತು ಕರ್ಣಾಟಕತ್ವ ಪ್ರಾಪ್ತವಾಗಲಿಲ್ಲ. ಉತ್ತರ ಕರ್ಣಾಟಕದ ಜನತೆ 'ಕರ್ನಾಟಕ'ವೆಂಬ ಹೆಸರಿಗೆ ಅನುಕೂಲವಾಗಿದ್ದರೂ, ಹಳೆಯ ಮೈಸೂರಿನ ರಾಜನಿಷ್ಠ ಸಮುದಾಯದವರು ಅದನ್ನು ವಿರೋಧಿಸಿ ಹಟ ಹಿಡಿದುದರಿಂದ 'ಮೈಸೂರು' ಎಂಬುದೆ ಮುಂದುವರಿಯಬೇಕಾಯಿತು. ಹಳೆಯ ಮೈಸೂರಿನ ಇಂತಹ ಜನ ಏಕೀಕರಣಕ್ಕೂ ಸುಮುಖರಾಗಿರಲಿಲ್ಲವೆಂಬುದನ್ನೂ ಜ್ಞಾಪಿಸಿಕೊಳ್ಳಬಹುದು. ಇನ್ನೊಂದು ಅಂಶವನ್ನೂ ನೆನೆಯಬೇಕು: ಸ್ವಾತಂತ್ರ್ಯೋದಯಕ್ಕೆ ಮುನ್ನ ಭಾರತ ರಾಷ್ಟ್ರೀಯ ಕಾಂಗ್ರೆಸ್ಸು ಪ್ರಾಂತಗಳನ್ನು ಭಾಷಾನುಗುಣವಾಗಿ ವಿಂಗಡಿಸಿ, ಕನ್ನಡನಾಡಿನ ಕಾಂಗ್ರೆಸ್ಸನ್ನು 'ಕರ್ಣಾಟಕ ಪ್ರಾಂತೀಯ ಕಾಂಗ್ರೆಸ್' ಎಂದು ಕರೆದಿತ್ತು. ರಾಷ್ಟ್ರ ಸ್ವತಂತ್ರವಾದ ಮೇಲೆ ಅದು 'ಮೈಸೂರು ಪ್ರದೇಶ ಕಾಂಗ್ರೆಸ್' ಆಗಿಹೋಯಿತು, ಮೈಸೂರಿನ ಕೆಲವರ ಹಟಮಾರಿತನದಿಂದ. ಈ ವಾಗ್ವಾದದ ಬಿರುಗಾಳಿ ಬಹುಕಾಲ ಮುಂದುವರಿಯುತ್ತ ಬಂತು.

ಏಕೀಕರಣವಾದ ಸಂದರ್ಭದಲ್ಲಿ ನಾನು 'ಕರ್ಣಾಟಕ ರಾಜ್ಯೋದಯ ಶ್ರೀಗೀತೆ'ಯನ್ನು ರಚಿಸಿದೆ. ಅದರಲ್ಲೂ ಎಲ್ಲಿಯೂ  ಮೈಸೂರು ಎಂಬ ಪದವನ್ನು ಬಳಸಿಲ್ಲ. ಅಲ್ಲಿಯೂ ನಾನು ಎತ್ತಿಹಿಡಿದಿರುವುದು ಸಂಸ್ಕೃತಿ ಕರ್ಣಾಟಕತ್ವವನ್ನೇ:

**ಬರಿಯ ಚದರ ಮೈಲಿಗಳಲ್ತು ಕರ್ಣಾಟಕದ ದೇಶ ವಿಸ್ತೀರ್ಣಂ.**
**ನೆನೆ, ನೆನೆ, ಮನೋಮಯದ ಸಂಸ್ಕೃತಿಯ ಕೋಶ ವಿಸ್ತೀರ್ಣಮಂ,**
**ಮರೆಯದಿರು ಚದರ ಸಂವತ್ಸರದ ಶತಮಾನಗಳ ಕಾಲ ವಿಸ್ತೀರ್ಣಮಂ**
**ಪ್ರಾಣಮಯ ಭಾವಮಯ ವಿಸ್ತೀರ್ಣಮಂ, ಚಿದಾಕಾಶ ವಿಜ್ಞಾನ ವಿಸ್ತೀರ್ಣಮಂ**[೨]

ಈ ದೃಷ್ಟಿಯಿಂದ, ಏಕೀಕರಣಕ್ಕೆ ಬಹುಪೂರ್ವದಲ್ಲಿಯೆ ನಾನು ಆಡಿದ್ದ

---

[೨] ಇಕ್ಷು ಗಂಗೋತ್ರಿ' ಪು. ೭೮)

ಈ ಮಾತುಗಳನ್ನೂ ಸ್ಮೃತಿಗೆ ತಂದುಕೊಳ್ಳಬಹುದು: "ರಾಜಕೀಯ ದೃಷ್ಟಿಯಿಂದ ಭೌಗೋಲಿಕ ಕರ್ನಾಟಕವು ಹರಿಹಂಚಿಹೋಗಿದ್ದರೂ ಭಾಷೆ, ಸಾಹಿತ್ಯ, ಕಲೆ, ಸಂಸ್ಕೃತಿ ಇವುಗಳ ದೃಷ್ಟಿಯಿಂದ ಕನ್ನಡನಾಡಿನ ನಿಜಬೆಸುಗೆ ಇನ್ನೂ ಬಿಚ್ಚಿ ಬಿರಿದಿಲ್ಲ . ಕನ್ನಡ ನೆಲವು ನಾಲ್ಕಾರು ಸರಕಾರಗಳ ಬೇರೆ ಬೇರೆ ಆಧಿಪತ್ಯಕ್ಕೆ ಈಡಾಗಿ ಬಿರಿದಿದ್ದರೂ ಕನ್ನಡಿಗರೊಲವು ಏಕಚ್ಛತ್ರಾಶ್ರಯದಲ್ಲಿದೆ. ಕರ್ಣಾಟಕಕ್ಕೆ ಅಖಂಡವಾದ ಭೂಸಾಮ್ರಾಜ್ಯವಿನ್ನೂ ಸಿದ್ಧವಾಗದಿದ್ದರೂ ಸಾಹಿತ್ಯ ಸಾಮ್ರಾಜ್ಯವೇನೊ ಸಿದ್ಧವಾಗಿದೆ. ಎಲ್ಲಿಯವರೆಗೆ ಕನ್ನಡಿಗರೆಲ್ಲರೂ, ಅವರು ಎಲ್ಲಿಯೆ ಇರಲಿ, ಪಂಪ ರನ್ನ ನಾಗವರ್ಮ ರಾಘವಾಂಕ ನಾರಣಪ್ಪ ಲಕ್ಷ್ಮೀಶ ಮೊದಲಾದ ಕವಿವರ್ಯರ ಸಾಹಿತ್ಯ ಸಿಂಹಾಸನಕ್ಕೆ ತಲೆಬಾಗುತ್ತಾರೊ ಅಲ್ಲಿಯವರೆಗೆ ಕನ್ನಡ ಸಾಮ್ರಾಜ್ಯಕ್ಕೆ ಚ್ಯುತಿಯಿಲ್ಲ. ನುಡಿಯೊಲ್ಮೆಯೊಂದಿದ್ದರೆ ದೇಶ ದೇವಿಯ ಗುಡಿಯ ಕಟ್ಟಡದ ಕಲ್ಲುಗಳ ಬೆಸುಗೆಗೆ ವಜ್ರಗಾರೆಯಾಗುತ್ತದೆ. ಆ ಒಲ್ಮೆ ಮಡಿದಂದು ಕಟ್ಟಡದ ಕಲ್ಲುಗಳು ಸಡಿಲಗೊಂಡು ಗುಡಿಕೆಳಕ್ಕುರುಳಿ ನೆಲಸಮವಾಗುತ್ತದೆ...... ಕೃತಕವಾದ ರಾಜಕೀಯ ವಿಭಜನೆ ನೈಜವಾದ ಸಂಸ್ಕೃತಿಯ ಏಕತೆಯನ್ನು ಎಂದಿಗೂ ಶಾಶ್ವತವಾಗಿ ನಾಶಮಾಡಲಾರದು. ಇಂದಲ್ಲ ನಾಳೆ ನೈಜಕ್ಕೆ ಜಯವಿದೆ, ಕೃತಕಕ್ಕೆ ಪತನವಿದೆ. ಆದ್ದರಿಂದ ವಿವಿಧ ರಾಜಕೀಯ ವಿಭಾಗಗಳಲ್ಲಿ ಹರಿಹಂಚಿಹೋದ ಕರ್ನಾಟಕದ ಉದಾರ ಹೃದಯದ ಜನರಲ್ಲಿ ನುಡಿಯೊಲ್ಮೆಯ ಕಿಡಿ ಕೆಡದಂತೆ ನಿರಂತರವೂ ಸಾವೇಶ ಪ್ರೋತ್ಸಾಹವೀಯಬೇಕಾದುದು ಕರ್ಣಾಟಕದ ಪುನರುತ್ಥಾನಕ್ಕಾಗಿ ದುಡಿಯಲು ದೀಕ್ಷೆಗೊಂಡ ತಪಸ್ವಿಗಳೆಲ್ಲರ ಕರ್ತವ್ಯ. ಏಕೆಂದರೆ,ನುಡಿ ಬಿಟ್ಟರೆ ನಾಡು ಬಿಟ್ಟಂತೆ. ಭಾಷೆಗೇಡಿ ದೇಶಗೇಡಿಯೂ ಆಗುತ್ತಾನೆ. ಅನಿವಾರ್ಯ" ('ಸಾಹಿತ್ಯ ಪ್ರಚಾರ'ಪು. ೬೯-೭೦) ಈ ನುಡಿ ಇಂದಿಗೂ, ಎಂದಿಗೂ ಸತ್ಯಸ್ಯ ಸತ್ಯ.

ಶ್ರೀ ಸಿದ್ದವನಹಳ್ಳಿ ನಿಜಲಿಂಗಪ್ಪನವರು ವಿಶಾಲ ಕರ್ಣಾಟಕದ ಮುಖ್ಯ ಮಂತ್ರಿಗಳಾಗುವುದಕ್ಕೆ ಮುನ್ನ ಅವರನ್ನೊಮ್ಮೆ ಸಂಧಿಸಿದ್ದೆ. ಅವರು ಕರ್ಣಾಟಕ ಏಕೀಕರಣಕ್ಕೆ ಇಂಬು ಬೆಂಬಲಗಳನ್ನು ಕೊಟ್ಟ ಪ್ರಮುಖರಲ್ಲಿ ಒಬ್ಬರು. ಮುಖ್ಯ ಮಂತ್ರಿಗಳಾದ ಮೇಲೆ ನೀವು ನಾಲ್ಕು ಮಹಾಕಾರ್ಯಗಳನ್ನು ಸಾಧಿಸಬೇಕೆಂದು ಅವರಿಗೆ ಹೇಳಿದ್ದೆ: (೧) ಕರ್ಣಾಟಕಕ್ಕೆ ರಾಜ್ಯಪಾಲರನ್ನು ನೇಮಕ ಮಾಡುವಾಗ ರಾಜ್ಯಾಂಗದ ಪ್ರಕಾರ, ಪ್ರಜಾಪ್ರಭುತ್ವ ತತ್ತ್ವಕ್ಕನುಗುಣವಾಗಿ ಮಾಡಬೇಕು. (೨) ರಾಜ್ಯಕ್ಕೆ 'ಕರ್ಣಾಟಕ' ಎಂದು ನಾಮಕರಣ ಮಾಡಬೇಕು. (೩) ರಾಜ್ಯದ ಅಧಿಕೃತ ಭಾಷೆಯಾಗಿ ಕನ್ನಡವನ್ನು ಜಾರಿಗೆ ತರಬೇಕು. (೪) ವಿದ್ಯಾಭ್ಯಾಸದ ಎಲ್ಲ ಹಂತಗಳಲ್ಲೂ ಕನ್ನಡ ಮಾಧ್ಯಮವಾಗಬೇಕು. ಇವುಗಳಲ್ಲಿ ಎರಡು ಅಭೀಷ್ಟಗಳು ಈಡೇರಿದುವು: ರಾಜ್ಯಪಾಲರನ್ನು ಪ್ರಜಾಸತ್ತೆಗೆ ಅನುಸಾರವಾಗಿ ನೇಮಕಮಾಡಲಾಯಿತು; ಕನ್ನಡವನ್ನು ಆಡಳಿತ ಭಾಷೆಯೆಂದು ಅಧಿಕೃತವಾಗಿ ಘೋಷಿಸಲಾಯಿತು. ಕನ್ನಡಮಾಧ್ಯಮಕ್ಕೂ ಶ್ರೀ ನಿಜಲಿಂಗಪ್ಪನವರು ಬೆಂಬಲ ಪ್ರೋತ್ಸಾಹಗಳನ್ನು ನೀಡಿದರು. ನಾನಂತೂ ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಉಪಕುಲಪತಿಯಾಗಿ ಸರ್ವಾಧಿಕಾರಮನೋಭಾವದಿಂದಲೇ

ಕನ್ನಡ ಮಾಧ್ಯಮವನ್ನು ಅನುಷ್ಠಾನಕ್ಕೆ ತಂದೆ. ಒಮ್ಮೆ ಸೆನೆಟ್ ಸಭೆಯಲ್ಲಿ ಹೇಳಿದ್ದುಂಟು: "ಕನ್ನಡದ ವಿಷಯದಲ್ಲಿ ನಾನು ಟ್ಯಾಂಕಿನಂತೆ ಮುನ್ನುಗ್ಗುತ್ತೇನೆ; ನೀವು ದಾರಿಬಿಟ್ಟುಕೊಟ್ಟಿರೋ ಸರಿ, ಇಲ್ಲವೋ ಅಪ್ಪಚ್ಚಿಯಾಗುತ್ತೀರಿ!"

ಇಷ್ಟೆಲ್ಲಾ ಆದರೂ, ಶ್ರೀ ನಿಜಲಿಂಗಪ್ಪನವರ ಸರ್ಕಾರವಾಗಲಿ ಶ್ರೀ ವೀರೇಂದ್ರ ಪಾಟೀಲರ ಸರ್ಕಾರವಾಗಲಿ ರಾಜ್ಯಕ್ಕೆ 'ಕರ್ನಾಟಕ'ವೆಂದು ಹೆಸರಿಡಬೇಕೆಂಬ ಆಸೆ ಉತ್ಕಟವಾಗಿದ್ದರೂ ತಮ್ಮ ಸರ್ಕಾರ ಉರುಳಿ ಹೋದೀತೆಂಬ ಭೀತಿಯಿಂದ ಅವರು ಹಾಗೆ ಮಾಡಲಿಲ್ಲವಷ್ಟೆ.

ಆಗ ಅಸಾಧ್ಯವಾಗಿದ್ದುದು ಈಗ ವಿಘ್ನಪರಂಪರೆಯನ್ನು ದಾಟಿ, ಭರತಖಂಡದ ಸದ್ಯೋಜಾತ ಕ್ರಾಂತಿಕಾರಕ ಪರಿವರ್ತನೆಯ ಕಾವಿನಲ್ಲಿ ಸುಸಾಧ್ಯವಾಗಿದೆ. ಬಂಡವಾಳಗಾರಿಕೆ, ಪಟ್ಟಭದ್ರಹಿತಗಳಿಗೆ ಪರಾಭವವೊದಗಿ, ಪ್ರಜಾಪ್ರಭುತ್ವ ಹಾಗೂ ಸಮಾಜವಾದಿ ಶಕ್ತಿಗಳು ಗೆದ್ದು ಆ ಪಕ್ಷ ಎಲ್ಲ ರಾಜ್ಯಗಳಲ್ಲೂ ತನ್ನ ಸರ್ಕಾರವನ್ನು ಸ್ಥಾಪಿಸಿದ ಮೇಲೆ, 'ಮೈಸೂರು' ಎಂಬ ಹೆಸರನ್ನು ಬಿಟ್ಟುಕೊಡಲು ಕೆಲವರಿಗೆ ಇಷ್ಟವಿಲ್ಲದಿದ್ದರು ಜನಮನದ ಪ್ರಚಂಡಶಕ್ತಿಗೆ ಮಣಿದು 'ಕರ್ಣಾಟಕ'ವೆಂಬ ಹೆಸರನ್ನು ಎಲ್ಲರೂ ಒಮ್ಮತದಿಂದ ಒಕ್ಕೊರಲಿನಿಂದ ಅಂಗೀಕರಿಸಿದರು. ನಾಮಪರಿವರ್ತನೆಗೆ ಹಿಂದೆ ಬದ್ಧವೈರಿಗಳಾಗಿದ್ದವರಿಂದಲೆ ಈಗ ಆ ಕೆಲಸವಾದುದು ಒಂದು ದೈವೀ ಪವಾಡವೆ ಸರಿ.

'ಕರ್ಣಾಟಕ' ನಾಮಕರಣಕ್ಕಾಗಿ ಹಾರೈಸಿದವರು, ಹೋರಾಡಿ ದುಡಿದವರು ರಾಜಕಾರಣಿಗಳಿಗಿಂತ ವಿಶೇಷವಾಗಿ ಕವಿಗಳು ಮತ್ತು ಸಾಹಿತಿಗಳು. ಕರ್ಣಾಟಕತ್ವ ಮುಖ್ಯವಾಗಿ ಅವರ ವಿಜಯವಾಗಿದೆ. 'ಕರ್ಣಾಟಕ' ಎಂಬ ಹೆಸರನ್ನಾಗಲಿ ಏಕೀಕರಣವನ್ನಾಗಲಿ ನಾವು ಸಾಹಿತಿಗಳು ಬಯಸಿದ್ದು ಭಾಷೆ, ಸಾಹಿತ್ಯ, ಸಂಸ್ಕೃತಿಗಳ ಶ್ರೇಯೋಭ್ಯುದಯಗಳ ದೃಷ್ಟಿಯಿಂದಲೆ ಹೊರತು ರಾಜಕೀಯ ಕಾರಣಗಳಿಗಾಗಿ ಅಲ್ಲ. ಆದರೆ ಏಕೀಕರಣವನ್ನು ರಾಜಕಾರಣ ಪಟುಗಳು ತಮ್ಮ ಉತ್ಕರ್ಷಕ್ಕೆ ಸ್ವಾರ್ಥಕ್ಕೆ ಉಪಯೋಗಿಸಿಕೊಂಡರೆಂಬುದು ದುರದೃಷ್ಟಕರ ಸಂಗತಿ.

ಈ 'ಕರ್ಣಾಟಕ' ನಾಮಕರಣದ ಮಹತ್ತರ ಪವಿತ್ರ ಕಾರ್ಯ ಶ್ರೀ ದೇವರಾಜ ಅರಸು ಅವರ ಮುಖ್ಯಮಂತ್ರಿತ್ವದಲ್ಲಿ ನೆರವೇರಿದೆ. ಇದಕ್ಕಾಗಿ ಅವರು ಅತ್ಯಂತ ಅಭಿನಂದನಾರ್ಹರಾಗಿದ್ದಾರೆ. ಆದರೆ ಪೂರ್ಣದೃಷ್ಟಿಯಿಂದ ನೋಡಿದಾಗ, ಇವರು ನಿಮಿತ್ತವಷ್ಟೆ. ಎಷ್ಟೋ ಮಂದಿ ಸಾಹಿತಿಗಳು, ಕವಿಗಳು, ರಾಜಕಾರಣಿಗಳು, ಮಂತ್ರಿಗಳು–ಇವರಲ್ಲಿ ಅನೇಕರು ಈಗ ದಿವಂಗತರಾಗಿದ್ದಾರೆ–ಎಲ್ಲರೂ ಇದಕ್ಕಾಗಿ ಪಟ್ಟು ಹಿಡಿದು ಪ್ರಯತ್ನಿಸಿ, ಒಂದೊಂದೆ ಉಳಿಪೆಟ್ಟು ಹಾಕಿ ಈ ಪೂರ್ಣ ವಿಗ್ರಹ ಸಿದ್ಧವಾಗಲು ನೆರವಾಗಿದ್ದಾರೆಂಬುದನ್ನು ಮರೆಯುವಂತಿಲ್ಲ. "ಹೆಸರಿನಲ್ಲೇನಿದೆ?" ಎಂದು ಯಾರಾದರೂ ಕೇಳಬಹುದು. ನಾನು ಹೇಳುತ್ತೇನೆ, "ಹೆಸರಿನಲ್ಲಿ ಎಲ್ಲವೂ ಇದೆ" ಎಂದು. "ಇಟ್ಟ ಹೆಸರು ಕೊಟ್ಟ ಮಂತ್ರ" ಎಂದೊಮ್ಮೆ 'ಮಾನಸಗಂಗೋತ್ರಿ'

ಯನ್ನು ಪ್ರಾರಂಭಿಸುವಾಗ ಹೇಳಿದ್ದೆ; ಅದು ಇಲ್ಲಿಯೂ ಸತ್ಯ. 'ಕರ್ಣಾಟಕ' ಎಂಬುದು ಅಧಿಕೃತವಾಗಿ ಜಾರಿಗೆ ಬಂದ ಮೇಲೆ ಗೊತ್ತಾಗುತ್ತದೆ, ಅದರಿಂದ ಎಂಥ ಭಾವೈಕ್ಯ ಸಾಧಿತವಾಗುತ್ತದೆ, ಅದು ಎಂತಹ ಅದ್ಭುತ ಶಕ್ತಿಯಾಗಿ ಕೆಲಸಮಾಡುತ್ತದೆ ಎಂಬುದು.

ಹೆಸರೇನೋ ಬಂತು. ಆದರೆ ಇನ್ನೂ ಸಾಧಿತವಾಗಬೇಕಾದ ಒಂದೆರಡು ಬಹಳ ಮುಖ್ಯವಾದ . ಕಾರ್ಯಗಳಿವೆ:(೧) ರಾಜ್ಯಮಟ್ಟದಲ್ಲಿ ಅಧಿಕೃತ ಭಾಷೆಯಾಗಿ ಕನ್ನಡ ಜಾರಿಗೆ ಬರಬೇಕು. (೨) ಕರ್ಣಾಟಕದ ಹೊರಗೆ ಉಳಿದಿರುವ ನಿಜವಾದ ಕನ್ನಡ ಪ್ರದೇಶಗಳು ಮಾತ್ರ ರಾಜ್ಯದಲ್ಲಿ ವಿಲೀನಗೊಂಡು, ಅಲ್ಲಿನ ಜನಗಳ ಹಾರೈಕೆ ಹಂಬಲಗಳು ಸಫಲವಾಗಬೇಕು. (೩) ವಿದ್ಯಾಭ್ಯಾಸದ ಎಲ್ಲ ಸ್ತರಗಳಲ್ಲಿಯೂ ಕನ್ನಡ ಪ್ರಥಮ ಭಾಷೆಯೂ ಶಿಕ್ಷಣಮಾಧ್ಯಮವೂ ಆಗಬೇಕು. ಜನತೆಯ ಆಶೋತ್ತರಗಳ ಆಧ್ಯಾತ್ಮಿಕ ಪ್ರತಿನಿಧಿಯಾದ ಕವಿ ಲೌಕಿಕ ಪ್ರತಿನಿಧಿಗಳಾದ ಶಾಸಕರಿಗೆ ಹಾಗೂ ಸರ್ಕಾರಕ್ಕೆ ಸಲ್ಲಿಸುವ ಒತ್ತಾಯಪೂರ್ವಕವಾದ ಬೇಡಿಕೆಯಿದು. ಜನ ಬಯಸುವ ಈ ಕೆಲಸಗಳು ಎಂದಾದರೂ ಆಗಿಯೆ ತೀರುತ್ತವೆ; ಕರಣಮಾತ್ರರಾಗಿ ನೀವೇ ಆ ಪುಣ್ಯಕ್ಕೆ ಭಾಜರಾಗಿ ಎಂದು ನಾನು ಸಂಬಂಧಪಟ್ಟವರಿಗೆಲ್ಲ ಸೂಚಿಸುತ್ತೇನೆ.

ಕನ್ನಡನಾಡಿನಲ್ಲಿ ಕನ್ನಡವೇ ಸಾರ್ವಭೌಮ ಭಾಷೆಯಾಗಬೇಕು ಎಂಬುದನ್ನು ನಾನು ಪದೇ ಪದೇ ಒತ್ತಿ ಹೇಳುತ್ತ ಬಂದಿದ್ದೇನೆ; ಹಾಗೆ ಹೇಳುವ ಯಾವ ಅವಕಾಶವನ್ನೂ ಕಳೆದುಕೊಂಡಿಲ್ಲ. ದೇಹಪೋಷಣೆಗೆ ಪ್ರತಿನಿತ್ಯವೂ ಅನ್ನ ಹೇಗೆ ಅವಶ್ಯವೊ ಶ್ರೇಯಸ್ಕರವಾದ ವಿಚಾರಗಳೂ ಹಾಗೆಯೆ ಅವಶ್ಯ; ಅವು ಎಷ್ಟು ಸಲ ಉಕ್ತವಾದರೂ ಹಳೆಯವಾಗುವುದಿಲ್ಲ. ರೋಗನಿವಾರಣೆಯಾಗುವ ತನಕವೂ ಮದ್ದುಕೊಡುತ್ತಲೇ ಇರಬೇಕು; ಚರ್ವಿತಚರ್ವಣವೆಂದು ಅದನ್ನು ನಿಲ್ಲಿಸುವಂತಿಲ್ಲ.

ಇಂಗ್ಲಿಷ್ ಮಾಧ್ಯಮ ಭರತಖಂಡದಲ್ಲಿ ಎಂತಹ ದುರಂತ ಪರಿಣಾಮ ಗಳನ್ನುಂಟುಮಾಡಿದೆ ಎಂಬುದನ್ನು, ದೇಶಭಾಷಾ ಮಾಧ್ಯಮ ಹೇಗೆ ತಾರಕವಾಗಬಲ್ಲದೆಂಬುದನ್ನು ಪೂಜ್ಯ ಮಹಾತ್ಮಾ ಗಾಂಧಿಯವರು ತಮ್ಮ ಅಸ್ಖಲಿತವಾದ ಜ್ಯೋತಿರ್ವಾಣಿಯಿಂದ ಘೋಷಿಸಿದ್ದಾರೆ. ಆ ನಿಲುವನ್ನು ಎಲ್ಲ ಶಿಕ್ಷಣತಜ್ಞರೂ ನಿಸ್ಸಂದಿಗ್ಧವಾಗಿ ಎತ್ತಿ ಹಿಡಿದಿದ್ದಾರೆ. ಇಷ್ಟಾದರೂ ಇಂಗ್ಲಿಷ್ ಮಾಧ್ಯಮವನ್ನುಳಿಸಿ ಕೊಳ್ಳಬೇಕೆಂಬುದು ಪಟ್ಟಭದ್ರಹಿತಾಸಕ್ತಿಗಳ ಹತಾಶ ಪ್ರಯತ್ನವಾಗಿದೆ. ಇಂಗ್ಲಿಷ್ ಬೇಡವೆಂದಲ್ಲ; ಯಾರಿಗೆ ಬೇಕು, ಎಷ್ಟು ಬೇಕು ಎಂಬುದು ಮುಖ್ಯವಾದ ಪ್ರಶ್ನೆ. ಕೇವಲ ಹಿಡಿ ಮಂದಿಯ ಸುಖಸ್ವಾರ್ಥಗಳಿಗಾಗಿ ಇಂಗ್ಲಿಷಿನ ವಧ್ಯಪೀಠದ ಮೇಲೆ ಕೋಟ್ಯಂತರ ಜನತೆಯ ಕಲ್ಯಾಣದ ಮಾರಣ ಹೋಮವಾಗುತ್ತಿರುವುದು ಪ್ರಜಾಪ್ರಭುತ್ವ ತತ್ತ್ವದ ಬುಡಕ್ಕೇ ಕುಠಾರಪ್ರಾಯವಾಗಿದೆ.

ಪ್ರತಿಯೊಬ್ಬರಿಗೂ ಬರಿಯ ಅನ್ನ ಬಟ್ಟೆಗಳನ್ನೊದಗಿಸುವಷ್ಟರಲ್ಲೇ ಪರ್ಯವಸಾನವಾಗುವುದಿಲ್ಲ, ಸಮಾಜವಾದ ಮತ್ತು ಸರ್ವೋದಯ. ಸಮಷ್ಟಿ ಜೀವನಕ್ಕೆ ಎಲ್ಲ ಭೂಮಿಕೆಗಳಲ್ಲೂ ವಿಕಾಸ ತುಷ್ಟಿಪುಷ್ಟಿಗಳ ಅವಕಾಶವನ್ನೊದಗಿಸಬೇಕು.

ದೇಶಭಾಷಾ ಮಾಧ್ಯಮವೆ ಅದಕ್ಕೆ ಏಕೈಕ ಸಾಧನ. ಇಂಗ್ಲಿಷ್ ಮಾಧ್ಯಮ ಸರ್ವೋದಯಕ್ಕೆ ಹಿಡಿದ ಶನಿಯಾಗಿದೆ, ಬಡಿದ ಅಶನಿಯಾಗಿದೆ. ಕನ್ನಡ ಮಾಧ್ಯಮ ಸಂಪೂರ್ಣವಾಗಿ ಯಶಸ್ವಿಯಾಗಿ ಪ್ರತಿಷ್ಠಾಪಿತವಾಗುವತನಕ ಕನ್ನಡಿಗರಿಗೆ ಉದ್ಧಾರವಿಲ್ಲ, ಮೋಕ್ಷವಿಲ್ಲ, ಇಂಗ್ಲಿಷಿನ ಮೂಲಕ ಪಡೆಯುವ ಶಿಕ್ಷಣ ಗಾಳಿಗೋಪುರವಲ್ಲದೆ ಮತ್ತೇನೂ ಆಗಲಾರದು. ಪಠ್ಯಪುಸ್ತಕಗಳ ಅಭಾವ, ಪಾರಿಭಾಷಿಕ ಶಬ್ದಗಳಕೊರತೆ, ವೈಜ್ಞಾನಿಕ–ತಾಂತ್ರಿಕ ವಿಚಾರಗಳನ್ನು ಬೋಧಿಸುವಲ್ಲಿ ಕನ್ನಡದ ಅಸಾಮರ್ಥ್ಯ ಮುಂತಾದ ನೆಪಗಳನ್ನು ಮೇಲಿಂದಮೇಲೆ ಒಡ್ಡುವ ಕಿಸುಬಾಯಿದಾಸರ ವಾದಕ್ಕೆ ಬಾಲಿಶಜಲ್ಪ ಅಥವಾ ತಲೆ ಹರಟೆಗಿಂತ ಹೆಚ್ಚಿನ ಮಹತ್ವ ಕೊಡಬೇಕಾಗಿಲ್ಲ. ಕನ್ನಡದ ಶ್ರೀಮಂತಿಕೆಯನ್ನೆ ಅರಿಯದ ಮಂದಪ್ರಜ್ಞರವರು.

ಇತ್ತೀಚೆಗೆ ಬಹಳ ಕೇಳಿಬರುತ್ತಿರುವ ತ್ರಿಭಾಷಾ ಸೂತ್ರದ ವಿಷಯದಲ್ಲಿ ಆಳುವ ಕಾಂಗ್ರೆಸ್ ಪಕ್ಷಕ್ಕೆ ನನ್ನದೊಂದು ಸವಿನಯ ಸೂಚನೆ. ಸಾಮಾನ್ಯವಾಗಿ ಮಂತ್ರಿಗಳೆಲ್ಲ ತ್ರಿಭಾಷಾ ಸೂತ್ರವನ್ನು ನಿಶ್ಯಂಕೆಯಿಂದ ಸಾರುತ್ತಾರೆ; ಅದರ ಅಪಾಯಗಳನ್ನು ಗ್ರಹಿಸುವುದಿಲ್ಲ. ಈ ವಿಚಾರದಲ್ಲಿ ನಾವು ಹಗಲುಗುರುಡರಾಗಿ ವರ್ತಿಸಬಾರದು. ತ್ರಿಭಾಷಾ ಸೂತ್ರ ವಾಸ್ತವವಾಗಿ ಕನ್ನಡ ಮಕ್ಕಳ ಎದೆಗೆ ತ್ರಿಶೂಲ ಸದೃಶವೆ ಆಗಿದೆ. ಈ ಆತಂಕಕ್ಕೆ ಕವಿವಾಣಿ ಹೀಗೆ ಅಭಿವ್ಯಕ್ತಿ ಕೊಟ್ಟಿದೆ

**ಭಾಷಾ ತ್ರಿಶೂಲವೀ ತ್ರಿಭಾಷಾ ಸೂತ್ರ;**
**ಬಾಲಕರ ರಕ್ಷಿಸೈ, ಹೇ ತ್ರಿನೇತ್ರ!**
**ಚೂರು ತಿಂಡಿಗೆ ಸಿಕ್ಕಿಸಿಹರೊ ಈ ಮೂರು ಗಾಳ–**
**ನುಂಗದಿದ್ದರೆ ಹಸಿವೆ; ನುಂಗಿದರೆ ಪ್ರಾಣಶೂಲ! ('ಪ್ರೇತಕ್ಯೂ', ಪು. ೬೩)**

ರಾಜಕೀಯ ದುರಭಿಸಂಧಿಯಿಂದ ಪ್ರೇರಿತವಾದುದು ಈ ತ್ರಿಭಾಷಾ ಸೂತ್ರ. ಅದರ ಪ್ರಕಾರ, ಹಿಂದಿ ಇಂಗ್ಲಿಷುಗಳು ಬಲಾತ್ಕಾರ ಭಾಷೆಗಳಾಗುತ್ತದೆ. ಕನ್ನಡಕ್ಕೆ ಪೆಟ್ಟು ಬೀಳುತ್ತದೆ. ಇದು ಆ ಸೂತ್ರದಲ್ಲಿ ಕಾದಿರುವ ತೀವ್ರವಾದ ಅಪಾಯ. ಎಲ್ಲರೂ ಇಂಗ್ಲಿಷ್ ಮತ್ತುಹಿಂದಿ ಕಲಿಯಬೇಕೆನ್ನುವುದು ದಬ್ಬಾಳಿಕೆಯ ಸೂಚಕವಲ್ಲದೆ ಮತ್ತೇನು? ಪ್ರಜಾಪ್ರಭುತ್ವದಲ್ಲಿ ಬಲಾತ್ಕಾರಕ್ಕೆ ಸ್ಥಾನವಿರಕೂಡದು. ಎಲ್ಲರಿಗೂ ಎಲ್ಲ ಭಾಷೆಗಳೂ ಏತಕ್ಕೆ ಬೇಕು? ಪ್ರತಿಯೊಬ್ಬರೂ ತಮಗೆ ಅಗತ್ಯವಿರುವ ಭಾಷೆಯನ್ನು ಕಲಿಯಬಹುದು. ಅಲ್ಲದೆ ತ್ರಿಭಾಷಾ ಸೂತ್ರವೇ ಏಕೆ? ಭರತ ಖಂಡಕ್ಕೀಗ ಬೇಕಾಗಿರುವುದು ಬಹುಭಾಷಾ ಸೂತ್ರ. ನಮ್ಮ ಜನ ಕಲಿಯಬೇಕಾದುದು ಇಂಗ್ಲಿಷನ್ನು ಮಾತ್ರವಲ್ಲ, ವೈಜ್ಞಾನಿಕ ಆವಶ್ಯಕತೆಗಳಿಗಾಗಿ ರಷ್ಯನ್, ಜರ್ಮನ್ ಮುಂತಾದ ಭಾಷೆಗಳನ್ನು ಕೂಡ.

ಆದ್ದರಿಂದ ನನ್ನ ವಾದ ಇಷ್ಟು: ನಮಗೆ ಬೇಕಾದುದು ತ್ರಿಭಾಷಾ ಸೂತ್ರವಲ್ಲ, ದ್ವಿಭಾಷಾ ಸೂತ್ರ: 'ಬಹುಭಾಷೆಗಳಲ್ಲಿ ದ್ವಿಭಾಷೆ' ಎಂಬುದೇ ನಮಗಿಂದು ಅತ್ಯಂತ ಕ್ಷೇಮಕರವೂ ಲಾಭದಾಯಕವೂ ಆದ ಸೂತ್ರ. ನಮ್ಮ ವಿದ್ಯಾರ್ಥಿಗಳ ಮುಂದೆ ಅನೇಕ ಭಾಷೆಗಳನ್ನಿರಿಸಿ, ಯಾವುದಾದರೂ ಎರಡು ಭಾಷೆಗಳನ್ನು ಆರಿಸಿಕೊಳ್ಳುವ

ಸ್ವಾತಂತ್ರ್ಯವನ್ನು ಅವರಿಗೇ ಕೊಡಬೇಕು. ತಮ್ಮ ಆವಶ್ಯಕತೆಗೆ, ಸಾಮರ್ಥ್ಯಕ್ಕೆ ತಕ್ಕಂತೆ ಅವರೇ ನಿರ್ಧರಿಸಿಕೊಳ್ಳಲಿ. ಇದರಿಂದ ಬಲಾತ್ಕಾರದ ಅಂಶ ತೊಲಗುತ್ತದೆ.

ಶೈಕ್ಷಣಿಕ ದೃಷ್ಟಿಯಿಂದ ಮಾತ್ರವಲ್ಲದೆ ರಾಜಕೀಯ ದೃಷ್ಟಿಯಿಂದಲೂ ಈ 'ಬಹುಭಾಷೆಗಳಲ್ಲಿ ದ್ವಿಭಾಷಾ' ಸೂತ್ರ ತ್ರಿಭಾಷಾ ಸೂತ್ರಕ್ಕಿಂತ ಪರಿಣಾಮಕಾರಿಯಾಗಿ, ಎಲ್ಲ ಪ್ರದೇಶಗಳಿಗೂ ಸಮಾಧಾನವೊದಗಿಸಿ, ಸ್ವಭಾಷಾಭಿಮಾನ ಜನ್ಯವಾದ ಸಮಸ್ಯೆಗಳಿಗೆ ಪರಿಹಾರ ಕಲ್ಪಿಸುತ್ತದೆ. (ವಿವರಗಳಿಗೆ ನೋಡಿ: ಪ್ರಸಾರಾಂಗದ 'ಗೃಹಸರಸ್ವತೀ ಗ್ರಂಥಮಾಲೆ'ಯ ಪುಸ್ತಕಗಳಿಗೆ ಬರೆದಿರುವ ಮುನ್ನುಡಿ.)

ಇಂಗ್ಲಿಷಿನ ಸ್ಥಾನದಲ್ಲಿ ಹಿಂದಿಯನ್ನು ತಂದು ಕೂರಿಸಬೇಕೆಂಬುದು ಹಿಂದಿವಾದಿಗಳ ಸಂಚು. ಇದನ್ನು ಕನ್ನಡಿಗರು ಪ್ರತಿಭಟಿಸಿ ವಿಫಲಗೊಳಿಸಬೇಕು. ಕೇಂದ್ರ ಸರ್ಕಾರವನ್ನು ಮೆಚ್ಚಿಸುವುದಕ್ಕಾಗಿ ರಾಜ್ಯಸರ್ಕಾರ ಹಿಂದಿ ವಿಶ್ವವಿದ್ಯಾನಿಲಯ ಸ್ಥಾಪನೆಯೇ ಮುಂತಾದ ಅವಿವೇಕದ ಕಾರ್ಯಗಳಿಗೆ ಕೈಹಾಕಿ ಕನ್ನಡಿಗರ ಹಿತವನ್ನು ಬಲಿಕೊಡಬಾರದು. ಈ ವಿಷಯದಲ್ಲಿ ಹೆಜ್ಜೆ ಹೆಜ್ಜೆಗೂ ಎಚ್ಚರಬೇಕು; ಒಂದು ಕ್ಷಣ ಕಣ್ಣು ಮುಚ್ಚಿಕೊಳ್ಳುವ ತಪ್ಪಿಗೆ ಯುಗ ಯುಗಗಳ ಅಂಧಕಾರ ಫಲವನ್ನು ಅನುಭವಿಸಬೇಕಾದೀತು.

ಐವತ್ತು ಕೋಟಿ ಭಾರತೀಯರೂ ಹಿಂದಿಯನ್ನು ಕಲಿಯಬೇಕೆನ್ನುವ ವಾದದಲ್ಲಿ ಗತ ಸಾಮ್ರಾಜ್ಯಶಾಹಿಯ ಮನೋಧರ್ಮದ ವಿನಾ ಇನ್ನಾವ ಅರ್ಥವೂ ಇಲ್ಲ. ಶೇಕಡ ಒಂದರಷ್ಟು ಜನಕ್ಕೆ ಅರ್ಧಮರ್ಧ ಇಂಗ್ಲಿಷ್ ಕಲಿಸಿ ಬ್ರಿಟಿಷರು ಇನ್ನೂರು ವರ್ಷಕ್ಕೂ ಮೇಲೆ ಸಮರ್ಥವಾಗಿ ರಾಜ್ಯಭಾರ ನಡೆಸಲಿಲ್ಲವೆ?

ಕಡೆಯದಾಗಿ ಕವಿಯ ಕಳಕಳಿಯ ಮೊರೆ ಇದು: "ಹೇ ರಾಜಕಾರಣಿ, ಹೇ ಮಂತ್ರಿವರೇಣ್ಯ, ಹೇ ಅಧಿಕಾರಿ ಸರ್ವೋತ್ತಮ, ಹೇ ವಣಿಗ್ವರ, ಹೇ ಶ್ರಮಜೀವಿ, ಹೇ ಅಧ್ಯಾಪಕ ಮಹಾಶಯ, ಓ ನೇಗಿಲಯೋಗಿ, ನೀನು ಯಾರೆ ಆಗಿರು, ಎಲ್ಲಿಯೆ ಇರು, ಕನ್ನಡವನ್ನು ಕೈಬಿಡದಿರು.. ಇದು ನಿನ್ನ ಭಾಷೆ; ಇದು ದೇಶ ಭಾಷೆ; ಇದು ಸಾವಿರಾರು ವರ್ಷಗಳ ಸುಪುಷ್ಟ ಸಾಹಿತ್ಯ ಭಾಷೆ; ಇದು ಮಹಾ ಕವಿಗಳನ್ನೂ ಶಿಲ್ಪಿಗಳನ್ನೂ ರಾಜಾಧಿರಾಜರನ್ನೂ ವೀರಾಧಿವೀರರನ್ನೂ ರಸಋಷಿ ದಾರ್ಶನಿಕರನ್ನೂ ಹಡೆದಿರುವ ಭಾಷೆ.... ನಿನ್ನ ತಾಯಿ ರಾಣಿಯಾಗಿದ್ದಳೆಂಬುದನ್ನು ಮರೆತು ಬಿಡುವೆಯ? ಸ್ವತಂತ್ರನಾದ ಮೇಲೆಯೂ ಆಕೆಯನ್ನು ತೊತ್ತಾಗಿರಿಸುವೆಯ?"

ಪ್ರತಿಯೊಬ್ಬ ಕನ್ನಡಿಗನಿಗೂ ಕವಿ ಕೊಡುವ ದೀಕ್ಷೆ ಇದು; ಕನ್ನಡಕ್ಕಾಗಿ ಕೈಯೆತ್ತು; ನಿನ್ನ ಕೈ ಕಲ್ಪವೃಕ್ಷವಾಗುತ್ತದೆ! ಕನ್ನಡಕ್ಕಾಗಿ ಕೊರಳೆತ್ತು; ಅಲ್ಲಿ ಪಾಂಚಜನ್ಯ ಮೂಡುತ್ತದೆ! ಕನ್ನಡಕ್ಕಾಗಿ ಕಿರು ಬೆರಳೆತ್ತಿದರೂ ಸಾಕು, ಇಂದು ಅದೆ ಗೋವರ್ಧನ ಗಿರಿಧಾರಿಯಾಗುತ್ತದೆ!

**ಜಯ್ ಭಾರತ ಜನನಿಯ ತನುಜಾತೆ,**

ಜಯ ಹೇ ಕರ್ಣಾಟಕ ಮಾತೆ!
ಜಯ್ ಸುಂದರ ನದಿ ವನಗಳ ನಾಡೆ,
ಜಯ ಹೇ ರಸಋಷಿಗಳ ಬೀಡೆ!
ಭೂದೇವಿಯ ಮಕುಟದ ನವಮಣಿಯೆ,
ಗಂಧದ ಚಂದದ ಹೊನ್ನಿನ ಗಣಿಯೆ,
ರಾಘವ ಮಧುಸೂದನರವತರಿಸಿದ
ಭಾರತ ಜನನಿಯ ತನುಜಾತೆ,
ಜಯ ಹೇ ಕರ್ಣಾಟಕ ಮಾತೆ!
ಶಂಕರ ರಾಮಾನುಜ ವಿದ್ಯಾರಣ್ಯ
ಬಸವೇಶ್ವರರಿಹ ದಿವ್ಯಾರಣ್ಯ,
ರನ್ನ ಷಡಕ್ಷರಿ ಪೊನ್ನ
ಪಂಪ ಲಕುಮಿಪತಿ ಜನ್ನ
ಕುಮಾರವ್ಯಾಸರ ಮಂಗಳಧಾಮ,
ಕವಿಕೋಗಿಲೆಗಳ ಪುಣ್ಯಾರಾಮ:
ನಾನಕ ರಾಮಾನಂದ ಕಬೀರರ
ಭಾರತ ಜನನಿಯ ತನುಜಾತೆ,
ಜಯ ಹೇ ಕರ್ಣಾಟಕ ಮಾತೆ!
ತೈಲಪ ಹೊಯ್ಸಳರಾಳಿದ ನಾಡೆ,
ಡಂಕಣ ಜಕಣರ ನಚ್ಚಿನ ಬೀಡೆ,
ಕೃಷ್ಣ ಶರಾವತಿ ತುಂಗಾ
ಕಾವೇರಿಯ ವರ ರಂಗ:
ಚೈತನ್ಯ ಪರಮಹಂಸ ವಿವೇಕರ
ಭಾರತ ಜನನಿಯ ತನುಜಾತೆ,
ಜಯ ಹೇ ಕರ್ಣಾಟಕ ಮಾತೆ!

# ಬಹುಭಾಷೆಗಳಲ್ಲಿ ದ್ವಿಭಾಷೆ [೧]

ಭಾರತದಲ್ಲಿ ಭಾಷಾಭಿಮಾನದ ಅತೀರೇಕದಿಂದ ಉಂಟಾಗಬಹುದಾದ ಗೊಂದಲವನ್ನು ಪರಿಹರಿಸಲು ಜನರು ಮೂರು ಭಾಷೆಗಳನ್ನು ಕಲಿಯಬೇಕು ಎಂದು 'ತ್ರಿಭಾಷಾ ಸೂತ್ರ'ವನ್ನು ಘೋಷಿಸಲಾಗಿದೆ. ಇಂಗ್ಲಿಷನ್ನು ಅಂತರ್ರಾಷ್ಟ್ರೀಯ ಮಾಧ್ಯಮಕ್ಕಾಗಿಯೂ ಹಿಂದಿಯನ್ನು ಭಾರತ ರಾಷ್ಟ್ರೀಯ ಮಾಧ್ಯಮಕ್ಕಾಗಿಯೂ ಕನ್ನಡವನ್ನು (ಇತರ ದೇಶಭಾಷೆಗಳಲ್ಲಿ ಒಂದನ್ನು) ಕರ್ನಾಟಕ ರಾಜ್ಯದ ಮಾಧ್ಯಮಕ್ಕಾಗಿಯೂ ಎಂಬರ್ಥದಲ್ಲಿ . ಮೇಲು ನೋಟಕ್ಕೆ ಇದು ಸಾಧುವಾಗಿ ತೋರುತ್ತಿದೆಯಾದರೂ ಸ್ವಲ್ಪ ವಿಚಾರಿಸಿದರೆ ಗೊತ್ತಾಗುತ್ತದೆ ಮಹಾ ಅಪಾಯಕಾರಿ ಎಂದು.

ರಾಜಕೀಯ ದುರಭಿಸಂಧಿಯಿಂದ ಪ್ರೇರಿತವಾದುದು ಈ ತ್ರಿಭಾಷಾ ಸೂತ್ರ. ಅದರ ಪ್ರಕಾರ, ಹಿಂದಿ ಇಂಗ್ಲಿಷುಗಳು ಬಲಾತ್ಕಾರ ಭಾಷೆಗಳಾಗುತ್ತವೆ. ಕನ್ನಡಕ್ಕೆ ಪೆಟ್ಟು ಬೀಳುತ್ತದೆ. ಇದು ಆ ಸೂತ್ರದಲ್ಲಿ ಕಾದಿರುವ ತೀವ್ರವಾದ ಅಪಾಯ.

ಎಲ್ಲರೂ ಇಂಗ್ಲಿಷ್ ಮತ್ತು ಹಿಂದಿ ಕಲಿಯಬೇಕೆನ್ನುವುದೂ ದಬ್ಬಾಳಿಕೆಯ ಸೂಚಕವಲ್ಲದೆ ಮತ್ತೇನು? ಪ್ರಜಾಪ್ರಭುತ್ವದಲ್ಲಿ  ಬಲಾತ್ಕಾರಕ್ಕೆ ಸ್ಥಾನವಿರಕೂಡದು. ಎಲ್ಲರಿಗೂ ಎಲ್ಲ ಭಾಷೆಯೂ ಏತಕ್ಕೆ ಬೇಕು? ಪ್ರತಿಯೊಬ್ಬರೂ ತಮಗೆ ಅಗತ್ಯವಿರುವ ಭಾಷೆಯನ್ನು ಕಲಿಯಬಹುದು. ಅಲ್ಲದೆ ತ್ರಿಭಾಷಾ ಸೂತ್ರವೇ ಏಕೆ? ಭರತಖಂಡಕ್ಕೀಗ ಬೇಕಾಗಿರುವುದು ಬಹುಭಾಷಾ ಸೂತ್ರ. ನಮ್ಮ ಜನ ಕಲಿಯಬೇಕಾದುದು ಇಂಗ್ಲಿಷನ್ನು ಮಾತ್ರವಲ್ಲ, ವೈಜ್ಞಾನಿಕ ಆವಶ್ಯಕತೆಗಳಿಗಾಗಿ ರಷ್ಯನ್, ಜರ್ಮನ್ ಮುಂತಾದ ಭಾಷೆಗಳನ್ನು ಕೂಡ ಕಲಿಯಬೇಕು.

ತ್ರಿಭಾಷಾ ಸೂತ್ರದ ಅಪಾಯ ಇಷ್ಟಕ್ಕೇ ಸೀಮಿತವಾಗಿಲ್ಲ. ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ರಾಜಕೀಯ ಕಾರಣಗಳಿಗಾಗಿ ಇಂಗ್ಲಿಷ್ ಮತ್ತು ಹಿಂದಿ ಭಾಷೆಗಳ ವೈಭವವನ್ನು ಏನೂ ಅರಿಯದ ನಮ್ಮ ಹಸುಳೆಗಳ ಮುಂದೆ ವರ್ಣಿಸಿ ಅವರ ಮನಸ್ಸನ್ನು ಅವುಗಳ ಕಡೆಗೇ ಎಳೆದು ದೇಶಭಾಷೆಗಳ ಅಭ್ಯಯನವನ್ನು ಹಿಂದಕ್ಕೊತ್ತರಿಸುವ ಪ್ರಯತ್ನವನ್ನೂ ಮಾಡುತ್ತಿರುವವರು ಅನೇಕರಿದ್ದಾರೆ.

ಆದ್ದರಿಂದ ನನ್ನ ವಾದ ಇಷ್ಟು: ನಮಗೆ ಬೇಕಾದುದು ತ್ರಿಭಾಷಾ ಸೂತ್ರವಲ್ಲ ದ್ವಿಭಾಷಾ ಸೂತ್ರ: ಅಂದರೆ 'ಬಹುಭಾಷೆಗಳಲ್ಲಿ ದ್ವಿಭಾಷೆ' ಎಂಬುದೇ ನಮಗಿಂದು

---

[೧] ಒಂದು ವಿಶೇಷ ಸಂಚಿಕೆಗೆ ಬರೆದ ಲೇಖನ

ಅತ್ಯಂತ ಕ್ಷೇಮಕರವೂ  ಲಾಭದಾಯಕವೂ ಆದ ಸೂತ್ರ. ನಮ್ಮ ವಿದ್ಯಾರ್ಥಿಗಳ ಮುಂದೆ ಅನೇಕ ಭಾಷೆಗಳನ್ನಿರಿಸಿ, ಯಾವುದಾದರೂ ಎರಡು ಭಾಷೆಗಳನ್ನು ಆರಿಸಿಕೊಳ್ಳುವ ಸ್ವಾತಂತ್ರ್ಯವನ್ನು ಅವರಿಗೇ ಕೊಡಬೇಕು. ಭರತಖಂಡದ ಯಾವ ವಿದ್ಯಾರ್ಥಿಯ ಮೇಲೂ ಯಾವ ಭಾಷೆಯನ್ನೂ ಬಲಾತ್ಕಾರವಾಗಿ ಹೇರಬಾರದು. ತಮ್ಮ ಅವಶ್ಯಕತೆಗೆ ಮತ್ತು ಸಾಮರ್ಥ್ಯಕ್ಕೆ  ತಕ್ಕಂತೆ ಅವರೇ ನಿರ್ಧರಿಸಿಕೊಳ್ಳಲಿ. ಇದರಿಂದ ಬಲಾತ್ಕಾರದ ಅಂಶ ತೊಲಗುತ್ತದೆ; ಆರಿಸಿಕೊಳ್ಳುವ ಸ್ವಾತಂತ್ರ್ಯ ಪ್ರಜಾಸತ್ತಾತ್ಮಕವಾಗುತ್ತದೆ.

ಶೈಕ್ಷಣಿಕ ದೃಷ್ಟಿಯಿಂದ ಮಾತ್ರವಲ್ಲದೆ ರಾಜಕೀಯ ದೃಷ್ಟಿಯಿಂದಲೂ ಈ 'ಬಹುಭಾಷೆಗಳಲ್ಲಿ ದ್ವಿಭಾಷಾ' ಸೂತ್ರ ತ್ರಿಭಾಷಾಸೂತ್ರಕ್ಕಿಂತ ಪರಿಣಾಮಕಾರಿಯಾಗಿ, ಎಲ್ಲ ಪ್ರದೇಶಗಳಿಗೂ ಸಮಾಧಾನವೊದಗಿಸಿ, ಸ್ವಭಾಷಾಭಿಮಾನ ಜನ್ಯವಾದ ಸಮಸ್ಯೆಗಳಿಗೆ ಪರಿಹಾರ ಕಲ್ಪಿಸುತ್ತದೆ.

ಯಾವುದಾದರೂ ಎರಡು ಭಾಷೆಗಳನ್ನು ಆರಿಸಿಕೊಳ್ಳಬಹುದು ಎನ್ನುವುದರಿಂದ ಹಿಂದಿ ಬೇಡ ಎನ್ನುವವರಿಗೆ, ಇಂಗ್ಲಿಷ್ ಬೇಡ ಎನ್ನುವವರಿಗೆ, ಅವುಗಳನ್ನು ಬಲಾತ್ಕಾರವಾಗಿ ಹೇರಿದಂತಾಗುವುದಿಲ್ಲ; ನಿಷೇಧಿಸಿದಂತೆಯೂ ಆಗುವುದಿಲ್ಲ. ಮಹಾಜನರೇ ಕಾಲಕ್ರಮೇಣ, ತಮ್ಮ ತಮ್ಮ ಅಭಿರುಚಿ ಆವಶ್ಯಕತೆಗಳಿಗೆ ತಕ್ಕಂತೆ ಹಿಂದಿ, ಇಂಗ್ಲಿಷ್, ರಷ್ಯನ್, ಸಂಸ್ಕೃತ ಮೊದಲಾದ ಭಾಷೆಗಳನ್ನು ಯಾವ ಶೇಕಡಾವಾರು ಪ್ರಮಾಣದಲ್ಲಿ ಕಲಿಯಬೇಕೆಂಬುದನ್ನು ತಮಗೆ ತಾವೇ ಗೊತ್ತುಮಾಡಿಕೊಳ್ಳುತ್ತಾರೆ.

ಐವತ್ತು ಕೋಟಿ ಭಾರತೀಯರೂ ಹಿಂದಿಯನ್ನು ಕಲಿಯಬೇಕೆನ್ನುವ ವಾದದಲ್ಲಿ ಗತ ಸಾಮ್ರಾಜ್ಯಶಾಹಿಯ ಮನೋಧರ್ಮದ ವಿನಾ ಇನ್ನಾವ ಅರ್ಥವೂ ಇಲ್ಲ. ಶೇಕಡ ಒಂದರಷ್ಟು ಜನಕ್ಕೆ ಅರ್ಧಮರ್ಧ ಇಂಗ್ಲಿಷ್ ಕಲಿಸಿ ಬ್ರಿಟೀಷರು ಇನ್ನೂರು ವರ್ಷಕ್ಕೂ ಮೇಲೆ ಸಮರ್ಥವಾಗಿ ರಾಜ್ಯಭಾರ ನಡೆಸಲಿಲ್ಲವೆ?

ತ್ರಿಭಾಷಾ ಸೂತ್ರ ಎಂಬುದು, ನಾನು ಹಿಂದೆಯೆ ಅನೇಕ ಕಡೆ ಹೇಳಿರುವಂತೆ, ಭಾರತೀಯರಿಗೊ ತ್ರಿಶೂಲಪ್ರಾಯವಾಗುತ್ತದೆ. ಎಲ್ಲರಿಗೂ ಎಲ್ಲ ಭಾಷೆಗಳೂ ಬೇಕಾಗಿಲ್ಲ ಎಂದರೆ, ಎಲ್ಲರೂ ಇಂಗ್ಲಿಷನ್ನಾಗಲಿ ಹಿಂದಿಯನ್ನಾಗಲಿ ಕಲಿಯಬೇಕಾದದ್ದು ಏಕೆ? ಯಾರಿಗೆ ಅಗತ್ಯವಿದೆಯೋ ಅಂಥವರು ಅವರಿಗೆ ಅಗತ್ಯವಿರುವ ಭಾಷೆಯನ್ನು ಕಲಿಯಬಹುದು. ಇಂತಹ ಭಾಷೆಗಳನ್ನು ಶೀಘ್ರವಾಗಿ ಸಾಹಿತ್ಯದೃಷ್ಟಿಯಿಂದಲ್ಲದೆ ಭಾಷಾದೃಷ್ಟಿಯಿಂದ ಬೋಧಿಸುವ ಕಾರ್ಯಕ್ಕಾಗಿ ಭಾಷಾ ಸಂಸ್ಥೆಗಳ ಸ್ಥಾಪನೆಯಾಗಿದೆ. ಇನ್ನೂ ಹೆಚ್ಚಿನ ಸಂಖ್ಯೆಯಲ್ಲಿ ಆಗಲಿದೆ, ಅಲ್ಲದೆ ತ್ರಿಭಾಷಾ ಸೂತ್ರವೇ ಏಕೆ?

ಆದ್ದರಿಂದ 'ಬಹುಭಾಷೆಗಳಲ್ಲಿ ದ್ವಿಭಾಷೆ'ಎಂಬುದೇ ನಮಗಿಂದು ಕ್ಷೇಮಕರ ಸೂತ್ರವಾಗಿದೆ.

ಒಂದುವೇಳೆ ಮೂರು ಭಾಷೆಗಳನ್ನೂ ಕಲಿಯಬೇಕು ಎಂದು ಹಠ ಹಿಡಿದರೂ ಬಹುಭಾಷೆಗಳಲ್ಲಿ ಮೂರು ಭಾಷೆಗಳನ್ನು ಆರಿಸಿಕೊಳ್ಳುವ ಸ್ವಾತಂತ್ರ್ಯ

ವಿದ್ಯಾರ್ಥಿಗಿರಬೇಕು. ‘ಬಹುಭಾಷೆಗಳಲ್ಲಿ ತ್ರಿಭಾಷೆ’ ಆಗಬೇಕೇ ಹೊರತೂ ಬರಿಯ ‘ತ್ರಿಭಾಷೆ’ಯಾಗಬಾರದು. ಬರಿಯ ‘ತ್ರಿಭಾಷೆ’ಯಾದರೆ ಇಂಗ್ಲಿಷ್ ಮತ್ತು ಹಿಂದಿ ಬಲಾತ್ಕಾರದ ಭಾಷೆಗಳಾಗುತ್ತವೆ. ಕನ್ನಡ ತೆಲುಗು ತಮಿಳು ಮಲೆಯಾಳ ಭಾಷೆಗಳು ತಮ್ಮ ರಾಜ್ಯಗಳಲ್ಲಿಯೆ ಐಚ್ಛಿಕ ಭಾಷೆಗಳಾಗಿ ತೃತೀಯ ಸ್ಥಾನಕ್ಕಿಳಿದು ಹಿಂದಿಯನ್ನು ‘ಓಲೈಸುವ ಅಡಿಯಾಳುಗಳಂತಾಗಿ ತೊತ್ತುಗಳಾಗುತ್ತವೆ.’

# ಕನ್ನಡವೇ ಶಿಕ್ಷಣ ಮಾಧ್ಯಮವಾಗಬೇಕು [೧]

"ಮಾನ್ಯ ಹನುಮಂತಯ್ಯನವರೇ, ವೈಸ್-ಚಾನ್ಸಲರ್ ಡಿ'ಸೋಜಾ ಅವರೆ ಸ್ನೇಹಿತರೆ, ಮಹನೀಯರೆ, ಮಹಿಳೆಯರೆ, ಸರಸ್ವತಿಯ ಪುತ್ರಪುತ್ರಿಯರೆ, -ಸರಸ್ವತಿಯ ಕೃಪೆ ಅನಂತವಾದುದು, ಬಹುಮುಖವಾದುದು. ಕಾಡುಜೀವಿಯಾದ ನನ್ನನ್ನು 'ಶ್ರೀ ರಾಮಾಯಣದರ್ಶನಂ' ಕಾವ್ಯದ ನಿರ್ಮಾಣಕ್ಕೆ ಉಪಯೋಗಿಸಿಕೊಂಡು ಈ ಮರ್ತ್ಯಜಿಹ್ವೆಯಲ್ಲಿ ದಿವ್ಯಚೇತನವನ್ನುತುಂಬಿ ನವೋದಯದ ಮಹಾಕಾವ್ಯವನ್ನು ರಚಿಸುವ ಶಕ್ತಿಯನ್ನು ನೀಡಿದುದಕ್ಕಾಗಿ ಆ ವಾಗ್ದೇವಿಗೆ ಅನಂತಾನಂತ ವಂದನೆಗಳನ್ನು ಅರ್ಪಿಸುತ್ತೇನೆ. ಆ ವಾಗ್ದೇವಿ ಅರೂಪೆ, ಅತೀತೆ, ಅನಂತೆ. ಆದರೆ ಸರ್ವದೇಶ ಸರ್ವಕಾಲಗಳ ಮತ್ತು ಸರ್ವಕವಿಗಳ ಕೃತಿಸಮಷ್ಟಿಯ ರೂಪದಲ್ಲಿ ಆಕೆ ಅಂತರ್ಯಾಮಿಯಾಗಿದ್ದಾಳೆ, ಲೋಕಗೋಚರೆಯಾಗಿದ್ದಾಳೆ. ಜಗನ್ಮಾತೆ ಪ್ರತಿಯೊಬ್ಬನಿಗೂ ತನ್ನ ತನ್ನ ತಾಯಿಯಾಗಿ ಗೋಚರಿಸುವಂತೆ ಸರ್ವಭಾಷಾಮಯಿ ಸರಸ್ವತಿ ನಮನಮಗೆ ನಮ್ಮ ನಮ್ಮ ಭಾಷಾರೂಪಗಳಲ್ಲಿ ಆವಿರ್ಭವಿಸಿದ್ದಾಳೆ. ಆದ್ದರಿಂದ ಎಲ್ಲ ಕಾಲ, ಎಲ್ಲ ದೇಶ, ಎಲ್ಲ ಭಾಷೆಯ ಎಲ್ಲ ಕವಿಗಳಿಗೂ ನನ್ನ ಅನಂತ ವಂದನೆಗಳು. ಆ ಜಗನ್ಮಾತೆ ಕನ್ನಡಿಗರಾದ ನಮಗೆ ನಮ್ಮ ಮಾತೆಯಾಗಿ ಬಂದು ನಮ್ಮನ್ನು ಉದ್ಧರಿಸುತ್ತಿದ್ದಾಳೆ. ಆದ್ದರಿಂದ ಕನ್ನಡದ ಆದಿಕವಿ ಪಂಪನಿಂದ ಈ ವರೆಗೆ ಬಂದ ಎಲ್ಲ ಮಹಾಕವಿಗಳಿಗೂ ನನ್ನ ಅನಂತ ವಂದನೆಗಳು.

ಕವಿ, ಸರಸ್ವತಿಯ ಒಂದು ಕಣ್ಣು: ಸಹೃದಯ, ಆಕೆಯ ಮತ್ತೊಂದು ಕಣ್ಣು. ಸಹೃದಯರಾದ ತಮಗೆಲ್ಲರಿಗೂ ಅನಂತ ವಂದನೆಗಳು. ಎಲ್ಲ ಜನಮನದ ಆಶೆ,ಆಕಾಂಕ್ಷೆ ಅಭೀಪ್ಸೆಗಳು ಒಬ್ಬ ಕವಿಯಲ್ಲಿ ಮೂಡುತ್ತವೆ. ಆಗ ಅವನಿಂದ ಯಾವುದಾದರೂ ಮಹಾಕೃತಿ ಸೃಷ್ಟಿಯಾಗುತ್ತದೆ. ಆದ್ದರಿಂದ ಇಂತಹ ಸಂದರ್ಭಗಳಲ್ಲಿ ಕವಿಯೊಬ್ಬನೆ ಅಭಿನಂದನೀಯನಲ್ಲ, ಜನತೆಯೂ ಅಷ್ಟೇ ಅಭಿನಂದನಾರ್ಹ. ಸಾಹಿತ್ಯ ಅಕಾಡೆಮಿಯ ಇಂಥ ಬಹುಮಾನಗಳು ಕವಿಗೆ ಒಂದು ದೃಷ್ಟಿಯಿಂದ ಅವಶ್ಯಕವಾಗಬಹುದು. ಆಗ ತಾನೆ ಹುಟ್ಟಿದ ಕರುವನ್ನು ಗೌಳಿಗನು ಹಸುವಿನ ಕೆಚ್ಚಲಿನ ಬಳಿಗೆ ಬಿಡುವಂತೆ ಇಂಥ ಬಹುಮಾನಗಳು ಜನತೆಯನ್ನು ಕೃತಿಯ ಹತ್ತಿರಕ್ಕೆ ತೆಗೆದುಕೊಂಡು ಹೋಗಿಬಿಡುತ್ತವೆ. ಭಾರತದ ಒಂದು ಭಾಷೆ ಕನ್ನಡ. ಭಾರತಿಗೆ ಒಂದು ಬಾಹು ಕನ್ನಡ. ನಾನೇನಾದರೂ ಚಿತ್ರಕಾರನಾಗಿದ್ದರೆ ಭಾರತಿಗೆ ಹದಿನಾಲ್ಕು ಬಾಹುಗಳನ್ನು ಚಿತ್ರಿಸುತ್ತಿದ್ದೆ. ಆ ಹದಿನಾಲ್ಕು ಬಾಹುಗಳು ಭಾರತದ ಹದಿನಾಲ್ಕು ಮುಖ್ಯ ಭಾಷೆಗಳನ್ನು ಪ್ರತಿನಿಧಿಸುತ್ತವೆ.

---

[೧] ತಾ. ೨-೪-೧೯೫೫ ರಂದು ಮೈಸೂರು ವಿ.ವಿ. ನಿಲಯದ ವೈಸ್-ಛಾನ್ಸಲರ್‌ರೂ, ಅಧ್ಯಾಪಕರೂ, ವಿದ್ಯಾರ್ಥಿಗಳೂ ಶ್ರೀ ಕುವೆಂಪು ಅವರನ್ನು ಗೌರವಿಸುವ ಸಲುವಾಗಿ ಏರ್ಪಡಿಸಿದ ಸಮಾರಂಭದಲ್ಲಿ ಅರ್ಪಿಸಿದ ಬಿನ್ನವತ್ತಳೆಗೆ ಕೊಟ್ಟ ಉತ್ತರ, ಪ್ರಬುದ್ಧಕರ್ಣಾಟಕದ ಮನ್ಮಥ ಸಂ॥ ಚೈತ್ರಸಂಚಿಕೆ (೧೪೩)ಯಿಂದ

ಕೇಂದ್ರಸರಕಾರದವರು ಈ ಒಂದೊಂದು ಭಾಷೆಗೂ ಒಂದೊಂದು ಬಹುಮಾನವನ್ನು ನೀಡಿ ಗೌರವಿಸಿದ್ದಾರೆ. ಕನ್ನಡ ಜನ ಮನದ ಮಹಾ ಅಭೀಪ್ಸೆಗಳು ಮೂಡಿರುವ 'ಶ್ರೀ ರಾಮಾಯಣದರ್ಶನಂ' ಕಾವ್ಯಕ್ಕೆ ಸಂದ ಗೌರವಕ್ಕಾಗಿ ನಿಮ್ಮಿಂದ ಹರಿದುಬರುತ್ತಿರುವ ಸಂತೋಷ ತರಂಗಗಳು ಆ ಚತುರ್ದಶ ಭುಜ ವಿರಾಜಿತೆಯಾದ ದೇವಿಯ ಅಡಿಗಳಿಗೆ ಸಮರ್ಪಿತವಾಗಲಿ!

ವಿದ್ಯೆ, ಅಧಿಕಾರ, ಅರ್ಹತೆಗಳಲ್ಲಿ ನನಗಿಂತ ಮೇಲಾದವರು ಇಲ್ಲಿ ಸೇರಿ ನನ್ನನ್ನು ಅಭಿನಂದಿಸಲು ಈ ಸಮಾರಂಭವನ್ನು ಏರ್ಪಡಿಸಿದ್ದೀರಿ. ಈ ಹೊತ್ತಿನ ಈ ಸಮಾರಂಭವನ್ನು ನೋಡಿ ನಾನು ಮೊಟ್ಟಮೊದಲು ಹಳ್ಳಿಯಿಂದ ಇಲ್ಲಿ ಬಂದು ರಾತ್ರಿಯ ಹೊತ್ತು ಬೆಳಗಿದ ಅರಮನೆಯ ಅಸಂಖ್ಯಾತ ದೀಪಗಳನ್ನು ನೋಡಿ ದಿಗ್ಭ್ರಮೆಗೊಂಡಂತೆ ದಿಗ್ಭ್ರಮೆಗೊಂಡಿದ್ದೇನೆ.

ನಾನು ಮೊದಲು ಹೇಳಿದಂತೆ ಯಾವ ಒಂದು ಮಹಾಕಾರ್ಯಕ್ಕೂ ವ್ಯಕ್ತಿಯೇ ಕಾರಣವಾಗುವುದಿಲ್ಲ. ಆ ವ್ಯಕ್ತಿಯ ಹಿಂದಿರುವ ಅವ್ಯಕ್ತಶಕ್ತಿಯೇ ಕಾರಣವಾಗಿರುತ್ತದೆ. ಹಾಗೆಯೆ ಮಹಾಕಾವ್ಯದ ಸೃಷ್ಟಿಗೆ ಒಬ್ಬ ವ್ಯಕ್ತಿ ಕಾರಣನಲ್ಲ. ಯುಗದ ಚೇತನ ಗರ್ಭದಲ್ಲಿ ಸಂಸ್ಕಾರರೂಪವಾಗಿಯೂ ಅಭೀಪ್ಸಾರೂಪವಾಗಿಯೂ ಹುದುಗಿರುವ ಅನೇಕ ದಿವ್ಯಶಕ್ತಿಗಳು ಕಾರಣ. ವ್ಯಕ್ತಿ ನಿಮಿತ್ತಮಾತ್ರ, ಒಂದು ಪ್ರಣಾಳಿಕೆ.

ಶ್ರೀ ರಾಮಾಯಣದರ್ಶನದ ಪ್ರಾರಂಭದಲ್ಲಿ ಹೀಗೆ ಪ್ರಾರ್ಥಿಸಿದ್ದೇನೆ;

**ಹೋಮರಗೆ ವರ್ಜಿಲಗೆ ಡಾಂಟೆ ಮೇಣ್ ಮಿಲ್ಟನಗೆ**
**ನಾರಣಪ್ಪಂಗೆ ಮೇಣ್ ಪಂಪನಿಗೆ, ಋಷಿವ್ಯಾಸ**
**ಭಾಸ ಭವಭೂತಿ ಮೇಣ್ ಕಾಳಿದಾಸಾದ್ಯರಿಗೆ,**
**ನರಹರಿ ತುಲಸಿದಾಸ ಮೇಣ್ ಕೃತ್ತಿವಾಸಾದಿ**
**ನನ್ನಯ್ಯ ಫಿರ್ದೂಸಿ ಕಂಬಾರವಿಂದರಿಗೆ,**
**ಹಳಬರಿಗೆ ಹೊಸಬರಿಗೆ ಹಿರಿಯರಿಗೆ ಕಿರಿಯರಿಗೆ,**
**ಕಾಲದೇಶದ ನುಡಿಯ ಜಾತಿಯ ವಿಭೇದಮಂ**
**ಲೆಕ್ಕಿಸದೆ ಜಗತೀಕಲಾಚಾರ್ಯರೆಲ್ಲರ್ಗೆ,**
**ಜ್ಯೋತಿಯಿರ್ಪೆಡೆಯಲ್ಲಿ ಭಗವದ್ ವಿಭೂತಿಯಂ**
**ದರ್ಶಿಸುತೆ, ಮುಡಿಬಾಗಿ ಮಣಿದು ಕೈಜೋಡಿಸುವೆ ನಾಂ**
**ಲೋಕ ಗುರುಕೃಪೆಯಿರಲಿ, ಲೋಕಕವಿಕೃಪೆ ಬರಲಿ;**
**ಲೋಕ ಹೃದಯದ ಬಯಕೆಯಾಶೀರ್ವಾದವೈತರಲಿ.**
**ಮಣಿದಿರಲಿ ಮುಡಿ, ಮತ್ತೆ ಮುಗಿದಿರಲಿ ಕಯ್, ಮತ್ತೆ**
**ಮಡಿಯಾಗಿರಲಿ ಬಾಳ್ವೆ; ಜಯಿಸುಗೆ ರಸತಪಸ್ಯೆ;**
**ದೊರೆಕೊಳುಗೆ ಚಿರಶಾಂತಿ; ಸಿರಿಗನ್ನಡಂಗೆಲ್ಗೆ!**

ಇಂತಹ ಪ್ರಾರ್ಥನೆ ಔಪಚಾರಿಕವೂ ಅಲ್ಲ, ಆಲಂಕಾರಿಕವೂ ಅಲ್ಲ. ವೀರ ನಾರಾಯಣನೆ ಕವಿ, ಲಿಪಿಕಾರ ಕುಮಾರವ್ಯಾಸ ಎಂಬ ಕವಿವಾಣಿ ಅಕ್ಷರಶಃ ಸತ್ಯ. ಇಂಥ ಮಹಾಕೃತಿಯನ್ನು ಆಶಿಸುತ್ತದೆ, ಆಶೀರ್ವದಿಸುತ್ತದೆ, ಆ ಶಕ್ತಿ. ಅಣುವನನ್ನು ಆಂಜನೇಯನನ್ನಾಗಿಸುವ, ಅಲ್ಪವನ್ನು ಭೂಮತ್ತ್ವಕ್ಕೇರಿಸುವ ವಿರಾಟ್ ಶಕ್ತಿ ಈ ಯುಗ ಪ್ರಭಾವದಲ್ಲಿದೆ.ಯುಗದ ಸಾಮೂಹಿಕ ಪ್ರಜ್ಞಾಬಲದಿಂದಲೇ ಮಹತ್ಕಾರ್ಯಗಳು ಸಾಧಿತವಾಗುತ್ತವೆ. 'ಶ್ರೀರಾಮಾಯಣದರ್ಶನಂ' ಕಾವ್ಯದ ಕೊನೆಯ ಭಾಗದಲ್ಲಿ ಬರುವ ಒಂದು ಸನ್ನಿವೇಶ ಹೀಗಿದೆ–

**"ಆರ ಆಜ್ಞೆಗೊ ಕಣ್**
**ತೆರೆದತ್ತತೀಂದ್ರಿಯಕೆ. ಕಂಡೆನಚ್ಚರಿಯೆನಲ್**
**ನಿರಾಕಾರನೋರ್ವನಂ! ಭಯಭಕ್ತಿ ಗೌರವದಿ**
**ರೋಮಹರ್ಷದಿ ಬಾಗಿ ಕೇಳ್ದೆನಾ ಸಾನ್ನಿಧ್ಯ**
**ಮಾತ್ರ ತನುಸೂಕ್ಷ್ಮನಂ: "ನೀನಾರ್ ಮಹಾ ಪುರುಷ!"**
**"ಗುರುವನೆಯೆ ಗುರುತಿಸದವಂ ಶಿಷ್ಯನೆಂತಹನೊ?"**
**ವಾತ್ಸಲ್ಯದಿಂದೊರೆದುದಾಭವ್ಯ ಸಾನ್ನಿಧ್ಯ**
**ಸತ್ವಂ: "ಅನಾದಿಕವಿ ನಾಂ ಕಣಾ! ವಾಲ್ಮೀಕಿ**
**ವ್ಯಾಸ ಹೋಮರ್ ದಾಂತೆ ಫಿರ್ದೂಸಿ ಮಿಲ್ಟನ್**
**ಮಹಾಕವೀಶ್ವರರೆನಗೆ ಬಾಹುಮಾತ್ರಗಳಲ್ತೆ?**
**ಬಹುನಾಮರೂಪಗಳ್, ಬಹುಕಾಲದೇಶಗಳ್**
**ನನಗೆ.ನೀನುಂ ನಾನೆಯೆ,ಕುವೆಂಪು!"**

ಆದ್ದರಿಂದ ಈ ಸಮಾರಂಭ, ಈ ಸ್ತುತಿ, ಈ ಕೀರ್ತಿ ನಾನೆಂಬ ಕೊಳವೆಯ ಮೂಲಕ ಸರಸ್ವತಿಯ ಚರಣಾರವಿಂದಕ್ಕೆ ಹರಿಯುವ ತೀರ್ಥಪ್ರವಾಹ.

ಲೌಕಿಕ ಪದವಿಗಳಿಗೆ ನಾನೆಂದೂ ಆಶಿಸಲಿಲ್ಲ. ಅಧ್ಯಾತ್ಮ ಪ್ರಪಂಚದಲ್ಲಿ ನಾನೇರಬೇಕಾದ ಗಿರಿಗಳೂ ಗೌರಿಶಂಕರಗಳೂ ಅನೇಕವಿದೆ. ನನಗೆ ಯಾವ ಪದವಿಯೂ ದೊಡ್ಡದಲ್ಲ ಅಥವಾ ಯಾವುದೂ ಹೀನವಲ್ಲ. ಒಮ್ಮೆ ಶಿಷ್ಯನೊಬ್ಬ ಮಹರ್ಷಿ ಅರವಿಂದರನ್ನು 'ಕೀರ್ತಿಯ ಪ್ರಯೋಜನವೇನು?' ಎಂದು ಕೇಳಿದುದಕ್ಕೆ "ಕೀರ್ತಿಯಿಂದ ಯಾವ ಆಧ್ಯಾತ್ಮಿಕ ಪ್ರಯೋಜನವೂ ಇಲ್ಲ.ಆದರೂ ಒಬ್ಬನ ಸಾಧನ ನೂರಾರು ಜನಕ್ಕೆ ಗೊತ್ತಾಗುವಂತೆ ಮಾಡಬಲ್ಲುದು ಎಂದರಂತೆ!" ಕವಿ ರವೀಂದ್ರರು ಲೋಕ ವಿಖ್ಯಾತರಾಗಿ ಅವರ ಕೃತಿಸತ್ವ ಲೋಕಕ್ಕೆ ಹರಡುವುದಕ್ಕೆ ನೋಬೆಲ್ ಬಹುಮಾನ ಸಹಾಯಕವಾಯಿತು. ಜನತೆಯನ್ನು 'ರಾಮಾಯಣದರ್ಶನಂ' ಕಾವ್ಯದೆಡೆಗೆ ತಿರುಗಿಸುವುದಕ್ಕೆ ಈ ಬಹುಮಾನವು ಬಹುಮಟ್ಟಿಗೆ ಕಾರಣವಾಗಬಹುದು.

ಈ ಸಮಾರಂಭಕ್ಕೆ ಬರಲು ಒಪ್ಪಿಕೊಂಡದ್ದಕ್ಕೆ ಒಂದು ಕಾರಣವಿದೆ. ಅದು ಅತ್ಯಂತ ರಹಸ್ಯವಾದುದು. ಇದುವರೆಗೆ ಅದು ಯಾರಿಗೂ ತಿಳಿದಿಲ್ಲ. ಕನ್ನಡದ

ಜನರ ಏಳಿಗೆಗೆ, ಕೀರ್ತಿಗಳಿಗೆ ಕಾರಣವಾದೀತೆಂದೂ ಈ ಸಮಾರಂಭದಿಂದಲಾದರೂ ರಾಮಾಯಣ ದರ್ಶನದ ಕಡೆಗೆ ನೋಡದಿರುವವರೂ ನೋಡುವಂತಾಗಬಹುದೆಂದೂ ಇದರ ಪರಿಣಾಮದಿಂದ ದೇಶಭಾಷೆಗೆ ಪ್ರಥಮಸ್ಥಾನ ದೊರಕುವುದು ಸುಲಭವಾಗಬಹುದೆಂಬ ಆಶಯವೂ ಈ ಸಮಾರಂಭಕ್ಕೆ ನನ್ನನ್ನು ಕರೆತಂದಿತು. ನನ್ನ ವಿದ್ಯಾರ್ಥಿ ಮಿತ್ರರು ಅಭಿನಂದಿಸಲು ಬಂದಾಗ ನಾನೇ ಅವರನ್ನು ಅಭಿನಂದಿಸಿದೆ. ಏಕೆಂದರೆ ಕವಿಯೆಷ್ಟು ಅಭಿನಂದನೀಯನೋ ಅಷ್ಟೇ ಕೃತಿಯನ್ನು ಅಭಿನಂದಿಸುವ ಜನರೂ ಅಭಿನಂದನೀಯರು.

ಈ ಮಹಾಕೃತಿ ರಚನೆಗೆ ಒಂಬತ್ತು ವರ್ಷ ಕಾಲದ ತಪಸ್ಸು ಬೇಕಾಯಿತು. ನಾನು ಸಾಮಾನ್ಯವಾಗಿ ಯಾವ ಸಮಾರಂಭಗಳಿಗೂ ಹೋಗುವುದಿಲ್ಲ. ನನ್ನದು ಒಂದು ರೀತಿಯ ವಲ್ಮೀಕ ವಾಸ. ಆದರೆ ನಾನಾ ಹಸ್ತಗಳು ಆ ಹುತ್ತವನ್ನು ಒಡೆದು ಹಾಕಿ ನನ್ನನ್ನು ಬಯಲಿಗೆಳೆದುವು.

ನಮಗೆ ಮೊದಲು ಅನ್ನ ಬೇಕು; ಅನಂತರ ಬಟ್ಟೆ. ಆದರೆ ಇಷ್ಟರಿಂದಲೇ ತೃಪ್ತರಾದರೆ ಸಾಲದು. ನಮಗೆ ಮನಸ್ಸಿದೆ, ಹೃದಯವಿದೆ. ಆ ಹೃದಯವನ್ನು ಉದ್ಧಾರ ಮಾಡಿಕೊಳ್ಳದಿದ್ದರೂ ಹಾಳಾಗದಂತೆ ನೋಡಿಕೊಳ್ಳುವುದು ನಮ್ಮ ಕರ್ತವ್ಯ. ಚೇತನದ ಮೂಲಸ್ವರೂಪ ಜಡವಾಗದಂತೆ ನೋಡಿಕೊಳ್ಳಬೇಕು. ಇದು ಸಾಹಿತ್ಯ ಸಂಸ್ಕೃತಿಗಳಿಂದ ಆಗುವ ಕೆಲಸ. ಭಾರತ ಸರ್ಕಾರದವರು ಈಗ ಭಾರತದ ಹದಿನಾಲ್ಕು ಭಾಷೆಗಳಲ್ಲಿ ಮೂಡಿದ ಉತ್ತಮ ಕೃತಿಗಳಿಗೆ ಬಹುಮಾನ ನೀಡಿದ್ದಾರೆ.ಸಂಸ್ಕೃತಿ ಸಾಹಿತ್ಯಗಳಿಗೆ ಇನ್ನೂ ಹೆಚ್ಚು ಹಣವನ್ನು ಬಳಸಿದರೆ ಹೆಚ್ಚೇನೂ ಅಲ್ಲ. ಈವೆಚ್ಚವನ್ನು ಹೊಸ ದೃಷ್ಟಿಯಿಂದ ನೋಡಬೇಕಾಗುತ್ತದೆ. ಸರಕಾರ, ಅನ್ನ ಬಟ್ಟೆಗಳನ್ನು ಮಾತ್ರ ಒದಗಿಸುವ ಮೂಲಕ ಪ್ರಜೆಗಳ ಅನ್ನಮಯಕೋಶವನ್ನು ತೃಪ್ತಿಪಡಿಸಿದರೆ ಸಾಲದು. ಮನೋಮಯ ವಿಜ್ಞಾನಮಯಾದಿ ಕೋಶಗಳು ತೃಪ್ತಿಗೊಳ್ಳಬೇಕು. ರೋಗಿಯೂ, ನಿರೋಗಿಯೂ, ಅಬಲನೂ-ಸಬಲನೂ, ಮೂರ್ಖನೂ-ಪಂಡಿತನೂ ಆಗುವುದು ಮನೋಮಯಾದಿ ಕೋಶಗಳು ತೃಪ್ತಿಗೊಂಡಾಗ, ಸಾಹಿತ್ಯ ಸಂಸ್ಕೃತಿಗಳ ಅರಿವಿನಿಂದ ಈ ತೃಪ್ತಿ ಸಾಧಿತವಾಗುತ್ತದೆ.

ಈ ಮಹಾರಾಜಾ ಕಾಲೇಜಿನ ಒಳ ಅಂಗಣದಲ್ಲಿ ನೀವು ನನಗೆ ಅಭಿನಂದನ ಸಮಾರಂಭವನ್ನು ಏರ್ಪಡಿಸಿದ್ದೀರಿ. ಈ ಒಳ ಅಂಗಣದ ಈ ದೃಶ್ಯ ನನ್ನನ್ನು ಹಿಂದಕ್ಕೆ, ಬಹಳ ಹಿಂದಕ್ಕೆ ಕರೆದೊಯ್ಯುತ್ತದೆ. ೧೯೨೪ರಲ್ಲಿ ನಾನು ಮೊಟ್ಟಮೊದಲು ಈ ಕಾಲೇಜಿಗೆ ಪ್ರವೇಶಿಸಿದೆ. ಇಲ್ಲಿಗೆ ಬರುವ ಮುನ್ನವೆ ಸರಸ್ವತಿ ನನ್ನ ಮೇಲೆ ಕೃಪೆ ಮಾಡಿದ್ದಳು. ಸ್ವಲ್ಪ ಹೆಚ್ಚುಕಡಿಮೆ ಹುಚ್ಚನಂತೆಯೇ ಇಲ್ಲಿ ಓಡಾಡಿಕೊಂಡಿದ್ದೆ. ಮಾರ್ಜಾಲ ಶಾಬಕ ನ್ಯಾಯದಿಂದ ಸರಸ್ವತಿ ನನ್ನನ್ನು ಕಾಪಾಡಿದಳು. ಆ ಮಾತೆ

---

ಮಾರ್ಜಾಲ ಶಾಬಕ ನ್ಯಾಯ = ಬೆಕ್ಕು ಜಾತಿಯ ಪ್ರಾಣಿಗಳು ತಮ್ಮ ಮರಿಗಳನ್ನು ಬಾಯಿಯಲ್ಲಿ ಕಚ್ಚಿ ಹಿಡಿದುಕೊಂಡು ಓಡಾಡುವುದು.

ನನ್ನನ್ನು ಎಲ್ಲಿ ಇಟ್ಟರೂ "ನಿನ್ನ ಪದಕಮಲದಲಿ ಮನೆ ಮಾಡಿರುವ ನನಗೆ ಆ ಸ್ಥಾನ ಈ ಸ್ಥಾನ ಎಲ್ಲವಾಸ್ಥಾನ" ಎಂದು ಭಾವಿಸಿ ನಡೆದುಕೊಂಡೆ. ಆ ವಾಗ್ದೇವಿಯ ಕೃಪೆಯಿಂದಲೇ ನಾನು ಕವಿಯಾಗಿ ಧರ್ಮಕರ್ಮ ಸಂಯೋಗದಿಂದ ಇಲ್ಲಿಯೇ ಅಧ್ಯಾಪಕನಾದೆ.

ಒಂದು ಕಾಲದಲ್ಲಿ ಕೀರ್ತಿ, ಪ್ರತಿಷ್ಠೆ, ಧನ, ಸಂಪತ್ತು, ಏಳಿಗೆ, ಇವುಗಳು ಇಂಗ್ಲಿಷ್ ಮೂಲಕ ಬರುತ್ತದೆಂದು ಜನ ಭಾವಿಸಿದ್ದರು. ಈಗ ದೇಶಭಾಷೆಗಳ ಮೂಲಕವೇ ಅವುಗಳನ್ನು ಪಡೆಯಬೇಕೆಂಬುದು ಸರ್ವವಿದಿತ.

ಇಂದು ಇಂಗ್ಲಿಷ್ ಕಲಿಯುತ್ತಿರುವುದರಿಂದ ಆಗುವ ಮನಃಶಕ್ತಿಯ ದುರ್ವ್ಯಯ ನಿಲ್ಲಬೇಕಾಗಿದೆ. ಇಂಗ್ಲಿಷ್ ಕಲಿಸುವವರ, ಹಾಗೂ ಕಲಿಯುವವರ, ವಿಲಕ್ಷಣವೂ ಶೋಚನೀಯವೂ ಆದ ಸ್ಥಿತಿ ಹೋಗಬೇಕಾಗಿದೆ.ಮೈಸೂರು ವಿಶ್ವವಿದ್ಯಾನಿಲಯವು ಪ್ರಕಟಿಸಿರುವ ಕಲೆ, ತತ್ತ್ವ, ಸಾಹಿತ್ಯ, ಮೊದಲಾದ ವಿಷಯಗಳಿಗೆ ಸಂಬಂಧಪಟ್ಟ ಪುಸ್ತಕಗಳನ್ನು ನೋಡಿದರೆ ಕನ್ನಡದ ಸತ್ವ ಅರ್ಥವಾಗುತ್ತದೆ. ಆದ್ದರಿಂದ ಇಂಗ್ಲಿಷ್ ಭಾಷಾ ಮಾಧ್ಯಮದ ಮೂಲಕವಾಗಿಯೇ ಪ್ರಗತಿಯನ್ನು ಸಾಧಿಸಬಹುದೆಂಬ ವಾದದ ಜಳ್ಳು ಇದರಿಂದ ವ್ಯಕ್ತವಾಗುತ್ತದೆ. ಯಾವ ಜನ, ಬ್ರಿಟಿಷರು ಭಾರತದಿಂದ ಕಾಲ್ತೆಗೆದರೆ ದೇಶ ಹಾಳಾಗುತ್ತದೆ ಎಂದು ಭಾವಿಸಿದ್ದರೋ ಅಂತಹ ಜನ ಇಂದು ಇಂಗ್ಲಿಷ್ ಹೋದರೆ ನಾವು ಹಾಳಾಗುತ್ತೇವೆ ಎಂದು ಕೂಗುತ್ತಿದ್ದಾರೆ. ಇಂಗ್ಲಿಷರು ಹೋದರು; ಆದರೆ ಭಾರತವೇನೂ ಅಳಿಯಲಿಲ್ಲ! ಅವರ ಆಳ್ವಿಕೆಯಲ್ಲಿದ್ದುದಕ್ಕಿಂತಲೂ ನೂರ್ಮಡಿ ಇಂದು ಭಾರತ ಪ್ರಗತಿಪಥದಲ್ಲಿ ಸಾಗುತ್ತಿದೆ. ಈಗಾಗಲೇ ಪ್ರಗತಿಯನ್ನು ಸಾಧಿಸಿದೆ. ಈಗ ಪ್ರಾಂತಭಾಷೆಗಳ ವಿಷಯದಲ್ಲಿ, ಅವುಗಳ ಸಾಮರ್ಥ್ಯದಲ್ಲಿ ಎಳ್ಳಷ್ಟು ಅಧೈರ್ಯ ಪಡಬೇಕಾಗಿಲ್ಲ. ಇಂಗ್ಲಿಷಿಗೆ ಸರಿದೊರೆಯಾಗಿ ಹೆಗಲೆಣೆಯಾಗಿ ನಿಲ್ಲಬಲ್ಲ ಕನ್ನಡದಂತಹ ಭಾಷೆಗಳು ಭಾರತದಲ್ಲಿವೆ. ಎಂತಹ ಗಹನವಾದ ವಿಷಯವನ್ನಾಗಲೀ, ಸೂಕ್ಷ್ಮವಾದ ಭಾವವನ್ನಾಗಲಿ, ಕನ್ನಡದಲ್ಲಿ ಸರಳವಾಗಿಯೂ ಸುಲಭವಾಗಿಯೂ ಶಕ್ತಿಪೂರ್ಣವಾಗಿಯೂ ವಿವರಿಸುವುದು ಸಾಧ್ಯ. ಕನ್ನಡಿಗರ ಸರ್ವತೋಮುಖವಾದ ಉದ್ಧಾರ ಕನ್ನಡದಿಂದಲೇ ಸಾಧ್ಯ. ಕನ್ನಡಿಗರಿಗೆ ಕನ್ನಡವೇ ಗತಿ!

ನೀವು ನನಗೆ ಸಲ್ಲಿಸಿದ ಅಭಿನಂದನ ಪತ್ರದಲ್ಲಿ "ಶ್ರೀ ರಾಮಾಯಣದರ್ಶನಂ ಮಹಾಕಾವ್ಯಾವತಾರದಿಂದ ಕನ್ನಡ ಸಾಹಿತ್ಯವು ಪ್ರಾದೇಶಿಕ ನಶ್ವರತೆಯ ಪರಿನೇಮಿಯನ್ನು ದಾಟಿ ವಿಶ್ವತೆಯ ನಿತ್ಯತೆಯಲ್ಲಿ ವಿಲೀನವಾಗಿದೆ." ಎಂದು ಹೇಳಿದ್ದೀರಿ. ಈ ಮಾತು ಸತ್ಯವಾದರೆ ನಮ್ಮ ಹೃದಯವನ್ನು ಸರೋವರತ್ವದಿಂದ ಸಾಗರತ್ವಕ್ಕೆ ಕೊಂಡೊಯ್ಯುತ್ತದೆ, ಶ್ರೀರಾಮಾಯಣದರ್ಶನಂ! ಆ ಕಾವ್ಯದ ಕರ್ತೃವಾದ ನಾನು ಕೇವಲ ನಿಮಿತ್ತ ಮಾತ್ರ.

ಇಂದು ನಿಮ್ಮೆಲ್ಲರ ಮನಸ್ಸು ರಾಮಾಯಣದ ಕಡೆಗೆ, ಸೌಂದರ್ಯದ ಕಡೆಗೆ, ಸೊಬಗಿನ ಕಡೆಗೆ ತಿರುಗಿದೆ. ರಾಮಾಯಣದರ್ಶನದಲ್ಲಿ ಬರುವ ಒಂದು ಸಂದರ್ಭವನ್ನು ಇಲ್ಲಿ ಉದಾರಹರಿಸುತ್ತೇನೆ: ಸೀತಾನ್ವೇಷಣೆಗೆ ಹೋದ ಹನುಮಂತ ರಾಕ್ಷಸರ ಮನೆಗಳನ್ನು

ಶೋಧಿಸುವಾಗ, ಆ ರಾಕ್ಷಸರ ಸಂಸ್ಕಾರ ಮನೋಧರ್ಮಕ್ಕನುಸಾರವಾಗಿ ಬೇರೆಬೇರೆ ರೂಪತಾಳಿ ಅವರವರ ಮನೆಗಳನ್ನು ಪ್ರವೇಶಿಸುತ್ತಾನೆ. ವಿಭೀಷಣನ ಮನೆಯನ್ನು ಪ್ರವೇಶಿಸುವಾಗ ಓಂಕಾರರೂಪವನ್ನು ತಾಳುತ್ತಾನೆ. ಏಕೆಂದರೆ ಅಲ್ಲಿ ಆ ಸಮಯದಲ್ಲಿ ರಸಸೌಂದರ್ಯದ ಆರಾಧನೆ ನಡೆಯುತ್ತಿತ್ತು. ಆ ಆರಾಧನೆ ಎಲ್ಲಿ ನಡೆಯುತ್ತಿದ್ದರೂ ಅಲ್ಲಿಗೆ ದೇವತೆಗಳು ಬರುತ್ತಾರೆ. ಇಂದು ಇಲ್ಲಿ ಸತ್ಯಸೌಂದರ್ಯದ ಆರಾಧನೆ ನಡೆಯುತ್ತಿದೆ. ಆದ್ದರಿಂದ ಲೋಕಗುರುಗಳೂ, ಲೋಕಕವಿಗಳೂ, ಕನ್ನಡಕ್ಕಾಗಿಯೇ ದುಡಿದು ಮಡಿದ ಮಹಾಚೇತನಗಳೂ, ಇಲ್ಲಿ ಅದೃಶ್ಯರಾಗಿ ಸುಳಿಯುತ್ತಿರಬಹುದು. ನಿಮ್ಮನ್ನೂ ನನ್ನನ್ನೂ ಆಶೀರ್ವದಿಸುತ್ತಿರಬಹುದು, ದೇವತಾಶಕ್ತಿಗಳೂ ಇಲ್ಲಿ ಭಾಗಿಗಳಾಗಿರಬಹುದು. ಏಕೆಂದರೆ "ರಸಮೆ ಅವರುಣ್ಬಮೃತಮಲ್ತೆ" ಎಂದು ವಿಭೀಷಣ ಶ್ರೀರಾಮಾಯಣದರ್ಶನಂ ಕಾವ್ಯದಲ್ಲಿ ಒಂದು ಕಡೆ ಹೇಳಿದ್ದಾನೆ.

ಭಾರತ ಜನನಿಯ ತನುಜಾತೆಯಾದ ಕನ್ನಡಮಾತೆಯ ಸೇವೆಗೆ ನಾವೆಲ್ಲರೂ ಸಿದ್ಧರಾಗಬೇಕು. ಈ ಬಹುಮಾನ ಬಂದುದಕ್ಕಿಂತ ಹೆಚ್ಚಿನ ಸಂತೋಷ ನಮಗಾಗಬೇಕಾದರೆ ಕನ್ನಡನಾಡಿನಲ್ಲಿ ವಿದ್ಯಾಭ್ಯಾಸದ ಎಲ್ಲ ಘಟ್ಟಗಳಲ್ಲೂ ಕನ್ನಡವೇ ಶಿಕ್ಷಣ ಮಾಧ್ಯಮವಾಗಬೇಕು; ಕನ್ನಡವೇ ಪ್ರಧಾನಭಾಷೆಯಾಗಬೇಕು. ಅಂದೇ ನಮ್ಮೆಲ್ಲರಿಗೂ ಅಮೃತಪಾನ, ಅಮೃತಸ್ನಾನ, ಆ ದಿವ್ಯ ಮುಹೂರ್ತ ಬೇಗನೆ ಒದಗಿ ಬರುವಂತೆ ಭಾರತಿ ನಮ್ಮನ್ನು ಆಶೀರ್ವದಿಸಲಿ, ಅನುಗ್ರಹಿಸಲಿ."

---

ರಸಮೆ ಅವರ್ ಉಣ್ಬ ಅಮೃತಮಲ್ತೆ? = ರಸವೆ ಅವರು ಉಣ್ಣುವ ಅಮೃತವಲ್ಲವೆ?

# ನಮ್ಮ ಮುನ್ನಡೆಯ ಮಂತ್ರ

"ಮಾನ್ಯ ಅತಿಥಿಗಳಲ್ಲಿ, ಮಹನೀಯರಲ್ಲಿ, ಮಹಿಳೆಯರಲ್ಲಿ, ತರುಣ ಮಿತ್ರರಲ್ಲಿ ವಿಜ್ಞಾಪನೆ:

ನಮ್ಮ ಕಾಲೇಜಿನ ಕರ್ನಾಟಕ ಸಂಘವು ಇಂದು ಕೈಗೊಂಡಿರುವ ನಾಡಹಬ್ಬದ ಈ ಸಮಾರಂಭಕ್ಕೆ ದಯಮಾಡಿಸಿರುವ ತಮ್ಮೆಲ್ಲರಿಗೂ ಸ್ವಾಗತ ಬಯಸುವ ಸುಕೃತ ಕರ್ತವ್ಯವು ನನ್ನ ಪಾಲಿಗೆ ಬಿದ್ದಿದೆ. ಅದನ್ನು ಅತ್ಯಂತ ಅಭಿಮಾನದಿಂದಲೂ ಶ್ರದ್ಧೆಯಿಂದಲೂ ಈ ಉತ್ಸವದಲ್ಲಿ ಭಾಗಿಗಳಾಗಿ ಉತ್ಸವವನ್ನೂ ಅದಕ್ಕಿಂತಲೂ ಅತಿಶಯವಾಗಿ ಈ ಉತ್ಸವ ಯಾವ ಉದ್ದೇಶದಿಂದ ಪ್ರಚೋದಿತವಾಗಿದೆಯೋ ಆ ಮಹೋದ್ದೇಶವನ್ನು ಯಶಸ್ವಿಯಾಗಿ ಮಾಡಬೇಕೆಂದೂ ಸಫಲಗೊಳಿಸಬೇಕೆಂದೂ ಕೇಳಿಕೊಳ್ಳುತ್ತೇನೆ.

ನಮ್ಮ ಕರ್ನಾಟಕ ಸಂಘದ ಜೀವಮಾನದಲ್ಲಿ ಇದೊಂದು ವಿಶೇಷ ದಿನ. ಉಪಚಾರಾರ್ಥವಾಗಿ ಮಾತ್ರವಲ್ಲ, ಯಥಾರ್ಥವಾಗಿಯೂ ವಿಶೇಷ ದಿನ. ಏಕೆಂದರೆ ಭರತ ಖಂಡಕ್ಕೂ ಅದರ ಒಂದು ಅಂಗವಾದ ಮೈಸೂರಿಗೂ ಸ್ವಾತಂತ್ರ್ಯೋದಯವಾದ ಮೇಲೆ ಎರಡು ಶತಮಾನಗಳಿಂದಲೂ ನಾಡಿನ ಬಾಳನ್ನು ಬಂಧಿಸಿದ್ದ ದಾಸ್ಯ ಶೃಂಖಲೆ ಕಳಚಿ, ಜೀವನ ಸಮಸ್ತವನ್ನೂ ಆಕ್ರಮಿಸಿದ್ದ ರಾಜಕೀಯದ ದುರ್ಧರವಾದ ಅಂಧಕಾರ ಪರಿಹಾರವಾಗಿ ಬೆಳಕು ತುಳುಕಿ, ಚೇತನ ಅರಳಿ, ಬದುಕು ಕಣ್ದೆರೆದು ಹೊಸ ಬಾಳಿನ ಹಿಗ್ಗುಗ್ತಿರುವ ಈ ಪುಣ್ಯ ಗರ್ಭಿತವಾದ ಸುಮುಹೂರ್ತದಲ್ಲಿ ನಾವು ನಾಡ ಹಬ್ಬವನ್ನು ಆಚರಿಸುತ್ತಿದ್ದೇವೆ. ಪರಿಹೃತವಾಗಿರುವ ಹಿಂದಿನ ಪಾಪಕ್ಕೂ ಉದಯಮಾನವಾಗಿರುವ ಮುಂದಿನ ಪುಣ್ಯಕ್ಕೂ ನಡುವೆ ಹೊಸ್ತಿಲ ಮೇಲೆ ನಿಂತಿರುವ ನಮ್ಮಲ್ಲಿ ಯಾರಿಗೆ ತಾನೆ ಇದು ವಿಶೇಷ ದಿನವಲ್ಲ?

## ಕನ್ನಡ ನಾಡು ಇನ್ನು ಬದುಕಿತು

ಇಂತಹ ನವೋದಯದ ನರಸಾಗರದಲ್ಲಿ ನವೋತ್ಸಾಹದಿಂದ ಹೆಜ್ಜೆಯಿಡಲು ಹವಣಿಸುತ್ತಿರುವ ಜನಪದದ ಹೃದಯದ ಆಶೆ, ಆಕಾಂಕ್ಷೆ, ಉದ್ಯಮಗಳಿಗೆ

---

[೧] ತಾ. ೮-೧೨-೪೭ ರಲ್ಲಿ ಮೈಸೂರಿನಲ್ಲಿ ಮಹಾರಾಜಾ ಕಾಲೇಜಿನ ಆಶ್ರಯದಲ್ಲಿ ನಾಡಹಬ್ಬ ನಡೆದಾಗ ಕರ್ಣಾಟಕ ಸಂಘದಲ್ಲಿ ಕೆ.ವಿ.ಪುಟ್ಟಪ್ಪನವರು ಮಾಡಿದ ಭಾಷಣವಿದು. ಕೈಗಾರಿಕೆಯ ಸಚಿವ ದಾಸಪ್ಪನವರೂ, ವಿದ್ಯಾಮಂತ್ರಿ ಚಂದ್ರಶೇಖರಯ್ಯನವರೂ ಅತಿಥಿಗಳಾಗಿದ್ದರು.

ನಿಧಿಗಳಾಗಿ, ಆ ಜನರೇ ಆರಿಸಿರುವ ಜನಪ್ರಿಯ ಪ್ರತಿನಿಧಿಗಳಾಗಿ, ರಾಜ್ಯರಥದ ಸೂತ್ರಗಳನ್ನು ವಹಿಸಿಕೊಂಡಿರುವ ಮಾನ್ಯ ಮಂತ್ರಿಗಳಿಬ್ಬರು ನಾವು ಕೈಕೊಂಡಿರುವ ಈ ನಾಡಹಬ್ಬವನ್ನು ನೆರವೇರಿಸಿಕೊಡಲು ವಿಶ್ವಾಸ ಪೂರ್ವಕವಾದ ಉತ್ಸಾಹದಿಂದ ದಯಮಾಡಿಸಿದ್ದಾರೆ. ಎಂದ ಮೇಲೆ ಈ ದಿನ ಸುದಿನ ಎನ್ನುವುದರಲ್ಲಿ ಯಾರಿಗೆ ತಾನೆ ಸಂದೇಹ? ಕನ್ನಡ ನಾಡು ಇನ್ನು ಬದುಕಿತು! ಕನ್ನಡ ನುಡಿ ಇನ್ನು ತನ್ನ ಮನೆಯಲ್ಲಿ ತಾನೆ ತೊತ್ತಾಗಿ ಬಿದ್ದಿರುವ ಕಾಲ ತೊಲಗಿತು! ಕನ್ನಡದ ಸಿಂಹಾಸನದ ಮೇಲೆ ಕನ್ನಡದ ರಾಣಿ ವಿರಾಜಮಾನಳಾಗುತ್ತಾಳೆ! ಅನ್ಯರ ಆಶ್ರಯದಲ್ಲಿ, ಅನ್ಯರ ದಾಕ್ಷಿಣ್ಯ ಭಿಕ್ಷೆಯ ಆಧೀನದಲ್ಲಿ ದೈನ್ಯವೃತ್ತಿಯನ್ನುವಲಂಬಿಸುವ ಅಮಂಗಳ ಸಮಯ ಆಕೆಗೆ ಎಂದಿಗು ಒದಗುವುದಿಲ್ಲ!–ಎಂಬ ಹಿಗ್ಗು ಹೆಮ್ಮೆಗಳಿಗೆ ನಮ್ಮೆಲ್ಲರ ಹೃದಯಗಳೂ ಸಿಡಿಯುತ್ತಿವೆ. ಏಕಕಾಲದಲ್ಲಿ ಮಿಡಿಯುತ್ತಿವೆ!

## ಸ್ವಾತಂತ್ರ್ಯದೇವಿ ಭಯಂಕರಿಯಾಗುತ್ತಾಳೆ

ಆದರೆ, ನಮ್ಮ ಆಶಯ ಅಮೋಘವಾದುದಾದರೂ ನಮ್ಮ ಆಶಾ ಜಗತ್ತು ನಿರ್ಮೇಘವಾಗಿಲ್ಲ. ಸ್ವಾತಂತ್ರ್ಯದೇವಿ ಗೌರಿಯಾಗಿ ಮಾತ್ರವೇ ಆಗಮಿಸುವುದಿಲ್ಲ, ಕಾಳಿಯಾಗಿಯೂ ಬರುತ್ತಾಳೆ ಎಂಬುದು ನಮಗೀಗಲೆ ಚೆನ್ನಾಗಿ ಅನುಭವಕ್ಕೆ ಬಂದಿದೆ. ಆಕೆಯ ಪದಚಿನ್ಹೆ ಉನ್ಮತ್ತ ಮಾನವರ ಕ್ರೂರ ಹೃದಯದ ಅಲಕ್ತ ರಸದಿಂದಲೆಂಬಂತೆ ರಕ್ತಾಂಕಿತವಾಗಿರುವುದನ್ನು ನೋಡುತ್ತಿದ್ದೇವೆ. ಆಕೆಯ ಕೈಯಲ್ಲಿ ಜಟಿಲ ಸಮಸ್ಯೆಗಳೂ ದಾರುಣ ಸಂಕಟಗಳೂ ರೌದ್ರ ರಂಜಿತವಾಗಿರುವುದನ್ನೂ ಕಾಣುತ್ತಿದ್ದೇವೆ. ಬಹುಶಃ ಆಕೆ ಶಂಕರಿಯಾಗುವುದಕ್ಕೆ ಮೊದಲು ಭಯಂಕರಿಯಾಗುತ್ತಾಳೆ ಎಂದು ತೋರುತ್ತದೆ. ನಮ್ಮ ಅರ್ಹತೆಯನ್ನು ಅತ್ಯುಗ್ರವಾಗಿ ಪರೀಕ್ಷಿಸದೆ ಆಕೆ ಪ್ರಸನ್ನಳಾಗುವುದಿಲ್ಲ.

ಇದನ್ನೆಲ್ಲ ಪರ್ಯಾಲೊಚಿಸಿದರೆ ನಮ್ಮ ಹಿಗ್ಗು ತುಸು ಕುಗ್ಗದಿರುವುದಿಲ್ಲ. ಆದರೂ ಕೆಚ್ಚೆದೆ, ಕಷ್ಟಗಳ ಮುಂದೆ ಎಂದೂ ನಷ್ಟ ಚೇತನವಾಗುವುದಿಲ್ಲ. ಎಂತಹ ದುರಂತ ಪ್ರಸಂಗಗಳೆ ಒದಗಲಿ, ನಾವಾರು ಹಿಂಜರಿಯುವ ದುಸ್ಥಿತಿಯಲ್ಲಿಲ್ಲ. ಇಟ್ಟ ಹೆಜ್ಜೆಯನ್ನು ಇನ್ನು ಹಿಂದೆಗೆಯುವುದಿಲ್ಲ. ಹೃದಯದಲ್ಲಿ ಋಜುತೆ, ಮುಷ್ಟಿಯಲ್ಲಿ ದೃಢತೆ, ಅಡಿಯ ಅಚಂಚಲತೆ–ಇದೇ ನಮ್ಮ ಮುನ್ನಡೆಯ ಮಂತ್ರ.

"ಇನ್ನೇನು ಹೊಣೆಗಾರ ಸರಕಾರ ಬಂದಿತು. ಮಂತ್ರಿಗಳೆಲ್ಲ ನಮ್ಮವರಾದರು. ಹಾಲಿನ ಹೊಳೆ ಹರಿಯುತ್ತದೆ" ಎಂದು ಮೊದಲಾಗಿ ಭಾವಿಸಿ ನಮ್ಮ ಜನ ಕೈಕಟ್ಟಿಕೊಂಡು ಕುಳಿತರಾಗುವುದಿಲ್ಲ. ಎಂತಹ ಜನ ಪ್ರಿಯ ಮಂತ್ರಿಗಳಾಗಲಿ, ಯಾರೂ ಬರಿಯ ಯಕ್ಷಿಣಿ ಮಾಡಿ ಭೂಲೋಕದಲ್ಲಿ ಸ್ವರ್ಗಲೋಕ ಸ್ಥಾಪನೆ ಮಾಡಲು ಸಾಧ್ಯವಿಲ್ಲ. ಪ್ರಯತ್ನ, ದುಡಿಮೆ, ಸಾಧನೆ, ತಪಸ್ಸು ಇವು ಇಲ್ಲದೆ ಯಾವ ಸಿದ್ಧಿಯೂ ಕೈಗೂಡದು.

ದೇಶದ ನಾನಾ ಮುಖದಿಂದ ಅಭ್ಯುದಯಗಳು ಸರ್ವರಿಗೂ ಲಕ್ಷ್ಯವಾಗಿರಬೇಕು.

ನಿಜ. ಆದರೆ ನಮಗೆ, ಕಾಲೇಜಿನ ಕರ್ನಾಟಕ ಸಂಘಗಳಿಗೆ, ವಿದ್ಯಾಸಂಸ್ಥೆಗಳಿಗೆ ಪ್ರಕಟವಾದುದೆಂದರೆ ಭಾಷೆ, ಸಾಹಿತ್ಯ, ವಿಜ್ಞಾನ, ಸಂಸ್ಕೃತಿ ಇತ್ಯಾದಿ. ಆದ್ದರಿಂದ ಅವುಗಳನ್ನೇ ವಿಶೇಷವಾಗಿ ಕುರಿತ ಈ ನಾಡಹಬ್ಬದ ಉದ್ದೇಶದ ವಿಚಾರವಾಗಿ ಇಚ್ಚಿಸುತ್ತೇನೆ.

## ಕನ್ನಡವು ಅಗ್ರಮಾನ್ಯವಾಗಬೇಕು

ಕನ್ನಡ ನಾಡಿನಲ್ಲಿ ಇಂತಹ ನಾಡಹಬ್ಬಗಳು ಕೆಲವು ಕಾಲದಿಂದಲೂ ನಡೆಯುತ್ತಿವೆ. ಈ ಉದ್ಯಮದ ಹಿಂದಿರುವ ಪ್ರಚೋದನೆಯೇನು? ಉದ್ದೇಶವೇನು? ಅದರ ಪ್ರಯೋಜನವೇನು? ಎಂಬುದನ್ನು ಪರಿಶೀಲಿಸಿದರೆ ನಮ್ಮ ಇಂದಿನ ಈ ಉತ್ಸವಕ್ಕೆ ಅರ್ಥ ಉದ್ದೇಶ ಪ್ರಯೋಜನಗಳನ್ನು ಸೂಚಿಸಿದಂತಾಗುತ್ತದೆ. ಮಾನ್ಯ ಮಂತ್ರಿಗಳಿಗೂ, ಆ ಮೂಲಕ ಮುಂದೆ ನಡೆಯಲಿರುವ ಮೈಸೂರಿನ ರಾಜ್ಯಾಂಗ ರಚನಾ ಸಭೆಯ ಸದಸ್ಯ ಮಹಾಶಯ ವರ್ಗಕ್ಕೂ ನಮ್ಮ ಹೃದಯವನ್ನೂ ಬಿಚ್ಚಿ ತೋರಿಸಿದಂತಾಗುತ್ತದೆ.

ಕರ್ನಾಟಕ ಸಂಘ ಮತ್ತು ಸಾಹಿತ್ಯ ಪರಿಷತ್ತಿನಂತಹ ಸಂಸ್ಥೆಗಳಿಗೂ ಪುಣ್ಯ ಸ್ಮರಣೀಯರಾದ ಶ್ರೀ ಬಿ.ಎಂ. ಶ್ರೀಕಂಠಯ್ಯನವರಂತಹ ಆಚಾರ್ಯ ವ್ಯಕ್ತಿಗಳೂ ಯಾವ ಉದ್ದೇಶ ಸಾಧನೆಗಾಗಿ ನಿರಂತರವೂ ದುಡಿದರೋ ಮತ್ತು ದುಡಿಯುತ್ತಿದ್ದಾರೆಯೋ, ಆ ಉದ್ದೇಶಗಳ ಮತ್ತು ಅದರ ಸಾಧನೆಯ ಮೂರ್ತ ಸ್ವರೂಪವೆನ್ನಬಹುದು ಈ ನಾಡಹಬ್ಬ. ಹರಿದು ಹಂಚಿಹೋಗಿರುವ ಕನ್ನಡನಾಡು ಕನ್ನಡದಲ್ಲಿಯೆ ದೊರೆಯುವಂತಾಗಬೇಕು; ಕನ್ನಡ ನಾಡಿನಲ್ಲಿ ಕನ್ನಡ ಪ್ರಥಮ ಭಾಷೆಯಾಗಬೇಕು; ಎಲ್ಲ ವಿದ್ಯೆ ಸಂಸ್ಥೆಗಳಲ್ಲಿಯೂ ಕನ್ನಡವೇ ಬೋಧಕ ಭಾಷೆಯಾಗಬೇಕು; ಕನ್ನಡದ ಮಾಧ್ಯಮ ಬಹುಬೇಗ ಸಾಧ್ಯವಾಗುವಂತೆ ಅದಕ್ಕೆ ಬೇಕಾದ ಗ್ರಂಥಸಿದ್ಧತೆಯಾಗಬೇಕು; ಕೋರ್ಟು, ಕಚೇರಿ, ಮೊದಲಾದ ಸರಕಾರದ ಸಂಸ್ಥೆಗಳ ವ್ಯವಹಾರವೆಲ್ಲ ಕನ್ನಡದಲ್ಲಿಯೇ ನಡೆಯಬೇಕು. ಒಂದು ಮಾತಿನಲ್ಲಿ ಹೇಳುವುದಾದರೆ, ಇಂಗ್ಲೆಂಡಿನಲ್ಲಿ ಇಂಗ್ಲೀಷ್ ಇರುವಂತೆ, ಫ್ರಾನ್ಸಿನಲ್ಲಿ ಫ್ರೆಂಚ್ ಇರುವಂತೆ ಕರ್ನಾಟಕದಲ್ಲಿ ಕನ್ನಡವಿರಬೇಕು. ಈ ಆಶ್ರಯದಲ್ಲಿ ಅಸ್ವಾಭಾವಿಕತೆ ಲವಲೇಶವು ಇಲ್ಲ; ಏನಾದರೂ ಅಸ್ವಾಭಾವಿಕತೆ ಇದ್ದರೆ ಅದು ಕನ್ನಡನಾಡಿನಲ್ಲಿ ಕನ್ನಡವಿರಲಿ ಎಂದು ಬೇಡಬೇಕಾಗಿರುವ ದುರವಸ್ಥೆಯೊಂದೇ!

ನಮ್ಮ ಆಶೆಯೆಲ್ಲ ಅಸ್ವಾಭಾವಿಕ; ನಮ್ಮ ನಾಡಿನ ಪರಿಸ್ಥಿತಿ, ನಮ್ಮ ಜನಕ್ಕೊದಗಿರುವ ದುಸ್ಥಿತಿ ಇವು ಅಸ್ವಾಭಾವಿಕ; ಅದಕ್ಕೆ ಕಾರಣವಾದ ಹಿಂದಿನ ಐತಿಹಾಸಿಕ ವಿಷಯಗಳೂ ಏನೇ ಇರಲಿ, ಇನ್ನು ಮುಂದೆ ಆ ಪರಿಸ್ಥಿತಿಯ ಇರವಿಗೆ ಒಂದಿನಿತು ಕಾರಣವಿಲ್ಲ. ಎಚ್ಚತ್ತ ನಮ್ಮ ಜನದ ಚೇತನದ ಕಣ್ಣು ಕಾಂತಿ. ನೋಡಿ ನೋಡಿಯು ಆ ಕತ್ತಲೆಯನ್ನು ಇದಿರಿಸಬೇಕು, ಓಡಿಸಬೇಕು ಇನ್ನು ಚರ್ಚೆಗಿರ್ಚೆ ನಡೆಸಲು ಸಮಯವಿಲ್ಲ; ವಾದ ವಿವಾದಗಳಿಗೆ ಆಸ್ಪದವಿಲ್ಲ. ಹೃದಯ ಋಜುವಾಗಿ, ಮುಷ್ಟಿದೃಢವಾಗಿ ಅಡಿ

ಅಚಂಚಲವಾಗಿ ನೇರವಾಗಿ ಕಾರ್ಯರಣಕ್ಕೆ ಧುಮುಕುವುದೊಂದೇ ನಮಗಿರುವ ದಾರಿ!

## ಕನ್ನಡ ಕಂಟಕರನ್ನು ದೇವರೇ ಕಾಪಾಡಲಿ

ಈ ಇತ್ಯರ್ಥದಲ್ಲಿ, ಈ ನಿರ್ಣಯದಲ್ಲಿ, ಈ ಕಟುನಿಶ್ಚಯ ಮನೋಧರ್ಮದಲ್ಲಿ ನಮ್ಮಲ್ಲಿ ಯಾರಿಗಾದರೂ ಶಂಕೆ ಇದ್ದರೆ ಅವರನ್ನು ಬೆರಳೆತ್ತಿ ಎಚ್ಚರಿಸುತ್ತದೆ, ನಮ್ಮ ನಾಡಿನಲ್ಲಿ ಮೂಡಿರುವ ನವಚೇತನ. ಅನಿಶ್ಚಿತತೆಯ ಹ್ಯಾಮ್ಲೆಟ್ ಮನೋಧರ್ಮದಿಂದ ಯಾರಿಗೂ ಸದ್ಗತಿಯಿಲ್ಲ. ಏಕೆ ಶಂಕೆ? ಏನು ಶಂಕೆ? ಆರ ಶಂಕೆ? ಭಾಷಾವಾರು ಪ್ರಾಂತರಚನೆಯನ್ನು ಅಖಿಲಭಾರತ ಕಾಂಗ್ರೆಸ್ಸೂ ಕೇಂದ್ರ ಸರಕಾರವೂ ಒಪ್ಪಿಕೊಂಡಿರುವಾಗ ಆ ವಿಷಯಕಾಗಿ ನಮಗೇಕೆ ಶಂಕೆ? ಕಷ್ಟ ಎನ್ನುವಿರಾ? ಜಟಿಲ ಎನ್ನುವಿರಾ? ನಷ್ಟವೆನ್ನುವಿರಾ? ಅದೆಂದಿಗೂ ಭಾರತದ ವಿಭಜನೆಗಿಂತ ಹೆಚ್ಚು ಕಷ್ಟವಾಗಲಾರದು. ಅದಕ್ಕಿಂತಲೂ ಹೆಚ್ಚು ಜಟಿಲವಾಗಲಾರದು. ಅದರಿಂದೊದಗಿದ ನಷ್ಟಕ್ಕಿಂತಲೂ ಹೆಚ್ಚು ನಷ್ಟವಾಗಲಾರದು. ಇಂದೊ ನಾಳೆಯೊ ಕರ್ನಾಟಕ ಪ್ರಾಂತರಚನೆ ನಮಗೆ ಕಟ್ಟಿಟ್ಟ ಬುತ್ತಿ. ಅದರಲ್ಲಿಯೂ ಮೈಸೂರಿನಲ್ಲಿ ಹೊಣೆಗಾರ ಸರಕಾರ ಏರ್ಪಟ್ಟಮೇಲೆ ನಮ್ಮ ಆಕಾಂಕ್ಷೆಯ ಆ ದಿಕ್ಕು ದಿನದಿನಕ್ಕೂ ಹೆಚ್ಚು ಹೆಚ್ಚು ಪ್ರಸನ್ನವಾಗುತ್ತಿದೆ. ಕನ್ನಡ ನಾಡಿನಲ್ಲಿ ನೆಲೆಸಿರುವ ಕನ್ನಡಿಗರಲ್ಲದವರಾಗಲೀ ಕಾರಣಾಂತರದಿಂದ ಕನ್ನಡದ ಅಭಿಮಾನ ಕೆಟ್ಟಿರುವ ಕನ್ನಡಿಗರಾಗಲೀ ಆ ಆಕಾಂಕ್ಷೆಯ ಹಾದಿಯಲ್ಲಿ ಅಡಚಣೆ ತಂದೊಡ್ಡುವ ಸಾಹಸಕ್ಕೆ ಮುಂಬರಿಯವ ಸಂಭವವೊದಗಿದರೆ ..... ಅವರನ್ನು ದೇವರೇ ಕಾಪಾಡಲಿ!

ಕನ್ನಡ ಭಾಷೆಯ ಸಾಮರ್ಥ್ಯದಲ್ಲಿ ನಿಮ್ಮಲ್ಲಿ ಯಾರಿಗಾದರೂ ಶಂಕೆ ಇದೆಯೇ? ಇದ್ದರೆ ಇಂದೇ ತೊಲಗಲಿ! ವಿಶ್ವವಿದ್ಯಾನಿಲಯದ ಕನ್ನಡದ ಪ್ರತಿನಿಧಿಗಳಲ್ಲಿ ಒಬ್ಬನಾಗಿ ಕನ್ನಡ ಸಾಹಿತ್ಯ ಸೇತು ನಿರ್ಮಾಣದಲ್ಲಿ ಅಳಿಲುಸೇವೆ ಸಲ್ಲಿಸುತ್ತಿರುವವರಲ್ಲಿ ಒಬ್ಬನಾಗಿ ಎದೆ ತಟ್ಟಿ ಹೇಳಬಲ್ಲೆ. ಕನ್ನಡದ ಸಾಮರ್ಥ್ಯ, ಅದರ ತೀಕ್ಷ್ಣತೆ, ಅದರ ಸೂಕ್ಷ್ಮತೆ ಅದರ ಶಕ್ತಿ ಅದರ ಓಜಸ್ಸು ನಾನರಿತಿರುವ ಜಗತ್ತಿನ ಇನ್ನಾವ ಭಾಷೆಗೂ ಕೀಳಲ್ಲ. ಷೇಕ್ಸ್‌ಪಿಯರ್, ಇಲ್ಲಿ ಹುಟ್ಟಿದ್ದರೆ ಖಂಡಿತವಾಗಿಯೂ ಕನ್ನಡದಲ್ಲಿ ಉದ್ದಾಮ ನಾಟಕರಚನೆ ಮಾಡಬಲ್ಲ ಅವನ ನಾಲಿಗೆಗೆ ಕೈದುವಾಗಲು ಕನ್ನಡ ಎಂದೆಂದಿಗೂ ನಾಚಲಾರದು. ಮಿಲ್ಟನ್ ಇಲ್ಲಿ ಜನ್ಮವೆತ್ತಿದರೆ, "ಪ್ಯಾರಡೈಸ್ ಲಾಸ್ಟ್" ಕಾವ್ಯವನ್ನು ತಲೆ ಮೆಟ್ಟುವಂತೆ ಕಾವ್ಯರಚನೆ ಮಾಡಬಲ್ಲ. ಎಡ್ಮಂಡ್ ಬರ್ಕ್ ನಮ್ಮ ನಡುವೆ ಹುಟ್ಟಿ ಬಂದರೆ, ಅವನ ಅಂದಿನ ಪಾರ್ಲಿಮೆಂಟಿನ ಭಾಷಣಗಳೂ ಬೆರಗಾಗುವಂತೆ, ಕನ್ನಡದ ರಾಜಕೀಯ ವೇಗದಲ್ಲಿ ತನ್ನ ಡಿಂಡಿಮ ಸದೃಶವಾದ ವಾಗ್ಮಿತೆಯನ್ನು ಮೆರೆಯಬಲ್ಲ. ಕಾಳಿದಾಸನು ಮತ್ತು ರವೀಂದ್ರರು, ನಮ್ಮ ನಡುವೆ ಮೂಡುವುದಾದರೆ ಅವರ ವಾಣಿ ಕನ್ನಡದಲ್ಲಿ ಮೈದೋರಲು ಸಂಕೋಚಪಟ್ಟುಕೊಳ್ಳಬೇಕಾಗಿಲ್ಲ. ತತ್ವಶಾಸ್ತ್ರದಲ್ಲಿ ಸಂಸ್ಕೃತ ಪರಿಭಾಷೆಯನ್ನು ಕನ್ನಡ ಸ್ವೀಕರಿಸಿದಂತೆ ಪಾಶ್ಚಾತ್ಯ ಪರಿಭಾಷೆಯನ್ನು

ಅದು ಸ್ವೀಕರಿಸುವುದಾದರೆ ಎಂತಹ ಗಹನ ವಿಜ್ಞಾನ ಶಾಸ್ತ್ರ ವಿಷಯಗಳನ್ನೂ ಜನಕ್ಕೆ ತಿಳಿಹೇಳಬಹುದೆಂದು ನನ್ನ ದೃಢನಂಬುಗೆ. ಆದರೆ ಒಂದು ವ್ಯತ್ಯಾಸವಾಗಬಹುದು. ಏನೆಂದರೆ ಈಗ ಇಂಗ್ಲಿಷಿನಲ್ಲಿ ಬಿ.ಎ. ತರಗತಿಯಲ್ಲಿ ಹೇಳಿಕೊಡುವ ಪಾಠವಿಷಯಗಳನ್ನು ಆಗ ಬಹುಶಃ ಇಂಟರ್ ಮೀಡಿಯಟ್ ತರಗತಿಯಲ್ಲಿಯೇ ಇನ್ನೂ ಹೆಚ್ಚು ವಿಶದವಾಗಿ ತಿಳಿಯುವಂತೆ ಹೇಳಬಹುದು.

## ಕನ್ನಡ ನುಡಿ ರಾಣಿಯಾಗಿ ರಂಜಿಸಲಿ

ಮಹನೀಯರೆ, ಸ್ವಾಗತ ಭಾಷಣದಲ್ಲಿ ಔಪಚಾರಿಕವಾದ ಆತಿಥ್ಯ ವಿಷಯಗಳನ್ನು ಮಾತ್ರ ಪ್ರಸ್ತಾಪಿಸದೆ, ಇಂತಹ ಗುರುಭಾವ ವಿಷಯಗಳನ್ನು ಕುರಿತು ಆಡಿದುದು ಅನುಚಿತವೆಂದು ಯಾರಿಗಾದರೂ ತೋರಿದರೆ ಅವರನ್ನು ನಾನು ಕ್ಷಮೆ ಬೇಡುವುದಿಲ್ಲ. ಬದಲಾಗಿ ಅಂತಹ ಅಪಚಾರದ ಭಾವನೆ ತಮ್ಮ ಮನಸ್ಸಿನಲ್ಲಿ ಸುಳಿದುದಕ್ಕಾಗಿ ಅವರು ಕ್ಷಮೆ ಬೇಡಬೇಕೆಂದು ನಾನು ಭಾವಿಸುತ್ತೇನೆ. ಏಕೆಂದರೆ, ಇದು ಸಂಧಿಕಾಲ. ಕರ್ನಾಟಕದ ಭವಿಷತ್ತು ನಿರ್ಣಯವಾಗುತ್ತಿರುವ ಕಾಲ. ಆ ಭವಿತವ್ಯದ ನಿರ್ಣಯದಲ್ಲಿ ಮೈಸೂರಿನ ಭವಿಷ್ಯದ ನಿರ್ಣಯವೂ ಪ್ರಧಾನ ಪಾತ್ರ ವಹಿಸಲಿದೆ. ಇನ್ನು ಕೆಲವು ದಿನಗಳಲ್ಲಿಯೇ ನಮ್ಮ ರಾಜ್ಯಾಂಗ ರಚನಾ ಸಭೆಯ ಸದಸ್ಯರ ತಲೆಗಳಲ್ಲಿ ನಮ್ಮ ಮುಂದಿನ ಹಣೆಯಬರಹ ರಚಿತವಾಗಲಿದೆ. ಆದ್ದರಿಂದ ನಾವಿಂದು ಪ್ರಸ್ತಾಪಿಸಿರುವ ಈ ವಿಷಯಗಳ ಕಡೆ ಅವರ ಗಮನ ಸೆಳೆಯುವಂತೆ ಮಾಡಬೇಕಾದುದು ನಮ್ಮೆಲ್ಲರ ಆದ್ಯಕರ್ತವ್ಯ. ಕೂಳು, ಬಾಳಿಗೆ ಅತ್ಯಂತ ಆವಶ್ಯಕವಾದರೂ ಕೂಳಿಗಾಗಿ ಬಾಳಲ್ಲ; ಬಾಳಿಗಾಗಿ ಕೂಳು ಎಂಬುದರ ಕಡೆ ಅವರೆಲ್ಲರ ಹೃದಯದ ಸುಪ್ತಜ್ಯೋತಿ ಕಣ್ದೆರೆಯುವಂತೆ ಮಾಡಬೇಕು. ಏಕೆಂದರೆ ಎಲ್ಲ ರಾಜಕೀಯ ಸ್ವಾತಂತ್ರ್ಯವೂ ಆತ್ಮಶ್ರೀಗೆ ನಿವೇದಿತವಾಗುವುದರಿಂದಲೇ ಸಾರ್ಥಕವಾಗುತ್ತದೆ. ಪಶು ಸುಖಗಳನ್ನು ಮಾತ್ರವೆ ತಂದು ಕೊಟ್ಟು, ಪಶು ಸುಖಗಳಲ್ಲಿ, ಪರ್ಯವಸಾನ ಹೊಂದಿ, ಪಶು ಸುಖಗಳಲ್ಲಿಯೆ ಪರಮ ಪುರುಷಾರ್ಥಗಳನ್ನು ಕಾಣಲೆಳೆಸುವ ಸ್ವಾತಂತ್ರ್ಯ ಅನರ್ಥಕ ಮತ್ತು ಅನರ್ಥಕಾರಿ. ದೇಶಭಾಷೆ, ಜನತಾ ಸಂಸ್ಕೃತಿ, ಜನಮನಾಲೋಚನೆ, ದೇಶದ ಶಿರ ಮನಸ್ಸುಗಳಿಂದ ಹೊಮ್ಮುವ ಚಿರಂತನ ಕಲ್ಯಾಣಕರವಾದ ಸಾಹಿತ್ಯ, ಅದರ ಸರ್ವತ್ರ ಸಮಾನ ಪ್ರಸಾರ ಇವುಗಳೇ ನಮ್ಮಯಾತ್ರೆಯ ಪುಣ್ಯಕ್ಷೇತ್ರ. ನಮ್ಮ ರಾಜಕೀಯ ಮುಂದಾಳುಗಳು ಕನ್ನಡ ನಾಡಿನ ಬಾಳನ್ನು ಆ ಪುಣ್ಯ ಕ್ಷೇತ್ರಕ್ಕೆ ಕೊಂಡೊಯ್ಯುವ ಸಾಹಸದಲ್ಲಿ ಕೃತಕೃತ್ಯರಾಗಲಿ. ಕನ್ನಡ ನಾಡು ಒಂದಾಗಲಿ. ಕನ್ನಡನುಡಿ ಕನ್ನಡ ಸಿಂಹಾಸನದ ಮೇಲೆ ರಾಣಿಯಾಗಿ ರಂಜಿಸಲಿ. ಕನ್ನಡದ ಬೆಳಕು ಬಾನಿಗೇರಿ, ಬಾನ ಬೆಳಕು ಕನ್ನಡಕ್ಕಿಳಿದು, ಕನ್ನಡಿಗರು ಬಾಳಿ ಬಾಳಿಸಲಿ. ಭಾರತಮಾತೆಯ ಸೇವೆಯಲ್ಲಿ ಆಕೆಯ ತನುಜಾತೆಯಾದ ಕರ್ನಾಟಕ ಮಾತೆ ಮತ್ತಾರಿಗೂ ಹಿಂದೆ ಬೀಳದಿರಲಿ.

ಈ ನಮ್ಮ ಆಸೆಗೆ ಭಗವದಾಶಿರ್ವಾದವಿದೆ ಎಂಬುದಕ್ಕೆ ಇಂದು ಮಂತ್ರಿಗಳಿಬ್ಬರು

ಕೃಪೆಯಿಟ್ಟು ದಯಮಾಡಿಸಿರುವುದೇ ಒಂದು ಅಲಭ್ಯಸಾಕ್ಷಿ. ಲಕ್ಷ್ಮಿ ಸರಸ್ವತಿಯರು ಒಂದೇ ವೇದಿಕೆಯ ಮೇಲೆ ಸೇರುವುದು ಅಸಂಭವ ಎಂಬ ನಾಣ್ಣುಡಿಗೆ ಅಪವಾದ ತರುವಂತೆ ಇಂದು ನಮ್ಮ ಕರ್ನಾಟಕ ಸಂಘದ ವೇದಿಕೆಯಲ್ಲಿ ಅರ್ಥ ಸಚಿವರೂ ವಿದ್ಯಾಸಚಿವರೂ ಸೌಹಾರ್ದದಿಂದ ಸೇರಿದ್ದಾರೆ. ನಮ್ಮ ಉದ್ಯಮ ಸಾಧನೆಗೆ ಆ ಎರಡು ಶಕ್ತಿಗಳ ಬಲ ಮತ್ತು ಬೆಂಬಲಗಳು ಎಷ್ಟರಮಟ್ಟಿಗೆ ಅವಶ್ಯಕ ಎಂಬುದನ್ನು ನಾವೆಲ್ಲ ಅರಿತಿದ್ದೇವೆ. ಅವರು ಹಿಡಿದಿರುವದು ಬರಿಯ ರಾಜ್ಯಭಾರ ಸೂತ್ರಗಳನ್ನಲ್ಲ; ಜನತೆಯ ಪ್ರಾಣಸೂತ್ರಗಳನ್ನೂ ಹಿಡಿದಿದ್ದಾರೆ. ನಾನು ನಿರೂಪಿಸಿರುವ ವಿಷಯಗಳೆಲ್ಲವೂ ಅವರ ಹೃದಯದಲ್ಲಿ ಆದಿ ನಿವಾಸಿಗಳಾಗಿವೆ ಎಂಬುದನ್ನು ನಾನು ಬಲ್ಲೆ. ಕೊರಳ ನೊಗತಪ್ಪದೆ ದುಡಿಯುತ್ತಿರುವ ಸಚಿವರಿಗೆ ಪುರಸೊತ್ತು ಆಗುವುದೇ ವಿರಳ. ಹಾಗಿದ್ದರೂ ನಮ್ಮ ಕರೆಗೆ ಓಕೊಂಡು ನಮ್ಮ ಸಂಸ್ಥೆಯ ಮೇಲೆ ಅಭಿಮಾನವಿಟ್ಟು ವಿಶ್ವಾಸದಿಂದ ದಯಮಾಡಿಸಿದ್ದಾರೆ. ಶ್ರೀಮಾನ್ ದಾಸಪ್ಪನವರಿಗೂ ಶ್ರೀಮಾನ್ ಚಂದ್ರಶೇಖರಯ್ಯನವರಿಗೂ ಅದಕ್ಕಾಗಿ ನಾವು ಎಷ್ಟು ಕೃತಜ್ಞರಾದರೂ ಸಾಲದಾಗಿದೆ. ನಮ್ಮ ಆತಿಥ್ಯದ ಲೋಪದೋಷಗಳನ್ನು ಪರಿಭಾವಿಸದೆ ನಮ್ಮ ಹೃದಯೋದ್ದೇಶ ಒಂದನ್ನೇ ಭಾವಿಸಿ ನಾಡ ಹಬ್ಬವನ್ನು ಯಶಸ್ವಿಯಾಗಿ ನಡೆಸಿಕೊಡಬೇಕೆಂದು ಅವರಿಬ್ಬರನ್ನೂ ವಿನಯಪೂರ್ವಕವಾಗಿ ಪ್ರಾರ್ಥಿಸುತ್ತೇನೆ. ಹಾಗೆಯೆ ನಮ್ಮ ಕರೆಯನ್ನು ಮನ್ನಿಸಿ ಸಭೆಗೆ ದಯಮಾಡಿಸಿರುವ ತಮಗೆಲ್ಲರಿಗೂ ಹೃತ್ಪೂರ್ವಕವಾಗಿ ಸ್ವಾಗತ ಬಯಸುತ್ತೇನೆ

ಸಿರಿಗನ್ನಡಂ ಗೆಲ್ಗೆ!

ಜೈಹಿಂದ್!

---

ತಾ. ೧೦-೧೨-೧೯೪೭ರ "ವಿಶಾಲ ಕರ್ನಾಟಕ"ದ ಕೃಪೆಯಿಂದ.

# ಭಾಷಾ ಸಮಸ್ಯೆ[೧]

ಭಾಷಾ ಸಮಸ್ಯೆಯ ಬಗ್ಗೆ ನನಗೆ ತೀವ್ರಾಸಕ್ತಿಯಿದೆ. ನಮ್ಮ ಶಿಕ್ಷಣ ವ್ಯವಸ್ಥೆಯ ಪ್ರಯೋಜನ ಸಾರ್ಥಕತೆಗಳು ಈ ಸಮಸ್ಯೆಯ ಪರಿಹಾರೋಪಾಯಗಳನ್ನವಲಂಬಿಸಿವೆ. ಇದನ್ನು ಶೈಕ್ಷಣಿಕವಾಗಿ ಗಮನಿಸಬೇಕೇ ಹೊರತು ರಾಜಕೀಯವನ್ನು ಬೆರೆಸಬಾರದು. ಬೇರೆ ರಾಜ್ಯಗಳಿಂದ ಬಂದಿರುವ ಅಧ್ಯಾಪಕರ ಅನುಕೂಲಕ್ಕಾಗಿ ನಾನಿಂದು ಆಂಗ್ಲ ಭಾಷೆಯಲ್ಲಿ ಮಾತಾಡುತ್ತಿದ್ದೇನೆ. ಸ್ವಾತಂತ್ರ್ಯ ಬಂದ ಕೂಡಲೇ ಭಾಷಾ ಸಮಸ್ಯೆ ತಾನೇ ತಾನಾಗಿ ಪರಿಹಾರವಾಗುತ್ತದೆಂದು ಗಾಂಧೀಜಿ ಕೆಲವು ವರ್ಷಗಳ ಹಿಂದೆ ಹರಿಜನ ಪತ್ರಿಕೆಯಲ್ಲಿ ಬರೆದಿದ್ದರು. ಅದು ತೀರ್ಮಾನಗೊಂಡ ವಿಷಯವೆಂದು ನಾವು ಬಗೆದಿದ್ದೆವು. ಆದರೆ ಸ್ವಾತಂತ್ರ್ಯಾನಂತರ ಆ ಸಮಸ್ಯೆಗಳು ಸುಲಭವಾಗಿ ಪರಿಹಾರವಾಗುವಂಥವಲ್ಲವೆಂದೂ, ದಿನೇ ದಿನೇ ಅವು ಜಟಿಲಗೊಳ್ಳುತ್ತಿವೆಯೆಂದೂ ಭಾಸವಾಗುತ್ತಿದೆ. ಇತ್ತೀಚೆಗಂತು ಈ ಸಮಸ್ಯೆಗಳು ರಾಜಕೀಯ ಸ್ವರೂಪವನ್ನು ತಾಳುತ್ತಿವೆ. ಇನ್ನು ಕೆಲವು ತಿಂಗಳಲ್ಲಂತು ಭಾಷೆಗಳ ಆಧಾರದ ಮೇಲೆ ರಾಜ್ಯಗಳು ರಚನೆಯಾಗಲಿವೆ.

ಸದ್ಯಕ್ಕೆ ದಕ್ಷಿಣ ಭಾರತವನ್ನು ಮಾತ್ರ ದೃಷ್ಟಿಯಲ್ಲಿಟ್ಟುಕೊಂಡು ಈ ವಿಷಯವನ್ನು ಚರ್ಚಿಸಬಹುದು. ಇಲ್ಲಿ ನಾಲ್ಕು ಭಾಷೆಗಳು ಚಾಲ್ತಿಯಲ್ಲಿವೆ. ಇತ್ತೀಚಿನತನಕ ಉತ್ತಮವರ್ಗದ ಜನರಿಗೆ ಆಂಗ್ಲಭಾಷೆ ಸಾಮಾನ್ಯ ಸಂಪರ್ಕಭಾಷೆಯಾಗಿತ್ತು. ಪ್ರತಿಯೊಂದು ರಾಜ್ಯದಲ್ಲಿಯೂ ದೇಶಭಾಷೆ ಪ್ರಥಮ ಭಾಷೆಯಾಗಬೇಕೆಂದು ಗಾಂಧೀಜಿ ಸಾರಿ ಸಾರಿ ಹೇಳಿದ್ದುಂಟು. ಅದು ಆಡಳಿತದ ಭಾಷೆಯೂ ಆಗಬೇಕು. ಹಿಂದಿ ಬಹುಜನರು ಆಡುವ ಭಾಷೆಯಾದ್ದರಿಂದ, ಅದು ಅಂತರರಾಷ್ಟ್ರೀಯ ವ್ಯವಹಾರಗಳಿಗೊಂದು ಭಾಷೆ ಬೇಕಷ್ಟೆ. ಆ ಉದ್ದೇಶದ ಈಡೇರಿಕೆಗಾಗಿ ಆಂಗ್ಲಭಾಷೆಯನ್ನು ಉಳಿಸಿಕೊಳ್ಳಬಹುದು. ಈ ನಡುವೆ ಅರೇಬಿಕ್ ಮತ್ತು ಸಂಸ್ಕೃತದಂಥ ಪ್ರಾಚೀನ ಭಾಷೆಗಳಿವೆ. ಮುಂದಿನ ನಮ್ಮ ಶಿಕ್ಷಣ ವ್ಯವಸ್ಥೆಯಲ್ಲಿ ಈ ಭಾಷೆಗಳಿಗೆಂಥ ಸ್ಥಾನ ಕೊಡಬೇಕೆಂಬುದನ್ನು ತೀವ್ರವಾಗಿ ಆಲೋಚಿಸಬೇಕಾಗಿದೆ.

ನಾನು ಆಂಗ್ಲಭಾಷೆಯ ಪ್ರಯೋಜನವನ್ನು ಕಡೆಗಾಣುವುದಿಲ್ಲ. ಅದು ನಮಗೆ ವಿಜ್ಞಾನ ಹಾಗೂ ಯಂತ್ರ ವಿದ್ಯೆಯನ್ನು ಕಲಿಸುವ ಭಾಷೆಯಾಗಿದೆ, ನಮಗೂ ಹೊರಗಣ ಪ್ರಪಂಚಕ್ಕೂ ಅದರ ಮೂಲಕ ಸಂಪರ್ಕವೇರ್ಪಡುತ್ತದೆ. ಆಂಗ್ಲರನ್ನು ನಮ್ಮ ದೇಶದಿಂದ ಓಡಿಸಿದಂತೆ, ಆಂಗ್ಲಭಾಷೆಯನ್ನು ಓಡಿಸಲಾಗದು. ಆದರೆ ಯಾವ ರೂಪದಲ್ಲಿ, ಯಾವ ಪ್ರಮಾಣದಲ್ಲಿ ಆ ಭಾಷೆಯನ್ನುಳಿಸಿಕೊಳ್ಳಬೇಕೆಂಬುದು ಈಗ ನಾವು

---

[೧] ಮೇ, ೧೯೫೬

ಯೋಚಿಸಬೇಕಾದ ವಿಷಯ. ಇಪ್ಪತ್ತು ಮೂವತ್ತು ವರ್ಷಗಳ ಹಿಂದೆ ಪ್ರೌಢಶಾಲೆಗಳು ಹೆಚ್ಚಾಗಿರಲಿಲ್ಲ. ಅವುಗಳಲ್ಲಿ ವ್ಯಾಸಂಗ ಮಾಡುತ್ತಿದ್ದ ವಿದ್ಯಾರ್ಥಿಗಳು ಸಾಮಾನ್ಯವಾಗಿ ಉತ್ತಮವರ್ಗದಿಂದ ಬಂದಂಥವರು. ವಿದ್ಯಾರ್ಥಿಗಳ ಸಂಖ್ಯೆ ಕಡಿಮೆಯಾಗಿದ್ದುದರಿಂದ ಅಧ್ಯಾಪಕರು ಪ್ರತಿಯೊಬ್ಬ ವಿದ್ಯಾರ್ಥಿಯನ್ನು ಗುರುತಿಟ್ಟುಕೊಂಡು, ಅವನ ದೋಷ ದೌರ್ಬಲ್ಯಗಳನ್ನು ಪತ್ತೆ ಮಾಡಿ, ಸೂಕ್ತರೀತಿಯಲ್ಲಿ ಕಲಿಸುತ್ತಿದ್ದರು; ಅವನ ಕಾಗುಣಿತ ಮತ್ತು ವ್ಯಾಕರಣಾಂಶಗಳನ್ನು ಕೂಡಲೇ ತಿದ್ದುತ್ತಿದ್ದರು. ಈಗಂತು ಆಗಿನ ಇಪ್ಪತ್ತು ವಿದ್ಯಾರ್ಥಿಗಳಿಗೆ ಬದಲಾಗಿ ಇನ್ನೂರು ವಿದ್ಯಾರ್ಥಿಗಳಿದ್ದಾರೆ. ಹಿಂದಿನ ವೈಯಕ್ತಿಕ ಗಮನಕ್ಕೀಗ ಅವಕಾಶವಿಲ್ಲ. ಆಂಗ್ಲಭಾಷೆಯ ಮಟ್ಟ ದಿನೇ ದಿನೇ ಕುಸಿಯುತ್ತಿದೆ ವಿದ್ಯಾರ್ಥಿಗಳನ್ನು ಇಂಗ್ಲಿಷ್ ಮೂಲಕ ಮಾತಾಡಿಸಿದಾಗ, ಇಲ್ಲವೆ, ಭಾಷಾಂತರ ಪ್ರಶ್ನೆಯನ್ನು ಕೊಟ್ಟಾಗ ಅವರ ಆಂಗ್ಲಭಾಷಾ ಪರಿಣತಿ ವ್ಯಕ್ತವಾಗುತ್ತದೆ. ಆದ್ದರಿಂದ ಅದನ್ನು ಸರ್ವರಿಗೂ ಕಡ್ಡಾಯಗೊಳಿಸಿ ಫಲಿತಾಂಶಗಳನ್ನು ಪ್ರಕಟಿಸುವ ಕಾಲಕ್ಕೆ ಕೃಪಾಂಕಗಳನ್ನು ಸೇರಿಸಿ, ಹಾಗೆ ತೇರ್ಗಡೆ ಹೊಂದಿದ ವಿದ್ಯಾರ್ಥಿಗಳ ಸಂಖ್ಯೆಯನ್ನು ನೋಡಿ ಬೆನ್ನುತಟ್ಟಿಕೊಳ್ಳುವ ಬದಲಾಗಿ, ಅದನ್ನು ಐಚ್ಛಿಕಗೊಳಿಸುವುದು ಕ್ಷೇಮ. ಇಂಥ ಭಾಷೆ ಬೋಧನೆಯ ಹಾಗೂ ಅಭಿವ್ಯಕ್ತಿಯ ಮಾಧ್ಯಮವಾಗಿರುವಾಗ ವಿದ್ಯಾರ್ಥಿಗಳಲ್ಲಿ ಆಲೋಚನೆಯ ಅಥವಾ ಬರವಣಿಗೆಯ ಮಟ್ಟವನ್ನು ನಿರೀಕ್ಷಿಸುವುದು ಕಷ್ಟವಾಗುತ್ತದೆ. ಅನೇಕ ಭಾಷೇತರ ವಿಷಯಗಳಲ್ಲಿ ವಿದ್ಯಾರ್ಥಿಗಳು ನಪಾಸಾಗುವುದಕ್ಕೂ ಈಗಿನ ಶಿಕ್ಷಣ ಮಾಧ್ಯಮವೇ ಕಾರಣ. ಭಾಷೆ ಅವರ ಬಾಯಿಕಟ್ಟಿ, ಲೇಖನಿಗೆ ಅಡ್ಡಿಯೊಡ್ಡುವುದರಿಂದ, ಕೆಲವು ಆರಿಸಿದ ಪ್ರಶ್ನೆಗಳಿಗೆ ಯಾರ ಸಹಾಯದಿಂದಲಾದರೂ ಉತ್ತರಗಳನ್ನು ಸಿದ್ಧಿಪಡಿಸಿಕೊಂಡು, ಉರುಹಚ್ಚಿ, ಪರೀಕ್ಷೆಗಳಲ್ಲಿ ಎಂಥದೇ ಪ್ರಶ್ನೆ ಕೇಳಿರಲಿ, ಬರೆದು ಬರುತ್ತಾರೆ. ಏನು ಪ್ರಶ್ನೆ ಕೇಳಿದ್ದಾರೆನ್ನುವುದರ ಕಡೆಗೂ ಅವರ ಗಮನ ಹರಿಯುವುದಿಲ್ಲ. ತಮಗೆ ಗೊತ್ತಿರುವ ಪದಗಳ ಪರಿಚಯವಷ್ಟರಿಂದಲೇ ಉರುಹಚ್ಚಿದ್ದನ್ನು ಕಾಗದದ ಮೇಲೆ ಇಳಿಸುತ್ತಾರೆ.

ಇನ್ನು ಮುಂದೆ ಇಂಗ್ಲಿಷು ಎಲ್ಲರಿಗೂ ಬೇಡ; ಸಾಮರ್ಥ್ಯ, ಸೌಲಭ್ಯಗಳಿಸಿರುವ ಕೆಲವರಿಗೆ ಮಾತ್ರ ಪಠ್ಯವಿಷಯವಾಗಲೆಂದು ತಿಳಿವಳಿಕೆ ನೀಡೋಣ.ಆಂಗ್ಲಭಾಷೆ ಯಾರಿಗೆ ಕಷ್ಟವೆಂದು ತೋರುತ್ತದೆಯೋ ಅವರು ದೇಶಭಾಷೆಯನ್ನೇ ಪೂರ್ಣವಾಗಿ ಬಳಸಲಿ. ಆಂಗ್ಲಭಾಷೆಯ ಕಡೆಗೆ ವಾಲುವ ಕೆಲವರು, ವಿಶೇಷ ತರಬೇತಿ ಪಡೆಯಲು ಅವಕಾಶವಿರಬೇಕು. ಏಕೆಂದರೆ ಭಾರತಕ್ಕೂ ಪ್ರಪಂಚದ ಇತರ ಭಾಗಗಳಿಗೂ ಸಂಪರ್ಕವೇರ್ಪಡಿಸುವ ಕರ್ತವ್ಯ ಅವರದಾಗಬೇಕು. ಇತರರು ಅಗತ್ಯವಾದರೆ ಓದಿ ಅರ್ಥಮಾಡಿಕೊಳ್ಳುವಷ್ಟು ಇಂಗ್ಲಿಷ್ ಕಲಿಯಬಹುದು. ಆಂಗ್ಲ ಶ್ರೇಷ್ಠಸಾಹಿತ್ಯ ಕೃತಿಗಳನ್ನು ದೇಶ ಭಾಷೆಯಲ್ಲಿ ಕಲಿಸಬೇಕೆಂದು ನಾನೊಮ್ಮೆ ಸಲಹೆ ಮಾಡಿದಾಗ ಕೆಲವು ವಿದ್ವಾಂಸರು ನಕ್ಕಿದ್ದುಂಟು. ಕಾಳಿದಾಸನ ಸಂಸ್ಕೃತ ಶಾಕುಂತಲ ನಾಟಕವನ್ನು ಕನ್ನಡದಲ್ಲಿ ಬೋಧಿಸುವಾಗ ಲಭಿಸುವ ಪ್ರಯೋಜನ ಇಂಗ್ಲಿಷ್ ಮೂಲಕ ಬೋಧಿಸುವಾಗ ದೊರೆಯುವುದಿಲ್ಲ. ಶೇಕ್ಸಪಿಯರ್ ನಾಟಕಗಳನ್ನು ಜರ್ಮನಿಯಲ್ಲಿ

ಜರ್ಮನ್ ಭಾಷೆಯ ಮೂಲಕವೂ, ಫ್ರಾನ್ಸ್ ನಲ್ಲಿ ಫ್ರೆಂಚ್ ಭಾಷೆಯ ಮೂಲಕವೂ ಕಲಿಸುತ್ತಿರುವ ವಿಷಯ ನಮ್ಮ ಪರಿಣತರಿಗೆ ಗೊತ್ತಿಲ್ಲದಿರುವುದು ಹಾಸ್ಯಾಸ್ಪದ ಸಂಗತಿಯಾಗಿದೆ. ಶೇಕ್ಸ್ ಪಿಯರ್ ಬಗ್ಗೆ ಪ್ರಶ್ನೆಗಳನ್ನು ಕನ್ನಡದಲ್ಲಿ ಉತ್ತರಿಸುವಾಗ ವಿದ್ಯಾರ್ಥಿ ಗಟ್ಟಿಮಾಡಿದ್ದನ್ನು ಕಾರುವುದಿಲ್ಲ; ಆಲೋಚಿಸಿ ಬರೆಯುತ್ತಾನೆ.

ನಮ್ಮ ರಾಜ್ಯದ ಬಹುತೇಕ ಪ್ರೌಢಶಾಲೆಯಲ್ಲಿ ಕನ್ನಡವೇ ಶಿಕ್ಷಣ ಮಾಧ್ಯಮವಾಗಬೇಕು. ಈ ವರ್ಷವೇ ಜ್ಯೂನಿಯರ್ ಇಂಟರ್ ಮೀಡಿಯಟ್ ತರಗತಿಯಲ್ಲಿ ಕನ್ನಡಮಾಧ್ಯಮದ ತರಗತಿಗಳನ್ನು ತೆರೆಯಬೇಕಂದು ಆಲೋಚಿಸುತ್ತಿದ್ದೇವೆ. ಪ್ರತಿಯೊಂದು ವಿಶ್ವವಿದ್ಯಾನಿಲಯವೂ ತನ್ನದೇ ಆದ ಭಾಷೆಯಲ್ಲ ಶಿಕ್ಷಣ ನೀಡುವುದಾದರೆ ಅನೇಕ ಅಪಾಯಗಳು ಕಾದಿರುತ್ತವೆಂದು ಕೆಲವು ಜನ ಬೆದರಿರುವುದುಂಟು. ಒಂದು ರಾಜ್ಯದ ಪ್ರಾಧ್ಯಾಪಕ ಮತ್ತೊಂದು ರಾಜ್ಯದ ಭಾಷೆಯನ್ನರಿಯದಿರುವುದರಿಂದ ವಿಚಾರವಿನಿಮಯಕ್ಕೆ ಧಕ್ಕೆಯೊದಗುತ್ತದೆಂದು ಅವರು ಆತಂಕ ವ್ಯಕ್ತಪಡಿಸುತ್ತಾರೆ. ವೈಜ್ಞಾನಿಕ ಪರಿಭಾಷೆ ವಿಶ್ವವಿದ್ಯಾನಿಲಯದಿಂದ ವಿಶ್ವವಿದ್ಯಾನಿಲಯಕ್ಕೆ ವ್ಯತ್ಯಾಸ ಹೊಂದುವುದಾದರೆ, ವಿಜ್ಞಾನದ ಪ್ರಗತಿ ಕುಂಠಿತವಾಗುತ್ತದೆನ್ನುವ ಹೆದರಿಕೆಯೂ ಕೆಲವು ಮೂಲೆಗಳಲ್ಲಿದೆ.

ಮೊದಲನೆಯದಾಗಿ ಪರಿಭಾಷೆಯನ್ನು ಕುರಿತು ಎರಡು ಮಾತು ಹೇಳುತ್ತೇನೆ. ಪರಿಭಾಷಾ ಸಾಮಗ್ರಿಯನ್ನು ಕನ್ನಡಕ್ಕೆ ತರ್ಜುಮೆ ಮಾಡಬೇಕೆನ್ನುವುದು ಕೆಲವರ ಹಠ, ಇಂಥ ಹಠದಿಂದ ಎಲ್ಲ ಕಡೆಯೂ ತೊಂದರೆಗಳಾಗುವುದು ಸಹಜ. ವೈಜ್ಞಾನಿಕ ಗ್ರಂಥಗಳನ್ನು ಭಾಷಾಂತರಿಸುವಾಗ ಅಂತರರಾಷ್ಟ್ರೀಯ ಪದಗಳನ್ನು ಅನಾಮತ್ತಾಗಿ ಬಳಸಬೇಕೆಂಬುದೇ ನನ್ನ ಸಲಹೆ. ಆಕ್ಸಿಜನ್ ಆಕ್ಸಿಜನ್ ಆಗಿಯೇ ಉಳಿಯುತ್ತದೆ. ಅದರ ಜತೆಗೆ ಅವಶ್ಯವೆಂದು ತೋರಿದರೆ ಕನ್ನಡ ಪದವನ್ನೊ, ಕನ್ನಡದಲ್ಲಿ ವಿವರಣೆಯನ್ನೊ ಸೇರಿಸಬಹುದು. ಕಾರುಚಾಲಕರು, ಮೆಕ್ಯಾನಿಕ್ಕುಗಳು,ಅಷ್ಟೇಕೆ ಪ್ರತಿಯೊಬ್ಬ ಗೃಹಸ್ಥನೂ ಪ್ರತಿನಿತ್ಯ ನೂರಾರು ಆಂಗ್ಲಪದಗಳನ್ನು ಬಳಸುವುದುಂಟು. ಅಂಥ ಪದಗಳ ಬಳಕೆಯಿಂದ ನಮ್ಮಭಾಷೆ ಶ್ರೀಮಂತವಾಗುತ್ತದೆ. ಚುನಾವಣೆ ಕನ್ನಡದ ಪದವಲ್ಲ. ಆದರೆ ಅದು ಪ್ರತಿಯೊಬ್ಬ ಕನ್ನಡಿಗನ ಆಸ್ತಿಯಾಗಿಬಿಟ್ಟಿದೆ. ಮಗುವಿಗೆ ಹಗುರವಾದ ಒಳಲೆಯಲ್ಲಿ ಹಾಲು ಕುಡಿಸಬೇಕು. ಬಹುಕಾಲ ಬಾಳುತ್ತದೆಂದು, ಭಾರವಾದ ಪಾತ್ರೆಯನ್ನೆತ್ತಿದರೆ ವ್ಯಾಯಮವಾಗುತ್ತದೆಂದು ಕಲ್ಲಿನ ಪಾತ್ರೆ ಮಾಡಿಸಿ, ಅದರಲ್ಲಿ ಹಾಲುಕುಡಿಸಲು ಪ್ರಯತ್ನಿಸಿದರೆ, ಅದು ಭಾರವಾಗಿ, ಮಗು ಅದನ್ನು ಕೆಳಗೆ ಎತ್ತಿಹಾಕಿಬಿಡುತ್ತದೆ. ನಮಗೆ ವಿದೇಶೀಯವಾಗಿರುವ ಭಾಷೆಯ ಪ್ರಯೋಗದಿಂದ ಆಗುತ್ತಿರುವ ನಷ್ಟವಿದು.

ಎರಡನೆಯದಾಗಿ ವಿಚಾರವಿನಿಮಯದ ವಿಷಯ. ನಮ್ಮಲ್ಲೀಗ ದ್ವಿಭಾಷಾಸೂತ್ರ ಕಡ್ಡಾಯವಾಗಿದೆ. ಈ ದೇಶದಲ್ಲಿ ಜನಿಸುವ ಪ್ರತಿಯೊಂದು ಮಗುವೂ ಎರಡು ಭಾಷೆಗಳನ್ನು ಕಲಿಯಲೇಬೇಕು. ಅಂದಮೇಲೆ ವಿದ್ವಾಂಸರೆನಿಸಿಕೊಳ್ಳುವವರು ಎರಡೊ ಮೂರೋ ಭಾಷೆ ಕಲಿಯಬೇಕಾಗುತ್ತದೆ. ಈ ಹೊತ್ತು ನಮ್ಮ ಪ್ರಾಧ್ಯಾಪಕರು ಎರಡು

ಭಾಷೆ ಕಲಿಯುತ್ತಿಲ್ಲವೆ? ಅದೇ ಪರಿಸ್ಥಿತಿ ಶಾಶ್ವತವಾಗಿ ಮುಂದುವರಿಯುತ್ತದೆ. ಆದ್ದರಿಂದ ಈ ಸಮಸ್ಯೆ ಏನೇನು ತೊಡಕಾಗುವುದಿಲ್ಲ.

ಶಿಕ್ಷಣದ ಮಟ್ಟ ಇಳಿದು ಹೋಗುತ್ತಿದೆಯೆಂದು ಎಲ್ಲ ಕಡೆಯೂ ಕೂಗೆದ್ದಿದೆ, ಈ ಇಳಿತ ನಿಜವೆನ್ನುವುದಾದರೆ, ಅಧ್ಯಾಪಕರೂ ಆ ಹೊಣೆಯನ್ನು ಹೊರಬೇಕಾಗುತ್ತದೆ. ಅಂದರೆ ಅವರ ಮಟ್ಟ ಸಹ ಸಂದೇಹಾಸ್ಪದವೆಂದು ಹೇಳಬೇಕಾಗುತ್ತದೆ. ಅವರಿಗೂ ಭಾಷೆಯ ಸಮಸ್ಯೆ ತೊಡಕಾಗಿದೆಯೆಂದು ತಿಳಿಯಬೇಕಾಗುತ್ತದೆ. ಒಂದೇ ವೇದಿಕೆಯ ಮೇಲೆ ಒಬ್ಬರು ಕನ್ನಡದಲ್ಲಿ, ಮತ್ತೊಬ್ಬರು ಇಂಗ್ಲಿಷಿನಲ್ಲಿ ಮಾತಾಡುತ್ತಾರೆಂದಿಟ್ಟುಕೊಳ್ಳೋಣ. ಕನ್ನಡದಲ್ಲಿ ಮಾತಾಡುವವರ ಬಾಯಿಂದ ಮಾತುಗಳು ಆಲೋಚನಾಗರ್ಭಿತವಾಗಿ ನಿರರ್ಗಳವಾಗಿ ಪ್ರವಹಿಸುತ್ತವೆ. ಇಂಗ್ಲಿಷಿನಲ್ಲಿ ಮಾತಾಡುವವರು ವಿಶೇಷವಾಗಿ ವ್ಯಾಕರಣಬದ್ಧವಾದ ಭಾಷೆಯ ಕಡೆಗೆ ಗಮನ ಹರಿಸುವುದರಿಂದ, ಆಲೋಚನೆಗಳು ಹಿಂದೆ ಬೀಳುತ್ತವೆ. ಕನ್ನಡದ ಭಾಷಣಕ್ಕೆ ಶ್ರೋತೃಗಳು ಪ್ರತಿಕ್ರಿಯೆ ವ್ಯಕ್ತಪಡಿಸುವಂತೆ ಇಂಗ್ಲಿಷ್ ಭಾಷಣಕ್ಕೆ ವ್ಯಕ್ತಪಡಿಸುವುದಿಲ್ಲ, ಅಷ್ಟೇ ಅಲ್ಲ, ಅವರ ಆಕಳಿಕೆಯೇ ಪ್ರತಿಕ್ರಿಯೆಯಾಗುತ್ತದೆ.

ಗ್ರಂಥಾಲಯಗಳಲ್ಲಿ ಸಿಗುವ ಅಂಕಿ ಅಂಶಗಳನ್ನು ಪರಿಶೀಲಿಸಿದರೂ ದೇಶಭಾಷೆಯ ಪ್ರಾಶಸ್ತ್ಯ ವೇದ್ಯವಾಗುತ್ತದೆ. ಇಪ್ಪತ್ತು ಮೂವತ್ತು ವರ್ಷಗಳ ಯಾದಿಯನ್ನು ನೋಡುವುದಾದರೆ, ಕನ್ನಡ ಗ್ರಂಥಗಳನ್ನು ಓದುವವರ ಸಂಖ್ಯೆಗೂ ಇಂಗ್ಲಿಷ್ ಗ್ರಂಥಗಳನ್ನು ಓದುವವರ ಸಂಖ್ಯೆಗೂ ಅಜಗಜಾಂತರವಿರುವುದು ಸ್ಪಷ್ಟವಾಗುತ್ತದೆ. ಕನ್ನಡ ಭಾಷೆಯಲ್ಲಿಯೂ ಜ್ಞಾನ ಸಂಗ್ರಹವಾಗುತ್ತಿರುವುದರಿಂದ, ಕನ್ನಡ ಮೂಲಕದ ಓದಿನಿಂದ ಗ್ರಹಣ ಸಾಮರ್ಥ್ಯ ಹೆಚ್ಚುವುದರಿಂದ ಅವರು ಕನ್ನಡದ ಗ್ರಂಥಗಳನ್ನು ಹೆಚ್ಚು ಹೆಚ್ಚಾಗಿ ಓದುತ್ತಾರೆ. ಉಷ್ಣವನ್ನು ಕುರಿತಾದ ಇಂಗ್ಲಿಷ್ ಗ್ರಂಥವನ್ನೋದಿ ಮುಗಿಸಲು ಒಬ್ಬ ವಿದ್ಯಾರ್ಥಿಗೆ ಹತ್ತು ದಿನಗಳು ಬೇಕಾದರೆ, ಅದೇ ವಿಷಯದ ಕನ್ನಡ ಗ್ರಂಥವನ್ನೋದಲು ಅವನಿಗೆ ಐದುದಿನ ಸಾಕು. ವಿದ್ಯಾರ್ಥಿಯ ಕಾಲ ಶ್ರಮಗಳೆರಡೂ ಕನ್ನಡ ಮಾಧ್ಯಮದ ಮೂಲಕ ಉಳಿಯುತ್ತವೆನ್ನುವುದು ಮೇಲಣ ನಿದರ್ಶನದಿಂದ ಸ್ಪಷ್ಟವಾಗುತ್ತದೆ.

ನಾನು ಕಾವ್ಯರಚನೆ ಪ್ರಾರಂಭಿಸಿದ್ದು ಆಂಗ್ಲಭಾಷೆಯಲ್ಲಿ, ಇದಕ್ಕೆ ಕಾರಣ, ನನಗೆ ಮೊದಲು ಕಾವ್ಯದ ಭವ್ಯತೆ ಮತ್ತು ಭೂಮತೆಗಳು ಪರಿಚಯವಾದದ್ದು ಆಂಗ್ಲಕವಿಗಳ ಮೂಲಕ. ಆಗ ಆಂಗ್ಲಬೋಧಕನಿಗೆ ಇತರರಿಗಿಂತ ಹೆಚ್ಚಾಗಿ ಸಂಬಳ ದೊರಕುತ್ತಿತ್ತು. ಅವನ ವೇಷಭೂಷಣಗಳು ನಾಜೋಕಾಗಿರುತ್ತಿದ್ದವು. ಅವನು ಯಾವಾಗಲೂ ಪ್ರತಿಷ್ಠಿತವ್ಯಕ್ತಿಯಂತೆ ವರ್ತಿಸುತ್ತಿದ್ದನು. ಕನ್ನಡ ಪಂಡಿತನ ಉಡುಗೆ ತೊಡುಗೆಗಳು ನೀಟಾಗಿರುತ್ತಿರಲಿಲ್ಲ. ಜತೆಗೆ ಆತನಲ್ಲಿ ಆತ್ಮಪ್ರತ್ಯಯವೂ ಇದ್ದಂತೆ ತೋರುತ್ತಿರಲಿಲ್ಲ. ಆದ್ದರಿಂದ ಸಹಜವಾಗಿಯೇ ನಮ್ಮ ಗೌರವ ಇಂಗ್ಲಿಷಿನ ಕಡೆಗೆ ವಾಲುತ್ತಿತ್ತು. ನಾನು ಪ್ರಾರಂಭದಲ್ಲಿ ಆಂಗ್ಲಕವಿಗಳ ಕೃತಿಗಳನ್ನನುಸರಿಸುತ್ತಿದ್ದೆ. ಐರ್ಲೆಂಡಿನ ಪ್ರಭೃತಿಯೊಬ್ಬರು

ಕನ್ನಡದಲ್ಲಿ ಕಾವ್ಯ ಕೃಷಿ ಮಾಡುವಂತೆ ನನ್ನನ್ನು ಪ್ರೋತ್ಸಾಹಿಸಿದರು.

ಈಗಿನ ನಮ್ಮ ವಿದ್ಯಾರ್ಥಿಗಳು ಆಂಗ್ಲಭಾಷೆಯಕಾವ್ಯಗಳನ್ನು ಹೆಚ್ಚಾಗಿ ಓದುತ್ತಿಲ್ಲ. ಏಕೆ ಗೊತ್ತೆ? ಮೂರ್‍ನಾಲ್ಕು ದಶಕಗಳಿಂದ ದೇಶಭಾಷೆಗಳಲ್ಲಿ ಶೆಲ್ಲಿ, ವರ್ಡ್ಸ್‌ವರ್ತ್‌ರ ಕೃತಿಗಳಿಗೆ ಸಮನಾದ ಸಾಹಿತ್ಯ ಸೃಷ್ಟಿಯಾಗುತ್ತಿರುವುದರಿಂದ. ಅವರ ಪಿತ್ರಾರ್ಜಿತ ಆಸ್ತಿ ಆಲ್ಪ್ಸ್ ಪರ್ವತ ಶ್ರೇಣಿಯಾದರೆ, ನಮ್ಮದು ಹಿಮಾಲಯ ಶ್ರೇಣಿ. ಆಂಗ್ಲಕೃತಿಗಳು ಕನ್ನಡಕ್ಕೆ ತರ್ಜುಮೆಯಾಗುತ್ತಿವೆ. ಮುಂದಿನ ಕೆಲವು ವರ್ಷಗಳ ನಂತರ ನಮ್ಮವರು ಆಂಗ್ಲಸಾಹಿತ್ಯದ ಕಡೆಗೆ ಗಮನ ಹರಿಸದಿದ್ದರೆ ಅಪಾರ ನಷ್ಟವಾಗುವುದಿಲ್ಲ. ಆದರೆ ಆಂಗ್ಲಭಾಷೆಯನ್ನು ದೇಶದಿಂದ ಗಡೀಪಾರು ಮಾಡಲಾಗದು. ಅಂಥ ಕಾರ್ಯದಿಂದ ನಮ್ಮ ದೃಷ್ಟಿ ಸಂಕುಚಿತವಾಗುವುದಲ್ಲದೆ, ಆ ಭಾಷೆಯಿಂದೊದಗುವ ಜ್ಞಾನದಿಂದ ವಂಚಿತರಾಗುತ್ತೇವೆ. ಆಂಗ್ಲಭಾಷೆ ಕಡ್ಡಾಯದ ಪಠ್ಯವಿಷಯವಾಗಬಾರದೆಂಬುದೇ ನನ್ನ ವಾದ. ಒಬ್ಬ ವಿದ್ಯಾರ್ಥಿ ಯಾವುದಾದರೂ ಎರಡು ಭಾಷೆಗಳನ್ನು ಅಧ್ಯಯನ ಮಾಡಬೇಕೆಂಬ ಸೂತ್ರವನ್ನು ಬಿಗಿಗೊಳಿಸಿ, ಅವು ಯಾವುವೆಂಬುದನ್ನು ಅವನ ಆಯ್ಕೆಗೆ ಬಿಡುವುದು ಸರ್ವೋತ್ತಮವಾದ ಶೈಕ್ಷಣಿಕ ನೀತಿಯಾಗುತ್ತದೆ. ನಮ್ಮಲ್ಲಿ ತ್ರಿಭಾಷಾ ಸೂತ್ರ ಜಾರಿಯಲ್ಲಿದೆ. ಆದರೆ ಆ ಮೂರಕ್ಕೂ ಸಮಾನಾವಕಾಶ ಕಲ್ಪಿಸುವುದು ತಪ್ಪಾಗುತ್ತದೆ. ಭಾಷಾ ಸಮಸ್ಯೆಯನ್ನು ಕುರಿತ ನನ್ನೀ ವಿಚಾರಗಳನ್ನು ಕುರಿತು ನೀವು ಸಾವಧಾನವಾಗಿ ಆಲೋಚಿಸಬೇಕೆಂದು ವಿನಂತಿಸಿಕೊಳ್ಳುತ್ತೇನೆ.

# ಕನ್ನಡಮಾಧ್ಯಮ ಪ್ರಸಾರ [೧]

ಮೂವತ್ತೇಳನೆಯ ಕನ್ನಡ ಸಾಹಿತ್ಯ ಸಮ್ಮೇಳನದ ವಾರ್ಷಿಕಾಧಿವೇಶನ ಮೂರು ದಿನ ಅವಿಚ್ಛಿನ್ನವಾಗಿ ನಡೆದು ಮುಕ್ತಾಯಗೊಳ್ಳುವ ಸಂದರ್ಭ. ಸಮಾರಾಧನೆ ಪೂರೈಸಿದ ಮೇಲೆ ಎಲೆಗಳನ್ನು ಲೆಕ್ಕಮಾಡಿ ಎಷ್ಟು ಖರ್ಚಾಯಿತೆಂದು ಅಂದಾಜು ಮಾಡುವ ಕೆಲಸದಷ್ಟು ಲೌಕಿಕವಲ್ಲ. ಸ್ವಲ್ಪ ಮಟ್ಟಿಗೆ ಅದರಂತೆ ಅಷ್ಟೆ. ಈ ಮೂರು ದಿನಗಳಲ್ಲಿ ನಾವು ಏನುಕೆಲಸ ಮಾಡಿದ್ದೇವೆ, ಅದರ ಪರಿಣಾಮವಾಗಿ ಮುಂದಿನ ವರ್ಷಕ್ಕಿರಬೇಕಾದ ಸಂಕಲ್ಪಗಳೇನು–ಇವುಗಳ ವಿಷಯ ನಾವು ಆಲೋಚಿಸಬೇಕು. ಮೈಸೂರಿನಲ್ಲಿ ಈ ವರ್ಷ ಈ ಅಧಿವೇಶನ ನಡೆಯುತ್ತಿರುವುದು ಕೂಡ ಅರ್ಥಪೂರ್ಣ,ಶಕುನಪೂರ್ಣ. ಇದು ಇನ್ನೆಲ್ಲಿಯೋ ನಡೆಯಬೇಕಾದದ್ದು ವಿಧಿಯ ವಿನ್ಯಾಸದಿಂದ ನಿಂತುಹೋಗಿ ಇಲ್ಲಿ ನಡೆಯುತ್ತಿದೆ.

ಕರ್ಣಾಟಕ ಮತ್ತು ಭರತಖಂಡದ ಬದುಕಿನಲ್ಲಿ ಸ್ವಾತಂತ್ರ್ಯೋತ್ತರದ ಒಂದು ಸಂಧಿಕಾಲ ಸಮೀಪಿಸುತ್ತಿರುವ ಸನ್ನಿವೇಶ. ಕೇಂದ್ರ ಸರಕಾರ ಪ್ರಾಂತ ಪುನರ್ವಿಂಗಡಣಾ ಸಮಿತಿಯೊಂದನ್ನು ರಚಿಸಿ, ಜನತೆಯೆಲ್ಲಾ ಉತ್ಕಂಠತೆಯಿಂದ ಆ ಸಮಿತಿಯ ಇತ್ಯರ್ಥ ಏನು, ಆ ಇತ್ಯರ್ಥದ ಮೇಲೆ ಸರಕಾರ ಏನು ಕಾರ್ಯಕ್ರಮ ಕೈಗೊಳ್ಳುತ್ತದೆ, ಎಂಬುದನ್ನಿದಿರುನೋಡುತ್ತಿದ್ದಾರೆ. ಅದರ ಸಂಗಡವೇ ಈ ಸಮ್ಮೇಳನ ಮೈಸೂರು ವಿಶ್ವವಿದ್ಯಾನಿಲಯದ ಆಶ್ರಯದಲ್ಲಿ ನಡೆಯುತ್ತಿರುವುದು ಒಂದು ವಿಶೇಷ. ಇದಕ್ಕೆ ಕಿರೀಟಪ್ರಾಯವಾಗಿ ಕರ್ಣಾಟಕ ಸಿಂಹಾಸನಾಧೀಶ್ವರರಾದ ಶ್ರೀಮನ್ಮಹಾರಾಜರು ಅದರ ಉದ್ಘಾಟನೆ ಮಾಡಿದ್ದು ಇನ್ನೂ ಒಂದು ವಿಶೇಷ.

ಈ ಸನ್ನಿವೇಶಗಳನ್ನೆಲ್ಲಾ ಪರ್ಯಾಲೋಚಿಸಿದಾಗ ಏನೋ ಒಂದಾಶೆ ಕೆರಳುತ್ತಿರುವಂತೆ ತೋರುತ್ತದೆ. ಮತ್ತೆ ಕೆಲವರಿಗೆ ಸ್ವಲ್ಪ ಶಂಕೆಯೂ ಕೆರಳಬಹುದು. ಶಂಕೆ ಕೆರಳುವ ಜನರಿಗಿಂತಲೂ ಆಸೆ ಕೆರಳುವ ಜನರೇ ಹೆಚ್ಚಿರಬಹುದೆಂದು ಊಹಿಸುತ್ತೇನೆ. ಹಿಂದೆ ವಿಶ್ವಾವಿದ್ಯಾನಿಲಯ ಕನ್ನಡನಾಡಿನ ಒಂದು ಕೃತಿಗೆ ಭಾರತಸರ್ಕಾರ ಒಂದು ಬಹುಮಾನ ನೀಡಿದಾಗ ಏರ್ಪಡಿಸಿದ ಒಂದು ಸಮಾರಂಭದಲ್ಲಿ ನಮ್ಮ ಮುಖ್ಯಮಂತ್ರಿಗಳು 'ಸಿರಿಗನ್ನಡಂ ಗೆಲ್ಗೆ' ಎಂದು ಬರೆದಿದ್ದ ಲಿಖಿತ ನೋಡಿ 'ಇಂದು ಅದು ಗೆದ್ದಿತು' ಎಂದರು. ನಮ್ಮ ಉಪಕುಲಪತಿಗಳಾದ ಶ್ರೀಮಾನ್ ಡಿಸೋಜಾರವರು ಅದನ್ನು ಪುನರುಕ್ತಿಸುತ್ತ ನನ್ನೊಡನೆ ಎಷ್ಟೋಸಲ ತಮಾಷೆ ಮಾಡಿದ್ದುಂಟು. ಆದರೆ

---

[೧] ೧೩–೬–೧೯೫೬ ಮೈಸೂರಿನಲ್ಲಿ ನಡೆದ ೩೭ನೇ ಸಾಹಿತ್ಯ ಸಮ್ಮೇಳನದಲ್ಲಿ ಮಾಡಿದ ಸಮಾರೋಪ ಭಾಷಣ

ಇದುವರೆಗೆ ಅವರೊಡನೆಯ ವ್ಯವಹಾರವೆಲ್ಲ ಇಂಗ್ಲಿಷ್ ಭಾಷೆಯ ಮುಖಾಂತರವೇ ಆಗಿ, ನಾನು ಅವರಿಗೆ ಕನ್ನಡಬರುತ್ತದೋ ಇಲ್ಲವೋ ಎಂದು ಸಂದೇಹಿಸಿದ್ದೆ, ಆದರೆ ಅವರು ತಮ್ಮ ಭಾಷಣವನ್ನು ಸ್ವಚ್ಛವಾದ ಧೀರಗಂಭೀರ ಶೈಲಿಯಲ್ಲಿ ಕನ್ನಡದಲ್ಲಿಯೇ ಮಾಡಿದರಾದ್ದರಿಂದ 'ಇಂದು ಕನ್ನಡ ಗೆದ್ದಿತು' ಎನ್ನುವುದಕ್ಕೆ ಒಂದು ಮುನ್ಸೂಚನೆಯಾಗಿದೆ. ನಮ್ಮ ವಿಶ್ವವಿದ್ಯಾನಿಲಯದ ದೀರ್ಘಚರಿತ್ರೆಯಲ್ಲಿ ಇಂಥ ಭಯಂಕರ ಘಟನೆ ಹಿಂದೆಂದೂ ನಡೆದಂತೆ ಕಾಣೆ, ಉಪಕುಲಪತಿಗಳಂಥ ಘನವ್ಯಕ್ತಿ ಇಂತಹ ದೊಡ್ಡಸಭೆಯಲ್ಲಿ ತೊಳ್ತುನುಡಿಯಲ್ಲಿ (Vernacular) ಮಾತನಾಡುವುದು ಎಂದರೇನು? ಆದರೆ ಆ ಕಾಲವೆಲ್ಲಾ ಈಗ ದುಃಸ್ವಪ್ನದೋಪಾದಿಯಲ್ಲಿ ಹಿಂದಕ್ಕೆ ಸರಿದು ಈಗತಾನೇ ಕನ್ನಡದ ದೇವಿ ಎಚ್ಚರಗೊಳ್ಳುತ್ತಿದ್ದಾಳೆ. ಇನ್ನು ಮುಂದೆ ಏನಿದ್ದರೂ ಸುಖಸ್ವಪ್ನ ಸಂಚಾರವೇ ಸರಿ.

ನಮ್ಮ ನಾಡಿನ ವೀರರೂ ಆಶಾವಾದಿಗಳೂ ಸದಾ ಕೈಯಲ್ಲಿ ಅಂಕುಶವನ್ನೇ ಹಿಡಿದಂತೆ ವರ್ತಿಸುತ್ತಿರುವವರೂ ಆದ ಶ್ರೀ ಕಾರಂತರು ತಮ್ಮ ಖಾರವಾದ ಭಾಷಣವನ್ನು ನಿಮಗೆಲ್ಲ ಸಮರ್ಪಿಸಿದ್ದಾರೆ. ಶ್ರೀ ಕಾರಂತರು ಅವರ ಕಾದಂಬರಿಗಳಲ್ಲಿ ಕಲೆಯ ಮಹಿಮೆಯಿಂದ ಸ್ವಲ್ಪ ಅಕಟುವಾಗಿ ಹಿಂದೆ ನಿಲ್ಲುತ್ತಾರೆ. ಉಳಿದ ಕೃತಿಗಳಲ್ಲಿ ಆ ಕಟುತ್ವ ಎದ್ದು ಕಾಣುತ್ತದೆ. ನಿನ್ನೆಯೂ ಬಹುಜನರಿಗೆ ಅವರ ಭಾಷಣದಲ್ಲಿ ಆ ಖಾರ, ಕಟುತ್ವ ಸ್ವಲ್ಪಮಟ್ಟಿಗೆ ಕಂಡಿರಬಹುದು. ಆದರೆ ಏಕೆ ಹಾಗೆ ಅವರು ನುಡಿಯುತ್ತಾರೆ? ಇಷ್ಟು ಹಿತಕರವಾದ, ಸ್ನೇಹಶೀಲವಾದ, ಸೌಮ್ಯವಾದ ವ್ಯಕ್ತಿ, ನಮ್ಮ ಕ್ಷೇಮದ ವಿಷಯವಾಗಿ ನಮ್ಮ ಭಾಷೆಯ ವಿಷಯವಾಗಿ ಆಲೋಚನೆಗೆ ತೊಡಗಿದಾಗ ಏತಕ್ಕೆ ಹೀಗೆ ಮಾತನಾಡುತ್ತಾರೆ, ಎಂಬುದನ್ನು ನಾವು ಗಮನಿಸಬಹುದು. ಅವರು ಮೊದಲು ಪ್ರಾರಂಭ ಮಾಡುತ್ತಾ, ತುಂಬ ವೀರೋಜ್ವಲ ಭಾಷೆಯಲ್ಲಿ ಕರ್ಣಾಟಕ ಏಕೀಕರಣದ ವಿಚಾರವಾಗಿ ಬಹುಜನರು ಶ್ಲಾಘಿಸಬಹುದಾದ ಮಾತುಗಳನ್ನೇ ಆಡಿದ್ದಾರೆ. ತರುವಾಯ ಕನ್ನಡ ಸಾಹಿತ್ಯದ ವಿಷಯದಲ್ಲಿ ಕೆಲವರಿಗೆ ರುಚಿಸಬಹುದಾದ, ಮತ್ತೆ ಕೆಲವರಿಗೆ ರುಚಿಸಲಾರದ ಮಾತುಗಳನ್ನೂ ಆಡಿದ್ದಾರೆ. ಸಾಹಿತ್ಯಗೋಷ್ಠಿಗಳಲ್ಲಿ ಚರ್ಚಿಸಲನುಕೂಲವಾಗುವಂತೆ ಟೀಕೆ ಟಿಪ್ಪಣಿ ಸಮಸ್ಯೆಗಳನ್ನವರು ಒದಗಿಸಿದ್ದಾರೆ. ಎಲ್ಲಕ್ಕೂ ಮುಖ್ಯವಾಗಿ ಅವರು ಮುಂದೆ ಕನ್ನಡ ತಲೆಯೆತ್ತುವ ಬಗೆ ಹೇಗೆ? ಕನ್ನಡದ ಸ್ಥಾನ, ಗ್ರಂಥ ನಿರ್ಮಾಣ ಇವುಗಳ ವಿಷಯದಲ್ಲಿ ಅನೇಕ ಸಲಹೆಗಳನ್ನಿತ್ತಿದ್ದಾರೆ. ಮಹಾ ಜನರು ವಿಶ್ವವಿದ್ಯಾನಿಲಯಗಳು ಹಾಗೂ ವಿದ್ಯಾಸಂಸ್ಥೆಗಳು ಏನು ಕೆಲಸ ಮಾಡಬೇಕೆಂಬುದನ್ನು ವಿವರಿಸಿದ್ದಾರೆ. ಆ ವಿಷಯದಲ್ಲಿ ಸ್ವಾಗತ ಸಮಿತಿಯ ಕಾರ್ಯಧ್ಯಕ್ಷನಾಗಿಯೂ ಮೈಸೂರು ವಿಶ್ವವಿದ್ಯಾನಿಲಯದ ತಕ್ಕಮಟ್ಟಿನ ಪ್ರತಿನಿಧಿಯಾಗಿಯೂ ಒಂದು ಆಶ್ವಾಸನೆಯನ್ನವರಿಗೆ ಕೊಡುತ್ತೇನೆ. ಮೈಸೂರು ವಿಶ್ವವಿದ್ಯಾನಿಲಯ ಹಲವರ್ಷಗಳಿಂದ ತಕ್ಕಷ್ಟು ಪ್ರಮಾಣದಲ್ಲಿ, ಅವರು ಯಾವ ಕೆಲಸವನ್ನು ನಡೆಯಬೇಕೆಂದಪೇಕ್ಷಿಸಿ ಮಾತನಾಡಿದರೋ ಆ ಕೆಲಸವನ್ನೇ ಕೈಕೊಂಡು ನಡೆಸುತ್ತಿದೆ. ಒಮ್ಮೊಮ್ಮೆ ವೇಗದಲ್ಲಿ ಹೋಗುತ್ತದೆ; ಒಮ್ಮೊಮ್ಮೆ ಸ್ವಲ್ಪ

ಕುಂಟುತ್ತದೆ. ಆದರೆ ಎಂದೂ ಕುಳಿತಿಲ್ಲ; ಅಥವಾ ಎಲ್ಲಿಯೂ ದಾರಿ ತಪ್ಪಿಲ್ಲ. ಇನ್ನು ಮುಂದೆ ಜನತೆ ಕೃತಿಗಳನ್ನು ಕೊಂಡು ಓದುವಿಕೆ ಮತ್ತು ಕನ್ನಡ ಶಿಕ್ಷಣ ಮಾಧ್ಯಮ ಎಲ್ಲೆಡೆಯೂ ವ್ಯಾಪಕವಾಗಿ ಹಬ್ಬುವಿಕೆ, ಇವೇ ಮೊದಲಾದ ಪ್ರೇರಣೆಗಳ ಮೂಲಕ ಇಡೀ ಕನ್ನಡ ನಾಡಿನ ಪ್ರೋತ್ಸಾಹ ದೊರೆತದ್ದಾದರೆ ಈ ಕೆಲಸವನ್ನು ಇನ್ನೂ ಉಜ್ವಲವಾಗಿ ಕೈಗೊಳ್ಳುತ್ತೇವೆ. ಈಗಲೂ ಆ ಕೆಲಸ ಅಷ್ಟೇನೂ ಮಂದಗತಿಯಿಂದ ಸಾಗುತ್ತಿಲ್ಲ. ಬಹುಶಃ ಆ ವಿಷಯಗಳ ವಿವರವೆಲ್ಲಾ ಅವರಿಗೆ ತಿಳಿದಿದ್ದರೆ ಅವರು ನಮ್ಮ ಬೆನ್ನುತಟ್ಟಿಯೂ ಒಂದು ಮಾತನಾಡುತ್ತಿದ್ದರೆಂದು ನಾನಂದುಕೊಂಡಿದ್ದೇನೆ.

ಈ ಸಂದರ್ಭದಲ್ಲಿ ಮೂರು ಪ್ರಮುಖ ಗೋಷ್ಠಿಗಳು ನಡೆದಿವೆ. ಒಂದು, ಲೇಖಕ ಗೋಷ್ಠಿ, ಎರಡು, ಶಾಸ್ತ್ರ–ಸಾಹಿತ್ಯಗೋಷ್ಠಿ,ಮೂರು, ವಿಮರ್ಶ ಗೋಷ್ಠಿ.

ಲೇಖಕಗೋಷ್ಠಿಯಲ್ಲಿ ಚನ್ನಬಸಪ್ಪನವರ ಸ್ವಾಗತ ಭಾಷಣ, ಸಿದ್ಧಯ್ಯ ಪುರಾಣಿಕರ ದಾರ್ಶನಿಕ ಭಾಷಣ ನಡೆದುವು. ಅವರು ಬಹುಶಃ ಈಗಿನ ಲೇಖಕರಿಗೆ ನಮ್ಮ ಪ್ರಾಚೀನ ದರ್ಶನವನ್ನು ಪರಿಚಯ ಮಾಡಿಕೊಟ್ಟಿದ್ದಾರೆ. ಒಂದೊಂದು ರಾಷ್ಟ್ರಕ್ಕೂ ಒಬ್ಬೊಬ್ಬ ವ್ಯಕ್ತಿಗಿರುವಂತೆ ಒಂದೊಂದು ಪ್ರಮುಖವಾದ ಧರ್ಮ ದೈವದತ್ತವಾಗಿರುತ್ತದೆ. ಭರತಖಂಡಕ್ಕೆ ಅಂಥ ಧರ್ಮ ಯಾವುದೆಂಬುದನ್ನು ವೇದೋಪನಿಷತ್ತುಗಳ ಆಧಾರದಿಂದ ಮತ್ತು ನಮ್ಮ ದ್ರಷ್ಟಾರರ ವಾಕ್ ಪ್ರವಾಹದ ಮೂಲಕ ನಿರ್ಣಯಿಸಿಕೊಳ್ಳಬಹುದು. ಆಧ್ಯಾತ್ಮಿಕವಾಗಿ ತಾನು ಮುಂದುವರಿದು, ಪ್ರಪಂಚವನ್ನೂ ಆ ಮಾರ್ಗದಲ್ಲಿ ಕೊಂಡೊಯ್ಯುವುದೇ ಭಾರತೀಯರ ಜೀವನೋದ್ದೇಶ. ಭಾರತೀಯರ ಜೀವನ ಯಾಪನಾ ವಿಧಾನ ಮತ್ತು ವ್ಯವಹಾರಗಳು ಸಹ ಆ ಆಧ್ಯಾತ್ಮಿಕ ಸಾಧನೆಗೆ ನೆರವಾಗಬೇಕು. ನಮ್ಮ ಸ್ವಾತಂತ್ರ್ಯ ಸಂಗ್ರಾಮದ ಕೇಂದ್ರ ಚೈತನ್ಯಸ್ವರೂಪಿಗಳಾದ ಮಹಾತ್ಮಾಗಾಂಧಿಯವರು ಸಹ ಇಂಥ ಆಧ್ಯಾತ್ಮಿಕ ವ್ಯಕ್ತಿಯೇ ಆಗಿದ್ದರು. ಅವರ ಸ್ವಾತಂತ್ರ್ಯ ಸಂಗ್ರಾಮದ ಎಲ್ಲ ಪ್ರಕಾರಗಳಲ್ಲೂ ಈ ಆಧ್ಯಾತ್ಮಿಕ ಶಕ್ತಿಯೇ ಪ್ರವಹಿಸಿ ತನ್ನ ಕೆಲಸ ಸಾಧಿಸಿತು. ಅಷ್ಟೇ ಅಲ್ಲ, ಆ ಪ್ರಮಾಣದಲ್ಲಿ ಆಧ್ಯಾತ್ಮಿಕತೆ ಇದೆಯೆಂದು ಹೆಮ್ಮೆ ಕೊಚ್ಚಿಕೊಳ್ಳುವಷ್ಟಲ್ಲದಿದ್ದರೂ, ನಮ್ಮ ಭರತಖಂಡದ ಈಗಿನ ವಿದೇಶಾಂಗ ನೀತಿಯನ್ನು ನಾವು ಪರಿಶೀಲಿಸಿದರೆ ಅಲ್ಲೂ ಸಹ ಆ ಚೇತನವೇ ಪ್ರವಹಿಸುತ್ತಿರುವುದನ್ನು ಚೆನ್ನಾಗಿ ಕಾಣಬಹುದು. ಸ್ನೇಹ, ಸೌಹಾರ್ದ, ಶಾಂತಿ, ಎಲ್ಲರೊಡನೆಯೂ ಮೈತ್ರಿ–ನಮ್ಮದನ್ನು ಸ್ವಲ್ಪ ಬಿಟ್ಟುಕೊಟ್ಟರೂ ಚಿಂತೆಯಿಲ್ಲ, ಜಗಳ ಬೇಡ; ಯಾವ ಸ್ವಲ್ಪಕ್ಕಾಗಿ ಕಾದುತ್ತೇವೋ ಆ ಸ್ವಲ್ಪಕ್ಕಿಂತಲೂ ಅತಿಯಾದ ಪ್ರಮಾಣದಲ್ಲಿ ನಷ್ಟಹೊಂದುತ್ತೇವೆ, ಎಂಬ ಭಾವನೆಗಳಿಂದ ಕೂಡಿದ ಧರ್ಮವನ್ನು ನಮ್ಮ ರಾಜಕಾರಣ ಪಟುಗಳು ರಾಜಕೀಯದಲ್ಲೂ ಅನುಸರಿಸಿಕೊಂಡು ಹೋಗುತ್ತಿದ್ದಾರೆ. ಈ ಒಂದು ವಿಶಾಲ ದೃಷ್ಟಿಯನ್ನಿಟ್ಟುಕೊಂಡು ಅವರು ಲೇಖಕ–ಗೋಷ್ಠಿಯಲ್ಲಿ ಸಾಹಿತಿಗಳಿಗೆ ಮಾರ್ಗದರ್ಶನ ಸೂಚಿಸಿದ್ದಾರೆ.

ಇನ್ನು ಶಾಸ್ತ್ರ–ಸಾಹಿತ್ಯ ಗೋಷ್ಠಿ. ವೀರಪ್ಪನವರು ಸ್ವಾಗತ ಭಾಷಣ

ಮಾಡಿದರು. ಆ ಭಾಷಣದಲ್ಲಿ ವೈಜ್ಞಾನಿಕ ವಿಷಯಗಳನ್ನು ಬೋಧಿಸಲು ಏನೇನು ಕಾರ್ಯಕ್ರಮಗಳನ್ನು ಕೈಗೊಳ್ಳಬೇಕು, ಯಾವ ಯಾವ ವಿಧಾನಗಳನ್ನನುಸರಿಸಬೇಕು, ಎಂಬುದನ್ನು ವಿವರಿಸಿದರು. ಅಧ್ಯಕ್ಷ ನರಸಿಂಹಯ್ಯನವರು ಈ ಯುಗದ ವೈಜ್ಞಾನಿಕ ಅವತಾರ ಪುರುಷರಂತಿರುವ ಐನ್‌ಸ್ಟೈನ್ ಮಹಾಶಯನ ಜೀವನ ಚರಿತ್ರೆಯನ್ನು ಹೇಳುವ ನೆವದಲ್ಲಿ ನಮಗೆ ಒಂದು ಆದರ್ಶ ಸೂಚನೆ ಮಾಡಿ ಮಾರ್ಗದರ್ಶನ ಮಾಡಿದ್ದಾರೆ. ಅಲ್ಲದೆ ಕನ್ನಡದಲ್ಲಿ ವಿಜ್ಞಾನವನ್ನು ಬೋಧಿಸುವುದಕ್ಕೆ, ನಾವು ಏನು ದಾರಿ ಹಿಡಿಯಬೇಕು ಎಂಬ, ಬಹುಶಃ ಎಲ್ಲರೂ ಒಪ್ಪಬಹುದಾದ,ಕೆಲವು ದಾರಿಗಳನ್ನು ಸೂಚಿಸಿದ್ದಾರೆ. ಏಕೆಂದರೆ ಇಂದು ನಮಗೆಲ್ಲರಿಗೂ ಕನ್ನಡ ಪ್ರಮುಖ ಭಾಷೆಯಾಗಬೇಕು. ಶಿಕ್ಷಣಮಾಧ್ಯಮವಾಗಬೇಕು ಎಂಬುದು ದೊಡ್ಡ ಹಂಬಲ. ಭಾಷಣಗಳನ್ನೇನೋ ಉಜ್ವಲವಾಗಿ ಮಾಡಬಹುದು, ಆವೇಶ ಪೂರ್ಣವಾಗಿ ಘೋಷಿಸಬಹುದು. ಆದರೆ 'ಹೂ, ಸರ್ವಾಧಿಕಾರಿಯಾಗಿ ನಿರ್ವಹಿಸಪ್ಪಾ ನೀನು' ಎಂದು ಯಾರಾದರೂ ಕೇಳಿದಾಗ, 'ಆಗ ಹೇಗೆ ಮಾಡೋದಪ್ಪಾ' ಎಂದು ಯೋಚಿಸಬೇಕಾಗುತ್ತದೆ. ನಮ್ಮಲ್ಲಿ ಪರಿಭಾಷೆ ಇಲ್ಲ ಎನ್ನುವವರು ಕೆಲವರು, ಸಾಧ್ಯವೇ ಇಲ್ಲ ಎನ್ನುವವರು ಕೆಲವರು. 'ಏನು ಪರ್ವಾಗಿಲ್ಲ. ಪ್ರತಿಯೊಂದಕ್ಕೂ ಒಂದು ಹೊಸಪದವನ್ನು ಸೃಜಿಸಿಯೇ ಬಿಡಬಹುದು' ಅಂತ ಕೆಲವರು. 'ಪ್ರಕೃತ ಕರ್ಣಾಟಕದಲ್ಲಿ ಎರಡು ಕೋಟಿ ಜನ ಹುಟ್ಟಿಲ್ಲವೇ? ಎರಡು ಕೋಟಿ ಜನಕ್ಕೆ ಎರಡುಕೋಟಿ ಹೆಸರನ್ನು ನಾವಿಡುತ್ತಿಲ್ಲವೇ? ಹೀಗಿರುವಾಗ ವಿಜ್ಞಾನದಲ್ಲಿ ಪ್ರತಿಯೊಂದಕ್ಕೂ ಒಂದೊಂದು ಹೆಸರಿಡಬಹುದಲ್ಲಾ' ಎಂದು ಹೇಳುವವರು ಕೆಲರು.

ಆದರೆ ಶ್ರೀಯುತರು ಮಧ್ಯಮ ಮಾರ್ಗವೊಂದನ್ನು ಸೂಚಿಸಿ ಅಂತರಾಷ್ಟ್ರೀಯವಾದ ಪರಿಭಾಷೆಯನ್ನೇ ಉಪಯೋಗಿಸುವುದು ಸೂಕ್ತವೆಂದು ತಿಳಿಸಿದ್ದಾರೆ. ಎಲ್ಲೆಲ್ಲಿ ಪದಗಳು ಆಗಲೇ ಬಳಕೆಗೆ ಬಂದುಬಿಟ್ಟಿವೆಯೋ, ಎಲ್ಲೆಲ್ಲಿ ಅವೆಲ್ಲಾ ಸುಲಭಸಾಧ್ಯವೋ ಅಲ್ಲೆಲ್ಲ ಸ್ವಲ್ಪ ಬದಲಾವಣೆಗಳನ್ನು ಮಾಡಿಕೊಂಡು ಉಪಯೋಗಿಸಿಕೊಳ್ಳಬಹುದು. ಆದರೆ ಅಂತರರಾಷ್ಟ್ರೀಯ ಪರಿಭಾಷೆಯನ್ನೇ, ಸ್ವೀಕರಿಸುವುದು ತುಂಬಾ ಶ್ರೇಯಸ್ಕರ. ಮೋಟಾರಿನಲ್ಲಿ ಕೆಲಸ ಮಾಡುವ ಯಾವ ಕಂಡಕ್ಟರನ್ನು ಕೇಳಿದರೂ ಸಹ ಈ ವಿಷಯದಲ್ಲಿ ನಮಗೆ ವಿವೇಕ ಹೇಳಬಲ್ಲ. ಅವನು ಬ್ಯಾಟ್ರಿ, ಫ್ಯಾನ್ ಬೆಲ್ಟ್ ಇವುಗಳನ್ನೆಲ್ಲಾ ಭಾಷಾಂತರ ಮಾಡಿ ಅಂತ ಹೇಳುವುದಿಲ್ಲ. ನಮಗೆ ಕಾರು ನಡೆಸಬೇಕಾದ್ದು ಮುಖ್ಯ. ಕಾರಿನೊಳಗಡೆ ಮನುಷ್ಯನ ಅಂಗಾಂಗಗಳಲ್ಲಿರುವ ಅವಯವಗಳ ಸಂಖ್ಯೆಗಿಂತ ಹೆಚ್ಚು ಪದಾರ್ಥಗಳಿವೆ, ಅಷ್ಟು ಪದಾರ್ಥಗಳ ಹೆಸರನ್ನವನು ಇಂಗ್ಲಿಷ್ ಭಾಷೆಯ ಮೂಲಕ ತಿಳಿದುಕೊಳ್ಳುತ್ತಾನೆ. ಇಂಗ್ಲಿಷ್ ಪದಗಳನ್ನು ತದ್ಭವೀಕರಿಸಿಕೊಂಡು ಬಳಸುತ್ತಾನೆ. ಇಡೀ ಎಂಜಿನ್ನನ್ನೆಲ್ಲಾ ಬಿಚ್ಚಿ, ಮತ್ತೆ ಕೂಡ್ಸಿ, ವಾಲ್ವ್ ಗ್ರೈಂಡಿಂಗೋ ಏನೋ ಅವನು ಹಾಗೇ ಹೇಳುತ್ತಾನೆ. 'ನಾನು ಇಂಗ್ಲಿಷ್ ಮಾತನಾಡುತ್ತಿದ್ದೇನೆಂದು ಅವನೆಂದೆಂದಿಗೂ ಭಾವಿಸುವುದಿಲ್ಲ. ಕನ್ನಡದಲ್ಲಿಯೇ ಮಾತಾಡಿದ್ದೇನೆಂದು ತಿಳಿಯುತ್ತಾನೆ. ಆದರೆ ಆತನ ಮಾತಿನ

ಪರಿಭಾಷೆಯೆಲ್ಲಾ ಇಂಗ್ಲಿಷ್. ಕಾರು ಚೆನ್ನಾಗಿ ನಡೆಯಬೇಕು, ಕಾರು ಚೆನ್ನಾಗಿರಬೇಕು– ಇಷ್ಟೇ ನಮಗೆ ಬೇಕಾದ್ದು. ಅಚ್ಚಗನ್ನಡದಲ್ಲಿಯೇ ಕಾರು ನಡೆಸುತ್ತೇನೆಂದು ಹೇಳುವುದಾಗಲೀ, ಅಚ್ಚಗನ್ನಡದಲ್ಲಿಯೇ ಇಂಜಿನ್ ಇದು ಮಾಡು ಅದು ಮಾಡು ಎಂದು ಆಜ್ಞಾಪಿಸುವುದಾಗಲೀ ಅವಿವೇಕವಾಗುತ್ತದೆ. ಆಯುರ್ವೇದದ ಒಂದು ಪುಸ್ತಕ ತೆಗೆದುಕೊಂಡರೆ ಲಕ್ಷಾಂತರ ಮೂಲಿಕೆಗಳ ಹೆಸರುಗಳನ್ನೆದುರುಗೊಳ್ಳುತ್ತೇವೆ, ಅವುಗಳ ಅರ್ಥ ಗಂಧ ಯಾವುದೂ ನಮಗೆ ಗೊತ್ತಿರುವುದಿಲ್ಲ . ಆದರೂ ಓದುತ್ತೇವೆ. ಅಂತೆಯೇ ಯಂತ್ರವಿಜ್ಞಾನದ ಗ್ರಂಥಗಳನ್ನು ನಾವು ಆದರಿಸಬೇಕು. ಪದ ಯಾವ ಭಾಷೆಯದಾದರೂ ಅದಕ್ಕೊಂದು ವಾಚ್ಯಾರ್ಥ, ಒಂದು ಧ್ವನಿ ಇರುತ್ತವೆ. ಪ್ರತಿ ಪದಕ್ಕೂ ಮತ್ತೊಂದು ಪದ ಬೇಕೆನ್ನುವುದಾದರೆ ನೂರು ವರ್ಷವಾದರೂ ನಾವು ವಿಜ್ಞಾನವನ್ನು ಬೆಳೆಸಲಾರೆವು. ಸಸ್ಯಶಾಸ್ತ್ರದಲ್ಲಿ ಐವತ್ತು ಸಾವಿರ ಸಸ್ಯಗಳ ಹೆಸರಿರಬಹುದು; ವೈದ್ಯಶಾಸ್ತ್ರದಲ್ಲಿ ಆಯುಧಗಳ ಹೆಸರೂ, ಔಷಧಿಗಳ ಹೆಸರೂ ಸೇರಿ ಒಂದು ಕೋಟಿ ಆಗಬಹುದು. ಇವುಗಳನ್ನೆಲ್ಲಾ ಭಾಷಾಂತರ ಮಾಡು ಅಂದರೆ ಸಾಧ್ಯವೆ? ವೈದ್ಯರಿಗೆ ಬೇರೆ ಕೆಲಸವಿಲ್ಲವೆ? ಹಿಂದೆ ಟೈಫಾಯಿಡ್ ಗೆ ವಿಷಮಶೀತಜ್ವರ ಎಂದು ಕರೆಯುತ್ತಿದ್ದರು. ಆದರೆ ಈಗ ವಿಷಮಶೀತಜ್ವರ ಎಂದರೆ ಯಾರಿಗೂ ಗೊತ್ತಾಗುವುದಿಲ್ಲ.ಟೈಫಾಯಿಡ್ ಎಂದರೆ ಎಲ್ಲರಿಗೂ ಗೊತ್ತಾಗುತ್ತೆ. ಹಾಗೆಯೇ ಮನೆಯಲ್ಲಿ ನಾವು ಬಳಸುವ ಲೈಟು, ಬಲ್ಬು, ಸ್ವಿಚ್ಚು ಎಂಬ ಪದಗಳು ಹುಡುಗರಿಗೆ ಇಂಗ್ಲೀಷ್ ಅಂತ ಗೊತ್ತಿಲ್ಲ. ಇಂಗ್ಲಿಷ್ ಓದಿದನಂತರ 'ಹೋ! ಇದು ಇಂಗ್ಲಿಷ್ ಪದ' ಅಂತ ಗೊತ್ತಾಗುತ್ತದೆ ಅವರಿಗೆ. ನಮ್ಮ ನಿಘಂಟುವಿಗೆ ಈ ಶಾಸ್ತ್ರೀಯ ಪರಿಭಾಷೆ ಲಕ್ಷೋಪಲಕ್ಷವಾಗಿ ಬರುತ್ತದೆ. ಇವುಗಳನ್ನು ಅನುವಾದಿಸುವ ಚಪಲತೆಗೆ ಮಾರುಹೋಗಿ ನಾವು ತುಂಬ ಹಾಳಾಗಬಾರದು. ಏಕೆಂದರೆ ಅಖಿಲ ಭರತಖಂಡಕ್ಕೆ ಇದು ಅನ್ವಯಿಸಬೇಕು. ಒಂದೊಂದು ಪಾರಿಭಾಷಿಕ ಪದಕ್ಕೂ ಒಂದೊಂದು ದೇಶಭಾಷೆಯಲ್ಲಿಯೂ ಭಿನ್ನಭಿನ್ನ ಪದವಿರುವ ಪಕ್ಷಕ್ಕೆ ಈ ದೇಶದಲ್ಲಿ ವೈಜ್ಞಾನಿಕ ಪ್ರಗತಿ ಸಾಧಿಸಲಾಗದು. ಹಿಂದಿಯಲ್ಲಿರುವ ಶಬ್ದವೇ ಸರ್ವತ್ರ ಬಳಕೆಯಾಗಬೇಕೆನ್ನುವುದಾದರೆ ಇಂಗ್ಲಿಷೇ ಇರಲೆನ್ನಬೇಕಾಗುತ್ತದೆ. ಅದು ಮತ್ತೆ ನಮ್ಮ ಮಕ್ಕಳಿಗೆ ಹೊರೆಯಾಗಬಾರದು.

ಇನ್ನು ವಿಮರ್ಶಾಗೋಷ್ಠಿ. ಕನ್ನಡ ವಿಮರ್ಶಕರ ಅಗ್ರಪಂಕ್ತಿಯಲ್ಲಿ ವಿರಾಜಿಸುವ ಶ್ರೀಮಾನ್ ರಂಗಣ್ಣನವರ ನೇತೃತ್ವದಲ್ಲಿ, ಪರಿಪಕ್ವ ನಿರ್ದೇಶನದಲ್ಲಿ ಶ್ರೀಮಾನ್ ಮುಗಳಿಯವರ ಅಧ್ಯಕ್ಷತೆಯಲ್ಲಿ ನಡೆದಿದೆ. ಮುಗಳಿಯವರ ಭಾಷಣ ಅತ್ಯಂತ ಪ್ರೌಢವಾದದ್ದು; ತುಂಬ ಸಂಯಮಶೀಲವಾದದ್ದು; ವಿಮರ್ಶಗೋಷ್ಠಿಗೆ ಅತ್ಯಂತ ಅರ್ಹವಾದ ಭಾಷಣ ಎಂದು ಓದಿದವರೆಲ್ಲ ತಿಳಿಯಬಹುದು.

ಬಹುಶಃ ಅಲ್ಲಿ ನಡೆದ ಚರ್ಚೆಯಲ್ಲಿ ಭಾಗವಹಿಸಲಾಗಲೀ ಸಾಕ್ಷಿಯಾಗಿ ಇರಲಾಗಲೀ ಸಾಧ್ಯವಾಗಲಿಲ್ಲ. ಏನೋ ಕಾದಂಬರಿಗಳ ವಿಚಾರ ಬಂದಿತಂತೆ. ಆದರೆ ನಾನು ಕೊನೆಯಲ್ಲಿ ಕೇಳಿದಾಗ ಯೋಗ್ಯರು ಸಮ್ಮತಿಸಬಹುದಾದ ಇತ್ಯರ್ಥವನ್ನೇ ಸಮ್ಮೇಳನ ಅಥವಾ ಗೋಷ್ಠಿ ಕೈಗೊಂಡಿತೆಂಬ ವಾಕ್ಯ ನನ್ನ ಕಿವಿಗೆ ಬಿತ್ತು. ಅದರಿಂದ

ನನಗೆ ತುಂಬ ಸಂತೋಷವಾಯಿತು. ವಿಮರ್ಶೆಯ ಉದ್ದೇಶ ಮುಖ್ಯವಾಗಿ ರಸಾಸ್ವಾದನೆ; ಆ ರಸಾಸ್ವಾದನೆ ಎಂದೂ ವಿಷಾಸ್ವಾದನೆ ಆಗಬಾರದು ಎನ್ನುವುದನ್ನು ಅದು ನಿರ್ದೇಶಿಸಿತು ಎಂದು ಕೇಳಿದೆ.

ಕೊನೆಯದಾಗಿ ಬೇಂದ್ರೆಯವರ, ಅವರ ಹೆಸರಿಗೆ ಯಾವ ವಿಶ್ಲೇಷಣೆಗಳನ್ನೂ ಅಂಟಿಸದೆ, ಬರಿ 'ಬೇಂದ್ರೆ' ಎನ್ನುತ್ತೇನೆ. ಏಕೆಂದರೆ, ಎಲ್ಲಕ್ಕಿಂತಲೂ ದೊಡ್ಡ ವಿಶೇಷಣ ಆ ಹೆಸರು. ಅವರ ಅಧ್ಯಕ್ಷತೆಯಲ್ಲಿ ಕವಿಮೇಳ ನಡೆಯಿತು. ಬಹುಶಃ ಅದರಲ್ಲಿ ಬಹುಭಾಗವನ್ನೆಲ್ಲ ನೀವು ಸವಿದು ರಸಾಸ್ವಾದನ ಮಾಡಿದ್ದೀರಿ, ನಾನದರ ತುದಿಯಲ್ಲಿ ಬಂದು ನೋಡಿದೆ ಅಷ್ಟೆ. ಮೂರುದಿನದ ಸಮ್ಮೇಳನ ಈ ರೀತಿ ನಡೆದಿದೆ.

ಟೀಕೆ ಮಾಡುವ ಕೆಲವರು ಮೊದಲೇ ಹೇಳುತ್ತಾರೆ. ಪರಿಷತ್ತಿನದು ಮೂರು ದಿನದ ಬಾಳು ಎಂದು. ಮೂರು ದಿನದ ಬಾಳಿನನಂತರ ನಿದ್ರೆ; ಚಳಿ ನಿದ್ರೆ (winter sleep) ಮತ್ತೊಂದು ಬೇಸಿಗೆ ಬಂತೆಂದರೆ ಪುನಃ ಎಚ್ಚರ; ಆಗ ಮೂರು ದಿನದ ಬಾಳು ಬಾಳಿ, ನಂತರ ಗಾಢ ನಿದ್ರೆಯಲ್ಲಿ ಲೋಕವನ್ನು ಮರೆತುಬಿಡುತ್ತದೆ ಎಂದು ಅವರು ಟೀಕಿಸುತ್ತಾರೆ. ಸಾಹಿತ್ಯದ ಕೆಲಸವಾಗಲಿ ಆಧ್ಯಾತ್ಮಿಕ ಕೆಲಸವಾಗಲಿ ಮಣ್ಣಿನ ಕೆಲಸದ ಪ್ರಮಾಣವನ್ನು ತೋರಿಸುವಂತೆ ಸಾಧ್ಯವಿಲ್ಲ. ಅದು ದೃಷ್ಟಿಗ್ರಾಹ್ಯವೂ ಅಲ್ಲ, ಮುಷ್ಟಿ ಗ್ರಾಹ್ಯವೂ ಅಲ್ಲ. ಅಂದರೆ, ಲಕ್ಕವಳಿ ಅಣೆಕಟ್ಟೆಗೆ ಹೋಗಿ ನಿಂತುಕೊಂಡರೆ ಗೊತ್ತಾಗುತ್ತೆ, ಅಣೆಕಟ್ಟಿನ ನಾನಾ ಭಾಗಗಳಲ್ಲಿ ಅನೇಕ ಜನ ಕೆಲಸ ಮಾಡುತ್ತಾರೆಂಬುದು. ಹುತ್ತ ಕಟ್ಟುವ ಒರಲೆಗಳು ಕೂಡ ಅಷ್ಟು ಕೆಲಸ ಮಾಡುವಂತೆ ತೋರುವುದಿಲ್ಲ. ಅದನ್ನು ನೋಡಿದರೆ ಸಂತೋಷವೆ ಸಂತೋಷ. ನಮ್ಮ ದೇಶ ಎಷ್ಟು ಮುಂದುವರಿಯುತ್ತಿದೆ ಎಂದು. 'ಎಷ್ಟು ಕೆಲಸ ಮಾಡಿದ್ದೀ' ಅಂದರೆ ಅವನು ರಾಶಿ ಮಣ್ಣು ತೋರಿಸುತ್ತಾನೆ. ಇದು ನಮಗೆ ಅರ್ಥವಾಗುತ್ತದೆ. ಆದರೆ ಯಾವನಾದರೂ 'ನಾನು ಬೆಳಗಿನಿಂದ ಒಂದು ವಿಚಾರ ಕುರಿತು ಆಲೋಚನೆ ಮಾಡುತ್ತಾ ಇದ್ದೇನೆ' ಅಂದರೆ, 'ಅಯ್ಯೋ ಸೋಮಾರಿ! ಚೆನ್ನಾಗಿ ದೋಸೆ ತಿಂದು ಕುಳಿತಿದ್ದೀಯ' ಅನ್ನುವುದುಂಟು. ಅಥವಾ, 'ಏನೋ ಬರೆಯುತ್ತಾ ಇದ್ದೇನೆ' ಎಂದು ಹೇಳಿ ಒಂದು ವರ್ಷದಲ್ಲಿ ಮೂರು ಪುಟವೋ ನಾಲ್ಕು ಪುಟವೋ ಬರೆದದ್ದನ್ನು ಒಬ್ಬ ತೋರಿಸುತ್ತಾನೆ. 'ಒಂದು ವರ್ಷದಿಂದ ಬರೆಯುತ್ತಾ ಇದ್ದೀಯ; ಮೂರೇ ಪುಟ ಬರೆದಿದ್ದೀಯ' ಎಂದು ಕೇಳುವುದುಂಟು. ಸಂಶೋಧನಾತ್ಮಕವಾದ ಒಂದು ಪುಟ ಬರೆಯಬೇಕಾದರೆ ಹತ್ತು ಪುಸ್ತಕ, ಹತ್ತು ಶಾಸನ ಓದಬೇಕು, ಪರಿಶೀಲಿಸಬೇಕು. ಅವನು ತೆಗೆದುಕೊಂಡಿರುವ ಕಾಲಕ್ಕೂ ಅವನು ತೋರಿಸಿರುವ ಕೆಲಸದ ಇಂದ್ರಿಯ ಗೋಚರವಾದ ಪ್ರಮಾಣಕ್ಕೂ ಅತ್ಯಂತ ಅಂತರ ಎದ್ದು ಕಾಣುತ್ತದೆ. "ಇವರದು ಬರಿಯ ಠಕ್ಕು, ಇವರೆಲ್ಲ ಕ್ಯಾಪಿಲಿಟಲಿಸ್ಟ್ಸ್; ಪ್ರೋಲಿಟೇರಿಯಟ್ಸ್ ಅಲ್ಲ" ಎಂದು ತಿಳಿಯುವ ಸಂಭವವುಂಟು. ಯಾವ ಕೆಲಸ ಎದ್ದು ಕಾಣುತ್ತದೋ, ಯಾವುದರಿಂದ ಮೈಯಲ್ಲಿ ಚೆನ್ನಾಗಿ ಬೆವರು ಇಳಿಯುತ್ತದೋ, 'ಉಶ್' ಅಂತ ಕುಳಿತುಕೊಳ್ಳುತ್ತಾನೆಯೋ, ಆ ಕೆಲಸ ಮಾತ್ರ ಕೆಲಸ, ಉಳಿದುದೆಲ್ಲ ಕೆಲಸ ಅಲ್ಲ ಎಂಬ ಭ್ರಾಂತಿ ಬರುವುದು ಸಹಜವೆ. ಬೆಳಗ್ಗೆ ಮೂರ್ತಿರಾಯರು

ಮಾತನಾಡುತ್ತಾ 'ಪರಿಷತ್ತಿನಲ್ಲಿ ಯಾವುದೋ ಕೆಲಸ ಕೈಗೊಂಡಿದ್ದೇವೆ, ಅವುಗಳ ಫಲ ಈಗ ಗೊತ್ತಾಗೋಲ್ಲ, ನಾಲ್ಕು ವರ್ಷಗಳ ನಂತರ ತಿಳಿಯುತ್ತದೆ. ಇನ್ನು ನಾಲ್ಕು ವರ್ಷದವರೆಗೂ ಕಾಯಬೇಕಲ್ಲ ಎಂದು' ಆತಂಕ ವ್ಯಕ್ತಪಡಿಸಿದರು. ಪತ್ರಿಕೆಯವರು ಸುಮ್ಮನಿರಬೇಕಲ್ಲ. 'ನೀವು ಸೋಮಾರಿಗಳಾಗಿದ್ದೀರಿ' ಅಂತ ಬಯ್ಯುತ್ತಾರೆ. ಬಯ್ಗುಳವೂ ಬೇಕೆಂದು ತೋರುತ್ತದೆ, ನಿದ್ರೆ ಬರದಿರಲೆಂದು ಕೆಲವರು ನಶ್ಯ ಹಾಕುತ್ತಾರೆ. ಕೆಲವರು ಸಿಗರೇಟ್ ಸೇದುತ್ತಾರೆ, ಕೆಲವರು ಚಾಟಿಏಟುಗಳನ್ನು ಅಪೇಕ್ಷಿಸುತ್ತಾರೆ. ಏನಾದರೂ ಬೇಕುತಾನೆ, ಮುಂದೆ ಒಂದಲ್ಲ ಒಂದು ರೀತಿಯಲ್ಲಿ ಕೆಲಸ ನಡೆದೇ ನಡೆಯುತ್ತದೆ. ನಾಡಿನ ಚೇತನ ಎಚ್ಚೆತ್ತಿದೆ. ಇನ್ನೊಂದಿಗೂ ಅದು ನಿದ್ರಿಸುವುದಿಲ್ಲ. ಮುಂದುವರಿಯುತ್ತದೆ ಎಂದು ನಾವು ಹಾರೈಸುತ್ತೇವೆ.

ಹಿಂದಿನ ವರ್ಷದ ಪರಿಷತ್ತಿನ ಸಮ್ಮೇಳನವನ್ನು ಮಂತ್ರಿಗಳೊಬ್ಬರು ಉದ್ಘಾಟಿಸುತ್ತ, ಮುಂದಿನ ಸಾಹಿತ್ಯ ಪರಿಷತ್ತಿನ ಅಧಿವೇಶನ ಕರ್ಣಾಟಕದ ರಾಜಧಾನಿಯಲ್ಲಿ ನಡೆಯುತ್ತದೆ ಅಂತ ಹೇಳಿದ್ದರು. ಹೀಗೆ ಮನುಷ್ಯ ಹಾರೈಸುವುದು, ಹಂಬಲಿಸುವುದು ಅವನ ಸ್ವಭಾವ. ಆದರೆ ಆ ಹಾರೈಕೆ ಹಾಗೂ ಹಂಬಲದಲ್ಲಿ ಎಲ್ಲಿಯವರೆಗೆ ದೋಷವಿದೆಯೋ ಅಲ್ಲಿಯವರೆಗೂ ಅದು ಸಿದ್ಧಿಸುವುದಿಲ್ಲ. ನನ್ನದೊಂದು 'ಪ್ರಾರ್ಥನೆ'ಯಲ್ಲಿ 'ನನ್ನಾಸೆ ನಿನ್ನಿಚ್ಛೆಯಪ್ಪನ್ನೆಗಂ ಸಲ್ಲದಿರಲಿ' ಅಂತ ಇದೆ. ನನ್ನ ಆಸೆ ಭಗವಂತನ ಇಚ್ಛೆಯಾಗುವ ತನಕ ಸಲ್ಲುವುದು ಬೇಡ. ಏಕೆಂದರೆ ಅದು ಕೆಟ್ಟದಾಗುತ್ತದೆ. ನನ್ನ ಪ್ರಾರ್ಥನೆಗೆ ಓಗೊಟ್ಟು 'ನೀನು ತಕೊ' ಅಂತ ಕೊಟ್ಟುಬಿಟ್ಟರೆ ಏನು ಗತಿ? ನಾವು ಭಯಂಕರವಾದದ್ದನ್ನೆಲ್ಲ ಪ್ರಾರ್ಥಿಸುತ್ತೇವೆ, ಬಯಸುತ್ತೇವೆ. 'ಮಹಾರಾಯಾ, ನಾನು ಆಶಿಸಿದಷ್ಟು ಬೇಗ ಫಲಿಸದಿರುವುದಕ್ಕೆ ಕಾರಣ ಎಲ್ಲಿಯೋ ಒಂದು ಕಡೆ ದೋಷವಿರುವುದೇ ಆಗಿದೆ. ಯಾವುದೋ ಒಂದು ಅಹಂಕಾರವಿದೆ, ಎಲ್ಲಿಯೋ ಒಂದು ಅಲ್ಪತೆ ಇದೆ. ಇದು ಪರಿಹಾರವಾಗಬೇಕು. ಕರ್ಣಾಟಕ ಬೇಕು ಎನ್ನುವವರ ಅಲ್ಪತೆಯ ಅಹಂಕಾರ, ಕರ್ಣಾಟಕ ಬೇಡ ಎನ್ನುವವರ ಅಲ್ಪತೆಯ ಅಹಂಕಾರ ಇವೆಲ್ಲಾ ಸೇರಿಕೊಳ್ಳುತ್ತವೆಂದು ಕಾಣಿಸುತ್ತದೆ. ಎರಡು ಕಡೆಯ ಈ ಅಹಂಕಾರ ಅಲ್ಪತೆಗಳು ದೂರವಾದಾಗ ಮಾತ್ರ ಈ ನಾಡು ಒಂದಾಗುತ್ತದೆ, ಇದು ರಾಜಕೀಯ ದೃಷ್ಟಿಯಿಂದ ಮಾತ್ರ . ಆದರೆ ಸಾಹಿತಿಗಳ ದೃಷ್ಟಿಯಿಂದ ಇದು ಬೇರೆಯಾಗಿದೆ ಎನ್ನುವ ಭಾವನೆಯೇ ಇಲ್ಲ. ಅದಕ್ಕೆ ಇಂತಹ ಸಮ್ಮೇಳನಗಳೇ ನಿದರ್ಶನ.

ಇಂದು ಇಲ್ಲಿ ಕರ್ಣಾಟಕದ ಅನೇಕ ಭಾಗಗಳಿಂದ ಹೈದರಾಬಾದು, ಮಂಗಳೂರು, ಉತ್ತರ ಕನ್ನಡ, ದಕ್ಷಿಣ ಕನ್ನಡ ಜನ ಬಂದಿದ್ದಾರೆ. ಇವರೆಲ್ಲರೂ ಕರ್ಣಾಟಕ ರಾಜೇಶ್ವರಿಯ ಸಂತಾನ. ಸೂಕ್ಷ್ಮರೂಪಿಯೂ, ಸೂಕ್ಷ್ಮದೇಹಿಯೂ ಆದ ಕರ್ಣಾಟಕ ರಾಜರಾಜೇಶ್ವರಿ ಅಖಂಡೆ, ಅವಿಭಕ್ತೆ. ಸದ್ಯಕ್ಕೆ ವಿಭಕ್ತೆಯಾಗಿ ತೋರಿದರೂ ಅವಳು ನಿತ್ಯ ಅವಿಭಕ್ತೆ. ನಾವು ಮನೋಮಯದಲ್ಲಿ ಯಾವುದನ್ನು ಆಶಿಸುತ್ತೇವೆಯೋ ಅದು ಅನ್ನಮಯದಲ್ಲಿ ಸಿದ್ಧಿಸಬೇಕು ಎಂಬುದು ಮನುಷ್ಯ ಸಹಜವಾದ ಒಂದು ಬಯಕೆ.

ಬಹುಶಃ ಈ ಬಯಕೆ ಹಲವರ ಪ್ರಾರ್ಥನೆಯಾದಾಗ, ಭಗವಂತನ ಇಚ್ಛೆಯಾದಾಗ ಬಹು ಸುಲಭದಲ್ಲಿ ಕೈಗೂಡುತ್ತದೆ. ಏಕೆಂದರೆ ಯಾರು ತಾನೆ ಯೋಚಿಸಿದ್ದರು, ನಮಗೆ ಇಷ್ಟು ಬೇಗ ಸ್ವಾತಂತ್ರ್ಯ ಸಿದ್ಧಿಯಾಗುತ್ತದೆ ಎಂದು. ಅದು ಸಿಕ್ಕಿದ ಮೇಲೆ 'ಆಗದೆ ಏನೋ' ಅನ್ನುತ್ತಾರೆ. ಆದರೆ ಆಗಿನ ಸ್ಥಿತಿಯ ಹಿನ್ನೆಲೆಯಲ್ಲಿ ನೋಡಿದಾಗ, ಅಂಥ ವಜ್ರಮುಷ್ಟಿಯ, ಕಠಿನಮನಸ್ಸಿನ ಬ್ರಿಟಿಷ್ ಸಾಮ್ರಾಜ್ಯದ ಉಗ್ರಹಸ್ತದಿಂದ ನಾವು ಎಷ್ಟು ಬಾಯಿಬಡಿದುಕೊಂಡರೂ ಪಾರಾಗುತ್ತೇವೆಯೇ ಎಂಬ ಸಮಸ್ಯೆ ಇದ್ದೇ ಇತ್ತು. ಪ್ರಯತ್ನ ನಡೆಯುತ್ತಿದ್ದರೆ ಸಿದ್ಧಿಯಾವ ಕಾಲಕ್ಕೆ ತಟಕ್ಕನೆ ಬರುತ್ತದೆ ಎನ್ನುವುದು ಗೊತ್ತಾಗುವುದಿಲ್ಲ. ಬಹುಶಃ ಹೀಗೆ ಕನ್ನಡದ ಜನ ಒಂದಾಗಬೇಕೆಂದು ಶುದ್ಧಬುದ್ಧಿಯಿಂದ ಬಯಸಿದ್ದಾದರೆ ನಾವು ಊಹಿಸಿದುದಕ್ಕಿಂತ ಮೊದಲೇ ಕೈಗೂಡಿದರೂ ಕೈಗೂಡಬಹುದು. ಆದರೆ ಇದು ಸ್ನೇಹದಿಂದ ಸೌಹಾರ್ದದಿಂದ ನಡೆಯುತ್ತದೆ ಎಂದು ಆಶಿಸುತ್ತೇನೆ.

ಈಗ ಎಷ್ಟೋ ವಿಷಯಗಳನ್ನು ಕುರಿತು ಮಾತಾಡಿದ್ದಾಗಿದೆ, ಆದರೆ ನನಗೆ ತೋರುವ ಎರಡು ಮುಖ್ಯ ವಿಷಯಗಳನ್ನು ಕುರಿತು ಪ್ರಸ್ತಾಪಿಸಬೇಕಾಗಿದೆ.

ಕನ್ನಡ ನಾಡಿನಲ್ಲಿ ಕನ್ನಡ ಪ್ರಥಮ ಭಾಷೆಯಾಗಬೇಕು; ಶಿಕ್ಷಣದ ಎಲ್ಲ ಘಟ್ಟಗಳಲ್ಲಿಯೂ ಅದು ಶಿಕ್ಷಣ ಮಾಧ್ಯಮವಾಗಬೇಕು. ಈ ಎರಡು ಸಂಕಲ್ಪಗಳು ಕೈಗೂಡಿದರೆ ಉಳಿದೆಲ್ಲ ಕೇಡುಗಳೂ ಮಾಯವಾಗುತ್ತವೆ. ಈ ತತ್ವ ಕನ್ನಡ ನಾಡಿಗೆ ಮಾತ್ರವೇ ಸೀಮಿತವಾದದ್ದಲ್ಲ, ಆಂಧ್ರಪ್ರದೇಶದಲ್ಲಿ ತೆಲುಗೇ ಪ್ರಥಮ ಭಾಷೆಯಾಗಬೇಕು; ತೆಲುಗೇ ಶಿಕ್ಷಣ ಮಾಧ್ಯಮವಾಗಬೇಕು. ಇದು ಕೈಗೂಡದ ಹೊರತು ಅವರ ಚೇತನ ಸರ್ವತೋಮುಖವಾಗಿ ವಿಕಾಸಗೊಳ್ಳಲು ಸಾಧ್ಯವಿಲ್ಲ. ಅಷ್ಟೇಅಲ್ಲ. ನಮ್ಮ ನಾಡಿನ ಚೇತನ ಮುಂದೆ ತಾನು ಕೈಗೊಳ್ಳಲಿರುವ ಕಲ್ಯಾಣಗಳಲ್ಲಿ ಜಯಶೀಲವಾಗಬೇಕಾದರೆ, ಈ ಪರಭಾಷೆಯ ಮುಖಾಂತರ ನಮ್ಮ ಮಕ್ಕಳ ಶಕ್ತಿ ದುರ್ವ್ಯಯವಾಗುತ್ತಿರುವುದನ್ನು ನಿಲ್ಲಿಸಬೇಕು. ನಾನು ಯಾವುದೋ ಚೀಣಿ ಚಿತ್ರ ನೋಡುತ್ತಾ ಇದ್ದೆ.ಅದನ್ನೆಲ್ಲಾ ಅವರು ಹೇಗೆ ಸಾಧಿಸಿದರು, ಆ ಮಹಿಳೆಯರು ಟ್ರ್ಯಾಕ್ಟರ್‌ನಲ್ಲಿ ಹೇಗೆ ಉಳುತ್ತಾ ಇದ್ದಾರೆ, ದೊಡ್ಡ ದೊಡ್ಡ ಕೆಲಸಗಳನ್ನು ಮಾಡುತ್ತಿದ್ದಾರೆ; ಅವರೆಲ್ಲ ವಿಶ್ವವಿದ್ಯಾನಿಲಯದ ಬಿ.ಇ. ಡಿಗ್ರಿ ಪಡೆದುಕೊಂಡು ಬಂದವರೆ? ಎಂದು ಆಶ್ಚರ್ಯವಾಯಿತು. ನಾವೂ ಆ ದಾರಿ ಹಿಡಿದರೇನೇ ಒಂದಿಷ್ಟು ಲಾಭ ದೊರಕೀತು. ಸರಿಯಾಗಿ ಕೆಲಸ ಮಾಡುವವನಿಗೆ ಏನು ಡಿಗ್ರಿ ಬೇಕು? ಇಂಗ್ಲಿಷ್ ಭಾಷೆಯಲ್ಲಿ ಷೇಕ್ಸ್‌ಪಿಯರ್ ನಾಟಕದ ಒಂದು ಪಾತ್ರದ ವಿಚಾರದಲ್ಲಿ ಸರಿಯಾಗಿ ಬರೆಯಲಿಲ್ಲ ಎಂಬ ಕಾರಣದಿಂದಲೋ, ಮಿಲ್ಟನ್ನಿನ ಸಾನೆಟ್ 'ಆನ್ ಹಿಸ್ ಬ್ಲೈಂಡ್‌ನೆಸ್' ಕುರಿತು ಇಂಗ್ಲಿಷಿನಲ್ಲಿ ಸರಿಯಾಗಿ ಬರೆಯಲಿಲ್ಲವೆಂಬ ಕಾರಣದಿಂದಲೋ ನಾವು ಎಷ್ಟು ಜನ ಎಂಜಿನಿಯರುಗಳನ್ನು ಮೂರು ನಾಲ್ಕು ಸಲ 'ಫೈಲ್' ಮಾಡಿಸಿ, ಅವರ ಚೇತನವನ್ನು ಕುಗ್ಗಿಸುತ್ತೇವೆ. 'ನಾನು ಈ ಪ್ರಪಂಚದಲ್ಲಿ ನಿಷ್ಪ್ರಯೋಜಕ, ಯಾತಕ್ಕೂ ಕೈಲಾಗದವನು' ಎಂದವನು ನಿರಾಶೆಗೊಂಡದ್ದಾದರೆ ನಮ್ಮಲ್ಲಿ ಸಮರ್ಥನಾಗಬಹುದಾದ ಎಂಜಿನಿಯರೊಬ್ಬನನ್ನು ಕಳೆದುಕೊಂಡಂತಾಗುವುದಿಲ್ಲವೆ? ಇದನ್ನು ಎಲ್ಲರೂ ಆಲೋಚನೆ ಮಾಡಬೇಕು.

ಇಂಗ್ಲಿಷ್ ಅಂತರರಾಷ್ಟ್ರೀಯ ಭಾಷೆಯಾದ್ದರಿಂದ ಇರಬೇಕು. ಹಿಂದಿ ಸಂಯುಕ್ತ ಭಾಷೆಯೆಂದು ಒಪ್ಪಿರುವುದರಿಂದ ಇರಬೇಕು. ಆದರೆ ಯಾವಯಾವ ಪ್ರಮಾಣದಲ್ಲಿ ಇರಬೇಕೆಂಬುದನ್ನು ನಾವು ನಿರ್ಣಯಿಸಬೇಕು. ಇದರ ವಿಚಾರದಲ್ಲಿ ಯಾರಿಗೂ ಎರಡು ಮನಸ್ಸು ಬೇಡ. ಪ್ರತಿಯೊಂದು ಪ್ರದೇಶದಲ್ಲಿ ಆ ಪ್ರದೇಶದ ಭಾಷೆಗೆ ಪ್ರಥಮ ಸ್ಥಾನವಿರಬೇಕು. ಆ ವಿಚಾರದಲ್ಲಿ ಮೀನ ಮೇಷ ಎಣಿಸುವ, ತಕ್ಕಡಿ ತೂಗುವ ಗೋಜಿಗೆ ಹೋಗಬಾರದು. ನಮ್ಮ ಭಾರತದ ಉಪಯೋಗಕ್ಕಾಗಿ ನಮಗೆ ಹಿಂದಿ ಬೇಕು. ಆದರೆ ಯಾವ ಪ್ರಮಾಣದಲ್ಲಿ ಬೇಕು ಎನ್ನುವುದನ್ನು ಮಹಾತ್ಮ ಗಾಂಧಿಯವರು ಎಚ್ಚರಿಕೆಯಿಂದ ನಿರ್ದೇಶಿಸಿದ್ದಾರೆ. ಆ ನಿರ್ದೇಶನ ಮೀರಿ ಹೋದರೆ ಅದು ದುರಾಕ್ರಮಣವೆಂದೇ ನಾನು ಭಾವಿಸುತ್ತೇನೆ. ಅತಿರೇಕದ ಹಿಂದೀ ಪ್ರೇಮದಿಂದ ಏನಾದರೂ ಅಪಾಯವಾಗಬಹುದು ಎಂದ ನೆಹರು ಆಗಾಗ ಎಚ್ಚರಿಕೆ ಕೊಡುತ್ತಾ ಇದ್ದಾರೆ. ಅದರಲ್ಲೂ ದಕ್ಷಿಣ ದೇಶದ ವಿಚಾರವಾಗಿ ಇನ್ನೂ ಸ್ವಲ್ಪ ಎಚ್ಚರವಾಗಿರಬೇಕೆಂದು ರಾಜಾಜಿಯವರು ಮೊನ್ನೆ ಐ.ಎ.ಎಸ್. ವಿಚಾರವಾಗಿ ಪತ್ರಿಕೆಗಳಿಗೆ ಹೇಳಿಕೆ ಕೊಡುವಾಗ ತಿಳಿಸಿದ್ದಾರೆ. ಆದ್ದರಿಂದ ನಾವು ನಮ್ಮ ನಮ್ಮ ಪ್ರಾದೇಶಿಕ ಭಾಷೆಗಳಿಗೆ ಪ್ರಾಧಾನ್ಯ ಕೊಡತಕ್ಕದ್ದು. ಹಿಂದಿಗೆ ಸೀಮಿತ ಸ್ಥಾನವಿರಬೇಕಾಗುತ್ತದೆ. ಆಕ್ರಮಣ ಎಲ್ಲಿ ನಡೆದರೂ ಅದನ್ನು ತಡೆಯಬೇಕು.

ಇಂಗ್ಲಿಷ್ ಅನ್ನು ಈಗಿರುವ ರೀತಿಯಲ್ಲಿ ಮತ್ತು ಪ್ರಮಾಣದಲ್ಲಿ ಇಟ್ಟುಕೊಳ್ಳುವುದು ಅನಾವಶ್ಯಕ; ನಮ್ಮಲ್ಲಿ ಅನೇಕರು ಮಾತನಾಡುವುದು ಬರೆಯುವುದು ಅನಾವಶ್ಯಕ. ಆದರೆ ಇಂಗ್ಲಿಷನ್ನು ಸ್ವಲ್ಪ ಓದಿ ತಿಳಿದುಕೊಳ್ಳುವುದು ಸದ್ಯಕ್ಕೆ ಬೇಕು. ಕೆಲವು ಜನ ಇಂಗ್ಲಿಷ್ ಚೆನ್ನಾಗಿ ಮಾತಾಡಲು ಬರೆಯಲು ಕಲಿಯಬೇಕು. ಅವರು ನಮಗೂ ವಿಶ್ವಕ್ಕೂ ಒಂದು ಸೇತುವೆಯಾಗಿ ಪರಿಣಮಿಸಬೇಕು. ಭಾಷಾ ಸಾಮರ್ಥ್ಯವುಳ್ಳ ವ್ಯಕ್ತಿಗಳನ್ನಾರಿಸಿ ಚೆನ್ನಾಗಿ ತರಬೇತಿ ಕೊಡಬೇಕು. ಈಗ ನಾವು ಎಲ್ಲರಿಗೂ ಒಂದೊಂದು ಚಮಚ ಇಂಗ್ಲಿಷನ್ನು ಬಾಯಿಗೆ ಹಾಕುತ್ತಾ ಇದ್ದೇವೆ. ಅದನ್ನು ನಿಲ್ಲಿಸಬೇಕು. ಅದಕ್ಕೋಸ್ಕರ ತನ್ನ ಭಾಷೆಯಲ್ಲೇ ವಿಷಯವನ್ನು ಚೆನ್ನಾಗಿ ಬೇಗ ಬೇಗ ಕಲಿತು ಪ್ರಬುದ್ಧನಾಗುವುದಕ್ಕೆ, ಪ್ರಜ್ಞೆ ವಿಕಾಸವಾಗುವುದಕ್ಕೆ ಸಹಾಯ ಮಾಡಿ, ಯಾರ್ಯಾರಿಗೆ ಈ ಭಾಷಾ ವಿಚಾರದಲ್ಲಿ ಪ್ರತಿಭೆ ಹೆಚ್ಚಾಗಿದೆಯೋ ಅಂತಹ ಕೆಲವರನ್ನು ಮಾತ್ರ ಆರಿಸಿಕೊಂಡು ಇಂಗ್ಲಿಷ್ ಚೀನೀ ರಶ್ಯನ್ ಭಾಷೆಗಳಲ್ಲಿ ಅವರನ್ನು ಹೆಚ್ಚು ಪರಿಣತರನ್ನಾಗಿ ಮಾಡಬೇಕು. ವಿಶ್ವವಿದ್ಯಾನಿಲಯದಲ್ಲಿ ಕನ್ನಡ ಶಿಕ್ಷಣಮಾಧ್ಯಮವಾಗಲು ಹೆಚ್ಚು ಅಡಚಣೆ ಇಲ್ಲ. ಆದರೆ ಹೇಗೆ ಮಾಡಬೇಕು, ಯಾವ ಯಾವ ಘಟ್ಟಗಳಲ್ಲಿ ಅದನ್ನು ನಿರ್ವಹಿಸಬೇಕು ಎನ್ನುವ ವಿಚಾರದಲ್ಲಿ ಮಾತ್ರವೇ ಚರ್ಚೆ, ಜಿಜ್ಞಾಸೆ ನಡೆಯುತ್ತಿರುವುದು. ವಿಶ್ವವಿದ್ಯಾನಿಲಯ ಜನತೆಯ ಪ್ರತಿನಿಧಿ. ನಾವೆಲ್ಲರೂ ಜನತೆಯ ಪ್ರತಿನಿಧಿಗಳೇ, ಹೈಸ್ಕೂಲಿನಲ್ಲಿ ಕನ್ನಡ ಶಿಕ್ಷಣಮಾಧ್ಯಮವಿದೆ. ಅದರ ಜೊತೆಗೆ ಕನ್ನಡ ಬರದೇ ಇದ್ದವರಿಗೆ ಇಂಗ್ಲಿಷ್ ಸೆಕ್ಷನ್‌ಗಳನ್ನು ವ್ಯವಸ್ಥೆಗೊಳಿಸಲಾಗಿದೆ. ಬೆಂಗಳೂರು ಮೈಸೂರು ನಗರಗಳ ನಾಗರಿಕರ ಮನೆಯವರು ಇಂಗ್ಲಿಷಿನಲ್ಲೇ ಪಾಠ ಹೇಳಿಕೊಡಬೇಕು ಅಂತ ಅಲ್ಲಸಲ್ಲದ

ಪ್ರಭಾವಗಳನ್ನು ಬೀರಿಕೊಂಡು ತಮ್ಮ ಮಕ್ಕಳನ್ನು ಇಂಗ್ಲಿಷ್ ಭಾಷಾ ತರಗತಿಗಳಿಗೆ ಸೇರಿಸುವುದನ್ನು ನಾವು ನೋಡಿದಾಗ, ಇದೇನು ನಮ್ಮ ಭಾಷಾ ಪ್ರೇಮ ಎನ್ನುವುದು ಶಂಕಾಸ್ಪದವೋ ಎನ್ನುವ ಹಾಗೆ ತೋರುತ್ತದೆ. ಆದ್ದರಿಂದ ವಿಶ್ವವಿದ್ಯಾನಿಲಯದಲ್ಲಿ ಕನ್ನಡಮಾಧ್ಯಮವನ್ನು ಕಡ್ಡಾಯವಾಗಿ ಬಲಾತ್ಕಾರವಾಗಿ ಪ್ರಾರಂಭಮಾಡಲಿಕ್ಕೆ ಸಾಧ್ಯವಾಗುತ್ತಿಲ್ಲ. ಯಾರು ಯಾರು ಕನ್ನಡ ಮಾಧ್ಯಮದಲ್ಲಿ ಶಿಕ್ಷಣ ಕೊಡಿ ಅಂತ ಬರುತ್ತಾರೋ ಅಂಥವರಿಗೆ ಆ ಶಿಕ್ಷಣ ಕೊಡೋಣ.ಉಳಿದವರು ಆಂಗ್ಲಭಾಷೆಯಲ್ಲಿಯೇ ಓದಲಿ ಎಂದ ಐಚ್ಛಿಕ ವ್ಯವಸ್ಥೆಯನ್ನು ಮಾಡಿದೆ. ಕನ್ನಡದಲ್ಲಿ ಪಾಠ ಹೇಳುವವರು ಸಮರ್ಥರಾಗಬೇಕಾಗುತ್ತದೆ. ಇಂಗ್ಲಿಷೋ ಕನ್ನಡವೋ ಅವರವರಿಗನುಕೂಲವಾದ ಭಾಷೆಯಲ್ಲಿ ಉತ್ತರ ಬರೆಯುವಂತೆ ವಿದ್ಯಾರ್ಥಿಗಳಿಗೆ ಹೇಳಬೇಕಾಗುತ್ತದೆ. ನಾವು ನಡೆವ ನೆಲ ಗಟ್ಟಿನೆಲವೋ ಉಸುಬೋ ಏನೋ ಅನ್ನುವುದು ಗೊತ್ತಾಗಬೇಕು. ಉಸುಬಾದರೆ ನಾವುಕುಸಿದು ಹೋಗುತ್ತೇವೆ; ಆಗ ಕನ್ನಡಮಾಧ್ಯಮ ನಿಲ್ಲಿಸಬಹುದು. ನಿಜವಾಗಿಯೂ ಕನ್ನಡ ಪ್ರೇಮ ಇದ್ದು, ಕನ್ನಡ ಮಾಧ್ಯಮ ಸರಿಯಾಗಿ ನಡೆಯುತ್ತೆ ಅಂದರೆ ಒಂದು ವರ್ಷ, ಎರಡು ವರ್ಷಗಳಲ್ಲಿ ಎಲ್ಲರೂ ಆ ಭಾಷೆ ತೆಗೆದುಕೊಳ್ಳುತ್ತಾರೆ. ನಾನು ಕೇಳಿದೆ, ನಾಗಪುರ, ಅಲಹಾಬಾದು ವಿಶ್ವವಿದ್ಯಾನಿಲಯಗಳಲ್ಲಿ ಹಿಂದಿ, ಮರಾಠಿ ಮಾಧ್ಯಮ ಜಾರಿಯಲ್ಲಿದೆ ಎಂದು. ಮೊದಮೊದಲು ಕೇವಲ ಕೆಲವೇ ವಿದ್ಯಾರ್ಥಿಗಳು ಹಿಂದಿಗೋ ಮರಾಠಿಗೋ ಸೇರಿದರಂತೆ. ಎರಡನೆಯ ವರ್ಷ ಶೇಕಡ ೫೦ ಆಯಿತಂತೆ ಮೂರನೆಯ ವರ್ಷಕ್ಕೆ ಶೇಕಡ ೮೦ಕ್ಕೇರಿತಂತೆ.ಏಕೆಂದರೆ ಇದರ ಸೌಲಭ್ಯ ಏನು ಎನ್ನುವುದು ಕ್ರಮೇಣ ಗೊತ್ತಾಗುತ್ತದೆ.

ಯಾವ ವಿಧದಿಂದಲೂ ನಮ್ಮ ವಿದ್ಯಾರ್ಥಿಗಳ 'ಸ್ಟ್ಯಾಂಡರ್ಡ್' ಇಳಿದು ಹೋಗಿಲ್ಲ. ಈಗ ಸ್ಟ್ಯಾಂಡರ್ಡ್ ಇಳಿದಿದೆ ಎನ್ನುವುದರ ಅರ್ಥ ಇಂಗ್ಲಿಷ್ ಭಾಷೆಯ ಸ್ಟ್ಯಾಂಡರ್ಡ್ ಇಳಿದು ಹೋಗಿದೆ ಎಂದು ತಾನೆ. ವಿಷಯವನ್ನು ಇಂಗ್ಲೀಷಿನಲ್ಲಿ ಬರಿ ಅಂದರೆ ವ್ಯಾಕರಣ ಅವರನ್ನು ತಡೆದು ನಿಲ್ಲಿಸುತ್ತದೆ. ಆದ್ದರಿಂದ ಏನೇನೋ ಬರೆಯುತ್ತಾರೆ. ವಿಷಯ ಗೊತ್ತಿದ್ದರೂ ಭಾಷೆಯ ಅಡಚಣೆಯಿಂದಾಗಿ ಫೇಲಾಗುತ್ತಾನೆ. ಈಗ ಹುಟ್ಟುವ ವಿದ್ಯಾರ್ಥಿಗಳ ಮೆದುಳು ಬಂಜೆಯಾಯಿತೇ? ಬ್ರಹ್ಮನ ಶಕ್ತಿ ನಿರ್ವೀರ್ಯವಾಗಿ ಹೋಯಿತೇ? ಅಹುದೆಂದು ಹೇಳಿದರೆ ಅದು ಸುಳ್ಳಾಗುತ್ತದೆ. ಅವಿವೇಕವಾಗುತ್ತದೆ. ವಿದ್ಯಾರ್ಥಿಗಳ ಮೇಲೆ ಚಪ್ಪಡಿ ಹೇರಿ, ಈಜು ಅಂತ ಅಂದರೆ ಹೇಗೆ ಸಾಧ್ಯ? ಏನೋ ಅಲ್ಪ ಸ್ವಲ್ಪ ಶಕ್ತಿ ಇರುತ್ತದೆ; ಯಾವ ಹೊರೆಯೂ ಇಲ್ಲದೆ ಈಜು ಎಂದರೆ ಪ್ರಯತ್ನಿಸಿಯಾನು; ಚಪ್ಪಡಿ ಹೊತ್ತು ಈಜು ಅಂದರೆ ಅನೇಕರಿಗೆ ಕಷ್ಟವಾಗುತ್ತದೆ. ಈ ದೃಷ್ಟಿಯಿಂದಲಾದರೂ ಮುಂದಿನ ವರ್ಷದಲ್ಲಿ ಪರಿಷತ್ತಿನ ಅಂಗ ಸಂಸ್ಥೆಗಳು ಒಂದು ಪ್ರಚಾರಾತ್ಮಕ ಚಳುವಳಿ ಹೂಡಬೇಕಾಗುತ್ತದೆ.ಏಕೆಂದರೆ ಕೆಲವು ಕಡೆಯ ಹೈಸ್ಕೂಲುಗಳಲ್ಲಿಯೂ ಹಿಂದಿನ ಪರಿಸ್ಥಿತಿ ಮರುಕಳಿಸುತ್ತಿದೆ, ಮುಂದುವರಿಯುತ್ತಿದ್ದೇವೆಂಬ ನೆವದಲ್ಲಿ ಹಿಂದಕ್ಕೆ ನಡೆಯುತ್ತಿರುವಂತೆ ಭಾಸವಾಗುತ್ತದೆ. ನಾವು ನಾಳೆ ಕೆಲವು ಕನ್ನಡ ಮಾಧ್ಯಮದ ತರಗತಿಗಳನ್ನು ತೆರೆದಾಗ, ಎಷ್ಟು ಹುಡುಗರು

ಸೇರುತ್ತಾರೆ, ದೊಡ್ಡವರು ಹೇಗೆ ಆಶೀರ್ವದಿಸುತ್ತಾರೆ ಎನ್ನುವುದರ ಮೇಲೆ ನಮ್ಮ ಮನಸ್ಸು ನಿಂತಿದೆ. ಅದಕ್ಕೋಸ್ಕರ ನಾನು ಈ ಸಮಾರೋಪ ಭಾಷಣದ ಕೊನೆಯಲ್ಲಿ ಈ ಬಗ್ಗೆ ಎರಡು ಮಾತು ಒತ್ತಿ ಹೇಳಬೇಕಾಯಿತು.

ಮತ್ತೊಮ್ಮೆ ವಿಶ್ವವಿದ್ಯಾನಿಲಯದ ಆಶ್ರಯದಲ್ಲಿ ಪರಿಷತ್ತು ತನ್ನ ಮೂವತ್ತೇಳನೆಯ ಅಧಿವೇಶನವನ್ನು ನಡೆಸುತ್ತದೆ ಎಂದು ಹೇಳಿದ್ದು ನಮಗೂ ವಿಶ್ವವಿದ್ಯಾನಿಲಯಕ್ಕೂ, ಮೈಸೂರಿನ ನಾಗರಿಕ ಜನಕ್ಕೂ ಒಂದು ಪ್ರಶಸ್ತಿಯನ್ನೇ ಕೊಟ್ಟಂತಾಗಿದೆ. ವಿಶ್ವವಿದ್ಯಾನಿಲಯ ಜನತೆಯದು, ಜನದ್ದು, ಜನದ ಭಾಷೆಯದು ಎಂಬುದನ್ನು ಸಾಂಕೇತಿಕವಾಗಿ ಸಾರುವಂತೆ ಪರಿಷತ್ತು ಮಾಡಿದೆ. ಅದಕ್ಕಾಗಿ ನಾನು ಪುನಃ ವಿಶ್ವವಿದ್ಯಾನಿಲಯದವರನ್ನು ಅಭಿನಂದಿಸುತ್ತೇನೆ. ತಮ್ಮಲ್ಲಿ ಬಹು ಜನರು ಬಹುದೂರದಿಂದ ಬಂದು ಇಲ್ಲಿ ನಾವು ಯಥಾನುಶಕ್ತಿ ನೀಡಿದ ಅತಿಥ್ಯವನ್ನು ಸ್ವೀಕರಿಸಿದ್ದೀರಿ. ಆ ಆತಿಥ್ಯದಲ್ಲಿ ಔಚಿತ್ಯಾನೌಚಿತ್ಯಗಳೇನೆ ಇರಲಿ. ಅವನ್ನೆಲ್ಲಾ ಸ್ನೇಹದಿಂದ ಸೌಹಾರ್ದದಿಂದ ಕಂಡು, ಕ್ಷಮಿಸಿ ನಮ್ಮನ್ನು ಮನ್ನಿಸುತ್ತೀರಿ ಎಂದು ಭಾವಿಸಿದ್ದೇನೆ.

# ಭಾಷಾವೈವಿಧ್ಯ ಲೋಕೈಕ್ಯಕ್ಕೆ ಅಡಚಣೆಯಲ್ಲ [೧]

ಮೈಸೂರು ವಿಶ್ವವಿದ್ಯಾನಿಲಯದ ಪರವಾಗಿ ಪ್ರಪಂಚ ವಿಶ್ವವಿದ್ಯಾನಿಲಯ ಸೇವಾವಿಚಾರಗೋಷ್ಠಿಯ ಪ್ರತಿನಿಧಿಗಳಿಗೆ ಅತ್ಯಂತ ಸಂತೋಷದಿಂದ ಹೃತ್ಪೂರ್ವಕವಾದ ಸ್ವಾಗತಬಯಸುತ್ತೇನೆ. ವಿಚಾರಗೋಷ್ಠಿ ನಡೆಸಲು ಮೈಸೂರು ನಗರವನ್ನು ಆಯ್ದುಕೊಂಡಿರುವುದು ನಮಗೆಲ್ಲ ಹೆಮ್ಮೆಯ ವಿಷಯವಾಗಿದೆ. ವಿವಿಧ ದೇಶಗಳ, ವಿವಿಧ ಜನಾಂಗಗಳ ಪ್ರತಿನಿಧಿಗಳನ್ನೊಳಗೊಂಡಿರುವ ಇಂತಹ ಸಭೆಗಳ ಬಗೆಗೆ ನಮಗೆ ತುಂಬ ಗೌರವವಿದೆ. ಏಕೆಂದರೆ ಇಲ್ಲಿ ಪರಸ್ಪರ ವಿಚಾರ ವಿನಿಮಯಕ್ಕೆ ಅವಕಾಶವಿದೆ. ಈ ವಿಧವಾದ ವಿಚಾರವಿನಿಮಯದಿಂದ ಪರಸ್ಪರ ಮೈತ್ರಿ ಸಾಮರಸ್ಯಗಳು ಬಲಗೊಳ್ಳುವುದು ಅನಿವಾರ್ಯ. ಈ ಸಭೆ ಭವಿಷ್ಯ ಪ್ರಪಂಚಕ್ಕೆ ನಾಯಕಶಿರೋಮಣಿಗಳನ್ನೂ ಒದಗಿಸುವ ವಿವಿಧ ರಾಷ್ಟ್ರಗಳ ಜ್ಞಾನಸಂಪನ್ನ ಯುವಕರದು ಎಂಬುದನ್ನು ನೆನೆದರೆ ಅವರ ವಿಚಾರದಲ್ಲಿ ನಮ್ಮ ಗೌರವ ದ್ವಿಗುಣಗೊಳ್ಳುತ್ತದೆ. ಪ್ರಪಂಚದ ನಾನಾ ವಿಶ್ವವಿದ್ಯಾನಿಲಯಗಳ ವಿದ್ಯಾರ್ಥಿ ಪ್ರತಿನಿಧಿಗಳನ್ನು ಒಟ್ಟಿಗೆ ಸೇರಿಸಿ, ಸರ್ವಸಮಾನವಾದ ಸಮಸ್ಯೆಗಳನ್ನು ಚರ್ಚಿಸಿ, ಆ ಮೂಲಕ ನಾನಾ ಭೂಭಾಗಗಳಲ್ಲಿ ವಾಸಿಸುತ್ತಿರುವ ವಿವಿಧ ಜನಾಂಗಗಳ ನಡುವೆ ಪರಸ್ಪರ ನಂಬಿಕೆ ಮತ್ತು ಸಾಮರಸ್ಯ ಮೂಡುವಂತೆ ಮಾಡಿ, ನಾವೆಲ್ಲ ಏಕಪ್ರಪಂಚದವರು ಎಂಬ ಐಕ್ಯಭಾವನೆ ರೂಪುಗೊಳ್ಳಲು ಅವಕಾಶ ಕಲ್ಪಿಸಿಕೊಟ್ಟು, ಪ್ರಪಂಚ ವಿಶ್ವವಿದ್ಯಾನಿಲಯ ಸೇವಾಸಂಸ್ಥೆ ನಿಜವಾಗಿಯೂ ಲೋಕಕ್ಕೆ ಉಪಕಾರಿಯಾಗಿದೆ.

ನನ್ನಲ್ಲಿ ಉಕ್ಕುತ್ತಿರುವ ಆನಂದದಿಂದ ಈ ಸಂದರ್ಭದಲ್ಲಿ ಒಂದೆರಡು ಹೆಮ್ಮೆಯ ಮಾತುಗಳನ್ನಾಡಿದರೆ ಅವು ಸಹಜ ಮತ್ತು ಕ್ಷಮ್ಯ. ಭರತಖಂಡದ ವಿವಿಧ ಅಂಗ ಪ್ರದೇಶಗಳಲ್ಲಿ ಅತ್ಯಂತ ಪ್ರಾಚೀನತಮವೂ ಸುಸಂಸ್ಕೃತವೂ ಆದ ಒಂದು ನಾಡಿಗೆ ತಾವೆಲ್ಲರೂ ಆಗಮಿಸಿದ್ದೀರಿ. ಎರಡು ಸಾವಿರ ವರ್ಷಗಳ ನಾಗರಿಕ ಮತ್ತು ಸಾಹಿತ್ಯಿಕ ಚರಿತ್ರೆಯುಳ್ಳ ಕನ್ನಡ ನಾಡಾದ ಈ ಮೈಸೂರಿಗೆ ತಮ್ಮನ್ನು ಸ್ವಾಗತಿಸಲು ತುಂಬ ಹರ್ಷಿಸುತ್ತೇನೆ. ಇಲ್ಲಿಯ ಸಾಹಿತ್ಯಕ್ಕೆ ಸಾವಿರದ ಐನೂರು ವರ್ಷಗಳ ಪ್ರಾಚೀನತೆ ಇದೆ. ಇಲ್ಲಿ ಅತ್ಯಂತ ಪ್ರಾಚೀನವೂ ಅದ್ಭುತ ದಿವ್ಯಶಿಲ್ಪಸ್ಥಾನಗಳೂ ಆದ ಮಹಾ ದೇವಸ್ಥಾನಗಳನ್ನು ನಿರ್ಮಿಸಿದ್ದಾರೆ. ಪ್ರಪಂಚದಲ್ಲಯೇ ಏಕೈಕ ಎಂಬಂತಿರುವ ಶ್ರೀ

---

[೧] ೨೬–೭–೧೯೫೬ ಮೈಸೂರಿನ ಕ್ರಾಫರ್ಡ್ ಭವನದಲ್ಲಿ ಸೇರಿದ ಪ್ರಪಂಚ ವಿಶ್ವವಿದ್ಯಾನಿಲಯ ಸೇವಾ ವಿಚಾರಗೋಷ್ಠಿಯ ಪ್ರಾರಂಭೋತ್ಸವ ಸಮಯದಲ್ಲಿ ವೈಸ್ ಛಾನ್ಸಲರು ಮಾಡಿದ ಸ್ವಾಗತ ಭಾಷಣ

ಗೊಮ್ಮಟೇಶ್ವರ ಮಹಾ ಭೂಮವಿಗ್ರಹ ಇರುವುದಿಲ್ಲಿಯೆ. ಸಹ್ಯಾದ್ರಿ ಪರ್ವತ ಶ್ರೇಣಿಯಲ್ಲಿ ಹುಟ್ಟಿ ಪೂರ್ವ ಪಶ್ಚಿಮ ಸಮುದ್ರಗಳಿಗೆ ಹರಿಯುವ ಮಹಾನದಿಗಳಿವೆ. ಪ್ರಪಂಚದಲ್ಲಿಯೇ ಅದ್ವಿತೀಯ ಎನ್ನಬಹುದಾದ ಮಹಾ ಜೋಗದಂತಹ ಜಲಪಾತಗಳಿಂದಲೂ ಈ ನಾಡು ಭವ್ಯವೂ ಸುಂದರವೂ ಆಗಿದೆ. ನಮ್ಮ ಮಹಾಕವಿಗಳೂ ಮಹಾಶಿಲ್ಪಿಗಳೂ ಮಹಾತತ್ವವೇತ್ತರೂ ಮಹಾ ರಸಋಷಿಗಳು ಮಹಾ ರಾಜರ್ಷಿಗಳೂ ಜಗತ್ತಿನ ಎಂತಹ ದೇಶಕ್ಕೂ ಹೆಮ್ಮೆತರುವಂತಹರಾಗಿದ್ದಾರೆ.

ಇಲ್ಲಿಗೆ ಅತಿಥಿಗಳಾಗಿ ಬಂದಿರುವ ನೀವು ಕಣ್ಣಿಗೆ ಕಾಣುವ ಭೂಪ್ರದೇಶವನ್ನೂ ಅದ್ಯತನವಾಗಿ ರಚಿತವಾಗಿರುವ ಮಾನವ ಕೌಶಲದ ವ್ಯಾಪಾರಗಳನ್ನೂ ಮಾತ್ರವೇ ಸಂದರ್ಶಿಸಿ ತೃಪ್ತರಾಗದೆ ಕರ್ಣಾಟಕ ಎಂಬ ಹೆಸರಿನಲ್ಲಿ ಅಡಕವಾಗಿರುವ ಮಹಾಮಾನಸಿಕ ಚಕ್ರಾಧಿಪತ್ಯದ ವಿಪುಲೈಶ್ವರ್ಯವನ್ನೂ ಸೂಕ್ಷ್ಮವಾಗಿಯಾದರೂ ಕಂಡುಕೊಳ್ಳುತ್ತೀರೆಂದು ಭಾವಿಸುತ್ತೇನೆ.

ನಾನು ಆಡುತ್ತಿರುವ ಈ ಭಾಷೆ ನನ್ನ ವಿದೇಶೀಯ ಬಾಂಧವರಿಗೆ ಅರ್ಥವಾಗದಿದ್ದರೂ ಅವರು ನನ್ನನ್ನು ಕ್ಷಮಿಸಿ ಶ್ಲಾಘಿಸುವರೆಂದು ಭಾವಿಸುತ್ತೇನೆ. ನೀವು ಕೇಳುತ್ತಿರುವ ಈ ಭಾಷೆ ಜಗತ್ತಿನ ಇಂದಿನ ಪ್ರಚಲಿತ ಮತ್ತು ಪ್ರಸಿದ್ಧವಾದ ಭಾಷೆಗಳಿಗೆ ಪಿತಾಮಹಸ್ಥಾನದಲ್ಲಿ ನಿಲ್ಲಬಹುದಾದ ಸುಮಾರು ಎರಡು ಸಾವಿರ ವರ್ಷಗಳ ಹಿಂದಿನ ಭಾಷೆ.

ನಿಮ್ಮಲ್ಲಿ ಅನೇಕರು ನಿಮ್ಮ ನಿಮ್ಮ ನಾಡಿನಲ್ಲಿ ನಿಮ್ಮ ನಿಮ್ಮ ಭಾಷೆಯಲ್ಲಿಯೇ ವಿದ್ಯಾರ್ಜನೆಮಾಡಿ ಅಭ್ಯುದಯ ಮತ್ತು ಶ್ರೇಯಸ್ಸು ಎರಡನ್ನೂ ನಿಸ್ಸಂದೇಹವಾಗಿ ಸಾಧಿಸಿದ್ದೀರಿ ಎಂದು ನಂಬಿದ್ದೇನೆ. ನಮ್ಮಲ್ಲಿ ಕಾರಣಾಂತರದಿಂದ ನಾವು ವಿದೇಶೀಯ ಭಾಷೆಯೊಂದನ್ನು ಉಪಯೋಗಿಸುತ್ತಿದ್ದೇವೆ. ಜಗತ್ತಿನ ಐಕ್ಯತೆಯನ್ನು ಸಾಧಿಸುವುದರಲ್ಲಿ ಅಂತಹ ಭಾಷೆಗೆ ವಿಶೇಷಸ್ಥಾನವಿದೆಯೆಂದು ನಾನು ಬಲ್ಲೆ. ಆದರೆ ಅದು ನಮ್ಮ ಸಾಮಾನ್ಯ ಜನತೆಯ ದೈನಂದಿನ ಜೀವನದಲ್ಲಿ ಫಲಕಾರಿಯಾಗದು ಎಂಬ ನಿಜವನ್ನು ನಿಮ್ಮಿಂದ ನಾವು ಕಲಿತುಕೊಳ್ಳುವಂತೆ ಮಾಡಿ ಹೋಗುತ್ತೀರೆಂದು ಆಶಿಸುತ್ತೇನೆ. ಅಂತಹ ಕೆಲಸವೂ ವಿಶ್ವವಿದ್ಯಾನಿಲಯದ ಒಂದು ಸೇವೆಯಾಗುವುದರಲ್ಲಿ ಸ್ವಲ್ಪವೂ ಸಂದೇಹವಿಲ್ಲ.

ನಿಮ್ಮ ವಿಚಾರಗೋಷ್ಠಿ ನಡೆಯುವ ಬೃಂದಾವನ ಪ್ರಪಂಚದಲ್ಲಿ ಅತ್ಯಂತ ರಮಣೀಯವೂ ಹಿತಕರವೂ ಆದ ಸೌಂದರ್ಯ ಸ್ಥಾನಗಳಲ್ಲೊಂದೆಂದು ಭಾವಿತವಾಗಿದೆ. ಇಲ್ಲಿಯ ನಿಮ್ಮ ತಂಗಣೆ ಸುಖಕರವಾಗಿರಲಿ . ಆಪ್ಯಾಯಮಾನವಾಗಿರಲಿ, ತುಂಬ ಪ್ರಯೋಜನಕಾರಿಯಾಗಲಿ, ಮತ್ತು ಇಲ್ಲಿಯ ಸವಿನೆನಪುಗಳು ನಿಮ್ಮ ನಿಮ್ಮ ನಾಡುಗಳಿಗೆ ಹೋದಮೇಲೂ, ಸದಾ ಹಚ್ಚಹಸುರಾಗಿರಲೆಂದು ನಾನು ಹಾರೈಸಿ, ನಮ್ಮನ್ನೆಲ್ಲ ಹರಸಲು ಉಪನಿಷತ್ತಿನ ದಿವ್ಯ ಮಂತ್ರದೇವತೆಯೊಂದನ್ನು ಆಹ್ವಾನಿಸುತ್ತೇನೆ.

ಓಂ ಸಹನಾವವತು
ಸಹ ನೌ ಭುನಕ್ತು
ಸಹವೀರ್ಯಂ ಕರವಾವಹೈ
ತೇಜಸ್ವಿನಾವಧೀತಮಸ್ತು
ಮಾ ವಿದ್ವಿಷಾವಹೈ
ಓಂ ಶಾಂತಿಃ ಶಾಂತಿಃ ಶಾಂತಿಃ

# ಭರತಖಂಡದ ಐಕ್ಯತೆ ನಮ್ಮೆಲ್ಲರ ಉಸಿರಾಗಬೇಕು [೧]

ಇಡೀ ಭರತಖಂಡದಲ್ಲಿ ಈ ದೀಕ್ಷಾ ದಿನ ಮತ್ತೆ ಮತ್ತೆ ಮರುಕೊಳಿಸಿ ಬರುತ್ತಿದೆ. ಒಂಬತ್ತು ವರ್ಷಗಳ ಹಿಂದೆ ಆಗಸ್ಟ್ ೧೫ನೇ ಆ ಮಧುರ ರಾತ್ರಿ ಈ ಸ್ವಾತಂತ್ರ್ಯ ದೇವತೆ ಪ್ರತ್ಯಕ್ಷಳಾದಳು . ಆಕೆ ಬರಿದೆ ಪ್ರತ್ಯಕ್ಷಳಾಗಲಿಲ್ಲ. ಸುಲಭವಾಗಿಯೂ ಪ್ರತ್ಯಕ್ಷಳಾಗಲಿಲ್ಲ, ನಿಶ್ಚಯ. ನಾವು ಇದಕ್ಕಾಗಿ ಅನೇಕ ವಿಧವಾಗಿ ತನುಮನಧನಗಳನ್ನು ತೆತ್ತಿದ್ದೇವೆ. ಫ್ರಾನ್ಸ್ ಅಮೆರಿಕಾ ದೇಶಗಳು ಹೋರಾಡಿದಂತೆ ಯುದ್ಧಕ್ಷೇತ್ರವನ್ನು ನಿರ್ಮಿಸಿ ರಕ್ತದ ಹೊಳೆ ಹರಿಸಿ ಕೊಲೆ ಹಿಂಸೆಗಳ ಮೂಲಕ ಸ್ವಾತಂತ್ರ್ಯವನ್ನು ಪಡೆಯಲಿಲ್ಲ. ಈ ವಿಶಾಲ ನಾಡಿನ ಜನಮನದ ಅಭೀಪ್ಸಾ ಮೂರ್ತಿಯಾದ ಯಾವ ಮಹದ್ವ್ಯಕ್ತಿಯ ಸತ್ಯ ಅಹಿಂಸಾಮಾರ್ಗದ ಸಾಧನೆಯಿಂದ ತಪಸ್ಯೆಯಿಂದ ಈ ದೇವತೆ ಪ್ರತ್ಯಕ್ಷಳಾದಳೊ ಆ ಮಹಾತ್ಮನ ತಪಶ್ಶಕ್ತಿ ಹುಲ್ಲುಕಡ್ಡಿಗಳಂತಿದ್ದ ಜನರನ್ನು ಉಕ್ಕಿನ ಚೇತನಗಳನ್ನಾಗಿ ಮಾಡಿದೆ; ಸ್ವಾರ್ಥತೆಯ ಬೀಡಾಗಿದ್ದವರನ್ನು ತ್ಯಾಗಶೀಲರನ್ನಾಗಿ ಮಾಡಿದೆ; ಅಂಜುಬುರುಕಿಗಳಾಗಿದ್ದವರನ್ನು ಧೈರ್ಯನಿಧಿಗಳನ್ನಾಗಿ ಪರಿವರ್ತಿಸಿದೆ. ಆ ಮಹಾತ್ಮನ ಕರೆಗೆ ಓಗೊಟ್ಟು ಎಲ್ಲರೂ ಸ್ವಾತಂತ್ರ್ಯ ಸಂಗ್ರಾಮಕ್ಕೆ ಮುನ್ನುಗ್ಗಿದರು. ಸಾಮಾನ್ಯರಲ್ಲಿಯೂ ದಿವ್ಯಚೈತನ್ಯ ಪ್ರವಹಿಸಿ ಸ್ವಾತಂತ್ರ್ಯಕ್ಕಾಗಿ ತಮ್ಮ ತನುಮನಧನಗಳನ್ನು ಮುಡಿಪಾಗಿಟ್ಟರು. ಅದೆಲ್ಲದರ ಫಲವಾಗಿ ಸ್ವಾತಂತ್ರ್ಯದೇವತೆ ಪ್ರತ್ಯಕ್ಷಳಾಗಿದ್ದಾಳೆ. ಇದಕ್ಕಾಗಿ ಎಷ್ಟು ತ್ಯಾಗ ಎಷ್ಟು ಪ್ರಾಣಹಾನಿ ಆಯಿತೆಂಬುದನ್ನು ಪ್ರತಿನಿತ್ಯವೂ ನಾವು ನೆನೆದುಕೊಳ್ಳುವುದು ನಮ್ಮ ಕರ್ತವ್ಯ. ಸ್ವಾತಂತ್ರ್ಯದೇವಿಯ ಬಲಿಪೀಠದಲ್ಲಿ ಹುತಾತ್ಮರಾದ ಆ ಅಜ್ಞಾತ ವಿಖ್ಯಾತ ಸೈನಿಕರಿಗೆಲ್ಲ ನಾವು ಪ್ರತಿವರ್ಷವು ನಮ್ಮ ಅಶ್ರುತರ್ಪಣವನ್ನು ನೀಡಬೇಕಾಗಿದೆ. ಬಹುಜನರ ತ್ಯಾಗದಿಂದ ಬಲಿದಾನದಿಂದ ಪ್ರತ್ಯಕ್ಷಳಾದ ಸ್ವಾತಂತ್ರ್ಯ ದೇವತೆಗೆ ಉಚಿತವಾದ ಪೂಜೆಯನ್ನು ಸಲ್ಲಿಸಬೇಕಾಗಿದೆ.

ಸ್ವಾತಂತ್ರ್ಯಾನಂತರ ಭರತಖಂಡದ ಗೆಲುವಿನ ಹೆಜ್ಜೆಯಿಂದ ಗೆಲುವಿನ ಹೆಜ್ಜೆಗೆ ಸಾಗುತ್ತಿದೆಯೆನ್ನುವುದರಲ್ಲಿ ಸಂದೇಹವಿಲ್ಲ. ಹತ್ತಿರದಿಂದ ನೋಡಿದವರಿಗೆ ಅಲ್ಲಲ್ಲಿ ಕುಂದುಕೊರತೆಗಳು ದೋಷದೌರ್ಬಲ್ಯಗಳು ಕಾಣುವುದು ಸಹಜ. ಇತರ ದೇಶಗಳಲ್ಲಿ ನಮ್ಮದೇಶಕ್ಕೆ ಎಂಥ ಮಾನ್ಯತೆಯಿದೆ ಗೌರವವಿದೆ ಎನ್ನುವುದನ್ನೂ, ರಾಜಕೀಯ ಪ್ರಜ್ಞೆ ನಮ್ಮ ನಾಡಿನಲ್ಲಿ ಹೇಗೆ ವಿಕಾಸಗೊಳ್ಳುತ್ತಿದೆಯೆನ್ನುವುದನ್ನು ನೆನೆದರೆ ನಾಡಿನ ಮುನ್ನಡೆ ಅರ್ಥವಾಗುತ್ತದೆ. ನಮ್ಮ ವಿದೇಶಾಂಗ ನೀತಿಯ ಔನ್ನತ್ಯಕ್ಕೂ ಸಫಲತೆಗೂ

---

೧ ೧೫–೮–೧೯೫೬ ೧೦ನೇ ಸ್ವಾತಂತ್ರ್ಯೋತ್ಸವ ಸಂದರ್ಭದಲ್ಲಿ ಮೈಸೂರಿನ ಪುರಭವನದಲ್ಲಿ ಮಾಡಿದ ಭಾಷಣ)

ಮಹಾತ್ಮಗಾಂಧೀಜಿಯವರ ಆಶೀರ್ವಾದ ಮತ್ತು ಜವಹರಲಾಲ್ ರ ನಾಯಕತ್ವದ ಹಿರಿಮೆ ಬಹು ಮುಖ್ಯಕಾರಣ, ನಿಜ. ಸತ್ಯ ಅಹಿಂಸೆ ಧರ್ಮ ಮೊದಲಾದ ಯಾವ ತತ್ತ್ವಗಳು ಅನುಷ್ಠಾನದ ಮೂಲಕ ನಮ್ಮ ದೇಶದ ಸ್ವಾತಂತ್ರ್ಯ ಸಂಪಾದನೆ ಸಾಧ್ಯವಾಯಿತೊ, ಆ ತತ್ತ್ವಗಳ ಅನುಸರಣೆಯಿಂದಲೇ ಇತರ ದೇಶಗಳ ಮನ್ನಣೆ ಮತ್ತು ಗೌರವ ನಮ್ಮ ದೇಶಕ್ಕೆ ಲಭಿಸಿದೆ, ಭರತಖಂಡದ ತನ್ನ ಮನೆಯಲ್ಲಿಯೇ ಏನೇನು ಸಾಧಿಸುತ್ತಿದೆ, ಎಷ್ಟೆಷ್ಟು ಸಿದ್ಧಿಪಡೆದಿದೆ, ಅದು ಕೈಗೊಂಡಿರುವ ಲೌಕಿಕ ಕ್ಷೇಮದ ಮಹತ್ಕಾರ್ಯ ಎಂಥದು ಎಂಬ ವಿಷಯದ ಮೇಲೆ ಗಂಟೆಗಟ್ಟಳೆ ಹೇಳಬಹುದು. ಆಯಾಯ ಶಾಖೆಯ ತಜ್ಞರು ಆ ಕೆಲಸಮಾಡಬೇಕಾಗಿದೆ. ಕೈಗಾರಿಕೆ, ಸಮಾಜ, ವಿದ್ಯಾಭ್ಯಾಸ, ನೀರಾವರಿ, ಮಾರ್ಗನಿರ್ಮಾಣ, ಸಂಶೋಧನಾಲಯಗಳ ಸ್ಥಾಪನೆ– ಇತ್ಯಾದಿ ವಿವಿಧ ಕ್ಷೇತ್ರಗಳಲ್ಲಿ ಈಗಾಗಲೆ ಏನೇನು ನಡೆದಿದೆ ಎನ್ನುವುದನ್ನು ಸೂಕ್ಷ್ಮವಾಗಿ ತಿಳಿಸಲೂ ಸಮಯವಿಲ್ಲ.

ಮೊದಲನೆಯ ಪಾಂಚವಾರ್ಷಿಕ ಯೋಜನೆ ಮುಗಿದು ಎರಡನೆಯ ಪಂಚವಾರ್ಷಿಕ ಯೋಜನೆಯಲ್ಲಿ ಕಾಲಿಡುತ್ತಿದ್ದೇವೆ. ಮೊದಮೊದಲು ಈ ಯೋಜನೆಗಳ ಬಗೆಗೆ ಕೆಲವರಲ್ಲಿ ಅನುಮಾನ ಸಂದೇಹಗಳು ಮೂಡಿದ್ದುಂಟು. ಏನೇನೊ ಅಪಾಯ ಸಂಭವಿಸಬಹುದೆಂದೂ ಭಾವಿಸಿದ್ದುಂಟು. ಅಂಥ ಸಂದೇಹ ಭಾವನೆಗಳಿಗೆ ಆಸ್ಪದಕೊಡುವ ಸನ್ನಿವೇಶಗಳು ಇರಬಹುದು. ಆದರೆ ಹಸಿದ ಹೊಟ್ಟೆ ಸ್ವಲ್ಪಮಟ್ಟಿಗೆ ಹೊಟ್ಟೆಬಾಕತನವನ್ನು ಪ್ರದರ್ಶಿಸಿದರೆ ಅದು ಕ್ಷಮ್ಯ. ಕೋಟ್ಯಂತರ ಕೋಟಿ ದ್ರವ್ಯವನ್ನು ವೆಚ್ಚಮಾಡುವಾಗ ಸ್ವಲ್ಪ ಭಾಗ ಸ್ವಾರ್ಥೋಪಯೋಗಕ್ಕಾಗಿ ಹೊಟ್ಟೆಬಾಕತನವನ್ನು ತೃಪ್ತಿಪಡಿಸುವುದಕ್ಕಾಗಿ ವ್ಯಯವಾಗಬಹುದು. ಇದನ್ನು ಜನ ವಿನೋದವಾಗಿ ಹೇಳಬಹುದು; ಮುಖ ಮುರಿಯುವಂತೆ ಹೇಳಬಹುದು. ನಾವು ಬಹುಕಾಲ ದಾರಿದ್ರ್ಯದ ದೈನ್ಯದ ಉಸುಬಿನಲ್ಲಿದ್ದವರು . ಗೋಪುರವನ್ನು ಕಟ್ಟುವುದಕ್ಕೆ ಮುಂಚೆ ದೇವಸ್ಥಾನದ ತಳಹದಿ ಕಟ್ಟುವುದಕ್ಕಾಗಿ ಉಸುಬು ತುಂಬಲು ಎಷ್ಟೋ ಕಲ್ಲು ತುಂಬಬೇಕಾಗುತ್ತದೆ. ಅಂತೂ ತುಂಬುತ್ತದೆ, ಇಂದಲ್ಲ ನಾಳೆ ಭವ್ಯ ಗೋಪುರವೂ ಏಳುತ್ತದೆ. ಇಂಥ ತಾತ್ಕಾಲಿಕವಾದ ಸಂಕಟ ಪರಿಸ್ಥಿತಿಯಿಂದ ನಿರಾಶರಾಗಬಾರದು. ಸ್ವಾತಂತ್ರ್ಯಶಿಲ್ಪಿ ಭಾರತಭಾಗ್ಯವಿಧಾತ ಪೂಜ್ಯ ಬಾಪೂಜಿ ಅವರ ಧ್ಯೇಯವನ್ನು ಗುರಿಯಲ್ಲಿಟ್ಟುಕೊಂಡು, ಅವರ ತತ್ತ್ವಗಳನ್ನು ಅನುಸರಿಸಿ, ನಮ್ಮಲ್ಲಿರುವ ಪ್ರತಿಯೊಬ್ಬರೂ ಗಾಂಧಿಯಾಗಿ ಪರಿಣಮಿಸಿದರೆ ಭೂಮಿಯೇ ಸ್ವರ್ಗವಾದೀತು. ಆದರೆ ನಮ್ಮದು ಮಿಶ್ರ ಜೀವನ. ಇಲ್ಲಿ ಉತ್ತಮ ಅಧಮ ಮಧ್ಯಮ ಎಲ್ಲ ಇದೆ. ಪ್ರತಿ ವರ್ಷವು ಗಾಂಧೀಜಿಯ ಜನ್ಮೋತ್ಸವ ಸ್ವಾತಂತ್ರ್ಯೋತ್ಸವಗಳನ್ನು ಆಚರಿಸಿ ಆ ಮೂಲಕ ಅವರ ತತ್ತ್ವಗಳನ್ನು, ನಾಡಿಗಾಗಿ ಬಲಿದಾನ ಮಾಡಿದ ವೀರಾಧಿವೀರರ ಜೀವನವನ್ನು ನೆನಪಿಗೆ ತಂದುಕೊಂಡು, ಎಷ್ಟು ಸಾಧ್ಯವೋ ಅಷ್ಟನ್ನಾದರೂ ಅನುಷ್ಠಾನದಲ್ಲಿ ತರುತ್ತ ಮುಂದುವರಿಯುವುದಾದರೆ ನಾಡಿನ ಅಭ್ಯುದಯ ಸಾಧ್ಯವಾಗುತ್ತದೆ.

ಲೌಕಿಕ ಕ್ಷೇಮದ ಸಾಧನೆಗಾಗಿ ಮಹತ್ಕಾರ್ಯಗಳು ಪ್ರಾರಂಭವಾಗಿವೆ;

ಕೆಲವಂತು ಮುಗಿಯುವುದರಲ್ಲಿವೆ. ಎಲ್ಲ ಪೂರೈಸಿದಮೇಲೆ ಸುಭಿಕ್ಷವೇ ಮೈದೋರುತ್ತದೆ. ಅನ್ನಸಂಪಾದನೆ ವಸನ ಸಂಪಾದನೆಯಲ್ಲಿಯೇ ತೃಪ್ತರಾಗದೆ ಸಂಸ್ಕೃತಿ ಕಲೆ–ಅಧ್ಯಾತ್ಮ ಇವುಗಳ ಕಡೆಗೂ ಮುಂದುವರಿಯುವುದರಿಂದ ಸಮಾಜಕ್ಕೆ ದೇಶಕ್ಕೆ ಶ್ರೇಯಸ್ಸುಂಟಾಗುತ್ತದೆ. ವಾಸ್ತವವಾಗಿ ಈಗ ಎಲ್ಲರೂ ಆ ಕಡೆಗೆ ಮುಂದುವರಿಯುತ್ತಿದ್ದಾರೆ. ಪ್ರಾಂತಪುನರ್ವಿಂಗಡಣೆಯ ಯೋಜನೆ ಬರಿಯ ಅನ್ನವಸನಗಳ ಕ್ಷೇಮದ ವಿಷಯವಾಗಿದ್ದರೆ ಅದು ಅನಾವಶ್ಯಕವಾಗಿತ್ತು. ರಾಜಕೀಯ ಮಾತ್ರವೇ ಅದರ ಧ್ಯೇಯವಾಗಿದ್ದರೆ ಶ್ರೇಯಸ್ಸಿಗೂ ಹಾನಿ ತಟ್ಟದಿರದು. ಭರತಖಂಡದ ಐಕ್ಯತೆ ನಮ್ಮೆಲ್ಲರ ಉಸಿರಾಗಬೇಕು. ಅದಕ್ಕಾಗಿ ಅರ್ಪಿತಪ್ರಾಣರಾಗಬೇಕು. ಎರಡು ಮೂರುಸಾವಿರ ವರ್ಷಗಳಿಂದ ಪ್ರಾದೇಶಿಕ ವೈಶಿಷ್ಟ್ಯ ವೈವಿಧ್ಯಗಳು ತಲೆದೋರಿ ಶಾಶ್ವತವಾಗಿ ಬೆಳೆದು ಬಂದಿವೆ. ಆದರೆ ಅವುಗಳನ್ನು ಈಗ ತಡೆಗಟ್ಟುವ ಕಾರ್ಯ ಸಾಧ್ಯವಿಲ್ಲ.ಈ ಅನೇಕತೆ ವೈವಿಧ್ಯತೆಗಳನ್ನು ರಕ್ಷಿಸಿಕೊಂಡು ಬರುವುದರಲ್ಲಿಯೇ ಭರತಖಂಡದ ಮೇಲ್ಮೆ ಇದೆ. ಇವುಗಳ ಉಳಿವಿಗೂ ಭರತಖಂಡದ ಐಕ್ಯತೆಗೂ ಯಾವ ವಿಧವಾದ ಅಪಚಾರವಾಗಬಾರದು. ಪ್ರಾಂತಪುನರ್ವಿಂಗಡಣೆಯೇ ಆಗಲಿ ಅಥವಾ ಇನ್ನಾವ ಯೋಜನೆಯನ್ನೇ ಕೈಗೊಳ್ಳಲಿ ಭರತ ಖಂಡದ ಐಕ್ಯತೆಗೆ ಭಂಗಬರುವ ಕಾರ್ಯವನ್ನು ಎಂದೆಂದಿಗೂ ಮಾಡಬಾರದು. ಏನು ಮಾಡಿದರೂ ಸಂಯಮದಿಂದ ವರ್ತಿಸಿದರೆ ಕ್ಷೇಮ. ಆದರೆ ಹೃದಯದಲ್ಲಿ ಅಂತರ್ಗತವಾದ ಪಶುಪ್ರವೃತ್ತಿ ಒಮ್ಮೊಮ್ಮೆ ಈ ಸಂಯಮವನ್ನು ಹೊಡೆದು ಅದುಮಿ ಹೊರಹೊಮ್ಮುತ್ತದೆ. ಆಗ ನಿರಾಶೆ ಮೂಡುವುದು ಸಹಜ. ಏನು ಮಾಡುವುದು? ಗಾಂಧೀಜಿಯ ಹತ್ತಿರ ಕುಳಿತು ಅವರ ತತ್ತ್ವವನ್ನು ಕೇಳಿದ್ದ, ಅವರ ಒಡನಾಡಿಗಳಾಗಿ ಕೆಲಸ ಮಾಡಿದ್ದ ವ್ಯಕ್ತಿಗಳೇ ಆ ಆದರ್ಶವನ್ನೆಲ್ಲ ಮರೆತು ಆಶ್ಚರ್ಯಕರವಾಗುವಂತೆ ವರ್ತಿಸಿರುವ ಕೆಲವು ಸಂದರ್ಭಗಳನ್ನಾದರೂ ನೋಡಿದ್ದೇವೆ. ಮನುಷ್ಯತ್ವ ಮನುಷ್ಯತ್ವವಾಗಿರುವವರೆಗೆ ಇಂಥವು ಇರುತ್ತವೆ. ಪಶುಪ್ರವೃತ್ತಿಯನ್ನು ದಮನಮಾಡಿ ಪ್ರಗತಿಪರವಾದ ದಾರಿಯಲ್ಲಿ ಸಾಗುವುದು ನಮ್ಮೆಲ್ಲರ ಕರ್ತವ್ಯ.ನಿರಾಶೆ ಸಂಕಟ ಮಾತ್ರ ಖಂಡಿತ ಸಲ್ಲದು.

ಇಂದು ಮತ್ತೊಮ್ಮೆ ದೀಕ್ಷಾದಿನ ಬಂದಿದೆ. ಪ್ರತಿವರ್ಷವೂ ಇದನ್ನು ಆಚರಿಸುತ್ತಿದ್ದೇವೆ. ಪ್ರಪಂಚದ ಎಲ್ಲ ಕಡೆಯೂ ಏನೇನು ವಿದ್ಯಮಾನಗಳು ನಡೆಯುತ್ತವೆಯೋ ಅವೆಲ್ಲ ನಮ್ಮ ಮೇಲೆ ಪ್ರಭಾವ ಬೀರುತ್ತವೆ. ನಮ್ಮ ಜನತೆ ಅವೆಲ್ಲವನ್ನೂ ಮನನಮಾಡಿಕೊಂಡು, ಹಿಂದಿನದನ್ನೆಲ್ಲ ಸಿಂಹಾವಲೋಕನ ಮಾಡಿಕೊಂಡು ಮುಂದುವರಿಯಬೇಕು. ಪ್ರಚೋದಕಾರಿಯೂ ಸ್ಫೂರ್ತಿದಾಯಕವೂ ಆದ ಕಾರ್ಯಕ್ರಮಗಳನ್ನು ಕೈಗೊಂಡು ಮುಂದಾಳುಗಳು ನಮ್ಮ ಜನತೆಯನ್ನು ನಡೆಸಬೇಕು. ನಾಡು ಲೌಕಿಕ ಕ್ಷೇಮವನ್ನು ಕಂಡುಕೊಳ್ಳುವುದರ ಜೊತೆಗೆ ಭಾಷಾಸಂಸ್ಕೃತಿ ಅಧ್ಯಾತ್ಮಪ್ರಗತಿಯನ್ನೂ ಕಂಡುಕೊಂಡು ಮುಂದೆ ಮುಂದೆ ಸಾಗಬೇಕು. ಹಿಂದಿನ ಪ್ರತಿಜ್ಞೆಯನ್ನು ನೆನೆದುಕೊಂಡು ನೂತನ ಪ್ರತಿಜ್ಞೆಯನ್ನು ತೊಡಬೇಕು. ೧೯೪೭ರ ಆಗಸ್ಟ್ ಮಧ್ಯರಾತ್ರಿ ಬ್ರಿಟಿಷ್ ಸಾಮ್ರಾಜ್ಯದ ಪ್ರತಿನಿಧಿಗಳಿಂದ ನಮ್ಮ ರಾಷ್ಟ್ರೀಯ ಪ್ರತಿನಿಧಿಗಳಿಗೆ

ಅಧಿಕಾರ ದೊರೆಯುತ್ತಿದ್ದಾಗ, ಎಲ್ಲ ಜನರ ಪರವಾಗಿ ದೀಕ್ಷಾಬದ್ಧರಾಗುತ್ತಿದ್ದಾಗ, ಆ ಸಮಾರಂಭದ ವರದಿಯನ್ನು ರೇಡಿಯೋ ಮುಖಾಂತರ ಆಲಿಸುತ್ತಿದ್ದಾಗ ಕವಿಕಲ್ಪನೆ ಕಂಡ ಭಾರತೀಯ ದಿವ್ಯಸ್ವರೂಪದ ದರ್ಶನ ನನ್ನೊಂದು ಮಹಾಪ್ರಗಾಥದಲ್ಲಿ ಮೂಡಿದೆ. ಅದನ್ನು ಓದಿ ನನ್ನ ಭಾಷಣ ಮುಗಿಸುತ್ತೇನೆ.[೨]

---

[೨] ನೋಡಿ : ಕುವೆಂಪು ಅವರ 'ಶ್ರೀ ಸ್ವಾತಂತ್ರ್ಯೋದಯ ಮಹಾಪ್ರಗಾಥಾ'.

# ಕರ್ಣಾಟಕದ ಕಲ್ಯಾಣ [೧]

ರಾಷ್ಟ್ರಪತಿಗಳೂ ಪ್ರಧಾನಮಂತ್ರಿಗಳೂ ವಿಶಾಲ ಮೈಸೂರಿನ (ಕರ್ಣಾಟಕದ) ಸಾಂಸ್ಕೃತಿಕ ಏಕೀಕರಣದ ಬಗ್ಗೆ ಪ್ರಸ್ತಾಪಿಸಿ, ತಮ್ಮ ಮೆಚ್ಚುಗೆ ವ್ಯಕ್ತಪಡಿಸಿ, ಕರ್ಣಾಟಕಕ್ಕಿಂತ ಭಾರತ ದೊಡ್ಡದೆಂದೂ, ಅದರ ಕಲ್ಯಾಣ ಸಾಧನೆಗಾಗಿ ಅದರ ಐಕ್ಯತೆಗಾಗಿ ನಿರಂತರ ದುಡಿಯಬೇಕೆಂದೂ ಹಾರೈಸಿದ್ದಾರೆ.

ನವೆಂಬರ್ ೧ ಭಾರತೀಯ ಇತಿಹಾಸದಲ್ಲಿ ಮುಖ್ಯವಾದ ದಿನ; ಎಂದೆಂದೂ ಮರೆಯದ ದಿನ. ೧೯೪೭ನೆಯ ಆಗಸ್ಟ್ ೧೫ನೆಯ ದಿನ ಎಷ್ಟು ಪ್ರಾಮುಖ್ಯವೋ ಹೆಚ್ಚು ಕಡಿಮೆ ಅಷ್ಟೇ ಮುಖ್ಯವಾದ ದಿನ. ಭರತಖಂಡದ ಭೂಪಟ ಸಹಜವಾಗಿ ಅನಿವಾರ್ಯವಾಗಿ ಅಂತರಂಗಿಕವಾಗಿ ಬದಲಾವಣೆಗೊಂಡಿರುವ ಸುದಿನ. ಈ ಸುಸಮಯದಲ್ಲಿ 'ಕರ್ಣಾಟಕ'ದ ಅರ್ಥವೇನು? ಉದ್ದೇಶವೇನು? ಧ್ಯೇಯವೇನು? ಎಂಬುದನ್ನು ಕುರಿತು ಎಲ್ಲರೂ ಯೋಚಿಸಬೇಕಾಗಿದೆ. ಒಬ್ಬೊಬ್ಬರೂ ಒಂದೊಂದು ವಿಧವಾಗಿ ಆಲೋಚಿಸುತ್ತಾರೆ. ಇದೂ ಸಹಜವೆ.

ಸುಮಾರು ೫೦ ವರ್ಷಗಳಿಂದ ನಮ್ಮ ನಾಡಿನ ಜನರು ಭಾಷಾನುಗುಣವಾದ ಪ್ರಾಂತರಚನೆಯ ಹೊಂಗನಸನ್ನು ಕಾಣುತ್ತ ಬಂದಿದ್ದರು. ಅದು ಮೊದಮೊದಲು ಸ್ವಾತಂತ್ರ್ಯ ಚಳುವಳಿಯ ಒಂದು ಅಂಗವಾಗಿ ಹೊರ ಹೊಮ್ಮಿತೆಂದು ತೋರುತ್ತದೆ. ರಾಜಕೀಯದ ಆಯುಧಗಳಲ್ಲೊಂದಾಗಿಯೂ ಅದನ್ನು ಉಪಯೋಗಿಸುತ್ತ ಬಂದರು. ಆದರೆ ಆ ಕನಸು ರಾಜಕೀಯ ಮೂಲವೆನ್ನುವುದಕ್ಕಿಂತ ಸಾಂಸ್ಕೃತಿಕ ಮೂಲವಾದುದೆಂಬ ಅಂಶ ಒಳಹೊಕ್ಕು ನೋಡಿದವರಿಗೆ ಕಾಣದಿರದು. ಹಿಂದೆ ಇದ್ದ ರಾಜ್ಯಗಳನ್ನು ಅಳಿಸಿ ಹೊಸ ರಾಜ್ಯಗಳನ್ನು ನಿರ್ಮಿಸುವ ಉದ್ದೇಶವೇನು? ಇದರಲ್ಲಿ ರಾಜಕೀಯವನ್ನು ಮೀರಿದ ಸಾಂಸ್ಕೃತಿಕ ದೃಷ್ಟಿ ಅಡಕವಾಗಿದೆಯೆನ್ನುವುದನ್ನು ಮರೆಯಲಾಗದು. ಭರತಖಂಡದ ಐಕ್ಯತೆಯನ್ನು ರಾಜಕೀಯದ ಅಳತೆಗೋಲಿನಿಂದ ಅಳೆಯಲು ಸಾಧ್ಯವಿಲ್ಲ. ಭರತಖಂಡದಲ್ಲಿ ಹಿಂದೆಂದೂ ಇಂದಿನ ರಾಜಕೀಯ ಐಕ್ಯತೆ ಇರಲಿಲ್ಲ. ಅಶೋಕ ಚಕ್ರವರ್ತಿಯ ಕಾಲದಲ್ಲಿಯೂ ಹಿಮಾಲಯದಿಂದ ಕನ್ಯಾಕುಮಾರಿಯವರೆಗೆ ನಾಡು ರಾಜಕೀಯವಾಗಿ ಅಖಂಡವಾಗಿರಲಿಲ್ಲವೆಂದೇ ಹೇಳಬಹುದು. ಆದರೆ ರಾಜಕೀಯವಾಗಿ ಬೇರೆಬೇರೆ ರಾಜ್ಯಗಳಿದ್ದರೂ ಸಾಂಸ್ಕೃತಿಕವಾಗಿ ಅಖಂಡತ್ವ ಬಹು ಪೂರ್ವಕಾಲದಿಂದಲೂ ಸ್ಥಾಪಿತವಾಗಿದೆ. ನಮ್ಮ ಪ್ರಾಚೀನರ ಅಧ್ಯಾತ್ಮಿಕ ಪ್ರಗತಿಗೆ

---

[೧] ೧-೧೧-೧೯೫೬ ಕನ್ನಡ ರಾಜ್ಯೋತ್ಸವ ದಿನದಂದು ಮೈಸೂರಿನ ಮಾಡಿದ ಭಾಷಣ.

ಮತ್ತು ಅದರ ಐಕ್ಯತಾ ಸಾಧನೆಗೆ ಭೌಗೋಲಿಕಾಂಶಗಳೇ ಆಧಾರವಲ್ಲ. ಭೌಗೋಲಿಕ ವಿಭಾಗಗಳಿದ್ದರೂ ವಾಸ್ತವವಾಗಿ ಆ ಐಕ್ಯತೆ ನಡೆದು ಬಂದಿದೆ. ಅದನ್ನು ನಾವಿಂದು ರಾಜಕೀಯವಾಗಿ ರೂಪಿಸುತ್ತಿದ್ದೇವೆ.

ಹಿಂದಿನಿಂದ ಭಾರತೀಯರು ರಾಜ್ಯರಾಜ್ಯಗಳ ಹೋರಾಟಕ್ಕೆ ಹೆಚ್ಚು ಬೆಲೆ ಕೊಡಲಿಲ್ಲ. ನಮ್ಮ ದೃಷ್ಟಿಯಲ್ಲಿ ರಾಜಕೀಯ ಬದಲಾವಣೆ ಕಾಲಾನುವರ್ತಿ. ಮೂಲ ಐಕ್ಯತೆ ಬಹುಮುಖ್ಯ. ಅದೊಂದೇ ಭರತಖಂಡವನ್ನು ಅಖಂಡವಾಗಿ ಬಂಧಿಸುವ ಶಕ್ತಿ. ಕನ್ಯಾಕುಮಾರಿಯಿಂದ ಹಿಮಾಲಯದವರೆಗೆ ಯಾವ ರಾಜ್ಯಕ್ಕೆ ಹೋಗಲಿ, ಯಾವ ಹಳ್ಳಿಗೆ ಹೋಗಲಿ, ಯಾವ ನಗರಕ್ಕೆಹೋಗಲಿ ಈ ಮೂಲ ಸಂಸ್ಕೃತಿಯ ಐಕ್ಯತೆಯನ್ನು ಕಾಣುತ್ತೇವೆ. ಭಾಷೆಯಲ್ಲಿ ವೇಷಭೂಷಣಗಳಲ್ಲಿ ನಡೆನುಡಿಗಳಲ್ಲಿ ಆಚಾರ ಆಹಾರಗಳಲ್ಲಿ ಬಹುಶಃ ಶಾರೀರಿಕ ವರ್ಣದಲ್ಲಿ ವ್ಯತ್ಯಾಸಗಳನ್ನು ಗಮನಿಸಬಹುದು. ಔತ್ತರೇಯ–ದಾಕ್ಷಿಣಾತ್ಯ, ಆ ಜಾತಿ–ಈ ಜಾತಿ, ಆ ಮತ–ಈ ಮತ ಎಂಬ ಭೇದವಿಲ್ಲದೆ ವೇದೋಪನಿಷತ್ತು ಪುರಾಣೇತಿಹಾಸ ದರ್ಶನಗಳೂ. ಅಲ್ಲಿ ಪ್ರತಿಪಾದಿತವಾಗಿರುವ ಉದಾತ್ತ ತತ್ತ್ವಗಳೂ ಸರ್ವಜನಾದರಣೀಯವಾಗಿವೆ; ಅಲ್ಲಿ ಅಭಿವ್ಯಕ್ತಗೊಂಡಿರುವ ಮಹಾವ್ಯಕ್ತಿಗಳು ಸರ್ವಜನಗೌರವಭಾಜನರಾಗಿದ್ದಾರೆ; ಅಲ್ಲಿ ಕಾಣುವ ಆಧ್ಯಾತ್ಮಿಕ ವಿಚಾರದಲ್ಲಿ ಎಲ್ಲರೂ ಒಂದೇ ವಿಧವಾದ ಶ್ರದ್ಧಾಭಕ್ತಿಗೌರವವುಳ್ಳವರಾಗಿದ್ದಾರೆ. ಶ್ರೀಮದ್ರಾಮಾಯಣ ಅಥವಾ ಮಹಾಭಾರತ ಯಾವ ಭಾಷೆಯಲ್ಲಿಯೆ ಇರಲಿ–ಅದು ಸಂಸ್ಕೃತವಾಗಲಿ ಬಂಗಾಳಿಯಾಗಲಿ ತೆಲುಗಾಗಲಿ ತಮಿಳಾಗಲಿ ಕನ್ನಡವಾಗಲಿ–ಅದ್ನು ಓದಿದವರಲ್ಲಿ ಏಕರೀತಿಯವಾದ ಪೂಜ್ಯಭಾವನೆ ಮೂಡುತ್ತದೆ. ಯಾವ ಸೈನಿಕ ಶಕ್ತಿಯೂ ರಾಜಕೀಯ ಶಕ್ತಿಯೂ ಮಾಡಲಾರದ ಕೆಲಸವನ್ನು, ರಕ್ಷಿಸಲಾರದ ಸಂಸ್ಕೃತಿ ಭಂಡಾರವನ್ನು ಮಹಾಕವಿಗಳು ಗಾಯಕವರೇಣ್ಯರು ಶಿಲ್ಪವೇತ್ತರು ಕಲಾಚಾರ್ಯರು ಮಾಡುತ್ತ ಬಂದಿದ್ದಾರೆ, ರಕ್ಷಿಸುತ್ತ ಬಂದಿದ್ದಾರೆ. ಹಾಗಾಗದಿದ್ದರೆ ಇಂದಿನ ಭೌಗೋಲಿಕ ಐಕ್ಯತೆ ಸಾಧ್ಯವಾಗುತ್ತಿರಲಿಲ್ಲ.

ಪ್ರಪಂಚದಲ್ಲಿ ಯಾವ ಸಮಯದಲ್ಲಿ ಏನುಬೇಕಾದರೂ ಆಗಬಹುದು. ಎಂಥ ವಿನಾಶವಾದರೂ ಒದಗಬಹುದು. ಆದರೆ ಭರತಖಂಡದ ಸಾಂಸ್ಕೃತಿಕ ಐಕ್ಯತೆ ಮಾತ್ರ ಅವಿನಾಶಿ. ಈ ಸಂಸ್ಕೃತಿ ವಿಶೇಷವಾಗಿ ಸಂಸ್ಕೃತಭಾಷೆಯಲ್ಲಿ ರಕ್ಷಿತವಾಗಿ ಘನೀಭೂತವಾಗಿ ಇದೆ. ಅದು ೧೪ ಮುಖ್ಯಭಾಷೆಗಳ ಮೂಲಕ ಸಾಮಾನ್ಯ ಜನರೆಡೆಗೆ ಹರಿದು ಬರುತ್ತಿದೆ. ಸಂಸ್ಕೃತಭಾಷೆ ಸರೋವರ ಇದ್ದ ಹಾಗೆ. ೧೪ ಭಾಷೆಗಳು ಅಲ್ಲಿಂದ ಹೊಮ್ಮಿದ ಕಾಲುವೆಗಳು–ಕನ್ನಡದ ಕಾಲುವೆ, ಮರಾಠಿ ಕಾಲುವೆ ಇತ್ಯಾದಿ. ಒಂದೇ ಗುಣದ ನೀರು ಬೇರೆ ಬೇರೆ ಕಾಲುವೆಗಳಲ್ಲಿ ಹರಿದು ಬೇರೆ ಬೇರೆ ಕ್ಷೇತ್ರಗಳನ್ನು ಅಭಿವೃದ್ಧಿಗೊಳಿಸುತ್ತಿದೆ. ಅಖಂಡತೆಯಲ್ಲಿ ಅಥವಾ ಏಕತ್ವದಲ್ಲಿ ಅನೇಕತ್ವವನ್ನೂ, ಅನೇಕತ್ವದಲ್ಲಿ ಏಕತ್ವವನ್ನೂ ಕಾಣುತ್ತೇವೆ. ಅನೇಕತ್ವ ಏಕತ್ವ ವಿರುದ್ಧವಲ್ಲ. ಒಂದಕ್ಕೆ ಮತ್ತೊಂದು ರಕ್ಷಣೆಯಾಗುತ್ತದೆ, ಪೋಷಕವಾಗುತ್ತದೆ. ವಾಸ್ತವವಾಗಿ ಅಖಂಡ ಭಾರತೀಯ ಸಂಸ್ಕೃತಿ ಅಯಾಯ ದೇಶಭಾಷೆಗಳ ಮೂಲಕವೇ ಹರಿದು ಬಂದಿದೆ.

ಆದ್ದರಿಂದ ಭಾಷಾನುಗುಣ ಪ್ರಾಂತರಚನೆಯಿಂದ ಭರತಖಂಡದ ಐಕ್ಯತೆಗೆ ಖಂಡಿತ ಧಕ್ಕೆ ಬರಲಾರದು.

ಈ ಐವತ್ತು ವರ್ಷಗಳಲ್ಲಿ ಯಾವ ರೀತಿ ಹೋರಾಟ ನಡೆದಿದೆಯೆಂಬುದನ್ನು ಗಮನಿಸಿ ಮುಂದೆ ಹೇಗೆ ಎಲ್ಲರೂ ಒಟ್ಟಾಗಿ ವರ್ತಿಸಬೇಕೆನ್ನುವುದನ್ನು ನಿರ್ಧರಿಸಿಕೊಳ್ಳಬೇಕು. ಪ್ರಾಂತಪುನರ್ವಿಂಗಡಣೆಯಿಂದ ಕೇಡು ಸಂಭವಿಸಬಹುದೆಂದು ಕೆಲವರು ಸಂದೇಹ ವ್ಯಕ್ತಪಡಿಸಿದರು. ಕುರುಕ್ಷೇತ್ರವನ್ನು ಕಳೆದು ಶಾಂತಿಯ ಮಾರ್ಗದಲ್ಲಿ ಕಾಲಿಡುತ್ತಿದ್ದೇವೆ. ಹಳೆಯ ಹೋರಾಟ ಕಲಹ ಏನಿದ್ದರೂ ಮರೆತು ಎಲ್ಲರೂ ದೇಶದ ರಚನಾತ್ಮಕ ಕಾರ್ಯದಲ್ಲಿಯೇ ತಲ್ಲೀನರಾಗಬೇಕು. ಆರೋಗ್ಯಭಾಗ್ಯ ಪಡೆದ ಮನುಷ್ಯ ಹೇಗೆ ರೋಗದ ವಿಷಯ ಯೋಚನೆಮಾಡುವುದಿಲ್ಲವೊ ಹಾಗೆಯೇ ನಮಗೆ ಮುಂದೆ ರೋಗ ಮತ್ತು ಔಷಧದ ಆಲೋಚನೆ ಅನಾವಶ್ಯಕ. ಪ್ರಧಾನಿ ನೆಹ್ರೂ ಅವರು ತಮ್ಮ ಸಂದೇಶದಲ್ಲಿ ಹೇಳಿದಂತೆ ರಾಜಕೀಯ ಐಕ್ಯತಾಸ್ಥಾಪನೆಗೆ ಆರ್ಥಿಕ ಮತ್ತು ಸಾಂಸ್ಕೃತಿಕ ಸಂಸತ್ಸಾಧನೆಗೆ ನಾವೆಲ್ಲ ಸಿದ್ಧರಾಗಬೇಕು.

ಕನ್ನಡ ಭಾಷಾಸಾಹಿತ್ಯಗಳು ತುಂಬ ಪ್ರಾಚೀನವಾದುವು. ಸುಮಾರು ಒಂದೂವರೆ ಸಾವಿರ ವರ್ಷಗಳಿಂದ ಸಾಹಿತ್ಯ ಬೆಳೆಯುತ್ತಿದೆ. ಮಿಲ್ಟನ್ನಿನ ಕಾವ್ಯವನ್ನು ಮೀರಿಸುವಂಥ ಮಹಾಕಾವ್ಯ ಅವನಿಗಿಂಥ ನೂರಾರು ವರ್ಷಗಳ ಹಿಂದೆಯೆ ಕನ್ನಡದಲ್ಲಿ ಹುಟ್ಟಿತೆನ್ನುವುದನ್ನು ಮರೆಯಲಾಗದು. ಪಂಪನ ಮಹಾಕಾವ್ಯದ ಪ್ರಾಚೀನತೆಯನ್ನು ಗಮನಿಸಿದರೆ ಪ್ರಪಂಚದ ಭಾಷೆಯೂ ಸಂಸ್ಕೃತಿಯ ಭಾಷೆಯೂ ಆದ ಇಂಗ್ಲಿಷ್ ಇತ್ತೀಚಿನದೆಂದು ಹೇಳಬೇಕಾಗುತ್ತದೆ. ಅಂದಿನಿಂದ ಇಂದಿನವರೆಗೆ ಶಿಲ್ಪಕಲೆ ಚಿತ್ರಕಲೆ ಗಾನಕಲೆ ಅವಿಚ್ಛಿನ್ನವಾಗಿ ಹರಿದುಬಂದಿದೆ. ಇದರಿಂದ ನಾವು ತುಂಬ ಶ್ರೀಮಂತ ವರ್ಗಕ್ಕೆ ಸೇರಿದವರೆಂದು ಧೈರ್ಯವಾಗಿ ಮುನ್ನುಗ್ಗಬಹುದು.

ರಾಜ್ಯಪಾಲರು ಉದ್ಘಾಟನಾ ಸಮಯದಲ್ಲಿ ಹೇಳಿದ ಮಾತುಗಳನ್ನು ನಾವು ಸದಾ ನೆನಪಿನಲ್ಲಿಡಬೇಕು. ಅವರು ವಿಶಾಲಮೈಸೂರಿನ ಸಂಸ್ಕೃತಿ ವೈಭವವನ್ನು ವಿವರಿಸಿದರು. ಅಧ್ಯಾತ್ಮಿಕ ವಿಷಯವಾಗಿ ಹೇಳುತ್ತಾ ಸಮನ್ವಯದೃಷ್ಟಿ ತಾಳ್ಮೆ ಔದಾರ್ಯಗಳಿಂದ ಇಲ್ಲಿಯ ಜನ ಹೇಗೆ ವರ್ತಿಸಿದ್ದಾರೆನ್ನುವುದನ್ನು ತಿಳಿಸಿ, ಶಂಕರ ರಾಮಾನುಜ ಬಸವೇಶ್ವರರನ್ನು ನೆನಪಿಗೆ ತಂದುಕೊಟ್ಟರು. ನಮ್ಮ ಜನಮನ ಉದಾತ್ತವೂ ವಿಶಾಲವೂ ಆದ ಭಾವನೆಯಿಂದ ಕೂಡಿದ್ದೆಂಬುದನ್ನು ಚಾರಿತ್ರಿಕ ಸಂಗತಿಗಳು ವಿಶದಪಡಿಸುತ್ತವೆ.

ಇನ್ನೊಂದು ವಿಷಯವನ್ನು ಈ ಸಂದರ್ಭದಲ್ಲಿ ಹೇಳದಿದ್ದರೆ ನಾವು ಕೃತಜ್ಞರು ಎನಿಸಿಕೊಳ್ಳುವುದಿಲ್ಲ. ಈ ಹೊತ್ತಿನ ಘಟನೆಯ ಅಂತರಾಳದಲ್ಲಿ ಕ್ರಾಂತಿಕಾರಕ ಬದಲಾವಣೆ ನಡೆದಿದೆಯೆಂಬುದನ್ನು ಜನ ಅರಿಯರು. ಇಂತಹ ಮಹತ್ಕಾರ್ಯವನ್ನು ಸಾಧಿಸಲು ಬೇರೆ ದೇಶಗಳಲ್ಲಿ ರಕ್ತದ ಹೊಳೆ ಹರಿಯುತ್ತಿತ್ತು; ಅನೇಕಾನೇಕ ತಲೆಗಳು ಹಾರಾಡುತ್ತಿದ್ದುವು. ರಕ್ತಪ್ರವಾಹ ಮತ್ತು ಭೀಕರ ಕೊಲೆಗಳು

ಸಾಧಿಸದ ಮಹತ್ಕಾರ್ಯವನ್ನು ಇಂದು ಶಾಂತಿರೂಪದಲ್ಲಿ ಸಾಧಿಸಲಾಗಿದೆ. ಅದೂ ಇತರರಿಗೆ ಅರಿವಾಗದಂತೆ. ಎಂಟೊಂಬತ್ತು ವರ್ಷಗಳ ಹಿಂದೆ ಭಾರತಖಂಡದಲ್ಲಿ ಎಷ್ಟೊಂದು ರಾಜ್ಯಗಳಿದ್ದುವು, ಎಷ್ಟೊಂದು ರಾಜರಿದ್ದರು? ವಾಸ್ತವವಾಗಿ ರಾಜತ್ವ ನಿನ್ನೆಗೆ ಮುಕ್ತಾಯವಾಗಿ ಪ್ರಜಾಪ್ರಭುತ್ವ ಸಂಪೂರ್ಣವಾಗಿ ಸ್ಥಾಪಿತವಾಗಿದೆ. ಇದೆಲ್ಲ ಹೇಗೆ ಸಾಧ್ಯವಾಯಿತು? ರಾಜರುಗಳ ಔದಾರ್ಯ ಮತ್ತು ಪ್ರಜೆಗಳ ಸಹಾನುಭೂತಿಯಿಂದಾಗಿ ಇದೆಲ್ಲ ಸುಲಭಸಾಧ್ಯವಾಯಿತು.

ಮೈಸೂರು ಮಹಾರಾಜರು ನಮ್ಮ ರಾಜ್ಯಪಾಲರಾಗಿಯೇ ಇದ್ದಾರೆ. ಅವರು ಪ್ರಜಾವತ್ಸಲರು,ಕಲಾಪ್ರೇಮಿಗಳು, ನ್ಯಾಯಪರರು, ತ್ಯಾಗಶೀಲರು. ಹಿಂದಿನ ಮುಖ್ಯ ಮಂತ್ರಿಗಳು ಮಹಾರಾಜರ ವರ್ಧಂತ್ಯುತ್ಸವದ ಗೌರವಾರ್ಥವಾಗಿ ಸಭೆ ಏರ್ಪಡಿಸಿದ್ದ ಕಾಲದಲ್ಲಿ ಅವರು (ಮಹಾರಾಜರು) ಲೋಕೋತ್ತರವಾದ ಮಾತುಗಳನ್ನಾಡಿದರು. ಸಂಬಳದಲ್ಲಿ ಹತ್ತುರೂಪಾಯಿ ಖೋತಾ ಎಂದರೆ, ಸ್ಥಾನ ವ್ಯತ್ಯಾಸವಾಯಿತೆಂದರೆ ಪ್ರಪಂಚವೇ ಮುಳುಗಿ ಹೋಯ್ತೆಂದು ಬಾಯ್ ಬಾಯ್ ಬಿಟ್ಟು ಗೋಳಾಡುವುದುಂಟು. ಶತಮಾನಗಳಿಂದ ನಡೆದುಬಂದ ರಾಜತ್ವ, ಅದರ ಗಾಂಭೀರ್ಯ ಶ್ರೀಮಂತತೆಗಳು, ಅದರ ಅನುಕೂಲ ಪ್ರಯೋಜನಗಳು ಎಲ್ಲವನ್ನೂ ಉದ್ರೇಕಕ್ಕೆ ಅವಕಾಶವಿಲ್ಲದಂತೆ ನಿರ್ಭಾವವಾಗಿ ನಿಷ್ಕಳಂಕವಾಗಿ ಪರಿತ್ಯಾಗ ಮಾಡುವುದೆಂದರೆ ಸಾಮಾನ್ಯವಲ್ಲ. ಆ ಪರಿತ್ಯಾಗದ ಮಹತ್ವವನ್ನು ಅಳೆಯುವುದು ಕಷ್ಟ. "ಈಶ್ವರೀಶಕ್ತಿ ಈಶ್ವರೇಚ್ಛೆ ನಮ್ಮ ಮನೆತನ ರಾಜ್ಯವಾಳಿ ಪ್ರಜೆಗಳನ್ನು ಕಾಪಾಡಿಕೊಂಡು ಬರಬೇಕೆಂದಿತ್ತು. ಅದಕ್ಕೆವಿಧೇಯವಾಗಿ ನಮ್ಮವರು ನಡೆದುಕೊಂಡು ಬಂದಿದ್ದಾರೆ. ಅದೇ ಈಶ್ವರೇಚ್ಛೆಗೆ ಮಣಿದೇ ಇಂದು ಪ್ರಜೆಗಳಿಗೆ ಆಡಳಿತವನ್ನು ವಹಿಸಿಕೊಡುತ್ತಿದ್ದೇವೆ" ಅಂದು ಅವರಾಡಿದ ಮಾತಿನ ಅರ್ಥ ಇದು. ರಾಜ್ಯದ ಮೇಲೆ ರಾಜ್ಯಗೆದ್ದು ಪ್ರಪಂಚವನ್ನೇ ದಿಗ್ಭ್ರಮೆಗೊಳಿಸಿದ ನೆಪೋಲಿಯನ್ ಮತ್ತು ಸಿಕಂದರ್‌ರ ಸಾಹಸಕ್ಕಿಂತ ಮಹೋನ್ನತವಾದ ಸಾಹಸವಿದು. ಪ್ರಜಾಕ್ಷೇಮಕ್ಕಾಗಿ ಸಿಂಹಾಸನ ತ್ಯಾಗಮಾಡುವ ಮನೋಭಾವ ರಾಜ್ಯವನ್ನು ಗೆಲ್ಲುವ ಹೆಮ್ಮೆ ಮತ್ತು ಅಹಂಕಾರಕ್ಕಿಂತಲೂ ಶ್ಲಾಘ್ಯವಾದ ಮನೋಧರ್ಮ. ರಾಜ್ಯವಿಜಯಕ್ಕಿಂತ ರಾಜ್ಯತ್ಯಾಗ ಮಹತ್ತರವಾದ ಸಾಹಸವೆಂದು ರಾಜ್ಯಪಾಲರು ತೋರಿಸಿಕೊಟ್ಟಿದ್ದಾರೆ. ಇಂದಿನ ಅರಕ್ತ ವಿಪ್ಲವ ಯಾರಿಗೂ ಅರಿವಾಗದಂತೆ ಶಾಂತ ರೀತಿಯಿಂದ ನಡೆದು ಹೋಗಿದೆ.

ನಮ್ಮ ನಾಡು ಕರ್ಣಾಟಕ. ಹೆಸರು "ಹೊಸ ಮೈಸೂರಾ"ದರೂ ಕರ್ಣಾಟಕವೇ! ಸದ್ಯಕ್ಕೆ ಹೆಸರಿನ ಬಗೆಗೆ ಹೋರಾಟ ಬೇಡ. ಬೆಂಗಳೂರು –ಮೈಸೂರು, ಈಎರಡು ನಗರಗಳಲ್ಲಿ ಅಗಾಧ ವ್ಯತ್ಯಾಸವಿದೆ. ಸರ್ಕಾರಿ ಕೆಲಸಕ್ಕಾಗಿ ಆಗಾಗ್ಗೆ ಬೆಂಗಳೂರಿಗೆ ಹೋಗಿ ಬರಬೇಕಾಗಿದೆ. ಹೋಗಿ ಬಂದಾಗ ಕಾರ್ಖಾನೆಗೆ ಹೋಗಿಬಂದ ಅನುಭವವಾಗುತ್ತದೆ. ಆ ಧಾವತಿ, ಆ ಕೆಲಸ, ಆ ಓಡಾಟ, ಆ ಅವಿರಾಮತೆ– ಯೋಚಿಸಲೂ ಪುರಸತ್ತಿಲ್ಲ– ಸಾಕೋಸಾಕಾಗುತ್ತದೆ. ಅದು ರಾಜಕೀಯವಾದ ರಾಜಧಾನಿಯೇನೋ ಸರಿ. ಚಾಮುಂಡಿ ಬೆಟ್ಟದ ದಿವ್ಯ ಸಾನ್ನಿಧ್ಯದಲ್ಲಿ, ಹಿತಮಿತವಾದ ನಾಗರಿಕತೆಯ ಸೆರಗಿನಲ್ಲಿ, ವನ್ಯವೂ

ಆದರೆ ನಾಗರಿಕವೂ ಆದ ವಾತಾವರಣದಲ್ಲಿ ಮಲಗಿರುವ ಈ ಮೈಸೂರು ನಗರವನ್ನು ಕರ್ಣಾಟಕದ ಸಾಂಸ್ಕೃತಿಕ ರಾಜಧಾನಿಯನ್ನಾಗಿ ಪರಿವರ್ತಿಸುವ ಕಾರ್ಯ ನಮ್ಮದು. ಬರಿಯ ಕಟ್ಟಡಗಳನ್ನು ಏರಿಸುವುದರಿಂದಲೇ ಅದರ ಸಂಸ್ಕೃತಿ ವರ್ಧಿಸಲಾರದು; ಅದು ಮೊದಲು ಹೃದಯದಲ್ಲಿ ಸಂಸ್ಥಾಪಿತವಾಗಬೇಕು. ಸಾವಿರ ವರ್ಷಗಳ ಹಿಂದೆ ನೃಪತುಂಗ ನಮ್ಮ ಜನರ ನಡೆನುಡಿ ಸಂಸ್ಕೃತಿಯನ್ನು ಕುರಿತು ಹೀಗೆ ಹೇಳಿದ:

**ಪದನರಿದು ನುಡಿಯಲುಂ ನುಡಿ**
**ದುದನರಿದಾರಯಲುಮಾರ್ಪರಾ ನಾಡವರ್ಗಳ್**
**ಚದುರರ್ ನಿಜದಿಂ ಕುರಿತೋ**
**ದದೆಯುಂ ಕಾವ್ಯಪ್ರಯೋಗ ಪರಿಣತ ಮತಿಗಳ್**
**ಕುರಿತವರಲ್ಲದೆ ಮತ್ತಂ**
**ಪರರುಂ ತಂತಮ್ಮ ನುಡಿಯೊಳೆಲ್ಲರ್ ಜಾಣರ್**
**ಕಿರುವಕ್ಕಳ್ ಮಾಮೂಗರುಂ**
**ಅರಿಪಲ್ಕರಿವರ್ ವಿವೇಕಮಂ ಮಾತುಗಳಂ**

ನಮ್ಮ ಜನ ಅಂಥವರಾಗಿ, ಅಂಥ ಸಂಸ್ಕೃತಿ ವಿಕಾಸಗೊಳ್ಳಬೇಕು. ಸಾಂಸ್ಕೃತಿಕ ರಾಜಧಾನಿಯ ಅಸ್ತಿಭಾರ ಜನಹೃದಯದಲ್ಲಿ ಸಂಸ್ಥಾಪಿತವಾಗಬೇಕು.

ಹತ್ತಿಪ್ಪತ್ತು ವರ್ಷಗಳಿಗೆ ಹಿಂದೆ ಬರೆದ ಒಂದೆರಡು ಕವನ ಪಂಕ್ತಿಗಳನ್ನೂ ಈಚೆಗೆ ಬರೆದ 'ಅಖಂಡ ಕರ್ಣಾಟಕ' ಪದ್ಯಭಾಗವನ್ನೂ ಓದಿ ನನ್ನ ಭಾಷಣ ಮುಗಿಸುತ್ತೇನೆ. ಕಾಂಗ್ರೆಸ್ ಸರ್ಕಾರ ಬಂದ ಮೇಲೂ ಸರ್ಕಾರಿ ನೌಕರರು ಏಕೀಕರಣದ ಬಗ್ಗೆ ಮಾತಾಡುವುದು ಅಪರಾಧವೆಂದು ಪರಿಗಣಿತವಾಗಿತ್ತು. ನಮ್ಮ ಭಾಷಣ ಲೇಖನ ಮತ್ತು ಕವಿತ್ವ ರಾಜಕೀಯಪರವಾಗಿರದೆ ಸಂಸ್ಕೃತಿಯಪರವಾಗಿರುತ್ತಿದ್ದುವು. ಆದರೂ ಅಂಥ ವಿಷಯಗಳ ಮೇಲೆ ಮಾತಾಡಬಾರದೆಂದು ಮೇಲಿನಿಂದ ಸೂಚನೆ ಬಂದಾಗ ಬರೆದ ಕವನ "ಅಖಂಡ ಕರ್ಣಾಟಕ". ಆಗ ಆ ಕವನವನ್ನು ಅನೇಕ ಪತ್ರಿಕೆಗಳು ಪ್ರಕಟಿಸಿದುದಲ್ಲದೆ, ಎಲ್ಲೆಲ್ಲೂ ಅದರ ಪ್ರಸ್ತಾಪವೇ ನಡೆಯುತ್ತಿತ್ತು. ಅಂದಿನ ಸರ್ಕಾರ ಏನೇ ಮಾಡಿರಲಿ ಇಂದು ಏಕೀಕರಣವಂತೂ ಆಗಿಯೇ ಆಗಿದೆ. ಈ ಏಕೀಕರಣ ಸಾಧನೆಯೊಂದು ಅರಕ್ತ ವಿಪ್ಲವವೆಂದೇ ನಾನು ಭಾವಿಸಿದ್ದೇನೆ.

ರಾಜಕೀಯದ ಐಕ್ಯತೆಗೆ ಆರ್ಥಿಕಪ್ರಗತಿಗೆ ಅನ್ನಮಯದ ಅಭ್ಯುದಯಕ್ಕೆ ನಾವೆಲ್ಲ ಹಗಲಿರುಳು ದುಡಿಯುತ್ತಿದ್ದರೂ, ನಮ್ಮದೃಷ್ಟಿ ಸಂಸ್ಕೃತಿಯ ಕಡೆಗೆ ಸದಾ ಬಾಗಿರಬೇಕು. ಮಾತ್ಸರ್ಯ ದ್ವೇಷಗಳನ್ನು ತೊರೆದು ಎಲ್ಲರೂ ಒಟ್ಟಾಗಿ ಒಮ್ಮನಸ್ಸಿನಿಂದ ದುಡಿದು ಕರ್ಣಾಟಕದ ಕಲ್ಯಾಣವನ್ನು ಸಾಧಿಸುವ ಮೂಲಕ ಭರತಖಂಡದ ಹಿತವನ್ನು ಸಾಧಿಸೋಣವೆಂದು ಹಾರೈಸಿ, ನಮ್ಮ ಪ್ರಯತ್ನಗಳಿಗೆ ಭಗವತ್ಕೃಪೆ ಹರಿದು ಬರುತ್ತಿರಲೆಂದು ಪ್ರಾರ್ಥಿಸುತ್ತೇನೆ.

# ಕನ್ನಡ ಚಳುವಳಿಗಳು ಜೀವಂತವಾಗಿರಲಿ [೧]

ಕನ್ನಡದ ಸ್ಥಾನಮಾನ ಐವತ್ತು ವರ್ಷಗಳ ಹಿಂದೆ ಇದ್ದುದಕ್ಕಿಂತ ಈಗ ಬಹಳ ಉತ್ತಮವಾಗಿದೆ. ಕನ್ನಡ ಸಾಹಿತ್ಯ ಗಾತ್ರದಿಂದಲ್ಲದಿದ್ದರೂ ಗುಣದಿಂದ ಮತ್ತಾವುದೇ ಸಾಹಿತ್ಯಕ್ಕೆ ಕಡಿಮೆಯಿಲ್ಲದಂತೆ ಬೆಳೆದಿದೆ.

ಭಾಷೆಯ ದೃಷ್ಟಿಯಿಂದ ನೋಡಿದರೆ, ನಾವು ಆಶಿಸಿದಷ್ಟು ಶೀಘ್ರವಾಗಿ ಅಲ್ಲದಿದ್ದರು ಸಾಕಷ್ಟು ಪ್ರಗತಿಯಾಗುತ್ತಿದೆ. ಸರ್ಕಾರ ಕನ್ನಡವನ್ನು ಅಧಿಕೃತ ಭಾಷೆಯೆಂದು ಘೋಷಿಸಿದೆ; ಕನ್ನಡದಲ್ಲೇ ವ್ಯವಹರಿಸುವ ಅಧಿಕಾರಿಗಳಿಗೆ ಬಹುಮಾನಗಳನ್ನು ಕೊಡುತ್ತಿದೆ, ಪ್ರೋತ್ಸಾಹ ರೂಪವಾಗಿ. ಕನ್ನಡ ಟೈಪ್ ರೈಟರ್‌ಗಳನ್ನು ಒದಗಿಸುತ್ತಿದೆ. ಆದ್ದರಿಂದ, ಇಂದಲ್ಲ ನಾಳೆ, ತಡವಾಗಿಯಾದರೂ, ಕನ್ನಡ ಎಲ್ಲ ಹಂತಗಳಲ್ಲೂ ಜಾರಿಗೆ ಬಂದೇ ಬರುತ್ತದೆ. ಈ ದಿಶೆಯಲ್ಲಿ ಜಿಲ್ಲಾ ಪರಿಷತ್ತುಗಳ ರಚನೆಯೂ ಸಹಾಯವಾಗಬಹುದು. ಆದರೆ ಆಗಬೇಕಾದ ಕೆಲಸ ಇನ್ನೂ ಬೇಕಾದಷ್ಟಿದೆ. ಕನ್ನಡದಲ್ಲಿ ಆಸಕ್ತಿಯಿಲ್ಲದ ಹೊರಗಿನ ಅಧಿಕಾರಿಗಳು ಕನ್ನಡದ ಏಳ್ಗೆಗೆ ಅಡ್ಡಿಯಾಗಿದ್ದಾರೆ. ಇನ್ನು ಮುಂದೆ ಕನ್ನಡ ಸರಿಯಾಗಿ ಬರದವರನ್ನು ಸರ್ಕಾರ ಅಧಿಕಾರಿಗಳನ್ನಾಗಿ ನೇಮಿಸಕೂಡದು. ಇತರ ಅರ್ಹತೆಗಳ ಜೊತೆಗೆ ಕನ್ನಡದ ಸಮರ್ಪಕ ಜ್ಞಾನವೂ ಅವರಿಗೆ ಇರಬೇಕು.

ಪಾರಿಭಾಷಿಕ ಪದಗಳು ಒಂದು ರೀತಿಯಲ್ಲಿ Proper nouns ಇದ್ದ ಹಾಗೆ; ಅವು ತುಂಬ ಪರಿಚಿತವಾಗಿದ್ದಾಗ, ಹಾಗೆಯೆ ಇಟ್ಟುಕೊಳ್ಳಬೇಕು. ಭಾಷಾಂತರಿಸಿದಾಗ ಎಲ್ಲಿ ಅರ್ಥಸ್ಪಷ್ಟತೆಯುಂಟಾಗುತ್ತದೋ ಅಂಥ ಕಡೆ ಮಾತ್ರ ಭಾಷಾಂತರಿಸಬೇಕು.

ನಮ್ಮ ಶಿಕ್ಷಣವ್ಯವಸ್ಥೆಯಲ್ಲಿ ಐಚ್ಚಿಕ ಕನ್ನಡ ಹೇಗಾದರೂ ಇರಲಿ, ಎಲ್ಲರೂ ಕಲಿಯಬೇಕಾದ ಕಡ್ಡಾಯಕನ್ನಡ–ರಾಜ್ಯಭಾಷೆ–ಹೊಸಗನ್ನಡ ಮಾತ್ರವಾಗಿರಲಿ; ವ್ಯವಹಾರಕ್ಕೆಷ್ಟು ಬೇಕೋ ಅಷ್ಟು.

ಯಾವ ಭಾಷೆಗೂ ನನ್ನವಿರೋಧವಿಲ್ಲ; ಆದರೆ ಬಲಾತ್ಕಾರದ ಕಲಿಕೆಯನ್ನು ಮಾತ್ರ ನಾನು ವಿರೋಧಿಸುತ್ತೇನೆ. ಎಲ್ಲರೂ ಇಂಗ್ಲಿಷ್ ಅಥವಾ ಹಿಂದಿ ಕಲಿಯಬೇಕೆಂಬುದು ಸಾಮ್ರಾಜ್ಯಷಾಹಿ ಮನೊಭಾವವಷ್ಟೆ. ಹಿಂದಿ ಸಂಪರ್ಕಭಾಷೆಯಾಗಿ ಮಾತ್ರ ಇರತಕ್ಕದ್ದು; ಅಖಿಲಭಾರತ ಮಟ್ಟದಲ್ಲಿ ವ್ಯವಹರಿಸುವವರು ಅದನ್ನು ಕಲಿಯಲಿ.

---

[೧] ಕನ್ನಡದ ಉಳಿವು ಅಳಿವು: ಪ್ರಧಾನ ಸಂ. ಎಲ್.ಎಸ್. ಶೇಷಗಿರಿರಾವ್. ಕನ್ನಡ ಭಾಷಾ ಅಭಿವೃದ್ಧಿಯ ಮಮಾಕ್ಷ ಪ್ರಕಾಶನ, ಬೆಂಗಳೂರು. ೧೯೮೫

ಅಂತೆಯೇ ಅಂತರರಾಷ್ಟ್ರೀಯ ಮಟ್ಟದಲ್ಲಿ ವ್ಯವಹರಿಸುವವರು ಅದನ್ನು ಕಲಿಯಲಿ. ಹಿಂದಿ, ಇಂಗ್ಲಿಷ್ ಎರಡೂ ಐಚ್ಛಿಕವಾಗಿರಲಿ, ಎಲ್ಲರೂ ಕಲಿಯ ಬೇಕೆನ್ನುವುದು ನಿರರ್ಥಕ (waste).

ಇಂಗ್ಲಿಷ್‌ಗಿಂತ ಹಿಂದಿ ಹೆಚ್ಚು ಅಪಾಯಕಾರಿ. ನಾವು ಎಂದು ತ್ರಿಭಾಷಾ ಸೂತ್ರವನ್ನು ಒಪ್ಪಿಕೊಂಡೆವೋ ಅಂದೇ ಹಿಂದಿಯ ಉರುಳಿಗೆ ಸಿಕ್ಕಿದೆವು. ತ್ರಿಭಾಷಾ ಸೂತ್ರವನ್ನು ತಮಿಳುನಾಡು ಒಪ್ಪಿಲ್ಲ. ಈ ವಿಷಯದಲ್ಲಿ ನಾವು ತಮಿಳರನ್ನು ಅನುಸರಿಸಬೇಕು. 'ಬಹುಭಾಷೆಗಳಲ್ಲಿ ದ್ವಿಭಾಷೆ' ಎಂಬುದು ನಮ್ಮ ಸೂತ್ರವಾಗಬೇಕು. ಹಿಂದಿ ಇದುವರೆಗೆ ಪರೀಕ್ಷೆಯ ವಿಷಯವಾಗಿರಲಿಲ್ಲ; ಈಗ ಆಗಿದೆಯಂತೆ. ಇದು ತಪ್ಪು. ಹಳ್ಳಿಗಳಿಗೂ ಹಿಂದಿಯನ್ನು ವಿಸ್ತರಿಸುವುದು ಅವಿವೇಕ. ಇಂತಹುದು ಯಾವ ದೇಶದಲ್ಲೂ ಇಲ್ಲ. ನಾವು ಎಚ್ಚರದಿಂದಿರದಿದ್ದರೆ, ಹಿಂದಿ ಸಮುದ್ರದಲ್ಲಿ ಕನ್ನಡ, ಇಂಗ್ಲಿಷ್ ಎರಡೂ ಮುಳುಗಿಹೋಗುತ್ತವೆ.

ನಾವು ನೆಹರು ಮುಂತಾದ ನಾಯಕರ ಮೇಲಿನ ಗೌರವದಿಂದ ಕೆಲವು ವಿಷಯಗಳನ್ನು ಸುಮ್ಮನೆ ಒಪ್ಪಿಕೊಂಡು ತಪ್ಪುಮಾಡಿದೆವೆನಿಸುತ್ತದೆ. ರಾಜ್ಯಗಳಿಗೆ ಸ್ವಾಯತ್ತತೆ ಅಗತ್ಯ, ಅಮೆರಿಕದ Stateಗಳಿಗಿರುವಂತೆ. ಅಲ್ಲಿ ಹೊಸ ಹೊಸ ಸಂಸ್ಥಾನಗಳು ಉದ್ಭವಿಸುತ್ತಲೆ ಇವೆ. ಅವುಗಳಿಗೂ ಸ್ವಾತಂತ್ರ್ಯವಿರುತ್ತದೆ; ರಾಷ್ಟ್ರಕ್ಕೂ ಭದ್ರತೆಯಿರುತ್ತದೆ. ನಮ್ಮದು United States of India ಆಗಬೇಕೆಂಬುದೇ ನನ್ನ ದೃಢವಾದ ಅಭಿಪ್ರಾಯ. ಇದು ಇಂದಲ್ಲ ನಾಳೆ ಆಗುತ್ತದೆ. ಇಲ್ಲವಾದರೆ ಪಂಜಾಬಿನಲ್ಲಿ ನಡೆಯುತ್ತಿರುವ ವಿದ್ಯಮಾನಗಳಂಥ ಘಟನೆಗಳು ನಿಲ್ಲುವುದಿಲ್ಲ. ರಾಜ್ಯಗಳು ಸ್ವಾಯತ್ತವಾಗಿರಲಿ; ಸೈನ್ಯ ಮುಂತಾದ ವ್ಯವಸ್ಥೆಗಳು ಕೇಂದ್ರದ ಕೈಯಲ್ಲಿರಲಿ.

ಗಡಿಸಮಸ್ಯೆಯನ್ನು ನಾವು ಈಗಿರುವಂತೆ ಬಿಡಬಹುದಿತ್ತು. ಅನ್ಯರಾಜ್ಯಗಳು ಸುಮ್ಮನಿರುವ ಪಕ್ಷದಲ್ಲಿ. ಆದರೆ ಅವರು ಹೋರಾಡುತ್ತಿರುವಾಗ ನಾವು ಹೋರಾಡಬೇಕಾಗುತ್ತದೆ. ನಮ್ಮಲ್ಲಿ ಬೇರೆಯವರಿಗಿರುವ ವಾತಾವರಣ, ಬೇರೆ ಭಾಷೆಗಳಿಗೆ ನಮ್ಮ ವಿದ್ಯಾಭ್ಯಾಸದಲ್ಲಿ ನಾವು ಕಲ್ಪಿಸಿರುವ ಅನುಕೂಲಗಳು ಬೇರೆ ರಾಜ್ಯಗಳಲ್ಲಿ ಕನ್ನಡಿಗರಿಗೆ, ಕನ್ನಡಕ್ಕೆ ಇಲ್ಲ. ಆದ್ದರಿಂದ ಅವರು ಸಹಜವಾಗಿ ಕರ್ನಾಟಕಕ್ಕೆ ಸೇರಬಯಸುತ್ತಾರೆ. ಎರಡೂ ಕಡೆಯವರು ಸಮಾಧಾನದಿಂದ ಗಡಿ ಪ್ರಶ್ನೆಯನ್ನು ಬಗೆಹರಿಸಿಕೊಳ್ಳಬೇಕು.

ಗೋಕಾಕ್ ವರದಿ ಚಳುವಳಿಯಿಂದ ಸಂಪೂರ್ಣ ಪ್ರಯೋಜನ ಲಭಿಸಿತೆಂದು ನನಗನಿಸುವುದಿಲ್ಲ. ಏಕೆಂದರೆ ಆ ಬಗ್ಗೆ ಇನ್ನೂ ಕೆಲವು ತೊಡಕುಗಳಿವೆ. ಆದರೆ ಆ ಚಳುವಳಿಯಿಂದ ಒಂದು ಜಾಗ್ರತಿಯುಂಟಾದುದನ್ನು ಒಪ್ಪಬೇಕು. ನಮ್ಮೆಲ್ಲ ಸಮಸ್ಯೆಗಳು ಪರಿಹಾರಗೊಳ್ಳುವ ತನಕ ಚಳುವಳಿಗಳನ್ನು ಜೀವಂತವಾಗಿಟ್ಟಿರುವುದು ಅತ್ಯಗತ್ಯ.

ಕನ್ನಡಿಗರು ಅಭಿಮಾನಿಗಳಾಗಬೇಕು, ಕನ್ನಡದಲ್ಲಿ, ಇಂಗ್ಲಿಷಿನಲ್ಲಿ, ಸಂಸ್ಕೃತದಲ್ಲಿ

ಏನೇನಿದೆಯೊ ಅದನ್ನೆಲ್ಲ ತಿಳಿದುಕೊಂಡು, ಎಲ್ಲರನ್ನೂ ಮೀರಿಹೋಗಬೇಕು. ಕನ್ನಡಿಗರಲ್ಲಿರುವ Inferiority complex ಹೋಗಿ, ಅವರಲ್ಲಿ Superiority complex ಬೆಳೆಯುವಂತೆ ಮಾಡಬೇಕು.

ಕನ್ನಡ ವಿಶ್ವವಿದ್ಯಾನಿಲಯದ ಮಾತು ಕೇಳಿಬರುತ್ತಿದೆ.ಅಲ್ಲಿ ಎಲ್ಲ ವಿಷಯಗಳನ್ನು ಕನ್ನಡದಲ್ಲಿ ಬೋಧಿಸುತ್ತಾರೆಯೆ? ಇಲ್ಲವಾದರೆ, ನಮ್ಮ ಬೇರೆ ಬೇರೆ ವಿಶ್ವವಿದ್ಯಾನಿಲಯಗಳ ಕನ್ನಡ ವಿಭಾಗಗಳು ಮಾಡುತ್ತಿರುವ ಕೆಲಸವನ್ನೆ ಅಧಿಕ ಪ್ರಮಾಣದಲ್ಲಿ ಅದು ಮಾಡುವುದಾದರೆ, ಅದನ್ನು ವಿಶ್ವವಿದ್ಯಾನಿಲಯ ಎಂದು ಕರೆಯುವುದು ಬೇಡ; ವಿಶ್ವ ಕನ್ನಡ ಪೀಠ ಎಂದೊ, ಕನ್ನಡ ವಿಶ್ವಪೀಠ ಎಂದೊ ಕರೆಯಬಹುದು.

ನಮ್ಮ ಸಾಹಿತ್ಯದ ಬಹುಭಾಗ ಮತೀಯವಾಗಿದೆ. ಈ ಮತೀಯಾಂಶವನ್ನು ವಿಸರ್ಜಿಸಿ, ಕಾವ್ಯಾಂಶವನ್ನಷ್ಟೆ ಉಳಿಸಿಕೊಂಡು, ನಾವು ವಿಶ್ವಮಾನವತೆಯತ್ತ ಸಾಗಬೇಕಾಗಿದೆ. ಮುಂದಿನ ಸಾಹಿತ್ಯವು ವಿಶ್ವಮಾನವ ಸಂದೇಶವನ್ನು ಸಾರಬೇಕು. ಹಾಗೆ ನೋಡಿದರೆ, ನನಗೀಗ ವಿಶ್ವಮಾನವಸಂದೇಶದಲ್ಲಿರುವಷ್ಟು ಆಸಕ್ತಿ ಕನ್ನಡ ಮುಂತಾದ ವಿಷಯಗಳಲ್ಲೂ ಇಲ್ಲ. ಆದರೆ ಆ ಸಂದೇಶಕ್ಕೆ ಒಂದು ಭಾಷಾಮಾಧ್ಯಮ ಬೇಕಷ್ಟೆ; ಕನ್ನಡಿಗರಿಗೆ ಕನ್ನಡದಲ್ಲೇ ಅದನ್ನು ಕೊಡಬೇಕು. ಅಷ್ಟರಮಟ್ಟಿಗೆ ಕನ್ನಡದ ಪ್ರಗತಿಯನ್ನು ನಾನು ಹಾರೈಸುತ್ತೇನೆ.

*